ಸ್ಥಳೀಯ ಸರ್ಕಾರಗಳಲ್ಲಿ ದಲಿತರ ಭಾಗವಹಿಸುವಿಕೆ

(ಕೋಲಾರ ಜಿಲ್ಲೆಯನ್ನು ಅನುಲಕ್ಷಿಸಿ)

ರಾಜ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ಎಂ. ವೆಂಕಟರವಣಪ್ಪ

ಮಾರ್ಗದರ್ಶಕರು

ಡಾ. ಎಚ್.ಡಿ. ಪ್ರಶಾಂತ್
ಪ್ರಾಧ್ಯಾಪಕರು

ಅಭಿವೃದ್ಧಿ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೯

ಸ್ಥಳೀಯ ಸರ್ಕಾರಗಳಲ್ಲಿ ದಲಿತರ ಭಾಗವಹಿಸುವಿಕೆ

(ಕೋಲಾರ ಜಿಲ್ಲೆಯನ್ನು ಅನುಲಕ್ಷಿಸಿ)

ರಾಜ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ಎಂ. ವೆಂಕಟರವಣಪ್ಪ

ಮಾರ್ಗದರ್ಶಕರು
ಡಾ. ಎಚ್.ಡಿ. ಪ್ರಶಾಂತ್
ಪ್ರಾಧ್ಯಾಪಕರು

ಅಭಿವೃದ್ಧಿ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

೨೦೧೯

ಮಾರ್ಗದರ್ಶಕರ ದೃಢೀಕರಣ ಪತ್ರ

ವೆಂಕಟರವಣಪ್ಪ ಎಂ.. ಅವರು **ಸ್ಥಳೀಯ ಸರ್ಕಾರಗಳಲ್ಲಿ ದಲಿತರ ಭಾಗವಹಿಸುವಿಕೆ (ಕೋಲಾರ ಜಿಲ್ಲೆಯನ್ನು ಅನುಲಕ್ಷಿಸಿ)** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ರಾಜ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ :

ಸ್ಥಳ : ವಿದ್ಯಾರಣ್ಯ

(ಡಾ. ಎಚ್.ಡಿ. ಪ್ರಶಾಂತ್)
ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

ಸ್ಥಳೀಯ ಸರ್ಕಾರಗಳಲ್ಲಿ ದಲಿತರ ಭಾಗವಹಿಸುವಿಕೆ (ಕೋಲಾರ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ರಾಜ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಅಭಿವೃದ್ಧಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಡಾ. ಎಚ್.ಡಿ. ಪ್ರಶಾಂತ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿ ಇಲ್ಲವೇ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ :
ಸ್ಥಳ : ವಿದ್ಯಾರಣ್ಯ

(ಎಂ. ವೆಂಕಟರವಣಪ್ಪ)
ಸಂಶೋಧಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಪರಿಶಿಷ್ಟಗಳು

ನಕ್ಷೆಗಳು

ಕೋಷ್ಟಕಗಳು

ವೃತ್ತಚಿತ್ರ

ಅಧ್ಯಾಯ ಒಂದು

ಪ್ರಸ್ತಾವನೆ

೧.೧. ಪೀಠಿಕೆ

೧.೨. ಪ್ರಮುಖ ಅಧ್ಯಯನಗಳ ಪರಾಮರ್ಶೆ

೧.೩. ಅಧ್ಯಯನದ ಸಮಸ್ಯೀಕರಣ

೧.೪. ಅಧ್ಯಯನದ ಉದ್ದೇಶಗಳು

೧.೫. ಅಧ್ಯಯನದ ವಿಧಾನ

೧.೬. ಅಧ್ಯಯನದ ವ್ಯಾಪ್ತಿ ಮತ್ತು ಮಾದರಿ ಆಯ್ಕೆ

೧.೭. ಅಧ್ಯಯನದ ಮಿತಿ

೧.೮. ಅಧ್ಯಯನದ ಮಹತ್ವ

೧.೯. ಅಧ್ಯಯನದ ಸ್ವರೂಪ

ಅಧ್ಯಾಯ ಒಂದು

ಪ್ರಸ್ತಾವನೆ

೧.೧. ಪೀಠಿಕೆ

ದಲಿತರ ಭಾಗವಹಿಸುವಿಕೆಗೆ ಸಂಬಂಧಪಟ್ಟಂತೆ ನಾವು ಎರಡು ರೀತಿಯ ವಿಶ್ಲೇಷಣೆಯನ್ನು ಮಾಡಬಹುದು. ಒಂದು ದಲಿತರ ಭಾಗವಹಿಸುವಿಕೆಯನ್ನು ವಿಕೇಂದ್ರಿಕರಣ ಮತ್ತು ಪ್ರಜಾಪ್ರಭುತ್ವದ ನೆಲೆಯಲ್ಲಿ, ಮತ್ತೊಂದು ಅಭಿವೃದ್ಧಿ ಪ್ರಕ್ರಿಯೆಯಲ್ಲಿ; ಮೊದಲನೆಯದ್ದು ಸಂವಿಧಾನಬದ್ಧವಾದ ಕಾಯಿದೆಗಳ ಮೂಲಕ ಸ್ಥಳೀಯ ಸರ್ಕಾರಗಳಲ್ಲಿ ಮೀಸಲಾತಿಯ ನೆಲೆಯಲ್ಲಿ ಭಾಗವಹಿಸುವುದು. ಇದು ಹೆಚ್ಚು ಹಕ್ಕು ಸಮಾನತೆಯುಳ್ಳ ಸಂದರ್ಭ ಆಧಾರಿತವಾಗಿರುತ್ತದೆ. ಆದರೆ ಪ್ರಜಾಸತ್ತಾತ್ಮಕವಾಗಿಯೇ ನಡೆಸುವ ಚುನಾವಣ ರಾಜಕಾರಣದಲ್ಲಿ ಅವರಿಗೆ ಬೇಕಾಗುವ ಆರ್ಥಿಕ ಮತ್ತು ಸಾಮಾಜಿಕ ಸಾಮರ್ಥ್ಯ ಮತ್ತು ಸಮಾನತೆ ದೊರಕದ ಕಾರಣ ಪ್ರಜಾಪ್ರಭುತ್ವವೇ ತಲೆಕೆಳಗಾಗಿದೆ. ಈ ಚುನಾವಣಾ ಪ್ರಕ್ರಿಯೆಯಲ್ಲಿ ದಲಿತರು ಮುಕ್ತ ಮತ್ತು ಸ್ವತಂತ್ರವಾಗಿ ಭಾಗವಹಿಸುವ ಮತ್ತು ಗೆಲ್ಲುವ ವಾತಾವರಣ ಇಲ್ಲವಾಗಿದೆ ಎನ್ನುವುದನ್ನು ಕುರಿತು ತೇಲ್ತುಂಬ್ಡೆ ಅವರ ಬರಹಗಳು ನಮಗೆ ತಿಳಿಸಿಕೊಡುತ್ತವೆ.

ಇಂತಹ ಪರಿಸ್ಥಿತಿಯಲ್ಲಿ ದಲಿತರ ಅಭಿವೃದ್ಧಿಯನ್ನು ಚರ್ಚಿಸುವುದು ಒಂದು ಸವಾಲಿನ ಕೆಲಸ. ಆದರೆ ಇತ್ತೀಚೆಗೆ ಸಾಂಪ್ರದಾಯಿಕ ಅಭಿವೃದ್ಧಿ ಚರ್ಚೆಯನ್ನು (ಟ್ರಿಕಲ್ ಡೌನ್ ಥಿಯರಿ) ಪ್ರಶ್ನಿಸಿರುವ ಅನೇಕ ಅಭಿವೃದ್ಧಿ ಚಿಂತಕರು ಮಾನವ ಅಭಿವೃದ್ಧಿ ಸೇರಿದಂತೆ ಹಲವು ಪರ್ಯಾಯ ಅಭಿವೃದ್ಧಿ ಸಿದ್ಧಾಂತ ಮತ್ತು ಸಂಕಥನಗಳನ್ನು ರೂಪಿಸಿದ್ದಾರೆ. ಮಾನವ ಅಭಿವೃದ್ಧಿ ಸಿದ್ಧಾಂತವು ಆರೋಗ್ಯ, ಅಕ್ಷರ, ಆಹಾರ, ಆದಾಯ ಮತ್ತು ಭಾಗವಹಿಸುವಿಕೆಯ ಪ್ರಶ್ನೆಗಳನ್ನು ಪ್ರಮುಖ ಆದ್ಯತೆಯಾಗಿ ಚರ್ಚಿಸಿರುವುದು ತಿಳಿಯುತ್ತದೆ. ಈ ಕುರಿತ ಅಧ್ಯಯನ ನಡೆಸಿರುವ ಸಮಾಜ ವಿಜ್ಞಾನಿಗಳು, ದಲಿತರ ಅಭಿವೃದ್ಧಿ ಪರಿಸ್ಥಿತಿಯನ್ನು ವಿವರಿಸುತ್ತಾರೆ. ಹಾಗೆಯೇ ಅಭಿವೃದ್ಧಿ ಸೂಚಕಗಳನ್ನು ಪಡೆದುಕೊಳ್ಳುವ ದಿಕ್ಕಿನಲ್ಲಿ ಸಮಾಜದ ಅಂಚಿನ ಆಚೆಗಿರುವ ಜಾತಿ ಮತ್ತು ವರ್ಗಗಳ ಪರಿಸ್ಥಿತಿಯನ್ನು ವಿಶ್ಲೇಷಣೆಗೆ ಒಳಪಡಿಸಿರುತ್ತಾರೆ. ಶಾಲಾ ಶಿಕ್ಷಣ ಸಾರ್ವತ್ರಿಕರಣ, ದಲಿತ ಮಕ್ಕಳ ಪರಿಸರ ಮತ್ತು

ಪರಿಸ್ಥಿತಿ ಇದರ ಲೇಖಕರು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಂಶಗಳನ್ನು ಒಳಗೊಂಡಂತೆ ಹೇಗೆ ದಲಿತ ಮಕ್ಕಳ ಭಾಗವಹಿಸುವಿಕೆಯು ಸಾಮಾಜಿಕ ರಚನೆಯ ಮತ್ತು ಸಾಂಸ್ಕೃತಿಕ ಅಂಶಗಳಿಂದ ಪ್ರಭಾವಿತವಾಗಿರುತ್ತದೆ ಎಂಬುದನ್ನು ವಿಶ್ಲೇಷಿಸುತ್ತಾರೆ. ಹೀಗೆ ಮಾಡುವಾಗ ಸಂವಿಧಾನದ ೩೩೦ ಕಾಲಂ ನಲ್ಲಿ ಬರುವ ಪರಿಶಿಷ್ಟ ಜಾತಿ ಮಕ್ಕಳ ಸಾಮಾಜಿಕ ಪರಿಸ್ಥಿತಿಯನ್ನು ವಿಶ್ಲೇಷಿಸಿದ್ದಾರೆ.

ಆ ಮೂಲಕ ದಲಿತರು ಶೈಕ್ಷಣಿಕವಾಗಿ ವಂಚಿತರಾಗಿರುವುದನ್ನು ತಿಳಿಸಿದ್ದಾರೆ. ಇದನ್ನು ನೋಡುವ ಬಗೆ ಹೇಗೆಂದರೆ ದಲಿತರ ಅಭಿವೃದ್ಧಿ ಮತ್ತು ಶಿಕ್ಷಣದ ಬೇರುಗಳು ಸಾಂಪ್ರದಾಯಿಕ ಹಿಂದೂ ಸಮಾಜದ ವ್ಯವಸ್ಥೆಯಲ್ಲಿ ಅಸ್ಪೃಶ್ಯತೆ ಮತ್ತು ಶೋಷಣೆಯನ್ನು ನೋಡಬಹುದು. ಹಾಗೆಯೇ ದಲಿತರು ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿರುವ ಹಾಗೂ ಅಸಮಾನತೆಯ ನೆಲೆಯಲ್ಲಿ ಶಿಕ್ಷಣ ಪಡೆಯುತ್ತಿರುವುದಕ್ಕೂ ಸಂಬಂಧವಿದೆ ಎನ್ನುವುದನ್ನು ಅನೇಕ ಅಧ್ಯಯನಗಳು ಗುರುತಿಸಿವೆ.

ನಮ್ಮ ಸಮಾಜದಲ್ಲಿ ಸಾಮಾಜಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಪರಿಸರ ಉತ್ತಮಗೊಳ್ಳಬೇಕಾಗಿದೆ. ಅದರ ಬದಲು ಶೋಷಣೆಯ ಸ್ವರೂಪವು ಬದಲಾಗುತ್ತದೆ. ಏಕೆಂದರೆ ಶಾಲಾ ಶಿಕ್ಷಣದ ಅಭಿವೃದ್ಧಿ ಅಮೂರ್ತದಲ್ಲಿ ನಡೆಯುವ ಪ್ರಕ್ರಿಯೆ ಅಲ್ಲ. ಇದು ಸಮಾಜದ ಸಮಾನತೆಯ ಸ್ವರೂಪದಲ್ಲಿ ನಡೆಯಬೇಕಾದ ಪ್ರಕ್ರಿಯೆಯಾಗಬೇಕಾಗಿದೆ. ಅದೇ ರೀತಿಯಾಗಿ ಮಹಿಳೆ, ಅದರಲ್ಲೂ ದಲಿತ ಮಹಿಳೆಯರು ಹಾಗೂ ಹಿಂದುಳಿದ ಜಾತಿ ಮತ್ತು ವರ್ಗದ ಜನರು ಶಾಲಾ ಶಿಕ್ಷಣದ ಸಾರ್ವತ್ರಿಕರಣದಿಂದ ವಂಚಿತರಾಗಿದ್ದಾರೆ.

ಈ ಅಧ್ಯಯನಗಳ ಅಂಕಿ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಮಾತ್ರ ನಮಗೆ ದಲಿತ, ದಲಿತ ಮಹಿಳೆಯರ ಶಿಕ್ಷಣದ ಸ್ಥಿತಿಗತಿಗಳ ಸ್ವರೂಪ ಅರ್ಥವಾಗುತ್ತದೆ. ದಲಿತರ ಹೆಣ್ಣುಮಕ್ಕಳ ಸಾಕ್ಷರತೆ ಹಾಗೂ ದಲಿತ ಪುರುಷರ ಮಕ್ಕಳ ಭಾಗವಹಿಸುವಿಕೆಯಲ್ಲಿ ಎರಡು ಮತ್ತು ಮೂರನೇ ಸ್ಥಾನದಲ್ಲಿದ್ದಾರೆ. ಹಾಗೆಯೇ ಬಡ ಕುಟುಂಬದಲ್ಲಿರುವ ಶಾಲಾ ಮಕ್ಕಳು ೫ನೇ ಸ್ಥಾನದಲ್ಲಿದ್ದರೆ, ಮೇಲ್ವರ್ಗದವರು ಸಾಂಸ್ಕೃತಿವಾಗಿ ಮೇಲುಸ್ತರದ ಜಾತಿಗೆ ಸೇರಿದ್ದು, ಮತ್ತು ಆರ್ಥಿಕವಾಗಿ ಪ್ರಬಲಗೊಂಡಿರುವ ಜಾತಿ ವರ್ಗಕ್ಕೆ ಸೇರಿದ ಪುರುಷರ ಸಾಕ್ಷರತೆ ಮತ್ತು ಅದೇ ವರ್ಗದ ಗಂಡುಮಕ್ಕಳ, ಶಾಲಾ ಭಾಗವಹಿಸುವಿಕೆ ಮೊದಲನೇ ಸ್ಥಾನದಲ್ಲಿದೆ. ಆದರೆ ದಲಿತರಾದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಪುರುಷರ ಸಾಕ್ಷರತೆ ಮತ್ತು ಗಂಡು ಮಕ್ಕಳ ಶಾಲಾ ಭಾಗವಹಿಸುವಿಕೆ ಪ್ರಮಾಣ ಗೌಣವಾಗಿದೆ. ಆರ್ಥಿಕವಾಗಿ ಮಧ್ಯಮ ವರ್ಗದವರಾದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಪುರುಷರು ಹಾಗೂ ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳ ಸಾಕ್ಷರತೆ ಮತ್ತು ಶಾಲಾ ಭಾಗವಹಿಸುವಿಕೆಯಲ್ಲಿ ಕ್ರಮವಾಗಿ ಎರಡನೇ-ಮೂರನೇ ಸ್ಥಾನದಲ್ಲಿ ಹೆಚ್ಚಿನ ಪ್ರಮಾಣದಲ್ಲಿದ್ದಾರೆ.

ಭಾರತದ ೨೦೦೧ರ ಜನಗಣತಿಯಂತೆ ೮.೪೩.೨೪೦ ಅಂದರೆ ಒಟ್ಟು ಜನಸಂಖ್ಯೆಯ ಶೇಕಡ ೧೬.೨೧ರಷ್ಟು ಜನರು ದಲಿತರಿದ್ದಾರೆ. ಇದರಲ್ಲಿ ಗ್ರಾಮೀಣ ಭಾರತದ ಶೇಕಡ ೪೧.೫ರಷ್ಟು

ದಲಿತರು ಮಾತ್ರ ಸಾಕ್ಷರರು. ಇದೇ ಸಂದರ್ಭದಲ್ಲಿ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಒಟ್ಟು ದಲಿತರಲ್ಲಿ ಶೇಕಡ ೪೭.೩ರಷ್ಟು ಜನರು ಮಾತ್ರ ಸಾಕ್ಷರರಾಗಿದ್ದಾರೆ. ಇದನ್ನು ಲಿಂಗವಾರು ಬಿಡಿ ಬಿಡಿಯಾಗಿ ನೋಡಿದರೆ ಪುರುಷರಲ್ಲಿ ಶೇಕಡ ೫೮.೭೦ರಷ್ಟು ಮತ್ತು ಮಹಿಳೆಯರಲ್ಲಿ ಶೇಕಡ ೩೫.೬ರಷ್ಟು ಜನರು ಮಾತ್ರ ಸಾಕ್ಷರರಾಗಿದ್ದಾರೆ. ೧೪–೧೬ ವಯಸ್ಸಿನ ಮಕ್ಕಳಲ್ಲಿ ಕೇವಲ ಶೇಕಡ ೬೨.೫ರಷ್ಟು ಮಕ್ಕಳು ಮಾತ್ರ ಒಂದಿಲ್ಲೊಂದು ಘಟಕದಲ್ಲಿ ದಾಖಲಾತಿ ಹೊಂದಿದವರಾಗಿದ್ದಾರೆ. ಉಳಿದ ಶೇಕಡಾ ೧೭.೫ರಷ್ಟಕ್ಕಿಂತಲೂ ಹೆಚ್ಚಿನ ಮಕ್ಕಳು ಶಾಲೆಗೆ ದಾಖಲಾಗದವರು ಹಾಗೂ ಮಧ್ಯದಲ್ಲಿಯೇ ಶಾಲೆಯನ್ನು ಬಿಟ್ಟವರಾಗಿದ್ದಾರೆ. ಆದ್ದರಿಂದ ದಲಿತ ಮಕ್ಕಳ ಮತ್ತು ದಲಿತರ ಶಿಕ್ಷಣ ಬಹುಮುಖ್ಯವಾದ ವಿಷಯವಾಗಿದೆ. ಈ ಹಿನ್ನೆಲೆಯಲ್ಲಿ ದಲಿತರ (ಪರಿಶಿಷ್ಟ ಜಾತಿ) ಮಕ್ಕಳ ಶೈಕ್ಷಣಿಕ ಸರಾಸರಿಯು ಯಾವ ಸ್ಥಿತಿಯಲ್ಲಿದೆ? ಅವರ ಶೈಕ್ಷಣಿಕ ಅಭಿವೃದ್ಧಿಗೆ ತಡೆಯೊಡ್ಡುತ್ತಿರಲು ಕಾರಣವೇನು? ಯಾವ ಬಗೆಯವು? ಗ್ರಾಮೀಣ ಪ್ರದೇಶದ ದಲಿತ ಮಕ್ಕಳು ಯಾವ ಪ್ರಮಾಣದಲ್ಲಿ ಶಾಲಾ ಪ್ರವೇಶ ಅವಕಾಶ ಪಡೆದಿದ್ದಾರೆ? ದಲಿತರ ಆರ್ಥಿಕ ಪರಿಸ್ಥಿತಿಯಲ್ಲಿನ ಶಾಲಾ ಭಾಗವಹಿಸುವಿಕೆಗೆ ಇರುವ ಸಂಬಂಧ ಯಾವ ಬಗೆಯದು? ದಲಿತರು ಮತ್ತು ದಲಿತೇತರ ನಡುವೆ ಶೈಕ್ಷಣಿಕ ಪರಿಸರದಲ್ಲಿರುವ ವ್ಯತ್ಯಾಸ ಯಾವ ಬಗೆಯದು? ದಲಿತರ ಸಾಮಾಜಿಕ ಭಾಷಾ ಪರಿಸರ ಯಾವ ಬಗೆಯದು? ಇತ್ಯಾದಿ ಪ್ರಶ್ನೆಗಳನ್ನು ಚರ್ಚೆಗೆ ಒಳಪಡಿಸುವುದರ ಜೊತೆಗೆ ದಲಿತರು ಎದುರಿಸುತ್ತಿರುವ ಸಾಂಸ್ಕೃತಿಕ ಅಸಮಾನತೆಯನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ದಲಿತರ ಶಿಕ್ಷಣ, ಆರ್ಥಿಕತೆ, ಸಾಂಸ್ಕೃತಿಕ, ರಾಜಕೀಯ ಭಾಗವಹಿಸುವಿಕೆಯ ವಿಷಯಗಳ ಬಗ್ಗೆ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ದಲಿತ ಎನ್ನುವ ಪರಿಕಲ್ಪನೆಯನ್ನು ಬೇರೆ ಬೇರೆ ದೃಷ್ಟಿಕೋನದಿಂದ ಪರಿಭಾವಿಸಿಕೊಳ್ಳಬಹುದು. ಪ್ರಸ್ತುತ ಅಧ್ಯಯನದಲ್ಲಿ ದಲಿತ ಎನ್ನುವ ಪದವನ್ನು ಈ ಕೆಳಗಿನಂತೆ ಪರಿಭಾವಿಸಿಕೊಳ್ಳಲಾಗಿದೆ. ಅಸ್ಪೃಶ್ಯತೆಗೊಳಗಾದವರನ್ನು ಪರಿಶಿಷ್ಟ ಜಾತಿ ಎಂದು ವರ್ಗೀಕರಿಸುವ ಮೊದಲು ಅವರನ್ನು ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾದ ಜಾತಿಯವರು ಎಂದು ೧೯೩೧ರ ಭಾರತದ ಜನಗಣತಿಯಲ್ಲಿ ಗುರುತಿಸಲಾಗಿದೆ. ಈ ಕುರಿತು ಅಂಬೇಡ್ಕರ್, ಸ್ಟೇನ್ಲಿ, ರೈಸ್ ಇನ್ನು ಮುಂತಾದ ಸಮಾಜ ಚಿಂತಕರು ಬಹಿಷ್ಕೃತ ಜಾತಿಗಳನ್ನು ಕುರಿತು ತಮ್ಮದೇ ನಿಲುವನ್ನು ಮಂಡಿಸಿರುತ್ತಾರೆ. ಬಹಿಷ್ಕೃತ ಜಾತಿಗಳು ಪರಿಶಿಷ್ಟ ಜಾತಿಗಳಾಗಿ ನಮೂದಾಗಿದ್ದು ೧೯೩೫ರ ಭಾರತ ಸರ್ಕಾರ ಕಾಯ್ದೆಗಿಂತ ಮೊದಲು ೧೯೩೧ರ ಜನಗಣತಿ ಪ್ರಕಾರವೇ ಪರಿಶಿಷ್ಟ ಜಾತಿಗಳ ಪಟ್ಟಿಯನ್ನು ರಚಿಸಲಾಯಿತು. ನಂತರ ಅಂಬೇಡ್ಕರ್ ಅವರ ಪ್ರಯತ್ನದ ಫಲವಾಗಿ ಪರಿಶಿಷ್ಟರಿಗೆ ವಿಶೇಷವಾದ ಸಂವಿಧಾನಿಕ ಸವಲತ್ತುಗಳು ದೊರೆತವು. ಸಂವಿಧಾನ ಜಾರಿಗೆ ಬಂದ ಬಳಿಕ ಕಾಲಂ ೩೪೧ರಲ್ಲಿ ಪರಿಶಿಷ್ಟ ಜಾತಿ ಕುರಿತ ವಿವರಣೆ ಇದೆ. ಈ ಕಾಲಂ ಸೂಚಿಸುವ ಜಾತಿಗಳು ಪರಿಶಿಷ್ಟ ಜಾತಿಗಳೆಂದು ವರ್ಗೀಕರಣಗೊಂಡಿವೆ. ಪ್ರಸ್ತುತ ಅಧ್ಯಯನದಲ್ಲಿ ದಲಿತ ಎನ್ನುವ ಪದವನ್ನು ಈ ಕಾಲಂ ಸೂಚಿಸುವ ಜಾತಿಗಳಿಗೆ ಸಂವಾದಿಯಾಗಿ ಬಳಸಿಕೊಳ್ಳಲಾಗಿದೆ.

ಅಭಿವೃದ್ಧಿ ಪ್ರವೃತ್ತಿಗಳು ವ್ಯಾಪಕವಾದಂತೆ ಮಹಿಳೆಯರ ಹಕ್ಕುಗಳು ಹಾಗೂ ರಾಜಕೀಯವಾಗಿ ದಲಿತರ ಭಾಗವಹಿಸುವಿಕೆಯ ನಾಯಕತ್ವದ ಪ್ರತಿನಿಧಿಕರಣವು ಬೆಲೆ ಕಳೆದುಕೊಳ್ಳುತ್ತಿದೆ. ಯಾವುದೇ ಹಕ್ಕುಗಳಿದ್ದರೂ ಇಲ್ಲದಾಗಲೂ ಸಹ ಅದರಲ್ಲೂ ದಲಿತ ಮಹಿಳೆಯರು ಹಾಗೂ ದಲಿತರ ರಾಜಕೀಯ ಸ್ವಾತಂತ್ರ್ಯವು ಈಗಾಗಲೇ ಇರುವ ಶೋಷಣೆ, ತಾರತಮ್ಯ ಮತ್ತು ದೌರ್ಜನ್ಯ ಇರುವ ಆಡಳಿತದಲ್ಲಿ ಹೆಚ್ಚಿನ ಜವಾಬ್ದಾರಿಯಿಂದ ಮಹಿಳೆ ಮತ್ತು ದಲಿತರ ಕೆಲಸ ಮಾಡಬೇಕಾಗಿದೆ ಹಾಗೂ ಅನಿವಾರ್ಯತೆಯನ್ನು ರೂಪಿಸಲಾದರೂ ಸಹ ಸಮಾಜದಲ್ಲಿ ತರ್ಕ ಮತ್ತು ತಂತ್ರದ ಮೇಲೆ ರೂಪಿತವಾಗುತ್ತಿರುವ ನಮ್ಮ ಸರ್ಕಾರಗಳ ಅಭಿವೃದ್ಧಿ ಮತ್ತು ಸಬಲೀಕರಣವಾಗಿದೆ. ಈ ರಾಜಕೀಯ ಪ್ರತಿನಿಧಿಕರಣದ ಮಂತ್ರಗಳು ಮಹಿಳೆಯರ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಹಕ್ಕುಗಳನ್ನು ರಕ್ಷಿಸಲು ಸಂಪೂರ್ಣವಾಗಿ ವಿಫಲವಾಗುತ್ತದೆ. ಇಂತಹ ಬೆಳವಣಿಗೆಗಳು ಮಹಿಳೆಯರ ಹಾಗೂ ಅಂಚಿನ ಸಮುದಾಯಗಳ ಮುಂದೆ ಹೊಸ ಹೊಸ ಸಾಮಾಜಿಕ ಸವಾಲುಗಳನ್ನು ಸೃಷ್ಟಿಸುತ್ತಿದೆ. ಇವುಗಳ ಪರಿಣಾಮವಾಗಿಯೇ ಈಗಾಗಲೇ ಹೆಚ್ಚು ತೊಂದರೆಗಳನ್ನು ಅನುಭವಿಸುತ್ತಿರುವ ಹೆಣ್ಣುಮಕ್ಕಳು ಮತ್ತು ದಲಿತರು ಸಂಕೀರ್ಣವಾದ ಸಮಸ್ಯೆಗಳನ್ನು ಎದುರಿಸುವಂತಾಗಿದೆ.

ಅಭಿವೃದ್ಧಿ ಮತ್ತು ರಾಜಕೀಯ ಭಾಗವಹಿಸುವಿಕೆಯ ಪರಿಕಲ್ಪನೆಯು ಸುಲಭ ಸಾಧಾರಣವಾದ ವಿಷಯವಲ್ಲ. "ಅಭಿವೃದ್ಧಿ ಪರಿಕಲ್ಪನೆಯು ಕಳೆದ ಎರಡು ದಶಕಗಳಿಂದ ಪ್ರಪಂಚದಲ್ಲಿ ಹೆಚ್ಚು ಚರ್ಚೆಯಾಗುತ್ತಲೇ ಮುಂದುವರಿದ ವಿಷಯ. ಇದು ಹೆಚ್ಚು ಪ್ರಶಂಸೆಗೂ, ವಿಮರ್ಶೆಗೂ ಒಳಗಾಗಿಲ್ಲ. ಪ್ರಪಂಚದ ಮೊದಲೆರಡು ಯುದ್ಧಗಳ ಸಂದರ್ಭದಲ್ಲಿ ನಡೆದ ಚರ್ಚೆಗಳು ಅಭಿವೃದ್ಧಿ ಪರಿಕಲ್ಪನೆಗೆ ಹೆಚ್ಚಿನ ಶಕ್ತಿ ಬರುವಂತೆ ಮಾಡಿವೆ. ಅದರಲ್ಲೂ ಪ್ರಪಂಚದ ಎರಡನೇ ಯುದ್ಧದ ಕೊನೆಯ ಹಂತದ ವೇಳೆಗೆ ಅಭಿವೃದ್ಧಿ ಪರಿಕಲ್ಪನೆಯು ಬಡವರನ್ನು ಹಸಿವು ಮತ್ತು ಶೋಷಣೆಯಿಂದ ಬಿಡುಗಡೆ ಮಾಡುವ ಕನಸನ್ನು ಸಂಕೇತಿಸುತ್ತಿತ್ತು. ಈ ಯುದ್ಧಗಳಲ್ಲಿ ಸೋತವರಿಗೆ ಮತ್ತು ಗೆದ್ದವರಿಗೆ ಇನ್ನೂ ಮುಂದೆ ಶಕ್ತಿಯ ಮೂಲಕ ಸಾಮ್ರಾಜ್ಯ ವಿಸ್ತರಣೆ ಮಾಡಲೂ ಸಾಧ್ಯವಿಲ್ಲ ಅನ್ನುವುದು ಅನುಭವವಾಯಿತು. ಇದರ ನಂತರ ಸ್ವತಂತ್ರ ಭಾರತದಲ್ಲಿ ಸಂವಿಧಾನಾತ್ಮಕ ಪ್ರಜಾಪ್ರಭುತ್ವ ವ್ಯವಸ್ಥೆಯು ಸಾಮ್ರಾಜ್ಯವಾದ ನಿಲ್ಲಿಸಿ, ಪ್ರಜಾಪ್ರಭುತ್ವದ ಸಾರ್ವತ್ರಿಕ ಹಕ್ಕುಗಳನ್ನು ರೂಪಿಸಿಕೊಟ್ಟಿತು. ಆದರೆ ಇದರಲ್ಲಿಯೂ ಕೂಡ ಸಾಮ್ರಾಜ್ಯವಾದಗಳಂತಹ ಎರಡನೇ ಹಂತದ ಆಳುವ ವರ್ಗ ಯಜಮಾನಿಕೆಗಳನ್ನು ನಿರ್ವಹಿಸುತ್ತಿದೆ. ಮೂರನೇ ಹಂತದ ಬಂಡವಾಳಶಾಹಿಯೂ ಕೂಡ ಇತ್ತೀಚಿನ ಜಾಗತೀಕರಣದಲ್ಲಿ ಬಂಡವಾಳಶಾಹಿ ಸಾಮ್ರಾಜ್ಯಶಾಹಿಯಾಗಿಸುತ್ತಿದೆ. 'ಅಭಿವೃದ್ಧಿ'ಗೆ ಸ್ಥಳೀಯ ಜನಸಮುದಾಯಗಳನ್ನು ಮೂಲ ನೆಲೆಯಿಂದ ಸಾರಾಸಗಟಾಗಿ ಒಕ್ಕಲೆಬ್ಬಿಸಿ, ಮಹಿಳೆಯರನ್ನು ಮತ್ತು ದಲಿತರನ್ನು ಬಡವರನ್ನಾಗಿಸುವುದೇ ಉದ್ದೇಶವಾಗಿದೆ. ಈ ಪ್ರಕ್ರಿಯೆ ಬಹುಜನರಲ್ಲಿ ನಿರಾಸೆಯನ್ನು ಮಾತ್ರ ಹುಟ್ಟಿಸಿದೆ, ಹಲವು ಸಾಮಾಜಿಕ ಸಂಘರ್ಷಗಳನ್ನು ಹುಟ್ಟುಹಾಕಿದೆ, ಇಂದು ಅಭಿವೃದ್ಧಿಯು ಬಹುಜನರಲ್ಲಿ ಒಂದು ಕೆಟ್ಟ ಕನಸಾಗಿ ಕಾಡುತ್ತಿದೆ. ಹಾಗಾದರೆ ಅಭಿವೃದ್ಧಿ ಪ್ರಕ್ರಿಯೆಗಳು

ಯಾರ ಪರವಾಗಿವೇ? ಅದರ ರಾಜಕೀಯ ಆರ್ಥಿಕತೆ ಯಾವುದು? ಎನ್ನುವ ಪ್ರಶ್ನೆಗಳನ್ನು ಅರ್ಥೈಸಿ ವಿಶ್ಲೇಷಿಸುವ ಕೆಲಸವಾಗಬೇಕಾಗಿದೆ.

ಅಭಿವೃದ್ಧಿ ಪದವು ಪ್ರಾರಂಭದಲ್ಲಿ ಬಡತನ ನಿರ್ಮೂಲನೆ, ಶೋಷಣೆ, ಅಪೌಷ್ಠಿಕತೆ, ಅನಾರೋಗ್ಯ, ಅನಕ್ಷರತೆ, ಮುಕ್ತ ಸಮಾಜದ ನಿರ್ಮಾಣ ಮಾಡುವ ಆರ್ಥಿಕ, ಸಾಮಾಜಿಕ ಹಾಗೂ ಲಿಂಗ ಅಸಮಾನತೆಯೂ ಸೇರಿದಂತೆ ಇನ್ನೂ ಹಲವು ಸಾಮಾಜಿಕ ಬಿಕ್ಕಟ್ಟುಗಳಿಗೆ ಹಾಗೂ ಪರಿಹಾರೋಪಾಯ ಸೂಚಿಸುವ ಶಬ್ದವಾಗಿತ್ತು. ಪ್ರಾರಂಭದಲ್ಲಿ ನೀಡಿದ ಬದಲಾಯಿಸಿಕೊಳ್ಳಬಲ್ಲ ಗೋಸುಂಬೆಯಂತೆ ಕಾಣುತ್ತಿದೆ. ಹಾಗೆಯೇ ಮೀಸಲಾತಿಯ ಗ್ರಾಮೀಣ ಪ್ರತಿನಿಧಿಕರಣದ ರಾಜಕೀಯ ಸ್ವಾತಂತ್ರ್ಯವೂ ಹೀಗೆ ಕಾಣುತ್ತಿದೆ. ಅಭಿವೃದ್ಧಿಯ ಪದ ಕೂಡ ಕಾಲ ದೇಶ, ಸಂದರ್ಭ ಮತ್ತು ರಾಜಕೀಯ ಪರಿಸ್ಥಿತಿಗೆ ಅನುಗುಣವಾಗಿ, ಬೇರೆ ಬೇರೆ ಅರ್ಥಗಳನ್ನು (ಬಹುತೇಕ ಸಂದರ್ಭಗಳಲ್ಲಿ/ ಬಂಡವಾಳಶಾಹಿ, ಉಳ್ಳವರ ಪರವಾಗಿ) ರೂಪಿಸಿಕೊಳ್ಳಬಲ್ಲ ಒಂದು ರಾಜಕೀಯ ಪ್ರೇರಿತ ಪರಿಕಲ್ಪನೆಯಾಗಿದೆ (ಎಚ್.ಡಿ ಪ್ರಶಾಂತ್, ೨೦೧೬).

ಭಾರತೀಯ ಸಾಮಾಜಿಕ ಸಂದರ್ಭಗಳಲ್ಲಿ ಜಾತಿ ಆಧಾರಿತ ಅಸಮಾನತೆ ಅತ್ಯಂತ ವಿಕಾರವಾದುದು. ಅದರಲ್ಲಿಯೂ ಅಸ್ಪೃಶ್ಯತೆಯನ್ನು ಅನುಭವಿಸಿದ ಸಮುದಾಯಗಳಲ್ಲಿ ಅವರ (ದಲಿತರು) ಆತ್ಮ ಗೌರವವನ್ನು ಹೇಗೆ ಕುಂದಿಸುತ್ತದೆ ಎನ್ನುವುದನ್ನು ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಂದ ದೇವನೂರು ಮಹಾದೇವ ರವರೆಗೆ ಹಾಗೇ ಅನೇಕ ಪ್ರಗತಿಪರ ಚಿಂತಕರಾದ ಆನಂದ್ ತೇಲ್ತುಂಡೆ, ಕಾಂಚ ಐಲಯ್ಯ, ರೊಮಿಲಾ ಥಾಪರ್, ದೇವಿ ಚಟ್ಟೋಪಾಧ್ಯಾಯ ಇನ್ನು ಹಲವಾರು ವಿಮರ್ಶಕರು ಅಸ್ಪೃಶ್ಯತೆಯ ಆಚರಣೆಯ ವಿಕಾರಗಳನ್ನು ವಿಶ್ಲೇಷಿಸಿದ್ದಾರೆ. ಅದರಲ್ಲಿಯೂ ಪ್ರಜಾಸತ್ತಾತ್ಮಕ ನೆಲೆಯಲ್ಲಿ ಅಸ್ಪೃಶ್ಯತೆಯ ಸಮುದಾಯಗಳ ಜನರು ಸಾರ್ವಜನಿಕವಾಗಿ ಭಾಗವಹಿಸಲಾಗದಿರುವ ಸ್ಥಿತಿಯನ್ನು ವಸ್ತುನಿಷ್ಠವಾಗಿ ಅರ್ಥ ಮಾಡಿಕೊಂಡ ಬಾಬಾ ಸಾಹೇಬ್ ಅಂಬೇಡ್ಕರ್ ಅವರು 'ನಾನು ಯಾಕೆ ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿದ್ದೇನೆ ಎಂದು ಹೇಳಿದ್ದಾರೆ.(ಡಾ. ಬಿ.ಆರ್. ಅಂಬೇಡ್ಕರ್, ಬುದ್ಧ ಮತ್ತು ಅವನ ಧಮ್ಮ) ಇಂತಹ ಪರಿಸ್ಥಿತಿಯಲ್ಲಿ ದಲಿತರ ಸಾರ್ವಜನಿಕರ ಭಾಗವಹಿಸುವಿಕೆ ಅದರಲ್ಲಿಯೂ ಸ್ಥಳಿಯ ಸರ್ಕಾರಗಳಲ್ಲಿ ಸಲ್ಪ ಮಟ್ಟಿನ ಬದಲಾವಣೆ ಕಂಡಿದೆ. ಈ ಬದಲಾವಣೆಗಳು ಪರಿಮಾಣಾತ್ಮಕವಾಗಲಿ, ಗುಣಾತ್ಮಕವಾಗಲಿ ಹಿಡಿದಿಡುವುದು ಅಷ್ಟು ಸುಲಭವಾದ ಕೆಲಸವಲ್ಲ. ಆದರೆ ಓರಿಯಂಟ್ ಬ್ಲಾಂಕ್ ಸ್ವ್ಯಾನ್ ಪ್ರಕಾಶವು "ಡಿ ಸೆಂಟ್ರಲೇಜೆಷನ್ ಆನ್ ಲೋಕಲ್ ಗೌರ್ನಂಸಿ" ಎನ್ನುವ ಪುಸ್ತಕದಲ್ಲಿ ದಲಿತ ಸಮುದಾಯ ಸ್ಥಳೀಯ ಸರ್ಕಾರಗಳಲ್ಲಿ ಭಾಗವಹಿಸುವಿಕೆಯ ಕುರಿತಂತೆ ಕೆಲವು ಮಾನದಂಡಗಳನ್ನು ಬಳಸಿ ವಿಶ್ಲೇಷಿಸಲು ಪ್ರಯತ್ನಿಸಿದೆ, "ದಲಿತರು ಸ್ಥಳೀಯ ಸರ್ಕಾರಗಳ ಚುನಾವಣೆಯಲ್ಲಿ ಹೇಗೆ ಭಾಗವಹಿಸುತ್ತಾರೆ ಹೇಗೆ ಬಳಸಲಾಗಿದೆ ಎಂದು ಈ ಪುಸ್ತಕ ಕಟ್ಟಿಕೊಡುತ್ತದೆ. ಅದರಲ್ಲಿಯೂ ಮುಖ್ಯವಾಗಿ ಪಂಚಾಯಿತಿ ದಾಖಲೆಗಳನ್ನು ಪರಿಶೀಲಿಸಿರುವ ಅಧ್ಯಯನಕಾರರು ದಲಿತರ ಅಸ್ಪೃಶ್ಯ ಸಮುದಾಯಕ್ಕೆ ಸೇರಿದ ಸದಸ್ಯರುಗಳಲ್ಲಿ ಶೇಕಡ ೬೩ರಷ್ಟು

ದಲಿತ ಪ್ರತಿನಿಧಿಗಳು ನಿಖರವಾಗಿ ಯಾವುದೇ ವಿಷಯಗಳನ್ನು ಸಭೆಗಳಲ್ಲಿ ಅಥವಾ ಸಭೆ ನಡೆಯುವ ಮೊದಲು ಅಥವಾ ಸಭೆ ನಡೆದ ನಂತರ ಮೊದಲು ಚರ್ಚಿಸಿರುವುದಿಲ್ಲ" ಎಂಬುವುದನ್ನು ದಾಖಲಿಸುತ್ತಾರೆ. ಇಂತಹ ದಾಖಲೆಗಳು ಬಾಬಾ ಸಾಹೇಬ್ ಅಂಬೇಡ್ಕರ್ ಅವರು ೨೬ ನವೆಂಬರ್ ೧೯೪೯ ಸಂವಿಧಾನ ರಚನೆಯನ್ನು ಪೂರ್ಣಗೊಳಿಸಿ ಮಧ್ಯಂತರ ಸರ್ಕಾರಕ್ಕೆ ಒಪ್ಪಿಸುವ ಸಂದರ್ಭದಲ್ಲಿ ಅವರು ಮಾಡಿರುವ ಭಾಷಣ ಈಗಲೂ ಕಾಣುತ್ತದೆ. ಅದೇನೆಂದರೆ ರಾಜಕೀಯವಾಗಿ ಒಬ್ಬ ವ್ಯಕ್ತಿಗೆ ಒಂದು ಮೌಲ್ಯ ಎನ್ನುವುದು ಸಾಕಾರಗೊಳ್ಳಬೇಕಾದರೆ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಯನ್ನು ಸಾಧಿಸಿಕೊಳ್ಳಬೇಕಾಗಿದೆ. ಆದರೆ ಇದಕ್ಕೆ ವಿರುದ್ಧವಾಗಿ ರಾಜಕೀಯ ಸಮಾನತೆಯ ಮೂಲಕ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಯನ್ನು ಕಂಡುಕೊಳ್ಳಲು ನಾವು ಹೆಜ್ಜೆ ಇಡುತ್ತಿದ್ದೇವೆ. ಇದು ನನಗೆ ವೈರುಧ್ಯದಂತೆ ಕಾಣುತ್ತಿದೆ. ಯಾಕೆಂದರೆ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯು ಸಮಾನತೆಯಲ್ಲಿ ರಾಜಕೀಯ ಭಾಗವಹಿಸುವಿಕೆ ತಲೆಯೊಡ್ಡುತ್ತದೆ. ಈ ಕುರಿತು ನಾವೆಲ್ಲರೂ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಯಲ್ಲಿ ಸಾಧಿಸುವ ದಿಕ್ಕಿನೆಡೆಗೆ ಚಲಿಸದೇ ಹೋದ ಸಂದರ್ಭದಲ್ಲಿ ಪ್ರಜಾಪ್ರಭುತ್ವ, ರಾಜಕೀಯ ಭಾಗವಹಿಸುವಿಕೆ, ಸ್ವಾತಂತ್ರ್ಯ, ಮೀಸಲಾತಿ, ಸೌಹಾರ್ದತೆ ಎಲ್ಲವೂ ಹುಸಿಯಾಗುತ್ತದೆ ಎಂದು ಹೇಳಿದ್ದಾರೆ(ಬುದ್ಧ ಮತ್ತು ಅವನ ಧಮ್ಮ, ೨೦೧೫, ಕೃಷ್ಣಯ್ಯ ಎ.ಡಿ. (ಅನು), ಬಾಬಾ ಸಾಹೇಬ್ ಅಂಬೇಡ್ಕರ್ (ಮೂಲ))

ಭಾರತೀಯ ಸಮಾಜ ಜಾತಿವ್ಯವಸ್ಥೆಯನ್ನು ತಳಹದಿಯನ್ನಾಗಿರಿಸಿಕೊಂಡಿರುವುದರಿಂದ ಸಮಾಜವು ಹಲವು ಜಾತಿ ಉಪಜಾತಿಗಳಾಗಿ ಒಡೆದು ಹೋಗಿದೆ. ಒಂದು ಸಮಾಜದಲ್ಲಿ ಎಲ್ಲರು ಸಮನಾಗಿರಲು ಸಾಧ್ಯವಿಲ್ಲ. ಬುದ್ಧಿಶಕ್ತಿ, ಸಂಪತ್ತು, ಅಧಿಕಾರ, ಲಿಂಗ, ಧರ್ಮ ಇತ್ಯಾದಿ ಕಾರಣಗಳಿಂದಾಗಿ ಅಸಮಾನತೆ ಸ್ವಾಭಾವಿಕವಾಗಿರುತ್ತದೆ. ನೈಸರ್ಗಿಕ ಅಸಮಾನತೆಯನ್ನು ಹೋಗಲಾಡಿಸಲು ಸಾಧ್ಯವಿಲ್ಲ. ಆದರೆ ನಾವು ಸೃಷ್ಟಿಸಿಕೊಂಡಿರುವ ಕೃತಕ ಅಥವಾ ಮಾನವ ನಿರ್ಮಿತ ಅಸಮಾನತೆಯನ್ನು ಹೋಗಲಾಡಿಸಿ ಸಮಾಜದಲ್ಲಿ ಎಲ್ಲರೂ ಆತ್ಮಗೌರವದಿಂದ ಮತ್ತು ನಂಬಿಕೆಯಿಂದ ಜೀವಿಸುವಂತೆ ಮಾಡುವುದು ಸಮಾಜ ಹಾಗೂ ಸರ್ಕಾರದ ಮುಖ್ಯ ಗುರಿಯಾಗಿದೆ. ಜಾತಿಯಾಧಾರಿತ ಅಸಮಾನತೆಯನ್ನು ಅತಿಸುಲಭವಾಗಿ ಗುರುತಿಸಬಹುದಾಗಿದೆ. ಏಕೆಂದರೆ ಸಮಾಜದ ಒಂದು ವರ್ಗವು ತನ್ನ ಸ್ವಾರ್ಥ ಸಾಧನೆಗಾಗಿ ಮತ್ತೊಂದು ವರ್ಗದ ಮೇಲೆ ಹೇರಿರುವುದಾಗಿದೆ.

ಅಸಮಾನತೆಯೆಂಬುದು ಜಗತ್ತಿನ ಎಲ್ಲಾ ದೇಶ ಪ್ರದೇಶಗಳಲ್ಲಿ ಇದೆ. ಭಾರತದಲ್ಲಿ ಯಾವ ರೀತಿ ಜಾತಿಪದ್ಧತಿಯನ್ನು ಕ್ರೂರವಾಗಿ ಅನುಸರಿಸಿಕೊಂಡು ಬರಲಾಗುತ್ತಿದೆಯೋ ಅದೇ ರೀತಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ವರ್ಣಭೇದ ನೀತಿಯು ಸಹ ಅತ್ಯಂತ ಕ್ರೂರವಾದ ಮತ್ತು ಅಮಾನವೀಯ ಪದ್ಧತಿಯಾಗಿದೆ. ಅದಕ್ಕಿಂತಲೂ ಪೂರ್ವದಲ್ಲಿ ಗುಲಾಮಗಿರಿ ಪದ್ಧತಿ ಇತ್ತು. ೧೮೬೫ರಲ್ಲಿ ಅಮೇರಿಕಾದ ಅಧ್ಯಕ್ಷರಾಗಿದ್ದ ಅಬ್ರಾಹಂಲಿಂಕನ್ ಗುಲಾಮಗಿರಿಯನ್ನು ರದ್ದುಗೊಳಿಸಿದರು ಮತ್ತು ಮಾರ್ಟಿನ್ ಲೂಥರ್ ಕಿಂಗ್ ಅವರಿಂದ ವರ್ಣಭೇದ ನೀತಿಯನ್ನು ಕೊನೆಗೊಳಿಸಲಾಯಿತು. ಅಲ್ಲದೆ ದಕ್ಷಿಣ

ಆಫ್ರಿಕಾದಲ್ಲಿ ನೆಲ್ಸನ್‌ಮಂಡೆಲಾ ಪ್ರಯತ್ನದಿಂದ ಮತ್ತು ವರ್ಣಭೇದ ನೀತಿಯ ವಿರುದ್ಧ ಹೋರಾಟದ ಫಲವಾಗಿ. ವರ್ಣಭೇದ ನೀತಿಯನ್ನು ಕೊನೆಗೊಳಿಸಿ ಅಭಿವೃದ್ಧಿಯಲ್ಲಿ ಯಾವುದೇ ರಾಷ್ಟ್ರಕ್ಕಿಂತ ಕಡಿಮೆ ಇಲ್ಲ ಎಂಬುದನ್ನು ಸಾಧಿಸಿ ತೋರಿಸಿದೆ. ಆದರೆ ಭಾರತದ ಸಂದರ್ಭದಲ್ಲಿ ಯಾವ ಕಾಲಘಟ್ಟದಲ್ಲಿ ಇಂತಹ ಯಾವ ಲಕ್ಷಣಗಳು ಗೋಚರಿಸಲೇ ಇಲ್ಲ. ಸಾವಿರಾರು ವರ್ಷಗಳಿಂದ ಜಾತಿಯ ಪದ್ಧತಿಯ ಅಮಾನವೀಯ ಪದ್ಧತಿಯನ್ನು ಮುಂದುವರೆಸಿಕೊಂಡು ಬಂದಿದೆ. ಇಂತಹ ಜಾತಿಪದ್ಧತಿ ದಕ್ಷಿಣ ಏಷ್ಯಾದ ಉಪಖಂಡದಲ್ಲಿ ಅದರಲ್ಲಿ ವಿಶೇಷವಾಗಿ ಭಾರತದಲ್ಲಿ ಎದ್ದು ಕಾಣುತ್ತದೆ.

ಸ್ವತಂತ್ರ ಭಾರತದ ೭೦ ವರ್ಷಗಳ ಇತಿಹಾಸದಲ್ಲಿ ಅನೇಕ ಬದಲಾವಣೆಗಳಾಗಿವೆ. ಆದರೆ ಅನುಚಾನವಾಗಿ ಹರಿದುಕೊಂಡು ಬಂದಿರುವ ಸಾಮಾಜಿಕ, ಆರ್ಥಿಕ ಅಸಮಾನತೆಗಳು ಬದಲಾಗುತ್ತಿಲ್ಲ ಎಂದು ಎಂ.ಎನ್. ಶ್ರೀನಿವಾಸ ಅವರು ಅಭಿಪ್ರಾಯಪಟ್ಟಿದ್ದಾರೆ. ಅಭಿವೃದ್ಧಿಯ ಪ್ರಕ್ರಿಯೆಯ ಫಲಗಳನ್ನು ಆರ್ಥಿಕವಾಗಿ ಬಲಾಢ್ಯರಾದ ಉನ್ನತ ಜಾತಿಗಳು ಗುತ್ತಿಗೆ ಹಿಡಿದುಕೊಂಡುಬಿಟ್ಟಿವೆ. ಇದಕ್ಕೆ ಉತ್ತಮವಾದ ಸಮರ್ಥನೆಯೆಂದರೆ ರಾಜ್ಯದ/ರಾಷ್ಟ್ರದ ಯಾವುದೇ ವ್ಯಾಪಾರ, ಉದ್ದಿಮೆ, ವಾಣಿಜ್ಯ, ಗುತ್ತಿಗೆ, ಕೈಗಾರಿಕೆ, ತಾಂತ್ರಿಕತೆಯಲ್ಲಿ ಮತ್ತು ಎಪಿಎಂಸಿ ಮುಂತಾದ ವಲಯಗಳಲ್ಲಿ ಏಕೆ ದಲಿತರು ಪ್ರವೇಶಿಸಿಲ್ಲ, ಜಾತಿಯ ಕಾರಣಕ್ಕಾಗಿ ದಲಿತರು ಕೃಷಿಯೇತರ ಕ್ಷೇತ್ರಗಳನ್ನು ಪ್ರವೇಶಿಸುವುದು ಕಷ್ಟವಾಗಿದೆ. ಇದರ ಜೊತೆಗೆ ಕಸುಬು ಮತ್ತು ಜಾತಿಯ ನಡುವಿನ ಸಂಬಂಧ ಕುಸಿದು ಬಿದಿದ್ದೆ. ದಲಿತೇತರರಿಗಿಂತ ದಲಿತರು ಎರಡು ಪಟ್ಟು ಕೃಷಿಯನ್ನು ಅವಲಂಬಿಸಿಬೇಕಾಗಿದೆ. ಹೀಗಾಗಿ ದಲಿತ ದುಡಿಮೆಗಾರರಲ್ಲಿ ಮೂರು ಮುಕ್ಕಾಲು ಮೀಸೆಯಷ್ಟು ಜನರು ಬಡತನ ರೇಖೆಯ ಕೆಳಗೆ ಜೀವನವನ್ನು ಸಾಗಿಸುತ್ತಿದ್ದಾರೆ.

ಮೇಲೆ ಹೇಳಿದ ಸಂಕಥನಗಳು ಕೇವಲ ಯಾವುದೋ ಒಂದು ನಿರ್ದಿಷ್ಟ ಕಾಲದಲ್ಲಿ ಅಥವಾ ಸಮಯದಲ್ಲಿ ನಡೆದ ಸಂಗತಿಯಲ್ಲಿ ಮಾನವನ ನಾಗರಿಕತೆ ಬೆಳದಂತೆಲ್ಲ ಬಲಗೊಂಡ ವ್ಯವಸ್ಥೆಯಾಗಿದೆ. ಇದೇ ನಾಗರಿಕತೆ ಬೆಳದಂತೆ ಅದಕ್ಕೆ ವಿರುದ್ಧ ವೈಚಾರಿಕತೆಯೂ ಬೆಳೆಯಿತು. ಆಗಲೇ ಬಲವಂತ ಮತ್ತು ಬಲಹೀನನ ನಡುವೆ ಸಂಘರ್ಷ ಪ್ರಾರಂಭವಾಗಿದ್ದು, ಇದೇ ಅಸಮಾನತೆ ವಿರುದ್ಧ ೫ನೇ ಶತಮಾನದಲ್ಲಿ ಬುದ್ಧ, ೧೨ನೇ ಶತಮಾನದಲ್ಲಿ ಬಸವಣ್ಣ, ೧೮ನೇ ಶತಮಾನದಲ್ಲಿ ಕಾರ್ಲ್‌ಮಾರ್ಕ್ಸ್, ೧೯ನೇ ಶತಮಾನದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಸಮಾನತೆ ಕಲ್ಪನೆಯನ್ನು ಬಲಗೊಳಿಸಿದರು. ರಾಜಪ್ರಭುತ್ವದಲ್ಲಿ ಪ್ರತಿಪಾದಿಸಿದ ವಿಚಾರಗಳು ಪ್ರಜಾಪ್ರಭುತ್ವದ ವ್ಯಾಪ್ತಿಗೆ ತಂದು ಅದನ್ನು ಸಂವಿಧಾನದ ವ್ಯಾಪ್ತಿಗೆ ತಂದರು.

ಸ್ವಾತಂತ್ರ ನಂತರ ಸಾವಿರಾರು ವರ್ಷಗಳಿಂದ ಅಸಮಾನತೆಯ ಬೇಗುದಿಯಲ್ಲಿ ನಲುಗಿದ ದಲಿತ ಜನಾಂಗಕ್ಕಾಗಿ ಮೀಸಲಾತಿಗೆ ಅಸ್ಥಿಭಾರ ಹಾಕಿದರು ಮತ್ತು ದಲಿತರ ಅಭಿವೃದ್ಧಿಗಾಗಿ

ಸಂವಿಧಾನದಲ್ಲಿ ದೃಢಪಡಿಸಿದರು. ಅದರಂತೆ ಭಾರತ ಸಂವಿಧಾನದ ೩೩೦ನೇ ವಿಧಿಯ ಪ್ರಕಾರ ಲೋಕಸಭೆಯ ೫೪೫ ಸ್ಥಾನಗಳಲ್ಲಿ ೧೨೦ ಸ್ಥಾನಗಳ ದಲಿತರಿಗೆ ಲಭ್ಯವಾದವು. ಇವುಗಳು ಮೀಸಲಾತಿ ಕ್ಷೇತ್ರಗಳು ಎಂಬ ಶಿರೋನಾಮೆಯಲ್ಲಿ ಕರೆಯಲಾಯಿತು. ಈ ಕ್ಷೇತ್ರಗಳಲ್ಲಿ ಅದೇ ಜನಾಂಗ ಸ್ಪರ್ಧಿಸಲು ಅವಕಾಶ ನೀಡಲಾಯಿತು ಮತ್ತು ರಾಜ್ಯ ವಿಧಾನಸಭೆಯಲ್ಲಿ ಮತ್ತು ೧೯೯೨ರಲ್ಲಿ ಸಂವಿಧಾನ ತಿದ್ದುಪಡಿಯ ಮೂಲಕ ಸರ್ಕಾರದಲ್ಲಿ ಸ್ಥಳೀಯ ದಲಿತರಿಗೆ ಮೀಸಲಾತಿ ನೀಡಲಾಯಿತು.

ಕೇವಲ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿನ ಪ್ರಾತಿನಿಧ್ಯದಿಂದ ದಲಿತರ ಬದುಕು ಬದಲಾಗುವುದಿಲ್ಲ ಎಂದು ಮನಗಂಡು ಭಾರತ ಸರ್ಕಾರವು ತಳಮಟ್ಟದಲ್ಲಿ ಸ್ಥಳೀಯ ಸರ್ಕಾರಗಳಲ್ಲಿ ಪ್ರಾತಿನಿಧ್ಯ ಕೊಟ್ಟರೆ ರಾಜಕೀಯ ಭಾಗವಹಿಸುವಿಕೆ ಮತ್ತು ಅಧಿಕಾರ ಎರಡನ್ನು ಅನುಭವಿಸಿ ಸಮಾಜದ ಮುಖ್ಯವಾಹಿನಿಗೆ ಬರಬಹುದು ಎಂದು ಗಮನಿಸಿ ೧೯೯೨ರಲ್ಲಿ ಭಾರತ ಸರ್ಕಾರವು ಸಂವಿಧಾನಕ್ಕೆ ೭೩ ಮತ್ತು ೭೪ನೇ ತಿದ್ದುಪಡಿಯ ಮೂಲಕ ಗ್ರಾಮೀಣ ಸ್ಥಳೀಯ ಸರ್ಕಾರಗಳಲ್ಲಿ ಮತ್ತು ನಗರ ಸ್ಥಳೀಯ ಸರ್ಕಾರದಲ್ಲಿ ದಲಿತರಿಗೆ ಸ್ಥಾನಗಳ ಮೀಸಲಾತಿ ಜೊತೆಗೆ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಗಳಲ್ಲಿಯೂ ಸಹ ಮೀಸಲಾತಿ ಕಲ್ಪಿಸಲಾಯಿತು. ಅದೇ ರೀತಿಯಾಗಿ ಕರ್ನಾಟಕದಲ್ಲಿ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ೧೯೯೩ರ ತಿದ್ದುಪಡಿ ಮೂಲಕ ನಗರ ಸ್ಥಳೀಯ ಸರ್ಕಾರಗಳು ಮತ್ತು ಗ್ರಾಮೀಣ ಸ್ಥಳೀಯ ಸರ್ಕಾರಗಳಲ್ಲಿ ಸ್ಥಾನಗಳ ಮೀಸಲಾತಿ ಜೊತೆಗೆ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಗಳಲ್ಲಿ ದಲಿತರಿಗೆ ಮೀಸಲಾತಿ ಕಲ್ಪಿಸಲಾಯಿತು.

ಆ ಪ್ರಕಾರವಾಗಿ ಕರ್ನಾಟಕದಲ್ಲಿ ಈಗ ೩೦ ಜಿಲ್ಲೆಗಳ ೬೦೭೩ ಗ್ರಾಮಪಂಚಾಯಿತಿಗಳಲ್ಲಿ ದಲಿತರಿಗೆ ೧೯೪೫ ಸ್ಥಾನಗಳು ಮೀಸಲಿರಿಸಲಾಗಿದೆ. ಪರಿಶಿಷ್ಟ ಪಂಗಡದ ದಲಿತರಿಗೆ ೫೬೨೮ ಸ್ಥಾನಗಳು ಲಭ್ಯವಾದವು. ಇಲ್ಲಿಯವರೆಗೆ ೫ ವರ್ಷಕ್ಕೊಮ್ಮೆ ಕೇವಲ ಮತದಾನಕ್ಕೆ ಸೀಮಿತವಾದ ದಲಿತರು ರಾಜಕೀಯ ಸಹಭಾಗಿತ್ವದ ಮುನ್ನಲೆಗೆ ಬಂದರು. ಅಧಿಕಾರ ಮತ್ತು ಸ್ಥಾನಮಾನಗಳ ಅಪಾರ ಕನಸು ಕಂಡರು. ಆದರೆ ವಾಸ್ತವದಲ್ಲಿ ಹಾಗೆ ಆಗಲಿಲ್ಲ. ಅಂದರೆ ಜಾತಿಯತೆಯನ್ನು ಗಟ್ಟಿಗೊಳಿಸಲು ಮತ್ತು ಗುಲಾಮಗಿರಿಗೆ ಹೊಸ ಭಾಷೆಯನ್ನು ೭೩ನೇ ತಿದ್ದಪಡಿ ಬರೆಯಿತು. ಎಂದರೆ ತಪ್ಪಾಗಲಿಕ್ಕೆ ಇಲ್ಲ. ಯಾಕೆಂದರೆ ಈ ಅಭಿಪ್ರಾಯವನ್ನು ಅಂಬೇಡ್ಕರರು ಸ್ಥಳೀಯ ಸರ್ಕಾರಗಳು ಜಾತಿಯ ವಿಷಕೂಪಗಳು ಎಂದು ಅಭಿಪ್ರಾಯಪಟ್ಟಿದ್ದರು. ಅದೇ ನಿಜ ಎಂದು ಗೋಚರಿಸುವಲ್ಲಿ ಬಹಳ ಕಾಲ ಬೇಕಾಗಲಿಲ್ಲ ಸಂವಿಧಾನದ ೭೩ನೇ ತಿದ್ದುಪಡಿ ಜಾರಿಗೆ ಬಂದು ೨೫ ವರ್ಷಗಳಾದರೂ ಯಾವ ದಲಿತ ಅಧ್ಯಕ್ಷ–ಉಪಾಧ್ಯಕ್ಷರು ಸ್ವತಂತ್ರ ಅಧಿಕಾರ ನಡೆಸಿದ ಉದಾಹರಣೆಗಳಲ್ಲಿ ಈ ಅಭಿಪ್ರಾಯಕ್ಕೆ ಅನೇಕ ಅಧ್ಯಯನಗಳು ಪುಷ್ಠಿ ನೀಡುತ್ತವೆ.

ಇನ್ನು ಸಾಮಾಜಿಕ ಅಸಮಾನತೆಗೆ ಅಸ್ಪೃಶ್ಯತೆಯ ಮತ್ತು ದಲಿತರ ರಾಜಕೀಯ ಸಹಭಾಗಿತ್ವದ ಭಾಗವಾಗಿ ಬಂದ ಮೀಸಲಾತಿ ದಲಿತರಲ್ಲಿಯೇ ಮತ್ತೊಂದು ಅಸಮಾನತೆಯನ್ನು ಸೃಷ್ಟಿಸಿತು.

ಜಾತಿ ನಿವಾರಣೆಗಾಗಿ ಚಾಲ್ತಿಗೆ ಬಂದ ಮೀಸಲಾತಿ ಸೌಲಭ್ಯವು ಪಟ್ಟಭದ್ರ ದಲಿತ ರಾಜಕಾರಣಿಗಳ ಮತ್ತು ಉನ್ನತ ಅಧಿಕಾರಗಳ ಸ್ವಾರ್ಥದಿಂದಾಗಿ ಅದು ಕೆಲವು ಜನಗಳ ಸ್ವತ್ತಾಗಿ ಅಥವಾ ಹಕ್ಕಾಗಿ ಪರಿಣಮಿಸಿದೆ. ಇದು ದಲಿತರಲ್ಲಿಯೂ ಎಲ್ಲರನ್ನು ಒಳಗೊಳ್ಳುವಂತವಾಗಲು ಮತ್ತೊಂದು ಹಂತದಲ್ಲಿ ಕಟ್ಟುನಿಟ್ಟಾದ ಬದಲಾವಣೆ ಜಾರಿಗೊಳಿಸಬೇಕಾದ ಅವಶ್ಯಕತೆ ಇದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಭಿವೃದ್ಧಿಯ ಪರಿಕಲ್ಪನೆ ಕೇವಲ ಭೌತಿಕ ಕ್ರಿಯೆಗಳಾದ ಉತ್ಪಾದನೆ ಮತ್ತು ಆದಾಯಕ್ಕೆ ಮುಂತಾದ ಚಟುವಟಿಕೆಗಳಿಗೆ ಸಂಬಂಧಿಸಿತ್ತು. ಆದರೆ ನಾಗರಿಕ ಸಮಾಜ, ಪರಿಸರ, ಸಾಕ್ಷರತೆ, ಸಾಮಾಜಿಕ ಬಂಡವಾಳ ಮತ್ತು ಸಾಂಸ್ಕೃತಿಕ ಬೆಳವಣಿಗೆ ಮುಂತಾದವುಗಳು ಅಭಿವೃದ್ಧಿಯ ವ್ಯಾಪ್ತಿಯ ಒಳಗೆ ಬರುತ್ತವೆ ಎಂಬುದನ್ನು ಅಭಿವೃದ್ಧಿ ಕಲ್ಪನೆಯಲ್ಲಾಗಲಿ ಅಥವಾ ಮಾನವ ಅಭಿವೃದ್ಧಿಯ ಪರಿಕಲ್ಪನೆಯಲ್ಲಾಗಲಿ ಚರ್ಚೆಗೆ ಬರಲಿಲ್ಲ. ೧೯೯೦ರ ಮಾನವ ಅಭಿವೃದ್ಧಿಯಲ್ಲಿ ಅಭಿವೃದ್ಧಿಯನ್ನು ಕೇವಲ ಶಿಕ್ಷಣ, ಆರೋಗ್ಯ, ಆದಾಯದ ಹೆಚ್ಚಳದಿಂದ ನಿರ್ಧರಿಸಲ್ಪಡುತ್ತದೆ. ಆದರೆ ಸಾಮಾಜಿಕ ಅಸಮಾನತೆ, ಅಸ್ಪೃಶ್ಯತೆ, ಭೂಮಿ ಮರುಹಂಚಿಕೆ, ಕೈಗಾರಿಕೆಗಳ ರಾಷ್ಟ್ರೀಕರಣ ಲಿಂಗ ತಾರತಮ್ಯವನ್ನು ಕೇಂದ್ರೀಕರಿಸಿ ಅಭಿವೃದ್ಧಿಯನ್ನು ಮಾಪನ ಮಾಡದೆ ಹೋದರೆ, ಬಂಡವಾಳಶಾಹಿ ವ್ಯವಸ್ಥೆ ಬಲಗೊಂಡು ಮತ್ಸ್ಯ ನ್ಯಾಯದ ಪ್ರಕಾರ ದೊಡ್ಡ ಮೀನು ಸಣ್ಣ ಮೀನನ್ನು ತಿಂದು ಬದುಕುತ್ತವೆ ಎನ್ನುವಂತಾಗಿ ಸಂವಿಧಾನ ಕಾಯ್ದೆ ಕಾನೂನುಗಳು ಮೂಕ ಪ್ರೇಕ್ಷಕರಾಗುವ ಕಾಲ ದೂರವಿಲ್ಲ ಎಂದು ಭಾವಿಸಬೇಕಾಗುತ್ತದೆ. ಇದರ ಜೊತೆಗೆ ಆಡಳಿತ ಯಂತ್ರ ಮತ್ತು ರಾಜಕೀಯ ವ್ಯವಸ್ಥೆ ತನ್ನನ್ನು ತಾನೂ ರಕ್ಷಣೆ ಮಾಡಿಕೊಂಡಂತಾಗುತ್ತದೆ.

ಇದರ ಜೊತೆಗೆ ಮಾನವ ಅಭಿವೃದ್ಧಿಯಲ್ಲಿ ದಲಿತ ಅಭಿವೃದ್ಧಿ ಸೂಚ್ಯಂಕದ ಮೂಲಕ ದಲಿತರು ಎದುರಿಸುತ್ತಿರುವ ಅಸ್ಪೃಶ್ಯತೆ, ಅನ್ಯಾಯ, ದೌರ್ಜನ್ಯ ಮತ್ತು ಸಾಮಾಜಿಕ ಅಸಮಾನತೆಗಳನ್ನು ಮಾಪನ ಮಾಡಬೇಕು. ಇದರ ಜೊತೆಗೆ ಪಂಚಾಯತ್ ಡೆವಲಪಮೆಂಟ್ ಇಂಡೆಕ್ಸ್‌ನ್ನು ಕೂಡ ಮೌಲ್ಯಮಾಪನ ಮಾಡಬೇಕು.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದಲ್ಲಿ ದಲಿತರು ಎದುರಿಸುತ್ತಿರುವ ಸವಾಲುಗಳನ್ನು ವಿಶ್ಲೇಷಣೆಯ ಜೊತೆಗೆ ವಿಶೇಷವಾಗಿ ಕೋಲಾರ ಜಿಲ್ಲೆಯ ದಲಿತರು ರಾಜಕೀಯವಾಗಿ ಭಾಗವಹಿಸುವಿಕೆಯನ್ನು ವಿಶ್ಲೇಷಿಸಿ ಅಧ್ಯಯನ ಮಾಡಲಾಗುವುದು. ಈ ಎಲ್ಲಾ ಚರ್ಚೆಗಳ ಹಿನ್ನೆಲೆಯಲ್ಲಿ ದಲಿತರ ಅಭಿವೃದ್ಧಿಗಾಗಿ ಇರುವ ಸಂವಿಧಾನಾತ್ಮಕ ರಕ್ಷಣೆಗಳು, ಮೀಸಲಾತಿ, ನಾಗರಿಕ ಕಾನೂನು, ಅಭಿವೃದ್ಧಿ ಕಾರ್ಯಕ್ರಮಗಳು, ಸಾಮಾಜಿಕ ಕಾರ್ಯಕ್ರಮಗಳು ರಾಜಕೀಯ ಅಧಿಕಾರ ಮುಂತಾದ ವಿಚಾರಗಳಿಗೆ ಸಂಬಂಧಿಸಿ ಬೆಳಕು ಚೆಲ್ಲುವುದಿಲ್ಲ. ಈ ಹಿನ್ನೆಲೆಯಲ್ಲಿ ಕೋಲಾರ ಜಿಲ್ಲೆಯ ದಲಿತ ರಾಜಕೀಯ ಭಾಗವಹಿಸುವಿಕೆ ಅಭಿವೃದ್ಧಿಯ ಸಂಬಂಧವನ್ನು ವಿಶ್ಲೇಷಿಸಿ ಅಧ್ಯಯನ ಮಾಡುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ಮುಖ್ಯವೆನಿಸಿದ ಅಧ್ಯಯನಗಳನ್ನು ಪರಾಮರ್ಶಿಸಿ ಅಧ್ಯಯನದ ಉದ್ದೇಶಗಳನ್ನು ರೂಪಿಸಿಕೊಳ್ಳಲು ಪ್ರಯತ್ನಿಸಲಾಗಿದೆ.

೧.೨. ಪ್ರಮುಖ ಅಧ್ಯಯನಗಳ ಪರಾಮರ್ಶೆ

ಪ್ರಸ್ತುತ ಅಧ್ಯಯನದ ವಿಷಯಕ್ಕೆ ಸಂಬಂಧಿಸಿಂತೆ ಅಗಣಿತ ಅಧ್ಯಯನಗಳು ನಡೆದಿವೆ. ಈ ನಮ್ಮ ಅಧ್ಯಯನಕ್ಕೆ ಪ್ರಮುಖವೆನಿಸಿದ ಕಾಲದ ಮಿತಿಯಲ್ಲಿ ಅಧ್ಯಯನಗಳನ್ನು ಇಲ್ಲಿ ಅರ್ಥಮಾಡಿಕೊಳ್ಳಲು ಪ್ರಯತ್ನ ಮಾಡಲಾಗಿದೆ. ಪ್ರಮುಖವಾದ ಅಧ್ಯಯನಗಳು ಪರಾಮರ್ಶೆಯನ್ನು ಮಾಡಿ ಪ್ರಮುಖ ಪ್ರಶ್ನೆಗಳನ್ನು ಗುರುತಿಸಿ ಪ್ರಸ್ತುತ ಅಧ್ಯಯನವು ಸಂಶೋಧನಾ ಪ್ರಶ್ನೆಗಳನ್ನು ರೂಪಿಸಿಕೊಂಡಿದೆ. ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ನಾನು ಕಾಲಮಿತಿಯೊಳಗೆ ಅಧ್ಯಯನ ಮಾಡಿದ ಬಹುತೇಕ ಅಧ್ಯಯನಗಳು ದಲಿತರ ರಾಜಕೀಯ ಭಾಗವಹಿಸುವಿಕೆಯನ್ನು ನಿಯಂತ್ರಿಸುತ್ತಿರುವುದು ಆಯಾ ಪ್ರದೇಶದ ಬಲಾಢ್ಯರು ಎನ್ನುವ ಮಾತ್ರಕ್ಕೆ ದಲಿತರ ರಾಜಕೀಯ ಭಾಗವಹಿಸುವಿಕೆಯು ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರದಲ್ಲಿ ಸ್ಥಿರವಾಗಿದೆಂದು ಅರ್ಥವಲ್ಲ. ಇಲ್ಲಿ ದಲಿತರು ಸ್ಥಳೀಯ ಸರ್ಕಾರಗಳಲ್ಲಿ ಭಾಗವಹಿಸುವ ವಿಷಯವನ್ನು ಕೇವಲ ೭೩ ಮತ್ತು ೭೪ನೇ ತಿದ್ದುಪಡಿಯಲ್ಲಿ ನೋಡಬೇಕೆ? ಅಥವಾ ಅದರಿಂದಾಚೆ ನೋಡಬೇಕೆಂಬುದು ನಮ್ಮ ಮುಂದಿರುವ ಸವಾಲು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಈ ಕೆಳಗಿನ ನಿರ್ದಿಷ್ಟ ಉದ್ದೇಶಗಳನ್ನು ಒಳಗೊಂಡಿದೆ.

ದಲಿತರ ಭಾಗವಹಿಸುವಿಕೆ ಸಂಬಂಧಿಸಿದಂತೆ ನಡೆದಿರುವ ಅಧ್ಯಯನಗಳು ನಮಗೆ ಸಿಗುತ್ತವೆ. ಈ ಅಧ್ಯಯನದಲ್ಲಿ ದಲಿತ ಎನ್ನುವ ಪರಿಕಲ್ಪನೆಯನ್ನು ಸಾಮಾಜಿಕ ಭಾಗವಹಿಸುವಿಕೆ ಮತ್ತು ಅಭಿವೃದ್ಧಿ ದೃಷ್ಟಿಯಿಂದ ಬಳಸಲಾಗುತ್ತಿದೆ. ಹೀಗಾಗಿ ಜಾತಿಯ ನೆಲೆಯಲ್ಲಿ ಸಾಮಾಜಿಕ ಭಾಗವಹಿಸುವಿಕೆ ಹಕ್ಕನ್ನು ಕಸಿದುಕೊಳ್ಳುವ, ಅವಮಾನಿಸುವ ಸಂಸ್ಕೃತಿ ಪ್ರಕ್ರಿಯೆಗಳನ್ನು ಕುರಿತು ನಡೆಸಿರುವ ಅಧ್ಯಯನಗಳನ್ನು ಮೊದಲಿಗೆ ವಿಶ್ಲೇಷಿಸಲಾಗಿದೆ. ನಂತರದಲ್ಲಿ ದಲಿತರ ಸಾಮಾಜಿಕ ಭದ್ರತೆ, ಸಾಮಾಜಿಕ ಭಾಗವಹಿಸುವಿಕೆ ಮತ್ತು ರಾಜಕೀಯ ಭಾಗವಹಿಸುವಿಕೆಗೆ ಸಂಬಂಧಿಸಿದ ಅಧ್ಯಯನಗಳನ್ನು ವಿಶ್ಲೇಷಿಸಿಲಾಗಿದೆ.

ಜಾತಿ ಏಣಿಶ್ರೇಣಿ ಪದ್ಧತಿಯಾಗಿ, ಭಾವನೆಯಾಗಿ ಮತ್ತು ಸಾಮಾಜಿಕ ರಚನೆಯ ಶ್ರೇಣಿ ವ್ಯವಸ್ಥೆಯಾಗಿ ಹೆಚ್ಚು ಚರ್ಚೆಗೆ ಒಳಗಾಗಿರುವ ಬಗೆಗಿನ ಬರಹವೊಂದು ಇಲ್ಲಿದೆ. ಜಾತಿ ಪದ್ಧತಿಯು ಸೂಚಿಸುವ ಅಸ್ಪೃಶ್ಯತೆ ಮತ್ತು ಅದರ ಕಲುಷಿತ ನಿಯಮಗಳಿಗೆ ಶ್ರೇಣಿ ವ್ಯವಸ್ಥೆಯಲ್ಲಿ ಒಳಪಡುವವರ ಮೇಲೆ ಜಾತಿ ಪದ್ಧತಿಯು ಯಾವ ರೀತಿಯ ಪರಿಣಾಮ ಬೀರುತ್ತದೆ ಎಂಬುದನ್ನು ಬೆರಿಮಾನ್ ಹೀಗೆ ಗುರುತಿಸುತ್ತಾರೆ. ಮಾನವ ನೆಲೆಯಲ್ಲಿ ಜಾತಿಯ ಅನುಭವಗಳು ಅಧಿಕಾರ ಮತ್ತು ಶೋಷಣೆ, ಸ್ವಾತಂತ್ರ ಮತ್ತು ದಬ್ಬಾಳಿಕೆ, ಗೌರವ ಮತ್ತು ನಿಂದನೆ, ಸಮೃದ್ಧಿ ಮತ್ತು ಅಭಾವ, ಇನಾಮು ಮತ್ತು ಕಳೆದುಕೊಳ್ಳುವಿಕೆ, ಪ್ರಬಲ ಮತ್ತು ದುರ್ಬಲ, ಭದ್ರತೆ ಮತ್ತು ಆತಂಕ ಎಂಬ ಅರ್ಥದಲ್ಲಿದೆ (ರಾಮನ್, ೨೦೦೩). ಇಂತಹ ಪ್ರಾತಿನಿಧಿಕ ಜೀವಂತ ಅನುಭವಗಳ ವಿವರಣೆಯು ಪ್ರಮುಖವಾಗಿ ಜಾತಿಯು ಒಂದು ಶ್ರೇಣಿ ವ್ಯವಸ್ಥೆಯಾಗಿ ಜನರ ಸ್ಥಾನವು ವಿವಿಧ ಜಾತಿಗಳ ನಡುವಿನ ಸಂಬಂಧದ ಮೂಲಕ ಹೇಗೆ ವಿನ್ಯಾಸಗೊಳ್ಳುತ್ತದೆ ಎಂಬುದನ್ನು ಮಾತ್ರ ತಿಳಿಸದೆ, ಅವರ ಅನನ್ಯತೆ, ವ್ಯಕ್ತಿತನ ಮತ್ತು ಸ್ವ-ಮಾನ್ಯತೆಯನ್ನು ಕೂಡ ತಿಳಿಸುತ್ತದೆ.

ಈ ಲೇಖನವು ಜಾತಿಯಿಂದ ಆಗುವ ಅವಮಾನ, ದೌರ್ಜನ್ಯ ಮತ್ತು ಅಸಮಾನತೆ, ಪರಿಶಿಷ್ಟ ಸಮುದಾಯಕ್ಕೆ ಸೇರಿದ ವ್ಯಕ್ತಿಗಳ ಮತ್ತು ಗುಂಪುಗಳ ಜನರ ವ್ಯಕ್ತಿತ್ವದ ಮೇಲೆ ಮಾಡುವ ಪರಿಣಾಮಗಳು ಹಾಗೂ ಅವರು ಹೇಗೆ ಬದುಕುತ್ತಿದ್ದಾರೆ ಎಂಬುದನ್ನು ಕುರಿತು ಕೆಲವು ಸೂಚನೆಗಳನ್ನು ಸೂಚಿಸುತ್ತದೆ. ವ್ಯಕ್ತಿತನದ ಕಲ್ಪನೆಯಲ್ಲಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ರೂಢಿ ಸಂಪ್ರದಾಯದ ಮೂಲಕ ವ್ಯಕ್ತಿಗಳನ್ನು ಸಮಾಜ ಗುರುತಿಸುತ್ತದೆ. ಅಲ್ಲದೇ ಅವರ ಸಂಬಂಧಗಳು ನಿರ್ವಹಣೆಯಾಗುವ ಸಂದರ್ಭದ ಆಧಾರದಲ್ಲಿ ಅವರ ಸ್ಥಾನವನ್ನು ಸಮಾಜದಲ್ಲಿ ನಿರ್ಧರಿಸಲಾಗುತ್ತದೆ. ಇಲ್ಲಿ ಒಬ್ಬ ವ್ಯಕ್ತಿ ಅವನ/ಅವಳ ಸ್ವಂತ ಸಾಮರ್ಥ್ಯ ಅಥವಾ ಸ್ವಭಾವದ ಆಧಾರದ ಮೇಲೆ ವ್ಯಕ್ತಿಯಾಗುವುದಿಲ್ಲ. ಜನರು ತಮ್ಮ ಪಾಡಿಗೆ ಸರಳ ವ್ಯಕ್ತಿಗಳನ್ನು ಪರಿಗಣಿಸುವುದಿಲ್ಲ, ಅವರ ವ್ಯಕ್ತಿತನವು ಇತರರಿಂದ ರೂಪಿತವಾಗುತ್ತಿರುತ್ತದೆ (ಷಟ್ಟರ್, ೨೦೦೪). ವ್ಯಕ್ತಿತ್ವವನ್ನು ವ್ಯಾಖ್ಯಾನಿಸುವಲ್ಲಿ ಗುಂಪು, ಸಮುದಾಯ ಮತ್ತು ಸಮಾಜಗಳು ಮುಖ್ಯ ಪಾತ್ರವಹಿಸುತ್ತವೆ. ಅಧೀನ ವ್ಯಕ್ತಿತ್ವದ ಅರ್ಥ, ಒಂದು ವ್ಯಕ್ತಿಯ ನಿಯೋಗ ಮತ್ತು ಸ್ವಯಂ-ಮೌಲ್ಯವನ್ನು ಅಳಿಸಿ, ಅದರ ಜೊತೆ ವ್ಯಾಪಕವಾದ ಹಿಂಸೆ, ದೌರ್ಜನ್ಯ, ಅವಮಾನ ಮತ್ತು ತಿರಸ್ಕಾರಗಳನ್ನು ಅನುಭವಿಸುವುದು.

ಈ ದೃಷ್ಟಿಕೋನದಲ್ಲಿ ಯಾವ ರೀತಿ, ಯಾವ ಸಂದರ್ಭದಲ್ಲಿ, ಯಾವ ಆಧಾರದಿಂದ, ಯಾವ ಅನನ್ಯತೆಯಿಂದ, ಯಾವ ಬಗ್ಗೆಯ ವ್ಯಕ್ತಿತನದಿಂದ ದಲಿತರು ಜಾತಿ ಅವಮಾನ ಮತ್ತು ತಿರಸ್ಕಾರಗಳಿಗೆ ಒಳಪಡುತ್ತಿದಾರೆ ಎಂಬುದನ್ನು ಗುರುತಿಸುವುದು ಮುಖ್ಯ ಜೊತೆಗೆ ಜಾತಿ ತಿರಸ್ಕಾರಗಳಿಂದ ಕೂಡಿದ ವ್ಯಕ್ತಿತನದ ವಿಷಯವು ವೈಯಕ್ತಿಕತೆಗೆ ಬದ್ಧವಾಗಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ಸಾರ್ವಜನಿಕ ಕ್ಷೇತ್ರಗಳಲ್ಲಿ ಹೇಗೆ ಅಭಿವ್ಯಕ್ತವಾಗುತ್ತಿದೆ ಎಂಬುದನ್ನು ತಿಳಿಯುವುದು ಅತ್ಯಂತ ಪ್ರಮುಖವಾಗಿದೆ. ಇಂತಹ ಸಂದರ್ಭದಲ್ಲಿ ದಲಿತರು ಜಾತಿ ಕಾರಣದಿಂದಾಗಿ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಮಾನಸಿಕವಾಗಿ ಎದುರಿಸುತ್ತಿರುವ ನಿಷ್ಕ್ರಿಯ ಭಾವನೆಯನ್ನು ದೂರಮಾಡುವಲ್ಲಿ ಶೈಕ್ಷಣಿಕ ಸಂಸ್ಥೆಗಳ ಪಾತ್ರ ಮತ್ತು ಅವುಗಳ ಕೊಡುಗೆ ಬಹಳ ಮುಖ್ಯವಾಗಿವೆ. ಹೀಗಾಗಿ ಈ ಸವಾಲುಗಳನ್ನು ಆದಷ್ಟು ಬೇಗನೆ ಉದ್ದೇಶಿಸುವುದು ಅಗತ್ಯವಾಗಿದೆ.

ಜಾತಿಯಿಂದ ನಿರ್ಧರಿಸಲಾಗುವ ತಿರಸ್ಕಾರ ಮತ್ತು ಅವಮಾನವು ಸಾಮಾನ್ಯ ಸಾರ್ವಜನಿಕರಿಂದ ವ್ಯಾಪಕವಾಗಿ ಗುರುತಿಸಲಾಗದಿದ್ದರೂ ಅದು ದೃಢವಾಗಿ ಮುಂದುವರಿಯುತ್ತಿದೆ. ಅಸ್ಪೃಶ್ಯತೆ ಅದರ ಅನೂಚಾನವಾದ ಭೇದ-ಭಾವ ನಿಯಮಗಳನ್ನು ಮತ್ತು ಅದರ ಬೇರ್ಪಡಿಸುವಿಕೆಯ ರೂಪಗಳನ್ನು ದಲಿತ ಕನ್ನಡ ಲೇಖಕರಾದ ದೇವನೂರು ಮಹಾದೇವ(೨೦೦೧) ಅವರು "ವರ್ಣಬೇಧ ನೀತಿಯ ಮುತ್ತಾತ" ಎಂದು ಕರೆದಿದ್ದಾರೆ. ಇದು ಮುಂದಾಲೋಚನೆಯಿಂದ ಎಲ್ಲರಿಗೂ ಸಮಾನವಕಾಶ ನೀಡದಿರುವುದನ್ನು ಸಾಂಸ್ಥೀಕರಣಗೊಳಿಸಿರುವ ಮತ್ತು ಭದ್ರವಾಗಿ ಬೇರೂರಿರುವ ವ್ಯವಸ್ಥೆ ಎಂದು ಗುರುತಿಸಲಾಗಿದೆ. ಜಾತಿ ಒಂದು ವ್ಯವಸ್ಥೆಯಾಗಿ ಹೇಗೆ ತನ್ನ ಗುಪ್ತ ಸಂಕೇತ ಭಾಷೆಯ ಮೂಲಕ ವ್ಯವಸ್ಥಿತವಾಗಿ ತಳಜಾತಿ ಗುಂಪುಗಳ ಮೇಲೆ ವಂಚನೆಯ ಪರಿಣಾಮಗಳನ್ನು ಬೀರಿದೆ ಎಂಬುದರ

ಕಡೆಗೆ ಮಹಾದೇವ ಅವರು ಗಮನ ಸೆಳೆಯುತ್ತಾರೆ. ದೇಶ ಮತ್ತು ಸಂಸ್ಕೃತಿ ಹೆಸರಿನಲ್ಲಿ ಔಪಚಾರಿಕ ಮತ್ತು ಅನೌಪಚಾರಿಕ ರಚನೆಯಲ್ಲಿರುವ ರೂಪಗಳು ಅನೇಕ ಸಂದರ್ಭಗಳಲ್ಲಿ ವಿಸ್ತಾರವಾದ ರಚನೆಯ ಮೂಲಕ ಜಾತಿ ತಾರತಮ್ಯವು ತನ್ನ ಭೇದ-ಭಾವದ ನೀತಿಯನ್ನು ಅಭಿವ್ಯಕ್ತಪಡಿಸುತ್ತಿದೆ. ನರೇಂದ್ರ ಜಾಧವ್ ಅವರು ತಮ್ಮ ಆತ್ಮಚರಿತ್ರೆಯಲ್ಲಿ "ಜಾತಿ ತಾರತಮ್ಯಗಳ ರೂಪ ಬದಲಾದರೂ ಅದು ಹಲವು ಪ್ರಭೇದಗಳಲ್ಲಿ ಮುಂದುವರೆದಿದೆ ಎಂದು ವಿವರಿಸುತ್ತಾರೆ(೨೦೦೩). ತಾರತಮ್ಯಗಳು ವೈಯಕ್ತಿಕ ಮತ್ತು ಸಾಮೂಹಿಕ ನೆಲೆಗಳಲ್ಲಿ ಅನೇಕ ರೂಪಗಳಲ್ಲಿ ಜೀವಂತವಾಗಿ ಮುಂದುವರೆದಿದೆ."

ಇದನ್ನು ಅನೇಕ ಮಾನವ ಹಕ್ಕು ಗುಂಪುಗಳು ಮತ್ತು ವಿಚಾರಣಾ ಆಯೋಗಗಳು ದಾಖಲಿಸಿವೆ. ಉದಾಹರಣೆಗೆ ಹ್ಯೂಮನ್ ರೈಟ್ಸ್ ವಾಚ್ ತನ್ನ ಪುನರ್ ವಿಮರ್ಶೆಯಲ್ಲಿ ದಲಿತರ ಮೇಲಿನ ದೌರ್ಜನ್ಯ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯನ್ನು ದಾಖಲಿಸಿದೆ(೧೯೯೯). ಉದಾಹರಣೆಗೆ ದಲಿತ ನ್ಯಾಯಾಧೀಶರು ಕಾರ್ಯನಿರ್ವಹಿಸುತ್ತಿದ್ದ ನ್ಯಾಯಾಲಯದ ಕಚೇರಿ ಕೊಠಡಿಯನ್ನು ಸ್ವಚ್ಛಗೊಳಿಸುವ ಮಟ್ಟದವರೆಗೆ ಅಸ್ಪೃಶ್ಯತೆಯನ್ನು ಆಚರಿಸಿರುವ ಮತ್ತು ದಲಿತರನ್ನು ಉಪೇಕ್ಷೆ ಮಾಡಿ ತಿರಸ್ಕರಿಸಿರುವುದನ್ನು ಆಯೋಗವು ದಾಖಲಿಸಿದೆ. ಆಂಧ್ರಪ್ರದೇಶ ಮತ್ತು ತಮಿಳುನಾಡಿನ ಗ್ರಾಮಗಳಲ್ಲಿ ಎರಡು ಲೋಟ ಪದ್ಧತಿಯ ಮೂಲಕ ಅಸ್ಪೃಶ್ಯತೆಯನ್ನು ಪುನರ್ ಸ್ಥಾಪಿಸಲಾಗುತ್ತಿದೆ. ಅತ್ಯಂತ ದುರಂತ ಸಂಗತಿ ಏಂದರೆ, ೨೦೦೪ರ ಡಿಸೆಂಬರ್‌ನ ಸುನಾಮಿ ದುರ್ಘಟನೆಯ ನಂತರ ನಡೆದ ಪುನರ್ವಸತಿ ಕಾರ್ಯದಲ್ಲಿ ಜಾತಿ ಆಧಾರಿತ ತಾರತಮ್ಯಗಳು; ದಲಿತ ಪುರುಷರು, ಮಹಿಳೆಯರು ಮತ್ತು ಮಕ್ಕಳ ಮೇಲೆ ಪ್ರತಿನಿತ್ಯ ಆಕ್ರಮಕಾರಿ ದೌರ್ಜನ್ಯ ಮತ್ತು ಹಿಂಸೆಗಳು ನಡೆದಿರುವುದು ಜಾತಿಗಳ ನಡುವೆ ಇರುವ ತಾರತಮ್ಯತೆ ಹಾಗೂ ಕಂದರವನ್ನು ವರದಿಗಳು ತಿಳಿಸುತ್ತವೆ.

ಮೇಲಿನ ಉದಾಹರಣೆಗಳು ಪರಿಶಿಷ್ಟ ಜಾತಿಗೆ ಸೇರಿದ ಜನರ ಮೇಲೆ ನಿರಂತರವಾಗಿ ಸಾರ್ವಜನಿಕ ಸ್ಥಳಗಳಲ್ಲಿ ಮುಂದುವರಿದಿರುವ ಅವಮಾನಕ್ಕೆ ದಾಖಲೆಗಳಾಗಿವೆ. ಹೀಗಾಗಿ ಇದನ್ನು ಹೆಚ್ಚು ಸೂಕ್ಷ್ಮವಾಗಿ ಮತ್ತು ಸ್ಪಷ್ಟವಾಗಿ, ವ್ಯವಸ್ಥಿತ ರೂಪಗಳಲ್ಲಿ ಇರುವ ಅವಮಾನಗಳು ವ್ಯಕ್ತಿಗಳ ಸ್ವಯಂ-ಮೌಲ್ಯವನ್ನು ಅಳಿಸಿಹಾಕುವ ಮೂಲಕ, ಅದು ಹೇಗೆ ವ್ಯಕ್ತಿತ್ವವನ್ನು ನಿರ್ಧರಿಸುವ ವಿಷಯವಾಗಿದೆ ಎಂಬುದನ್ನು ಗುರುತಿಸುವುದು ಪ್ರಮುಖವಾಗುತ್ತದೆ. ಈ ಪ್ರಕ್ರಿಯೆಗಳು ಮತ್ತು ರೂಪಗಳ ಮೂಲಕ, ತಾರತಮ್ಯಗಳು ಮತ್ತು ಅಭದ್ರತೆಗಳು ಪರಿಶಿಷ್ಟ ಜಾತಿಗೆ ಸೇರಿದ ಮಕ್ಕಳು ಸಂಸ್ಕೃತೀಕರಣ ಪ್ರಕ್ರಿಯೆಯ ಮೂಲಕ ಸಾಮಾಜೀಕರಣದಿಂದ ಹೇಗೆ ನಿಷ್ಕ್ರಿಯಗೊಳ್ಳುತ್ತಿದ್ದಾರೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಸಾಮಾಜೀಕರಣ ಮತ್ತು ತಿರಸ್ಕಾರದ ಅಂಗೀಕಾರವು ನಿರ್ದಿಷ್ಟವಾಗಿ ದಲಿತರ ವ್ಯಕ್ತಿತ್ವವನ್ನು ಗುರುತಿಸುವಾಗ, ಜಾತಿ ಅವಮಾನಗಳ ಆಂತರೀಕರಣ ಎಂಬುದು ಸಾಮಾಜೀಕರಣದ ಪ್ರಕ್ರಿಯೆಗೆ ಬಹಳ ಮುಖ್ಯ ಮತ್ತು ಪ್ರಾಥಮಿಕ ಮೂಲ. ಜಾತಿ ವ್ಯವಸ್ಥೆಯ ಪ್ರಾಬಲ್ಯ, ಅದು ರೂಪಿಸಿರುವ

ಕಟ್ಟಳೆಗಳ ಮೂಲಕ ತಳಜಾತಿಗೆ ಸೇರಿದ ಜನರನ್ನು ಪ್ರತ್ಯೇಕಿಸಿ ತಳಮಟ್ಟದ ಸ್ಥಾನವನ್ನು ನೀಡುವುದು. ಆ ಮೂಲಕ ಅವರು ಸಾಮಾಜಿಕವಾಗಿ ತಳಮಟ್ಟದ ಸ್ಥಾನವನ್ನು ಅಂತರ್ಗತ ಮಾಡಿಕೊಳ್ಳುವಂತೆ ಮಾಡುವುದು. ಭೇದ-ಭಾವ ನೀತಿಯ ಪ್ರಕಾರವೆ ಇತರರೊಂದಿಗೆ ವ್ಯವಹರಿಸುವಾಗ ಮತ್ತು ಪ್ರತಿಕ್ರಿಯಿಸುವಾಗ ಏಣಿ-ಶ್ರೇಣಿ ಪದ್ಧತಿಯ ಚೌಕಟ್ಟಿಗೆ ಅಧೀನವಾಗಿರುವಂತೆ ಮಾಡುತ್ತಿದೆ. ಈ ಅಂಶವನ್ನು ಅನೇಕ ಆತ್ಮಚರಿತ್ರೆಗಳು ತಿಳಿಸುತ್ತವೆ. ಕಾಂಚ ಐಲಯ್ಯ, ಅವರು ತಮ್ಮ ಬಾಲ್ಯದಲ್ಲಿ ಮೇಲ್ಜಾತಿಯವರೊಂದಿಗೆ ಮಾತನಾಡುವಾಗ ಅವರಿಗೆ ಅಧೀನರಾಗಿ ಮತ್ತು ವಿಧೇಯರಾಗಿ ಭಯದಿಂದ ನಡುಗುತ್ತಾ ಮಾತನಾಡುತ್ತಿದ್ದೆ, ಅಲ್ಲದೆ ಎಲ್ಲವನ್ನು ಸಹಿಸಿಕೊಂಡು ನಿಷ್ಕ್ರಿಯ ವಿದ್ಯಾರ್ಥಿಯಾಗಿದ್ದೆ ಎಂದು ತಿಳಿಸುತ್ತಾರೆ. ಸಾಕ್ಷರತೆ ಮತ್ತು ಶಿಕ್ಷಣವನ್ನು ನಿರಾಕರಿಸುವುದಕ್ಕೆ ಸಂಬಂಧಿಸಿದಂತೆ, ಅವರು ತಿಳಿಸುವುದೇನೆಂದರೆ-'ಯಾವುದೇ ಮಹಿಳೆ ಮತ್ತು ಪುರುಷರ ಸಂಪೂರ್ಣ ಮಾನವೀಯ ಕಲಿಕೆಯು ಆ ವ್ಯಕ್ತಿಗೆ ಬಾಲ್ಯದ ಕಲಿಕೆಗಳಿಂದ ರೂಪಿತವಾಗುತ್ತದೆ. ಹಾಗಾಗಿ ಅದು ಬಹಳ ಮುಖ್ಯ. ಆದರೆ ನಮ್ಮ ಬಾಲ್ಯದ ದಿನಗಳು ನಿರಂತರವಾದ ಅವಮಾನದ ಬೈಗುಳ ಮತ್ತು ನಿಂದನೆ, ಮೌನ ಮತ್ತು ನಿಬ್ಬೆರಗಾಗಿಸುವ ಮೌನಗಳಿಂದ ಅಂಗಹೀನರನ್ನಾಗಿಸಿದೆ' (೧೯೯೬). ಅದೇ ರೀತಿಯಾಗಿ ತುಂಬಾಡಿ ರಾಮಯ್ಯ(೧೯೯೯)ಅವರು ತನ್ನ ಶಾಲಾ ದಿನಗಳಲ್ಲಿ ಮೇಲ್ಜಾತಿಯ ಹುಡುಗರ ಮನೆ ಕೆಲಸ ಮಾಡಿಕೊಟ್ಟು ಶಾಲೆಯಲ್ಲಿ ನೀಡುತ್ತಿದ್ದ ಊಟದ ಪಾಲನ್ನು ಪಡೆದು, ಅದನ್ನು ತಮ್ಮ ಮನೆಗೆ ತೆಗೆದುಕೊಂಡು ಹೋಗಿ ಕುಟುಂಬದ ಹಸಿವಿನ ಬವಣೆಯನ್ನು ನೀಗಿಸುತ್ತಿದ್ದೆ ಎಂದು ವಿವರಿಸುತ್ತಾರೆ. ವೀರಮ್ಮ (ವೀರಮ್ಮ, ರಾಸಿನ್ ಮತ್ತು ರಾಸಿನ್: ೧೯೯೭), ಅವರ ಮೌಖಿಕ ಕಥನದಲ್ಲಿ ಭೂಮಾಲೀಕರು ನಮ್ಮ ಗುರುಗಳು ಮತ್ತು ಅನ್ನದಾತರೆಂದು ಪರಿಗಣಿಸಿದರಿಂದ, ತನ್ನ ಮಗನನ್ನು ಭೂಮಾಲೀಕರ ನಿರಂಕುಶ ನಡವಳಿಕೆಯಿಂದ ಹೇಗೆ ತಡೆಯುತ್ತಿದ್ದೆ ಎಂಬುದನ್ನು ವಿವರಿಸುತ್ತಾರೆ. ಇಂತಹ ಜಾತಿ ಆಧಾರಿತ ವಿಧೇಯತೆಯ ಸೇವೆಗಳು ಸಾಮಾನ್ಯವಾಗಿ ಭಾರತೀಯ ಸಾಮಾಜೀಕರಣದಲ್ಲಿ ಜಾತಿ ವ್ಯವಸ್ಥೆಯನ್ನು ಪುನರ್‌ಸ್ಥಾಪಿಸಿ ಬಲಪಡಿಸುತ್ತಿದೆ. ಅಲ್ಲದೆ, ಸಾಮಾಜಿಕ ರಚನೆಯಲ್ಲಿನ ಏಣಿ-ಶ್ರೇಣಿಯ ರೇಖಾತ್ಮಕ ವಿನ್ಯಾಸದಲ್ಲಿ ಕೆಲವು ಗುಂಪಿನ ಆಸಕ್ತಿಗಳು, ಅಧಿಕಾರ ರಚನೆಯ ಅಂಶಗಳನ್ನು ಎತ್ತಿ ಹಿಡಿದು ಅವು ಬಹುರೂಪಿ ನೆಲೆಯಲ್ಲಿ ಪುನರ್‌ಸ್ಥಾಪನೆಗೊಳ್ಳುತ್ತಿರುತ್ತವೆ (ಸರಸ್ವತಿ, ೧೯೯೯). ಇದು ಸ್ವಾಭಾವಿಕ ಎಂದು ಅಂತರ್ಗತವಾಗುವಂತೆ ಮಾಡುವುದು, ಸಾಮಾಜಿಕ ಏಣಿ ಶ್ರೇಣಿಯಲ್ಲಿ ಅಪಮಾನ ಮತ್ತು ಆಶ್ರಿತ ಎನ್ನುವ ಅಂಶಗಳಿಗೆ ಪ್ರಶ್ನಿಸಲಾಗದ ಶಾಸನಬದ್ಧತೆಯನ್ನು ಒದಗಿಸಿದೆ. ಉದಾಹರಣೆಗೆ ಉದ್ಯೋಗ ನೀಡುವ ಮೇಲ್ಜಾತಿಯವರಿಂದ ಹಳಸಿದ ಆಹಾರ ಒಪ್ಪಿಕೊಂಡಿದ್ದಕ್ಕೆ ಬಾಮ ಅವರ ಅಜ್ಜಿ ನೀಡುವ ಸಮರ್ಥನೆಯನ್ನು ನಾವು ನೋಡಬಹುದು– "ನಮಗೆ ಅನ್ನ ನೀಡಿದ ಇವರು ಮಹಾರಾಜರು, ಇವರಿಲ್ಲದೆ ನಾವು ಹೇಗೆ ಬದುಕುವುದು? ಅವರು ತಲೆಮಾರಿನಿಂದ ತಲೆಮಾರಿಗೆ ಮೇಲ್ಜಾತಿಯ ಸ್ವರೂಪವನ್ನು, ನಾವು ತಳಜಾತಿಯ ಸ್ವರೂಪವನ್ನು ಪಡೆದಿಲ್ಲವೇ? ಇದನ್ನು ನಾವು ಬದಲಾಯಿಸಬಹುದೆ?"

ಬಾಲ್ಯದ ದಿನಗಳಲ್ಲಿ ಗುಲಾಮ ಎಂಬ ಗುರುತಿನ ಅವಮಾನವನ್ನು ಹೆಚ್ಚಾಗಿ ಅನುಭವಿಸಿದರು, ಅನೇಕ ದಲಿತರನ್ನು ಅವರ ಜೀವಮಾನದ ಉದ್ದಕ್ಕೂ ಗುರುತಿಸುವುದು ಮುಂದುವರಿದಿದೆ. ಅಸ್ಪೃಶ್ಯ ಮಕ್ಕಳ ಅನುಭವಗಳ ಬಗ್ಗೆ ಥೋರಟ್ ಅವರ ಬರವಣಿಗೆ ನಮಗೆ ಅನೇಕ ವಿಷಯಗಳನ್ನು ಹೀಗೆ ವಿಷದೀಕರಿಸುತ್ತದೆ. "ಆರಂಭದಲ್ಲಿ ದಲಿತನ ಮಗುವನ್ನು ಒಬ್ಬ ಅಸ್ಪೃಶ್ಯ ತಂದೆಯ ಮಗು ಎಂದು ಗುರುತಿಸಿದರೂ ಕೂಡ, ಅದು ಅವಳ/ಅವನ ಯೋಚನಾ ಪ್ರಕ್ರಿಯೆಯ ಮೇಲೆ ನೇರವಾದ ಪರಿಣಾಮವನ್ನು ಬೀರುವುದಿಲ್ಲ. ಆದರೆ ಅವರು ಸ್ವತಂತ್ರವಾಗಿ ನಡೆದಾಡಲು ಪ್ರಾರಂಭಿಸಿದಾಗ, ಅವರು ಆಟ ಆಡುವಂತಾದಾಗ, ಇತರರ ಜೊತೆ ಬೆರೆಯುವಂತಾದಾಗ ಮತ್ತು ಯೋಚನೆ ಮಾಡಲು ಪ್ರಾರಂಭವಾದಾಗ ಅವರನ್ನು ತೀಕ್ಷ್ಣವಾದ ಜಾತಿ ಅವಮಾನದ ಅನುಭವದಿಂದ ಅವರ ವ್ಯಕ್ತಿತನವನ್ನು ರೂಪಿಸಲಾಗುತ್ತಿರುತ್ತದೆ. ಅಲ್ಲದೆ ಇದು ಉಪನಾಮಗಳಲ್ಲಿ ಮತ್ತು ಪರೋಕ್ಷವಾಗಿ ಅವರ ಯೋಚನಾ ಪ್ರಕ್ರಿಯೆಯ ಮೇಲೆ ತನ್ನದೇ ಮುದ್ರೆಯನ್ನು ಮತ್ತು ಪರಿಣಾಮವನ್ನು ಬೀರುತ್ತದೆ" (ರಾಮನ್:೨೦೦೩ರಲ್ಲಿ ಉಲ್ಲೇಖವಾಗಿದೆ). ಸೇವಕ, ಮಾಲೀಕ ಮತ್ತು ಗುಲಾಮಗಿರಿ ಹೀಗೆ ಇನ್ನು ಅನೇಕ ವಿಷಯಗಳು ಒಂದಕ್ಕೊಂದು ಸೇರಿಕೊಳ್ಳುವ ಜೊತೆಗೆ, ದಲಿತರು ಜೀವನಕ್ಕಾಗಿ ಸ್ವಂತ ಸಂಪನ್ಮೂಲಗಳನ್ನು ಹೊಂದಿಲ್ಲದೆ ಇರುವುದು, ಅವರು ಆರ್ಥಿಕವಾಗಿ ಮೇಲ್ಜಾತಿಯವರನ್ನು ಅವಲಂಬಿಸಿದ್ದು, ಬಹಳ ದೀರ್ಘಾವಧಿಯಲ್ಲಿ ಅಧೀನತೆ ಮತ್ತು ವಿಧೇಯತೆಗಳು ಅಸ್ತಿತ್ವದ ತಂತ್ರಗಳಾಗಿಯೇ ಅಂತರ್ಗತವಾಗಿ ಅಸಮಾನ ಸಾಮಾಜಿಕ ರಚನೆಯನ್ನು ಒಪ್ಪಿಕೊಳ್ಳುವಂತೆ ಮಾಡಿದೆ. ಇಂತಹ ಸಾಮಾಜೀಕರಣವು ಅಂತಸ್ಥವಾದ ಜಾತಿ ರೂಢಿ ನಿಯಮಗಳು ವಾಸ್ತವವಾಗಿ ಪ್ರಶ್ನಿಸಲಾರದಂತಹ ಶೋಷಣೆ, ತಾರತಮ್ಯದ ಅಧಿಪತ್ಯಗಳು ವೈಯಕ್ತಿಕ ಹಾಗೂ ಸಾಮೂಹಿಕ ನೆಲೆಯಲ್ಲಿ ಬೆಳವಣಿಗೆಯಾಗಲು ಕಾರಣವಾಗಿದೆ ಎನ್ನುವುದನ್ನು ಸಾಮಾಜಿಕ ಆಕಾರರೇಖೆ ಎನ್ನುವ ಪುಸ್ತಕದಲ್ಲಿ ಇರುವ 'ಜಾತಿ ಅವಮಾನ ಮತ್ತು ವ್ಯಕ್ತಿತ್ವ' ಎನ್ನುವ ಲೇಖನವು ನಮ್ಮ ಮುಂದೆ ಬಿಚ್ಚಿಡುತ್ತದೆ(ಪ್ರಶಾಂತ್ ಎಚ್.ಡಿ. ೨೦೧೫).

ಜಾತಿ ಸಾರ್ವಜನಿಕ ಕ್ಷೇತ್ರದಲ್ಲಿ ಯಾವ ರೂಪದಲ್ಲಿ ಇರುತ್ತದೆ ಎನ್ನುವುದನ್ನು ಕುರಿತು ನಡೆದಿರುವ ಅಧ್ಯಯನಗಳನ್ನು ಮುಂದೆ ವಿಶ್ಲೇಷಿಸಿಲಾಗಿದೆ: ಜಾತಿ ಆಧಾರಿತ ಒಗ್ಗಟ್ಟನ್ನು ಆಧುನಿಕತೆಯಾಗಿ ಅಧ್ಯಯನ ಮಾಡಿದರೆ ಕೆಲವು ಸಮಸ್ಯೆಗಳು ಎದುರಾಗುತ್ತವೆ. ಇಂತಹ ಚಲನೆಗಳ ಫಲಿತಾಂಶ ಮತ್ತು ಪರಿಣಾಮಗಳಿಂದ ಉಂಟಾಗಿರುವ ಸಮಸ್ಯೆಗಳನ್ನು ನೋಡಬೇಕಾಗಿದೆ. ಬಹುತೇಕ ಸಂದರ್ಭದಲ್ಲಿ ಪರಿಶಿಷ್ಟ ಜಾತಿಯ ಸದಸ್ಯರನ್ನು ರಾಜಕೀಯ ವ್ಯವಸ್ಥೆ ತನ್ನ ಗಿರಾಕಿಗಳನ್ನಾಗಿ ಉಳಿಸಿಕೊಂಡಿದೆ. ಪರಿಶಿಷ್ಟರ ಕ್ಷೇತ್ರದ ಅವಶ್ಯಕತೆಗಳನ್ನು ಗಮನಿಸಿ ಪೂರೈಸದೆ, ಆರ್ಥಿಕ ವ್ಯವಸ್ಥೆಯು ಪರಿಶಿಷ್ಟ ಸಮುದಾಯಗಳ ಸದಸ್ಯರು ಹೊಂದಿದ ವಿಶಾಲ ಜ್ಞಾನಭಂಡಾರ ಮತ್ತು ಕುಶಲತೆಯನ್ನು ನಾಶಪಡಿಸಿದೆ. ಆ ಮೂಲಕ ಬಹುತೇಕ ತಳಜಾತಿಯ ಸದಸ್ಯರು ಅದರಲ್ಲಿಯೂ ವಿಶೇಷವಾಗಿ ಬಡ ಕೂಲಿಕಾರರು ಈ ಆರ್ಥಿಕ ವ್ಯವಸ್ಥೆಯಲ್ಲಿ ಬದುಕಲು ಸಾಧ್ಯವಾಗದೇ ಇವರಲ್ಲಿ ಅನೇಕ ಗೊಂದಲಗಳನ್ನು ಹುಟ್ಟುಹಾಕಿದೆ. ಈ ಪ್ರಕ್ರಿಯೆಯು ಇವರನ್ನು ಕೇವಲ ಸ್ಥಳಾಂತರಕ್ಕೆ ಮಾತ್ರ ಒಳಪಡಿಸಿದೆ. ಈ

ಪ್ರಕ್ರಿಯೆಯಿಂದ ಅನೇಕ ಪರಿಶಿಷ್ಟ ಸಮುದಾಯಗಳು ನಾಮನಿರ್ದೇಶಕ ಸಂಸ್ಕೃತಿಯಿಂದ ತಮ್ಮನ್ನು ತಾವು ತಮ್ಮ ಜಾತಿ ಅಥವಾ ಕಸುಬುಗಳ ಸಂಬಂಧಿತ ಹೆಸರುಗಳಿಗೆ ಬದಲಾಗಿ, ರಾಜ್ಯ ವ್ಯವಸ್ಥೆಯ ಅಜೆಂಡಾಗಳು ಮತ್ತು ಅನನ್ಯತೆಯಿಂದ "ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ"ಕ್ಕೆ ಸೇರಿದ ಗುಂಪುಗಳು ಈ ಮೇಲಿನ ಸೂಕ್ತ ಶಬ್ದಗಳನ್ನು ತಮ್ಮದಾಗಿಸಿಕೊಂಡು ಆ ಮೂಲಕ ಗುರುತಿಸಿ ಕೊಳ್ಳುತಿರುವುದನ್ನು ನಾವು ಗಮನಿಸಬಹುದಾಗಿದೆ. ಈ ಪ್ರಕ್ರಿಯೆಗಳು ಅಧಿಕಾರಿಶಾಹಿ ವರ್ಗೀಕರಣ ಮತ್ತು ಶ್ರೇಣೀಕರಣದಿಂದ ಸಾಮಾಜಿಕ ವರ್ಗೀಕರಣವಾಗಿದೆ (ಜಾಪ್ರೆಲಾಟ್, ೨೦೦೩). ಅನನ್ಯತೆಯ ಸಮಸ್ಯೆಗಳು ಕ್ರೋಢೀಕರಣಗೊಂಡು ನಮಗೆ ಸೇರಿದವು ಎಂಬ ಮೂಲರೂಪದ ಭಾವನೆಯ ಸಂಪರ್ಕ ಕೊಂಡಿ ಮತ್ತು ಅದರ ಸಂಬಂಧ ಕಳೆದುಹೋಗುತ್ತಿದೆ. ಇದರ ಜೊತೆಗೆ 'ದಲಿತ' ಎಂಬ ಪರಿಕಲ್ಪನೆ ಮತ್ತು ಅದರ ಅನನ್ಯತೆಯನ್ನು ಹೋರಾಟಗಾರರಿಂದ ಉತ್ತೇಜಿಸಲ್ಪಟ್ಟಿದ್ದರೂ ಈ ಪರಿಕಲ್ಪನೆ ಮತ್ತು ಅದಕ್ಕೆ ಸೇರಿದ ಅನನ್ಯತೆಗಳು ಬಹಳ ವ್ಯಾಪಕವಾಗಿ ಸ್ವೀಕಾರಗೊಳ್ಳಬೇಕಾಗಿದೆ.

ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಯ ಮಾರ್ಗವಾದ ಸಂಸ್ಕೃತೀಕರಣದ ಪ್ರಾಬಲ್ಯವನ್ನು ಆಧುನಿಕತೆಯ ಅಜೆಂಡಗಳ ವಿಫಲತೆಯ ಜೊತೆ ಸಮೀಕರಿಸಿಯೂ ನೋಡಬಹುದು. ಇದು ಜಾತಿ ಆಧಾರಿತವಲ್ಲದ ಪರ್ಯಾಯ ಅನನ್ಯತೆ ರೂಪಿತವಾಗುವುದಕ್ಕೆ ಅವಕಾಶ ನೀಡದಿರುವುದಕ್ಕೆ ಸಂಪರ್ಕ ಕಲ್ಪಿಸುತ್ತದೆ. ಈ ಕುರಿತು ವಿವರಣೆಯನ್ನು ಪಾಂಡಿಯನ್ ಅವರು ಸೂಚಿಸುತ್ತಾರೆ. ತಮಿಳುನಾಡಿನ ಬಡವರಲ್ಲಿ ಕಡುಬಡವರು ಮತ್ತು ದಲಿತ ಜಾತಿ ಗುಂಪುಗಳು ಅತ್ಯಂತ ಅಂಚಿನಲ್ಲಿ ಇದ್ದಾರೆ ಎಂಬುದನ್ನು ಸೂಚಿಸುತ್ತಾ ಹೀಗೆ ಹೇಳುತ್ತಾರೆ. "ಜಾತಿಯ ಅನನ್ಯತೆಯು ಅವರ ವಿಚಾರ ವ್ಯಾಪ್ತಿಯಲ್ಲಿ ಅಂಚಿನಾಚೆಗಿನ(ಮಾರ್ಜಿನ್ಯಾಲಿಟಿ) ಪ್ರತಿಫಲಗಳನ್ನು ನೀಡುತ್ತದೆ" ಪಾಂಡಿಯನ್(೨೦೦೫). ನೈಜ ಆಧುನಿಕತೆಯ ವಿಫಲತೆಯಿಂದ ನಿರ್ಮಾಣವಾದ ನಿರ್ವಾತದಲ್ಲಿ (ಸಮಾನ ಅವಕಾಶ ಮತ್ತು ಹಕ್ಕಿನ ಭಾವನೆ, ವೈಯಕ್ತಿಕ ಹಕ್ಕು ಮತ್ತು ಪ್ರಜಾಪ್ರಭುತ್ವ) ಪ್ರಜಾಪ್ರಭುತ್ವದ ರಚನೆಯ ಪ್ರಕ್ರಿಯೆಗೆ ಒಳಪಟ್ಟಿದರಿಂದ, ಅದರ ಬೇರುಗಳು ಮತ್ತು ವಿಷಯಗಳು ಜಾತಿ ಸಂಘಟನೆಗಳ ಗುಣಲಕ್ಷಣಗಳಿಂದ ಪ್ರೇರಿತವಾಗಿತ್ತು. ಇದು ಜಾತಿಪದ್ಧತಿಯ ಗುಣಲಕ್ಷಣಗಳನ್ನು ಪುನರುತ್ಪಾದಿಸಲು ಪ್ರಾರಂಭಿಸಿತ್ತು. ಇದಕ್ಕೆ ಸಾಕ್ಷಿ ಎಂದರೆ, ಕೃಷಿ ಆಧಾರಿತ ಶ್ರೇಣೀಕೃತ ಸಮಾಜದಲ್ಲಿನ ಆಶ್ರಯದಾತ–ಆಶ್ರಿತ ಸಂಬಂಧವನ್ನು ರಾಜಕೀಯವಾಗಿಸಿತ್ತು. ಬಹುತೇಕ ಪ್ರಕರಣಗಳಲ್ಲಿ ಪರಿಶಿಷ್ಟ ಸಮುದಾಯಗಳ ಗುಂಪಿನ ಸದಸ್ಯರು ರಾಜಕೀಯ ಸ್ಥಾನಗಳು ಕೇವಲ ಮೇಲ್ಜಾತಿಯ ನಾಯಕರ ಆಶ್ರಯದಲ್ಲಿ ರೂಪಿಸಿ ಪಳಗಿಸಿದ ರೀತಿಯಲ್ಲಿ ರಾಜಕೀಯ ಸ್ಥಾನವನ್ನು ಪಡೆದಿದ್ದಾರೆ(ಕವಿರಾಜ್:೧೯೯೮). ಜಾತಿ ಆಧಾರಿತ ಚಲನೆಗಳು ಪ್ರಾಬಲ್ಯವನ್ನು ಪಡೆದುಕೊಂಡಿರುವುದರಿಂದ ಅದರ ಪರಿಣಾಮಗಳು ಅನೇಕ ಪ್ರಶ್ನೆಗಳನ್ನು ಮುಂದಿಡುತ್ತವೆ. ಜಾತಿ ಒಂದು ಪದ್ಧತಿಯಾಗಿ ಪುನರ್ ಉತ್ಪತ್ತಿ ಆಗುತ್ತಿದ್ದು ಜಾತಿ ಆಧಾರಿತ ಅನನ್ಯತೆಗಳು ಮತ್ತೆ ಮತ್ತೆ ದೃಢೀಕೃತವಾಗುತ್ತಿದ್ದು, ತಳಜಾತಿ ಗುಂಪುಗಳ ಸದಸ್ಯರ ವ್ಯಕ್ತಿತನವನ್ನು ಗುರುತಿಸಲು ಇದು ಆಧಾರವಾಗಿದೆ.

ದಲಿತ ಯುವಕರನ್ನು ಮತ್ತು ಅವರ ಅನನ್ಯತೆಯನ್ನು ಗುರುತಿಸುವ ಪ್ರಕ್ರಿಯೆಯು ಮೇಲ್ಜಾತಿಯ ಯುವಕರ ಅನನ್ಯತೆಯನ್ನು ಗುರುತಿಸುವುದಕ್ಕಿಂತ ಭಿನ್ನ ಸ್ವಭಾವದಿಂದ ಹಾಗೂ ಗೊಂದಲಗಳಿಂದ ಉಂಟಾಗುವ ವಿಸ್ಮೃತಿ ನಾಶಗಳಿಂದ ಸಂಭವಿಸುವ ಪ್ರಕ್ರಿಯೆಯಂತೆ ಇರುತ್ತದೆ. ನಗರೀಕರಣ ಸೌಲಭ್ಯ-ಸವಲತ್ತುಗಳಿಂದ ದೊರೆತ ತಳಹದಿ, ಪಾಶ್ಚಿಮಾತ್ಯ ಆಧುನಿಕತೆಯ ಜೊತೆಗೆ ಸ್ವಯಂ ಒಪ್ಪಂದ ಮತ್ತು ಜಾಗತೀಕರಣದಿಂದ ಮೇಲ್ಜಾತಿಯ ಯುವಕರು ತಮ್ಮ ಜಾತಿಯ ಸಂಸ್ಕೃತಿ ಮತ್ತು ಅನನ್ಯತೆಗಳು 'ಶ್ರೇಷ್ಠ' ಕುರುಹುಗಳು ಎಂದು, ಪ್ರತಿಷ್ಠೆಯಿಂದ ಪುನರ್ ದೃಢೀಕರಿಸಿ ಪ್ರತಿಷ್ಠಾಪಿಸುತ್ತಿದ್ದಾರೆ. ಇದು ಹಿಂದೂ ರಾಷ್ಟ್ರೀಯತೆ ಮತ್ತು ಅದಕ್ಕೆ ಸಂಬಂಧಿಸಿದ ಮೂಲಭೂತವಾದ ಬೆಳವಣಿಗೆಗೆ ಪೂರಕವಾಗುವ ಜೊತೆಗೆ, ತಳಜಾತಿ, ಸಂಸ್ಕೃತೀಕರಣಕ್ಕೆ ಒಳಗಾಗದ ದಲಿತರನ್ನು ಯಾವ ಮತ್ತು ಯಾರ ಅನನ್ಯತೆಯಲ್ಲಿ ಸಂಯೋಜಿಸಬೇಕು ಎಂಬುದನ್ನು ಪುನರ್‌ಚಿಂತಿಸಬೇಕಾದ ಅಗತ್ಯವಿದೆ. ಸಾಲು ಸಾಲಾಗಿ ಪುನರ್ ಹಿಂದುತ್ವೀಕರಣ, ಸಂಪ್ರದಾಯ ಪದ್ಧತಿಗಳು ಹಾಗೂ ಆಚರಣೆಗಳ ಸಮಗ್ರೀಕರಣ ಮತ್ತು ಸಮನ್ವಯ ಮಾಡುವ ದಿಕ್ಕಿನಲ್ಲಿ ಸಂಘ ಪರಿವಾರವು ಉತ್ತರ ಭಾರತದಲ್ಲಿ ದಲಿತ ಯುವಕರು ದೇಶಿಯತೆಯ ಭೂತರೂಪದಲ್ಲಿ ದಲಿತರಾಗಿ ಉದಯವಾಗುತ್ತಿರುವುದು ದಲಿತರ ಅನನ್ಯತೆಯನ್ನು ಸ್ಥಗಿತಗೊಳಿಸಿದೆ(ಷಾ, ೨೦೦೪).

ಇಂತಹ ಬೇರೆ ಬೇರೆ ಅನುಭವಗಳು ರಾಷ್ಟ್ರದ ಸಾರ್ವಜನಿಕ ಸಂಸ್ಥೆಗಳಲ್ಲಿ ಹೆಚ್ಚಾಗುತ್ತಿದ್ದು, ದಲಿತರು ವಂಶಪರಂಪರೆಯಾಗಿ ಅಸಮರ್ಥರು ಮತ್ತು ಮಿತವಾದ ವ್ಯಕ್ತಿತ್ವ ಹೊಂದಿದವರು ಎಂಬ ಜನಪ್ರಿಯ ಸಾರ್ವಜನಿಕ ಅಭಿಪ್ರಾಯ ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ. ಉದಾಹರಣೆಗೆ-ಜನಪ್ರಿಯ ಚಲನಚಿತ್ರ 'ಲಗಾನ್'ನಲ್ಲಿ ಗ್ರಾಮದ ಕ್ರಿಕೆಟ್ ತಂಡದಲ್ಲಿ ಕೊನೆಯ ಸದಸ್ಯ ಅಂಗವಿಕಲ ಕಚ್ರ, ಈ ಹೆಸರಿನ ಅರ್ಥ 'ಅಸಹ್ಯ'/ 'ಕೆಲಸಕ್ಕೆ ಬಾರದು'.ಅವನಿಗೆ ತಂಡ ಸೇರಲು ಅವಕಾಶ ನೀಡುವ ಬದಲು ಅವನ್ನು ತಂಡಕ್ಕೆ ಸೇರುವಂತೆ ಆದೇಶ ಮಾಡಲಾಗುತ್ತದೆ. ಇಂತಹ ಪ್ರತಿರೂಪಗಳ ಪ್ರಾತಿನಿಧಿಕಗಳು ಕೆಳಸ್ಥಾನವನ್ನು ಅನಗತ್ಯವಾಗಿ ಪುನಃ ಜಾರಿಗೊಳಿಸುತ್ತಿವೆ. ಅಲ್ಲದೇ ಇವು ಯಾವುದೇ ಬಗೆಯ ಸ್ವಾತಂತ್ರ್ಯ, ಇಚ್ಛಾಶಕ್ತಿ ಅನುಗುಣವಾದ ಚಿಂತನೆಯನ್ನು ಹೊಂದುವಲ್ಲಿ ಅಸಮರ್ಥವಾಗಿವೆ (ಆನಂದ್, ೨೦೦೨).

ಇಂತಹ ನಕಾರಾತ್ಮಕ ಸಾರ್ವಜನಿಕ ಪ್ರತಿರೂಪಗಳು ಮತ್ತು ಪರಿಶಿಷ್ಟ ಸಮುದಾಯಗಳ ಸದಸ್ಯರಿಗೆ ದೊರೆಯದ ಬೆಂಬಲ, ಮೇಲುಜಾತಿ ಪ್ರತಿಷ್ಠಿತರಿಂದ ಪ್ರತ್ಯೇಕತೆ- ಈ ಎಲ್ಲಾ ಅಂಶಗಳು ಬೆರೆತುಕೊಂಡು ಪರಿಶಿಷ್ಟ ಸಮುದಾಯಗಳ ಸದಸ್ಯರನ್ನು ಕೆಳದರ್ಜೆಯಲ್ಲಿ ಮುಂದುವರಿಯುವಂತೆ ಮಾಡಿವೆ. ಮಾರ್ಕ್ ಗಲಂಟರ್(೧೯೮೪) ಮತ್ತು ದೇವನೂರು ಮಹಾದೇವ (೨೦೦೧) ಇವರು ಹೀಗೆ ಟಿಪ್ಪಣಿ ಮಾಡಿದ್ದಾರೆ- "ಆಫ್ರಿಕಾನ್ ಅಮೇರಿಕನ್ನರು ಸಮಾನತೆ ಪಡೆಯಲು ಅಥವಾ ಅವರ ಏಳಿಗೆಗಾಗಿ ರಾಷ್ಟ್ರೀಯ ಸಂಘಟನೆಗಳನ್ನು ಸ್ಥಾಪಿಸಿ, ನಾಗರಿಕ ಯುದ್ಧ ಮತ್ತು ನಾಗರಿಕ ಸ್ವಾತಂತ್ರ್ಯ ಚಳುವಳಿಗಳನ್ನು ಅಮೇರಿಕದ ಬಿಳಿಯರು ಹೋರಾಟ ಮಾಡಿರುವ ರೀತಿಯ ಬೆಂಬಲ, ಭಾರತದ ಸಮಾಜದಲ್ಲಿ ಮೇಲ್ಜಾತಿಯ ಸದಸ್ಯರಿಂದ ಸಿಗುವುದಿಲ್ಲ" ವಾಸ್ತವವಾಗಿ, ವಿಸ್ತಾರವಾಗಿರುವ ಜಾತಿ

ಪ್ರಜ್ಞೆ ಹಾಗೂ ಅದಕ್ಕಿಂತಲೂ ವಿಸ್ತಾರವಾಗಿರುವ ಕಳೆದುಹೋಗುವ ಭಾವನೆ ಇನ್ನು ಮುಂತಾದ ಅಂಶಗಳು ಸೇರಿಕೊಂಡು ಮೇಲ್ಜಾತಿಯ ಸದಸ್ಯರು ತಮ್ಮಷ್ಟಕ್ಕೆ ತಾವೇ ಬಲಿಷ್ಠವಾಗಲು ತಮ್ಮದೇ ಕೊಡುಗೆ ಸಲ್ಲಿಸಿವೆ. ಮೇಲ್ದರ್ಜೆಗೆ ಸೇರಿದ ಜಾತಿ, ಗುಂಪುಗಳು ಅವರ ಚಿಂತನಾ ಕ್ರಮವು ವೈವಿಧ್ಯಮಯವಾದ ಸಾಮರ್ಥ್ಯ ಮತ್ತು ಹಕ್ಕುಗಳು ಜಾತಿಯ ಸಂಸ್ಕೃತಿಯ ಸಮಗ್ರ ಭಾಗವಾಗಿ ಉಳಿಯುವಂತೆ ಮಾಡಿದೆ. ಜಾತಿ ಆಧಾರಿತ ಮೀಸಲಾತಿ ಸೌಲಭ್ಯದ ಸಮಗ್ರತೆ ಮತ್ತು ವಿಸ್ತಾರವು ಕೆಳಮಟ್ಟದ ಜಾತಿ ಗುಂಪುಗಳಲ್ಲಿ ಒಂದು ಬಗೆಯ ಪರಾನುಭೂತಿ ಉಂಟುಮಾಡಿದೆ. ಇದು ಸಾರ್ವಜನಿಕ ಕ್ಷೇತ್ರದ ಬಗ್ಗೆ ಅವರಲ್ಲಿ ಅಸಮಾಧಾನ ಮುಂದುವರಿಯುವಂತೆ ಮಾಡಿದೆ.

ಶೈಕ್ಷಣಿಕ ಸಂಸ್ಥೆಗಳಲ್ಲಿ ಜಾತಿ ಆಚರಣೆಯ ವಿಕಾರಗಳು ಹೇಗೆ ನಡೆಯುತ್ತವೆ ಎನ್ನುವುದನ್ನು ಕುರಿತು ನಡೆದಿರುವ ಅಧ್ಯಯನಗಳನ್ನು ಇಲ್ಲಿ ದಾಖಲಿಸಲು ಪ್ರಯತ್ನ ಮಾಡಲಾಗಿದೆ. ಜಾತಿ ಅವಮಾನ ಹೆಚ್ಚುತ್ತಿರುವ ಸಂದರ್ಭದಲ್ಲಿ ಶೈಕ್ಷಣಿಕ ಸಂಸ್ಥೆಗಳ ಪಾತ್ರ ಕೂಡ ಮಸುಕಾಗಿದೆ. ಮುಚ್ಚುಮರೆ ಇಲ್ಲದೆ ಬಹಿರಂಗವಾಗಿ ನಡೆಯುವ ತಾರತಮ್ಯ ಮತ್ತು ಪ್ರಾಥಮಿಕ ಶಾಲೆಗಳಲ್ಲಿನ ಹಗೆತನಗಳು, ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ತಾರತಮ್ಯದ ಆಚರಣೆಯು ರಾಜಕೀಯಗೊಳ್ಳುವ ಹಂತಕ್ಕೆ ಪರಿವರ್ತನೆಯಾಗಿವೆ. ಇದು ಪರಿಶಿಷ್ಟ ಸಮುದಾಯದ ಮಕ್ಕಳು ಹಾಗೂ ಸದಸ್ಯರನ್ನು ಸಾಂಸ್ಕೃತಿಕವಾಗಿ ಉದಾಸೀನ ಮತ್ತು ಶತ್ರುತ್ವ ಭಾವನೆಗೆ ಒಳಪಡಿಸುತ್ತದೆ. ಇತ್ತೀಚಿನ ರಾಷ್ಟ್ರೀಯ ಮಟ್ಟದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳ ಸಮಸ್ಯೆಗಳ ಕುರಿತು ನಡೆದ ಫೋಕಸ್ ಗ್ರೂಪ್ ಚರ್ಚೆಯು(ಎನ್.ಸಿ.ಇ.ಆರ್.ಟಿ.:೨೦೦೫) ಮುಖ್ಯವಾಗಿ ಈ ಅಂಶವನ್ನು ತಿಳಿಸುತ್ತದೆ.

ಶಿಕ್ಷಕರು ಪರಿಶಿಷ್ಟ ಜಾತಿ ಮತ್ತು ಪಂಗಡದ ಮಕ್ಕಳು, ಬಾಲಕಿಯರ ಬಗ್ಗೆ ಕಲಿಕೆಯಲ್ಲಿ ಕಡಿಮೆ ಮಟ್ಟದ ನಿರೀಕ್ಷೆ ಇಟ್ಟುಕೊಂಡು ದಯೆ ತೋರಿಸಬೇಕಾದ ಸ್ಥಿತಿಯಿದೆ. ಕೊಳಚೆ ಪ್ರದೇಶದ ಬಡಮಕ್ಕಳನ್ನು ಅತ್ಯಂತ ಕೀಳುಮಟ್ಟದ ಭಾಷೆಯಲ್ಲಿ ಬೈಯ್ಯುವ ಪ್ರವೃತ್ತಿ ಕಡಿಮೆಯಾಗದಿರುವುದನ್ನು ಗಮನಿಸಲಾಗಿದೆ. ಶಿಕ್ಷಕರು ಕೂಡ ಅಧಿಕೃತವಾಗಿ ತೀರ್ಮಾನಿಸಿದ ಮತ್ತು ಊಹೆಗಳ ಜೊತೆಗೆ ಸಾಂಸ್ಕೃತಿಕ ಹಿನ್ನೆಲೆ, ಭಾಷೆಯ ನೆಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳು ವಂಶಪರಂಪರೆಯಾಗಿ ಬೌದ್ಧಿಕ ಅಸಾಮರ್ಥ್ಯಗಳನ್ನು ಹೊಂದಿದ್ದಾರೆ ಎಂದು ಗುರುತಿಸುತ್ತಾರೆ. ಅವರು ಶೈಕ್ಷಣಿಕ ತಾರತಮ್ಯದ ಆಚರಣೆಯ ನೆಲೆಯಲ್ಲಿ ಹೆಸರಿಡುವುದು, ವರ್ಗೀಕರಿಸುವುದು ಮತ್ತು ತಳಜಾತಿಯ ಮಕ್ಕಳ ಭಾವನೆಗಳ ಆಧಾರದ ಮೇಲೆ ಬೋಧನಾ ಶೈಲಿಯನ್ನು ಬದಲಾಯಿಸುವುದು ಇತ್ಯಾದಿಗಳನ್ನು ಅನುಸರಿಸುತ್ತಾರೆ.

ಬಹುತೇಕ ಅಧ್ಯಯನಗಳು ಶಾಲೆ ಮತ್ತು ದಲಿತ ಮಕ್ಕಳನ್ನು ತಾರತಮ್ಯದಿಂದ ಉಪಚರಿಸು ವುದರಿಂದ ದಲಿತ ಮಕ್ಕಳು ಹೆಚ್ಚಾಗಿ ಶಾಲೆಯನ್ನು ಮಧ್ಯದಲ್ಲಿ ಬಿಡುವುದಕ್ಕೆ ಕಾರಣವಾಗಿರುವುದನ್ನು ಗಮನಿಸಿವೆ(ಸುಬ್ರಮಣಿಮನ್, ೨೦೦೩; ವಾಸವಿ, ೨೦೦೩). ಶಾಲೆಗಳಲ್ಲಿ ಮಧ್ಯಾಹ್ನದ ಊಟದ ಸಮಯದಲ್ಲಿ ಮಕ್ಕಳನ್ನು ಪ್ರತ್ಯೇಕಿಸುವುದು, ಸಾಮೂಹಿಕ ಕುಡಿಯುವ ನೀರಿನ ಮೂಲಗಳಿಂದ

ದಲಿತ ಮಕ್ಕಳು ನೀರು ಕುಡಿಯುವುದನ್ನು ನಿರ್ಬಂಧಿಸುವುದು, ಅವರಿಂದ ಶಾಲೆಯಲ್ಲಿ ಕೀಳು ದರ್ಜೆಯ ಕೆಲಸ ಮಾಡಿಸುವುದು ಇತ್ಯಾದಿ. ಈ ಎಲ್ಲಾ ಅಂಶ ರೀತಿಯಿಂದ ದಲಿತರ ಶಿಕ್ಷಣದ ಹಕ್ಕು ಒಂದು ಸವಾಲಾಗಿದೆ. ಪ್ರಸ್ತುತ ಲಭ್ಯವಿರುವ ಉಚಿತ ಪ್ರೋತ್ಸಾಹಕಗಳ ಜೊತೆಗೆ (ಉಚಿತ ಸಮವಸ್ತ್ರ, ಪಠ್ಯಪುಸ್ತಕ, ವಿದ್ಯಾರ್ಥಿವೇತನ ಇತ್ಯಾದಿ) ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ನೀಡುವ ಮೀಸಲಾತಿ ವಿರುದ್ಧ ಅಸಮಾಧಾನವನ್ನು ವ್ಯಕ್ತಪಡಿಸುತ್ತಿದ್ದಾರೆ. ಇದು ಅಸಾಮಾನ್ಯವಾದದ್ದು. ಸರ್ಕಾರಿ ಶಾಲಾ ಶಿಕ್ಷಕರು ಪರಿಶಿಷ್ಟ ಜಾತಿಯ ಮಕ್ಕಳನ್ನು 'ಸರ್ಕಾರದ ಮಕ್ಕಳೆಂದು' ಕರೆಯುವುದು, ಅವರನ್ನು ತಾತ್ಸಾರ ಮತ್ತು ಅಸಡ್ಡೆಯಿಂದ ಕಾಣುವ ಮೂಲಕ ಅವರ ಬಗ್ಗೆ ಅಸಮಾಧಾನ ಹೊಂದಿದ್ದಾರೆ. ಇಂತಹ ಉಪಚಾರಗಳು ಆಗ್ಗಿಂದಾಗ್ಗೆ ಮರುಕಳಿಸುವುದರಿಂದ ಹೆಚ್ಚಿನ ದಲಿತ ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಡುವ ಪ್ರಮಾಣ ಹೆಚ್ಚಳವಾಗಲು ಕಾರಣವಾಗಿದೆ. ಇದು ಅವರಲ್ಲಿ ಕೀಳರಿಮೆಯನ್ನು ಮತ್ತು ನಿರಾಶಾಭಾವನೆಯನ್ನು ಹುಟ್ಟುಹಾಕುವ ಜೊತೆಗೆ ಅವರನ್ನು ಎದೆಗುಂದಿಸಿದೆ. ಈ ಪ್ರಕರಣವನ್ನು ಲೇಖಕರು ಮತ್ತು ಹೋರಾಟಗಾರರೂ ಆಗಿರುವ ಭಾಮ ಅವರು ಹೀಗೆ ವಿವರಿಸುತ್ತಾರೆ. ಅನೇಕ ವಿಷಯಗಳಲ್ಲಿ ಮಾಮೂಲಿ ಪಾಠಗಳು ಅನೇಕ ವಿಚಾರಗಳಲ್ಲಿ ದಲಿತ ಮಕ್ಕಳಲ್ಲಿ ತಿಳುವಳಿಕೆಯನ್ನು ತಂದಿದೆ. ಪ್ರಪಂಚದಲ್ಲಿ ಅವರ ಸ್ಥಿತಿಯ ಬಗ್ಗೆ ಅವರಲ್ಲಿ ಅರಿವು ಉಂಟುಮಾಡಿದೆ. ಆದರೆ ಇದಕ್ಕೆ ಬದಲಾಗಿ, ಮಕ್ಕಳಿಗೆ ಈ ಎಲ್ಲಾ ವಿಷಯಗಳನ್ನು ಹೇಳುವಾಗ, ಎಲ್ಲಾ ವಿಷಯಗಳಲ್ಲಿ ಸಲಹೆ, ಸೂಚನೆ ಮತ್ತು ನಿರ್ದೇಶನಗಳನ್ನು ನೀಡುವಾಗ, ಅವು ದಲಿತರ ಮಕ್ಕಳಿಗಾಗಿ ಮಾಡಿದವುಗಳಂತೆ ಇವೆ. ಹೀಗಾಗಿ ಇಲ್ಲಿ ಯಾವುದೇ ಬದಲಾವಣೆ ಸಾಧ್ಯವಿಲ್ಲ. ಮುಖ್ಯವಾಗಿ ಈ ಎಲ್ಲಾ ಕಾರಣದಿಂದಾಗಿ ಮಕ್ಕಳು ಎಲ್ಲವನ್ನು ತಮ್ಮ ಹಣೆಬರಹವೆಂದು ಒಪ್ಪಿಕೊಳ್ಳುವುದನ್ನು ಕಾಣುತ್ತೇವೆ(ಪ್ರಶಾಂತ್ ಎಚ್.ಡಿ. ೨೦೦೪; ೨೦೦೫; ೨೦೧೦).

ಇಂತಹ ಅನುಭವಗಳು ಕೇವಲ ದಲಿತರ ಶಿಕ್ಷಣ ಹಕ್ಕಿಗೆ ಮಾತ್ರ ಸವಾಲಾಗಿರದೆ, ವ್ಯಕ್ತಿಯ ವಿಷಯದಲ್ಲಿ ಅಸಮರ್ಥತೆ, ಭಿನ್ನತೆಯ ವಿಷಯಗಳು ಮತ್ತೆ ಬಲಗೊಳ್ಳುವ ಅಭಿಪ್ರಾಯಗಳನ್ನು ಮತ್ತು ಸಮಸ್ಯೆಗಳನ್ನು ಹೊಂದಿದೆ. ಈ ಎಲ್ಲಾ ಅಂಶಗಳು ಬೆರೆತು ಪರಿಶಿಷ್ಟ ಸಮುದಾಯಗಳಲ್ಲಿ ಇರುವ ಜ್ಞಾನ ಮತ್ತು ಬುದ್ಧಿವಂತಿಕೆಯನ್ನು ಯಾವುದೊಂದು ಸಂಸ್ಥೆಯು ಗುರುತಿಸಿರುವುದಿಲ್ಲ. ಇದಕ್ಕೆ ಬದಲಾಗಿ ಅವರಿಗೆ ಅಪರಿಚಿವಾದ ಮತ್ತು ಪರಕೀಯವಾದ ಜ್ಞಾನಸಾರವನ್ನು ಹೇರುವುದು ಅಥವಾ ಜಾರಿಗೊಳಿಸುತ್ತಿರುವುದು ಹೆಚ್ಚಾಗಿದೆ.

ಬಹಳ ನಿರ್ದಿಷ್ಟವಾಗಿ ಮಾನವನ ಸಾಮರ್ಥ್ಯ ಮತ್ತು ಕೊಡುಗೆಯಲ್ಲಿ ಶ್ರಮ ಮೌಲ್ಯಯುತವಾದ ಅಥವಾ ಗೌರವಯುತವಾದ ಅತ್ಯಂತ ಪ್ರಮುಖ ಆಯಾಮವೆಂದು ಗುರುತಿಸಲ್ಪಡದ ಬಹುದೊಡ್ಡ ಸಂಸ್ಕೃತಿಯಲ್ಲಿ ಲಕ್ಷಗಟ್ಟಲೆ ದಲಿತರ ಶ್ರಮದಾಯಕ ದುಡಿಮೆಯ ಬಗ್ಗೆ ನಿರ್ಲಕ್ಷ್ಯತೆ ಮುಂದುವರಿದಿರುವುದನ್ನು ಪ್ರಮುಖವಾಗಿ ಪರಿಶೀಲಿಸ ಬೇಕಾಗಿದೆ. ಅನನ್ಯತೆ ಮತ್ತು ವ್ಯಕ್ತಿನಿಷ್ಠತೆಯು ಅವರು ಮಾಡುವ ಕೆಲಸದಿಂದ ರೂಪಿತವಾಗುತ್ತದೆ. ಕರಕುಶಲತೆ ಮತ್ತು ಕುಶಲಕರ್ಮಿಯ

ಸಾಮರ್ಥ್ಯ, ಜ್ಞಾನದ ರೂಪದಲ್ಲಿ ಇರುವ ಮದ್ದು, ಪರಿಸರ ವಿಜ್ಞಾನ, ಕೃಷಿ, ಪಶುಸಂಗೋಪನೆ ಇತ್ಯಾದಿ ಇವು ಕೈಗಾರಿಕಾ ಯುಗದಲ್ಲಿ ಬದುಕಿ ಉಳಿಯಲಾರವು ಎಂಬ ಆಧಾರದಲ್ಲಿ ಕಳೆಗುಂದುವಂತೆ ಮಾಡಲಾಗಿದೆ. ಶ್ರಮ ಆಧಾರಿತ ದುಡಿಮೆಯ ಕೆಲಸವನ್ನು ಅವರ ಸಂಘಟನೆ ಮತ್ತು ಜನರ ಮೂಲಕ ಕೀಳಾಗಿ ಪರಿಗಣಿಸಿ ಅವನತಿಗೆ ದಾರಿ ಮಾಡಿಕೊಟ್ಟಿದೆ. ಈ ಕುಶಲಕರ್ಮಿಗಳ ಕುಶಲತೆಯನ್ನು ಶಾಸನಬದ್ಧ ಹಾಗೂ ಮೌಲ್ಯಯುತ ಜ್ಞಾನದ ರೂಪದಲ್ಲಿ ಔಪಚಾರಿಕ ಶಿಕ್ಷಣದಲ್ಲಿ ಸಮಗ್ರವಾಗಿ ಸಮನ್ವಯಗೊಳಿಸದಿದ್ದುದು, ತರಬೇತಿಯ ರಚನೆಗಳಲ್ಲಿ ಇದನ್ನು ಸೇರಿಸದಿದ್ದದು, ದಲಿತ ಯುವಕರು ಎರಡು ಬಗೆಯ ಇಕ್ಕಟಿಗೆ ಸಿಕ್ಕಿಕೊಳ್ಳುವಂತಾಗಿದೆ. ಒಂದು ಕಡೆ, ಅವರು ಅವರ ಕೌಟುಂಬಿಕ ಮತ್ತು ಸಾಂಪ್ರದಾಯಿಕ ಜ್ಞಾನ ಹಾಗೂ ಕೌಶಲ್ಯಗಳನ್ನು ತ್ಯಜಿಸಬೇಕು. ಇನ್ನೊಂದು ಕಡೆ ಅವರು ಆಧುನಿಕ ಬೋಧನಾ-ಕಲಿಕೆಯ ಸಂದರ್ಭದಲ್ಲಿ ಹೊಸಜ್ಞಾನ ಮತ್ತು ಕುಶಲತೆಗಳನ್ನು ಕಲಿಯಲೇಬೇಕಾಗಿದೆ. ಈ ಮಧ್ಯದಲ್ಲಿ ಅವರ ಕುಶಲತೆ ಮತ್ತು ಕೌಶಲ್ಯಗಳನ್ನು ಉಪಯೋಗಿಸಿಕೊಳ್ಳಲು ಅವಕಾಶವಿಲ್ಲದಂತಾಗಿದೆ(ಪ್ರಶಾಂತ್ ಎಚ್.ಡಿ. ೨೦೧೧; ೨೦೧೪; ೨೦೧೫).

ಶಿಕ್ಷಕರು ಮೌಖಿಕ ಸಂಸ್ಕೃತಿ ಮತ್ತು ಮೊದಲ ತಲೆಮಾರಿನ ಕಲಿಕೆದಾರರನ್ನು ಉತ್ತೇಜಿಸುವಾಗ ಮತ್ತು ಅವರನ್ನು ಈ ದಿಕ್ಕಿನಲ್ಲಿ ತಯಾರು ಮಾಡುವಾಗ ಹೆಚ್ಚು ಸಂವೇದನೆ ಹೊಂದಿರುವುದಿಲ್ಲ. ಇದು ಕೇವಲ ಸಮಸ್ಯೆ ಮಾತ್ರವಲ್ಲ, ಅರ್ಥ ಮಾಡಿಕೊಳ್ಳಬೇಕಾಗಿರುವ ವಿಷಯ. ತಮ್ಮ ಅನುಭವಗಳಿಗೆ ಸರಿಯಾದ ಮನ್ನಣೆ ದೊರಕದಿದ್ದಾಗ ಸ್ವಂತಿಕೆ ಮತ್ತು ಆತ್ಮವಿಶ್ವಾಸವನ್ನು ಮಕ್ಕಳು ಕಳೆದುಕೊಳ್ಳುವುದನ್ನು ಅನೇಕ ಅಧ್ಯಯನಗಳು ಗುರುತಿಸಿವೆ(ಅಗರವಾಲ್ ಮತ್ತು ಸಿಬೋ, ೧೯೯೪). ಇದು ಪರಿಶಿಷ್ಟ ಸಮುದಾಯದ ವಿದ್ಯಾರ್ಥಿಗಳಲ್ಲಿ ಪಠ್ಯ ಚಟುವಟಿಕೆಯಲ್ಲಿ ಕಡಿಮೆ ಸಾಧನೆ ಮಾಡಲು ದಾರಿ ಮಾಡಿಕೊಟ್ಟಿದೆ. ಶೈಕ್ಷಣಿಕ ಸಂಸ್ಥೆಗಳು ಸಾಂವಿಧಾನಿಕ ಕಟ್ಟುಪಾಡುಗಳು ಮತ್ತು ಜವಾಬ್ದಾರಿಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಿರುವುದು, ಪರಿಶಿಷ್ಟ ಸಮುದಾಯಗಳಿಗೆ ಸಹಾಯ ದೊರಕಿಸುವುದಕ್ಕಾಗಿ ನಿರ್ಧಿಷ್ಟವಾಗಿ ಪರಿಶಿಷ್ಟ ಸಮುದಾಯದ ಮಕ್ಕಳ ಹಾಜರಿಯನ್ನು ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ, ಸರ್ಕಾರಿ ಯೋಜನೆಗಳನ್ನು ಪಡೆದುಕೊಳ್ಳುವಾಗ ಬಹಳ ತಾತ್ಸಾರದಿಂದ ನೋಡುವ, ತಿರಸ್ಕರಿಸುವ ಮತ್ತು ಅವಮಾನಿಸುವ ಕೆಲಸ ನಡೆಯುತ್ತಿದೆ. ಪ್ರೋತ್ಸಾಹಕ ಕಾರ್ಯಕ್ರಮಗಳ ಉದ್ದೇಶಗಳನ್ನು ಆಚರಣೆಗೆ ತರುವ, ಬೆಂಬಲಿಸುವ ರಾಜಕೀಯ ಪರಿಸರವು ಬೇಕಾಗಿದೆ.

ಇತ್ತೀಚೆಗೆ ಸಾಮಾಜಿಕ ಅಸಮಾನತೆ, ಆರ್ಥಿಕ ಅಸಮಾನತೆಗಳು ಹೆಚ್ಚುತ್ತವೆ. ಮಾರುಕಟ್ಟೆಯೊಂದಿಗೆ ಸಂಬಂಧಿಸಿದ ಬಂಡವಾಳ ಇರುವವರಿಗೆ ಶಾಲೆಗಳು ಮಾರುಕಟ್ಟೆಗಳಾಗಿ ರೂಪುಗೊಳ್ಳುತ್ತಿವೆ. ಅಷ್ಟು ಮಾತ್ರವಲ್ಲದೆ ಅಲ್ಲಿ ಹಣದ ಮೂಲಕ ಎಲ್ಲವೂ ಸಾಧ್ಯವಾಗುತ್ತದೆ. ಇಂತಹ ಸಂದರ್ಭದಲ್ಲಿ ಶಾಲೆಯಿಂದ ವಂಚಿತರಾದ ಬಡಮಕ್ಕಳು ಲೇವಡಿಗೆ ಒಳಗಾಗಿ, ವರ್ಗ ಮತ್ತು ಸಾಂಸ್ಕೃತಿಕ ಬಿರುಕುಗಳು ದೊಡ್ಡದಾಗುತ್ತವೆ. ಈ ಅಂತರ ಹೆಚ್ಚುತ್ತಾ ಹೋದಂತೆ ನಾವೊಂದು ಪ್ರಜಾಪ್ರಭುತ್ವ ಗಣರಾಜ್ಯ ವ್ಯವಸ್ಥೆಗೆ ಸೇರಿದವರು ಎನ್ನುವ ಉದ್ದೇಶ ಕೇವಲ ಭ್ರಮೆಯಾಗುತ್ತದೆ. ಇದಕ್ಕೂ ಮುಖ್ಯವಾಗಿ ಅನೂಚಾನವಾಗಿ ಬಂದ ಅಸಮಾನತೆಗಳಿಗೆ ಸವಾಲೊಡ್ಡಲು ಸಾಧ್ಯವಾಗುವುದಿಲ್ಲ.

ಇದು ಹೆಚ್ಚುತ್ತಾ ಹೋದಂತೆ ಒಬ್ಬ ವ್ಯಕ್ತಿಯ ಆತ್ಮಗೌರವ ಮತ್ತು ಸ್ವಾಭಿಮಾನಕ್ಕೆ ಸಂಬಂಧಿಸಿದ ಎಲ್ಲಾ ಹಕ್ಕುಗಳನ್ನು ನನಸಾಗಿಸುವ ಸಾಮಾಜಿಕ ಸಂಸ್ಥೆಗಳು, ಸಭ್ಯ ನಾಗರಿಕ ಸಮಾಜವನ್ನು ರೂಪಿಸುವುದು ಕೇವಲ ಕನಸಾಗುತ್ತದೆ. ಇಂದು ನಮ್ಮ ಶಾಲೆಗಳು ಸಾಮಾಜಿಕ ವಿಮೋಚನೆಯನ್ನು ಹೇಳಿಕೊಡುವ ಕೇಂದ್ರಗಳಾಗದೆ, ಅಸಮಾನತೆಯ ಪುನರ್‌ನಿರ್ಮಾಣಕ್ಕೆ ಆಧಾರಗಳನ್ನು ಒದಗಿಸುವ ಕೇಂದ್ರಗಳಾಗಿವೆ. ನಮ್ಮ ಖಾಸಗಿ ಶಾಲೆಗಳು ಪೌರತ್ವದ ಆಶಯ ಮತ್ತು ಉದ್ದೇಶಗಳನ್ನು ಮಕ್ಕಳಿಗೆ ಕಲಿಸುವ ಪ್ರಜಾಪ್ರಭುತ್ವವಾದಿ ಸಾರ್ವಜನಿಕ ಕೇಂದ್ರಗಳಾಗದೆ ಅಸಮಾನತೆಯ ಕೇಂದ್ರಗಳಾಗಿ ಮುಂದುವರೆಯುತ್ತಿವೆ. ಇದಕ್ಕೆ ಡಾ. ಅಂಬೇಡ್ಕರ್ ಅವರು ಜನವರಿ ೨೬, ೧೯೫೦ರಂದು ಹೇಳಿದ ಮಾತಿದು: "we are going to enter into a life of contradictions. In politics we will have equality and in social and economic life we will have inequality" ಅಂಬೇಡ್ಕರ್ ಅವರು ಗುರುತಿಸಿರುವ ವೈರುಧ್ಯಗಳನ್ನು ಹೋಗಲಾಡಿಸಲು ಶಿಕ್ಷಣ ವ್ಯವಸ್ಥೆಗಳಿಗೆ ಇನ್ನೂ ಸಾಧ್ಯವಾಗಿಲ್ಲ. ಈ ವೈರುಧ್ಯಗಳು ಬೆಳೆಯುತ್ತಿರುವುದನ್ನು ಕುರಿತು ಸಮಾಜ ವಿಜ್ಞಾನಿಗಳು ನಮ್ಮ ಗಮನ ಸೆಳೆಯುತ್ತಿದ್ದಾರೆ. ಸಾಮಾಜಿಕ ರಚನೆಯಲ್ಲಿನ ತುತ್ತ ತುದಿಯಲ್ಲಿರುವ ಉನ್ನತ ವರ್ಗಗಳ ವರಮಾನ-ಅಧಿಕಾರ ಎಷ್ಟರಮಟ್ಟಿಗೆ ಏರಿಕೆಯಾಗುತ್ತಿದೆ ಎಂಬುದಕ್ಕಿಂತ ಸಾಮಾಜಿಕ ರಚನೆಯ ಅಡಿಯಲ್ಲಿ ವಿಸ್ತೃತವಾಗಿರುವ ಅಸಮಾನತೆಗಳು ತೀವ್ರಗೊಳ್ಳುತ್ತಿರುವುದು ನಮಗೆ ಮುಖ್ಯವಾಗಬೇಕು. ಇದನ್ನು ನಮ್ಮ ಸಂವಿಧಾನವು ಶಾಲಾ ಶಿಕ್ಷಣವನ್ನು ಕುರಿತು ಇಟ್ಟುಕೊಂಡಿರುವ ಆಶಯಗಳ ನೆಲೆಯಲ್ಲಿ ಅರ್ಥ ಮಾಡಿಕೊಂಡು ಸರ್ಕಾರಗಳು ಶೈಕ್ಷಣಿಕ ಅಭಿವೃದ್ಧಿ ನೀತಿ-ಕಾರ್ಯಕ್ರಮಗಳನ್ನು ರೂಪಿಸುವ ರಾಜಕೀಯ ಇಚ್ಛಾಶಕ್ತಿಯು ಗ್ರಾಮೀಣ ಪ್ರದೇಶದ ಮಕ್ಕಳ ಶಾಲಾ ಶಿಕ್ಷಣದ ದೃಷ್ಟಿಯಿಂದ ತುಂಬಾ ಅಗತ್ಯ.

ಕಳೆದ ದಶಕಗಳಲ್ಲಿ ಶಿಕ್ಷಣದ ಬೇಡಿಕೆಯ ಬಗೆಗೆ ಎದ್ದಿರುವ ಪ್ರಶ್ನೆಗಳು ಹಿಂದೊಮ್ಮೆ ನಾವು ಕಂಡ ಪ್ರಶ್ನೆಗಳಿಗಿಂತ ಭಿನ್ನವಾಗಿವೆ. ಬದಲಾಗುತ್ತಿರುವ ಜ್ಞಾನದ ಪರಿಕಲ್ಪನೆಯುಳ್ಳ ಭವಿಷ್ಯದ ಜಾಗತಿಕ ಪ್ರಪಂಚದಲ್ಲಿ ಶಿಕ್ಷಣವು ಸಾಮಾಜಿಕ ಜೀವನದ ಮೇಲೆ ಭಾರಿ ಪರಿಣಾಮಗಳನ್ನು ಉಂಟುಮಾಡುವುದರಿಂದ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದಲ್ಲಿ ಮೂಲಭೂತ ಶಾಲಾ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಒದಗಿಸಬೇಕಾಗುತ್ತದೆ. ಶಿಕ್ಷಣವು ಮಾನವ ಸಾಮರ್ಥ್ಯವನ್ನು ವೃದ್ಧಿಗೊಳಿಸಲು ಹೊಂದಿರುವ ಶಕ್ತಿಯನ್ನು ಸರಿಯಾಗಿ ಗ್ರಹಿಸದ ಇಂದಿನ ಜಾಗತಿಕ ಪ್ರಪಂಚದಲ್ಲಿ ಶಿಕ್ಷಣದ ಕೊರತೆಯು ಸಮಾಜದೊಳಗಿನ ಅಸಮಾನತೆಯನ್ನು ಇನ್ನೂ ಹೆಚ್ಚಿಸುತ್ತದೆ. ಆದ್ದರಿಂದ ಎಲ್ಲಾ ಮಕ್ಕಳ ಶಿಕ್ಷಣವು ತುಂಬಾ ಗಂಭೀರವಾದ ವಿಚಾರವಾಗಿದೆ. ಈ ಕುರಿತು ಹೆಚ್ಚಿನ ಚರ್ಚೆಗಳು, ಅಧ್ಯಯನಗಳು ಸಮಾನ ಅವಕಾಶ ಮತ್ತು ಸಮಾನತೆಯ ನೆಲೆಯಲ್ಲಿ ನಡೆಯಬೇಕಾಗಿದೆ. ಆ ಮೂಲಕ ಸಮಾನ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಲು ನಾವೆಲ್ಲರೂ ಪ್ರಯತ್ನಿಸಬೇಕಾಗಿದೆ (ಎಚ್.ಡಿ.ಪ್ರಶಾಂತ್, ೨೦೧೪).

ಎದೆಗೆ ಬಿದ್ದ ಅಕ್ಷರ ಪುಸ್ತಕದಲ್ಲಿ ದೇವನೂರು ಮಹಾದೇವ ಅವರು ಅಸಮಾನತೆಯ ವಿಕಾರಗಳನ್ನು ಸಾಮಾನ್ಯ ಚಿಂತನಾ ಕ್ರಮಗಳಿಂದ ವಿಭಿನ್ನವಾಗಿ ವಿಶ್ಲೇಷಿಸಿದ್ದಾರೆ. ಉದಾಹರಣೆಗೆ

ಅಕ್ಷರ ಕಲಿಯುವ ಮೂಲಕ ಸಾಮಾಜಿಕ ಚಲನೆ ಹೇಗೆ ಬದಲಾವಣೆ ತರುತ್ತದೆ ಎಂಬುದನ್ನು ಅನುಭವಗಳ ನೆಲೆಗಳಲ್ಲಿ ತಾತ್ವೀಕರಿಸಿದ್ದಾರೆ. ವಿಶೇಷವಾಗಿ ದನಿಯಿಲ್ಲದೆ ಮಲಗಿರುವವರ ಧ್ವನಿಯಾಗಿರಬೇಕು ಎಂಬ ಲೇಖನದಲ್ಲಿ ಚಳುವಳಿಗಳು ಹೇಗೆ ದನಿಯಾಗಬೇಕು ಎಂಬುದನ್ನು ವಿವರಿಸುತ್ತಾರೆ. ಆಧುನಿಕ ವ್ಯವಸ್ಥೆಗಳು ಸಹ ದಲಿತರ ಭಾಗವಹಿಸುವಿಕೆಯನ್ನು ಹೇಗೆ ತಡೆಯಲಾಗುತ್ತಿದೆ. ಇದಕ್ಕೆ ಇರುವ ಮಾರ್ಗ ಸಾಮಾಜಿಕ ಪ್ರಜಾಪ್ರಭುತ್ವ ಇದು ಕೂಡ ಜಾತಿ ಮತ್ತು ಧರ್ಮಗಳ ಅಸೂಯೆಗಳ ಮೂಲಕ ವಿಶೇಷವಾಗಿ ಅಸ್ಪೃಶ್ಯರ ಭಾಗವಹಿಸುವಿಕೆಯನ್ನು ಸಾಂಸ್ಕೃತಿಕವಾಗಿ (ಭಾಷೆ, ಆಚಾರ, ವಿಚಾರ, ಬಟ್ಟೆ ಇತ್ಯಾದಿ) ಹೇಗೆ ತಡೆಯುತ್ತಿದೆ ಎಂಬುದನ್ನು ಈ ಕೃತಿಯು ವಿವರಿಸುತ್ತದೆ. ಈ ಕೃತಿ ವಿವರಿಸುವ ಅಂಶಗಳು ಕಾರ್ಲ್‌ಮಾರ್ಕ್ಸ್ ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಸಾಂಸ್ಕೃತಿಕ ಅಂಶಗಳು ಆರ್ಥಿಕ ಪ್ರಗತಿಯನ್ನು ಮತ್ತು ದುಡಿಯುವ ಜನರ ಹಿತಾಸಕ್ತಿಗಳನ್ನು ಹೇಗೆ ರಾಜಕೀಯವಾಗಿ ತಡೆಯುತ್ತದೆ ಎನ್ನುವುದನ್ನು ವಿವರಿಸುತ್ತದೆ(ದೇವನೂರು ಮಹದೇವ, ೨೦೦೯).

ಇಂದು ಕೂಡ ಹಳ್ಳಿಗಳಲ್ಲಿ ದಲಿತರು ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಮತ್ತು ರಾಜಕೀಯವಾಗಿ ಅತ್ಯಂತ ಕೆಳಮಟ್ಟದಲ್ಲಿದ್ದಾರೆ. ಬಹುಸಂಖ್ಯಾತ ದಲಿತ ಕುಟುಂಬಗಳು ಅತಿಕಡಿಮೆ ಅಥವಾ ಭೂಮಿಯನ್ನೇ ಹೊಂದಿರುವುದಿಲ್ಲವಾದ್ದರಿಂದ ಅವರು ಪ್ರಬಲ ಹಾಗೂ ಮೇಲ್ಜಾತಿ ಮತ್ತು ವರ್ಗಕ್ಕೆ ಸೇರಿದವರನ್ನು ಆರ್ಥಿಕವಾಗಿ ಅವಲಂಬಿಸಬೇಕಾಗಿದೆ. ಹೀಗಾಗಿ ಅವರು ಸಾಮಾಜಿಕವಾಗಿಯೂ ದುರ್ಬಲರಾಗುತ್ತಾರೆ. ಅವರು ಮೇಲ್ಜಾತಿ ಮತ್ತು ವರ್ಗದವರಿಂದ ದಮನಿತಗೊಳ್ಳುತ್ತಿದ್ದರೂ ಅದು ಸರಿಯಾಗಿ ದಾಖಲಾಗಿಲ್ಲ ಮತ್ತು ದಾಖಲಾಗುತ್ತಿಲ್ಲ(ಪ್ರಶಾಂತ್ ಎಚ್.ಡಿ. ೨೦೦೯).

ದಲಿತರು ಈಗಲೂ ಪ್ರತ್ಯೇಕವಾದ ಗುಂಪುಗಳಲ್ಲಿ, ಅದರಲ್ಲಿಯೂ ಹಳ್ಳಿಗಳಲ್ಲಿ ಪ್ರತ್ಯೇಕವಾದ ಕೇರಿಗಳಲ್ಲಿ ವಾಸಿಸುತ್ತಿದ್ದಾರೆ. ಅವರು ಸಾಮಾನ್ಯ ಜನ ಉಪಯೋಗಿಸುವ ಬಾವಿಗಳನ್ನು ಉಪಯೋಗಿಸುವಂತಿಲ್ಲ. ದೇವಸ್ಥಾನಗಳನ್ನು ಪ್ರವೇಶಿಸುವಂತಿರಲಿಲ್ಲ. ಈಗಲೂ ಹೈದ್ರಾಬಾದ್–ಕರ್ನಾಟಕ ಪ್ರದೇಶದ ಹಳ್ಳಿಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಜನರಿಗೆ ಹೋಟೆಲ್‌ಗಳಲ್ಲಿ ಪ್ರತ್ಯೇಕ ವ್ಯವಸ್ಥೆ ಇದೆ. ಈ ಭಾಗದ ಹೋಟೆಲ್‌ಗಳಲ್ಲಿ ಅಸ್ಪೃಶ್ಯ ಜಾತಿಗೆ ಸೇರಿದ ಜನರಿಗೆ ಪ್ರತ್ಯೇಕವಾದ ಗ್ಲಾಸು(ಲೋಟ) ಇಟ್ಟಿರುತ್ತಾರೆ. ಅವರಿಗೆ ಹೋಟೆಲ್‌ನಲ್ಲಿ ಪ್ರತ್ಯೇಕ ಸಣ್ಣ ಸ್ಥಳವನ್ನು ನಿಗದಿಪಡಿಸಲಾಗಿದೆ. ಸಾರ್ವಜನಿಕ ಸಿಹಿ ನೀರಿನ ಬಾವಿಯಿಂದ ಅಸ್ಪೃಶ್ಯರು ನೀರು ತೆಗೆದುಕೊಳ್ಳುವ ಹಾಗಿಲ್ಲ (ನಿರ್ದಿಷ್ಟವಾಗಿ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಸಿದ್ನೇಕೊಪ್ಪ ಗ್ರಾಮದಲ್ಲಿ). ಹಳ್ಳಿಗಳಲ್ಲಿರುವ ದೇವಸ್ಥಾನಗಳಿಗೆ ಇವರಿಗೆ ಪ್ರವೇಶವಿಲ್ಲ. ಈಗಲೂ ಸಾರ್ವಜನಿಕ ಸ್ಥಳಗಳಲ್ಲಿ ದಲಿತರು ಹೆಚ್ಚು ಸ್ವಾತಂತ್ರ್ಯದಿಂದ ವ್ಯವಹರಿಸಲಾಗದ ಸಾಮಾಜಿಕ ಸ್ಥಿತಿ ಹೈದ್ರಾಬಾದ್–ಕರ್ನಾಟಕ ಪ್ರದೇಶದ ಹಳ್ಳಿಗಳಲ್ಲಿದೆ(ಪ್ರಶಾಂತ್ ಎಚ್.ಡಿ. ೨೦೦೪; ೨೦೦೫; ೨೦೦೬) ಗದಗ ಜಿಲ್ಲೆಯಲ್ಲಿ ಕ್ಷೌರಿಕರ ಅಂಗಡಿಗೆ ಪ್ರವೇಶ ನಿಷೇಧ. ಇನ್ನೂ ಮುಂತಾದ ಸಾಮಾಜಿಕ ಬಹಿಷ್ಕಾರಗಳು ದಲಿತರನ್ನು ಒಂದು ಪ್ರತ್ಯೇಕ ಗುಂಪಾಗಿ, ಸಾಮಾಜಿಕ ಆಚರಣೆಗಳ ಮೂಲಕ ನೋಡಿಕೊಳ್ಳಲಾಗುತ್ತಿದೆ. ಅವರ ಮೇಲೆ ದಬ್ಬಾಳಿಕೆ, ದೌರ್ಜನ್ಯ

ಹಲವಾರು ವಿಧದ ಸಾಮಾಜಿಕ ಅಡ್ಡಿ ಆತಂಕಗಳು ಕನಿಷ್ಠ ಧಾರ್ಮಿಕ ಸ್ಥಾನ, ಕಡುಬಡತನ ಹಾಗೂ ರಾಜಕೀಯ ಅಧಿಕಾರದಲ್ಲಿ ಶಕ್ತಿಹೀನತೆಯನ್ನು ದಲಿತರು ಅನುಭವಿಸುತ್ತಿದ್ದಾರೆ. ಇದು ಅವರ ಸಾಮಾಜಿಕ ಅಭಿವೃದ್ಧಿಗೆ ನಿರ್ದಿಷ್ಟವಾಗಿ ಶೈಕ್ಷಣಿಕ ಪ್ರಗತಿಗೆ ಅಡ್ಡಿಯಾಗಿದೆ.

ಆಧುನಿಕ ಸಂಘ-ಸಂಸ್ಥೆಗಳು (ಶಾಲೆ, ಪಂಚಾಯತ್‌ರಾಜ್ ಸಂಸ್ಥೆಗಳು, ಸಂವಿಧಾನಬದ್ಧ ಕಾನೂನುಗಳು ಇತ್ಯಾದಿ) ಆಧುನಿಕ ಉತ್ಪಾದನಾ ವಿಧಾನಗಳು, ಹೊಸ ಹೊಸ ವೃತ್ತಿ ಕಸುಬುಗಳು, ಸಂವಿಧಾನದ ಮೂಲಭೂತ ಹಕ್ಕುಗಳು, ಹಾಗೂ ವಯಸ್ಕರ ಮತದಾನದ ಹಕ್ಕು ಇತ್ಯಾದಿ– ಇವು ದಲಿತರಿಗೆ ಪಾರಂಪರಿಕ ಸಾಮಾಜಿಕ ಶೋಷಣೆಯ ಸಂಬಂಧಗಳು ಧಾರ್ಮಿಕ ಪ್ರತಿಬಂಧಗಳನ್ನು ಧಿಕ್ಕರಿಸುವ ಶಕ್ತಿಯನ್ನಿತ್ತಿವೆ. ಭಾರತದ ಹಲವಾರು ಭಾಗಗಳಲ್ಲಿ ದಲಿತರು ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಒಂದುಗೂಡಿ ಭೂಮಿಗಾಗಿ ಹಕ್ಕು ಸ್ಥಾಪನೆ, ಕೂಲಿ ಹೆಚ್ಚಳ, ಸಾಮಾಜಿಕ ಹಾಗೂ ರಾಜಕೀಯ ಸ್ಥಾನಮಾನಕ್ಕಾಗಿ ಹೋರಾಡುತ್ತಿರುವುದನ್ನು ನಾವು ಕಾಣುತ್ತೇವೆ. ಆದರೆ ೧೯೭೦ರ ನಂತರ ಮೇಲುಜಾತಿಯವರಿಂದ ಪ್ರತಿಕಾರ ಹಾಗೂ ದಲಿತರ ಮೇಲಿನ ದೌರ್ಜನ್ಯವು ಶೇಕಡ ೩೭ರಷ್ಟು ಹೆಚ್ಚಾಗಿದೆ. ಇದಕ್ಕೆ ಪ್ರಮುಖವಾದ ಕಾರಣ ಪರಿಶಿಷ್ಟ ಜಾತಿಗಳು ಸಾಮಾಜಿಕ ಸಂಪನ್ಮೂಲಗಳ ಕೊರತೆಯು ಸಾಂಸ್ಕೃತಿಕ ಮತ್ತು ಭೌತಿಕ ಸಂಪನ್ಮೂಲಗಳ ಸೌಲಭ್ಯಗಳಿಂದಲೂ ಸಹ ವಂಚಿತರನ್ನಾಗಿ ಮಾಡಿದೆ. ಜೊತೆಗೆ ಇನ್ನು ಕೂಡ ಸಾಮಾಜಿಕ ಬಹಿಷ್ಕಾರವನ್ನು ಅವರು ಅನುಭವಿಸುತ್ತಿದ್ದಾರೆ. ಇದು ಅವರಿಗೆ ಸಾಮಾಜಿಕ ಅಭಿವೃದ್ಧಿ ಸೌಲಭ್ಯಗಳನ್ನು ಪಡೆದುಕೊಳ್ಳದಂತೆ ಮಾಡಿದೆ. ಸ್ವಾತಂತ್ರ್ಯ ನಂತರ ಭಾರತದಲ್ಲಿ ದಲಿತರ ಆರ್ಥಿಕ ಚೇತರಿಕೆಗೆ ಮುಖ್ಯ ಕಾರಣ ಶಿಕ್ಷಣ. ಶಿಕ್ಷಣವು ಕಸುಬುಗಳ ವಿವಿಧತೆ ಹಾಗೂ ಚಲನಶೀಲತೆಯನ್ನು ಮುಖ್ಯವಾಗಿ ಮೀಸಲಾತಿಯ ಮೂಲಕ ಒಂದು ಸಣ್ಣ ಪ್ರಮಾಣದಲ್ಲಿ ದಲಿತ ಸಮುದಾಯಕ್ಕೆ ನೀಡಿದೆ. ಅದರಲ್ಲಿ ಹಲವಾರು ಸಾರ್ವಜನಿಕ ಉದ್ದಿಮೆಗಳಲ್ಲಿದ್ದಾರೆ. ಇದು ಮೇಲ್ಜಾತಿಯವರ ಮೇಲಿನ ಅವಲಂಬನೆಯನ್ನು ಸ್ವಲ್ಪಮಟ್ಟಿಗೆ ಕಡಿಮೆಗೊಳಿಸುವುದರೊಂದಿಗೆ ದಲಿತರಿಗೆ ಸಾಮಾಜಿಕ ಸ್ಥಾನವನ್ನು ಕಲ್ಪಿಸಿದೆ. ವಿದ್ಯಾವಂತ ದಲಿತರು ಮೇಲ್ಜಾತಿಯವರ ದಬ್ಬಾಳಿಕೆ ಸಹಿಸುವುದಿಲ್ಲ, ರಾಜಕೀಯ ಮತ್ತು ಸಾಂಸ್ಕೃತಿಕ ಹಕ್ಕಿನ ಪ್ರತಿಪಾದನೆಗೆ ಮೊದಲಿಗಿಂತಲೂ ಹೆಚ್ಚಿನ ಪ್ರಯತ್ನ ಮಾಡುತ್ತಿರುವುದನ್ನು ನಾವು ನೋಡಬಹುದು(ಡ್ರೀಜ್ ಮತ್ತು ಅಮರ್ತ್ಯಸೇನ್, ೨೦೦೩).

ಹೀಗೆ ಇಂಡಿಯಾದ ಸಾಮಾಜಿಕ ರಚನೆಯಲ್ಲಿ ಜಾತಿಯು ಒಬ್ಬ ವ್ಯಕ್ತಿಯ ಮತ್ತು ಸಮುದಾಯದ ಚಲನೆಯನ್ನು ಹೇಗೆ ರೂಪಿಸುತ್ತದೆ ಎನ್ನುವುದನ್ನು ನಾವು ಮೇಲಿನ ಅಧ್ಯಯನಗಳಿದ ತಿಳಿಯಬಹುದು. ಮುಂದುವರಿದು ರಾಜಕೀಯ ಪ್ರಕ್ರಿಯೆಗಳಲ್ಲಿ ದಲಿತರ ಭಾಗವಹಿಸುವಿಕೆ ಕುರಿತು ನಡೆದಿರುವ ಅಧ್ಯಯನಗಳನ್ನು ಮುಂದೆ ದಾಖಲಿಸಲು ಪ್ರಯತ್ನ ಮಾಡಲಾಗಿದೆ.

ಇರ್ಫಾನ್ ಹಬೀಬ್ (೨೦೧೧), ಅವರು ತಮ್ಮ ಪುಸ್ತಕದಲ್ಲಿ ಭಾರತದಲ್ಲಿ ಜಾತಿ ಎಂಬುದು ಒಂದು ವಿವಿಧ ರೀತಿಯ ವಿಶಿಷ್ಟ ಸಾಮಾಜಿಕ ವ್ಯವಸ್ಥೆ, ಜಾತಿ ವಿಷಯದ ಬಗ್ಗೆ "ಲೂಯಿ

ಡ್ಯೂಮಾಂಟ್" ತನ್ನ "ಹ್ಯೋಮಾ ಹೈರಾರ್ಕಸ್" ಮಾನವಶ್ರೇಣಿ" ಎಂಬ ಕೃತಿಯಲ್ಲಿ ಜಾತಿಗಳೊಳಗಿನ ಮೇಲು-ಕೀಳು, ಅಂತಸ್ತುಗಳ ತತ್ವವು ಜಾತಿವ್ಯವಸ್ಥೆಯ ತಿರುಳು 'ಹೃದಯವಾಗಿದೆ' ಎಂದಿದ್ದಾರೆ. ಇದಿಲ್ಲದಿದ್ದರೆ ಜಾತಿ ವ್ಯವಸ್ಥೆಯೇ ಇರಲಾರದು ಎಂದು ಡ್ಯೂಮಾಂಟ್ ಪ್ರತಿಪಾದಿಸಿದ್ದಾರೆ. ಭಾರತದ ಸಂದರ್ಭದಲ್ಲಿ ಜಾತಿ ನೆಲೆಗಳ ಬಗ್ಗೆ ವಿಭಿನ್ನವಾದ ಅಭಿಪ್ರಾಯಗಳಿವೆ. ಧರ್ಮಾಧಾರಿತ ನೆಲೆಗಳು ಆಚಾರ-ವಿಚಾರ, ಧಾರ್ಮಿಕ ನಂಬಿಕೆಗಳ ಮೇಲೆ ನಿಂತಿದೆ. ಸಾಂಸ್ಕೃತಿಕವಾಗಿ ಹೇಳುವುದಾದರೆ ಆಹಾರ ಪದ್ಧತಿ, ದೇವರುಗಳ ಆರಾಧನೆ ವಿಧಾನ, ಉಡುಗೆ-ತೊಡುಗೆ, ಸಮಾಜದ ಮುಂದೆ ಜಾತಿ ನೆಲೆಗಳು ತಮ್ಮ ತಮ್ಮ ಬೇರೆ ಬೇರೆ ವಾಸಿಸುವ ಕೇರಿಗಳಾಗಿರುವುದು, ಕಸುಬುಗಳಿಂದ ಗುರುತಿಸಿ, ಅಸಮಾನತೆಗಳನ್ನು ಸೃಷ್ಟಿಸಿಕೊಂಡು ಅಸ್ಪೃಶ್ಯರಾಗಿಸಿವೆ. ಈ ಪುಸ್ತಕದಲ್ಲಿ ಬರುವ ಮತ್ತೊಂದು ಸಂಗತಿಯೆಂದರೆ ಪರಕೀಯರಾದ ಆರ್ಯರು ಭಾರತಕ್ಕೆ ಬಂದು ಅತಿಕ್ರಮಣ ಮಾಡಿದರು. ಆಮೇಲೆ ಬೌದ್ಧ ಧರ್ಮವನ್ನು ಸ್ವೀಕರಿಸಿದ ಶೂದ್ರರನ್ನು ಕೂಡ ಅಸ್ಪೃಶ್ಯರೆಂದು ಗುರುತಿಸಿರುವುದನ್ನು ನಾವು ಕಾಣಬಹುದು. ಈ ಶೂದ್ರರು ಬರುಬರುತ್ತಾ ಸ್ಪೃಶ್ಯ ಜಾತಿಗೆ ಸೇರಿಬಿಡುತ್ತಾರೆ. ಸಾಮಾಜಿಕ ಅಸಮಾನತೆಗಳಿಗೆ ಸಿಕ್ಕಿಕೊಂಡವರೆಂದರೆ ಕೇವಲ ಅಸ್ಪೃಶ್ಯರು ಮಾತ್ರ. ಪ್ರಾಚೀನ ಕಾಲದಿಂದಲೂ ಆಧುನಿಕ ಕಾಲದವರೆಗೆ ಹಾಗೂ ಪ್ರಸ್ತುತದಲ್ಲಿಯೂ ಕೂಡ ಅಸ್ಪೃಶ್ಯತೆ ನಿರಂತರತೆಯನ್ನು ಹೊಂದಿದೆ.

ಸ್ವಾತಂತ್ರ್ಯದ ಭಾರತದಲ್ಲಿ ಸಂವಿಧಾನಾತ್ಮಕ ಪ್ರಜಾಪ್ರಭುತ್ವವಾದ ಮೇಲೆ ಚುನಾವಣಾ ಪ್ರಕ್ರಿಯೆಗಳನ್ನು ಸಿದ್ಧಗೊಳಿಸಿ, ಪ್ರತಿನಿಧೀಕರಣದ ಮೂಲಕ ಸಾಮಾಜಿಕ ಸಮಾನತೆ, ಆರ್ಥಿಕ ಸಬಲೀಕರಣ, ಶಿಕ್ಷಣ, ಮೂಲಭೂತ ಸೌಲಭ್ಯಗಳು, ರಾಜಕೀಯ ಸಮಾನತೆಗಾಗಿ ಹಾಗೂ ಗ್ರಾಮೀಣ ಅಭಿವೃದ್ಧಿಗಾಗಿ ಹಲವಾರು ಸಮಿತಿಗಳನ್ನು(Commissions) ರಚನೆ ಮಾಡಿದರು. ಇದರ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು "ಗಾಂಧೀಜಿಯವರು ಹೇಳುವಂತೆ ಗ್ರಾಮ ಸ್ವರಾಜ್ಯವಾಗಿಸಲು, ಅಧಿಕಾರ ವಿಕೇಂದ್ರೀಕರಣಗೊಳಿಸಲು ಹಾಗೂ ಗ್ರಾಮೀಣ ಪ್ರದೇಶವನ್ನು ೩ನೇ ಸರ್ಕಾರವಾಗಿಸಲು ಪಂಚಾಯತ್ ರಾಜ್ ವ್ಯವಸ್ಥೆ ೧೯೯೩ರ ಅಧಿನಿಯಮ- ೭೩ನೇ, ೭೪ನೇ ತಿದ್ದುಪಡಿಗಳನ್ನು ಕೇಂದ್ರ ಸರ್ಕಾರ ಭಾರತದಾದ್ಯಂತ ಒಂದೇ ಮಾದರಿ ಸರ್ಕಾರವನ್ನು ಅನುಷ್ಠಾನಗೊಳಿಸಿತು. ಆದರೆ ಗ್ರಾಮೀಣ ಪ್ರದೇಶಗಳನ್ನು ಯಜಮಾನಿಕೆಗಳಿಂದ ಕೂಡಿದ ಪ್ರತಿನಿಧೀಕರಣವನ್ನು ಹೊರಗೆ ತರಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಇರುವ ಕಾರ್ಯಕಾರಣ ಸಂಬಂಧಗಳನ್ನು ಕುರಿತು ನಡೆದಿರುವ ಅಧ್ಯಯನಗಳು ಜಾತಿಯ ಸಾಂಸ್ಕೃತಿಕ ವಿಕಾರಗಳು ತಳಸಮುದಾಯಗಳ ಸಾಮಾಜಿಕ ಭಾಗವಹಿಸುವಿಕೆಯನ್ನು ತಡೆಯುವ ಜೊತೆಜೊತೆಗೆ ಅಭಿವೃದ್ಧಿವಂಚಿತರಾಗಿಸುವ ಸಂಗತಿಗಳನ್ನು ಗುರುತಿಸಿವೆ.

ಭಾರತದಲ್ಲಿ ಎಲ್ಲಿ ಅಸ್ಪೃಶ್ಯತೆ ಆಚರಣೆ, ಧಾರ್ಮಿಕ ನಂಬಿಕೆಗಳು, ರೂಢಿ-ಸಂಪ್ರದಾಯಗಳು ಅಧಿಕವಾಗಿದೆಯೋ ಅಲ್ಲಿ ವಿಕೇಂದ್ರೀಕರಣವು ಸಂವಿಧಾನಾತ್ಮಕ ಹಕ್ಕಾದರೂ, ಆಳುವ ವರ್ಗಗಳ ನಾಯಕರು ಕೊಡುತ್ತಿರುವ ಅನುಕಂಪದ ಅಧಿಕಾರವಾಗಿದೆಯೇ ವಿನಾಃ ಪ್ರಜಾಪ್ರಭುತ್ವದ ಸಂವಿಧಾನಾತ್ಮಕ ಸ್ವಾತಂತ್ರ್ಯವಲ್ಲ. ಇಂದು ಪಂಚಾಯತ್‌ರಾಜ್ ವ್ಯವಸ್ಥೆಯು ಸಮಾನತೆಯ ಪರಿಕಲ್ಪನೆಯಲ್ಲಿ ಅಸಮಾನ ಅಧಿಕಾರ ಮತ್ತು ಅಭಿವೃದ್ಧಿಯ ಸಂಕೇತದಲ್ಲಿ ಅನಭಿವೃದ್ಧಿ ಸೂಚಕವಾಗಿದೆ. ಸಂವಿಧಾನದ ೭೩ನೇ

ತಿದ್ದುಪಡಿಯು ಗ್ರಾಮ ಪಂಚಾಯಿತಿಗಳಲ್ಲಿ ಪ್ರಜಾಪ್ರಭುತ್ವದ ಬೇರುಗಳನ್ನು ವಿಸ್ತರಿಸುವ ಸಲುವಾಗಿ ಜನರ ಭಾಗವಹಿಸುವಿಕೆಯನ್ನು ಸಂವಿಧಾನದ ಆಶಯದಲ್ಲಿ ಪ್ರಸ್ತಾಪಿಸುವಂತೆ ಸಮಾನತೆ, ಸ್ವಾತಂತ್ರ್ಯ ಸಹೋದರತ್ವ ನೆಲೆಯಲ್ಲಿ ಆಚರಣೆಗೆ ತರಲು ಆಶಯ ಹೊಂದಿದೆ. ಈ ಹಿನ್ನೆಲೆಯಲ್ಲಿ ಸ್ಥಳೀಯ ಸರ್ಕಾರಗಳಲ್ಲಿ ಗ್ರಾಮಸಭೆ, ವಾರ್ಡ್ ಸಭೆ, ಪಂಚಾಯಿತಿ ಸಭೆ ಇತ್ಯಾದಿ ಆಡಳಿತಾತ್ಮಕ ಪ್ರಕ್ರಿಯೆಗಳಲ್ಲಿ ಸಾಮಾಜಿಕ ನ್ಯಾಯವನ್ನು ಆಚರಣೆಗೆ ತರುವ ಸಲುವಾಗಿ ಗ್ರಾಮ ಪಂಚಾಯಿತಿಗಳಲ್ಲಿ ಸ್ಥಾಯಿ ಸಮಿತಿಗಳನ್ನು ರಚಿಸಲಾಗಿದೆ. ಈ ಸ್ಥಾಯಿ ಸಮಿತಿಗಳು ಸಾಮಾಜಿಕ ಪ್ರಜಾಪ್ರಭುತ್ವವನ್ನು ಪ್ರತಿಪಾದಿಸುವ ಆಶಯದ ನೆಲೆಯಲ್ಲಿ ಸಭೆಗಳನ್ನು ನಡೆಸಿರುವುದು ದಾಖಲೆಗಳಲ್ಲಿ ಮಾತ್ರ; ಡಾ. ಬಿ.ಆರ್. ಅಂಬೇಡ್ಕರ್ ಅವರು ತಮ್ಮ ಮೊದಲ ಪುಸ್ತಕವಾದ ಜಾತಿವಿನಾಶದಲ್ಲಿ ಭಾರತದ ಸಾಮಾಜಿಕ ರಚನೆಯಲ್ಲಿ ಆದರಲ್ಲಿಯೂ ಗ್ರಾಮೀಣ ಪ್ರದೇಶದಲ್ಲಿ ಒಬ್ಬ ವ್ಯಕ್ತಿಯ ಚಲನೆ ಅವರ ಹುಟ್ಟು ಮತ್ತು ಅವರ ಸಾಮಾಜಿಕ ಹಿನ್ನೆಲೆಯಿಂದ ರೂಪಿತವಾಗುತ್ತದೆ ಎಂಬುದು ಈಗಲೂ ವಾಸ್ತವ ಸಂಗತಿ ಎನ್ನುವುದನ್ನು ಈ ಅಧ್ಯಯನವು ನಮಗೆ ತಿಳಿಸುತ್ತದೆ.

ಹುಲ್ಲೋಳಿ ಎಂ.ಎಸ್. ಅವರ "ಹಳ್ಳಿಯ ಬೃಹತ್ ಯೋಜನೆ" ಎಂಬ ಪುಸ್ತಕದಲ್ಲಿ ಮಾನವ ಸಮಾಜವು ಗ್ರಾಮೀಣ ಸಮೂಹದ ತೊಟ್ಟಿಲು ಎಂದು ಪ್ರತಿಪಾದಿಸಿದ್ದಾರೆ. ಹಾಗೆಯೇ "ಹಳ್ಳಿಗಳನ್ನು ದೇವರು ಸೃಷ್ಟಿಸಿದ, ನಗರಗಳನ್ನು ಮಾನವ ಸೃಷ್ಟಿಸಿದ" ಎಂದಿರುವರು. ಜಾಗತಿಕವಾಗಿ ಧರ್ಮವನ್ನು ದೇವರನ್ನು ಪ್ರತಿಪಾದಿಸಿ, ಜಾತಿಪದ್ಧತಿಗೆ ಮೂಲವಾಗಿಸಿದ್ದಾರೆ. ದೇವರು, ಧರ್ಮ ಹಿಂದೂ ಧರ್ಮದ ಉಗಮದ ನೆಲೆಯಾಗಿದೆ. ಇವರೇ ಹೇಳಿರುವಂತೆ ಗ್ರಾಮೀಣ ಭಾಗದಲ್ಲಿ ಬಲವಾದ ಅಸ್ಪೃಶ್ಯತೆ, ಶೋಷಣೆ ಸಾಂಸ್ಕೃತಿಕ ನೆಲೆಗಳಿಂದ ಉಗಮವಾದ ಸಂಗತಿಯಾಗಿದೆ. ಗ್ರಾಮೀಣ ಭಾಗದ ತಳಸಮುದಾಯಗಳು ಧರ್ಮದ ನೆಲೆಯಲ್ಲಿ ಶೋಷಣೆಗೆ ಗುರಿಯಾಗಿ, ಗ್ರಾಮೀಣ ಸಮಾಜವು ಜನತೆಯ ಸಹಭಾಗಿತ್ವದಲ್ಲಿ ಅಸ್ಪೃಶ್ಯತೆಯ ದೊಡ್ಡ ತೊಡಕನ್ನು ಕಾಣಬಹುದಾಗಿದೆ. ಈ ಕೃತಿಯು ಪುಟ ೧೨ರಲ್ಲಿ ಡಾ. ಅಂಬೇಡ್ಕರ್ ಅವರ ಚಿಂತನೆಗಳನ್ನು ಉಲ್ಲೇಖಿಸಿರುವಂತೆ. ಜಾತಿ ವ್ಯವಸ್ಥೆಯು ನಿಜವಾಗಿಯೂ ದಾಸ್ಯವರ್ಗಗಳ ಮೇಲೆ ಆಳುವ ವರ್ಗಗಳು ಹೇರಲ್ಪಟ್ಟ ನಿರ್ಬಂಧವಾಗಿದೆ. ಪ್ರಸ್ತುತದಲ್ಲಿಯೂ ತಳಸಮುದಾಯಗಳು ಆಳುವ ವರ್ಗಗಳ ಅಡಿಯಾಳುಗಳಾಗಿದ್ದಾರೆ.

ಪ್ರಜಾಪ್ರಭುತ್ವ ಎಂದರೆ ಕೇವಲ ಸರ್ಕಾರದ ಒಂದು ಪ್ರಕಾರವಲ್ಲ. ಅದು ಪ್ರಾಥಮಿಕವಾಗಿ ಗ್ರಾಮೀಣ ಜನತೆಯ ಸಂಯೋಜಿತ ಜೀವನದ ಒಂದು ಮಾದರಿ. ಸಂಪರ್ಕದ ಮೂಲಕ ಜನಸಮೂಹವು ಒಟ್ಟುಗೂಡಿ ನಡೆಸುವುದೇ ಸರ್ಕಾರ. ಆದರೆ ಇದಕ್ಕೆ ವಿರುದ್ಧವಾಗಿ ಧರ್ಮದ ನೆಲೆಯಲ್ಲಿ ಅಸ್ಪೃಶ್ಯದ ಅಂತರ ದಲಿತರ ಪಾಲಿಗೆ ದೊಡ್ಡ ದುರಂತವಾಗಿದೆ. ಮೇಲು-ಕೀಳು, ಬಡವ-ಶ್ರೀಮಂತ, ಸ್ಪೃಶ್ಯ-ಅಸ್ಪೃಶ್ಯ ಅಂತರದ ವಿಭಿನ್ನ ಶೋಷಣೆಯ ನೆಲೆಗಳು ಬಲವಾಗಿ ಹಳ್ಳಿಗಳಲ್ಲಿ ಬೇರುಬಿಟ್ಟಿದೆ. ಹೀಗಿರುವಾಗ ಮಂಡಲ ಪಂಚಾಯಿತಿ ಹಾಗೂ ೧೯೯೩ರ ೭೩ನೇ ಕಾಯ್ದೆ ಪಂಚಾಯತ್‌ರಾಜ್ ವ್ಯವಸ್ಥೆಯು ರೂಪಿಸುವ ಸ್ಥಳೀಯ ಸರ್ಕಾರಗಳು, ಗ್ರಾಮ ಪಂಚಾಯಿತಿಗಳಿಂದ

ಹಾಗೂ ಸ್ವಯಂ ಸೇವಾ ಸಮಿತಿಗಳಿಂದ ಅಭಿವೃದ್ಧಿ ಮತ್ತು ಅಧಿಕಾರ ವಿಕೇಂದ್ರೀಕರಣ ಪಡೆಯಲು ಸಾಧ್ಯವಾಗುತ್ತಿದೆಯೇ? ಅಂದರೆ ಸಂಪೂರ್ಣವಾಗಿ ವಿಫಲತೆ ಹೊಂದಿದೆ ಎಂದಲ್ಲ. ಗ್ರಾಮೀಣ ಭಾಗಕ್ಕೆ ಬೇಕಾದ ಅವಶ್ಯಕವಾದ ಬೇಕು-ಬೇಡಗಳು ಸಿಗುತ್ತಿಲ್ಲ. ಅಭಿವೃದ್ಧಿ ಅಧಿಕಾರ ಪಾಳೇಗಾರಿಕೆಯಲ್ಲಿ ಅಡಗಿದೆ. ಸಂವಿಧಾನದ ತಿದ್ದುಪಡಿ ನಂತರ ಅಂದರೆ ೧೯೯೩ರ ನಂತರ ಪಂಚಾಯತ್‌ರಾಜ್ ವ್ಯವಸ್ಥೆಯು ಅನೇಕ ಬಗೆಯ ಬದಲಾವಣೆಗಳನ್ನು ತಳಮಟ್ಟದಲ್ಲಿ ತಂದಿದೆ. ಇದರಲ್ಲಿ ಯಾವುದೇ ಅನುಮಾನಗಳಿಲ್ಲ. ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಸ್ಥಳೀಯ ಸರ್ಕಾರ ಮತ್ತು ಗ್ರಾಮಗಳ ಬಗ್ಗೆ ಇದ್ದ ಅವರ ಸಿಟ್ಟು ಗ್ರಾಮೀಣ ಪ್ರದೇಶಗಳೇ ನನ್ನ ಕನಸಿನ ಭಾರತದಲ್ಲಿರಬಾರದು ಎನ್ನುವಷ್ಟರಮಟ್ಟಿಗೆ ಇತ್ತು. ಆದರೆ ೭೩ನೇ ತಿದ್ದುಪಡಿಯ ನಂತರ ಗ್ರಾಮ ಪಂಚಾಯಿತಿಯು ದಲಿತರಿಗೆ ಸಿಗಬೇಕಾದ ಸಾಂವಿಧಾನಿಕ ರಾಜಕೀಯ ಸ್ವಾತಂತ್ರ್ಯವನ್ನು ಸ್ವಲ್ಪಮಟ್ಟಿಗೆ ವಿಸ್ತರಿಸಿದೆ. ಈ ವಿಸ್ತರಣೆಯು ದಲಿತರ ಆರ್ಥಿಕ ಮತ್ತು ಸಾಮಾಜಿಕ ಸ್ಥಿರತೆಯ ಮೇಲೆಯೂ ನಿಂತಿದೆ ಎಂಬುದರ ಬಗ್ಗೆ ಅನುಮಾನವಿಲ್ಲ. ಆದರೆ ಸ್ಥಳೀಯ ಸರ್ಕಾರಗಳು ಸಂವಿಧಾನಬದ್ಧವಾಗಿ ಜಾರಿಗೆ ಬಂದನಂತರ ದಲಿತರಿಗೆ ಮತ್ತು ಮಹಿಳೆಯರಿಗೆ ರಾಜಕೀಯ ಹಕ್ಕು ದೊರೆತು ಪಾಳೇಗಾರಿಕೆ ಮತ್ತು ಪ್ರಬಲ ರಾಜಕಾರಣಕ್ಕೆ ತಡೆಬಿದ್ದಿದೆ ಎನ್ನುವುದನ್ನು ಈ ಅಧ್ಯಯನವು ಗುರುತಿಸುತ್ತದೆ. ಹೀಗೆ ತೊಂಬತ್ತರ ದಶಕದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಗೆ ಸಂವಿಧಾನಾತ್ಮಕ ರೂಪಪಡುವ ಪ್ರಯತ್ನಗಳು ನಡೆಯುತ್ತಿರುವ ಸಂದರ್ಭದಲ್ಲಿಯೇ ಭಾರತವು ಜಾಗತೀಕ ಮಾರುಕಟ್ಟೆಗೆ ತೆರೆದುಕೊಂಡಿತು. ಈ ಮಾರುಕಟ್ಟೆ ಆಧಾರಿತ ಅಭಿವೃದ್ಧಿಗೆ ತೆರೆದುಕೊಳ್ಳುವ ಕಾಲಘಟ್ಟದಲ್ಲಿಯೇ ಸ್ಥಳೀಯ ಸರ್ಕಾರಗಳ ಪರಿಕಲ್ಪನೆಗೆ ಸಾಂವಿಧಾನಿಕ ಒಪ್ಪಿಗೆ ದೊರೆಯಿತು. ಇದು ಸಂವಿಧಾನ ಆಶಯಕ್ಕೆ ಪೂರಕವಾಗಿ ಕಂಡರೂ ತನ್ನೊಳಗೆ ಅನೇಕ ವೈರುಧ್ಯಗಳನ್ನು ಸೃಷ್ಟಿಸಿತು ಎನ್ನುವುದನ್ನು ಈ ಪುಸ್ತಕದಲ್ಲಿ ಲೇಖಕರು ಸೂಕ್ಷ್ಮವಾಗಿ ದಾಖಲಿಸಿದ್ದಾರೆ.

ಕೃಷ್ಣ ಕೊತಾಯ ಅವರ ಗ್ರಾಮಾಭಿವೃದ್ಧಿ ಕೆಲವು ಚಿಂತನೆಗಳು: ಕೃತಿಯಲ್ಲಿ ಪುಟ ೫ರಲ್ಲಿ ಕೊತಾಯಿಯವರು ರವೀಂದ್ರನಾಥ ಟಾಗೂರರ ವ್ಯಾಖ್ಯೆಯನ್ನು ವಿಶ್ಲೇಷಿಸಿದ್ದಾರೆ. ಹೇಗೆಂದರೆ "ಭಾರತೀಯ ಗ್ರಾಮ ಆರ್ಥಿಕ ಮುನ್ನಡೆಯ ಒಂದು ಚಿಹ್ನೆ. ಭಾರತೀಯ ಗ್ರಾಮಗಳ ಆರ್ಥಿಕ ಬಿಡುಗಡೆ, ಎಲ್ಲಾ ಹಳ್ಳಿಗಳ ಸರ್ವತೋಮುಖ ಅಭಿವೃದ್ಧಿಯಲ್ಲಿದೆ. ಗಗನಚುಂಬಿ ಕಟ್ಟಡಗಳಲ್ಲಿಲ್ಲ ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ಸ್ವಾತಂತ್ರ್ಯಪೂರ್ವದಿಂದ ಮೊದಲಗೊಂಡು ಭಾರತದ ಸ್ವಾತಂತ್ರ್ಯದ ನಂತರದಲ್ಲಿ ಕೂಡ ನಾಗರಿಕತೆಗಳ ಅಭಿವೃದ್ಧಿಯಿಂದ, ಪಂಚಾಯಿತಿಗಳ ಉಗಮದ ಕಾಲದಿಂದಲೂ ಕೂಡ ಬಂಡವಾಳಶಾಹಿಗಳ, ವಸಾಹತುಶಾಹಿಗಳ, ಭೂಮಾಲೀಕತ್ವ, ಯಜಮಾನಿಕೆ ಮೊದಲಗೊಂಡು ಶ್ರೀಮಂತಿಕೆಗೆ ಮಣೆಹಾಕುವ ವ್ಯವಸ್ಥೆಯಾಗಿ ಬರುತ್ತಿದೆ. ಇತ್ತೀಚಿನ ಆಧುನಿಕ ಕಾಲದಲ್ಲಿಯೂ ಖಾಸಗೀಕರಣ, ಉದಾರೀಕರಣ, ಜಾಗತೀಕರಣದ ಹಿಡಿತದಲ್ಲಿಯೇ ಮುಂದುವರಿದುಕೊಂಡು ಬರುತ್ತಿರುವ ಸರ್ಕಾರಗಳಾಗಿವೆ.

ಈ ಸ್ಥಳೀಯ ಸರ್ಕಾರಗಳ ಕಾರ್ಯವೈಖರಿಯನ್ನು ಗುರುತಿಸಿದಾಗ ಯಾವ ರೂಪದ ಅಭಿವೃದ್ಧಿ ಮತ್ತು ಅಧಿಕಾರ ವಿಕೇಂದ್ರೀಕರಣ ಎಂಬುದು ಗೊತ್ತಾಗುತ್ತದೆ. ಪಂಚಾಯತ್‌ರಾಜ್ ವ್ಯವಸ್ಥೆಯ ಸಾಧನೆಗಳು ಮತ್ತು ಅಭಿವೃದ್ಧಿಗೆ ಹಾಗೂ ಅಧಿಕಾರ ವಿಕೇಂದ್ರೀಕರಣಕ್ಕೆ ನೀಡಿರುವ ಸಾಧ್ಯತೆಗಳನ್ನು ಗುರುತಿಸಿದಾಗ ಗೊತ್ತಾಗುತ್ತದೆ. ನಮ್ಮ ಹಳ್ಳಿಗಳಲ್ಲಿ ಜಾತಿ-ಲಿಂಗ ಆಧಾರಿತ ಸಾಮಾಜಿಕ ಅಸಮಾನತೆಗೆ ಪಂಚಾಯತ್‌ರಾಜ್ ನೀಡಿದ ಪೆಟ್ಟು ಸಣ್ಣದೇನಲ್ಲ. ನಾಯಕತ್ವ ಮತ್ತು ನಿರ್ಣಯಗಳು ಕೈಗೊಳ್ಳುವಲ್ಲಿ ಹಾಗೂ ಸಂವಿಧಾನಾತ್ಮಕ ಮೀಸಲಾತಿ ಹಕ್ಕು ಹಂಚಿಕೆ ವಿಚಾರದಲ್ಲಿ, ಜಾತಿ-ಲಿಂಗ ಅಸಮಾನತೆಯನ್ನು ತಳಮಟ್ಟದಿಂದಲೂ ಬಲಗೊಳಿಸಿಕೊಂಡೇ ಬಂದಿದೆ. ಸಾಮಾಜಿಕ ಅಸಮಾನತೆಗಳನ್ನು ತೊಡೆದು ಹಾಕುವ ಕೆಲಸ ೨ ದಶಕಗಳಲ್ಲಿ ಕರ್ನಾಟಕದ ಗ್ರಾಮ ಪಂಚಾಯಿತಿಗಳು ಸಾಮಾಜಿಕ ನ್ಯಾಯ ಕಮಿಟಿ ಸಭೆಗಳನ್ನು ಕರೆದು, ಅಸ್ಪೃಶ್ಯತೆ ಬಗ್ಗೆಯಾಗಲಿ, ಜಾತಿಪದ್ಧತಿಗಳ ಬಗ್ಗೆಯಾಗಲಿ, ದಲಿತರ ಬಹಿಷ್ಕಾರಗಳ ಬಗ್ಗೆಯಾಗಲಿ ಸಭೆ ಕರೆದು ಸಂಬಂಧಪಟ್ಟಂತೆ ಚರ್ಚೆ ಮಾಡಿರುವುದಾಗಲಿ, ಸಮಾನತೆಯ ಕಾಪಾಡುವ ಬಗ್ಗೆಯಾಗಲಿ ಚರ್ಚೆಗಳಾಗಿರುವುದು ಕಂಡು ಬರುವುದಿಲ್ಲ. ಈ ರೀತಿಯ ಅಭಿವೃದ್ಧಿ ಮತ್ತು ಅಧಿಕಾರದ ವಿಕೇಂದ್ರೀಕರಣದ ಬಗ್ಗೆ ಸೂಕ್ತ ರೀತಿಯಲ್ಲಿ ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರಗಳಾಗಲಿ ಉಸ್ತುವಾರಿ ವಹಿಸಿ ಸದನಗಳಲ್ಲಿ ಅಸ್ಪೃಶ್ಯತೆಯ ಬಗ್ಗೆ ಧ್ವನಿ ಎತ್ತಿರುವ, ಚರ್ಚೆ ಮಾಡಿರುವ ವಿಚಾರ ಕೇಳಿ ಬಂದಿಲ್ಲ. ಮೇಲ್ನೋಟಕ್ಕೆ ಅಸ್ಪೃಶ್ಯತೆಯನ್ನು ತೊಡೆದು ಹಾಕಬೇಕು. ಸಾಮಾಜಿಕ ಸಮಾನತೆಯನ್ನು ಕಾಪಾಡಬೇಕು. "ಸರ್ವಜನ ಸುಖಿನೋ ಭವ" ಎಂಬ ಮಂತ್ರಗಳು ಸಾಮಾಜಿಕ ಪ್ರಜಾಪ್ರಭುತ್ವವನ್ನು ಪ್ರತಿಪಾದಿಸುವುದಿಲ್ಲ. ಅದು ಸಮಾತೆಯ ಆಶಯವನ್ನು ಮಾತ್ರ ಹೇಳುತ್ತದೆ. ನಮಗೆ ಸಾಮಾಜಿಕ ಪ್ರಜಾಪ್ರಭುತ್ವವನ್ನು ಆಚರಣೆಗೆ ತರಲು ಇರುವ ಬಹಳ ದೊಡ್ಡ ಸಂವಿಧಾನಿಕ ಸಂಸ್ಥೆ ಎಂದರೆ ಸ್ಥಳೀಯ ಸರ್ಕಾರಗಳು. ಇದನ್ನು ನಾವು ಪ್ರಜಾಪ್ರಭುತ್ವದ ನೆಲೆಯಲ್ಲಿಯೇ ಕಟ್ಟಿಕೊಳ್ಳಬೇಕು ಎಂದು ಹೇಳುವಾಗಲೇ ಪ್ರಜಾಪ್ರಭುತ್ವ ಎನ್ನುವುದು ಭಾರತದಲ್ಲಿ ತೋರಿಕೆಯ ನೆಲೆಯಲ್ಲಿ ನಡೆಯುತ್ತಿದೆ ಎನ್ನುವುದನ್ನು ಜೆಮ್ಸ್ ಮೆನರ್ ಅವರು ತಮ್ಮ ಇತ್ತೀಚಿನ ಪುಸ್ತಕವಾದ ಪೊಲಿಟಿಕ್ಸ್ ಎಕನಾಮಿಯಲ್ಲಿ ವಿಶ್ಲೇಷಿಸಿದ್ದಾರೆ.

ಕಳೆದ ೭೦ ವರ್ಷಗಳಲ್ಲಿ ಪ್ರಜಾಪ್ರಭುತ್ವದ ಆಶಯದ ನೆಲೆಯಲ್ಲಿ ಜಾರಿಗೆ ಬಂದ ಆಧುನಿಕ ಸಂಸ್ಥೆಗಳು ಕೂಡ ಹಳ್ಳಿಗಳಲ್ಲಿ, ಓಣಿಗಳನ್ನು ಕೇರಿಗಳನ್ನು ಸಮಾನತೆಯ ನೆಲೆಯಲ್ಲಿ ರೂಪಿಸುವಲ್ಲಿ ಸೋತಿದೆ. ಆಧುನಿಕತೆ ತಂದಿರುವ ಬದಲಾವಣೆಗಳು ಭೌತಿಕವಾಗಿವೆಯೇ ಹೊರತು ಅವು ಸಮಾನತೆಯ ಆಶಯವನ್ನು ಹೃದಯದೊಳಗಿಂದ ಆಚರಣೆಗೆ ತರದಿರುವ ಕಾರಣಗಳಿಂದಾಗಿ ಅಸ್ಪೃಶ್ಯತೆ, ಅಸಮಾನತೆ, ಬಡತನ ನಿವಾರಣೆ, ಹಸಿವು, ಉದ್ಯೋಗ, ಆಹಾರ, ಆರೋಗ್ಯ, ನೈರ್ಮಲ್ಯೀಕರಣ, ರಸ್ತೆ, ಚರಂಡಿ, ನೀರು ಇನ್ನು ಮುಂತಾದ ಸಾಮಾಜಿಕ ಮೂಲಸೌಲಭ್ಯಗಳು ಅಸ್ಪೃಶ್ಯ ಜಾತಿಗೆ ದೊರಕುವುದು ಕನಸಾಗಿದೆ. ಅಸಮಾನತೆಯ ಅಂತರಗಳು ಸೃಷ್ಟಿಸುವ ಶೋಷಣೆಯಿಂದ ಬಿಡುಗಡೆಗೊಂಡಿಲ್ಲ. ಅದಕ್ಕೆ ಹಳ್ಳಿಗಳನ್ನು ಹಳ್ಳಿಗಳ ಅಭಿವೃದ್ಧಿ ಅಥವಾ ಅಧಿಕಾರ ವಿಕೇಂದ್ರೀಕರಣ ಎನ್ನಬೇಕೇ?

ಯಜಮಾನಿಕೆಯಿಂದ ಕೂಡಿದ ಪ್ರಬಲ ಜಾತಿ ವ್ಯವಸ್ಥೆ ಎಂದು ಕರೆಯಬೇಕೆ ಎನ್ನುವ ಪ್ರಶ್ನೆಯನ್ನು ನಮ್ಮ ಮುಂದಿಡುತ್ತದೆ.

ದಿಲೀಪ್ ಕಾಮತ್ ಅವರು ನೀಡಿದ "ಅಭಿವೃದ್ಧಿಯಲ್ಲಿ ಮಾರ್ಕ್ಸ್, ಪುಲೆ, ಅಂಬೇಡ್ಕರ್ ಮತ್ತು ಗಾಂಧೀಜಿ ವಿಚಾರಗಳ ಪ್ರಸ್ತುತತೆ" ಎನ್ನುವ ಉಪನ್ಯಾಸದಲ್ಲಿ ಪುಲೆಯವರು ಸಮಾನತೆ, ಸಾಮಾಜಿಕ ನ್ಯಾಯ, ಗುಣಮಟ್ಟದ ಶಿಕ್ಷಣ, ಆರ್ಥಿಕ ಬದಲಾವಣೆ, ರಾಜಕೀಯ ಸ್ವಾತಂತ್ರ್ಯದ ಬಗ್ಗೆ ಅಂಬೇಡ್ಕರ್‌ರಗಿಂತ ಮೊದಲ ಮುಂಚೂಣಿಯಲ್ಲಿದ್ದವರು. ಈ ಸಮುದಾಯಗಳ ಬದಲಾವಣೆಗೆ ಸಾಕಷ್ಟು ಸ್ವಯಂಪ್ರೇರಿತರಾಗಿ ಸುಧಾರಣೆ ತರಲು ಪ್ರಯತ್ನಿಸಿದವರು. ಅಸ್ಪೃಶ್ಯತೆ ಬಲವಾಗಿದ್ದ ಬ್ರಿಟಿಶ್ ಆಡಳಿತದಲ್ಲಿ ದಲಿತರಿಗಾಗಿ ಶಾಲೆಗಳನ್ನು ತೆರೆದವರು. ಈ ರೀತಿ ಇರುವಾಗ ಬ್ರಿಟಿಶರ ಕಾಲಕ್ಕೆ ಕೃಷಿ ಬಗ್ಗೆ ನೀಡಿದ ಕೃತಿಯಲ್ಲಿ ತಳಸಮುದಾಯಗಳ ಭೂ ಹಂಚಿಕೆಯಾಗಬೇಕು. ಉತ್ಪಾದನೆಯನ್ನು ಈ ಸಮುದಾಯಗಳು ಮಾಡಬೇಕು. ಕೃಷಿಯಿಂದ ಅಭಿವೃದ್ಧಿ ಸಾಧ್ಯವೆಂಬುದು ಕೃತಿಯಲ್ಲಿ ನಮೂದಿಸಿರಬಹುದು. ಇದ್ದರೂ ಕೂಡ ಸ್ವಾತಂತ್ರ್ಯಾನಂತರ ಒಂದು ಪ್ರಜಾಪ್ರಭುತ್ವದಲ್ಲಿ ಸರ್ಕಾರಗಳು ಪ್ರಾರಂಭವಾದ ಮೇಲೆ ಸಂವಿಧಾನಿಕವಾಗಿ ಗಣರಾಜ್ಯವಾದ ಮೇಲೆ ಸಂವಿಧಾನಿಕ ಹಕ್ಕುಗಳು. ಮೂಲಭೂತ ಸೌಲಭ್ಯಗಳು ರೂಪಿಸಿದರೂ ಸಕ್ರಮ ಅನುಷ್ಠಾನವು ಕಳಪೆಯಾಗಿರುವುದರಿಂದ, ತಳಸಮುದಾಯಗಳಿಗಾಗಿ ಭೂಮಿ ಕೊಡಲು ಹಿಂಜರಿಯುವಾಗ, ಅಭಿವೃದ್ಧಿ ಹೊಂದಲು ಹೇಗೆ ಸಾಧ್ಯ. ಪುಲೆಯವರ ಕೃಷಿ ಕೃತಿ ಎಷ್ಟರಮಟ್ಟಿಗೆ ಸಮಾಜದ ಸಮುದಾಯಗಳಿಗೆ ಉಪಯುಕ್ತ ವಾಗಿರಬಹುದು.

ಇತ್ತೀಚಿನ ರಿಯಲ್ ಎಸ್ಟೇಟ್‌ಗಳ ದಂಧೆಗಳೇ ಹಿಂದಿನ ಗ್ರಾಮೀಣ ಪ್ರದೇಶಗಳಲ್ಲಿ ಬಲಾಢ್ಯರ ದೌರ್ಜನ್ಯಗಳು, ಬಡವರ, ದಲಿತರ ಜಮೀನುಗಳನ್ನು ಕೊಳ್ಳೆ ಹೊಡೆದು ಭೂಮಾಲೀಕತ್ವ ಸಾಧಿಸಿಕೊಂಡಿದ್ದಾರೆ. ಇವುಗಳನ್ನು ಸರ್ಕಾರಗಳು ನಿಯಂತ್ರಿಸುವಲ್ಲಿ ವಿಫಲವಾಗಿವೆ. ಸರ್ಕಾರಗಳು ಕೇವಲ ಮತ ಗಳಿಸುವ ವಿಧಾನ ಮೊತ್ತವಾಗಿರುತ್ತದೆ, ಜನಸಾಮಾನ್ಯರ ಅಭಿವೃದ್ಧಿ ನೆಪ ಮಾತ್ರದಾಗಿರುತ್ತದೆ.

ಬ್ರಾಹ್ಮಣೀಕರಣವು ಮನುಷ್ಯ ಹುಟ್ಟಿದ ಕೂಪದಿಂದ ಸಾಯುವವರೆಗೂ ಶೋಷಣೆ ಮಾಡುತ್ತಾ ಬಂದಿವೆ. ಹೇಳುವುದಾದರೆ ಸಂವಿಧಾನಾತ್ಮಕ ಕಾನೂನು ರೂಪಿಸಿದರೂ ಅಸ್ಪೃಶ್ಯತೆ ನಿವಾರಣೆಯಾಗುತ್ತಿಲ್ಲ. ಅಸ್ಪೃಶ್ಯತೆ ನಿವಾರಣೆಯಾಗಬೇಕು ಎಂಬ ಮಾನಸಿಕ ಬದಲಾವಣೆಗಳು ಆಗುತ್ತಿಲ್ಲ. ಕೇವಲ ವೇದಿಕೆಗಳ ಭಾಷಣಗಳು ವಿಶ್ವವಿದ್ಯಾಲಯಗಳಲ್ಲಿ ಬರವಣಿಗೆಯ ಕೃತಿಗಳಾಗಿ ಉಳಿಯುತ್ತಿವೆ. ಅಸ್ಪೃಶ್ಯತೆ ನಿವಾರಣೆ, ನಿರುದ್ಯೋಗ, ಸಮಾನತೆ, ಸಾಮಾಜಿಕ ನ್ಯಾಯ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಬಗ್ಗೆ ಬದಲಾವಣೆ ತರಲು ಯಾರೂ ನಾಯಕತ್ವ ವಹಿಸಿ ಮುಂದು ಬರುವುದಿಲ್ಲ. ೭೦ರ ವರ್ಷದಲ್ಲಿ ದಲಿತಪರ ಹೋರಾಟಗಳು, ರೈತಪರ ಹೋರಾಟಗಳು, ಚಳವಳಿಗಳು ಹುಟ್ಟಿಕೊಂಡವು. ಸಂವಿಧಾನಾತ್ಮಕವಾಗಿ ಸಾಮಾಜಿಕ ನ್ಯಾಯ, ಸಮಾನತೆ, ಅಸ್ಪೃಶ್ಯತೆ ನಿವಾರಣೆ, ಉತ್ಪಾದನೆಗಾಗಿ, ಕೃಷಿಗಾಗಿ ಭೂಮಿ,

ಘೋಷಣೆಗಳು, ಬೃಹತ್ ರ್‍ಯಾಲಿಗಳು, ಸಮಾವೇಶಗಳು ನಡೆದವು. ರಾಜಕೀಯ ಪಕ್ಷದ ನಾಯಕತ್ವ ಹೋರಾಟಗಾರರನ್ನೇ ತಟಸ್ಥವಾಗಿಸಲು ಪ್ರಯತ್ನಿಸಿ ಸುಮ್ಮನಾದವು.

ಗಾಂಧೀಜಿಯವರ ಗ್ರಾಮ ಸ್ವರಾಜ್ಯವು ಹಿಂದೂ ಧರ್ಮದ ನೆಲೆಯನ್ನು ಉತ್ತೇಜಿಸಿದರೆ ಅಂಬೇಡ್ಕರ್ ಅವರು ತಳಸಮುದಾಯಗಳ ಅಧಿಕಾರ ಮತ್ತು ಅಭಿವೃದ್ಧಿಯನ್ನು ಬಯಸುವ ರಾಜಕೀಯ ಅಧಿಕಾರವನ್ನು ಸ್ವಾತಂತ್ರ್ಯ ಭಾರತದಲ್ಲಿ ಸರ್ಕಾರಗಳು ಆಡಳಿತ ನಡೆಸಿಕೊಂಡು ಬರುತ್ತಿವೆ. ಲೋಕಸಭೆ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು, ವಿಧಾನಸಭೆ, ಕೇಂದ್ರಾಡಳಿತ ಪ್ರದೇಶಗಳಾಗಿ ವಿಂಗಡಣೆ ಮಾಡಿಕೊಂಡಿವೆ. ನಂತರ ೧೯೫೯ರಿಂದ ಅಧಿಕಾರ ಹಂಚಿಕೆಗಾಗಿ ಸಮಿತಿಗಳು, ಆಯೋಗಗಳು ಹುಟ್ಟಿಕೊಂಡವು. ಅಶೋಕ್ ಮೆಹ್ತಾ, ಬಲವಂತಾಯ್ ಮೆಹ್ತಾ ಅವರ ಸಮಿತಿ ಶಿಫಾರಸ್ಸುಗಳು, ಮೊದಲುಗೊಂಡು ೧೯೭೩, ೭೩ ಮತ್ತು ೭೪ರ ಕಾಯ್ದೆಯು ಸಂವಿಧಾನಾತ್ಮಕ ಸಮಾನತೆಯ ರಾಜಕೀಯ ಮೀಸಲಾತಿಯನ್ನು ನೀಡಲಾಯಿತು. ನಾಮಮಾತ್ರದ ಮೀಸಲಾತಿ ಹಕ್ಕುಗಳಾದವು ಹೊರತು ಗುಲಾಮಗಿರಿಯಿಂದ ಮುಕ್ತವಾಗಿಸಲು ವಿಫಲವಾಗಿವೆ. ಅಧಿಕಾರವನ್ನು ಮೀಸಲಾತಿ ನೆಲೆಯಲ್ಲಿ ಅಧಿಕಾರ ವಿಕೇಂದ್ರೀಕರಣ ಹಂಚಿಕೆಯಾಗುತ್ತಿದ್ದರೂ, ಕೇಂದ್ರೀಕೃತ ಹಿಡಿತದಿಂದ ಹೊರತಂದಿಲ್ಲ. ಇದನ್ನು ಕಾಮತ್‌ರವರು ಹಳ್ಳಿ ಜನರು ಎಚ್ಚೆತ್ತುಕೊಳ್ಳಬೇಕು. ಜನರನ್ನು ಪ್ರಜ್ಞಾವಂತರನ್ನಾಗಿಸಬೇಕು ಎಂಬುದು ಹಳೆಯ ವಿಚಾರ, ೭೦ರ ದಶಕದಲ್ಲಿ ಹುಟ್ಟಿಕೊಂಡ ಹೋರಾಟಗಳೇ ಫಲಕಾರಿಯಾಗಲಿಲ್ಲ. ಅಂದರೆ ಸಂಪೂರ್ಣವಾಗಿ ನ್ಯಾಯಪಡಿಯಲಾಗಲಿಲ್ಲ ಅಂತ ಅಲ್ಲ. ಸಮಪರ್ಕವಾಗಿ ಸಾಮಾಜಿಕ ಸಮಾನತೆ ಪಡೆಯಲಾಗಲಿಲ್ಲ. ಇತ್ತೀಚಿನ ಸ್ಥಳೀಯ ಸರ್ಕಾರಗಳು ಭ್ರಷ್ಟಾಚಾರದಿಂದ ಕೂಡಿವೆ. ಕುಡಿಯುವ ನೀರು, ಆಹಾರ, ವಸತಿ, ಹಸಿವು, ಆರೋಗ್ಯ, ಸಾಮಾಜಿಕ ನ್ಯಾಯ, ನೈರ್ಮಲ್ಯೀಕರಣ, ಚರಂಡಿ, ರಸ್ತೆ, ಮಾರುಕಟ್ಟೆ, ಸೂರಿಲ್ಲದವರಿಗೆ ಸೂರು ಕೊಡುವುದರಲ್ಲಿ ವಿಫಲವಾಗಿವೆ.

ಸ್ಥಳೀಯ ಸರ್ಕಾರಗಳಿಗೆ ಗ್ರಾಮೀಣ ಅಭಿವೃದ್ಧಿ-ಅಧಿಕಾರ ವಿಕೇಂದ್ರೀಕರಣದಲ್ಲಿ ತಾರಮತ್ಯವಾದಲ್ಲಿ ನಿಯಮನುಸಾರ ಕಾನೂನುಗಳನ್ನು ರೂಪಿಸಬೇಕು. ಸ್ಥಾಯಿಸಮಿತಿಗಳು ತಳಸಮುದಾಯಗಳ ಆಗು-ಹೋಗುಗಳ ಬಗ್ಗೆ ಜವಾಬ್ದಾರಿಯಿಂದ ಸಹಭಾಗಿತ್ವ ಸಹಕಾರ ನೀಡುವಂತೆ ಎಚ್ಚರಿಕೆ ವಹಿಸಬೇಕು. ಬೇಕು-ಬೇಡಗಳ ಬಗ್ಗೆ ಖುದ್ದು ಸಂಪರ್ಕದಿಂದ ಮಾಹಿತಿ ಪಡೆದು ಅಭಿವೃದ್ಧಿಗೆ ಸಹಕರಿಸಬೇಕು. ಮೀಸಲಾತಿ ಅಡಿಯಲ್ಲಿ ಸ್ವತಂತ್ರ ಅಧಿಕಾರ ನೀಡಲು ಪ್ರೋತ್ಸಾಹಿಸಬೇಕು. ಇಲ್ಲದಿದ್ದಲ್ಲಿ ಕಾನೂನು ಕ್ರಮ ಜರುಗಿಸುವಂತಿರಬೇಕು.

ಬದಲಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎರಡು ವಿಭಿನ್ನ ಧೋರಣೆಗಳಿವೆ. ಕೇಂದ್ರೀಕೃತ ಸರ್ವಾಧಿಕಾರತ್ವ ಹಾಗೂ ಮನುಷ್ಯ-ಮನಷ್ಯ ಮಧ್ಯೆ ಬೇಡವಾದ ಸಾಂಸ್ಕೃತಿಕ ನೆಲೆಗಳು ಇವುಗಳನ್ನು ಬೇಧಿಸುವುದೇ ಅಂಬೇಡ್ಕರ ವಾದವಾಗಿತ್ತು. ಗಾಂಧೀಜಿಯವರು ಅಸ್ಪೃಶ್ಯರ ಉದ್ಧಾರವೆಂಬುದು ಯಾವ ರೀತಿಯಾದ್ದಾಗಿದೆ ಎಂದರೆ ಅಸ್ಪೃಶ್ಯರ ಉದ್ಧಾರ ರಾಜಕೀಯ ಪ್ರಗತಿಯಿಂದಲ್ಲ. ಸಾಮಾಜಿಕ

ಸುಧಾರಣೆಯಿಂದ ಮಾತ್ರ ಎಂದು ಹೇಳಿದ್ದಾರೆ. ತಳಸಮುದಾಯಗಳು ರಾಜ್ಯಾಧಿಕಾರಕ್ಕೆ ಬಂದರೆ ಸಂವಿಧಾನಾತ್ಮಕ ಪ್ರಜಾಪ್ರಭುತ್ವದಲ್ಲಿ, ಕಾನೂನು ಬದಲಾವಣೆಗಳಾಗಬಹುದು. ಹಕ್ಕು ಮತ್ತು ಸೌಲಭ್ಯಗಳಿಂದ ಆರ್ಥಿಕ ಅಭಿವೃದ್ಧಿ ಮತ್ತು ರಾಜಕೀಯ ಸ್ವಾತಂತ್ರ್ಯ ಪಡೆಯುತ್ತಾರೆ. ಮೇಲ್ವರ್ಗಗಳಿಗೆ ಸ್ಥಾನವಿಲ್ಲದಾಗುತ್ತದೆ ಎಂದು ಸಾಮಾಜಿಕ ಸುಧಾರಣೆಯ ಕಲಹದಲ್ಲಿ ಸಿಲುಕಿಸಿದರು. ಅಂಬೇಡ್ಕರ್ ಅವರ ಅಲೋಚನೆಗಳು ರಾಜ್ಯಾಧಿಕಾರವನ್ನು ತಳಸಮುದಾಯಗಳು ಪ್ರಜಾಸತಾತ್ಮಕ ವ್ಯವಸ್ಥೆಯಲ್ಲಿ ಬದಲಾವಣೆ ತರಬೇಕಾದರೆ ಸಾಮಾಜಿಕ ಸ್ಥಾನಮಾನ, ಸಮಾನತೆ ಪಡೆಯಬೇಕಾದ ಸಂದರ್ಭದಲ್ಲಿ ರಾಜ್ಯಾಧಿಕಾರವೇ ಪರಮಶ್ರೇಷ್ಠ ಎಂದು ಮನಗಂಡಿದ್ದರು.

ಆದ್ದರಿಂದಲೇ ನೆಹರು ಕಾಲದಿಂದ ಮೊದಲುಗೊಂಡು ಇಲ್ಲಯವರೆಗಿನ ೧೯೫೩, ೭೩, ೭೪ರ ಕಾಯ್ದೆಗಳ ತಿದ್ದುಪಡಿಯ ಪಂಚಾಯತ್‌ರಾಜ್ ವ್ಯವಸ್ಥೆಯು, ಕೇವಲ ಮೀಸಲಾತಿ ಅಡಿಯಲ್ಲಿ ಧ್ವನಿ ಎತ್ತಿದ ತಳಸಮುದಾಯಗಳ ಪ್ರತಿನಿಧೀಕರಣಕ್ಕೆ ಒತ್ತು ನೀಡುತ್ತಾರೆ. ಪ್ರಜ್ಞಾವಂತರನ್ನಾಗಲಿ, ಸಂಘಟಸಿ, ರಾಜ್ಯಾಂಗದ ತಿಳುವಳಿಕೆಯಿರುವವರನ್ನು ಪ್ರತಿನಿಧೀಕರಣಕ್ಕೆ ನಿರಾಕರಿಸುತ್ತಾರೆ. ಕೇವಲ ಹೇಳಿದಂತೆ ಕೇಳಿಕೊಂಡು ಗುಲಾಮಗಿರಿಯಿಂದ ಕೂಡಿದ ಅಧಿಕಾರ ಚಲಾಯಿಸುವಂತಿರಬೇಕು. ಸ್ವತಂತ್ರ ಅಧಿಕಾರ ಚಲಾವಣೆಗೆ ಸ್ಥಾನವಿಲ್ಲ. ಬುದ್ಧಿವಂತರಾಗಿದ್ದಲ್ಲಿ ರಾಜಕೀಯ ಪಕ್ಷಗಳು, ನಾಯಕತ್ವಗಳು, ಶ್ರೀಮಂತವರ್ಗ-ದಲಿತರಮ್ನ ಮೂಲೆಗುಂಪಾಗಿಸುತ್ತಾರೆ. ಹೀಗಿರುವಾಗ ಸ್ಥಳೀಯ ಸರ್ಕಾರಗಳು ಯಾವ ರೂಪದ ಅಭಿವೃದ್ಧಿ ಪಡಿಸಬಹುದು, ಯಾವ ರೀತಿ ಅಧಿಕಾರ ವಿಕೇಂದ್ರೀಕರಣ ಹಂಚಬಹುದು, ಮೀಸಲಾತಿ ಗುಲಾಮಗಿರಿಯನ್ನು ಯಾವ ರೀತಿ ಸ್ವತಂತ್ರ ಮೀಸಲಾತಿ ಹಕ್ಕಾಗಿಸಬಹುದು ಎಂಬ ಪ್ರಶ್ನೆಗಳು ನಮ್ಮನ್ನು ಕಾಡುತ್ತವೆ.

ಗ್ರಾಮೀಣ ಭಾಗದ ಹಳ್ಳಿಗಳಲ್ಲಿ ಧರ್ಮಾಂದತೆಯಿಂದ ತುಂಬಿ ತುಳುಕಾಡುತ್ತಿರುವ ಅಸ್ಪೃಶ್ಯತೆ, ಜಾತಿಭೇದ, ವರ್ಣಭೇಧ, ಪ್ರಸ್ತುತಕ್ಕೂ ಹೋಗಲಾಡಿಸಲು ಆಗುತ್ತಿಲ್ಲ. ಸ್ಥಳೀಯ ಸರ್ಕಾರಗಳನ್ನು ಹಾಗೂ ಪಂಚಾಯತ್ ರಾಜ್ಯವ್ಯವಸ್ಥೆಯನ್ನು ಕೇವಲ ಅಭಿವೃದ್ಧಿ ಸರ್ಕಾರಗಳನ್ನು ಹಾಗೂ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಕೇವಲ ಅಭಿವೃದ್ಧಿ ಅಧಿಕಾರ ವಿಕೇಂದ್ರೀಕರಣ ಜಾಹೀರಾತು ಪಡೆದುಕೊಂಡು ಬಂದ ಸರ್ಕಾರಗಳಾಗಿವೆ. ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ, ಉತ್ಪಾದನಾ ಸಮಿತಿ, ಸಾಮಾಜಿಕ ಸ್ಥಾಯಿಸಮಿತಿಗಳು ಇನ್ನೂ ಉಳಿದ ಸಮಿತಿಗಳು ಹಳ್ಳಿಗಳ ಸಾಮಾಜಿಕ ನೆಲೆಗಳ ಬಗ್ಗೆ ಜವಾಬ್ದಾರಿಯುತ ನಿಗಾವಹಿಸಿ, ಸಭೆ ಕರೆದು, ದಲಿತರ ಸಹಭಾಗಿತ್ವವನ್ನು ಪಡೆದು, ಮೂಲಭೂತ ಸೌಲಭ್ಯಗಳನ್ನು ಎಷ್ಟು ಮಾತ್ರ ಫಲಕಾರಿಯಾಗಿವೆ. ಯಾವ ರೂಪದ ಚರ್ಚೆಗಳು ಮಾಡಬೇಕು ಎಂಬುದು ತಿಳಿಯಲಾಗುವುದಿಲ್ಲ.

ತಳಸಮುದಾಯಗಳು ಸ್ಥಳೀಯವಾಗಿ ಪಕ್ಷವಾದಿ, ಜಾತಿವಾದಿ, ಬಲಾಢ್ಯರ ಬಿಕ್ಕಟ್ಟಿನಲ್ಲಿ ಸಿಲುಕಿಕೊಂಡಿವೆ. ಇವತ್ತಿಗೂ ಅಸ್ಪೃಶ್ಯತಾ ದೌರ್ಜನ್ಯ ಎದುರಿಸಬೇಕಾಗಿದೆ. ಗ್ರಾಮ ಪಂಚಾಯಿತಿ ಸಭೆಗಳು ಗ್ರಾಮೀಣ ಜನರ ನೈಜತೆಯ ಬಗ್ಗೆ ಪರಿಶೀಲಿಸಿ, ಜನತೆಯ ಬೇಕು-ಬೇಡಗಳನ್ನು

ಗುರುತಿಸಿ, ವಾರ್ಡ್ ಸಭೆ, ಗ್ರಾಮಸಭೆ, ಸಾಮಾನ್ಯ ಸಭೆಗಳಲ್ಲಿ ಚರ್ಚಿಸಬೇಕಾಗುತ್ತದೆ. ಪಕ್ಷವಾದಿ ನಾಯಕತ್ವದಲ್ಲಿ, ವಿರೋಧ ಪಕ್ಷಗಳ ತಕರಾರುಗಳನ್ನು ಆಡಳಿತ ಸರ್ಕಾರ ಎದುರಿಸಬೇಕಾಗುತ್ತದೆ. ತಮ್ಮ ಇಷ್ಟದಂತೆ ಸಭೆಗಳ ತೀರ್ಮಾನಗಳು, ನಡಾವಳಿಗಳು, ಯಜಮಾನಿಕೆಗೆ ಒಪ್ಪುವಂತಾಗಿರುತ್ತವೆ. ಅಭಿವೃದ್ಧಿ ಅಧಿಕಾರಕ್ಕಿಂತ ಪಕ್ಷ ನಾಯಕತ್ವ ಮುಖ್ಯವಾಗಿರುತ್ತದೆ. ಈ ರೀತಿಯ ಅಧಿಕಾರ ವಿಕೇಂದ್ರೀಕರಣ ವನ್ನು ಫಲಕಾರಿಯೇ ಅಥವಾ ವಿಫಲವೇ ಎಂದು ಗುರುತಿಸುವಲ್ಲಿ ಪಕ್ಷಪಾತ ಧೋರಣೆಗಳಾಗಿರುತ್ತವೆ. ಯೋಜನೆಗಳ ಉದ್ದೇಶಗಳೇ ಒಂದಾದರೆ, ಅನುಷ್ಠಾನದ ಕಾರ್ಯಗತ ಫಲಕಾರಿ ರೂಪರೇಷೆಗಳು ಬೇರೆಯಾಗಿರುತ್ತವೆ.

ಈ ರೀತಿಯಾದ ಅಭಿವೃದ್ಧಿಯನ್ನು ಅಧಿಕಾರ ವಿಕೇಂದ್ರೀಕರಣವನ್ನು ಸಂವಿಧಾನಿಕ ಅಭಿವೃದ್ಧಿ ಮತ್ತು ಮೀಸಲಾತಿ ಹಕ್ಕು ಎಂದು ಭಾವಿಸಬೇಕೆ? ಧರ್ಮಾಂದಂತೆಯಲ್ಲಿಡಗಿರುವ ಯಜಮಾನಿಕೆ ಎಂದು ತಿಳಿಯಬೇಕೆ? ರಾಜಕೀಯ ಪಕ್ಷಗಳ ನಾಯಕತ್ವದಿಂದ ಕೂಡಿದ ಕೇಂದ್ರಿಕೃತ, ಅಧಿಕಾರ ವಿಕೇಂದ್ರೀಕರಣ ಎನ್ನಬೇಕೆ? ಅಂಬೇಡ್ಕರ ಅವರ ಅಭಿಪ್ರಾಯ ಅಸ್ಪೃಶ್ಯರ ಉದ್ಧಾರವು ಸಾಮಾಜಿಕ ಧೋರಣೆಗಳ ದ್ವಾರದ ಮೂಲಕ ಸಿಗದ ಅವು, ರಾಜಕೀಯ ಹಕ್ಕುಗಳು ಸಂಪಾದಿಸುವುದರಿಂದ ಸಾಧ್ಯವಿದೆ ಎಂದು ತಿಳಿಯಬೇಕೆ? ಸ್ಥಳೀಯ ಸರ್ಕಾರಗಳು ಸಾಮಾಜಿಕ ಧೋರಣೆಗಳ ದ್ವಾರದ ಮೂಲಕ ರಾಜಕೀಯ ಸ್ವಾತಂತ್ರ್ಯದ ಸಂವಿಧಾನ ಮೀಸಲಾತಿ ಹಕ್ಕುಗಳಿಂದ ಮಾತ್ರ ಅಭಿವೃದ್ಧಿ ಮತ್ತು ಅಧಿಕಾರ ವಿಕೇಂದ್ರೀಕರಣ ಸಾಧ್ಯವಾಗಬಹುದು. ಇಲ್ಲದಿದ್ದರೆ ಗಾಂಧೀಜಿಯ ಶಬ್ದ ಸಹಾನುಭೂತಿ ಅಧಿಕಾರವಾಗುತ್ತದೆ. ಸಂವಿಧಾನದ ಆಶಯ ಸಹಾನುಭೂತಿಯದಲ್ಲ ಬದಲಾಗಿ ಹಕ್ಕಿನ ನೆಲೆಯೆಂದು ಅದನ್ನು ನಾವು ಪ್ರತಿಪಾದಿಸಬೇಕಾದರೆ ಈಗಾಗಲೇ ದಲಿತರು ಸ್ಥಳೀಯ ಸರ್ಕಾರಗಳಲ್ಲಿ ಭಾಗವಹಿಸುವಿಕೆ ಯಿರುವ ಸವಾಲುಗಳನ್ನು ಕುರಿತು ವಸ್ತುನಿಷ್ಠವಾದ ಮತ್ತು ಅನುಭಾವತ್ಮಕವಾದ ವಿಶ್ಲೇಷಣೆಯನ್ನು ಆಧರಿಸಿದ ಅಧ್ಯಾಯನಗಳು ನಮಗೆ ಬೇಕಾಗಿವೆ ಎನ್ನುವುದನ್ನು ಕಾಮತ್ ಅವರು ಪ್ರತಿಪಾದಿಸಿದ್ದಾರೆ.

ಸಿ.ಕೆ. ಮಹೇಶ್, "ದಲಿತ ಚರಿತ್ರೆ ಮತ್ತು ಬುದ್ಧ ಧರ್ಮ", ಎನ್ನುವ ಪುಸ್ತಕವು ದಲಿತರಿಗೊಂದು ಚರಿತ್ರೆ(ಶೂದ್ರರಿಗೂ) ಇದೆಯೆಂಬ ಮೊದಲ ಮಾತನ್ನು ಮಾನವಶಾಸ್ತ್ರಜ್ಞ ರಂತೆ ಮಾತನಾಡಿದವರು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು, ೧೯೦೭ರ ಆಲೋಚನೆಗಳನ್ನು, ಬರವಣಿಗೆಗಳನ್ನು, ಪಾಶ್ಚಾತ್ಯ ಸಮಾಜಶಾಸ್ತ್ರಜ್ಞರಾಗಲಿ, ಭಾರತೀಯ ಮಾನವಶಾಸ್ತ್ರಜ್ಞರಾಗಲಿ, ಗಮನಿಸಲೇ ಇಲ್ಲ. ಎಂ.ಎನ್. ಶ್ರೀನಿವಾಸ್, ಸದಾಶಿವಗುರ್ರೆ ಅವರ ಚಿಂತನೆಗಳು ಬೆಳೆದುಬಂದಿದ್ದು ಅನಂತರದ ಕಾಲದಲ್ಲಿ. ಅಲ್ಲಿ ಅವರು ಏನನ್ನು ಚರ್ಚಿಸಿದರೋ ಅದನ್ನು ಆಗಲೇ ಅಂಬೇಡ್ಕರ್ ಅವರು ಚರ್ಚಿಸಿದ್ದರು. ಇದಕ್ಕಾಗಿ ಮೇಲು ಮುಖ ಮಾಡಿಕೊಂಡು ಶ್ರೇಷ್ಠ ಮನಸ್ಸುಗಳು ಇಂಥ ಚಿಂತನೆ ಕಡೆ ಹೋಗಲೇ ಇಲ್ಲ. ಅದಕ್ಕಾಗಿ ಪ್ರಸ್ತುತಕ್ಕೂ ಇಂಥ ಅಪಾಯಗಳು ಮುಂದುವರಿದಿವೆ ಎಂದು ಸಿ.ಕೆ. ಮಹೇಶ್ ಅವರು ಅಂಬೇಡ್ಕರ್ ಅವರ ಚಿಂತನೆಗಳನ್ನು ವಿಶ್ಲೇಷಿಸಿದ್ದಾರೆ.

ಇದು ಸಾರ್ವಕಾಲಿಕವಾಗಿದೆ. ಪುಟ-೯ರಲ್ಲಿ ಬಾಬಾಸಾಹೇಬರು ಬೌದ್ಧಧರ್ಮವನ್ನು ಸ್ವೀಕರಿಸಿದ ಶೂದ್ರರೇ ಅಸ್ಪೃಶ್ಯರೆಂಬ ಊಹೆಯನ್ನು ಅವರು ಮಾಡುತ್ತಾರೆ. ಈ ರೀತಿಯಾದ ಭಾರತದಲ್ಲಿ ಜಾತಿ ಮತ್ತು ಧರ್ಮಗಳ ದೌರ್ಬಲ್ಯಗಳು ದಲಿತರನ್ನು ಅಭಿವೃದ್ಧಿಪಡಿಸುವ ಹಾಗೂ ಅಧಿಕಾರವನ್ನು ನೀಡುವ ವ್ಯವಸ್ಥೆಯಲ್ಲಿ ಸಹಕರಿಸಬಹುದು ಅಥವಾ ಭಾಗವಹಿಸುವಿಕೆಗೆ ಅವಕಾಶ ನೀಡುವುದು. ಗ್ರಾಮಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳ ಕುರಿತು ಪರಿಜ್ಞಾನವಿಲ್ಲದ ಸಮುದಾಯಗಳಿಗೆ ಚುನಾವಣೆ, ಸರ್ಕಾರ, ಪ್ರಜಾಪ್ರಭುತ್ವ, ಸಂವಿಧಾನ ಎಂದರೆ ಅವರಿಗೆ ತಿಳಿವಳಿಕೆ ಬರುವುದು ಯಾವಾಗ ನಾವು ಅಸ್ಪೃಶ್ಯರು, ಯಜಮಾನಿಕೆಗೆ ವಿರುದ್ಧವಾಗದಂತೆ ಒಪ್ಪಿತ ಜನವಾಗಿರಬೇಕು ಎಂಬ ತಳಸಮುದಾಯಗಳು ಇಲ್ಲದಿದ್ದರೆ ದೌರ್ಜನ್ಯಕ್ಕೆ ಒಳಗಾಗಬೇಕಾಗುತ್ತದೆ ಎಂಬ ಭಯ ಮನಸ್ಸಿನಲ್ಲಿ ಕಾಡುತ್ತಿರುತ್ತದೆ.

ಹೀಗಿರುವಾಗ ಗ್ರಾಮೀಣ ಸ್ಥಳೀಯ ಸರ್ಕಾರಗಳು ಕರ್ನಾಟಕದಲ್ಲಿ ಹಲವಾರು ರೀತಿಯ ಕಾರ್ಯಕ್ರಮಗಳನ್ನು ಗುರುತಿಸದಂತೆ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಕೇಂದ್ರದಿಂದ ರಾಜ್ಯ ಸರ್ಕಾರ, ಗ್ರಾಮೀಣ ಸರ್ಕಾರ ಸಾಂಪ್ರದಾಯಿಕವಾಗಿಯೇ ಬರುತ್ತಿವೆ. ಸಂಪ್ರದಾಯ ಎಂದರೆ ಶ್ರೇಷ್ಠ-ಕನಿಷ್ಠ, ಅಸ್ಪೃಶ್ಯತೆ ಎಂಬ ಭಾವನೆ ಬರುತ್ತದೆ. ಆದರೂ ಸಹ ಜನರ ಭಾಗವಹಿಸುವಿಕೆಯ ಮೂಲಕವಷ್ಟೇ ಪರಿಣಾಮಕಾರಿ ಗ್ರಾಮಸಭೆಗಳನ್ನು ನಡೆಸಿ, ಗ್ರಾಮೀಣ ಸಮಸ್ಯೆಗಳನ್ನು ಅದೇ ಗ್ರಾಮದಲ್ಲಿ ಗುರುತಿಸಿ ಸೌಲಭ್ಯ ಒದಗಿಸುವುದು ಸ್ಥಳೀಯ ಸರ್ಕಾರದ ಕಾರ್ಯಕ್ರಮವಾಗಿದೆ. ಆದರೆ ಅದು ಸಾಧ್ಯವಿಲ್ಲ. ಹೇಗೆಂದರೆ ನಮ್ಮ ರಾಜಕೀಯ ಜಾಗೃತಿಯನ್ನು ಬೆಳೆಸಿಕೊಳ್ಳಬೇಕು. ಅಸಮಾನತೆಯನ್ನು ಪ್ರಶ್ನಿಸದಂತೆ ನೋಡಿಕೊಳ್ಳುವುದು. ಊರಿನ ಅಭಿವೃದ್ಧಿ ವಿಷಯದಲ್ಲಿ ಯಜಮಾನಿಕೆಯು ಅಂತಿಮವಿರಬೇಕು. ಸಂವಿಧಾನವು ನಮ್ಮ ಪಂಚಾಯಿತಿ ರಾಜ್ಯ ವ್ಯವಸ್ಥೆಯಲ್ಲಿ ಆಯ್ಕೆಯಾದ ಪ್ರತಿನಿಧಿಗಳನ್ನು ನಿಯಂತ್ರಿಸಿ ತಮ್ಮ ಹತೋಟಿಗೆ ತೆಗೆದುಕೊಳ್ಳುವುದು, ಅಧಿಕಾರ ನಾಯಕತ್ವದ ಹಿಡಿತದಲ್ಲಿರುತ್ತದೆ. ಯಾವುದೇ ಕಾರಣಕ್ಕೂ ಪ್ರತಿನಿಧೀಕರಣವು ಅಧಿಕಾರ ಚಲಾಯಿಸಲು ಅವಕಾಶ ನೀಡುವುದಿಲ್ಲ.

ಇಂಥ ಪರಿಸ್ಥಿತಿಯಲ್ಲಿ ಜಾತಿ, ಧರ್ಮದ, ಅಸಮಾನತೆಗಳ ಕಂದಕಗಳು ಬೆಳೆದಂತೆಲ್ಲಾ ಸೂಕ್ತವಾದ ಯೋಜನೆಗಳನ್ನು ಜನಸಾಮಾನ್ಯರಿಗೆ ನೀಡಲು ಸಾಧ್ಯವಾಗಲಾರದು. ಆದ್ದರಿಂದಲೇ ಪಂಚಾಯಿತಿಗಳು ಭ್ರಷ್ಟಾಚಾರದಿಂದ ತುಂಬಿತುಳುಕುತ್ತಿವೆ. ಅದಕ್ಕಾಗಿ ಜಾತಿರಹಿತವಾಗಿ, ಪಕ್ಷರಹಿತವಾಗಿ, ಧರ್ಮರಹಿತವಾಗಿ, ರೂಪಿಸಿದ ಯೋಜನೆಯಿಂದ ಮಾನವ ಸೇವೆಯನ್ನು ಸೂಕ್ತ ರೀತಿಯಲ್ಲಿ ಬಳಸದಿದ್ದರೆ ಪಂಚಾಯಿತಿಯ ವ್ಯಾಪ್ತಿಗೆ ಬರುವ ಮಾನವ ಸಂಪನ್ಮೂಲಗಳು ದುರುಪಯೋಗವಾಗುತ್ತವೆ. ಇದಕ್ಕೆ ಸಂಬಂಧಪಟ್ಟಂತೆ ದಲಿತರು ಮತ್ತು ಅಸ್ಪೃಶ್ಯರು ಹೊಸ ಬಗೆಯ ಸಾಮಾಜಿಕ ಹೊರತಳುವಿಕೆಗೆ ಒಳಗಾಗುತ್ತಿದ್ದಾರೆ. ಸ್ಥಳೀಯ ಸಂಸ್ಥೆಗಳಿಗೆ ಬರುವ ಅನುದಾನಗಳು, ಯೋಜನೆಗಳು ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳು ಸಮತೆ ಮತ್ತು ಆದ್ಯತೆ ನೆಲೆಯಲ್ಲಿ ಸಂವಿಧಾನದ ಕಲಂ ೧೪ರಲ್ಲಿ ಪ್ರತಿಪಾದಿಸಿರುವಂತೆ ಸಮಾನ ಆಶಯ ನೆಲೆಯಲ್ಲಿ ಕೆಲಸ ಮಾಡುವುದಕ್ಕೆ ಇನ್ನು ಕಾಲ ಬೇಕಾಗಿದೆ ಎನ್ನುವುದನ್ನು ಬಹುತೇಕ ಅಧ್ಯಯನಗಳು ತಿಳಿಸುತ್ತವೆ.

ಮೇಲಿನ ಎಲ್ಲಾ ಅಧ್ಯಯನಗಳನ್ನು ಅವಲೋಕಿಸಿದಾಗ, ದಲಿತರ ಸಾರ್ವಜನಿಕ, ಸಾಮಾಜಿಕ ಮತ್ತು ರಾಜಕೀಯ ಭಾಗವಸುವಿಕೆಗೆ ಇರುವ ಸಂವಿಧಾನಾತ್ಮಕ ಕಾಯಿದೆಗಳಿಗೂ ಅವುಗಳ ಆಚರಣೆಯಲ್ಲಿನ ಅಂತರವನ್ನು ದೊಡ್ಡಮಟ್ಟದಲ್ಲಿ ಇರುವುದನ್ನು ಸಂಶೋಧನೆಗಳು ಹೊರತಂದಿವೆ. ದಲಿತರಿಗೆ ರಾಜಕೀಯ ಭಾಗವಹಿಸುವಿಕೆಗೆ ಇರುವ ಅವಕಾಶಗಳು ಮತ್ತು ಕಾಯಿದೆಯ ನಿಯಮಗಳು ವಾಸ್ತವಿಕವಾಗಿ ಆಚರಣೆಗೆ ಬರಲು ಇರುವ ಸವಾಲುಗಳನ್ನು ನಮಗೆ ಕಟ್ಟಿಕೊಡುತ್ತವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಕರ್ನಾಟಕದ ರಾಜ್ಯದ ಕೋಲಾರ ಜಿಲ್ಲೆಯಲ್ಲಿನ ಶ್ರೀನಿವಾಸಪುರ ಮತ್ತು ಮುಳಬಾಗಿಲು ಎರಡು ತಾಲೂಕುಗಳನ್ನು ಅಧ್ಯಯನ ಕ್ಷೇತ್ರಗಳನ್ನಾಗಿಟ್ಟುಕೊಂಡು ಸ್ಥಳೀಯ ಸರ್ಕಾರದಲ್ಲಿ ದಲಿತ ಭಾಗವಹಿಸುವಿಕೆ ಕುರಿತು ಸಂಶೋಧನೆ ಕೈಗೊಳ್ಳಲಾಗಿದೆ. ಇದರ ಮುಖ್ಯ ಉದ್ದೇಶ ಸ್ಥಳೀಯ ಸರ್ಕಾರದ ಸಿದ್ಧಾಂತ ಮತ್ತು ಆಚರಣೆಗಳು ದಲಿತ ಭಾಗವಹಿಸುವಿಕೆಯ ನೆಲೆಯಲ್ಲಿ ಏನಾಗಿವೆ ಎಂಬ ಅಂಶಗಳನ್ನು ವಿಶ್ಲೇಷಣೆ ಮಾಡುವುದು.

೧.೩. ಅಧ್ಯಯನದ ಸಮಸ್ಯೀಕರಣ

ಸ್ವಾತಂತ್ರ್ಯ ಬಂದು ೭೦ ವರ್ಷಗಳ ಇತಿಹಾಸದಲ್ಲಿ ಅನೇಕ ಅಧ್ಯಯನಗಳು, ವರದಿಗಳು ಮತ್ತು ಪಂಚಾವಾರ್ಷಿಕ ಯೋಜನೆಗಳು, ದಲಿತರ ಧಾರುಣ ಸ್ಥಿತಿಯನ್ನು ಹೊರಹಾಕಿವೆ. ಅಲ್ಲದೆ ಅಭಿವೃದ್ಧಿ ಪ್ರಜಾಪ್ರಭುತ್ವ ಮತ್ತು ರಾಜಕೀಯ ಪ್ರಜಾಪ್ರಭುತ್ವದಲ್ಲಿ ದಲಿತರು ಯಾವ ಹಂತದಲ್ಲಿದ್ದಾರೆ, ಸಂವಿಧಾನಿಕ ರಕ್ಷಣೆಗಳಾದ ಮೀಸಲಾತಿ, ಕಾನೂನುಗಳು, ಅಭಿವೃದ್ಧಿ ಯೋಜನೆಗಳು ದಲಿತರ ಜೀವನ ವಿಧಾನದಲ್ಲಿ ಬದಲಾವಣೆಗಳು ತಂದಿವೆ. ಅವರ ಸಮಸ್ಯೆಗಳು ಹೇಗೆ ಉದ್ಭವಿಸಿದವು ಮತ್ತು ಅವರ ಮಉಂದೆ ಇರುವ ಸವಾಲುಗಳೇನು? ಎಂಬ ಪ್ರಶ್ನೆಗಳಿಗೆ ವಾಸ್ತವಿಕ ನೆಲೆಗಟ್ಟಿನ ಮೇಲೆ ಉತ್ತರ ಹುಡುಕುವ ಪ್ರಯತ್ನ ಇದಾಗಿದೆ. ಹೀಗೆ ಉತ್ತರ ಹುಡುಕುವ ಮೊದಲು ದಲಿತರು ಸ್ಥಳೀಯ ಸರ್ಕಾರಗಳಲ್ಲಿರುವ ಸವಾಲುಗಳನ್ನು ಕುರಿತು ಮತ್ತಷ್ಟು ಪ್ರಶ್ನೆಗಳನ್ನು ನಾವು ಕೇಳಿ ಕೊಳ್ಳಬೇಕಾಗಿದೆ. ಸ್ಥಳೀಯ ಸರ್ಕಾರಗಳು ಪ್ರಜಾಪ್ರಭುತ್ವದ ಆಶಯಗನುಗುಣವಾಗಿ ಕಾರ್ಯ ನಿರ್ವಹಿಸುತ್ತಿವೆಯೇ? ೭೩ನೇ ತಿದ್ದುಪಡಿಯ ಆಶಯ ಅನುಷ್ಠಾನವಾಗಿದೆಯೇ? ಆಗಿದ್ದಾರೆ ಅದಕ್ಕಿರುವ ಕಾರಣಗಳು ಯಾವುವು? ಆಗದೇ ಇದ್ದ ಪಕ್ಷದಲ್ಲಿ ಅದಕ್ಕಿರುವ ಸಾಂಸ್ಕೃತಿಕ ಮತ್ತು ಸಾಮಾಜಿಕ ಕಾರಣಗಳು ಯಾವುವು? ರಾಜಕೀಯ ಕಾರಣಗಳು ಯಾವುವು? ೭೩ನೇ ತಿದ್ದುಪಡಿಯ ಆಶಯದಂತೆ ರೂಪಿತಗೊಂಡಿರುವ ಸ್ಥಳೀಯ ಸರ್ಕಾರಗಳಲ್ಲಿ ದಲಿತರಿಗೆ ಸಂವಿಧಾನದ ಬದ್ಧವಾದ ಅವಕಾಶಗಳು ಸಿಗುತ್ತಿವೆಯೇ? ಸಿಕ್ಕಿದ್ದರೆ ಅದು ಯಾವ ಹಂತದವರೆಗೆ ಸಿಕ್ಕಿದೆ? ಸಿಗದೇ ಇದ್ದರೆ ಅದಕ್ಕಿರುವ ಕಾರಣಗಳು ಯಾವುವು? ಪಂಚಾಯಿತಿ ಹಂತದಲ್ಲಿರುವ ಸ್ಥಾಯಿ ಸಮಿತಿಗಳಲ್ಲಿ ದಲಿತರ ಭಾಗವಹಿಸುವಿಕೆ ಹೇಗಿದೆ ಹಾಗೂ ಪ್ರಜಾಪ್ರಭುತ್ವದ ನೆಲೆಯಲ್ಲಿದೆಯೇ? ಅಥವಾ ಮೀಸಲಾತಿ ನೆಲೆಯಲ್ಲಿದೆಯೇ? ಪಂಚಾಯಿತಿ ಹಂತದ ಸಭೆಗಳಲ್ಲಿ ದಲಿತರು ಸಮತೆ, ಸ್ವಾತಂತ್ರ ಮತ್ತು ಸಹೋದರತ್ವ ನೆಲೆಯಲ್ಲಿ ಭಾಗವಹಿಸುವ ಅವಕಾಶವಿದೆಯೇ? ದಲಿತರು ಪ್ರಶ್ನೆಗಳನ್ನು ಕೇಳುವ ಮತ್ತು ಚರ್ಚೆಗಳಲ್ಲಿ ಭಾಗವಹಿಸುವ

ಅವಕಾಶವಿದೆಯೇ? ಪ್ರಮುಖ ನಿರ್ಧಾರಗಳು ತೆಗೆದುಕೊಳ್ಳುವಾಗ ದಲಿತರ ಭಾಗವಹಿಸುವಿಕೆ ಯಾವ ಸ್ವರೂಪದಲ್ಲಿದೆ? ಸ್ಥಳೀಯ ಸರ್ಕಾರಗಳಲ್ಲಿ ದಲಿತರ ಭಾಗವಹಿಸುವಿಕೆಯನ್ನು ತಡೆಯುವ ಆರ್ಥಿಕ ಕಾರಣಗಳು ಯಾವುವು? ರಾಜಕೀಯ ಕಾರಣಗಳು ಯಾವುವು? ಸಾಮಾಜಿಕ ಕಾರಣಗಳು ಯಾವುವು? ಹೀಗೆ ಇನ್ನು ಮುಂತಾದ ಪ್ರಶ್ನೆಗಳಿಗೆ ಸೈದ್ಧಾಂತಿಕ ಮತ್ತು ಆಚರಣಾತ್ಮಕ ಉತ್ತರಗಳನ್ನು ವಾಸ್ತವಿಕತೆ ನೆಲೆಯಲ್ಲಿ ವಿಶ್ಲೇಷಿಸಲು ಪ್ರಸ್ತುತ ಅಧ್ಯಯನವು ಕೆಲವು ನಿರ್ದಿಷ್ಟ ಉದ್ದೇಶಗಳನ್ನು ಈ ಕೆಳಗಿನಂತೆ ರೂಪಿಸಿಕೊಂಡಿದೆ.

ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ನಾನು ಕಾಲಮಿತಿಯೊಳಗೆ ಅಧ್ಯಯನ ಮಾಡಿದ ಬಹುತೇಕ ಅಧ್ಯಯನಗಳು ದಲಿತರ ರಾಜಕೀಯ ಭಾಗವಹಿಸುವಿಕೆಯನ್ನು ನಿಯಂತ್ರಿಸುತ್ತಿರುವುದು ಆಯಾ ಪ್ರದೇಶದ ಬಲಾಢ್ಯರು ಎಂಬುದಕ್ಕೆ ಮಾತ್ರಕ್ಕೆ ದಲಿತರ ರಾಜಕೀಯ ಭಾಗವಹಿಸುವಿಕೆಯು ಸಾಮಜಿಕ ಮತ್ತು ಸಾಂಸ್ಕೃತಿಕ ಪರಿಸರದಲ್ಲಿ ಸ್ಥಿರವಾಗಿದೆಂದು ಅರ್ಥವಲ್ಲ. ಇಲ್ಲಿ ದಲಿತರು ಸ್ಥಳೀಯ ಸರ್ಕಾರಗಳಲ್ಲಿ ಭಾಗವಹಿಸುವ ವಿಷಯವನ್ನು ಕೇವಲ ೭೩ ಮತ್ತು ೭೪ನೇ ತಿದ್ದುಪಡಿಯಲ್ಲಿ ನೋಡಬೇಕೆ? ಅಥವಾ ಅದರಿಂದಾಚೆ ನೋಡಬೇಕೆಂಬುದು ನಮ್ಮ ಮುಂದಿರುವ ಸವಾಲು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಈ ಕೆಳಗಿನ ನಿರ್ದಿಷ್ಟ ಉದ್ದೇಶಗಳನ್ನು ಒಳಗೊಂಡಿದೆ.

೧.೪. ಅಧ್ಯಯನದ ಉದ್ದೇಶಗಳು

೧. ಸಂವಿಧಾನದ ೭೩ನೇ ತಿದ್ದುಪಡಿ ಕಾಯ್ದೆ ಮತ್ತು ದಲಿತರ ಭಾಗವಹಿಸುವಿಕೆಯನ್ನು ವಿಶ್ಲೇಷಣೆ ಮಾಡುವುದು.

೨. ಕೋಲಾರ ಜಿಲ್ಲೆಯ ದಲಿತರ ಸಾಮಾಜಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದು.

೩. ಕೋಲಾರ ಜಿಲ್ಲೆಯ ದಲಿತರ ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದು.

೪. ಕೋಲಾರ ಜಿಲ್ಲೆಯಲ್ಲಿ ರಾಜಕೀಯ ಭಾಗವಹಿಸುವಿಕೆಯಲ್ಲಿ ದಲಿತರು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಅಧ್ಯಯನ ಮಾಡುವುದು.

೧.೫. ಅಧ್ಯಯನದ ವಿಧಾನ

ಉದ್ದೇಶಗಳನ್ನು ತಾರ್ಕಿಕವಾಗಿ ಪ್ರತಿಪಾದಿಸಲು ಅಗತ್ಯವಾದ ವಿಷಯಗಳು ಬೇಕು. ಅದನ್ನು ಪಡೆದುಕೊಳ್ಳಲು ಅವಶ್ಯಕವಾದ ಮತ್ತು ಅನುಕೂಲವಾಗುವಂತಹ ಅಧ್ಯಯನ ವಿಧಾನವನ್ನು ರೂಪಿಸಿಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನವು ಮೂಲತಃ ದೃಷ್ಟಾಂತವಾದಿ(ಎಂಪಿರಿಕಲ್) ಮತ್ತು ಎಕ್ಸ್‌ಪ್ಲೋರೇಟಿವ್ ಅಧ್ಯಯನವಾಗಿದೆ. ಅಧ್ಯಯನಕ್ಕೆ ಬೇಕಾಗುವ ಆನುಷಂಗಿಕ ಮಾಹಿತಿಯನ್ನು ಸಾಹಿತ್ಯ ಸಮೀಕ್ಷೆಯ ಮೂಲಕ, ಈಗಾಗಲೇ ನಡೆದಿರುವ ಅಧ್ಯಯನಗಳು, ವರದಿಗಳು, ಸಮೀಕ್ಷೆಗಳು, ಜನಗಣತಿ ವರದಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಯೋಜನೆಗಳ ಇಲಾಖೆಯ ವರದಿಗಳಿಂದ ಮತ್ತು ಮಾರ್ಗದರ್ಶಿಸೂಚಿ ಇತ್ಯಾದಿ ಮೂಲ ವರದಿಗಳಿಂದ

ಸಂಗ್ರಹಿಸಲಾಗಿದೆ. ಹೀಗೆ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸುವಾಗ ಈಗಾಗಲೇ ಇರುವ ಸೈದ್ಧಾಂತಿಕ ಸಂಗತಿಗಳನ್ನು ಪರಿಗಣಿಸಲಾಗಿದೆ. ಪ್ರಾಥಮಿಕ ಮತ್ತು ಆನುಷಂಗಿಕ ಮೂಲಗಳಿಂದ ಸಂಗ್ರಹಿಸಿದ ಪರಿಮಾಣಾತ್ಮಕ ಮತ್ತು ಗುಣಾತ್ಮಕ ಮಾಹಿತಿಯನ್ನು ವಿಶ್ಲೇಷಣೆ ಮಾಡಲಾಗಿದೆ. ಪ್ರಸ್ತುತ ಅಧ್ಯಯನವು ಮಾದರಿ ಆಯ್ಕೆಗೆ ಬಹು ಹಂತದ ಶ್ರೇಣೀಕೃತ ಯಾದೃಚ್ಛಿಕ (ಸ್ಟ್ರಾಟಿಫಾಯಡ್ ರಾಂಡಮ್) ನಮೂನೆ ಉಪಯೋಗಿಸಿ ಕೊಂಡಿದೆ. ಇದನ್ನು ಮೂರು ಹಂತದಲ್ಲಿ ವಿನ್ಯಾಸ ಮಾಡಿಕೊಳ್ಳಲಾಗಿದೆ.

ದಲಿತರು ಸಮರೂಪದ ಗುಂಪಲ್ಲ ಇಲ್ಲಿ ಗಮನಿಸಬೇಕಾದ ಮತ್ತೊಂದು ಮುಖ್ಯ ಅಂಶವೆಂದರೆ ದಲಿತರು ಒಂದು ಸಮರೂಪದ ಗುಂಪಲ್ಲ. ದೇಶದಲ್ಲಿ ಸುಮಾರು ೪೦೦ಕ್ಕಿಂತಲೂ ಹೆಚ್ಚು ದಲಿತ ಜಾತಿ-ವರ್ಗಗಳಿವೆ. ನಿರ್ದಿಷ್ಟವಾಗಿ ಕರ್ನಾಟಕದಲ್ಲಿ ೧೦೧ ಜಾತಿ ಮತ್ತು ಉಪಜಾತಿಗಳು ಪರಿಶಿಷ್ಟ ಜಾತಿಗೆ ಸೇರಿವೆ. ಅದರಲ್ಲಿ ಬಹುತೇಕರು ಈ ಹಿಂದೆ ಅಸ್ಪೃಶ್ಯತೆ ಅನುಭವಿಸಿದವರು. ಆದಿಕರ್ನಾಟಕ, ಹೊಲೆಯ, ಚಲವಾದಿ, ಮಹಾರ, ಮಾಲ, ಮಾದಿಗ, ಮಾಂಗ, ಮೋಚಿ, ಆದಿದ್ರಾವಿಡ, ಸಮಗಾರ, ಢೋರ, ಬಂಜಾರಾ ಮತ್ತು ಭೋವಿ ಇವು ಪರಿಶಿಷ್ಟ ಜಾತಿಗಳಲ್ಲಿ ಪ್ರಮುಖವಾದವು. ಆದಿಕರ್ನಾಟಕ ಜನಾಂಗವು ಜನಸಂಖ್ಯೆಯ ದೃಷ್ಟಿಯಿಂದ ಅತ್ಯಂತ ದೊಡ್ಡ ಗುಂಪಾಗಿ ಶೇಕಡ ೩೪.೧೩ರಷ್ಟಿದ್ದರೆ, ಬಂಜಾರಾ ಶೇಕಡ ೧೧.೮೫ರಷ್ಟಿದ್ದು, ಭೋವಿಗಳು ಶೇಕಡ ೧೦.೦೪ರಷ್ಟು ಮತ್ತು ಆದಿ ದ್ರಾವಿಡರು ಶೇಕಡ ೬.೯೮ರಷ್ಟಿದ್ದಾರೆ. ಅವರ ಜನಸಂಖ್ಯೆ ಒಂದೇ ಭೂವಿಸ್ತಾರದಲ್ಲಿ ಹರಡಿಕೊಂಡಿರುವುದಿಲ್ಲ. ಕೆಲವು ಜಾತಿಗಳು ಕೆಲವೇ ಜಿಲ್ಲೆಗಳಲ್ಲಿ ಕೇಂದ್ರೀಕೃತವಾಗಿವೆ. ಬೇರೆ ಜಿಲ್ಲೆಗಳಲ್ಲಿ ಅವುಗಳ ಜನಸಂಖ್ಯೆ ತುಂಬಾ ವಿರಳವಾಗಿವೆ. ನಮ್ಮ ರಾಜ್ಯದ ಉದಾಹರಣೆ ಹೇಳುವುದಾದರೆ, ಆದಿದ್ರಾವಿಡರು ಒಟ್ಟು ಜನಸಂಖ್ಯೆಯಲ್ಲಿ ಎರಡನೇ ಮೂರು ಭಾಗದಷ್ಟು ಬೆಂಗಳೂರು ನಗರ, ಕೋಲಾರ ಮತ್ತು ತುಮಕೂರು ಈ ಮೂರು ಜಿಲ್ಲೆಗಳಲ್ಲಿದ್ದಾರೆ. ಅವರ ಕಸುಬುಗಳನ್ನಾಧರಿಸಿ ಜಾತಿ, ಉಪಜಾತಿಗಳಾಗಿ ವಿಂಗಡಿಸಲಾಗಿದೆ. ಸುಮಾರು ಶೇಕಡ ೮೧ರಷ್ಟು ದಲಿತರು ಗ್ರಾಮೀಣ ಪ್ರದೇಶದವರಾದರೂ ಇತ್ತೀಚೆಗೆ ಕೆಲವು ಉಪ-ಜಾತಿಗಳು ಪಟ್ಟಣ ಪ್ರದೇಶದಲ್ಲಿ ಹೆಚ್ಚು ಇದ್ದಾರೆ. ಕರ್ನಾಟಕದಲ್ಲಿಯೂ, ದೇಶದ ಇತರ ಭಾಗಗಳಲ್ಲಿರುವಂತೆ ಪರಿಶಿಷ್ಟ ಜಾತಿಗೆ ಸೇರಿದ ಜನರು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ಕೇಂದ್ರೀಕೃತವಾಗಿದ್ದಾರೆ. ಶೇಕಡ ೭೫ರಷ್ಟು ಪ್ರತಿಶತದಷ್ಟು ಜನರು ಗ್ರಾಮೀಣ ಪ್ರದೇಶಗಳಲ್ಲಿಯೇ ವಾಸಿಸುತ್ತಿದ್ದಾರೆ. ಅವರಲ್ಲಿ ಬಹುತೇಕರು ತಮ್ಮ ಜೀವನೋಪಾಯಕ್ಕಾಗಿ ಕೃಷಿ ಹಾಗೂ ಕೃಷಿ ಸಂಬಂಧಿ ಚಟುವಟಿಕೆ (ದುಡಿಮೆಗಾಗಿ) ಅವಲಂಬಿಸಿದ್ದಾರೆ. ಬರ, ಕೃಷಿ ಚಟುವಟಿಕೆಯಲ್ಲಿ ಉಂಟಾದ ಬದಲಾವಣೆ, ಹಳ್ಳಿಗಳಲ್ಲಿ ದುಡಿಯುವ ಕೈಗೆ ನಿರಂತರ ಕೆಲಸದ ಕೊರತೆ, ಕನಿಷ್ಠ ಕೂಲಿ ಇನ್ನೂ ಮುಂತಾದ ಕಾರಣಗಳಿಂದ ಭೂರಹಿತ ಕೃಷಿ ಕಾರ್ಮಿಕರು, ಅದರಲ್ಲಿಯೂ ದಲಿತ ಕುಟುಂಬಗಳು ದುಡಿಮೆಯನ್ನು ಅರಸಿ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿರುವುದು ಇತ್ತೀಚೆಗೆ ಹೆಚ್ಚಾಗಿದೆ. ನಾವು ಅಧ್ಯಯನ ನಡೆಸಿದ ಯರೇಹಂಚಿನಾಳ, ಭಿನ್ನಾಳ, ಸಿದ್ನೆಕೊಪ್ಪ, ಕಬ್ಬರಗಿ, ಬೀಳಗಿ, ಎಸ್.ಕೆ. ಬೂದಿಹಾಳ, ಗಬ್ಬೂರು, ನವಲಿ, ಮಲದಕಲ್,

ಗೂಗಲ್, ಕರಿಗುಡ್ಡ, ಮಲಿಯಾಬಾದ್, ನಾಗಡದಿನ್ನಿ ಇನ್ನೂ ಮುಂತಾದ ಹಳ್ಳಿಗಳಿಂದ ನಗರಗಳಿಗೆ ವಲಸೆ ಬಂದವರು ಕಟ್ಟಡ ನಿರ್ಮಾಣ, ರಸ್ತೆ ನಿರ್ಮಾಣ, ರಸ್ತೆಗಳಲ್ಲಿ ಕಸಗುಡಿಸುವುದು, ಚಿಂದಿ ಆಯುವುದು ಇನ್ನು ಮುಂತಾದ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ.

ಆದರೆ ಅವರು ನಡೆಸುತ್ತಿರುವ ದುಡಿಮೆಯ ಚಟುವಟಿಕೆಗಳು ಅವರ ಜೀವನೋಪಾಯಕ್ಕೆ ಸಾಕಾಗುವಷ್ಟು ಆದಾಯವನ್ನು ತಂದುಕೊಡುತ್ತಿಲ್ಲ. ಹೀಗೆ ನಗರ ಪ್ರದೇಶಕ್ಕೆ ಬಂದ ಕೆಲವೇ ಕೆಲವರು ಮಾತ್ರ ಲಾಭದಾಯಕ ವೃತ್ತಿಗಳನ್ನು ನಡೆಸುತ್ತಿದ್ದಾರೆ. ಸಾಮಾಜಿಕವಾಗಿ ದಲಿತರು ಧಾರ್ಮಿಕ ಸ್ಥಾನಮಾನ ಗಳನ್ನು ಬೇರೆ ಬೇರೆಯಾಗಿ ಹೊಂದಿದ್ದಾರೆ. ದಲಿತರಲ್ಲಿಯೇ ಜಾಡಮಾಲಿಗಳು ತುಂಬಾ ನಿಕೃಷ್ಟವಾದ ಸಾಮಾಜಿಕ ಸ್ಥಾನವನ್ನು ಹಾಗೂ ಹೊಲೆಯರು ಸ್ವಲ್ಪ ಉನ್ನತ ಸಾಮಾಜಿಕ ಸ್ಥಾನ ಹೊಂದಿದವ ರಾಗಿದ್ದಾರೆ. ಮೊದಲೇ ತಿಳಿಸಿದಂತೆ ದಲಿತ ಎಲ್ಲಾ ಜಾತಿಗಳಿಗೆ ಉನ್ನತ ವಿದ್ಯಾಭ್ಯಾಸ ಹಾಗೂ ಆಧುನಿಕ ಶಿಕ್ಷಣದ ಅವಕಾಶಗಳು ಎಲ್ಲಾ ದಲಿತ ಉಪಜಾತಿಗಳಿಗೆ ಸಮಾನವಾಗಿ ಲಭಿಸಿಲ್ಲ. ಸ್ವಾತಂತ್ರ್ಯ ನಂತರದ ಬೆಳವಣಿಗೆಗಳಾದ ಕೃಷಿ ಸಂಬಂಧಿತ ಆರ್ಥಿಕ ಚಟುವಟಿಕೆ, ಭೂ ಸುಧಾರಣೆ, ಪಟ್ಟಣಗಳಿಗೆ ಹತ್ತಿರವಾದ ಅಥವಾ ಪಟ್ಟಣಗಳಲ್ಲೇ ನೆಲೆಸಿರುವ ಕೆಲವು ದಲಿತ ಉಪ-ಜಾತಿಗಳು ದಲಿತರಿಗಾಗೇ ರೂಪಿಸಿದ ಅಭಿವೃದ್ಧಿ ಕಾರ್ಯಕ್ರಮಗಳ ಉಪಯೋಗವನ್ನು ಯಶಸ್ವಿಯಾಗಿ ಪಡೆದುಕೊಂಡಿವೆ.

ಆದರೂ ಪರಿಶಿಷ್ಟ ಜಾತಿಗಳ ಆದಾಯದ ಮೂಲಗಳನ್ನು ಗಮನಿಸಿದರೆ, ಅವರ ಸ್ಥಿತಿ ಇನ್ನೂ ಬದಲಾವಣೆಯಾಗ ಬೇಕಾಗಿದೆ. ಉದಾಹರಣೆಗೆ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಕೃಷಿಯಿಂದ ಆದಾಯ ಬರುತ್ತಿದೆ ಎಂದು ಹೇಳುವ ಒಟ್ಟು ಕುಟುಂಬಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಕುಟುಂಬಗಳ ಸಂಖ್ಯೆ ಕೇವಲ ಶೇಕಡ ೧೫.೪ರಷ್ಟಿದೆ. ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿರುವ ಒಟ್ಟು ಕುಟುಂಬಗಳ ಪೈಕಿ ಪರಿಶಿಷ್ಟ ಜಾತಿಯ ಕುಟುಂಬಗಳ ಸಂಖ್ಯೆ ಶೇಕಡ ೧೦.೯ರಷ್ಟಿದ್ದರೆ, ಇತರ ಹಿಂದುಳಿದ ವರ್ಗಗಳು ಶೇಕಡ ೪೭.೫ರಷ್ಟು ಮತ್ತು ಇತರ ಕುಟುಂಬಗಳು ಶೇಕಡ ೩೮.೮ರಷ್ಟಿದೆ. ಇದನ್ನು ಪರಿಶಿಷ್ಟ ಜಾತಿಗಳಿಗೆ ಹೋಲಿಸಿದಾಗ, ಅದು ಅಷ್ಟು ಉತ್ತಮ ಸ್ಥಿತಿಯಲ್ಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

೧.೬. ಅಧ್ಯಯನದ ವ್ಯಾಪ್ತಿ ಮತ್ತು ಮಾದರಿ ಆಯ್ಕೆ

ಸ್ಥಳೀಯ ಸರ್ಕಾರದಲ್ಲಿ ದಲಿತರ ಭಾಗವಹಿಸುವಿಕೆ ಎಂಬ ವಿಷಯವು ಕೋಲಾರ ಜಿಲ್ಲೆಯ (ಅಧ್ಯಯನ ಕ್ಷೇತ್ರದ ವಿವರವನ್ನು ಅಧ್ಯಾಯ ಎರಡರಲ್ಲಿ ವಿವರಿಸಲಾಗಿದೆ) ದಲಿತರ ರಾಜಕೀಯ ಭಾಗವಹಿಸುವಿಕೆ ಸಂಬಂಧಿಸಿದ್ದಾಗಿದೆ. ಉದ್ದೇಶಿಕ ಅಧ್ಯಯನವು ದೃಷ್ಟಾಂತವಾದಿ (ಎಂಪಿರಿಕಲ್) ಅಧ್ಯಯನವಾಗಿದ್ದು ಅಧ್ಯಯನ ಉದ್ದೇಶಗಳ್ನು ಈಡೇರಿಸಲು ಪ್ರಾಥಮಿಕ ಮತ್ತು ಆನುಷಂಗಿಕ ಮಾಹಿತಿಗಳ ಅಂಕಿಸಂಖ್ಯೆಗಳನ್ನು ಬಳಸಿಕೊಳ್ಳಲಾಗಿದೆ. ದಲಿತರ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಜಾತಿ(ಅಸ್ಪೃಶ್ಯತೆ) ಮೀಸಲಾತಿ ಸದಸ್ಯತ್ವ ಮತದಾನ ಗ್ರಾಮಸಭೆ, ಪಂಚಾಯತ್ ಕಾಯ್ದೆ ಇವುಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಯಲ್ಲಿ ಮತ್ತು ಪಂಚಾಯತ್ ಆಡಳಿತದಲ್ಲಿ ನೇರವಾಗಿ

ಭಾಗವಹಿಸಿದ ಚುನಾಯಿತ ಪ್ರತಿನಿಧಿಗಳು ಮತ್ತು ಗ್ರಾಮಗಳಲ್ಲಿ ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ.

ಅಧ್ಯಯನವನ್ನು ಮುಳಬಾಗಿಲು ತಾಲೂಕಿನ ಮುದಿಗೆರೆ ಗಡ್ಡೂರು ಗ್ರಾಮ ಪಂಚಾಯಿತಿ ಮತ್ತು ನಂಗಲಿ ಗ್ರಾಮ ಪಂಚಾಯಿತಿಗಳಲ್ಲಿ ಕೈಗೊಳ್ಳಲಾಗಿದೆ. ಮುದಿಗೆರೆ ಗಡ್ಡೂರು ಗ್ರಾಮ ಪಂಚಾಯಿತಿಯು ತಾಲೂಕು ಕೇಂದ್ರವಾದ ಮುಳಬಾಗಿಲಿನಿಂದ ೧೭ ಕಿ.ಮೀ. ದೂರದಲ್ಲಿದೆ. ಪಂಚಾಯಿತಿ ವ್ಯಾಪ್ತಿಗೆ ಮುದಿಗೆರೆ, ಕುಕ್ಕಲದೊಡ್ಡಿ, ತಿಪ್ಪದೊಡ್ಡಿ, ದೊಡ್ಡಗೊಲ್ಲಹಳ್ಳಿ, ಕೆ. ಉಗನಿ, ಎನ್ ಚಮಕನಹಳ್ಳಿ, ಸಿಗೇನಹಳ್ಳಿ, ಸೀಗೆ ಹೊಸಹಳ್ಳಿ, ಜಾಲಪಲ್ಲಿ, ಚಿನ್ನಬಾಲೆಪಲ್ಲಿ, ಕಗ್ಗನಹಳ್ಳಿ, ಎನ್ ಚೌಡೇನಹಳ್ಳಿ, ಮಲ್ಲೇಕುಪ್ಪ, ಗುನಿಕುಪ್ಪ, ಪಟ್ರಹಳ್ಳಿ, ಚಿಕ್ಕಗೊಲ್ಲಹಳ್ಳಿ, ಬಂಡ ಉಪ್ಪಾರಹಳ್ಳಿ, ರಾಮನಗರ ಮತ್ತು ಗಡ್ಡೂರು ಸೇರಿದಂತೆ ಹೀಗೆ ಹತ್ತೊಂಬತ್ತು ಹಳ್ಳಿಗಳು ಸೇರಿವೆ. ಈ ಪಂಚಾಯಿತಿ ವ್ಯಾಪ್ತಿಯಲ್ಲಿ ೧೪೩೪ ಜನಸಂಖ್ಯೆಯನ್ನು ಹೊಂದಿದೆ. ಲಿಂಗವಾರು ೭೩೩ ಪುರುಷರು, ೭೦೧ ಮಹಿಳೆಯರಿದ್ದಾರೆ. ಪರಿಶಿಷ್ಟ ಜಾತಿ(ಶೇ. ೬೭.೭)/ಪರಿಶಿಷ್ಟ ಪಂಗಡ(ಶೇ. ೫.೬) ಹಾಗೂ ಶೇ. ೨೬.೭ರಷ್ಟು ಇತರೆ ಸಮುದಾಯದವರಿದ್ದಾರೆ. ಉಳಿದಂತೆ ಕೃಷಿ ಇಲ್ಲಿನ ಜನರ ಮುಖ್ಯ ಉದ್ಯೋಗವಾಗಿದೆ.

ಅಧ್ಯಯನಕ್ಕೆ ಒಳಪಡಿಸಿರುವ ಮತ್ತೊಂದು ಗ್ರಾಮ ಪಂಚಾಯಿತಿ ನಂಗಲಿ. ಆಯ್ಕೆ ಮಾಡಿಕೊಳ್ಳಲಾಗಿದೆ. ನಂಗಲಿ ಗ್ರಾಮ ಪಂಚಾಯಿತಿಯು ತಾಲೂಕು ಕೇಂದ್ರವಾದ ಮುಳಬಾಗಿಲಿನಿಂದ ೧೮ ಕಿ.ಮೀ. ದೂರದಲ್ಲಿದೆ. ಪಂಚಾಯಿತಿ ವ್ಯಾಪ್ತಿಗೆ ಕುರುಬರಹಳ್ಳಿ, ಕೆರಸಮಂಗಲ, ಯಲವಹಳ್ಳಿ, ವೆಂಕಟಾಪುರ, ಕೊತ್ತೂರು, ಜಂಗಾಲಹಳ್ಳಿ, ಹಳೇಕುಪ್ಪ ಮತ್ತು ನಂಗಲಿ ಸೇರಿದಂತೆ ಹೀಗೆ ಎಂಟು ಹಳ್ಳಿಗಳು ಸೇರಿವೆ. ಈ ಪಂಚಾಯಿತಿ ವ್ಯಾಪ್ತಿಯಲ್ಲಿ ೬೩೫೯ರಷ್ಟು ಜನಸಂಖ್ಯೆಯನ್ನು ಹೊಂದಿದೆ. ಲಿಂಗವಾರು ೩೨೩೪ ಪುರುಷರು, ೩೧೨೫ ಮಹಿಳೆಯರಿದ್ದಾರೆ. ಈ ಎರಡು ಹಳ್ಳಿಗಳಿಂದ ೨೦೦ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಗಡ್ಡೂರು ಮತ್ತು ನಂಗಲಿ ಈ ಎರಡು ಹಳ್ಳಿಗಳಿಂದ ಕೇವಲ ದಲಿತ(ಪರಿಶಿಷ್ಟ ಜಾತಿ) ಸಮುದಾಯಗಳಿಂದ ತಲಾ ೧೦೦ ಕುಟುಂಬಗಳಂತೆ ಒಟ್ಟು ೨೦೦ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಲಾಗಿದೆ.

ಹೀಗೆ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಗ್ರಾಮಗಳಿಂದ ಆನುಷಂಗಿಕ ಮಾಹಿತಿಗಳನ್ನು ಪರಾಮರ್ಶನ ಗ್ರಂಥಗಳು, ಮಾಸಿಕ ಪತ್ರಿಕೆಗಳು, ಸಂಶೋಧನಾ ಪ್ರಬಂಧಗಳು, ಕರ್ನಾಟಕ ಕೈಪಿಡಿ, ಕೋಲಾರ ಜಿಲ್ಲಾ ಅಂಕಿ ಸಂಖ್ಯೆಗಳ ನೋಟ ಕೋಲಾರ ಜಿಲ್ಲಾ ಮಾನವ ಅಭಿವೃದ್ಧಿ ವರದಿ ೨೦೧೪, ಮಾನವ ಅಭಿವೃದ್ಧಿ ವರದಿ ೨೦೦೫, ಜನಗಣತಿ ವರದಿಗಳು, ಚುನಾವಣಾ ಆಯೋಗದ ವರದಿ ಜಿಲ್ಲಾ ಪಂಚಾಯತ್ ವರದಿಗಳು, ಸರ್ಕಾರದ ದಾಖಲೆಗಳು, ಪಿಎಚ್.ಡಿ. ಹಾಗೂ ಎಂ.ಫಿಲ್ ಅಪ್ರಕಟಿತ ಸಂಶೋಧನಾ ಪ್ರಬಂಧಗಳು, ದೈನಿಕ ಪತ್ರಿಕೆಗಳು, ಸಂಶೋಧನಾ ಲೇಖನಗಳು ಸೇರಿದಂತೆ ಇನ್ನು ಮುಂತಾದ ಪ್ರಕಟಿತ ಮತ್ತು ಅಪ್ರಕಟಿತ ದಾಖಲೆಗಳಿಂದ ಸಂಗ್ರಹಿಸಲಾಗಿದೆ.

ಪ್ರಾಥಮಿಕ ಮಾಹಿತಿಯನ್ನು ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಮಾಹಿತಿಯನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಲಾಗಿದೆ. ಕ್ಷೇತ್ರದ ಮಾಹಿತಿಗೆ ಸಂಬಂಧಿಸಿದಂತೆ ಪ್ರಶ್ನಾವಳಿ ಅನುಸೂಚಿ ಮೂಲಕ ಸೂಚಕಗಳ ಉಪಸೂಚಕಗಳ ಮೂಲಕ ಮಾಹಿತಿ ಸಂಗ್ರಹಿಸಿ ತೀರ್ಮಾನಕ್ಕೆ ಬರಲಾಗಿದೆ. ಅದರಲ್ಲಿ ಮುಖ್ಯವಾಗಿ ದಲಿತರ, ಸಾಮಾಜಿಕ ಸ್ಥಿತಿ, ಆರ್ಥಿಕ ಅಭಿವೃದ್ಧಿ, ರಾಜಕೀಯ ಸಹಭಾಗಿತ್ವಕ್ಕೆ ಸಂಬಂಧಿಸಿದಂತೆ ಪ್ರಶ್ನಾವಳಿ ಮೂಲಕ ಮಾಹಿತಿ ಪಡೆಯಲಾಗಿದೆ. ಗುಂಪುಚರ್ಚೆ ಮತ್ತು ಚುನಾಯಿತ ಪ್ರತಿನಿಧಿಗಳ ಸಂದರ್ಶನದ ಸ್ಥಳೀಯ ಸರ್ಕಾರದಲ್ಲಿ ದಲಿತರ ಸಹಭಾಗಿತ್ವ ಮತ್ತು ಸಬಲೀಕರಣ ಜನರ ಮತ್ತು ಜನಪ್ರತಿನಿಧಿಗಳ ಮೂಲಕ ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿ ಮಾಹಿತಿಯನ್ನು ವಿಶ್ಲೇಷಣೆ ಮಾಡಲಾಗಿದೆ. ಮುಂದೆ ಕೋಷ್ಟಕಗಳಲ್ಲಿ ತಾಲೂಕುವಾರು ಗ್ರಾಮ ಪಂಚಾಯಿತಿ ಸದಸ್ಯರ ವಿವರವನ್ನು ನೀಡಲಾಗಿದೆ.

ಕೋಷ್ಟಕ ೧. ಕೋಲಾರ ಜಿಲ್ಲೆಯ ಗ್ರಾಮ ಪಂಚಾಯಿತಿಗಳ ಸದಸ್ಯರ ವಿವರ

ಸಮುದಾಯಗಳು	ಮಹಿಳೆಯರು	ಪುರುಷರು	ಒಟ್ಟು
ಪರಿಶಿಷ್ಟ ಜಾತಿ (ಎಸ್.ಸಿ.)	೪೪೧	೫೨೮	೯೬೯
ಪರಿಶಿಷ್ಟ ಪಂಗಡ (ಎಸ್.ಟಿ.)	೧೬೪	೧೦೬	೨೭೦
ಸಾಮಾನ್ಯ	೪೯೮	೭೭೧	೧೨೬೯
ಪ್ರವರ್ಗಗಳು ಇತರೆ	೧೧೪	೨೫೧	೨೬೫
ಒಟ್ಟು	೧೨೧೭	೧೫೫೬	೨೭೭೩

ತಾಲೂಕುವಾರು ಗ್ರಾಮ ಪಂಚಾಯಿತಿ ಸದಸ್ಯರ ಸಾಮಾಜಿಕ ವಿವರ

ಕೋಷ್ಟಕ ೨. ಶ್ರೀನಿವಾಸಪುರ ತಾಲೂಕು ಗ್ರಾಮ ಪಂಚಾಯಿತಿಗಳ ಸದಸ್ಯರ ಜಾತಿವಾರು, ಲಿಂಗವಾರು ವಿವರ

ಕ್ರಸಂ.	ತಾಲೂಕು/ಜಿಲ್ಲೆ	ಮಹಿಳೆ	ಪುರುಷ	ಒಟ್ಟು
೧	ಪರಿಶಿಷ್ಟ ಜಾತಿ	೭೨	೭೦	೧೪೨
೨	ಪರಿಶಿಷ್ಟ ಪಂಗಡ	೪೦	೨೯	೬೯
೩	ಸಾಮಾನ್ಯ	೬೫	೯೨	೧೫೭
೪	ಇತರೆ	೨೫	೩೫	೬೦
	ಒಟ್ಟು	೨೦೨	೨೨೬	೪೨೮

ಕೋಷ್ಟಕ ೩. ಮುಳಬಾಗಿಲು ತಾಲೂಕು ಗ್ರಾಮ ಪಂಚಾಯಿತಿಗಳ ಸದಸ್ಯರ ಜಾತಿವಾರು, ಲಿಂಗವಾರು ವಿವರ

ಕ್ರಸಂ.	ತಾಲೂಕು /ಜಿಲ್ಲೆ	ಮಹಿಳೆ	ಪುರುಷ	ಒಟ್ಟು
೧	ಪರಿಶಿಷ್ಟ ಜಾತಿ	೭೬	೧೦೭	೧೮೩
೨	ಪರಿಶಿಷ್ಟ ಪಂಗಡ	೧೮	೧೫	೩೩
೩	ಸಾಮಾನ್ಯ	೮೦	೧೪೯	೨೨೯
೪	ಇತರೆ	೧೮	೨೮	೪೬
	ಒಟ್ಟು	೧೯೨	೨೯೯	೪೯೧

ಕೋಷ್ಟಕ ೪. ಕೋಲಾರ ತಾಲೂಕು ಗ್ರಾಮ ಪಂಚಾಯಿತಿಗಳ ಸದಸ್ಯರ ಜಾತಿವಾರು, ಲಿಂಗವಾರು ವಿವರ

ಕ್ರಸಂ.	ತಾಲೂಕು / ಜಿಲ್ಲೆ	ಮಹಿಳೆ	ಪುರುಷ	ಒಟ್ಟು
೧	ಪರಿಶಿಷ್ಟ ಜಾತಿ	೯೫	೧೧೬	೨೧೧
೨	ಪರಿಶಿಷ್ಟ ಪಂಗಡ	೩೭	೧೩	೫೦
೩	ಸಾಮಾನ್ಯ	೧೧೫	೧೭೨	೨೮೭
೪	ಇತರೆ	೨೮	೫೦	೭೮
	ಒಟ್ಟು	೨೭೫	೩೫೧	೬೨೬

ಕೋಷ್ಟಕ ೫. ಮಾಲೂರು ತಾಲೂಕು ಗ್ರಾಮ ಪಂಚಾಯಿತಿಗಳ ಸದಸ್ಯರ ಜಾತಿವಾರು, ಲಿಂಗವಾರು ವಿವರ

ಕ್ರಸಂ.	ತಾಲೂಕು / ಜಿಲ್ಲೆ	ಮಹಿಳೆ	ಪುರುಷ	ಒಟ್ಟು
೧	ಪರಿಶಿಷ್ಟ ಜಾತಿ	೬೯	೭೮	೧೪೭
೨	ಪರಿಶಿಷ್ಟ ಪಂಗಡ	೩೯	೩೬	೭೫
೩	ಸಾಮಾನ್ಯ	೯೪	೧೫೧	೨೪೫
೪	ಇತರೆ	೨೪	೨೪	೪೮
	ಒಟ್ಟು	೨೨೬	೨೮೯	೫೧೫

ಕೋಷ್ಟಕ ೬. ಬಂಗಾರಪೇಟೆ ತಾಲೂಕು ಗ್ರಾಮ ಪಂಚಾಯಿತಿಗಳ ಸದಸ್ಯರ ಜಾತಿವಾರು, ಲಿಂಗವಾರು ವಿವರ

ಕ್ರಸಂ.	ತಾಲೂಕು / ಜಿಲ್ಲೆ	ಮಹಿಳೆ	ಪುರುಷ	ಒಟ್ಟು
೧	ಪರಿಶಿಷ್ಟ ಜಾತಿ	೧೨೦	೧೪೧	೨೬೧
೨	ಪರಿಶಿಷ್ಟ ಪಂಗಡ	೨೮	೧೩	೪೧
೩	ಸಾಮಾನ್ಯ	೧೩೨	೧೯೦	೩೨೨
೪	ಇತರೆ	೨೪	೨೨	೪೬
	ಒಟ್ಟು	೩೦೪	೩೬೬	೬೭೦

೧.೭. ಅಧ್ಯಯನದ ಮಿತಿ

ಪ್ರಸ್ತುತ ಅಧ್ಯಯನಕ್ಕೆ ಕೆಲವು ಮಿತಿಗಳನ್ನು ಹಾಕಿಕೊಳ್ಳಲಾಗಿದೆ. ಕರ್ನಾಟಕ ರಾಜ್ಯದಲ್ಲಿ ೧೯೯೩ರ ಪಂಚಾಯತ್ ರಾಜ್ ಅಧಿನಿಯಮ ಜಾರಿಗೆ ಬಂದಮೇಲೆ, ಸ್ಥಳೀಯ ಸರ್ಕಾರಗಳಲ್ಲಿ ದಲಿತರ ಸಹಭಾಗಿತ್ವವನ್ನು ಪ್ರಧಾನ ಆಶಯವಾಗಿ ಗುರುತಿಸಲಾಗಿದೆ. ಅಧ್ಯಯನ ಅವಧಿಯನ್ನು ೨೦೦೫–೨೦೧೦ರಲ್ಲಿ ಕ್ರಮವಾಗಿ ರಚನೆಗೊಂಡ ಗ್ರಾಮ ಪಂಚಾಯಿತಿಯ ಅವಧಿಗೆ ಸಂಬಂಧಿಸಿದ್ದಾಗಿದೆ. ಇದರ ಜೊತೆಗೆ ಎಂಪಿರಿಕಲ್ ಅಂಶಗಳಿಗೆ ಹೆಚ್ಚು ಮಹತ್ವ ನೀಡಲಾಗಿದೆ. ಇದರ ಜೊತೆಗೆ ಕೋಲಾರ ಜಿಲ್ಲೆಯ ದಲಿತರ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಪ್ರಾತಿನಿಧ್ಯ, ಸಹಭಾಗಿತ್ವವನ್ನು ಕೇಂದ್ರೀಕರಿಸಿ ಅಧ್ಯಯನ ಮಾಡಲಾಗಿದೆ. ಅದರೂ ಸಹ ಕೆಲವು ಸಂದರ್ಭಗಳಲ್ಲಿ ಅಂಕಿಅಂಶಗಳ ಕೊರತೆ ಕಾಣಬಹುದಾಗಿದೆ. ಒಟ್ಟಾರೆ ಅಧ್ಯಯನಕ್ಕೆ ಲಭ್ಯವಿರುವ ಅಗತ್ಯ ಮಾಹಿತಿಯನ್ನು ಅತ್ಯಂತ ಸೂಕ್ಷ್ಮತೆಯಿಂದ ಬಳಸಿಕೊಳ್ಳಲಾಗಿದೆ. ಅಧ್ಯಯನ ಕ್ಷೇತ್ರ ಕೂಡ ಅಧ್ಯಯನದ ಪ್ರಮುಖ ಮಿತಿಯಾಗಿದೆ. ಹೇಗೆಂದರೆ ಅಧ್ಯಯನಕ್ಕೆ ಒಳಪಡಿಸಿರುವ ಎರಡು ಪಂಚಾಯಿತಿಗಳಲ್ಲಿ ಹೆಚ್ಚು ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಿರುವುದರಿಂದ ನಮ್ಮ ಅಧ್ಯಯನ ಕೊಡುವ ಒಳನೋಟಗಳನ್ನು ಸಾರ್ವತ್ರಿಕರಣಗೊಳಿಸಲು ಸಾಧ್ಯವಿಲ್ಲದಿರುವುದು ಅಧ್ಯಯನಕ್ಕೆ ಇರುವ ಮತ್ತೊಂದು ಮಿತಿಯಾಗಿದೆ. ಇದೊಂದು ತುಲನಾತ್ಮಕ ಅಧ್ಯಯನವಾಗಿರುವುದರಿಂದ ಈ ಅಧ್ಯಯನವು ಸೂಕ್ಷ್ಮ ಮತ್ತು ಆಳವಾದ ಅಧ್ಯಯನವಾಗಿರುವುದರಿಂದ ಕೋಲಾರ ಜಿಲ್ಲಾ ಪಂಚಾಯಿತಿಗಳಿಗೆ ಮಿತಿಗೊಳಿಸಲಾಗಿದೆ.

೧.೮. ಅಧ್ಯಯನದ ಮಹತ್ವ

ಪ್ರಸ್ತುತ ಅಧ್ಯಯನವು ಎರಡು ಪಂಚಾಯಿತಿಗಳಿಗೆ ಮಿತಿಯಾಗಿದ್ದರೂ ತನ್ನದೇ ಆದ ಮಹತ್ವವನ್ನು ಹೊಂದಿದೆ. ಹೇಗೆಂದರೆ ಸ್ಥಳೀಯ ಸರ್ಕಾರಗಳ ಚಟುವಟಿಕೆಗಳು ಪಂಚಾಯಿತಿ ನೆಲೆಗೊಂಡಿರುವ ಪ್ರದೇಶದ ಭೌಗೋಳಿಕ, ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಪರಿಸರದಿಂದ ಪ್ರಭಾವಿತವಾಗಿರುತ್ತದೆ.

ಹೀಗಾಗಿ ಪ್ರತಿ ಪಂಚಾಯಿತಿಯ ಕಾರ್ಯಕ್ಷಮತೆಯನ್ನು ಪ್ರಜಾಪ್ರಭುತ್ವೀಕರಣ ಗೊಳಿಸಬೇಕಾದರೆ ಅವುಗಳನ್ನು ಆಯಾ ನೆಲೆಯಲ್ಲಿಯೇ ಅರ್ಥ ಮಾಡಿಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ಎರಡು ಪಂಚಾಯಿತಿಗಳನ್ನು ಅಧ್ಯಯನ ಮಾಡಿರುವುದು ಅಲ್ಲಿಯ ದಲಿತರ ಭಾಗವಹಿಸುವಿಕೆಗೆ ಇರುವ ಕಾರ್ಯಕಾರಣ ಸಂಬಂಧಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಿರುವುದರಿಂದ ಉತ್ತಮ ಪ್ರಜಾಪ್ರಭುತ್ವವ ವ್ಯವಸ್ಥೆಯನ್ನು ಸ್ಥಳೀಯ ಸರ್ಕಾರಗಳಲ್ಲಿ ಆಚರಣೆಗೆ ತರಲು ಮಹತ್ವದ ಕೊಡುಗೆಯನ್ನು ಈ ಅಧ್ಯಯನ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಅಧ್ಯಯನವು ತನ್ನದೇ ಆದ ಮಹತ್ವವನ್ನು ಹೊಂದಿದೆ.

೧.೯. ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನದಲ್ಲಿ ಒಟ್ಟು ಏಳು ಅಧ್ಯಾಯಗಳನ್ನು ಒಳಗೊಂಡಿದೆ. ಅವುಗಳ ವಿವರ ಈ ಕೆಳಗಿನಂತಿದೆ.

ಅಧ್ಯಾಯ ಒಂದರಲ್ಲಿ ಪ್ರಸ್ತಾವನೆಯ ಶೀರ್ಷಿಕೆಯಾಗಿದ್ದು, ಈ ಅಧ್ಯಾಯದಲ್ಲಿ ವಿಷಯ ಪ್ರವೇಶ, ಅಧ್ಯಯನದ ಸಮಸ್ಯೀಕರಣ, ಅಧ್ಯಯನದ ಉದ್ದೇಶಗಳು, ಅಧ್ಯಯನ ವಿಧಾನ ಮತ್ತು ಅಧ್ಯಯನದ ಮಹತ್ವ, ಅಧ್ಯಯನದ ರೂಪುರೇಷೆಗಳಿವೆ.

ಅಧ್ಯಾಯ ಎರಡು ಕ್ಷೇತ್ರ ಪರಿಚಯ ಎಂದಿದ್ದು, ಇದರಲ್ಲಿ ಮುಖ್ಯವಾಗಿ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಅಧ್ಯಯನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕ್ಷೇತ್ರ ಪರಿಚಯ ವಿವರಣೆ ನೀಡಲಾಗಿದೆ. ಕೋಲಾರ ಜಿಲ್ಲೆಯ ರಾಜಕೀಯ ಚರಿತ್ರೆ, ಭೌಗೋಳಿಕತೆ, ಹವಾಮಾನ, ಜನಸಂಖ್ಯೆ, ಶಿಕ್ಷಣ, ಆರೋಗ್ಯ, ಆದಾಯ ಮತ್ತು ದಲಿತರ ಮೂಲಭೂತ ಸೌಕರ್ಯ ಮುಂತಾದವುಗಳನ್ನು ವಿವರಿಸಲಾಗಿದೆ.

ಅಧ್ಯಾಯ ಮೂರು ಪಂಚಾಯತ್‌ರಾಜ್ ವ್ಯವಸ್ಥೆ ಸಿದ್ಧಾಂತ ಮತ್ತು ಆಚರಣೆಯನ್ನು ತಿಳಿಸುತ್ತದೆ. ಅದರಲ್ಲಿ ಮುಖ್ಯವಾಗಿ ಭಾರತದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯ ಪರಿಕಲ್ಪನೆ, ಭಾರತದಲ್ಲಿ ಸ್ಥಳೀಯ ಸರ್ಕಾರಗಳ ಉಗಮ ಮತ್ತು ಬೆಳವಣಿಗೆ, ಸಂವಿಧಾನದ ಆಶಯ ಮತ್ತು ಸ್ಥಳೀಯ ಸರ್ಕಾರಗಳು ಕರ್ನಾಟಕದಲ್ಲಿ ಸ್ಥಳೀಯ ಸರ್ಕಾರಗಳ ಹುಟ್ಟು ಮತ್ತು ಬೆಳವಣಿಗೆ. ೧೯೮೩ರ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆ, ಸಂವಿಧಾನದ ೭೩ನೇ ತಿದ್ದುಪಡಿ ಮತ್ತು ದಲಿತರ ಪ್ರತಿನಿಧೀಕರಣ. ೧೯೯೩ರ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆ ಮತ್ತು ದಲಿತರ ಪ್ರತಿನಿಧೀಕರಣ ಕುರಿತ ವಿವರಗಳಿವೆ.

ಅಧ್ಯಾಯ ನಾಲ್ಕರಲ್ಲಿ ಕೋಲಾರ ಜಿಲ್ಲೆಯ ದಲಿತರ ಸಾಮಾಜಿಕ ಸ್ಥಿತಿಗತಿಗಳನ್ನು ವಿಶ್ಲೇಷಿಸಲಾಗಿದೆ. ದಲಿತರಿಗಾಗಿರುವ ಸಾಮಾಜಿಕ ಸಂರಕ್ಷಣಾ ಕ್ರಮಗಳು, ಶಿಕ್ಷಣ, ಆರೋಗ್ಯ, ಆದಾಯ, ವಸತಿ ಮತ್ತು ದಲಿತರ ಮೂಲಸೌಕರ್ಯಗಳ ಸ್ವರೂಪವನ್ನು ಹಿಡಿದಿಡಲಾಗಿದೆ.

ಅಧ್ಯಾಯ ಐದರಲ್ಲಿ ಕೋಲಾರ ಜಿಲ್ಲೆಯ ದಲಿತರ ಆರ್ಥಿಕ ಸ್ಥಿತಿಗತಿಯನ್ನು ಅಧ್ಯಯನಕ್ಕೊಳ ಪಡಿಸಲಾಗಿದೆ. ದಲಿತರ ಆರ್ಥಿಕ ಅಭಿವೃದ್ಧಿಗಾಗಿ ಇರುವ ಯೋಜನೆಗಳು ಮತ್ತು ಕಾಯ್ದೆ

ಕಾನೂನುಗಳ ವಿವರ, ಭೂಮಿ, ಉದ್ಯೋಗ, ದಲಿತರ ದುಡಿಮೆಯ ಸ್ವರೂಪವ ಮತ್ತು ಅದರ ರಾಚನಿಕ ಸಂಬಂಧಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಾಯ ಆರರಲ್ಲಿ ವಿಶೇಷವಾಗಿ ದಲಿತರ ರಾಜಕೀಯ ಭಾಗವಹಿಸುವಿಕೆಯನ್ನು ೧೯೯೩ರ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆ ಮತ್ತು ದಲಿತರ ಭಾಗವಹಿಸುವಿಕೆಯ ವಿವರಣೆಯನ್ನು ನೀಡಲಾಗಿದೆ. ಸ್ಥಳೀಯ ಸರ್ಕಾರಗಳಲ್ಲಿ ದಲಿತರು ಎದುರಿಸುತ್ತಿರುವ ಸವಾಲುಗಳನ್ನು ವಿಶ್ಲೇಷಿಸಲಾಗಿದೆ. ಭಾರತದಲ್ಲಿ ಅಸ್ಪೃಶ್ಯತೆಯ ಆಚರಣೆಗಳಿಂದ ದಲಿತ ಸಮುದಾಯಗಳಿಗೆ ಆಗುತ್ತಿರುವ ಅನ್ಯಾಯಗಳನ್ನು ತಿಳಿಸಲಾಗಿದೆ. ದಲಿತರಲ್ಲಿರುವ ಬಹುಸಂಖ್ಯಾತ ಸಮುದಾಯಗಳಲ್ಲಿನ ಐಕ್ಯತೆಯ ಕೊರತೆ, ಜಾತಿ ಲೆಕ್ಕಾಚಾರದ ರಾಜಕಾರಣ, ಜಾತಿ ಧ್ರುವೀಕರಣ(ಒಳಮೀಸಲಾತಿ) ಸಮರ್ಥ ನಾಯಕತ್ವ ಕೊರತೆ, ದಲಿತರ ಭಾಗವಹಿಸುವಿಕೆಯ ಮೌಲ್ಯಮಾಪನ(ರಾಜಕೀಯ)ವನ್ನು ವಾಸ್ತವಿಕವಾಗಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ.

ಅಧ್ಯಾಯ ಏಳು ಸಮಾರೋಪವಾಗಿದೆ. ಇಲ್ಲಿ ಅಧ್ಯಯನದ ಒಟ್ಟು ಸಾರಾಂಶವನ್ನು ಹಿಡಿದಿಡುವ ಜೊತೆಗೆ ಅಧ್ಯಯನವು ಕಂಡುಕೊಂಡ ಫಲಿತಗಳನ್ನು ಮತ್ತು ತಾತ್ಕಾಲಿಕ ನಿರ್ಧಾರಗಳನ್ನು ವಿಶ್ಲೇಷಿಸಿ ಅಧ್ಯಯನದ ಮಿತಿಯೊಳಗೆ ಕೆಲವು ಪರಿಹಾರೋಪಾಯಗಳನ್ನು ನೀಡಲಾಗಿದೆ.

ಅನುಬಂಧದಲ್ಲಿ ಪರಾಮರ್ಶನ ಗ್ರಂಥಗಳು, ನಕ್ಷೆಗಳು ಮತ್ತು ಛಾಯಾಚಿತ್ರಗಳನ್ನು ಅಧ್ಯಯನಕ್ಕೆ ಪೂರಕವಾಗಿ ನೀಡಲಾಗಿದೆ.

ಆಕರಗಳು

ಪ್ರಶಾಂತ್ ಎಚ್.ಡಿ., (೨೦೦೩), ವೃದ್ಧರ ಪರಿಕಲ್ಪನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಪ್ರಶಾಂತ್ ಎಚ್.ಡಿ., (೨೦೦೪), ಶಾಲಾ ಬಿಸಿಯೂಟ ಅಧ್ಯಯನ ವರದಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಪ್ರಶಾಂತ್ ಎಚ್.ಡಿ., (೨೦೦೫), ಮಕ್ಕಳ ಶಿಕ್ಷಣ ಮತ್ತು ಬದಲಾಗುತ್ತಿರುವ ಪೋಷಕರ ಮನೋಭಾವ, ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

ಪ್ರಶಾಂತ್ ಎಚ್.ಡಿ., (೨೦೦೫), ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

ಪ್ರಶಾಂತ್ ಎಚ್.ಡಿ., (೨೦೦೫), ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರೊಂದಿಗೆ

ಸಂವಾದ, ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಪ್ರಶಾಂತ್ ಎಚ್.ಡಿ., (೨೦೦೬), ಶಾಲಾ ಶಿಕ್ಷಣದ ವಿಕೇಂದ್ರೀಕರಣ ಎಸ್.ಡಿ.ಎಂ.ಸಿ. ಕಾರ್ಯಕ್ಷಮತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಪ್ರಶಾಂತ್ ಎಚ್.ಡಿ., (೨೦೦೬), ಹೆಣ್ಣುಮಕ್ಕಳ ಶಿಕ್ಷಣ : ಒಂದು ಸ್ಥೂಲ ನೋಟ, ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ, ಸಂ.೫, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

ಪ್ರಶಾಂತ್ ಎಚ್.ಡಿ. (ಸಂ.), (೨೦೦೬), ಎಸ್.ಡಿ.ಎಂ.ಸಿ ಹಾಗೂ ಶಿಕ್ಷಕರ ನಡುವೆ ಭಿನ್ನಮತ–ಅಪನಂಬಿಕೆ–ಗೊಂದಲ–ಅಸಹಕಾರ, ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ, ಸಂ.೫, ಸಂಚಿಕೆ ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

ಪ್ರಶಾಂತ್ ಎಚ್.ಡಿ., (೨೦೦೬), ಹೈದ್ರಾಬಾದ್ ಕರ್ನಾಟಕದಲ್ಲಿ ಶಾಲಾ ಶಿಕ್ಷಣ ಸಾರ್ವತ್ರೀಕರಣದ ಅನುಭವಗಳು, ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣದ ಗತಿಶೀಲತೆ, ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ (ಆಗಸ್ಟ್), ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಪ್ರಶಾಂತ್ ಎಚ್.ಡಿ., (೨೦೦೭), ಶಾಲಾ ಶಿಕ್ಷಣ, ಅಭಿವೃದ್ಧಿ ಪಥ, ಸುವರ್ಣ ಕರ್ನಾಟಕ ಸಂಪುಟ ೧, (ಸಂಪಾದಕರು ಹಿ.ಚಿ. ಬೋರಲಿಂಗಯ್ಯ), ಗೆಜೆಟಿಯರ್ ಆಫ್ ಕರ್ನಾಟಕ ಮತ್ತು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

ಪ್ರಶಾಂತ್ ಎಚ್.ಡಿ., (೨೦೦೭), ಶಾಲಾ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಸಹಭಾಗಿತ್ವ ಕರ್ನಾಟಕದ ಅನುಭವಗಳು : ಸಾಧನೆ–ಸವಾಲು–ಸಾಧ್ಯತೆ, ಅಭಿವೃದ್ಧಿ ಅಧ್ಯಯನ, ಸಮಾಜ ವಿಜ್ಞಾನ ಪತ್ರಿಕೆ, (ಜನವರಿ–ಜೂನ್), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

ಪ್ರಶಾಂತ್ ಎಚ್.ಡಿ., (೨೦೦೮), ಗುಣಾತ್ಮಕ ಶಾಲಾ ಶಿಕ್ಷಣ: ಸಮುದಾಯದ ಸಹಭಾಗಿತ್ವ ಕರ್ನಾಟಕದಲ್ಲಿ ಗ್ರಾಮ ಪಂಚಾಯಿತಿಯ ನಾಗರಿಕ ಸೌಲಭ್ಯ ಸಮಿತಿ ಸದಸ್ಯರಿಗೆ ಮತ್ತು ಎಸ್.ಡಿ.ಎಂ.ಸಿ. ಸದಸ್ಯರಿಗೆ ತರಬೇತಿ ನೀಡುವ ಸಂಪನ್ಮೂಲ ವ್ಯಕ್ತಿಗಳಿಗೆ ಮತ್ತು ಸದಸ್ಯರಿಗೆ ರೂಪಿಸಿದ ತರಬೇತಿ ಸಾಹಿತ್ಯ, ಕರ್ನಾಟಕ ಸರ್ಕಾರ ಸರ್ವಶಿಕ್ಷಣ ಅಭಿಯಾನ, ಕರ್ನಾಟಕ.

ಪ್ರಶಾಂತ್ ಎಚ್.ಡಿ., (೨೦೦೯), ಶಾಲಾ ಶಿಕ್ಷಣದ ಸಾರ್ವತ್ರೀಕರಣದ ದಲಿತ ಮಕ್ಕಳ ಸ್ಥಿತಿ, ಪ್ರಸಾರಾಂಗ, ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ, ಮೈಸೂರು.

ಕಾಂಚ ಐಲಯ್ಯ, (೧೯೯೬), *ವೈ ಐಯಾಮ್ ನಾಟ್ ಎ ಹಿಂದೂ*, ಸ್ವಾಮಯಾ ಪಬ್ಲಿಕೇಷನ್ಸ್, ಕಲ್ಕತ್ತ

ಕಾಂಚ ಐಲಯ್ಯ, (೨೦೦೦), ‘ದ ಸ್ಟೇಟ್ ಅಪ್ರಶನ್ಸ್ ಆ್ಯಂಡ್ ವೀಕರ್ ಸೆಕ್ಷನ್ಸ್’, ಇನ್ ರಾವ್, ಚಂದ್ರು, ಸುಬ್ಬು ಡಿ ಫ್ರಾನ್ಸಿಸ್ (ಎಡಿಟ್), *ಡೆವಲಪ್‌ಮೆಂಟ್ ಆಫ್ ವೀಕರ್ ಸೆಕ್ಷನ್ಸ್*, ರಾವತ್ ಪಬ್ಲಿಕೇಷನ್ಸ್, ಜೈಪುರ್ ಆ್ಯಂಡ್ ನ್ಯೂದೆಹಲಿ

ಉಷಾದೇವಿ ಎಂ.ಡಿ. (೨೦೦೩), “ಗ್ರಾಸ್‌ರೂಟ್ಸ್ ಸ್ಟ್ರಕ್ಚರ್ ಇನ್ ಡಿಸೆಂಟ್ರಲೈಸ್ಡ್ ಮ್ಯಾನೆಜ್‌ಮೆಂಟ್ ಆಫ್ ಎಲಿಮೆಂಟರಿ ಎಜುಕೇಷನ್ ಇನ್ ಕರ್ನಾಟಕ: ಕ್ರಿಟಿಕಲ್ ಇಶ್ಯೂಸ್ ಇನ್ ಕೆಪಾಸಿಟಿ ಬಿಲ್ಡಿಂಗ್”, *ಇಂಡಿಯಾ ಸೋಶಿಯಲ್ ಸೈನ್ಸ್ ರಿವ್ಯೂ*, ವಾಲ್ಯೂಮ್-೫, ನವೆಂಬರ್-ಡಿಸೆಂಬರ್ ೨, ಸೇಜ್, ನ್ಯೂಡೆಲ್ಲಿ.

ಅಧ್ಯಾಯ ಎರಡು

ಅಧ್ಯಯನ ಕ್ಷೇತ್ರ ಪರಿಚಯ

೨.೧. ಕೋಲಾರ ಜಿಲ್ಲೆಯ ಭೌಗೋಳಿಕ ಪರಿಚಯ

೨.೨. ನೈಸರ್ಗಿಕ ಸಂಪನ್ಮೂಲಗಳು

೨.೩. ಜನಸಂಖ್ಯೆ

೨.೪. ಶಿಕ್ಷಣ

೨.೫. ಆರೋಗ್ಯ

೨.೬. ಆದಾಯ

೨.೭. ಮೂಲಭೂತ ಸೌಕರ್ಯಗಳು

ಅಧ್ಯಾಯ ಎರಡು

ಅಧ್ಯಯನ ಕ್ಷೇತ್ರ ಪರಿಚಯ

ಕೋಲಾರ ಜಿಲ್ಲೆ ಕರ್ನಾಟಕದ ೩೦ ಜಿಲ್ಲೆಗಳಲ್ಲಿ ಒಂದಾಗಿದೆ. ಈ ಹಿಂದಿನ ಅವಿಭಜಿತ–ಕೋಲಾರ ಜಿಲ್ಲೆ!! ತಾಲೂಕಗಳನ್ನು ಒಳಗೊಂಡಿತ್ತು. ೨೦೦೭ರಲ್ಲಿ ಕೋಲಾರ ಜಿಲ್ಲೆಯನ್ನು ವಿಭಜಿಸಿ. ಚಿಕ್ಕಬಳ್ಳಾಪುರ ಜಿಲ್ಲೆಯಾಗಿ ರಚಿಸಿಲಾಯಿತು. ಈಗ ಕೋಲಾರ ಜಿಲ್ಲೆಯಲ್ಲಿ ಶ್ರೀನಿವಾಸಪುರು, ಮಾಲೂರು, ಬಂಗಾರಪೇಟೆ, ಕೋಲಾರ, ಮತ್ತು ಮುಳಬಾಗಿಲು ತಾಲೂಕುಗಳನ್ನು ಒಳಗೊಂಡಿದೆ. ಕೋಲಾರ ಜಿಲ್ಲಾ ಕೇಂದ್ರವಾಗಿದೆ. ಅದೇ ರೀತಿಯಾಗಿ ಗೌರಿಬಿದನೂರು, ಗುಡಿಬಂಡೆ, ಭಾಗಪಲ್ಲಿ, ಚಿಂತಾಮಣಿ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ತಾಲೂಕುಗಳನ್ನೊಳಗೊಂಡ ಚಿಕ್ಕಬಳ್ಳಾಪುರ ಜಿಲ್ಲೆ ೨೦೦೭ರಲ್ಲಿ ರಚನೆಯಾಯಿತು. ಈಗ ಕೋಲಾರ ಜಿಲ್ಲೆ ೫ ತಾಲೂಕುಗಳನ್ನು ಒಳಗೊಂಡಿದೆ. ಕೋಲಾರ ಜಿಲ್ಲೆಯನ್ನು ಹಲವಾರು ಅನ್ವರ್ಥ ನಾಮಗಳಿಂದ ಕರೆಯಲಾಗುತ್ತಿದೆ. ರೇಷ್ಮೆನಾಡು, ಚಿನ್ನದ ತವರು, ಮಾವಿನ ತವರು, ಹೈನುಗಾರಿಕೆಯ ನೆಲೆ ಎಂಬ ಹೆಸರಿನಿಂದ ಗುರುತಿಸುತ್ತಾ ಬರಲಾಗಿದೆ.

ಕೋಲಾರ ಜಿಲ್ಲೆ ಭಾರತದ ಕರ್ನಾಟಕ ರಾಜ್ಯದ ದಕ್ಷಿಣ ಭಾಗದ ಪೂರ್ವಾಂಚಿನಲ್ಲಿನ ಪರ್ಶಚಿಮಕ್ಕೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಉತ್ತರಕ್ಕೆ ಚಿಕ್ಕಬಳ್ಳಾಪುರ ಜಿಲ್ಲೆ ಪೂರ್ವಕ್ಕೆ ಆಂದ್ರಪ್ರದೇಶದ ಚಿತ್ತೂರು ಜಿಲ್ಲೆ ಮತ್ತು ದಕ್ಷಿಣ ತಮಿಳು ನಾಡಿನ ವೆಲ್ಲೂರು ಜಿಲ್ಲೆಗಳು ಹೊಂದಿಕೊಂಡಿವೆ. ಜಿಲ್ಲೆಯ ಪ್ರಮುಖ ಭಾಷೆ ಕನ್ನಡ ಮತ್ತು ತೆಲುಗು ಭಾಷೆಯ ಪ್ರಭಾವವೂ ಕೂಡ ಈ ಜಿಲ್ಲೆಯ ಜನರ ಮೇಲೆ ಪ್ರಭಾವ ಬೀರಿದುಂಟು. ಈ ಜಿಲ್ಲೆಯ ಬಹುವಿಸ್ತಾರವಾದ ಚರಿತ್ರೆ ಮತ್ತು ಸಂಸ್ಕೃತಿ ಇದೆ. ಈ ಜಿಲ್ಲೆಯಲ್ಲಿ ವೈವಿಧ್ಯ ಪೂರ್ಣಸಮುದಾಯಗಳ ಜನರು ವಾಸವಿಸುತ್ತಾರೆ. ಈ ಜಿಲ್ಲೆಯ ಆಂದ್ರಪ್ರದೇಶ ಮತ್ತು ತಮಿಳುನಾಡಿನ ರಾಜ್ಯಗಳಿಗೆ ಹೊಂದಿಕೊಂಡಿರುವುದರಿಂದ ಕನ್ನಡದ ಜೊತೆಗೆ ತೆಲುಗು, ತಮಿಳು ಉರ್ದು ಮಾತಾಡುವ ಮಹತ್ತರವಾದ ಜನಸಂಖ್ಯೆಯನ್ನು ಹೊಂದಿದೆ.

ಆರ್ಥಿಕವಾಗಿ ಕೋಲಾರ ಜಿಲ್ಲೆ ಉತ್ತಮ ಸ್ಥಿತಿಯಲ್ಲಿದೆ. ಆದರೂ ಸ್ವಭಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ಜಿಲ್ಲೆಯ ಜನರಿಗೆ ಇನ್ನು ಸಾಧ್ಯವಾಗಿಲ್ಲ. ಜಿಲ್ಲೆಯ ಪ್ರಮುಖ ಉದ್ಯೋಗದ ಮೂಲಗಳು,

ರೇಷ್ಮೆ ಕೃಷಿ, ಹೈನುಗಾರಿಕೆ, ಒಕ್ಕಲುತನ, ಹೂವಿನ ಕೃಷಿ, ತೋಟಗಾರಿಕೆ, ವ್ಯಾಪಾರೋದ್ಯಮ ಮತ್ತು ಸಣ್ಣ ಪುಟ್ಟ ಕೈಗಾರಿಕೆಗಳು ಜನರಿಗೆ ಉದ್ಯೋಗ ನೀಡಿವೆ. ಆದರೆ ಇವು ಯಾವುವು ಸಹ ಆರ್ಥಿಕ ಭದ್ರತೆಯನ್ನು ಒದಗಿಸಿಲ್ಲ. ಹಾಗಾಗಿ ಬೆಂಗಳೂರು ಹತ್ತಿರ ವಿರುವುದರಿಂದ ಉದ್ಯೋಗವನ್ನರಸಿ ಬೆಂಗಳೂರಿಗೆ ಬರುವ ಪ್ರವೃತ್ತಿಯು ಜಿಲ್ಲೆಯ ಜನರಲ್ಲಿ ಕಂಡುಬರುತ್ತಿದೆ.

ಸಾಂಸ್ಕೃತಿಕವಾಗಿ ಕೋಲಾರ ಜಿಲ್ಲೆ ಹಿರಿಮೆಯನ್ನು ಹೊಂದಿದೆ. ಕೋಲಾರ ಗಂಗರ ರಾಜಧಾನಿ ಯಾಗಿತ್ತು. ನಂತರ ಚಾಲುಕ್ಯರ ಮತ್ತು ಚೋಳರ ಮಧ್ಯದ ಆಳ್ವಿಕೆಯಲ್ಲಿ ಯುದ್ಧಭೂಮಿಯಾಗಿತ್ತು. ಕುದುರುಮತಿ ಸೋಮನಾಥೇಶ್ವರ ದೇವಾಲಯ, ಚೋಳರ ರಾಮಲಿಂಗೇಶ್ವರ ದೇವಾಲಯ, ಕೋಲಾರದ ಲಿಂಗಾರದ ಗಣಿ ಮುಂತಾದವು ಕೋಲಾರ ಜಿಲ್ಲೆಯ ಸಾಂಸ್ಕೃತಿಕ ಹಿರಿಮೆಯನ್ನು ಹೆಚ್ಚಿಸಿವೆ.

ಅದೇ ರೀತಿಯಾಗಿ ಕೋಲಾರ ಜಿಲ್ಲೆ ಕರ್ನಾಟಕ ರಾಜ್ಯಕ್ಕೆ ಉತ್ತಮ ರಾಜಕಾರಣಿಗಳನ್ನು ಉದ್ಯಮಿಗಳನ್ನು, ಸಾಹತಿಗಳನ್ನು ನೀಡಿದೆ. ಅದರಲ್ಲಿ ಅನೇಕ ಹೆಸರಾಂತ ವ್ಯಕ್ತಿಗಳು ಗೋಚರಿಸುತ್ತಾರೆ.

ರಾಜಕೀಯವಾಗಿ ಗುರುತಿಸುವುದಾದರೂ ಕರ್ನಾಟಕ ರಾಜ್ಯದ ಮೊದಲ ಮುಖ್ಯಮಂತ್ರಿಗಳಾದ ಕೆ.ಚಂಗಲ್‌ರಾಯರೆಡ್ಡಿ, ಟಿ. ಚನ್ನಯ್ಯ ಕರ್ನಾಟಕದ ರಾಜಕಾಣರಕ್ಕೆ ಹೊಸ ಆಯಾಮ ತಂದುಕೊಟ್ಟವರು. ಆಡಳಿತದ ಪಾರದರ್ಶಕತೆ ಮತ್ತು ನೈತಿಕತೆಯನ್ನು ಪ್ರತಿಪಾದಿಸಿ ಇತರರಿಗೆ ಮಾದರಿಯಾಗುವಂತೆ ಕೆ.ಸಿ. ರೆಡ್ಡಿಯಿಂದ ಹಿಡಿದು ಇಂದಿನ ಶ್ರೀ ರಮೇಶ್‌ಕುಮಾರ ಅವರ ವರೆಗೂ ಕೊಲಾರ ಜಿಲ್ಲೆ ಕರ್ನಾಟಕದ ರಾಜಕೀಯಕ್ಕೆ ಮೌಲ್ಯಗಳನ್ನು ನೀಡುತ್ತಾ ಬಂದಿದೆ. ಇಂದಿನ ಶ್ರೀನಿವಾಸಪುರ ವಿಧಾನ ಸಭೆ ಕ್ಷೇತ್ರದ ಶಾಸಕರು ಮತ್ತು ಸಭ್ಪತಿಯೂ ಆಗಿರುವ ಶ್ರೀ ರಮೇಶಕುಮಾರ ಅವರು ಆಡಳಿತದ ದಕ್ಷತೆ, ಬುದ್ಧಿವಂತಿಕೆ, ದೂರದೃಷ್ಟಿ, ಸಾಮಾಜಿಕ ಕಳಕಳೊಯನ್ನು ಈ ರಾಜ್ಯದ ಜನ ಎಂದಿಗೂ ಮರೆಯುವಂತಿಲ್ಲ. ಇದಕ್ಕೆ ಉತ್ತಮ ಉದಾ. ಎಂದರೆ ಅವರು ಶಾಸಕರಾಗಿ, ಸಚಿವರಾಗಿ ನಿರ್ಹಿಹಿಸಿದ ವರದಿ ಜಾರಿಯಾಗುವಂತೆ ಮಾಡಿದರು. ಅದೇ ರೀತಿಯಾಗಿ ೨೦೧೧ರಲ್ಲಿ ವೈದ್ಯಕೀಯ ಸಚಿವರಾಗಿ ಕರ್ನಾಟಕ ವೈದ್ಯಕೀಯ ಮಸೂದೆಯನ್ನು ಸಮರ್ಥವಾಗಿ ಮಂಡಿಸಿದ್ದ ಅವರ ದೂರದೃಷ್ಟಿಯನ್ನು ಸೂಚಿಸುತ್ತದೆ. ವಿಧಾನಸಭೆಯ ಸಭಾಪತಿಯಾಗಿ ಸದನದ ಒಳಗೂ ಮತ್ತು ಹೊರಗೆ ಅವರ ನಡೆ ನುಡಿ ಮತ್ತೊಬ್ಬರಿಗೆ ಮಾದರಿಯಾಗಿದೆ. ಹಾಗಾಗಿ ಅವರನ್ನು ಸಾರ್ವಜನಿಕರು ಮತ್ತು ಶಾಸಕರು ನೇರ ನಿಷ್ಠುರವಾದ ಆದರ್ಶಿ ರಾಜಕಾರಿಣಿಯಂತಲೆ ಗುರುತಿಸುತ್ತಾರೆ. ಅದೇ ರೀತಿಯಾಗಿ ಕೋಲಾರ ಜಿಲ್ಲೆ ಅನೇಕ ಹೆಸರಾಂತ ವ್ಯಕ್ತಿಗಳ ನೆಲೆಯಾಗಿದೆ. ಜ್ಞಾನಪೀಟ ಪ್ರಶಸ್ತಿ ಶ್ರೀ ಮಾಸ್ತಿ ವೆಂಕಟೇಶ್ವರ ಅಯ್ಯಂಗಾರ, ಕನ್ನಡ ಹೆಸರಾಂತ ಕೃತಿ–ಮಂಕುತಿಮ್ಮನ ಕಗ್ಗ ಖ್ಯಾತಿ ಡಿ.ವಿ. ಗುಂಡಪ್ಪ, ಇನ್ಫೋಸಿಸ್‌ನ ಸಂಸ್ಥಾಪಕ ಎಸ್.ಆರ್. ನಾರಾಯಣ ಮೂರ್ತಿ ಕೋಲಾರ ಜಿಲ್ಲೆಗೆ ಸೇರಿದವರು.

ಅದೇ ರೀತಿಯಾಗಿ ಕರ್ನಾಟಕ ರಾಜ್ಯದಲ್ಲಿ ಕೋಲಾರ್ ಜಿಲ್ಲೆಯೆಂದರೆ ಚಳುವಳಿಗಳ ತವರು ಎಂದು ಸಹಕರೆಯುತ್ತಾರೆ. ಸಾಮಾನ್ಯವಾಗಿ ಕರ್ನಾಟಕದ ಬಹುತೇಕ ಸಾಮಾಜಿಕ ಚಳುವಳಿಗಳು ಕೋಲಾರ ಜಿಲ್ಲೆಯಲ್ಲಿ ಹುಟ್ಟುತ್ತವೆ ಎಂಬ ಮಾತಿದೆ. ಅದರಂತೆ ಕೋಲಾರ ಜಿಲ್ಲೆಯ ದಲಿತ ನಾಯಕರು ಅನೇಕ ಸಾಮಾಜಿಕ ಚಳುವಳಿಗೆ ಜಿವ ತುಂಬಿದವರು ಮತ್ತು ಜೀವನ ಸವೆಸಿದವರು ಇದ್ದಾರೆ. ಅದರಲ್ಲಿ ಪ್ರಮುಖವಾದವರೆಂದರೆ ಕೊಟಗಾನಹಳ್ಳಿ ರಾಮಯ್ಯ, ಎನ್. ವೆಂಕಟೇಶ್, ಸಿ.ಎಂ. ಮುನಿಯಪ್ಪ, ಗೊಲ್ಲಳ್ಳಿ ಶಿವಪ್ರಸಾದ್, ಎನ್. ಶಿವಣ್ಣ, ಎಂ.ವೆಂಕಟಸ್ವಾಮಿ, ಟಿ. ವಿಜಯಕುಮಾರ್, ಎನ್. ಮುನಿಸ್ವಾಮಿ.

೨.೧. ಕೋಲಾರ ಜಿಲ್ಲೆಯ ಭೌಗೋಳಿಕ ಪರಿಚಯ

ಕೋಲಾರ ಜಿಲ್ಲೆಯು 'ರೇಷ್ಮೆ, ಹಾಲು ಮತ್ತು ಚಿನ್ನದ ನಾಡೆಂದು ಕರೆಯಲ್ಪಡುತ್ತದೆ. ಮತ್ತು ಈ ಜಿಲ್ಲೆ ಭಾರತದ ಕರ್ನಾಟಕ ರಾಜ್ಯದ ಈಶಾನ್ಯ ಪ್ರದೇಶದಲ್ಲಿ ನೆಲೆಸಿದೆ. ಈ ಹಿಂದೆ ೧೧ ತಾಲೂಕುಗಳನ್ನು ಹೊಂದಿದ್ದ ಸಮಗ್ರ ಕೋಲಾರ ಜಿಲ್ಲೆಯನ್ನು ೨೦೦೭ರಲ್ಲಿ ವಿಭಜಿಸಿ ಚಿಕ್ಕಬಳ್ಳಾಪುರವನ್ನು ಹೊಸ ಜಿಲ್ಲೆಯಹಾಗಿ ಘೋಷಿಸಲಾಯಿತು. ಪ್ರಸ್ತುತ ಕೋಲಾರ ಬಿಂದು ಲೋಕಸಭಾ ಕ್ಷೇತ್ರ ಮತ್ತು ೬ ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದೆ.

ಕೋಲಾರ ಜಿಲ್ಲೆಯನ್ನು ಅರೆ-ಒಣ, ಬರಡು ಪ್ರದೇಶವೆಂದು ವರ್ಗೀಕರಿಸಲಾಗಿದ್ದು, ೧೩.೭'೪೮" ಓ ೭೮.೭;೪೮ ಇ ನಡುವೆ ಇದೆ. ಈ ಪ್ರದೇಶವ ಸಮುದ್ರ ಮಟ್ಟದಿಂದ ಸರಾಸರಿ ೮೨೨ ಮೀಟರ್‌ಗಳ ಎತ್ತರದಲ್ಲಿದೆ. ಕೋಲಾರ ಜಿಲ್ಲೆ ಭಾರತದಲ್ಲಿನ ಕರ್ನಾಟಕ ರಾಜ್ಯದ ದಕ್ಷಿಣದ ಪೂರ್ವದಂಚಿನಲ್ಲಿದೆ. ಈ ಜಿಲ್ಲೆಯು ಪಶ್ಚಿಮದ ಅಂಚಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಉತ್ತರಕ್ಕೆ ಚಿಕ್ಕಬಳ್ಳಾಪುರ ಜಿಲ್ಲೆ, ಪಶ್ಚಿಮಕ್ಕೆ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆ ಮತ್ತು ದಕ್ಷಿಣಕ್ಕೆ ತಮಿಳುನಾಡಿನ ವೆಲ್ಲೂರು ಜಿಲ್ಲೆಗಳಿಗೆ ಹೊಂದಿಕೊಂಡಂತಿದೆ.[೧] ಜಿಲ್ಲೆಯ ಸ್ಥಳ/ಪ್ರದೇಶವು ಅತಿಯಾಕಾರದ ಸಮತಟ್ಟುಗಳಿಂದ ಕೂಡಿದೆ. ಕೋಲಾರ ಜಿಲ್ಲೆಯ ಮಣ್ಣಿನ ಸ್ವಭಾವ ಬೆಟ್ಟಗಳು, ಪರ್ವತ ಶ್ರೇಣಿಗಳು, ಶಿಖರಗಳು, ಸಮತಟ್ಟು ಪ್ರದೇಶಗಳು, ಕಣಿವೆಗಳನ್ನು ಆಧರಿಸಿದೆ. ಜಿಲ್ಲೆಯಲ್ಲಿ ಕಂಡುಬರುವ ಮಣ್ಣಿನ ಸ್ವರೂಪ ಕೆಂಪು ಜೇಡಿ ಮಣ್ಣಿನಿಂದ ಹಿಡಿದು, ಕೆಂಪು ಮರಳು ಮಣ್ಣು ಮತ್ತು ಲ್ಯಾಬೆರೆಟಿಕ್ ಮಣ್ಣಿನಿಂದ ಕೂಡಿದೆ. ಈ ಪ್ರದೇಶದಲ್ಲಿ ಮಣ್ಣಿನ ಸವೆತ ಸಾದಾರಣ ಪ್ರಮಾಣದಲ್ಲಿದೆ.

ಜಿಲ್ಲೆಯಲ್ಲಿ ೫.೫% ಅರಣ್ಯ ಪ್ರದೇಶವಿದೆ. ಈ ಪೈಕಿ ಬಹುತೇಕವಾಗಿ ಕುರುಚಲು ಅರಣ್ಯವಿದೆ. ಜಿಲ್ಲೆಯಲ್ಲಿ ಮಣ್ಣಿನ ಕೆಳಗೆ ಗ್ರ್ಯಾನೈಟ್, ಗ್ನೈಸ್ಸೆಸ್, ಶಿಸ್ಟಸ್, ಲ್ಯಾಚರೆಟ್ಸ್ ಮತ್ತು ಅಲ್ಯೂಮೀನಿಯಂ ಕಲ್ಲುಗಳಿಂದ ಕೂಡಿದೆ. ಕೋಲಾರ ಪ್ರದೇಶ ಪಾಲಾರ ಮತ್ತು ಉತ್ತರ ಹಾಗೂ ದಕ್ಷಿಣ ಪಿನಾಕಿನಿ ಜಿಲ್ಲೆಯ ಪ್ರಮುಖ ನದಿಗಳಾಗಿವೆ. ಈ ನದಿಗಳು ಕೇವಲ ಋತು ಕಾಲದಲ್ಲಿ ಮಾತ್ರ ಹರಿಯುತ್ತವೆ. ವರ್ಷಾಂಪೂರ್ತಿಯಾಗಿ ಹರಿಯುವ ನದಿಗಳಲ್ಲ. ಹಾಗಾಗಿ ಮಳೆ ಮತ್ತು ಉತ್ತಮ ಹವಾಮಾನವನ್ನು ಜಿಲ್ಲೆ ಅವಲಂಬಿಸಿದೆ. ಐದು ತಾಲೂಕುಗಳು (ಕೋಲಾರ, ಮಾಲೂರು, ಮುಳಬಾಗಿಲು, ಬಂಗಾರಪೇಟೆ ಮತ್ತು ಶ್ರೀನಿವಾಸಪುರ) ಸೇರುತ್ತವೆ.

ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ ೩೯೬೯ ಚ.ಕಿ.ಮೀಟರ್‌ಗಳಾಗಿದ್ದು, ಇದು ರಾಜ್ಯದ ವಿಸ್ತೀರ್ಣದ ಶೇ.೨.೦೬ ರಷ್ಟಾಗಿದೆ. ಇದು ರಾಜ್ಯದ ೩೦ ಜಿಲ್ಲೆಗಳ ಪೈಕಿ ವಿಸ್ತೀರ್ಣದಲ್ಲಿ ಜಿಲ್ಲೆಯು ಹತ್ತೊಂಬತ್ತನೆಯ ಸ್ಥಾನವನ್ನು ಪಡೆದಿದೆ.[೨] ಜಿಲ್ಲೆಯಲ್ಲಿ ಮುಖ್ಯವಾಗಿ ಉತ್ತರದಲ್ಲಿ ಉತ್ತರ ಪಿನಾಕಿನ ನದಿ ಮತ್ತು ದಕ್ಷಿಣದಲ್ಲಿ ಪಾಲಾರ ನದಿ, ಪೂರ್ವದೆಡೆ ಹುಟ್ಟುವ ದಕ್ಷಿಣ ಪಿನಾಕಿನ ನದಿಗಳು ದಕ್ಷಿಣದ ದಿಕ್ಕಿಗೆ ಹರಿಯುತ್ತವೆ. ಜಿಲ್ಲೆಯಲ್ಲಿ ಸರ್ವಋತು ನದಿಗಳಿಲ್ಲ. ಇಲ್ಲಿನ ಬಹುತೇಕ ನದಿಗಳು ಸಣ್ಣ ಪ್ರಮಾಣದವುಗಳಾಗಿದ್ದು, ಮಳೆಗಾಲದಲ್ಲಿ ಮಾತ್ರ ಇವು ಹರಿಯುತ್ತವೆ.[೩]

ಹವಾಮಾನ

ಕೋಲಾರ ಜಿಲ್ಲೆಯು ಹವಾಮಾನದ ದೃಷ್ಟಿಯಿಂದ ಸಮಶೀತೋಷ್ಣ ವಲಯವಾಗಿದೆ. ಫೆಬ್ರವರಿ ತಿಂಗಳಿನಿಂದ ಮೇ ತಿಂಗಳುಗಳ ಅವಧಿಯಲ್ಲಿ ಗುಡುಗು ಮಿಂಚುಗಳಿಂದ ಕೂಡಿದ ಮಳೆಯಾಗುವುದು ಸಾಮಾನ್ಯವಾಗಿ ಕಂಡು ಬರುತ್ತದೆ. ಚಳಿಗಾಲದಲ್ಲಿ ಕನಿಷ್ಠ ಉಷ್ಣತೆ ೮.೩ ಇದ್ದು, ಗರಿಷ್ಠ ಉಷ್ಣಾಂಶ ೩೯ ರಿಂದ ೪೦ ಡಿಗ್ರಿ ಇರುತ್ತದೆ. ಜಿಲ್ಲೆಯು ಬಹುಮಟ್ಟಿಗೆ ನೈಸ್ ಕಣ ಶಿಲೆಯ ಅಂಚಿನವರೆಗೆ ಸುಮಾರು ೬ಕಿ.ಮೀಟರ್ ಅಗಲದ ಶಿಸ್ಟ್ ಕಲ್ಲಿನ ಪಟ್ಟಿಯೊಂದು ಹಬ್ಬಿದೆ. ಉಳಿದ ಭಾಗದಲ್ಲಿ ಅಲ್ಪ ಸ್ವಲ್ಪ ಏರು ತಗ್ಗುಗಳು ಹರಡಿದ್ದು, ಕಣಶಿಲೆಯ ಬೆಟ್ಟಗುಡ್ಡಗಳು ಅಲ್ಲಲ್ಲಿ ಉದ್ಭವಿಸುತ್ತವೆ. ದೊಡ್ಡ ದೊಡ್ಡ ಬಂಡೆಗಳನ್ನು ಒಂದರ ಮೇಲೊಂದು ವಿಚಿತ್ರಾಕಾರದಲ್ಲಿ ಪೇರಿಸಿದಂತಿರುವ ಈ ಬೆಟ್ಟಗಳು ಜಿಲ್ಲೆಯ ವೈಶಿಷ್ಟ್ಯವಾಗಿದೆ. ಶಿಷ್ಟ್‌ಕಲ್ಲಿನ ಪಟ್ಟಿಯ ಪ್ರದೇಶವು ಆರ್ಥಿಕ ಪ್ರಾಮುಖ್ಯತೆಯನ್ನು ಪಡೆದಿದೆ. ಇದಕ್ಕೆ ಹೊಂದಿಕೊಂಡಂತೆ ಕ್ವಾಟ್ಸ್ರ್, ಬೆಣಕಲ್ಲು ಮುಂತಾದ ವಿವಿಧ ಶಿಲೆಗಳ ಸಮುದಾಯವಿದೆ. ಇದರ ಜೊತೆಯಲ್ಲಿ ಪ್ರಸಿದ್ಧವಾದ ಚಿನ್ನದ ಭೂನಿಷೇಪಗಳು ಹಬ್ಬಿವೆ. ಜೊತೆಗೆ ಜಿಲ್ಲೆಯ ಹಲವು ಬಾಗಗಳಲ್ಲಿ ಉತ್ತರ-ದಕ್ಷಿಣ ಹಾಗೂ ಪೂರ್ವ-ಪಶ್ಚಿಮವಾಗಿ ಡಾಲರೈಟ್‌ನ ಸಾಲುಗಳು ಹಬ್ಬಿವೆ.

ರಾಜಕೀಯ ಚರಿತ್ರೆ

ಕೋಲಾರ ಜಿಲ್ಲೆಯು ಕರ್ನಾಟಕದ ಮುಖ್ಯವಾದ ಪ್ರಮುಖ ಜಿಲ್ಲೆಗಳಲ್ಲಿ ಒಂದಾಗಿದೆ. ಈ ಜಿಲ್ಲೆಯು ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ರಾಜಕೀಯವಾಗಿ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತನ್ನದೇ ಆದ ವಿಶಿಷ್ಟವಾದ ಪಾತ್ರವನ್ನು ಹೊಂದಿದೆ. ಭಾರತದ ಇತಿಹಾಸದಲ್ಲಿ 'ಚಿನ್ನದ ನಾಡು' ಎಂದು ಪ್ರಸಿದ್ಧಿಯನ್ನು ಪಡೆದಿತ್ತು. ಸ್ವಾತಂತ್ರ್ಯ ನಂತರದಲ್ಲಿ ಇಲ್ಲಿನ ಕೃಷಿ ಕ್ಷೇತ್ರದಲ್ಲಿ ನಡೆದ ಆವಿಷ್ಕಾರಗಳಿಂದಾಗಿ ಅತೀ ಹೆಚ್ಚಿನ ಹಾಲಿನ ಉತ್ಪನ್ನಗಳನ್ನು ಉತ್ಪಾದಿಸಿ ರಾಜ್ಯಕ್ಕೆ ನೀಡಿದ ಹಿರಿಮೆ ಈ ಜಿಲ್ಲೆಗೆ ಇದೆ. ಮಾವಿನ ಹಣ್ಣಿನ ವ್ಯಾಪಾರದಿಂದಾಗಿ ಏಷ್ಯಾದಲ್ಲಿಯೇ ೨ನೇ ಅತಿದೊಡ್ಡ ರಫ್ತು ಮಾಡುವ ಜಿಲ್ಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇವುಗಳೊಂದಿಗೆ ಸತತ ಅಂತರ್ಜಲ ಕುಸಿತ ಮಧ್ಯೆಯೂ ರೇಷ್ಮೆಯನ್ನು ಬೆಳೆದು 'ರೇಷ್ಮೆಯ ನಾಡು' ಎಂತಲೂ ಪ್ರಖ್ಯಾತಿಯನ್ನು ಗಳಿಸಿದೆ.

ಕರ್ನಾಟಕದ ಆಗ್ನೇಯದಂಚಿನಲ್ಲಿ ಪೂರ್ವ ಘಟ್ಟಗಳಿಗೆ ಸ್ವಲ್ಪ ಹೊಂದಿಕೊಂಡಂತೆ ಇರುವ ಕೋಲಾರ ಜಿಲ್ಲೆಯು ಭೌಗೋಳಿಕವಾಗಿ ಆಯಾಕಟ್ಟಿನ ಸ್ಥಳದಲ್ಲಿರುವುದರಿಂದ ಮಹತ್ವದ ಪಾತ್ರವನ್ನು

ವಹಿಸುತ್ತಾ ಬಂದಿದೆ. ಜಿಲ್ಲೆಯ ಪೌರಾಣಿಕ ಹಿನ್ನೆಲೆಯನ್ನು ರಾಮಾಯಣ, ಮಹಾಭಾರತಗಳಷ್ಟು ಹಿಂದಕ್ಕೆ ಗುರುತಿಸಲಾಗುತ್ತಿದ್ದು, ಅದನ್ನು ಬಿಂಬಿಸುವ ಐತಿಹ್ಯ, ಸ್ಥಳ ಪುರಾಣಗಳನ್ನು ಜಿಲ್ಲೆಯಾದ್ಯಂತ ಗಮನಿಸಬಹುದಾಗಿದೆ. ಜಿಲ್ಲೆಯೂ ಇತಿಹಾಸ ಪೂರ್ವ ಕಾಲದ ಸಂಸ್ಕೃತಿಗೂ ಹೆಸರಾಂತವಾಗಿದ್ದು, ವಿವಿಧ ಸಾಂಸ್ಕೃತಿಕ ಘಟ್ಟಗಳಿಗೆ ಸೇರಿದ ಸುಮಾರು ಇನ್ನೂರೈವತ್ತಕ್ಕೂ ಹೆಚ್ಚು ನೆಲೆಗಳನ್ನು ಗುರುತಿಸುವಲ್ಲಿ ವಿದ್ವಾಂಸರು ಈ ವರೆಗೆ ಯಶಸ್ವಿಯಾಗಿದ್ದಾರೆ. ಅವುಗಳನ್ನು ಆಧರಿಸಿ ಜಿಲ್ಲೆಯ ಇತಿಹಾಸವನ್ನು ಕನಿಷ್ಠ ನೂತನ ಶಿಲಾಯುಗ ಸಂಸ್ಕೃತಿಯಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಸಿಂಧೂ ನಾಗರಿಕತೆಗೆ ಹರಪ್ಪಾ ಹಾಗೂ ಮೆಹೆಂಜೋದಾರೋ ಪಟ್ಟಣಗಳಲ್ಲಿಯೂ ಲಭಿಸಿರುವ ಚಿನ್ನದ ವಸ್ತುಗಳಲ್ಲಿ ಅಡಕವಾಗಿರುವ ಬೆಳ್ಳಿಯ ಪ್ರಮಾಣವನ್ನು ಆಧರಿಸಿ, ಅವನ್ನು ಕೋಲಾರದ ಚಿನ್ನದ ಗಣಿ ಪ್ರದೇಶದಿಂದ ಆಮದುಮಾಡಿಕೊಂಡಿರಬಹುದೆಂದು ೧೯೨೮ರಷ್ಟು ಹಿಂದೆಯೇ ಜನ್ ಮಾರ್ಷಲ್ ತರ್ಕಿಸಿದ್ದಾರೆ.

ರಾಜ್ಯದ ಇತಿಹಾಸ ಮೌರ್ಯರೊಂದಿಗೆ ಆರಂಭವಾದರೂ ಜಿಲ್ಲೆಯ ಇತಿಹಾಸ ಆರಂಭ ವಾಗುವುದು, ಶಾತವಾಹನ ಮತ್ತು ಬಾದಾಮಿ ಚಾಲುಕ್ಯರ ಸಾಂತರಾಗಿದ್ದ ಬಾಣರ ಆಡಳಿತದೊಂದಿಗೆ ಗಂಗರ ಆರಂಭದ ರಾಜಧಾನಿ 'ಕುವಲಾಪುರ'(ಇಂದಿನ ಕೋಲಾರವಾಗಿದ್ದು, ಶಾಸನಗಳಲ್ಲಿ ಅವರು ತಮ್ಮನ್ನು ಕುವಲಾಲಪುರವರಾಧೀಶ್ವರ ಕರೆದುಕೊಂಡಿದ್ದಾರೆಂದು ಹೆಚ್ಚಿನ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಜಿಲ್ಲಾ ಕೇಂದ್ರವಾದ ಕೋಲಾರವನ್ನು ಒಳಗೊಂಡಿದ್ದ ಈ ಪ್ರದೇಶವು ಗಂಗವಾಡಿ–೬೦೦೦ (ಗಂಗಾರುಸಾವಿರ) ನಾಡೆಂದೇ ಪ್ರಸಿದ್ದವಾಗಿದ್ದು, ಗಂಗವಾಡಿ–೯೬೦೦೦ರ ಅವಿಭಾಜ್ಯ ಅಗವಾಗಿತ್ತು. ರಾಷ್ಟ್ರ ಸೊಳಂಬವಾಡಿ–೩೨೦೦೦ ನಾಡಿನ ಭಾಗವಾಗಿ ಕಾಣಿಸಿಕೊಂಡಿತು. ಕ್ರಿ.ಶ. ೧೦–೧೧ನೇ ಶತಮಾನದ ಆದಿಭಾಗದಲ್ಲಿ ಗಂಗರನ್ನು ಸೋಲಿಸಿ ಚೋಳರು ಕೋಲಾರವನ್ನು ತಮ್ಮ ಆಡಳಿತಕ್ಕೆ ಸೇರಿಸಿಕೊಂಡರು. ಈಗ ಇರುವ ಕೋಲಾರಮ್ಮನ ದೇವಾಲಯದ ನಿರ್ಮಾಣ ಕಾರ್ಯವನ್ನು ರಾಜೇಂದ್ರ ಚೋಳನ ಕಾಲವೆಂದು ಹೇಳಲಾಗಿದೆ.[೪]

೧೨ನೆಯ ಶತಮಾನದ ಹೊತ್ತಿಗೆ ಹೊಯ್ಸಳರ ಆಳ್ವಿಕೆ ಒಳಪಟ್ಟಿತು. ಕ್ರಿ.ಶ. ೧೩ನೇ ಶತಮಾನದ ಉತ್ತಾರಾರ್ಥದಲ್ಲಿ ಹೊಯ್ಸಳ ಸಾಮ್ರಾಜ್ಯ ಇಬ್ಭಾಗವಾದಾಗ ಕೋಲಾರ ಭಾಗವು ಸೋಮೇಶ್ವರನ ಮಗ ರಾಮನಾಥನ ಭಾಗಕ್ಕೆ ಬಂದಿತು. ಆದರೂ ಮಧ್ಯೆ ಮಧ್ಯೆ ಸ್ವಲ್ಪ ಕಾಲ ಚೋಳರು, ಗಂಗರು ಕೆಲವು ಪ್ರದೇಶಗಳಲ್ಲಿ ಸ್ವತಂತ್ರವಾಗಿ ಆಳುತ್ತಿದ್ದರು. ಆನಂತರದಲ್ಲಿ ಈ ಪ್ರದೇಶ ೧೫ನೇ ಶತಮಾನಕ್ಕೆ ವಿಜಯನಗರ ಅರಸರ ಸಾಮ್ರಾಜ್ಯಕ್ಕೆ ಸೇರಿದಾಗ ಚಿಕ್ಕರಾಯನೆಂಬ ಬಿರುದನ್ನು ಪಡೆದಿದ್ದ ತಿಮ್ಮೇಗೌಡ ಇಲ್ಲಿನ ಕೋಟೆಯನ್ನು ದುರಸ್ತಿ ಮಾಡಿಸಿರುವ ಬಗ್ಗೆ ತಿಳಿದು ಬರುತ್ತದೆ.[೫]

ಬಿಜಾಪುರ ಆದಿಲ್‌ಷಾಹಿಗಳು ಮೈಸೂರು ಪ್ರಾಂತ್ಯದ ಮೇಲೆ ದಂಡೆತ್ತಿ ಬಂದಾಗ, ಷಾಜಿ ಬೋನ್ಸ್ಲೆಯು ಸುಗಟೂರು ಗೌಡ ಪ್ರಭುಗಳಿಂದ ಕೋಲಾರವನ್ನು ವಶಪಡಿಸಿಕೊಂಡು, ಪುಂಗನೂರನ್ನು ಅವರಿಗೆ ಬಿಟ್ಟುಕೊಟ್ಟನು. ಈ ಪ್ರಾಂತ್ಯವನ್ನು ಷಾಜೀ ಹಾಗೂ ಆತನ ಮಗ ಸಾಂಬಾಜಿ ಕ್ರಿ.ಶ.

೧೬೫೩ರಿಂದ ೧೬೮೦ರ ವರೆಗೆ ಆಳಿದರು. ಮುಂದೆ ಮೊಗಲರು ಕೋಲಾರವನ್ನು ವಶಪಡಿಸಿಕೊಂಡು ಶಿರಾ ಸುಬೇದಾರನ ಆಳ್ವಿಕೆಗೆ ಸೇರ್ಪಡಿಸಿದರು. ಆನಂತರ ಮರಾಠರು. ಕಡಪಾ ನವಾಬರು ಮತ್ತು ಆಥೊನಿಯ ಅರಸರ ಅಧೀನಕ್ಕೆ ಬಂದಿತು.

೧೭೬೧ರಲ್ಲಿ ಹೈದರ್ ಅಲಿಯು ಕೋಲಾರ ಮತ್ತು ಹೊಸಕೋಟೆಗಳನ್ನು ವಶಪಡಿಕೊಂಡನು. ೧೭೬೮ರಲ್ಲಿ ಬ್ರಿಟಿಷರು ಮುಳಬಾಗಿಲು ಮತ್ತು ಕೋಲಾರಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ೧೭೭೦ರಲ್ಲಿ ಮರಾಠರು ಜಿಲ್ಲೆಯ ಆಡಳಿತವನ್ನು ತಮ್ಮ ಹತೋಟಿಗೆ ತಂದುಕೊಂಡರು. ಇವರಿಂದ ಹೈದರ್‌ಆಲಿಯು ಪುನಃ ಆಡಳಿತವನ್ನು ತನ್ನ ವಶಕ್ಕೆ ತೆಗೆದುಕೊಂಡನು. ೧೭೯೧ರಲ್ಲಿ ಬ್ರಿಟಿಷರು ಕೋಲಾರವನ್ನು ವಶಪಡಿಕೊಂಡರೂ ಪುನಃ ೧೭೯೨ರಲ್ಲಿ ಅವರಿಗೆ ವಾಪಸ್ಸು ನೀಡಿದರು. ಟಿಪ್ಪುವಿನ ಮರಣದ ನಂತರ ಇದು ಬ್ರಿಟಿಷರು ಮತ್ತು ಮೈಸೂರಿನ ಒಡೆಯರ ಆಡಳಿತಕ್ಕೆ ಒಳಪಟ್ಟಿತು.[೬]

ಮದ್ರಾಸ್ ಪ್ರೆಸಿಡೆನ್ಸಿಯ ನಿರ್ದೇಶನದ ಮೇರೆಗೆ ೧೮೦೦ರಲ್ಲಿ ಮದ್ರಾಸ್, ಮೈಸೂರು ಹಾಗೂ ಮಲಬಾರ್ ಪ್ರಾಂತ್ಯಗಳಲ್ಲಿ ಪ್ರವಾಸ ಕೈಗೊಂಡಿದ್ದ ಬುಕಾನನ್ನುನು ಸಮೀಕ್ಷೆ ನಡೆಸಿ ಸಿದ್ಧಪಡಿಸಿರುವ ಪ್ರವಾಸಿ ಕಥನದಲ್ಲಿ ಕೋಲಾರ ಪರಿಸರದ ಬಗ್ಗೆ ಮಹತ್ವದ ಮಾಹಿತಿಯನ್ನು ಒದಗಿಸಿದ್ದಾನೆ. ಟಿಪ್ಪುವಿನ ಪತನದ ನಂತರ ಮೈಸೂರು ಆಡಳಿತ ಒಡೆಯರಿಗೆ ಪುನರ್ ಪ್ರಾಪ್ತಿಯಾಯಿತಾದರೂ ಬಲುಬೇಗ ಸಂಸ್ಥಾನವು ಬ್ರಿಟಿಶ್ ಕಮಿಶನರ್‌ಗಳ ಆಡಳಿತಕ್ಕೆ (೧೮೩೧–೧೮೮೧). ಈ ಸುದೀರ್ಘ ಅವಧಿಯಲ್ಲಿ ಇನಾಂದಾರ್, ಜೋಡಿದಾರ್ ಹಾಗೂ ಜಹಗೀರುದಾರ್ ರಂತಹ ಸ್ಥಳೀಯ ಶಕ್ತಿಗಳು ಪ್ರಬಲಗೊಂಡ ಬೆಂಗಳೂರು–ಮದ್ರಾಸ್ ಬ್ರಾಡ್‌ಗೇಜ್ ರೈಲುಮಾರ್ಗ(೧೮೬೪) ಕೋಲಾರದ ಚಿನ್ನದ ಗಣಿ (೧೮೮೧), ಬೆಂಗಳೂರು–ಹಿಂದೂಪುರ ಮೀಟರ್‌ಗೇಜ್ ಮಾರ್ಗ(೧೮೯೩), ಬೆಂಗಳೂರು–ಚಿಕ್ಕಬಳ್ಳಾಪುರ–ಕೋಲಾರ–ಬಂಗಾರಪೇಟೆ ನ್ಯಾರೂಗೇಟ್ ರೈಲು ಮಾರ್ಗ(೧೯೧೮)ಗಳಿಂದಾಗಿ ಜಿಲ್ಲೆಯ ಗಣನೀಯ ಪ್ರಮಾಣದಲ್ಲಿ ಆರ್ಥಿಕ ಅಭಿವೃದ್ಧಿಯನ್ನೂ ಸಾಧಿಸಲು ಸಾಧ್ಯವಾಯಿತು.

ಕ್ರಿ.ಶ. ೧೮೦೦ರಲ್ಲಿ ಮೈಸೂರು ಒಡೆಯರ ಆಡಳಿತಾವಧಿಯಲ್ಲಿ ಮೈಸೂರು ರಾಜ್ಯವನ್ನು ಮೂರು ಮುಖ್ಯ ಫೌಜ್‌ದಾರಿಗಳನ್ನಾಗಿ ವಿಭಜಿಸಲಾಯಿತ್ತು. ಈಗಿನ ಕೋಲಾರ ಜಿಲ್ಲೆಯು ಬೆಂಗಳೂರು ಫೌಜುದಾರಿಗೆ ಒಳಪಟ್ಟಿತ್ತು. ನಂತರ ೧೮೩೪ರಕ್ಕು ಇದನ್ನು ಬೆಂಗಳೂರು ವಿಭಾಗಕ್ಕೆ ಸೇರಿಸಲಾಯಿತು. ೧೮೬೨–೬೩ರಲ್ಲಿ ಆದ ಆಡಳಿತ ವಿಭಾಗಗಳ ಬದಲಾವಣೆಗಳಲ್ಲಿ ಕೋಲಾರ ಜಿಲ್ಲೆಯನ್ನು ನಂದಿದುರ್ಗ ವಿಭಾಗಕ್ಕೆ ಸೇರ್ಪಡೆಗೊಳಿಸಲಾಯಿತು. ಪ್ರಸ್ತುತ ಕೋಲಾರ ಜಿಲ್ಲೆಯು ಬೆಂಗಳೂರು ವಿಭಾಗಕ್ಕೆ ಸೇರಿದ್ದು, ಬಿಕ್ಕಬಳ್ಳಾಪುರ ಮತ್ತು ಕೋಲಾರ ಉಪವಿಭಾಗಗಳನ್ನು ಒಳಗೊಂಡಿದೆ. ಚಿಕ್ಕಬಳ್ಳಾಪುರ ಉಪವಿಭಾಗಕ್ಕೆ ಆರು ತಾಲೂಕುಗಳು (ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಚಿಂತಾಮಣಿ, ಗೌರಿಬಿದನೂರು, ಗುಡಿಬಂಡೆ ಮತ್ತು ಶಿಡ್ಲಘಟ್ಟ) ಮತ್ತು ಕೋಲಾರ ಉಪವಿಭಾಗಕ್ಕೆ ಐದು ತಾಲೂಕುಗಳು(ಕೋಲಾರ, ಮಾಲೂರು ಮುಳಬಾಗಿಲು, ಬಂಗಾರುಪೇಟೆ ಮತ್ತು ಶ್ರೀನಿವಾಸಮರ) ಸೇರುತ್ತವೆ.

೨.೨. ನೈಸರ್ಗಿಕ ಸಂಪನ್ಮೂಲಗಳು

ಕೋಲಾರ ಜಿಲ್ಲೆ ನೈಸರ್ಗಿಕ ಸಂಪನ್ಮೂಲಗಳಿಗೆ ಸಂಬಂಧಿಸಿದಂತೆ ಅನೇಕ ಸಂಪನ್ಮೂಲಗಳನ್ನು ಒಳಗೊಂಡಿದೆ. ಕರ್ನಾಟಕದ ೧೦ ಕೃಷಿ-ಹವಾಮಾನ ಪ್ರಾಂತ್ಯಗಳ ಪೈಕಿ ಕೋಲಾರ ಸಂಪೂರ್ಣವಾಗಿ ಪೂರ್ವ ಮತ್ತು ಕೃಷಿ ಹವಾಮಾನ ಪ್ರಾಂತ್ಯದ ವ್ಯಾಪ್ತಿಗೆ ಸೇರುತ್ತದೆ. ಮತ್ತು ಪ್ರತಿವರ್ಷ ೬೦೦-೯೦೦ ಮಿಲಿಮೀಟರ್ ಮಳೆಯಾಗುತ್ತದೆ. ಜಿಲ್ಲೆಯ ಸಾಮಾನ್ಯ ಮಳೆಯ ಪ್ರಮಾಣ ವಾರ್ಷಿಕವಾಗಿ ೭೪೪ ಮಿ.ಮೀ. ನೈರುತ್ಯ ಮುಂಗಾರು ೫೫% ಮಳೆಯನ್ನು ನೀಡಿದರೆ. ಈಶಾನ್ಯವಲಿಗರು ಜಿಲ್ಲೆಯ ಒಟ್ಟು ಮಳೆಯ ಪ್ರಮಾಣ ೩೦% ಕೊಡಿಗೆ ನಿಡುತ್ತದೆ. ಮತ್ತು ಉಳಿದಂತೆ ಪೂರ್ವ ಮುಂಗಾರು ಮಳೆಯಾಶ್ರಿತವಾಗಿರುತ್ತದೆ. ಏಪ್ರಿಲ್‌ನಿಂದ ಮೇ ತಿಂಗಳಿನವರೆಗೆ ಜಿಲ್ಲೆಯ ಅತಿ ಬಿಸಿಲಿರುವ ಮಾಸಗಳಾಗಿವೆ. ಈ ತಿಂಗಳಿನಲ್ಲಿ ಬಿಸಿಲಿನ ತಾಪಮಾನ ೪೦ ಸೆಂಟಿಗ್ರೇಡ್ ತಲುಪುತ್ತದೆ. ಜಿಲ್ಲೆಯ ಅತಿ ಕಡಿಮೆ ತಾಪಮಾನ ಡಿಸೆಂಬರ್ ತಿಂಗಳು ಆಗಿರುತ್ತದೆ. ಅಂದರೆ ಈ ತಿಂಗಳಿನಲ್ಲಿ ೧೦ಸೆಂಟಿಗ್ರೇಡ್‌ಗೆ ಇಳಿಯುತ್ತದೆ.

೨.೩. ಜನಸಂಖ್ಯೆ

ಕರ್ನಾಟಕ ರಾಜ್ಯದ ಭೌಗೋಳಿಕ ವಿಸ್ತೀರ್ಣದಲ್ಲಿ ಕೋಲಾರ ಜಿಲ್ಲೆಯು ೨.೦೬ರಷ್ಟು ಭೂ ಭಾಗವನ್ನು ಹೊಂದಿದೆ. ೨೦೧೧ರ ಜನಗಣತಿ ಪ್ರಕಾರ ಜಿಲ್ಲೆಯಲ್ಲಿ ೧೫,೩೬,೪೦೧ರಷ್ಟು ಜನಸಂಖ್ಯೆ ಇದ್ದು, ಪುರುಷರು ೭,೭೬,೩೯೬, ಮಹಿಳೆಯರು ೭,೬೦,೦೦೫ ಇದ್ದಾರೆ. ರಾಜ್ಯದ ಜನಸಂಖ್ಯೆಯಲ್ಲಿ ಜಿಲ್ಲೆ ೨.೫೧ ಪಾಲನ್ನು ಪಡೆದಿದೆ. ಕೋಲಾರ ಜಿಲ್ಲೆಯಲ್ಲಿ ಲಿಂಗಾನುಪಾತವು ಪ್ರತಿ ೧,೦೦೦ ಪುರುಷರಿಗೆ ೯೭೯ ಇದ್ದಾರೆ. ಈ ಪ್ರಮಾಣವನ್ನು ರಾಜ್ಯಕ್ಕೆ (೯೭೩) ಹೋಲಿಸಿದರೆ ಶೇ. ೬ರಷ್ಟು ಹೆಚ್ಚಾಗಿದೆ.[೭] ರಾಜ್ಯದಲ್ಲಿ ಕೋಲಾರ ಜಿಲ್ಲೆಯ ಜನಸಂಖ್ಯೆ ಬೆಳವಣಿಗೆದರ ೧೧.೦೪ರಷ್ಟು ಇದ್ದು, ಕಳೆದ ದಶಕಕ್ಕೆ ಹೋಲಿದಾಗ ಶೆ.೩.೪೨ ರಷ್ಟು ಇಳಿಕೆಯಾಗಿದೆ. ರಾಜ್ಯದ ಜನಸಂಖ್ಯೆ ಬೆಳವಣಿಗೆ ದರದಲ್ಲಿ ೨೬ನೇ ಸ್ಥಾನ ಹಾಗೂ ಒಟ್ಟು ಜನಸಂಖ್ಯೆಯಲ್ಲಿ ೧೯ನೇ ಸ್ಥಾನದಲ್ಲಿದೆ.[೮] ಕೋಲಾರ ಜಿಲ್ಲೆಯಲ್ಲಿ ಪ್ರತಿ ಚ.ಕಿ.ಮೀಟರ್‌ಗೆ ೩೮೪ರಷ್ಟು ಜನಸಾಂದ್ರತೆ ಇದೆ. ೨೦೧೧ರ ಜನಗಣತಿ ಪ್ರಕಾರ ರಾಜ್ಯದ ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ/ಪಂಗಡಗಳ ಪಾಲು ೪.೧ರಷ್ಟಿದೆ. ರಾಜ್ಯದ ಶೇ. ೨೪.೧ರಷ್ಟು ಪರಿಶಿಷ್ಟರಲ್ಲಿ ಜಿಲ್ಲೆಯಲ್ಲಿ ಇವರ ಪಾಲು ೩೫.೪೫ರಷ್ಟಿದೆ.

ಕೋಷ್ಟಕ ೨.೧. ಕೋಲಾರ ಜಿಲ್ಲೆ ಜನ ಸಂಖ್ಯೆ ಮತ್ತು ಸಾಕ್ಷರತೆ

ವಿಷಯ	೨೦೦೧	೨೦೧೧
ವಾಸ್ತವ ಜನಸಂಖ್ಯೆ	೧೩೮೭೦೬೨	೧೫೮೬೪೦೧
ಪುರುಷ	೭೦೧೬೭೭	೭೬೬೩೯೬
ಮಹಿಳೆ	೬೮೫೩೮೫	೭೭೦೦೦೫
ಜನಸಂಖ್ಯೆ ಬೆಳವಣಿಗೆ	೧೪.೪೫%	೧೦.೭೭%
ಮಕ್ಕಳ ಲಿಂತಾನುಪಾತ (೦–೬)	೯೭೬.೭೮	೯೬೨.೩೮
ಸಾರಸರಿ ಸಾಕ್ಷರತೆ	೬೩.೧೪	೭೩.೩೯
ಪುರುಷರ ಸಾಕ್ಷರತೆ	೭೩.೧೪	೮೧.೮೦
ಮಹಿಳಾ ಸಾಕ್ಷರತೆ	೫೨.೮೧	೬೫.೮

ಆಧಾರ: ಕೋಲಾರ ಜಿಲ್ಲಾ ಮಾನವ ಅಭಿವೃದ್ಧಿ ವರದಿ ೨೦೧೪ ಪು.೧೧

೨.೪. ಶಿಕ್ಷಣ

ಜಿಲ್ಲೆಯಲ್ಲಿ ಒಟ್ಟು ೧೨೭೧ ಪ್ರಾಥಮಿಕ ಶಾಲೆಗಳು, ೯೨೬ ಹಿರಿಯ ಪ್ರಾಥಮಿಕ ಶಾಲೆಗಳು, ೩೪೭ ಪ್ರೌಢಶಾಲೆಗಳು, ೧೧೩ ಪದವಿ ಪೂರ್ವ ಕಾಲೇಜುಗಳು, ೧೧ ಪದವಿ ಕಾಲೇಜುಗಳು ಹಾಗೂ ೧೩ ಪಾಲಿಟೆಕ್ನಿಕ್ ಮತ್ತು ೧ ಅಲೋಪತಿ ಮೆಡಿದಲ್ ಕಾಲೇಜು ಮತ್ತು ೩ ಸರ್ಕಾರದಿಂದ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು ಇವೆ. ೨೦೧೧ರ ಜನಗಣತಿ ಪ್ರಕಾರ ಜಿಲ್ಲೆಯ ಸಾಕ್ಷರತೆ ಪ್ರಮಾಣ ಶೇ. ೭೪.೩೯ ಇದೆ. ಈ ಸಾಕ್ಷರತೆಯಲ್ಲಿ ಪುರುಷರು ೮೧.೮ರಷ್ಟು, ಸ್ತ್ರೀಯರು೬೬.೮೪ ರಷ್ಟು ಸಾಕ್ಷಾರತೆಯನ್ನು ಸಾಧಿಸಿದ್ದಾರೆ. ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ ೧,೨೧,೧೨೩ ಲಕ್ಷ ವಿದ್ಯಾರ್ಥಿಗಳು, ೬೮೯೭ ಸಾವಿರ ವಿದ್ಯಾರ್ಥಿಗಳು ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ಪ್ರೌಢಶಾಲೆಗಳಲ್ಲಿ, ಪ್ರೌಢಶಾಲೆಗಳಲ್ಲಿ ೪೪೬೭೭ ವಿದ್ಯಾರ್ಥಿಗಳ, ಪದವಿ ಪೂರ್ವ ಕಾಲೇಜುಗಳಲ್ಲಿ ೨೯,೩೩೭, ಸಾಮಾನ್ಯ ಪದವಿ ಕಾಲೇಜುಗಳಲ್ಲಿ ೧೧,೬೬೭ ವಿದ್ಯಾರ್ಥಿಗಳು, ಹಾಗೂ ಪಾಲಿಟೆಕ್ನಿಕ್‌ಗಳಲ್ಲಿ ೧೪೦೦, ಇಂಜಿನಿಯರಿಂಗ್ ೫೨೦, ಮೆಡಿಕಲ್ ಕಾಲೇಜಿನಲ್ಲಿ ೧೫೦ ಜನ ವ್ಯಾಸಂಗ ಮಾಡುತ್ತಿದ್ದಾರೆ. ಎಂದು ಜಿಲ್ಲಾ ಅಂಕಿ ಅಂಶಗಳ ಸಮೀಕ್ಷೆಗಳು ತಿಳಿಸುತ್ತವೆ. ಜಿಲ್ಲೆಯ ಸಾಕ್ಷರತೆಯ ಪ್ರಮಾಣವನ್ನು ಗಮನಿಸಿದರೆ ೧೯೯೧ರಲ್ಲಿ ೫೦.೪೫ ರಷ್ಟು ಇದ್ದಿತು. ೨೦೦೧ರ ಜನಗಣತಿಯ ಪ್ರಕಾರ ೬೩.೧೪ಕ್ಕೆ ಏರಿಕೆಯನ್ನು ಕಂಡಿದೆ. ನಂತರ ೨೦೧೧ರ ಜನಗಣತಿಯ ಪ್ರಕಾರ ೭೪.೩೯ ಏರಿಕೆಯನ್ನು ಕಂಡು ಬಂದಿದೆ. ಕೋಲಾರ ಜಿಲ್ಲೆಯು ೨೦೦೧–೨೦೧೧ ದಶಕವಾರ ಅವಧಿಯಲ್ಲಿ ಶೇ. ೧೧.೨೫ರಷ್ಟು ಏರಿಕೆಯನ್ನು ಕಂಡಿದೆ.

ಮಾನವ ಅಭಿವೃದ್ಧಿ ೨೦೧೪ ಪ್ರಕಾರ ಜಿಲ್ಲೆಯ ಒಟ್ಟು ಗ್ರಾಮೀಣ ಸಾಕ್ಷರತೆ ಶೇ. ೬೯.೦೮ರಷ್ಟಿದೆ. ಅದರಲ್ಲಿ ಸ್ತ್ರೀಯರ ಸಾಕ್ಷರತೆ ಶೇ. ೫೯.೮೨ರಷ್ಟು ಮಾತ್ರ ಇದ್ದು, ಗ್ರಾಮೀಣ ಪುರುಷರ ಸಾಕ್ಷರತೆ ೭೮.೧೧ರಷ್ಟು ಇದೆ. ಜಿಲ್ಲೆಯ ನಗರ ಸಾಕ್ಷರತೆಗೆ ಹೋಲಿಕೆ ಮಾಡಿದರೆ ಜಿಲ್ಲೆಯ ನಗರದ ಒಟ್ಟು ಸಾಕ್ಷರತೆ ೮೬.೧೩ರಷ್ಟಿದ್ದು, ಗ್ರಾಮೀಣ ಪ್ರಶಕ್ಕಿಂತ ಶೇ. ೧೭.೦೫ರಷ್ಟು ಅಭಿವೃದ್ಧಿಯಲ್ಲಿದೆ. ನಗರ ಸಾಕ್ಷರತೆಯಲ್ಲಿ ಪುರುಷರ ಸಾಕ್ಷರತೆಯು ಶೇ. ೯೦.೦೫ರಷ್ಟಿವೆ. ಸ್ತ್ರೀಯರ ಸಾಕ್ಷರತೆ ಶೇ. ೮೨.೧೮ರಷ್ಟು ಇದೆ. ಕೋಲಾರ ಜಿಲ್ಲೆಯ ಸಾಕ್ಷರತೆ ಪ್ರಮಾಣದಲ್ಲಿ ೧೪ನೇ ಸ್ಥಾನದಲ್ಲಿದೆ. ಪುರುಷರ ಸಾಕ್ಷರತೆಯ ಪ್ರಮಾಣದಲ್ಲಿ ೧೬ನೇ ಮತ್ತು ಸ್ತ್ರೀಯರ ಸಾಕ್ಷರತೆಯ ಪ್ರಮಾಣದಲ್ಲಿ ೧೪ನೇ ಸ್ಥಾನದಲ್ಲಿದೆ.[೯] ಕೋಲಾರ ಜಿಲ್ಲೆಯ ಸರ್ಕಾರಿ ಅನುದಾನ ಮತ್ತು ಅನುದಾನರಹಿತ ಕಾಲೇಜುಗಳಲ್ಲಿ ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತ ಶೇ. ೨೧.೩೬ರಷ್ಟು ಇರುವುದು ಕಂಡುಬಂದಿದೆ. ಪ್ರೌಢಶಾಲೆಗಳಲ್ಲಿ ೧೯.೧೬ ಅನುಪಾತ ಕಂಡುಬಂದಿದೆ.[೧೦]

೨.೫. ಆರೋಗ್ಯ

ಕೋಲಾರ ಜಿಲ್ಲೆಯನ್ನು ೨೦೦೪ರ ಕರ್ನಾಟ ರಾಜ್ಯ ಆರೋಗ್ಯ ನೀತಿಯ ಸಾಧಾರಣ ಪ್ರದರ್ಶನ ನೀಡುವ ಜಿಲ್ಲೆ ಎಂದು ವರ್ಗೀಕರಿಸಿದೆ. ಈ ಜಿಲ್ಲೆಯು ರಾಜ್ಯದ ಇತರ ಜಿಲ್ಲೆಗಳಂತೆಯೇ ಆರೋಗ್ಯ ವಲಯದಲ್ಲಿ ಚೇತರಿಕೆಯನ್ನು ಕಾಣಬೇಕಾಗಿದೆ. ಕೋಲಾರ ಜಿಲ್ಲೆಯಲ್ಲಿ ಕಂಡು ಬರುವ ಆರೋಗ್ಯ ಸಮಸ್ಯೆ ಎಂದರೆ ಫ್ಲೋರೋಸಿಸ್. ಫ್ಲೋರೋಸಿಸ್ ಎಂದರೆ ದೇಹದಲ್ಲಿ ಫ್ಲೋರೈಡ್ ಅಂಶ ಹೆಚ್ಚು ಶೇಖರಣೆಯಾಗುವುದರಿಂದ ಉದ್ಭವಿಸುವಂತಹ ದೇವಹದ ನೋವು ಮತ್ತು ನಿತ್ರಾಣ ಗೊಳಿಸುವಂತೆ ಖಾಯಿಲೆ. ಇದು ಹಲ್ಲುಗಳು ಮತ್ತು ಮೂಳೆಗಳ ಸಮಸ್ಯೆಗಳಿಗೂ ಕಾರಣವಾಗುತ್ತದೆ. ಜಿಲ್ಲೆಯ ಅನೇಕ ಮಕ್ಕಳು ಮತ್ತು ವಯಸ್ಕರಲ್ಲಿ ಖಾಯಂ ದೈಹಿಕ ವಿಕಲಚೇತನ ಉಂಟಾಗಲು ಕರಣವಾಗಿದೆ. ಹಾಗೆಯೇ ಕೋಲಾರದ ಜನರನ್ನು ಭಾಧಿಸುತ್ತಿರುವ ಸಮಸ್ಯೆಗಳು ಎಂದರೆ ಬಹಳ ಧೀರ್ಘಕಾಲದ ವರೆಗೂ ಚಿನ್ನದ ಗಣಿಯನ್ನು ಬಳಸುತ್ತಿದ್ದ ಕಾರಣಗಳಿಂದಾಗಿ ಇಲ್ಲಿನ ಜನರಲ್ಲಿ ಉಸಿರಾಟದ ತೊಂದರೆಗಳು, ಚರ್ಮದ ಸಮಸ್ಯೆ ಇತ್ಯಾದಿಗಳಿವೆ. ಇವುಗಳು ಕಳೆದ ಎರಡು ದಶಕಗಳಲ್ಲಿ ಕೋಲಾರ ಜಿಲ್ಲೆಯಲ್ಲಿ ಕಂಡು ಬಂದಿರುವಂತಹ ಕೆಲವು ಪ್ರಮುಖ ಆರೋಗ್ಯ ಸಮಸ್ಯೆಗಳಾಗಿವೆ. ಜಿಲ್ಲೆಯಲ್ಲಿ ಒಟ್ಟು ಸರ್ಕಾರಿ ೭೭ ಖಾಸಗಿ ನರ್ಸಿಂಗ್ ಹೋಮ್‌ಗಳು ೭೨, ಸರ್ಕಾರಿ ಮತ್ತು ಖಾಸಗಿ ನರ್ಸಿಂಗ್ ಹೋಮ್‌ಗಳು ಸೇರಿದಂತೆ ಜಿಲ್ಲೆಯಲ್ಲಿ ೧೪೯ ಆಸ್ಪತ್ರೆಗಳಿವೆ. ಜಿಲ್ಲೆಯಲ್ಲಿ ೧೫೪ರಲ್ಲಿ ಸರ್ಕಾರಿ ವೈದ್ಯರು ಇದ್ದಾರೆ. ಜಿಲ್ಲೆಯಲ್ಲಿ ರೋಗಿಗಳಿಗೆ ಲಭ್ಯತೆಯಲ್ಲಿರುವ ಸರ್ಕಾರಿ ಆಸ್ಪತ್ರೆಯಲ್ಲಿರುವ ಹಾಸಿಗೆಗಳ ಸಂಖ್ಯೆ ೧೫೭೧, ಖಾಸಗೀ ಆಸ್ಪತ್ರೆಗಳಲ್ಲಿ ೧೯೨೬ ಹಾಸಿಗೆಗಳು ಒಟ್ಟು ಜಿಲ್ಲೆಯಲ್ಲಿ ೩,೪೯೭ ಹಾಸಿಗೆಗಳು ರೋಗಿಗಳಿಗೆ ಲಭ್ಯವಾಗುತ್ತಿದೆ. ಜಿಲ್ಲೆಯಲ್ಲಿ ಆಲೋಪತಿ ಆಸ್ಪತ್ರೆಗಳು ೭೧, ಈ೭೪ ಆಸ್ಪತ್ರೆಗಳಲ್ಲಿ ೧೫೪೧ ಹಾಸಿಗೆಗಳನ್ನು ಹೊಂದಿದೆ. ಭಾರತೀಯ ವೈದ್ಯ ಪದ್ದತಿಯ ಆಸ್ಪತ್ರೆಗಳು ೩ ಇದ್ದು, ೩೦ ಹಾಸಿಗೆಗಳು ಇವೆ. ಖಾಸಗಿ ಆಸ್ಪತ್ರೆಗಳು

೭೨ಇದ್ದು, ೧೯೨೬ ಹಾಸಿಗೆಗಳಿವೆ. ಜಿಲ್ಲೆಯಲ್ಲಿ ಒಟ್ಟು ೬೫ ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಅವುಗಳಲ್ಲಿ ೩೭೬ ಹಾಸಿಗೆಗಳು ಇವೆ. ಹಾಗೆಯೇ ಸಮುದಾಯ ಆರೋಗ್ಯ ಕೇಂದ್ರಗಳು ೩ ಇದ್ದು, ೬೦ ಹಾಸಿಗೆಗಳು ಇವೆ.

ಕೋಲಾರ ಜಿಲ್ಲೆಯ ಜನನ ಪ್ರಮಾಣವು ಶೇ. ೧೯.೪೧ ಇದ್ದು ಮರಣ ಪ್ರಮಾಣ ೪.೪೧ ಆಗಿದೆ. ಶಿಶು ಮರಣ ಪ್ರಮಾಣ ಶೇ. ಇಷ್ಟು ಇದ್ದು, ಮಾತೃ ಸಂಬಂಧಿತ ಪ್ರಮಾಣ ೧೩.೯ ರಷ್ಟಿದೆ. ಜನನಿ ಸುರಕ್ಷಾ ಪಡೆದ ಫಲಾನುಭವಿಗಳ ಸಂಖ್ಯೆ ೧೧೬೭೫, ಮಡಿಲು ಕಿಟ್ ಪಡೆದ ಫಲಾನಿಭವಿಗಳ ಸಂಖ್ಯೆ ೧೧೧೧೭, ೧೦೮ ಅಂಬುಲೆನ್ಸ್ ಸಂಖ್ಯೆ ೨೦, ಎಫ್.ಆರ್.ಯು ಯೂನಿಟ್‌ಗಳು ೬, ಜಿಲ್ಲೆಯಲ್ಲಿವೆ. ಡಿ.ಪಿ.ಪಿ ಲಸಿಕೆ ೨೨೭೩೧, ಪೋಲಿಯೋ ೨೫೩೫೮, ಬಿಸಿಜಿ ೨೨೯೪, ದಡಾರ ೨೯೬೧, ಟಿಟಿ ೨೩೮೧೮, ಹೈಪಟೈಟಿಸ್ ಬಿ ೧೮೬೭೪ ಲಸಿಕೆಗಳನ್ನು ಪ್ರತಿವರ್ಷ ಜಿಲ್ಲೆಯಲ್ಲಿ ಬಳಸಲಾಗುತ್ತಿದೆ. ಏಡ್ಸ್ ರೋಗಕ್ಕೆ ಸಂಬಂಧಿಸಿದಂತೆ ಏಡ್ಸ್ ರೋಗನಿಯಂತ್ರಣ ಕಾರ್ಯಕ್ರಮ ಅನುಷ್ಠಾನದಲ್ಲಿರಿಸಲಾಗಿದ್ದು, ಜಿಲ್ಲೆಯಲ್ಲಿ ೪೭೬ ಏಡ್ಸ್ ರೋಗಿಗಳನ್ನು ಗುರುತಿಸಲಾಗಿದೆ. ಅವರಲ್ಲಿ ೧೧೪ ಜನ ಮರಣ ಹೊಂದಿದ್ದಾರೆ. ಕುಷ್ಠ ರೋಗ ನಿಯಂತ್ರಣ ಕಾರ್ಯಕ್ರಮ ಜಾರಿಯಲ್ಲಿದ್ದು, ಇದರಲ್ಲಿ ೩೧ ರೋಗಿಗಳನ್ನು ಗುರುತಿಸಲಾಗಿದ್ದು, ೯ ರೋಗಿಗಳು ಗುಣಬಾಗುತ್ತಿರುವ ರೋಗಿಗಳಿದ್ದು, ಈ ರೋಗದಿಂದ ಯಾರು ಮರಣಹೊಂದಿಲ್ಲ ಎಂದು ತಿಳಿದುಬರುತ್ತದೆ. ಜಿಲ್ಲೆಯಲ್ಲಿ ಒಟ್ಟು ೧೨೯೦ ಜನ ಗುಣಮುಖರಾಗಿದ್ದಾರೆ. ೭೮ಜನ ರೋಗದಿಂದ ಮರಣಹೊಂದಿದ್ದಾರೆ. ಈ ಜಿಲ್ಲೆಯನ್ನು ಆರೋಗ್ಯವಂತ ಸ್ವಚ್ಛ ಜಿಲ್ಲೆಯಾಗಿ ರೂಪಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಯೋಜನೆಗಳು ಉತ್ತಮ ಸೇವೆಯನ್ನು ಒದಗಿಸುತ್ತಿವೆ.[೧೧]

೨.೬. ಆದಾಯ

ಸ್ವಾತಂತ್ರ್ಯ ಬಂದಾಗಿನಿಂದಲೂ ಭಾರತ ಸರ್ಕಾರದ ಕೇಂದ್ರಿಯ ಸಾಂಖ್ಯಿಕ ಸಂಘಟನೆಯ (ಸಿಎಸ್ ೨ರ) ಪ್ರತಿ ವರ್ಷ ರಾಷ್ಟ್ರೀಯ ಆದಾಯ ಮತ್ತು ತಲಾದಾಯಗಳನ್ನು ಅಂದಾಜಿಸುತ್ತಾ ಬಂದಿದೆ. ಭಾರತದ ಆರ್ಥಿಕತೆಯ ಪ್ರಗತಿ ಈಗಿನ ದರಗಳ ಪ್ರಕಾರ ಜಿಡಿಪಿ ಅಂಶಗಳಿಂದ ಮಾಫನ ಮಾಡಲಾಗುತ್ತದೆ. ಇದೇ ರೀತಿ ಕರ್ನಾಟಕದ ಆರ್ಥಿಕತೆಯನ್ನು ಅಂತರಿಕ ಉತ್ಪನ್ನ (ಎಸ್‌ಡಿಪಿ)ಯಂತೆ ಮಾಪನ ಮಾಡಲಾಗುತ್ತದೆ. ಇದೇ ಮಾದರಿಯಲ್ಲಿ ಕೋಲಾರ ಜಿಲ್ಲೆ ಹಾಗೂ ಜಿಲ್ಲೆಯ ತಾಲೂಕು ಈಗಿನ ದರಗಳ ಪ್ರಕಾರ ಜಿಲ್ಲಾ ಆಂತರಿಕ ಉತ್ಪನ್ನ (ಡಿಡಿಪಿ) ಮತ್ತು ತಾಲೂಕು ಆಂತರಿಕ ಉತ್ಪನ್ನದಂತೆ (ಡಿಡಿಪಿ) ಮಾಪನ ಮಾಡಬಹುದಾಗಿದೆ. ೨೦೦೪-೦೫ರಲ್ಲಿ ಕೋಲಾರ ಜಿಲ್ಲೆಯ ಆಂತರಿಕ ಉತ್ಪನ್ನ (ಡಿಡಿಪಿ) ಬೆಳವಣಿಗೆಯನ್ನು ೨೦೦೪-೦೫, ೨೦೦೮-೦೯ರ ಅವಧಿಯಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ತೃತೀಯ ವಲಯಗಳಿಂದ ಜಿಲ್ಲಾ ಅಂತ್ಯಂತ ಉತ್ಪನ್ನ ೮.೬೩ರಷ್ಟಿತ್ತು. ಜಿಲ್ಲೆಯ ತಾಲೂಕುಗಳು, ಜಿಲ್ಲಾ ಅಂತರಿಕ ಉತ್ಪನ್ನಕ್ಕೆ ಮಹತ್ತರ ಕೊಡುಗೆ ನೀಡಿವೆ. ಬಂಗಾರಪೇಟೆ ತಾಲೂಕು ಅತಿಹೆಚ್ಚಿನ ಅಂದರೆ (೩೦%) ಕೊಡುಗೆ ನೀಡುತ್ತದೆ.

ಕೋಲಾರ ೨೧.೪%, ಮುಳಭಾಗಿಲು ೨೦.೪%, ಶ್ರೀನಿವಾಸಪುರ ೧೪.೧%, ಅತಿ ಕನಿಷ್ಠ ಮಾಲೂರು ೧೩.೭%, ಕೊಡುಗೆ ನೀಡುತ್ತದೆ. ಈ ರೀತಿಯ ವ್ಯತ್ಯಾಸಗಳಿಗೆ ಪ್ರಮುಖ ಕಾರಣವೆಂದರೆ ಆಯಾ ತಾಲೂಕಿನಲ್ಲಿ ಬರುವ ಪ್ರಥಮ ಮತ್ತು ದ್ವಿತೀಯ, ತೃತೀಯ ವಲಯದ ಮೂಲಗಳು ಕಾರಣವಾಗಿವೆ. ಕರ್ನಾಟಕ ರಾಜ್ಯದ ಕೋಲಾರ ಜಿಲ್ಲೆ ಮತ್ತು ಕೋಲಾರ ಜಿಲ್ಲೆಯ ತಾಲ್ಲೂಕುಗಳು ೨೦೦೪-೦೫, ೨೦೦೮-೦೯ರ ಅವಧಿಯಲ್ಲಿ ವ್ಯಕ್ತಿಯ ಒಟ್ಟು ತಲಾದಾಯ ಹಾಗೂ ನಿವ್ವಳ ತಾಲೂಕುವಾರು ತಲಾದಾಯವನ್ನು ಗಮನಿಸಿದರೆ ಮುಳಬಾಗಿಲು ಅತಿಹೆಚ್ಚು ತಲಾದಾಯಹೊಂದಿದ ತಾಲೂಕು ಆಗಿದೆ. ಕೋಲಾರ ಅತಿಕಡಿಮೆ ತಲಾದಾಯವನ್ನು ದಾಖಲಿಸಿದೆ. ಕಳೆದ ೫ವರ್ಷಗಳಲ್ಲಿ ೧೧.೯೬% ರಷ್ಟು ಕೋಲಾರ ತಾಲೂಕು ಸಿ.ಎ.ಜಿ.ಆರ್.ನ್ನು ದಾಖಲಿಸಿದರೆ, ಮಾಲೂರು ಅತಿಕಡಿಮೆ ಅಂದರೆ ೪.೨೨% ದಾಖಲಿಸಿದೆ. ರಾಜ್ಯದ ಸರಾಸರಿ ಹೋಲಿಕೆಯಲ್ಲಿ ಒಟ್ಟಾರೆ ಜಿಲ್ಲಾ ವ್ಯಕ್ತಿ ತಲಾದಾಯ ಕಡಿಮೆಯಿದೆ. ಈ ಪ್ರಕಾರ ಕೋಲಾರ ಜಿಲ್ಲೆಯ ತಲಾದಾಯ ರಾಜ್ಯದ ವ್ಯಕ್ತಿ ತಲಾದಾಯಕ್ಕಿಂತ ಕಡಿಮೆಯಿದೆ. ಅಂದರೆ ರಾಜ್ಯದ ಆರ್ಥಿಕತೆ ಬೆಳವಣಿಗೆಯಲ್ಲಿ ಕೋಲಾರ ಜಿಲ್ಲೆಯ ಆರ್ಥಿಕ ಬೆಳವಣಿಗೆ ನಿಧಾನಗತಿಯಲ್ಲಿರುವುದನ್ನು ಸೂಚಿಸುತ್ತದೆ.

ಕೋಲಾರ ಜಿಲ್ಲೆಯ ಒಟ್ಟು ತಲಾ ವ್ಯಕ್ತಿ ಆದಾಯ ೨೦೦೪-೦೫ ರಿಂದ ೨೦೦೮-೦೯ರ ನಡುವೆ ೭.೬೪% ಸಂಯುಕ್ತ ಪ್ರಗತಿ ಪ್ರವಾಸದೊಂದಿಗೆ ರೂ.೨೮೫೩೧,೩೦ರಿಂದ ೪೧,೨೧೯,೫೦ಕ್ಕೆ ಏರಿಕೆಯಾಗಿದೆ. ೨೦೦೪-೦೫, ೨೦೦೮-೦೯ರಲ್ಲಿ ರಾಜ್ಯದ ತಾಲಾಥಾಯ ಕ್ರಮವಾಗಿ ೩೦೦೬೨ ಹಾಗೂ ೫೩೧೦೧ರಷ್ಟಿತ್ತು.

೨.೭. ಮೂಲಭೂತ ಸೌಕರ್ಯಗಳು

ಕೋಲಾರ ಜಿಲ್ಲೆ ಕರ್ನಾಟಕದ ಸಮತಟ್ಟಾದ ಪ್ರದೇಶದಲ್ಲಿದ್ದರು ಜಿಲ್ಲೆಯು ಕೆಲವು ಭಾಗಗಳಲ್ಲಿ ಬೆಟ್ಟ-ಗುಡ್ಡಗಳಿಂದ ಕೂಡಿದೆ. ಭೂಮಿ ಮತ್ತು ಹವಾಗುಣಕ್ಕೆ ಸಂಬಂಧಿಸಿದಂತೆ ಉತ್ತಮ ಸ್ಥಿತಿಯಲ್ಲಿದೆ ಎಂದು ಗುರುತಿಲಾಗಿದೆ. ವಿದ್ಯುತ್, ನೀರಾವರಿ ಮತ್ತು ಕೈಗಾರಿಕೆ ಸ್ಥಿತಿಯು ಉತ್ತಮವಾಗಿದೆ. ಎಂದು ಜಿಲ್ಲಾ ವರದಿಗಳಿಂದ ತಿಳಿದುಬರುತ್ತದೆ. ಜಿಲ್ಲೆಯ ಶೇ.೯೩ರಷ್ಟು ಕುಟುಂಬಗಳು ವಿದ್ಯುತ್ ಸೌಲಭ್ಯವನ್ನು ಹೊಂದಿದ್ದರೆ. ಇದರ ಜೊತೆ ಜಿಲ್ಲೆಯ ಎಲ್ಲಾ ಕುಟುಂಬಗಳಿಗೆ ವಿದ್ಯುತ್ ಸೌಲಭ್ಯವನ್ನು ನೀಡುವ ಗುರಿಯನ್ನು ಹಾಕಿಕೊಳ್ಳಲಾಗಿದೆ. ಈಗ ಸದ್ಯದ ಪರಿಸ್ಥಿತಿಯಲ್ಲಿ ೨.೮ ಲಕ್ಷ ಗೃಹೋಪಯೋಗಕ್ಕೆ ವಿದ್ಯುತ್ ಸಂಪರ್ಕ ಒದಗಿಸಲಾಗಿದೆ. ಅದೇ ರೀತಿಯಾಗಿ ೯೦೦ಕ್ಕೂ ಹೆಚ್ಚಿನ ಕೈಗಾರಿಕೆಗಳಿಗೆ ೩೮,೦೦೦ ವಾಣಿಜ್ಯ ಬಳಕೆಗೆ, ೬೦,೦೦೦ಕ್ಕೂ ಹೆಚ್ಚಿನ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲಾಗಿದೆ. ೨೦೧೧-೧೨ರಲ್ಲಿ ಜಿಲ್ಲೆಯ ಒಟ್ಟು ವಿದ್ಯುತ್ ಬಳಕೆ ೬೫೫೬.೭೨ ಲಕ್ಷ ಯುನಿಟ್‌ಗಳಿತ್ತು. ಈಗ ಇದರ ಪ್ರಮಾಣ ಅಧಿಕವಾಗಿದೆ.

ಅದೇ ರೀತಿಯಾಗಿ ಸೇವಾವಲಯದ ಮತ್ತೊಂದು ಪ್ರಮುಖ ಸಾಧನ ಎಂದರೆ ಬ್ಯಾಂಕಿಂಗ್ ವಲಯ ಜಿಲ್ಲೆಯಲ್ಲಿ ೭೫ ರಾಷ್ಟ್ರೀಕೃತ ಬ್ಯಾಂಕಿನ ಶಾಖೆಗಳಿದ್ದು, ೩೬ ಪ್ರಾದೇಶಿಕ ಗ್ರಾಮೀಣ

ಬ್ಯಾಂಕಿನ ಶಾಖೆಗಳು ೯ಜಿಲ್ಲಾ ಸಹಕಾಖುಇ ಬ್ಯಾಂಕಿನ ಶಾಖೆಗಳನ್ನು ಹೊಂದಿದೆ. ಜಿಲ್ಲೆಯ ಜನಸಂಖ್ಯೆ ಮತ್ತು ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಅಂತರವಿದ್ದರೂ ಜಿಲ್ಲೆ ಅದಕ್ಕಿಂತ ಕಡಿಮೆ ಜನಸಂಖ್ಯೆಯ ಕುಟುಂಬಗಳು ಬ್ಯಾಂಕಿಂಗ್ ಸೌಲಭ್ಯಗಳನ್ನು ಪಡೆಯುತ್ತಿವೆ.

ಕೋಲಾರ ಜಿಲ್ಲೆಯ ಸಾರಿಗೆ ಮತ್ತು ಸಂಪರ್ಕಕ್ಕೆ ಸಂಬಂಧಿಸಿದಂತೆ ಉತ್ತಮ ವ್ಯವಸ್ಥೆಹೊಂದಿದೆ ಎಂದು ಹೇಳಬಹುದು. ಜಿಲ್ಲೆ ರಸ್ತೆ ಮತ್ತು ರೈಲುಗಳ ಉತ್ತಮ ಸಂಪರ್ಕ ಹೊಂದಿದೆ. ಅಲ್ಲದೆ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಕೋಲಾರದಿಂದ ಕೇವಲ ೭೦ಕಿ.ಮೀ ದೂರದಲ್ಲಿದೆ. ವಿಮಾನ ಸಂಪರ್ಕದಲ್ಲಿ ಸಹ ಜೊತೆಗೆ ಅನುಕೂಲವಾಗಿದೆ. ಎಂದು ಹೇಳಬಹುದು. ಅದೇ ರೀತಿಯಾಗಿ ಬೆಂಗಳೂರು ಮತ್ತು ಚನ್ನೈ ನಗರಗಳ ನಡುವೆ ಸಂಪರ್ಕ ಕಲ್ಪಿಸುವಂತಹ ರಾಷ್ಟ್ರೀಯ ಹೆದ್ದಾರಿ(ಎನ್.ಎಚ್.–4) ೪ ಕೋಲಾರದ ಮೂಲಕ ಹಾದುಹೋಗುತ್ತವೆ. ಮತ್ತು ವರ್ಷಪೂರ ಕೈಗಾರಿಕೆ ಮತ್ತು ಕೋಲಾರ ಮತ್ತು ಮುಳಬಾಗಿಲು ಮೂಲಕ ಹಾದುಹೋಗುತ್ತವೆ. ಇದರ ಜೊತೆ ವಾಯುವ್ಯ ರೈಲ್ವೇ ಇಲಾಖೆಯ ಕೋಲಾರ ಮತ್ತು ಬಂಗಾರಪೇಟೆಯಲ್ಲಿ ಎರಡು ಪ್ರಮುಖ ರೈಲ್ವೇ ನಿಲ್ದಾಣಗಳನ್ನು ಹೊಂದಿದೆ. ಜಿಲ್ಲೆ ಸಾರಿಗೆ ಮತ್ತು ಸಂಪರ್ಕದಲ್ಲಿ ಉತ್ತಮ ಸೌಲಭ್ಯಹೊಂದಿದೆ. ಎಂದು ಹೇಳಬಹುದು.

ಕೋಲಾರ ಜಿಲ್ಲೆಯು ಪ್ರಾದೇಶಿಕ ಮತ್ತು ಹಿಂದುಳಿದಿರುವಿಕೆಯಿಂದ ನೋಡುವುದಾದರೆ ಕಳೆದ ಎರಡು ದಶಕಗಳಲ್ಲಿ ಕೋಲಾರದ ಮಾನವ ಅಭಿವೃದ್ಧಿ ಸೂಚಕಗಳು ಸತತವಾಗಿ ರಾಜ್ಯ ಮಟ್ಟದ ಸರಾಸರಿ ಹೋಲಿಕೆಯಲ್ಲಿ ಹಿಂದಿದೆ. ಜಿಲ್ಲಯು ಒಟ್ಟಾರೆ ಮಾನವ ಅಭಿವೃದ್ಧಿಗೆ ಸಂಬಂಧಿಸಿದಂತೆ ಕರ್ನಾಟಕ ಮಾನವಾಭಿವೃದ್ಧಿ ವರದಿ ೨೦೦೫ ಕೋಲಾರ ಜಿಲ್ಲೆಗೆ ೧೯೯೧ ಮತ್ತು ೨೦೦೧ರಲ್ಲಿ ಕ್ರಮವಾಗಿ ೧೫ ಮತ್ತು ೧೭ನೇ ಸ್ಥಾನವನ್ನು ನೀಡಿದೆ. ಒಂದು ಕಾಲದಲ್ಲಿ ಅನೇಕ ಕೊಳಗಳು ಮತ್ತು ತೊರೆಗಳನ್ನು ಹೊಂದಿದ್ದು, ಕೋಲಾರ ಜಿಲ್ಲೆ ಈಗ ನೀರಿನ ಮಾಲಿನ್ಯವನ್ನು ಎದುರಿಸುತ್ತಿದೆ. ಕೋಲಾರ ಜಿಲ್ಲೆಯಲ್ಲಿ ಫ್ಲೋರೋಸಿಸ್ ಅಪಾಯಕಾರಿ ಅಂತರ್ಜಲ ಮಟ್ಟಕ್ಕೆ ಕುಖ್ಯಾತಿಯನ್ನು ಪಡೆದಿದೆ. ಜಿಲ್ಲೆಯಲ್ಲಿ ತೋಟಗಾರಿಕೆ, ರೇಷ್ಮೆ ಕೃಷಿ, ಹೈನುಗಾರಿಕೆಯನ್ನು ಪ್ರೋತ್ಸಾಹಿಸುವ ಮೂಲಕ ಆರ್ಥಿಕ ಭದ್ರತೆ ಕಂಡುಬರುತ್ತದೆ. ಅಂತರ್ಜಲ ಅತಿಯಾದ ಬಳಕೆ ಈ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ತೀವ್ರವಾಗಿ ಸೀಮಿತಗೊಳಿಸಿದೆ. ೨೦೧೦ ಮತ್ತು ೨೦೧೧ರಲ್ಲಿ ಜಿಲ್ಲೆಯ ಮೂರು ತಾಲೂಕುಗಳಲ್ಲಿ (ಬಂಗಾರಪೇಟೆ, ಮಾಲೂರು, ಕೋಲಾ) ತಲಾವ್ಯಕ್ತ ಆದಾಯ (ರೂ. ೪೧,೨೧೯) ರಾಜ್ಯದ ಸರಾಸರಿ ಹೋಲಿಕೆಯಲ್ಲಿ (ರೂ.೫೩೧೦೧) ಕಡಿಮೆ ಇದೆ. ಮತ್ತು ಜಿಲ್ಲೆ ೨/೩ನೇ ಭಾಗದಷ್ಟು ಕುಟುಂಬಗಳು ಬಿ.ಪಿ.ಎಲ್. ಕಾರ್ಡುಗಳನ್ನು ಹೊಂದಿದ್ದಾರೆ. ಜಿಲ್ಲೆಯ ಶೇ. ೬೦ರಷ್ಟು ಕುಟುಂಬಗಳಲ್ಲಿ ಶೌಚಾಲಯಗಳಿಲ್ಲ. ಜಿಲ್ಲೆಯಲ್ಲಿ ಕೇವಲ ೯ ಗ್ರಾಮ ಪಂಚಾಯತ್‌ಗಳು (೧೫೬)ರಷ್ಟಿದೆ. ನಿರ್ಮಲ ಗ್ರಾಮ ಪುರಸ್ಕಾರ ಪ್ರಶಸ್ತಿಯನ್ನು ಪಡೆದಿದೆ. ಕೋಲಾರ ಜಿಲ್ಲೆಯ ೧/೩ ಭಾಗದಷ್ಟು ಮಕ್ಕಳು ಪೌಷ್ಟಿಕತೆಯ ಸಮಸ್ಯೆ ಎದುರಿಸುತ್ತಿದ್ದಾರೆ. ಇದರ ಜೊತೆಗೆ ಶೇ. ಲಲರಷ್ಟು ಗರ್ಭಿಣಿ

ಮಹಿಳೆಯರು ರಕ್ತಹೀನತೆ(ಅನೀಮಿಯಾ)ಯ ಸಮಸ್ಯೆ ಎದುರಿಸುತ್ತಿದ್ದಾರೆ. ಜಿಲ್ಲೆಯಲ್ಲಿ ಗಣಿಗಾರಿಕೆ ಅತಿ ವೇಗವಾಗಿ ಬೆಳೆಯುತ್ತಿರುವ ತೃತೀಯ ವಲಯದ ಕೈಗಾರಿಕೋದ್ಯಮವಾಗಿದೆ. ಮತ್ತು ಇದರ ಅನಿಯಂತ್ರಿತ ಹರಡುವಿಕೆಯಿಂದ ಪರಿಸರದ ಅಪಾಯಗಳು ಸಂಬಂಧಿಸುವ ಭಯವು ಎದುರಾಗಿದೆ. ಪರಿಸರ ಅಪಾಯಗಳು ಜನನ ಮತ್ತು ಮರಣ ಪ್ರಮಾಣದ ಮೇಲೆ ಅತಿ ಹೆಚ್ಚು ಪ್ರಭಾವ ಬೀರುತ್ತವೆ. ಇದರಿಂದ ಆರೋಗ್ಯ ಮತ್ತು ಆದಾಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದನ್ನು ಅಲ್ಲಗಳೆಯುವಂತಿಲ್ಲ. ಈ ನಿಟ್ಟಿನಲ್ಲಿ ನೋಡುವುದಾದರೆ ಸಾಮಾಜಿಕ ಸ್ಥಿತಿಗಳು ಇನ್ನು ಸುದಾರಿಸಬೇಕಾಗಿದ ಅಗತ್ಯ ಇದೆ ಎಂದು ಹೇಳಬಹುದು.

ಕೋಲಾರ ಜಿಲ್ಲೆಯು ಚಾರಿತ್ರಿಕ ಮತ್ತು ಸಾಂಸ್ಕೃತಿಕವಾಗಿ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿದೆ. ಆದರೆ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ಹಲವಾರು ವೈರುಧ್ಯಗಳನ್ನು ಸೃಷ್ಟಿಸಿಕೊಂಡಂತಿದೆ. ಕೋಲಾರ ಜಿಲ್ಲೆ ಆರ್ಥಿಕ ದೃಷ್ಟಿಯಿಂದ ಉತ್ತಮವೆನಿಸಿದರೂ ಸಮಾಜಿಕವಾಗಿ ದುಸ್ಥಿತಿಯನ್ನು ಅನುಭವಿಸುತ್ತಿದೆ ಎಂದು ಹೇಳಬಹುದು. ಯಾಕೆಂದರೆ ಕೋಲಾರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆ ಬಹುಸಂಖ್ಯಾತರಾಗಿದ್ದಾರೆ. ಮತ್ತು ಕೋಲಾರ ಮೀಸಲು ಕ್ಷೇತ್ರ(ಲೋಕಸಭೆ) ಅಂದರೆ ಅಧಿಕಾರ, ಅಂತಸ್ತುಗಳು ಪರಿಶಿಷ್ಟರ ಕೈಯಲ್ಲಿ ಇರಬೇಕಾಗಿತ್ತು ಆದರೆ ವಾಸ್ತವದಲ್ಲಿ ಹಾಗೆ ಇಲ್ಲ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ದಲಿತ ಜೀವಂತ ದಹನ, ದೌರ್ಜನ್ಯ, ಅಸ್ಪೃಶ್ಯತೆ ನಿರಂತರವಾಗಿ ನಡೆಯುತ್ತಿರುವುದು ಕಂಡುಬರುತ್ತದೆ. ಹೀಗಾಗಿ ಮಾನವ ಅಭಿವೃದ್ಧಿಗೆ ಸಂಬಂಧಿಸಿದಂತೆ ದಲಿತರ ದೃಷ್ಟಿಕೋನದಿಂದ ನೋಡುವುದಾದರೆ ಎಲ್ಲಾ ರಂಗಗಳಲ್ಲಿ ಸುಧಾರಿಸಬೇಕಾದ ಅಗತ್ಯತೆ ಇದೆ. ಇದರ ಜೊತೆಗೆ ದಲಿತರ ಮೂಲಭೂತ ಸೌಲಭ್ಯಗಳು ಶೇ. ಅರ್ಧದಷ್ಟು ಜನರಿಗೆ ತಲುಪಿಲ್ಲ ಹಾಗಾಗಿ ಕೋಲಾರ ಜಿಲ್ಲೆ ಹಿಂದುಳಿದಿರುವ ಇತರೆ ವಲಯಗಳ ಪೈಕಿ ಆರೋಗ್ಯ ಮತ್ತು ಸಾರ್ವಜನಿಕ ನೈರ್ಮಲ್ಯಗಳು ಸೇರಿವೆ. ಆದ್ದರಿಂದ ದಲಿತರನ್ನು ಕೇಂದ್ರಿಕರಿಸಿ ಯೋಜನೆ ತಯಾರಿಸಿ ಸಾರ್ವತ್ರಿಕ ಯೋಜನೆಯಾಗಿ ರೂಪಗೊಳಿಸಬೇಕು ಅಂದಾಗ ಸಾಮಾಜಿಕ ಅಭಿವೃದ್ಧಿಯನ್ನು ಕಾಣಬಹುದು.

ಕೊನೆ ಟಿಪ್ಪಣಿಗಳು

೧. ಕೋಲಾರ ಜಿಲ್ಲೆ ಮಾನವ ಅಭಿವೃದ್ಧಿ ವರದಿ ೨೦೧೪, ಕೋಲಾರ ಜಿಲ್ಲಾ ಪಂಚಾಯತ್ ಯೋಜನೆ ಮತ್ತು ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು. ಪು–೮.

೨. ಚಂದ್ರಶೇಖರ ಟಿ.ಆರ್.೨೦೧೨, ಕರ್ನಾಟಕ ಜನಗಣತಿ ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ, ಪು–೧೨೨)

೩. ಅನೀಸ್ ಸಿರಾಜ್, ೨೦೧೧, ಕೋಲಾರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ಗ್ಯಾಸೆಟಿಯರ್, ಇಲಾಖೆ, ಬೆಂಗಳೂರು, ಪು-೧೧.

೪. ಸೂರ್ಯನಾಥ್. ಯು ಕಾಮತ್, ೧೯೮೬, ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ-೩, ಕರ್ನಾಟಕ ಗ್ಯಾಸಟೀಯರ್ ಇಲಾಖೆ, ಬೆಂಗಳೂರು ಪು-೪೯೧.

೫. ಆದಿತ್ಯ ಹೆಚ್.ಎ., ೨೦೧೬ ಕೋಲಾರ ಪ್ರದೇಶದಲ್ಲಿ ಚೋಳರ ಆಡಳಿತ, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು- ೧.

೬. ಅನಿಸ್ ಸಿರಾಜ್ ಎಸ್. ಪೋರ್ವೋಕ್ತ: ಪು-೮.

೭. ಚಂದ್ರಶೇಖರ್ ಎನ್(ಸಂ)., ಕರ್ನಾಟಕ ಕೈಪಿಡಿ, ಕರ್ನಾಟಕ ಗ್ಯಾಸೆಟಿಯರ್ ಇಲಾಕೆ, ಬೆಂಗಳೂರು, ಪು.೧೩೧.

೮. ಚಂದ್ರಶೇಖರ ಟಿ.ಆರ್.೨೦೧೨, ಪೋರ್ವೋಕ್ತ, ಪು-.೩೩.

೯. ಕೋಲಾರ ಜಿಲ್ಲೆ ಮಾನವ ಅಭಿವೃದ್ಧಿ ವರದಿ ೨೦೧೪, ಕೋಲಾರ ಜಿಲ್ಲಾ ಪಂಚಾಯತ್ ಯೋಜನೆ ಮತ್ತು ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು. ಪು.೨೨.

೧೦. ಕೋಲಾರ ಜಿಲ್ಲಾ ಅಂಕಿ-ಅಂಶಗಳ ನೋಟ, ೨೦೧೫-೧೬, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಕೋಲಾರ, ಪು.೧೧೦-೧೧೧.

೧೧. ಕೋಲಾರ ಜಿಲ್ಲಾ ಅಂಕಿ-ಅಂಶಗಳ ನೋಟ, ೨೦೧೫-೧೬, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಕೋಲಾರ, ಪು-೧೩೦.

ಅಧ್ಯಾಯ ಮೂರು

ಪಂಚಾಯತ್ ರಾಜ್ ವ್ಯವಸ್ಥೆ ಸಿದ್ಧಾಂತ ಹಾಗೂ ಆಚರಣೆ

೩.೧ ಪಂಚಾಯತ್ ರಾಜ್ ವ್ಯವಸ್ಥೆ ಪರಿಕಲ್ಪನೆ

೩.೨. ಭಾರತದಲ್ಲಿ ಸ್ಥಳೀಯ ಸರಕಾರಗಳ ಉಗಮ ಮತ್ತು ಬೆಳವಣಿಗೆ

೩.೩. ಸಂವಿಧಾನದ ಆಶಯ ಮತ್ತು ಸ್ಥಳೀಯ ಸರಕಾರಗಳು

೩.೪. ಕರ್ನಾಟಕದಲ್ಲಿ ಸ್ಥಳೀಯ ಸರಕಾರಗಳು

ಅಧ್ಯಾಯ ಮೂರು

ಪಂಚಾಯತ್ ರಾಜ್ ವ್ಯವಸ್ಥೆ ಸಿದ್ಧಾಂತ ಹಾಗೂ ಆಚರಣೆ

ಭಾರತದಲ್ಲಿ ಸ್ಥಳೀಯ ಸರಕಾರದ ಮೂಲವನ್ನು ಪ್ರಾಚೀನ ಕಾಲದಿಂದಲೂ ಗುರುತಿಸಬಹುದು. ಆದರೆ ಕಾಲಾಂತರದಲ್ಲಿ ಅದರ ರಚನೆ, ಸ್ವರೂಪ, ಕಲ್ಪನೆಗಳು ಮತ್ತು ಕಾರ್ಯಗಳಲ್ಲಿ ಅಮೂಲಾಗ್ರ ಬದಲಾವಣೆಯಾಗುತ್ತಾ ಬಂದಿರುತ್ತದೆ. ಇಲ್ಲಿನ ಸಾಂಸ್ಕೃತಿಕ ಮತ್ತು ಜನಾಂಗೀಯ ವಿಭಿನ್ನತೆಗಳಿಂದಾಗಿ ಸ್ಥಳೀಯ ಸರ್ಕಾರಗಳ ಸ್ವರೂಪದಲ್ಲಿ ಬದಲಾವಣೆಗಳು ಕಂಡುಬಂದಿದೆ. ಹಾಗಾಗಿ ಪಂಚಾಯತಿಗಳ ಬೆಳವಣಿಗೆ ಮತ್ತು ಬೆಳವಣಿಗೆಯ ಹಂತಗಳಲ್ಲಾದ ಮಹತ್ವದ ಬದಲಾವಣೆಗಳ ಪರಿಣಾಮವಾಗಿ, ಅಧಿಕಾರದ ವಿಕೇಂದ್ರೀಕರಣ ಕಲ್ಪನೆ, ಜಾತಿ-ಪ್ರಾತಿನಿಧ್ಯ, ಸ್ಥಳೀಯ ಅಭಿವೃದ್ಧಿ, ರಾಜಕೀಯ ಭಾಗವಹಿಸುವಿಕೆ, ರಾಜಕೀಯ ಶಿಕ್ಷಣ, ಸರಕಾರಕ್ಕೆ ಜನರ ಮಾರ್ಗದರ್ಶನ ಮುಂತಾದ ವಿಚಾರಗಳು ಸ್ಥಳೀಯ ಸರಕಾರದಿಂದಲೇ ಪ್ರಾಪ್ತವಾದವು. ಹೀಗಾಗಿ ಸ್ಥಳೀಯ ಸರಕಾರಗಳು ಸ್ಥಳೀಯ ರಾಜಕೀಯವಾಗಿ ಜನರ ಜೀವನ ವಿಧಾನದೊಂದಿಗೆ ಹಾಸುಹೊಕ್ಕಾಗಿದೆ.

೩.೧. ಪಂಚಾಯತ್ ರಾಜ್ ವ್ಯವಸ್ಥೆ ಪರಿಕಲ್ಪನೆ

ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಪರಿಕಲ್ಪನೆ ಹೊಸದೇನಲ್ಲ, ಅವು ಅನಾದಿ ಕಾಲದಿಂದಲೂ ಜನರ ಜೀವನ ವಿಧಾನದೊಂದಿಗೆ ಬೆಳೆದು ಬಂದಿವೆ. ಭಾರತದ ಆಡಳಿತ ವ್ಯವಸ್ಥೆಯನ್ನು ವೇದಗಳ, ಉಪನಿಷತ್‌ಗಳ ಕಾಲದಿಂದಲೂ ಗುರುತಿಸುತ್ತಾ ಬರಲಾಗಿದೆ. ಇವುಗಳ ಜೊತೆಗೆ ಸ್ಥಳೀಯ ಆಡಳಿತವು ಸಹ ಬೆಳೆದುಬಂದಿವೆ ಎನ್ನುವುದಕ್ಕೆ ವಿದೇಶಿ ಬರಹಗಾರರ ಮತ್ತು ವಿದ್ವಾಂಸರ ಕೃತಿಗಳಲ್ಲಿ ಉಲ್ಲೇಖವಾಗಿರುವುದನ್ನು ಕಾಣಬಹುದು. ಪ್ರಾಚೀನ ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಗುರುತಿಸುವುದಾದರೆ ಊರಿನ ೫ ಜನ ಹಿರಿಯರು ಸೇರಿ ನ್ಯಾಯ ನಿರ್ಣಯವನ್ನು ಮಾಡುತ್ತಿದ್ದರು. ನಂತರ ಈ ೫ ಜನರ ಗುಂಪನ್ನು ಪಂಚರು ಎಂದು ಕರೆಯಲಾಯಿತು. ಕ್ರಮೇಣ ಪಂಚರ ಕೆಲಸ ಕಾರ್ಯಗಳು ಹೆಚ್ಚಾದವು. ಆಗ ಹುಟ್ಟಿಕೊಂಡ ಮತ್ತೊಂದು ಸ್ತರವೆ ಸರಪಂಚರು(ಸದಸ್ಯರು). ಹೀಗೆ ಭಾರತದ ಆಡಳಿತ ವ್ಯವಸ್ಥೆಯನ್ನು ಪಂಚರು ಮತ್ತು ಸರ

ಪಂಚರು ಗ್ರಾಮೀಣ ಆಡಳಿತವನ್ನು ನೋಡಿಕೊಳ್ಳುವ ವ್ಯವಸ್ಥೆ ಸೃಷ್ಟಿಯಾಯಿತು. ಇದೇ ಪಂಚಾಯತ್ ವ್ಯವಸ್ಥೆಯನ್ನು ರಾಜ ಪ್ರಭುತ್ವಕ್ಕೆ ಅನುಸರಿಸಲಾಯಿತು. ಚಂದ್ರಗುಪ್ತ ಮೌರ್ಯನ ಕಾಲದ ಸ್ಥಳೀಯ ಸರಕಾರದ ಬಗ್ಗೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಉಲ್ಲೇಖವಿದೆ. ಕುಶಾನರ ಕಾಲದಲ್ಲಿ ಗುಪ್ತರ ಕಾಲದಲ್ಲಿ, ಅಬ್ದುಲ್ ರಜಾಕ್ ಮತ್ತು ಹುಯೆನ್ ತ್ಸಾಂಗ್ ಬರವಣಿಗೆಗಳಲ್ಲಿ ಉಲ್ಲೇಖವಿದೆ ಮತ್ತು ಈಗಿರುವ ಭಾರತದ ಪಾರ್ಲಿಮೆಂಟರಿ ಆಡಳಿತ ವ್ಯವಸ್ಥೆಯೂ ಸಹ ಬುದ್ಧ ಕಾಲದ ಭರತಖಂಡದಲ್ಲಿದ್ದ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ವ್ಯವಸ್ಥೆ ಅಸ್ತಿತ್ವದಲ್ಲಿತ್ತೆಂದು ಬುದ್ಧನ ತ್ರಿಪಿಟಿಕಗಳು ಹೇಳುತ್ತವೆ. ೧೨ನೇ ಶತಮಾನದ ವಚನ ಚಳುವಳಿಯ ಅನುಭವ ಮಂಟಪು ಸಹ ಪಾರ್ಲಿಂಟ್ ರೀತಿಯಲ್ಲಿ ಚರ್ಚೆ ವಿಮರ್ಶೆ ಮೂಲಕ ಪರಿಹಾರ ಕಂಡುಕೊಳ್ಳುವ ವ್ಯವಸ್ಥೆ ಅಸ್ತಿತ್ವದಲ್ಲಿತ್ತೆಂದು ಬಸವಣ್ಣನ ವಚನಗಳು ಸಾರುತ್ತವೆ.

ನಂತರ ಭಾರತದ ವಸಾಹತು ಕಾಲದ ಸಂದರ್ಭದಲ್ಲಿ ಪಂಚಾಯತ್‌ಗಳು ಕಾನೂನಿನ ವ್ಯಾಪ್ತಿಗೆ ಬಂದವು. ಸ್ವಾತಂತ್ರ್ಯ ನಂತರ ಪಂಚಾಯತ್‌ಗಳು ಸಂವಿಧಾನದ ವ್ಯಾಪ್ತಿಗೆ ಬಂದವು. ಹೀಗಾಗಿ ಭಾರತದಲ್ಲಿ ಪಂಚಾಯತ್ ರಾಜ್ ಕಲ್ಪನೆ ಮತ್ತು ಅವುಗಳ ಕಾರ್ಯ ಸ್ವರೂಪ ಇಡೀ ಜಗತ್ತಿಗೆ ಮಾದರಿಯಂತಾಗಿರುವುದು ವಿಶೇಷ.

೩.೨. ಭಾರತದಲ್ಲಿ ಸ್ಥಳೀಯ ಸರಕಾರಗಳ ಉಗಮ ಮತ್ತು ಬೆಳವಣಿಗೆ

ಭಾರತದಲ್ಲಿ ಸ್ಥಳೀಯ ಸರಕಾರಗಳನ್ನು ಈ ಹಿಂದಿನ ಅಂಶಗಳಲ್ಲಿ ಚರ್ಚಿಸಿದಂತೆ ಅದರ ಉಗಮ, ತಾತ್ವಿಕತೆಯನ್ನು ಸಂಕ್ಷಿಪ್ತವಾಗಿ ಹೇಳಲಾಗಿದೆ. ಆದರೆ ಅದರ ಆಳವನ್ನು ನೋಡಬೇಕಾದರೆ ಅದರ ನಿರ್ದಿಷ್ಟ ಕಾಲಘಟ್ಟವನ್ನು ಗುರುತಿಸಿ ನೋಡುವುದು ಮುಖ್ಯವೆನಿಸುತ್ತದೆ.

ವೇದಗಳ ಕಾಲ, ಸ್ಥಳೀಯ ಸರಕಾರದ ಬಗ್ಗೆ ವೇದಗಳ ಕಾಲದಲ್ಲಿ ಗ್ರಾಮೀಣ ಸ್ಥಳೀಯ ಪ್ರದೇಶಗಳಲ್ಲಿ ಸ್ಥಳೀಯ ಸರಕಾರಗಳ ಅಸ್ತಿತ್ವದ ಬಗ್ಗೆ ವೇದಗಳ ಸಾಹಿತ್ಯದಲ್ಲಿ ಆಧಾರಗಳು ದೊರೆಯುತ್ತವೆ. ಗ್ರಾಮ ಒಂದು ಘಟಕವಾಗಿದ್ದು, ಗ್ರಾಮೀಣ ಆಡಳಿತವನ್ನು ನೋಡಿಕೊಳ್ಳುವ ಅಧಿಕಾರಿಯನ್ನು "ಗ್ರಾಮೀಣಿ" ಎಂದು ಕರೆಯಲಾಗುತ್ತಿತ್ತು. ಶ್ರೀನಿ- ಧಾರ್ಮಿಕ ದತ್ತಿ ಕೆಲಸ ಕಾರ್ಯಗಳು, 'ಸಮಿತಿ– ರಾಜತ್ವದ ಕೆಲಸ ಕಾರ್ಯಗಳು ನಿರ್ವಹಿಸುತ್ತಿದ್ದರು' ಎಂದು ಸ್ಥಳೀಯ ಆಡಳಿತದ ಬಗ್ಗೆ ವೇದಗಳ ಮಾಹಿತಿ ಒದಗಿಸುತ್ತವೆ.

ರಾಮಾಯಣ ಮತ್ತು ಮಹಾಭಾರತ

ರಾಮಾಯಣ ಮತ್ತು ಮಹಾಭಾರತವನ್ನು ಭಾರತದ ಮಹಾಕಾವ್ಯಗಳೆಂದು ಕರೆಯಲಾಗಿದೆ. ಇವು ಆದರ್ಶ ರಾಜ್ಯ ಮತ್ತು ನೀತಿಗೆ ಹೆಸರುವಾಸಿಯಾದ ಕೃತಿಗಳಾಗಿವೆ. ಗ್ರಾಮೀಣ ಜನರಿಂದ ಕಂದಾಯ ಸಂಗ್ರಹ, ವಾದ ವಿವಾದಗಳ ಪ್ರಸಂಗ ಮುಂತಾದವುಗಳ ಬಗ್ಗೆ ಆಡಳಿತದ ನೀತಿ ನಿರ್ಧಾರಗಳು ಮಾಹಿತಿಗಳು ಇದರಲ್ಲಿ ಲಭ್ಯವಾಗುತ್ತಿವೆ.

ಕ್ರಿಪೂ. ೬೦೦ರಿಂದ ಕ್ರಿಶ. ೬೦೦ರವರೆಗೆ ಸ್ಥಳೀಯ ಸರಕಾರಗಳು

ಭಾರತದಲ್ಲಿ ಸ್ಥಳೀಯ ಸರಕಾರಗಳ ಈ ಅವಧಿಯಲ್ಲಿ ಹಲವಾರು ಗಣರಾಜ್ಯಗಳು ಅಸ್ತಿತ್ವಕ್ಕೆ ಬಂದು ಅವನತಿ ಹೊಂದಿದವು. ಮನು ಮತ್ತು ಕೌಟಿಲ್ಯ ಗುಪ್ತರ ಕಾಲ, ಬುದ್ಧನ ಕಾಲದಲ್ಲಿನ ಆಡಳಿತಾವಧಿಯಲ್ಲಿ ಸ್ಥಳೀಯ ಸರಕಾರಗಳ ಬಗ್ಗೆ ಐತಿಹಾಸಿಕ ದಾಖಲೆಗಳು ದೊರೆಯುತ್ತವೆ. ಕೌಟಿಲನ್ಯ ಅರ್ಥಶಾಸ್ತ್ರದಲ್ಲಿ ೧೦೦ -೫೦೦ರವರೆಗಿನ ಕುಟುಂಬಗಳ ಪ್ರಸ್ತಾಪವಿದೆ. ೧೦ ಗ್ರಾಮಗಳ ಗುಂಪನ್ನು ಸಮಗ್ರಹಾನಂ, ೨೦೦ ಗ್ರಾಮಗಳ ಗುಂಪನ್ನು ಕಾರವಾಚಿಕೆ, ೪೦೦ ಗ್ರಾಮಗಳ ಗುಂಪನ್ನು ದ್ರೋಣಮುಖ ಹಾಗೂ ೮೦೦ ಗ್ರಾಮಗಳಿಗೆ ಮಹಾಗ್ರಾಮ ಎಂದು ವಿಂಗಡಿಸಿದ್ದನು. ಅದರ ಜೊತೆಗೆ ಗ್ರಾಮದ ಆಡಳಿತ ವೈಖರಿಯ ವಿವರವನ್ನು ಇಲ್ಲಿ ಕಾಣಬಹುದು.

ಗುಪ್ತರ ಕಾಲದ ಸ್ಥಳೀಯ ಸರಕಾರ

ಗುಪ್ತರ ಕಾಲದಲ್ಲಿ ಸ್ಥಳೀಯ ಸರ್ಕಾರಗಳ ಲಕ್ಷಣವೆಂದರೆ ಪ್ರಾಂತ್ಯವನ್ನು 'ಮಂಡಲ'ವೆಂದು ಜಿಲ್ಲೆಗಳನ್ನು ನಾಡುಗಳೆಂದು, ಉಪಜಿಲ್ಲೆಗಳನ್ನು ಕೊಟ್‌ಮಾಸ್‌ಗಳೆಂದು, ಗ್ರಾಮಗಳನ್ನು ಕುರುಮ್‌ಗಳೆಂದು, ಹಳ್ಳಿ ಅಥವಾ ಗ್ರಾಮವನ್ನು ಗ್ರಾಮವೆಂದಲೂ ಕರೆಯುತ್ತಿದ್ದರು. ಗ್ರಾಮದ ಮುಖ್ಯಸ್ಥನನ್ನು ಗ್ರಾಮಪತಿ ಎಂದು ಕರೆಯುತ್ತಿದ್ದರು. ಕೆರೆ, ದೇವಸ್ಥಾನ, ಶಿಕ್ಷಣ, ನ್ಯಾಯ ರಸ್ತೆ, ಉದ್ಯಾನವನ ಮೊದಲಾದ ಕಾರ್ಯಗಳು ರಾಜ್ಯವು ನಿರ್ವಹಿಸುತ್ತಿತ್ತು. ಹೀಗಾಗಿ ಗುಪ್ತರ ಕಾಲದಲ್ಲಿ ಸ್ಥಳೀಯ ಸರಕಾರಗಳು ಉತ್ತಮ ಸ್ಥಿತಿಯಲ್ಲಿದ್ದವು ಮತ್ತು ವ್ಯವಸ್ಥಿತವಾಗಿ ಬೆಳೆದುಬಂದವು.

ಮಧ್ಯಯುಗದಲ್ಲಿ ಸ್ಥಳೀಯ ಸರಕಾರಗಳು

ಮಧ್ಯಯುಗವು ಭಾರತದ ರಾಜಕೀಯದಲ್ಲಿ ಮತ್ತು ಆಡಳಿತದ ದೃಷ್ಟಿಯಿಂದ ಮಹತ್ವದ ಕಾಲಘಟ್ಟವೆಂದು ಪರಿಗಣಿಸಲಾಗಿದೆ. ಇತಿಹಾಸ ದೃಷ್ಟಿಯಿಂದ ಮಧ್ಯಯುಗ(೧೨೦೬-೧೭೦೭)ವನ್ನು ಮುಸ್ಲಿಂ ಆಳ್ವಿಕೆ ಎಂದು ಸಹ ಗುರುತಿಸಲಾಗುತ್ತದೆ. ಹೀಗಾಗಿ ಮುಸ್ಲಿಂರ ಆಳ್ವಿಕೆಯಲ್ಲಿ ಭಾರತದ ಆಡಳಿತ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆಗಳಾಗಿವೆ. ಸಾಮ್ರಾಜ್ಯಗಳನ್ನು "ಸುಭಾಸ್" ಎಂದು, ಪ್ರಾಂತ್ಯಗಳನ್ನು ಸರಕಾರ ಎಂದು, ಗ್ರಾಮಮಟ್ಟದಲ್ಲಿ ನಾಯಕನನ್ನು "ಮುಕದಾಮ್" ಎಂದು ಆಡಳಿತವನ್ನು ವಿಭಜಿಸಿದರು. ಗ್ರಾಮೀಣ ಪ್ರದೇಶಗಳಲ್ಲಿ ಪಟ್ವಾರಿ ಎಂಬ ಅಧಿಕಾರಿಯನ್ನು ನೇಮಕ ಮಾಡಿ ತೆರಿಗೆ ಸಂಗ್ರಹ ಮಾಡುತ್ತಿದ್ದರು.

ಷೇರಷಾ ಮತ್ತು ಅಕ್ಬರನ ಕಾಲದಲ್ಲಿ ಗ್ರಾಮಾಡಳಿತಕ್ಕೆ ಒತ್ತು ನೀಡಿದ್ದರೂ ಸಹ ಮುಸ್ಲಿಂ ಆಡಳಿತ ಅವಧಿಯಲ್ಲಿ ಪಂಚಾಯಿತಿಗಳು ಸಾಕಷ್ಟು ಘಾಸಿಗೊಂಡವು ಎಂಬ ಅಪವಾದವೂ ಸಹ ಇದೆ. ಒಟ್ಟಾರೆ ಮಧ್ಯಯುಗದಲ್ಲಿ ಆಡಳಿತ, ಹಣಕಾಸು, ತೆರಿಗೆ ಸಂಗ್ರಹ ಮೊದಲಾದವುಗಳಿಗೆ ಹೊಸ ರೂಪ ನೀಡಿದ್ದು ಸಹ ಅಷ್ಟೇ ಸತ್ಯ. ಹೀಗಾಗಿ ಭಾರತದ ಇತಿಹಾಸದಲ್ಲಿ ಮಧ್ಯಯುಗದಲ್ಲಿ ಆಡಳಿತಾತ್ಮಕವಾಗಿ ಮಹತ್ವ ಬದಲಾವಣೆ ತಂದ ಕಾಲವಾಗಿದೆ. ಆದರೆ ಜನರನ್ನು ಧಾರ್ಮಿಕ ಹಿನ್ನೆಲೆಯಲ್ಲಿ ವಿಭಜಿತ ಆಡಳಿತ ಮಾಡಿದ್ದು ಇಂದಿಗೂ ಕೂಡ ಅದು ಮುಂದುವರೆದಿರುವುದು ಆಗಿನ ಮತ್ತು ಈಗಿನ ಕಾಲದ ದುರಂತದ ಸಂಗತಿ.[೧]

ಭಾರತದಲ್ಲಿ ಬ್ರಿಟಿಷರ ಕಾಲದಲ್ಲಿ ಸ್ಥಳೀಯ ಸರಕಾಗಳು

ಭಾರತದ ರಾಜಕೀಯ ಚರಿತ್ರೆಯಲ್ಲಿ ಬ್ರಿಟಿಷರ ಆಡಳಿತ ಅವಧಿಯನ್ನು ವಸಾಹತು ಕಾಲ ಅಥವಾ ಆಂಗ್ಲರ ಆಳ್ವಿಕೆ ಎಂದು ಸಹ ಕರೆಯಲಾಗಿದೆ. ಈ ಅವಧಿಯಲ್ಲಿ ಭಾರತದ ರಾಜಕೀಯ ವ್ಯವಸ್ಥೆಗೆ ಹೊಸ ಭಾಷೆಯನ್ನು ಬರೆಯಲಾಯಿತು. ಅಲ್ಲದೆ ಸಾಂಪ್ರದಾಯಿಕ ರಾಜಕೀಯ ವ್ಯವಸ್ಥೆಯಿಂದ ಕಾನೂನುಬದ್ಧ ರಾಜಕೀಯ ವ್ಯವಸ್ಥೆಗೆ ಆಸ್ತಿಭಾರ ಹಾಕಲಾಯಿತು.(ಕಿಚಡಿ ಚನ್ನಪ್ಪ, ೨೦೧೪) ಭಾರತದಲ್ಲಿ ರಾಜಪ್ರಭುತ್ವ ಕಾಲದಿಂದ ಬ್ರಿಟಿಷರ ಆಡಳಿತ ಅವಧಿಯವರೆಗೆ ಸ್ಥಳೀಯ ಸರಕಾರಗಳು ಅಸ್ತಿತ್ವದಲ್ಲಿ ಇದ್ದವು. ಆದರೆ ಇವುಗಳ ಆಡಳಿತಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಕಾಯ್ದೆ ಕಾನೂನುಗಳ ಬಗ್ಗೆ ಆಧಾರಗಳು ವ್ಯವಸ್ಥಿತವಾಗಿರಲಿಲ್ಲ. ಆದರೆ ಬ್ರಿಟಿಷರು ಪ್ರಾರಂಭದ ಆಡಳಿತ ಅವಧಿಯಲ್ಲಿ ಸ್ಥಳೀಯ ಸರಕಾರಗಳು ದುರ್ಬಲಗೊಂಡವು. ಯಾಕೆಂದರೆ ಬ್ರಿಟಿಷರು ಕೇಂದ್ರೀಕೃತ ಆಡಳಿತ ವ್ಯವಸ್ಥೆಗೆ ಮನ್ನಣೆ ನೀಡಿರುವುದರಿಂದ ಕ್ರಮೇಣ ಅವು ಶಿಥಿಲಗೊಂಡವು. ಇದರ ಜೊತೆಗೆ ಅವು ಹೊಸ ಸ್ವರೂಪ ಪಡೆದುಕೊಂಡವು. ಆಡಳಿತದ ಅನುಕೂಲಕ್ಕಾಗಿ ಜನತೆಯ ಸಂಪರ್ಕ ದೃಷ್ಟಿಯಿಂದ ಪಂಚರು, ಸರಪಂಚರ ಸ್ಥಾನಗಳು ಬದಲಾಗಿ ಮಾಲಿಗೌಡ(ಗ್ರಾಮದ ಆಡಳಿತಗಾರ) ಪೋಲೀಸ ಗೌಡ(ಗ್ರಾಮದಲ್ಲಿ ಶಿಸ್ತು ಕಾಪಾಡುವುದು) ಶಾನುಭೋಗ(ಭೂಮಿ ಮತ್ತು ಕಂದಾಯ ವಸೂಲಿಗಾರ) ಎಂಬ ಇತ್ಯಾದಿ ಹುದ್ದೆಗಳನ್ನು ಹುಟ್ಟು ಹಾಕಿದರು. ಇದರ ಜೊತೆಗೆ ಸ್ಥಳೀಯ ಜನರಿಂದ ತೆರಿಗೆ ಸಂಗ್ರಹಕ್ಕಾಗಿ ನಿಯಂತ್ರಿತ ಸ್ಥಳೀಯ ಸಂಸ್ಥೆಗಳಿಗೆ ಆಸಕ್ತಿ ತೋರಿಸಿದರು. ಅದರ ಭಾಗವಾಗಿ ೧೬೮೭ರಲ್ಲಿ ಮದ್ರಾಸ್ ಮುನ್ಸಿಪಲ್ ಕಾರ್ಪೋರೇಷನ್ ಹಾಗೂ ೧೭೭೬ರಲ್ಲಿ ಮದ್ರಾಸ್ ಮುಂಬೈ ಮತ್ತು ಕಲ್ಕತ್ತಾ ಮುನ್ಸಿಪಲ್ ಕಾರ್ಪೋರೇಷನ್‌ಗಳನ್ನು ರಚನೆ ಮಾಡಿದರು. ಆದರೆ ೧೮೫೭ ದಂಗೆಯ ಪರಿಣಾಮವಾಗಿ ವಸಾಹತುಶಾಹಿ ಆಡಳಿತವು ತೀವ್ರವಾಗಿ ಹಣಕಾಸು ತೊಂದರೆಯನ್ನು ಅನುಭವಿಸಿತು. ಹೀಗಾಗಿ ಈ ಒತ್ತಡದಿಂದ ಪಾರಾಗಲು ವಿಕೇಂದ್ರೀಕರಣದ ಹೆಸರಿನಲ್ಲಿ ಸಾರ್ವಜನಿಕ ಸೇವೆಗಳನ್ನು ಪ್ರಾರಂಭಿಸಿತು. ಈ ಸಾರ್ವಜನಿಕ ಸೇವೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಲಾಯಿತು. ಹೀಗೆ ಒತ್ತಾಯವಾಗಿ ತರಲ್ಪಟ್ಟ ವಿಕೇಂದ್ರೀಕರಣದ ಫಲವಾಗಿ ಮುನ್ಸಿಪಲ್ ಆಡಳಿತವು ಅಸ್ತಿತ್ವಕ್ಕೆ ಬಂದಿತು.[೨]

೧೮೭೦ರಲ್ಲಿ ವೈಸ್‌ರಾಯ್ ಲಾರ್ಡ್‌ಮೇಯೋ ಠರಾವು ವಸಾಹತು ಸರಕಾರಕ್ಕೆ ಹಣಕಾಸಿನ ಮೂಲ ಹೆಚ್ಚಿಸುವ ಉದ್ದೇಶದಿಂದ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಚಾಲನೆ ನೀಡಲಾಯಿತು. ಈ ಅವಧಿಯಲ್ಲಿ ಗ್ರಾಮೀಣ ಪ್ರದೇಶದ ವಿಶ್ವಾಸವನ್ನು ಸಂಪಾದಿಸುವುದು ಬ್ರಿಟಿಷರಿಗೆ ಅವಶ್ಯಕವಾಗಿತ್ತು. ಹಾಗಾಗಿ ಗ್ರಾಮೀಣ ಜನರ ಅಭಿವೃದ್ಧಿ ಹೆಸರಿನಲ್ಲಿ ಪಂಚಾಯತ್‌ಗಳ ಸಬಲೀಕರಣ ಹಾಗೂ ಹಣಕಾಸಿನ ಮೂಲ ಹುಡುವುದು ಅಗತ್ಯದ ದೃಷ್ಟಿಯಿಂದ ವಿಕೇಂದ್ರೀಕರಣ ಆಡಳಿತ ಮತ್ತು ಪಂಚಾಯತ್ ಪದ್ಧತಿ ಜಾರಿಗೆ ೧೮೭೧ರಲ್ಲಿ ಬಂಗಾಳದ ಗರ್ವನರ್ ಜನರಲ್ ಕ್ಯಾಂಪಬೆಲ್ ಶಿಫಾರಸ್ಸು ಮಾಡಿದ್ದರು.

ಲಾರ್ಡ್‌ರಿಪ್ಪನ್, ೧೮೮೨ ಶಿಫಾರಸ್ಸು

ಭಾರತದಲ್ಲಿ ಸ್ಥಳೀಯ ಸರಕಾರ ಹೊರ ಆಸ್ತಿಭಾರ ಹಾಕಿದ್ದು ಲಾರ್ಡ್‌ರಿಪ್ಪನ್. ರಿಪ್ಪನ್ ಅವರ ಹೊಸ ನಿರ್ಣಯಗಳು - ವಿಶೇಷತೆಯೆಂದರೆ ತಾಲೂಕು ಜಿಲ್ಲಾ ಮಟ್ಟದಲ್ಲಿ ಸ್ಥಳೀಯ ಸರಕಾರ ರಚನೆಗೆ ಅವಕಾಶ ನೀಡಿತು. ಇದರ ಜೊತೆಗೆ ಪ್ರಾಂತೀಯ ಸರಕಾರಗಳಿಗೆ ಆದೇಶ ಕಳುಹಿಸಿದರು. ಇದು ೧೮೮೫ರಲ್ಲಿ ಗ್ರಾಮಮಟ್ಟದ ಕೆಳಗಿನ ಹಂತದ ಪಂಚಾಯತ್ ಸದಸ್ಯನನ್ನು ನಾಮಕರಣ ವ್ಯವಸ್ಥೆ ಜಾರಿಗೆ ತರಲಾಯಿತು. ಒಟ್ಟಿನಲ್ಲಿ ಲಾರ್ಡ್‌ರಿಪ್ಪನ್ ಭಾರತದಲ್ಲಿ ಸ್ಥಳೀಯ ಸರಕಾರಗಳಲ್ಲಿನ ಹೊಸ ರೂಪಕೊಟ್ಟರು. ಹಾಗಾಗಿ ಲಾರ್ಡ್‌ರಿಪ್ಪನ್ ಅವರನ್ನು ಸ್ಥಳೀಯ ಸರಕಾರದ 'ಪಿತಾಮಹಾ' ಎಂದು ಕರೆಯಲಾಗಿದೆ. ಆದರೆ ನಾಮಕರಣ ಪದ್ಧತಿಯಲ್ಲಿ ಜನಾಂಗೀಯ ಪ್ರಾತಿನಿಧ್ಯ ಇರಲಿಲ್ಲ. ಹೀಗಾಗಿ ಅದರ ಪರಿಷ್ಕರಣೆಯು ಅನಿವಾರ್ಯವಾಯಿತು.

ರಾಯಲ್ ಕಮೀಷನ್ ೧೯೦೭ ಲಾರ್ಡ್‌ರಿಪ್ಪನ್ ಸ್ಥಳೀಯ ಸರಕಾರವು ಉದಾರಧೋರಣೆ ಹೊಂದಿದ್ದರು. ಹಾಗಾಗಿ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು ಜನರಿಗೆ ರಾಜಕೀಯ ಮತ್ತು ಜನ ಪ್ರಿಯ ಶಿಕ್ಷಣದ ಸಾಧನಗಳಾಗಿ ಕೆಲಸ ಮಾಡುತ್ತವೆ ಎಂದು ಭಾವಿಸಿದ್ದ. ಈ ನಿಟ್ಟಿನಲ್ಲಿ ಇನ್ನೊಂದು ಪ್ರಮುಖ ಹೆಜ್ಜೆಯೆಂದರೆ ವಿಕೇಂದ್ರೀಕರಣವನ್ನು ೧೯೦೭ರಲ್ಲಿ ನೇಮಿಸಲಾಯಿತು. ಆದರೆ ಇವುಗಳ ಶಿಫಾರಸ್ಸು ಅನುಷ್ಠಾನಕ್ಕೆ ತರಲಿಲ್ಲ. ಆದರೆ ೧೯೧೯ರ ಮಾಂಟೆಗೋ–ಜೆಮ್ಸ್‌ಫರ್ಡ್ ಸುಧಾರಣೆಗಳು ಸ್ಥಳೀಯ ಸ್ವಯಂ ಆಡಳಿತವನ್ನು ವರ್ಗಾಯಿಸಿದ ವಿಷಯವನ್ನಾಗಿ ಮಾಡಿದವು. ಅಂದರೆ ಸ್ಥಳೀಯ ಸ್ವಯಂ ಆಡಳಿತವನ್ನು ಪ್ರಾಂತ್ಯಗಳಲ್ಲಿ ಭಾರತೀಯ ಮಂತ್ರಿಗಳ ನಿಯಂತ್ರಣದ ಅಡಿಯಲ್ಲಿ ತರಲಾಯಿತು. ಆದರೆ ಪಂಚಾಯತ್ ಸಂಸ್ಥೆಗಳನ್ನು ನಿಜವಾದ ಅರ್ಥದಲ್ಲಿ ಪ್ರಜಾಸತ್ತಾತ್ಮಕವಾಗಿ ಮಾಡಲಿಲ್ಲ. ಯಾಕೆಂದರೆ ಇದಕ್ಕೆ ನಾನಾ ಮಿತಿಗಳಿದ್ದವು. ಅದರಲ್ಲಿ ಪ್ರಾಂತ್ಯಗಳಲ್ಲಿ ಪಂಚಾಯತ್‌ಗಳನ್ನು ಸ್ಥಾಪಿಸಲು ಹಲವಾರು ಕಾಯಿದೆಗಳನ್ನು ಜಾರಿಗೆ ತರಲಾಯಿತು. ೧೯೧೯ ಬಂಗಾಳ ಗ್ರಾಮ ಸ್ವಯಂ ಆಡಳಿತದ ಕಾಯಿದೆ, ೧೯೨೦ ಮದ್ರಾಸ್, ಬಾಂಬೆ ಕಾಯಿದೆ, ೧೯೨೬ ಬಿಹಾರ, ಓರಿಸ್ಸಾ ಗ್ರಾಮ ಆಡಳಿತ ಕಾಯಿದೆ, ೧೯೩೫ ಪಂಜಾಬ ಗ್ರಾಮ ಆಡಳಿತ ಕಾಯಿದೆಗಳ ಪರಿಣಾಮವಾಗಿ ಇಲ್ಲಿಯವರೆಗೆ ಯಾವ ಕಾಯಿದೆಗಳು ಪಂಚಾಯತ್‌ಗಳನ್ನು ಸ್ಥಿರವಾಗಿ ಉಳಿಸಿಕೊಳ್ಳುವ ಲಕ್ಷಣಗಳು ಗೋಚರಿಸಲೇ ಇಲ್ಲ. ಹೀಗಾಗಿ ೧೯೩೫ ಭಾರತ ಸರಕಾರ ಕಾಯಿದೆ ಮೂಲಕ ಸಂವಿಧಾನಿಕ ಸ್ವರೂಪ ನೀಡಲು ಪ್ರಯತ್ನಿಸಲಾಯಿತು.

೧೯೩೫ರ ಭಾರತ ಸರಕಾರದ ಕಾಯಿದೆ ಮತ್ತು ಸ್ಥಳೀಯ ಸರಕಾರ

ಮಾಂಟೆಗ್ಯೂ. ಜೆಮ್ಸ್ ಫರ್ಡ್ ಸುಧಾರಣೆಯಿಂದ ಜಾರಿಗೊಳಿಸಿದ್ದ ದ್ವಿಪ್ರಭುತ್ವ ಯಶಸ್ವಿಯಾಗಿ ಕಾರ್ಯನಿರ್ವಹಿಸಲಿಲ್ಲ. ಇದರ ಫಲವಾಗಿ ೧೯೩೫ರ ಕಾಯ್ದೆ ಜಾರಿಗೆ ತರಲಾಯಿತು. ಈ ಅವಧಿಯಲ್ಲಿ ಸ್ಥಳೀಯ ಸರಕಾರಗಳು ಅಧಿಕಾರವು ಪ್ರಾಂತೀಯ ಸರಕಾರದಲ್ಲೇ ಉಳಿಯಿತು. ಜೊತೆ ಸ್ಥಳೀಯ ಸರ್ಕಾರದ ಆಸಕ್ತಿ ಕುಸಿಯಿತು. ಹೀಗಾಗಿ ಮುನ್ಸಿಪಲ್ ಬೋರ್ಡ್‌ಗಳ

ಹೆಚ್ಚಾಗತೊಡಗಿದವು. ಸ್ಥಳೀಯ ಸರಕಾರಗಳು ಕೇವಲ ಕೇಂದ್ರವಾಣಿ ಪರಿಗಣಿಸಲ್ಪಟ್ಟಿತು. ಇದರ ಜೊತೆಗೆ ಇದರ ದೋಷಗಳನ್ನು ಗುರುತಿಸಲು ಸಾಧ್ಯವಾಗಲಿಲ್ಲ. ೧೯೩೭-೧೯೩೮ರ ಅವಧಿಯಲ್ಲಿ ವಿವಿಧ ಪ್ರಾಂತ್ಯಗಳಲ್ಲಿ ಮುನ್ಸಿಪಲ್ ಆಡಳಿತ ಜಾರಿಗೆ ಬಂದವು. ಹಾಗಾಗಿ ೧೯೩೫ರಿಂದ ೧೯೪೭ರವರೆಗೆ ಭಾರತದ ಸ್ಥಳೀಯ ಸರಕಾರಗಳ ಸುಧಾರಣೆಯ ಬಗ್ಗೆ ಅಷ್ಟೊಂದು ಪ್ರಾಮುಖ್ಯತೆ ಕೊಡಲಿಲ್ಲ. ಯಾಕೆಂದರೆ ಈ ಅವಧಿಯಲ್ಲಿ ಬ್ರಿಟಿಷರು ೨ನೇ ಮಹಾಯುದ್ಧದಲ್ಲಿ ಭಾಗಿಯಾಗಿದ್ದರಿಂದ ಮತ್ತು ಜವಾಬ್ದಾರಿಯುತ ಸರಕಾರ ಸ್ಥಾಪನೆಯಾಗಿದ್ದು ಮತ್ತು ೧೯೪೬ರ ಉಸ್ತುವಾರಿ ಸರಕಾರ ಜಾರಿಗೆ ಬಂದರಿಂದ ಸ್ಥಳೀಯ ಸರಕಾರಗಳು ಅಷ್ಟೊಂದು ಕ್ರಿಯಾಶೀಲವಾಗಿ ಕೆಲಸ ಮಾಡಲಿಲ್ಲ. ೧೯೪೭ರ ಸ್ವಾತಂತ್ರ್ಯ ನಂತರ ಪ್ರಜಾಪ್ರಭುತ್ವದ ನೈಜ ಪದ್ಧತಿಯಾಗಿ ರೂಪಗೊಂಡವು. ಹಾಗಾಗಿ ಭಾರತದಲ್ಲಿ ಸ್ಥಳೀಯ ಸರಕಾರಗಳು ಸ್ಥಾಪನೆಗೆ ಹೊಸ ಆಯಾಮ ದೊರೆಯಿತು.[೩]

೩.೩. ಸಂವಿಧಾನದ ಆಶಯ ಮತ್ತು ಸ್ಥಳೀಯ ಸರಕಾರಗಳು

ಭಾರತದಲ್ಲಿ ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆ ನ್ಯಾಯ ಪ್ರಾಚೀನ ಕಾಲದಿಂದಲೂ ಗುರುತಿಸುತ್ತಾ ಬರಲಾಗಿದೆ. ಆದರೆ ಕಾಲಾಂತರದಲ್ಲಿ ಅವು ರಚನೆ ಮತ್ತು ಕಾರ್ಯಗಳ ವ್ಯತ್ಯಾಸದ ಫಲವಾಗಿ ಕೆಲವೊಂದು ಭಾರಿ ಕ್ರಿಯಾಶೀಲವಾಗಿ ಮತ್ತೆ ಕೆಲವೊಂದು ನಿಷ್ಕ್ರೀಯವಾಗಿ, ನಿರ್ಲಿಪ್ತವಾಗಿ ಕಾರ್ಯ ನಿರ್ವಹಿಸುವುದು ಕಂಡು ಬರುತ್ತದೆ. ಇದಕ್ಕೆ ಕಾರಣ ಹಲವಾರು ಸನ್ನಿವೇಶಗಳು, ಭಾರತದ ಸಂದರ್ಭದಲ್ಲಿ ಜಾತಿ ವ್ಯವಸ್ಥೆ ಮತ್ತು ಸಾಮಾಜಿಕ ರಚನೆ, ಸ್ವರೂಪ, ರಾಜ್ಯ, ರಾಷ್ಟ್ರ ಮತ್ತು ಸ್ಥಳೀಯ ಸರಕಾರದ ಮೇಲೆ ಪರಿಣಾಮ ಬೀರಿದ್ದು ಉಂಟು. ಹಾಗಾಗಿ ಇವುಗಳಿಗೆ ಸಂವಿಧಾನಿಕ ಸ್ಥಾನಮಾನ ಒದಗಿಸುವುದು ಮುಖ್ಯವೆನಿಸಿದ್ದು ಈ ನಿಟ್ಟಿನಲ್ಲಿ, ೧೯೯೨ರಲ್ಲಿ ೭೩ನೇ ತಿದ್ದುಪಡಿ ಭಾರತದ ಇತಿಹಾಸದಲ್ಲಿ ಮಹತ್ವದ ಮೈಲುಗಲ್ಲು ಎಂದು ಹೇಳಬಹುದು.(ನೇರಿ ಕುರ್ನೆಲಿಯಾಂ ೨೦೧೫)

೧೯೯೨ರಲ್ಲಿ ಸಂವಿಧಾನಕ್ಕೆ ಮಾಡಲಾದ ೭೩ನೇ ತಿದ್ದುಪಡಿ ದೇಶದಲ್ಲಿ ಮೂರು ಹಂತಗಳ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಕಡ್ಡಾಯಗೊಳಿಸಿದೆ. ಈ ಮೂರು ಸ್ತರಗಳು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಯಾಗಿ ಕೆಲಸ ನಿರ್ವಹಿಸಲು ಅಧಿಕಾರ ಮತ್ತು ಜವಾಬ್ದಾರಿಯನ್ನು ರಾಜ್ಯ ಸರಕಾರಗಳು ಅವುಗಳಿಗೆ ವಹಿಸಬೇಕು. ಇವುಗಳ ಚುನಾವಣಾ ಜವಾಬ್ದಾರಿಯನ್ನು ಚುನಾವಣಾ ಆಯೋಗಕ್ಕೆ ವಹಿಸಬೇಕು. ಇದರ ಜೊತೆಗೆ ರಾಜ್ಯಾದಾಯದ ಪಾಲನ್ನು ನಿಗದಿಗೊಳಿಸಬೇಕು. ರಾಜ್ಯ ಹಣಕಾಸು ಆಯೋಗ ರಚನೆಯಾಗಬೇಕು. ಅಧಿಕಾರವನ್ನು ತಳಮಟ್ಟದಿಂದ ಮೇಲ್ಮಟ್ಟದವರೆಗೆ ಪುಟಿದು ಬರಬೇಕು. ಪಂಚಾಯತ್‌ಗಳಿಗೆ ಕ್ರಿಯಾಯೋಜನೆ ತಯಾರಿಸುವುದು ಮತ್ತು ಅದನ್ನು ಮೇಲ್ವಿಚಾರಣೆ ಮಾಡಲು ಜಿಲ್ಲಾ ಯೋಜನಾ ಸಮಿತಿ ರಚನೆಯಾಗಬೇಕು. ಪ್ರತಿನಿಧಿಗಳ ಸ್ಥಾನ ಕಾಯ್ದಿರಿಸುವಿಕೆ ಮೂಲಕ ಸಾಮಾಜಿಕ ನ್ಯಾಯ ಪಾಲನೆಗೆ ಒತ್ತು ನೀಡಲಾಗಿದೆ. ಮೂರು ಸ್ತರಗಳಿಗೆ ರಾಜ್ಯಗಳು ವರ್ಗಾಯಿಸಬಹುದಾದ ೨೯ ವಿಷಯಗಳನ್ನು ಸಂವಿಧಾನಕ್ಕೆ ಹೊಸದಾಗಿ

ಸೇರಿಸಲಾದ ೧೧ನೇ ಅನುಸೂಚಿಯಲ್ಲಿ ಸ್ಪಷ್ಟಪಡಿಸಲಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಪಂಚಾಯತ್ ಮಟ್ಟದಲ್ಲಿ ಗ್ರಾಮಸಭೆಗಳನ್ನು ಅಸ್ತಿತ್ವಕ್ಕೆ ತರುವ ಮೂಲಕ ನೇರ ಪ್ರಜಾತಂತ್ರ ಪರಿಕಲ್ಪನೆಯನ್ನು ಸಾಕಾರಗೊಳಿಸಲಾಗಿದೆ. ಸಂವಿಧಾನಕ್ಕೆ ಮಾಡಲಾದ ದೂರಗಾಮಿ ಸಾರ್ವಜನಿಕ ಆಡಳಿತದಲ್ಲಿ ಜನರ ಸಹಭಾಗಿತ್ವಕ್ಕೆ ವಿಶೇಷ ಅವಕಾಶ ಕಲ್ಪಿಸುವುದರ ಜೊತೆಗೆ ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವುದು ದೃಢ ಪರಿಕಲ್ಪನೆಯ ಪ್ರತೀಕವೆನಿಸಿದೆ.

ಕರ್ನಾಟಕ ಮಾದರಿ

ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪುರುಷನಾಗಿರಬಹುದು / ಮಹಿಳೆಯಾಗಿರಬಹುದು ಅವರವರ ಜವಾಬ್ದಾರಿಯನ್ನು ಪ್ರತಿಯೊಬ್ಬರು ಅರಿತುಕೊಳ್ಳುವುದು ಅಗತ್ಯವಾಗಿದೆ. ಇದನ್ನು ಪಂಚಾಯತ್ ರಾಜ್ ಎಂದು ಹೇಳಿದ್ದಾರೆ. ಸಂವಿಧಾನ ತಿದ್ದುಪಡಿ ಪಂಚಾಯತ್ ರಾಜ್ ಪರಿಕಲ್ಪನೆ ಸ್ಥೂಲ ಚೌಕಟ್ಟನ್ನು ರಚಿಸಿ ಅದಕ್ಕೆ ಅಗತ್ಯವೆನಿಸುವ ಕಾನೂನು ರೂಪಿಸಿ ಅನುಷ್ಠಾಕ್ಕೆ ತರುವ ಜವಾಬ್ದಾರಿಯನ್ನು ರಾಜ್ಯ ಶಾಸಕಾಂಗಕ್ಕೆ ನೀಡಲಾಗಿದೆ. ಹಾಗಾಗಿ ದೇಶದ ಎಲ್ಲಾ ರಾಜ್ಯಗಳಲ್ಲಿ ಪಂಚಾಯತ್ ರಾಜ್ಯ ವವಸ್ಥೆ ಇದೆ. ಆದರೆ ಕೆಲವು ಭಿನ್ನತೆಗಳಿವೆ. ಗ್ರಾಮಪಂಚಾಯತ್‌ಗಳು ಗ್ರಾಮ ಸ್ವರಾಜ್ಯದ ಪ್ರಾಥಮಿಕ ಕಲ್ಪನೆಗಳಾದ ಜನಾಧಿಕಾರ, ಸಹಭಾಗಿತ್ವ, ಸ್ವಯಂ ಆಡಳಿತ, ಸಾಮೂಹಿಕ ಹೊಣೆಗಾರಿಕೆ, ಉತ್ತರದಾಯಿ ಮತ್ತು ಪಾರದರ್ಶಕತೆಗಳನ್ನು ಅವುಗಳ ಅತ್ಯುಚ್ಚ ನೆಲೆಗಳಲ್ಲಿ ಪ್ರತಿಷ್ಠಾಪಿಸಿದೆ.

ಮೂಲ ಅಧಿಕಾರ ಮೂಲದಲ್ಲೇ

ಗ್ರಾಮೀಣ ವ್ಯಾಪ್ತಿಯ ಮೂಲ ಅಧಿಕಾರಗಳು ಕಟ್ಟಡಗಳ ರಚನೆ ನಿಯಂತ್ರಣದ ಮೂಲಕ ಯೋಜಿತ ಗ್ರಾಮ ನಿರ್ಮಾಣ, ಕಾರ್ಖಾನೆ, ಉದ್ದಿಮೆ, ವ್ಯಾಪಾರ, ಹೋಟೆಲ್, ವಸತಿಗೃಹ ನಿಯಂತ್ರಣ, ತ್ಯಾಜ್ಯವಿಲೆವಾರಿ, ಜನಾರೋಗ್ಯ ಪರಿಸರ ರಕ್ಷಣೆ, ಚರಂಡಿ ಕುಡಿಯುವ ನೀರು, ರಸ್ತೆ ಸೇತುವೆ ನಿರ್ಮಾಣ, ಬಿದಿ ದೀಪ, ಒತ್ತುವರಿ ನಿವಾರಣೆ, ಸಾರ್ವಜನಿಕ ಸೌಲಭ್ಯ ಸೃಷ್ಠಿ ಮೂಲಕ ಜನರ ಜೀವನಮಟ್ಟ ಸುಧಾರಣೆಗಳಿಗೆ ಸಂಬಂಧಿಸಿದ ಅಧಿಕಾರ ಮತ್ತು ಹೊಣೆಗಾರಿಕೆ ಗ್ರಾಮ ಪಂಚಾಯತ್‌ಗಳಿಗೆ ಸೇರಿದೆ. ಇವುಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣಾಧಿಕಾರಗಳು, ಪರಿಣಾಮಕಾರಿಯಾಗಬೇಕೆಂಬ ಕಾರಣದಿಂದ ನಿಯಮೋಲ್ಲಂಘನೆ ಸಂದರ್ಭದಲ್ಲಿ ದಂಡನಾಕ್ರಮಗಳನ್ನು ಕೈಗೊಳ್ಳುವ ಅಧಿಕಾರ ಮತ್ತು ಜವಾಬ್ದಾರಿಯನ್ನು ಪಂಚಾಯತ್‌ಗಳಿಗೆ ನೀಡಲಾಗಿದೆ.

ಜನಾಧಿಕಾರ: ಪಂಚಾಯತ್ ಮಟ್ಟದಲ್ಲಿ ಜನರಿಗೆ ಅಧಿಕಾರ ಸಿಗಬೇಕೆಂದರೆ, ಭಾರತದ ಹಳ್ಳಿಗಳು ಬಡವರಿಂದ ಕೂಡಿದ ಬಡದೇಶವಾಗಿದೆ. ಭಾರತದ ಹಳ್ಳಿಗಳು ಶ್ರೀಮಂತವಾದಲ್ಲಿ ಮಾತ್ರ ಭಾರತವು ಶ್ರೀಮಂತವಾಗಬಲ್ಲದು ಎಂದು ಪಂಡಿತ್ ಜವಹಾರಲಾಲ್ ನೆಹರು ಅಭಿಪ್ರಾಯ ಪಟ್ಟಿದ್ದಾರೆ.

ಗ್ರಾಮ ಪಂಚಾಯತ್ ರಚನೆ

ಸಾಮಾನ್ಯವಾಗಿ ಒಂದು ಗ್ರಾಮ ಪಂಚಾಯತ್ ರಚನೆಯನ್ನು ಜನಸಂಖ್ಯೆ ಮತ್ತು ಪ್ರದೇಶದ ಆಧಾರದ ಮೇಲೆ ರಚನೆ ಮಾಡಲಾಗಿದೆ. ಆದರೆ ಈ ಗ್ರಾಮ ಪಂಚಾಯತ್‌ಗಳ ರಚನೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಏಕಪ್ರಕಾರವಾಗಿಲ್ಲ. ಅವುಗಳ ರಚನೆಯಲ್ಲಿ ವ್ಯತ್ಯಾಸವಿದೆ(ಕರ್ನಾಟಕ ಕೈಪಿಡಿ, ೨೦೧೭). ಸಾಮಾನ್ಯವಾಗಿ ೫೦೦೦ಕ್ಕಿಂತ ಕಡಿಮೆ ಇಲ್ಲದ ಮತ್ತು ೭೦೦೦ ಜನಸಂಖ್ಯೆಗೆ ಹೆಚ್ಚಿಗೆ ಇಲ್ಲದ ಗ್ರಾಮವನ್ನು ಅಥವಾ ಗ್ರಾಮಗಳ ಗುಂಪನ್ನು ಒಳಗೊಂಡಿರುವ ಯಾವುದೇ ಪ್ರದೇಶವನ್ನು ಒಂದು ಗ್ರಾಮ ಪಂಚಾಯತ್ ಎಂದು ಪರಿಗಣಿಸಲಾಗುತ್ತದೆ. ಬೆಳಗಾಂ, ಚಿಕ್ಕಮಗಳೂರು, ಮಂಗಳೂರು, ಉಡುಪಿ, ಧಾರವಾಡ, ಕಾರವಾರ, ಕೊಡಗು, ಶಿವಮೊಗ್ಗ, ಚಾಮರಾಜನಗರ, ಹಾವೇರಿ, ಹಾಸನ ಜಿಲ್ಲೆಗಳ ಪ್ರದೇಶಗಳಲ್ಲಿ ೨,೫೦೦ಕ್ಕಿಂತ ಕಡಿಮೆ ಇಲ್ಲದ ಜನಸಂಖ್ಯೆ ಹೊಂದಿದ ಪ್ರದೇಶವನ್ನು ಹಾಗೂ ಜನಸಂಖ್ಯೆಯನ್ನು ಪರಿಗಣಿಸಿದೆ. ಅವಶ್ಯಕವೆಂದು ಕಂಡುಬರುವರೆಲ್ಲ ಈ ಜಿಲ್ಲೆಗಳ ಪ್ರದೇಶಗಳಲ್ಲಿ ಗ್ರಾಮದ ಕೇಂದ್ರದಿಂದ ೫ ಕಿ.ಮೀ. ತ್ರಿಜ್ಯದ ಹತ್ತು ಕಿ.ಮೀ.(ವ್ಯಾಸದ) ಒಳಗಿರುವ ಪ್ರದೇಶವನ್ನು ಸರಕಾರವು ಗ್ರಾಮ ಪಂಚಾಯಿತಿ ಎಂದು ಗುರುತಿಸಬಹುದು. ಪ್ರತಿ ೪೦೦ ಜನಸಂಖ್ಯೆ ಅಥವಾ ಆ ಭಾಗಕ್ಕೆ ಒಬ್ಬ ಸದಸ್ಯರಂತೆ ಗ್ರಾಮ ಪಂಚಾಯಿತಿಗೆ ಸದಸ್ಯರನ್ನು ಚುನಾವಣೆ ಮೂಲಕ ಆಯ್ಕೆ ಮಾಡಲಾಗುವುದು. ಗ್ರಾಮ ಪಂಚಾಯಿತಿ ಚುನಾಯಿತ ಸದಸ್ಯರು ತಮ್ಮಲ್ಲಿಯೇ ಒಬ್ಬರನ್ನು ಅಧ್ಯಕ್ಷರಾಗಿ ಮತ್ತೊಬ್ಬರನ್ನು ಉಪಾಧ್ಯಕ್ಷರೆಂದು ಆಯ್ಕೆಮಾಡಿಕೊಂಡು ಆಡಳಿತ ನಡೆಸುತ್ತಾರೆ.

ಇದರ ಜೊತೆಗೆ ಸದಸ್ಯರು, ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿ ಕಲ್ಪಿಸಲಾಗಿದೆ. ಅದೇ ರೀತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮತ್ತು ಮಹಿಳೆಯರಿಗೆ ಈ ಸ್ಥಾನಗಳಲ್ಲಿ ಮೀಸಲಾತಿ ಕಲ್ಪಿಸಲಾಗಿದೆ. ಗ್ರಾಮಸ್ಥರಿಗೆ ತಮ್ಮ ಜವಾಬ್ದಾರಿ ಬಗ್ಗೆ ಹೆಚ್ಚಿನ ಅಧಿಕಾರ ನೀಡಿದರೆ ತಮ್ಮ ಅಭಿವೃದ್ಧಿಯ ಬಗ್ಗೆ ತಾವೇ ನಿರ್ಧಾರ ತೆಗೆದುಕೊಳ್ಳುತ್ತಾರೆ. ಕರ್ನಾಟಕ ಮಾದರಿಯ ಪಂಚಾಯತ್ ರಾಜ್ಯ ವ್ಯವಸ್ಥೆ ಜನಾಧಿಕಾರಕ್ಕೆ ಗರಿಷ್ಠ ಸಾಧ್ಯ ಮಹತ್ವ ನೀಡಿದೆ. ಗ್ರಾಮ ಪಂಚಾಯತ್‌ಗಳನ್ನು ಕುರಿತು ಹೇಳುವುದಾದರೆ, ಜನರ ಅಧಿಕಾರ ಮತ್ತು ಸಹಭಾಗಿತ್ವಕ್ಕೆ ಹೆಚ್ಚಿನ ಅವಕಾಶ ನೀಡಲಾಗಿದೆ. ಗ್ರಾಮ ಪಂಚಾಯತ್ ವರ್ಷದಲ್ಲಿ ಎರಡು ಭಾರಿ ಗ್ರಾಮಸಭೆ-ವಾರ್ಡ್‌ಸಭೆ, ಜನತಂತ್ರ ವ್ಯವಸ್ಥೆ ಆದರ್ಶ ಮಾದರಿಗಳೆನಿಸಿವೆ. ತಮ್ಮ ಪ್ರತಿನಿಧಿಗಳನ್ನು ತಾವೇ ಆಯ್ಕೆ ಮಾಡುವುದು. ನೀತಿ ನಿಯಮಗಳನ್ನು ತಾವೇ ರೂಪಿಸುವುದು/ನಿರ್ಧಾರ ಕೈಗೊಳ್ಳುವುದು. ಜಮಾಬಂಧಿಯ ಸಾಮಾಜಿಕ ಲೆಕ್ಕ ಪರಿಶೋಧನೆ ಹಣಕಾಸಿನ ವ್ಯವಹಾರ ಜನರ ಎದುರಲ್ಲೇ ನಡೆಯುವುದರಿಂದ ಅಭಿವೃದ್ಧಿ ಯೋಜನೆಗಳ ಮೌಲ್ಯಮಾಪನ, ಭೌತಿಕ ಮತ್ತು ಗುಣಮಟ್ಟ ಪರಿಶೀಲನೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದು. ಜನರ ಪಾಲ್ಗೊಳ್ಳುವುದು ಅಭಿಪ್ರಾಯ ವ್ಯಕ್ತಪಡಿಸುವ ಅಧಿಕಾರ ಜನರಿಗೆ ಇದೆ. ಆದ್ದರಿಂದ ಗ್ರಾಮಸಭೆಯನ್ನು ಹಳ್ಳಿಯ ವಿಧಾನಸಭೆ, ಗ್ರಾಮ ಪಂಚಾಯತ್‌ನ್ನು ಆಡಳಿತಾಂಗ

ಗುರುತಿಸಲಾಗುತ್ತಿದೆ. ಇಲ್ಲಿ ಜನಾಧಿಕಾರಕ್ಕೆ ಅಪರಿಮಿತ ಅಧಿಕಾರವಿದೆ. ಆದ್ದರಿಂದಲೇ ಗ್ರಾಮ ಪಂಚಾಯತ್ ನೇರ ಜನತಂತ್ರ ವ್ಯವಸ್ಥೆಗೆ ಅತ್ಯಂತ ನಿಕಟವೇ ಎಂದು ಭಾವಿಸಲ್ಪಟ್ಟಿರುವುದು.

ಸಾಮೂಹಿಕ ಹೊಣೆಗಾರಿಕೆ

ಗ್ರಾಮಪಂಚಾಯತ್‌ಗೆ ಜನರು ಆಯ್ಕೆ ಮಾಡುವ ಜನಪ್ರತಿನಿಧಿಗಳು ತಮ್ಮಲ್ಲಿ ಒಬ್ಬರನ್ನು ಅಧ್ಯಕ್ಷರೆಂದು ಮತ್ತೊಬ್ಬರನ್ನು ಉಪಾಧ್ಯಕ್ಷರೆಂದು ಆಯ್ಕೆ ಮಾಡಿಕೊಳ್ಳುತ್ತಾರೆ. ಇವರಿಗೆ ಸ್ವಯಂ ನಿರ್ಣಯ ಅಧಿಕಾರವಿಲ್ಲ, ಸದಸ್ಯರು 'ಸಮಿತಿ ಸಭೆ' ಸೇರಿ ಬಹುಮತದ ನೆಲೆಯಲ್ಲಿ ಕೈಗೊಳ್ಳುವ ನಿರ್ಣಯಗಳನ್ನು ಅನುಷ್ಠಾನಿಸುವ ಅಧಿಕಾರ ಅವರಿಗೆ ಸೇರಿದ್ದು, ಉಳಿದಂತೆ ಎಲ್ಲಾ ಸದಸ್ಯರು ಸಮಾನರು ಮತ್ತು ಅಧ್ಯಕ್ಷರು ಅಂತಹ ಸಮಾನರಲ್ಲಿ ಮೊದಲಿಗರು. ಅವರು ಉಳಿದ ಸದಸ್ಯರಿಗೆ ಉತ್ತರದಾಯಿಗಳು ಸದಸ್ಯರ ಸಮ್ಮತಿ ಇರುವವರೆಗೆ ಅವರು ಆ ಹುದ್ದೆಯಲ್ಲಿರಬಹುದು. ಆದ್ದರಿಂದ ಗ್ರಾಮ ಪಂಚಾಯಿತಿ ಸಾಮೂಹಿಕ ಹೊಣೆಗಾರಿಕೆಯಿಂದ ನಡೆಯುವಂತದ್ದು.

ಮಾನವ ಅಭಿವೃದ್ಧಿಯಲ್ಲಿ ಅಪರಾ ಅವಕಾಶಗಳು

ಪಂಚಾಯತ್‌ರಾಜ್ ವ್ಯವಸ್ಥೆಯು ಮೂಲಕ ಪ್ರಾರಂಭದಿಂದ ಇಲ್ಲಿಯವರೆಗೆ ಮಾನವನ ಅಭಿವೃದ್ಧಿಗೆ ಪ್ರಯತ್ನಿಸಲಾಗುತ್ತಿದೆ. ಇಲ್ಲಿ ವ್ಯಕ್ತಿಯ ವೈಯಕ್ತಿಕ ಬೆಳವಣಿಗೆ, ಕೌಶಲ್ಯ ಮತ್ತು ಬುದ್ಧಿವಂತಿಕೆ ಯನ್ನು ಸಾಮರ್ಥ್ಯವನ್ನು ಗುರುತಿಸುವ ಏಕೈಕ ಸಂಸ್ಥೆ ಎಂದರೆ ಪಂಚಾಯತ್‌ಗಳು, ಹಂತ ಹಂತವಾಗಿ ವ್ಯಕ್ತಿಯ ಬೆಳವಣಿಗೆ ಸಹಾಯಕಾರಿಯಾದದ್ದು. ಈ ನಿಟ್ಟಿನಲ್ಲಿ ೧೯೯೩ ಕರ್ನಾಟಕ ಪಂಚಾಯತ್ ಅಧಿನಿಯಮ ಒಂದು ಮಹತ್ವದ ಮೈಲುಗಲ್ಲು ಎಂದು ಹೇಳಬಹುದು.

ಇಲ್ಲಿಯೂ ಸಹ ಉನ್ನತ ಚಿಂತನೆ ಸೂಕ್ತ ನಿರ್ಧಾರ ಮತ್ತು ಪರಿಣಾಮಕಾರಿ ಅನುಷ್ಠಾನಗಳ ಮೂಲಕ ಗ್ರಾಮ ಪಂಚಾಯತ್‌ಗಳು ತಮ್ಮ ವ್ಯಾಪ್ತಿಯಲ್ಲಿ ಮಾನವ ಅಭಿವೃದ್ಧಿಯ ಹೊಸ ಮಜಲು ಗಳನ್ನು ಮುಟ್ಟಬಹುದು.

ಆರ್ಥಿಕ ಬಲ

ಕರ್ನಾಟಕ ಮೂರು ಹಂತಗಳ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯತ್‌ಗಳಿಗೆ ಇರುವಷ್ಟು ಆರ್ಥಿಕ ಬಲ ಹಣಕಾಸು ನಿರ್ವಹಣಾ ಸ್ವಾತಂತ್ರ್ಯ ಉಳಿದೆರಡು ಸ್ತರಗಳಿಗಿಲ್ಲ. ಗ್ರಾಮ ಪಂಚಾಯತ್‌ಗಳಿಗೆ ರಾಜ್ಯ ಸರಕಾರದ ಶಾಸನಬದ್ಧ ಅನುದಾನದ ರೂಪದ ಮುಕ್ತ ನಿಧಿ ಸ್ಥಾಪಿಸಲಾಗಿದೆ. ಕೇಂದ್ರ ಸರಕಾರವು ವಾರ್ಷಿಕ ಅನುದಾನ ನೀಡುತ್ತದೆ. ರಾಜ್ಯ ಸರಕಾರ ಯೋಜನಾಧಾರಿತ ಅನುದಾನ ನೀಡುತ್ತದೆ. ಇದರ ಜೊತೆಗೆ ಗ್ರಾಮಪಂಚಾಯತ್‌ಗಳು ಕೆಲವು ತೆರಿಗೆ ಮತ್ತು ಶುಲ್ಕ ವಿಧಿಸುವ ಮೂಲಕ ತನ್ನ ಆದಾಯ ಸೃಷ್ಟಿಸಿಕೊಳ್ಳುತ್ತದೆ. ಒಂದು ಗ್ರಾಮ ಪಂಚಾಯತ್ ಮನಸ್ಸು ಮಾಡಿದರೆ ಸರಕಾರದ ಅವಲಂಬನೆ ಇಲ್ಲದೆ ತನ್ನದೇ ಸಂಪನ್ಮೂಲವನ್ನು ರೂಢಿಸಿಕೊಂಡು ಅದರ ಮೂಲಕವೇ ಆಡಳಿತ ಮತ್ತು ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯ.

ಕಾಡುವ ದೌರ್ಬಲ್ಯಗಳು

ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಬಲಪಡಿಸಲು ಅನೇಕ ಸುಧಾರಣಾ ಕ್ರಮಗಳನ್ನು ಜಾರಿಗೆ ತರಲಾಗಿದೆ. ಆದರೂ ಅದರಿಂದ ನಿರೀಕ್ಷಿತ ಫಲಿತಾಂಶಗಳು ಸಾಧ್ಯವಾಗಲಿಲ್ಲ. ಪಂಚಾಯತ್ ತನ್ನಲ್ಲಿ ಕೆಲವು ದೌರ್ಬಲ್ಯಗಳನ್ನು ಹುದುಗಿಸಿಕೊಂಡಿದೆ. ಅದರಲ್ಲಿ ಪ್ರಮುಖವಾಗಿ ಜಾತಿ ವ್ಯವಸ್ಥೆ ಭ್ರಷ್ಟಾಚಾರ, ಸ್ವಾರ್ಥ ಸ್ವಜನ ಪಕ್ಷಪಾತ, ಪ್ರಜಾತಂತ್ರ ಮೌಲ್ಯಗಳ ನಿರಾಕರಣೆ, ಸಾಮೂಹಿಕ ಹಿತದ ಅವಗಣನೆ, ಗ್ರಾಮ ಪಂಚಾಯತ್ ಸದಸ್ಯರಲ್ಲಿ ಮನೆ ಮಾಡಿದೆ. ಇದರ ಜೊತೆಗೆ ಎಲ್ಲ ಹಂತಗಳಲ್ಲಿ ಎದ್ದು ಕಾಣುವ ಜನರ ನಿಷ್ಕ್ರಿಯತೆ ಗ್ರಾಮ ಪಂಚಾಯತ್ ಸದಸ್ಯರ ಸ್ವಹಿತ ಗ್ರಾಮಸಭೆಯ ಸದಸ್ಯರನ್ನು ಬಿಟ್ಟಿಲ್ಲ. ಹೀಗಾಗಿ ಸಂವಿಧಾನ ಆಶಿಸುವ ರೀತಿಯಲ್ಲಿ ಪಂಚಾಯತ್‌ಗಳ ನಡೆಯುತ್ತಿಲ್ಲ ಎಂದು ಅನೇಕ ಅಧ್ಯಯನಗಳು ಸಾದರಪಡಿಸಿವೆ.[9]

೩.೪. ಕರ್ನಾಟಕದಲ್ಲಿ ಸ್ಥಳೀಯ ಸರಕಾರಗಳು

ಕರ್ನಾಟಕ ರಾಜ್ಯವು ಸಮಗ್ರ ಪಂಚಾಯತ್‌ರಾಜ್ ಕಾಯಿದೆಯನ್ನು ಮೊದಲು ಜಾರಿಗೆ ತಂದ ಹೆಗ್ಗಳಿಕೆಯನ್ನು ಹೊಂದಿದೆ. ರಾಷ್ಟ್ರಮಟ್ಟದಲ್ಲಿ ೭೩ನೇ ತಿದ್ದುಪಡಿಯ ಮೂಲಕ ೧೯೯೩ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಜಾರಿಗೆ ಬಂದಿತು. ಆ ಪ್ರಕಾರವಾಗಿ ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಎಂಬ ಮೂರು ಹಂತಗಳ ವ್ಯವಸ್ಥೆ ಜಾರಿಗೆ ತರಲಾಯಿತು.

ಮುಂಬೈ ಪ್ರಾಂತ್ಯದಲ್ಲಿದ್ದ ಜಿಲ್ಲೆಗಳು ಮೈಸೂರು ಪ್ರಾಂತ್ಯ ಜಿಲ್ಲೆಗಳು ಮತ್ತು ಹೈದರಾಬಾದ್ ಮೂರು ಜಿಲ್ಲೆಗಳು ಮದ್ರಾಸಿನ ಎರಡು ಜಿಲ್ಲೆಗಳು ಮತ್ತು ಕೇಂದ್ರಿಯ ಆಡಳಿತದ ಕೊಡುಗು ಇವುಗಳನ್ನು ಸೇರಿಸಿ ೧೯೫೬ರಲ್ಲಿ ಮೈಸೂರು ರಾಜ್ಯದಲ್ಲಿ ಒಪ್ಪಿಗೆ ತರುವ ಮೂಲಕ ಹೊಸ ಪ್ರಾಂತ್ಯ ರಚಿಸಲಾಯಿತು. ಹಳೆ ಮೈಸೂರು ರಾಜ್ಯವು ೧೯೭೩ರಲ್ಲಿ ಕರ್ನಾಟಕವೆಂದು ಮರುನಾಮಕರಣ ಮಾಡಲ್ಪಟ್ಟಿತು. ಪ್ರಸ್ತುತ ೨೦೧೩ರಲ್ಲಿ ಕರ್ನಾಟಕದಲ್ಲಿ ೫,೬೨೮ ಗ್ರಾಮ ಪಂಚಾಯತ್‌ಗಳು ೧೭೬ ತಾಲೂಕು ಪಂಚಾಯತ್‌ಗಳು, ೩೦ ಜಿಲ್ಲಾ ಪಂಚಾಯತ್‌ಗಳು ಇವೆ.

ಇತಿಹಾಸ

ಹಳೆಯ ಮೈಸೂರು ರಾಜ್ಯವು ೬ನೇ ಶತಮಾನದ ಅನೇಕ ರಾಜವಂಶಗಳಿಂದ ಆಳಲ್ಪಟ್ಟಿತು. ಇತಿಹಾಸ ದಾಖಲೆಗಳ ಪ್ರಕಾರ ಕ್ರಿಪೂ. ೧೨೧ ರಿಂದ ೧೭೪ರವರೆಗೆ ಶಾತವಾಹನರು ಕ್ರಿ.ಶ. ೩೬೦-೫೬೫ರವರೆಗೆ ಕದಂಬರು ಕ್ರಿ.ಶ. ೩೫೦-೧೦೫೦ರವರೆಗೆ ಗಂಗರು ಕ್ರಿ.ಶ. ೩೭೫ರಿಂದ ೭೫೩ರವರೆಗೆ ಬಾದಾಮಿಯ ಚಾಲುಕ್ಯರು ಮತ್ತು ಕ್ರಿ.ಶ. ೭೩೦-೯೭೩ರವರೆಗೆ ರಾಷ್ಟ್ರಕೂಟರು ಅದೇ ರೀತಿಯಾಗಿ ೧೦೦೫ ಶಾಸನಗಳಲ್ಲಿ ಗ್ರಾಮಪಂಚಾಯತ್‌ಗಳ ಬಗ್ಗೆ ಗಣನೀಯ ಮಾಹಿತಿ ಒದಗಿಸುತ್ತ ಸ್ಥಳೀಯ ಸರಕಾರಗಳನ್ನು ಗ್ರಾಮ, ಅಗ್ರಹಾರ, ವಿಷಯ, ನಾಡು ಎಂದು ವಿವಿಧ ಹೆಸರುಗಳಿಂದ ಕರೆಯಲಾಗುತ್ತಿತ್ತು.

ದೇವಗಿರಿಯ ಯಾದವರು ಮತ್ತು ಹೊಯ್ಸಳರ(ಕ್ರಿ.ಶ. ೧೨೦೦-೧೩೩೬) ನಡುವೆ ಆಳ್ವಿಕೆಯು ಕರ್ನಾಟಕದ ಇತಿಹಾಸದಲ್ಲಿ ಪ್ರಮುಖವಾದ ಕಾಲವಾಗಿತ್ತು. ಅವರು ಕಾಲದಲ್ಲಿ ಸ್ಥಳೀಯ ಸರಕಾರವನ್ನು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದವು. ಅದು ವಿಜಯನಗರ ಕಾಲದವರೆಗೆ ಮುಂದುವರೆಯಿತು. ೧೬ನೇ ಶತಮಾನದ ಕೊನೆಯ ಭಾಗದಲ್ಲಿ ಸ್ಥಳೀಯ ಸರಕಾರಗಳು ಆರ್ಥಿಕವಾಗಿ ಸ್ವತಂತ್ರವಾಗಿದ್ದವು. ಕ್ರಿ.ಶ. ೧೬೧೦ರಿಂದ ೧೭೬೧ರವರೆಗೆ ಮೈಸೂರು ಒಡೆಯರು ಆಡಳಿತ ನಡೆಸಿದರು. ಕ್ರಿ.ಶ. ೧೭೬೧ರಿಂದ ೧೭೯೯ರವರೆಗೆ ಹೈದರಾಲಿ ಮತ್ತು ಟಿಪ್ಪುಸುಲ್ತಾನ ಆಳ್ವಿಕೆಗೆ ಒಳಪಟ್ಟಿತು. ೧೮೧೦ರಲ್ಲಿ ಮತ್ತೆ ಒಡೆಯರ ಕೈಯಲ್ಲಿ ಬಂದಿತು. ಮುಮ್ಮಡಿ ಕೃಷ್ಣರಾಜ ಒಡೆಯರವರ ೧೮೬೨ರವರಿಗೆ ಆಳಿದರು. ಈ ಅವಧಿಯಲ್ಲಿ ಸ್ಥಳೀಯ ಸರಕಾರ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆಗಳಾಗಲಿಲ್ಲ. ಆದರೆ ಬ್ರಿಟೀಷ್ ವಸಾಹತು ಕಾಲದಲ್ಲಿ ಅಮೂಲಾಗ್ರ ಬದಲಾವಣೆಗಳಾದವು. ೧೮೭೪ರಲ್ಲಿ ಹೊಸ ಬಗೆಯ ಸ್ಥಳೀಯ ಸರಕಾರಗಳನ್ನು ಜಾರಿಗೆ ತರಲಾಯಿತು. ೧೮೮೨ರಲ್ಲಿ ಸ್ಥಳೀಯ ಸರಕಾರಕ್ಕೆ ಸಂಬಂಧಿಸಿದ ಲಾರ್ಡ್‌ರಿಪ್ಪನ್ ಉದಾರ ಸಿದ್ಧಾಂತ ಬಳಸದಿದ್ದರೂ ಕರ್ನಾಟಕದಲ್ಲಿ ಚುನಾಯಿತ ಪಂಚಾಯತ್‌ರಾಜ್ ಜಾರಿಗೆ ತರಲು ಪ್ರಯತ್ನಿಸಿದರು. ೧೯೦೨ರಲ್ಲಿ ಲಾರ್ಡ್‌ರಿಪ್ಪನ್ ಕಾನೂನು ಕರ್ನಾಟಕದ ಇತಿಹಾಸದಲ್ಲಿ ಮೊದಲ ಬಾರಿಗೆ ಮೂರು ಹಂತಗಳ ಸ್ಥಳೀಯ ಸರಕಾರ ವ್ಯವಸ್ಥೆ ಸೃಷ್ಟಿಸಿತು. ೧೯೦೩ ನವೆಂಬರ್ ೧ರಂದು ಮೈಸೂರು ಸ್ಥಳೀಯ ಮಂಡಳಿಗಳ ಕಾಯಿದೆ ಜಾರಿಗೆ ಬಂದಿತು.

ಒಕ್ಕೂಟ ಗ್ರಾಮ ಪಂಚಾಯತ್‌ಗೆ ಸಬ್‌ಡಿವಿಜನಲ್ ಅಧಿಕಾರಿ ಅಧ್ಯಕ್ಷರಾಗಿ ಒಬ್ಬರು, ನಾಮನಿರ್ದೇಶನ ಅಧ್ಯಕ್ಷರು ಇದ್ದರು. ೧೯೦೨ರ ಕಾಯಿದೆ ಪ್ರಕಾರ ಉಪ ಆಯುಕ್ತರನ್ನು ನೇಮಿಸಲಾಯಿತು. ಅದೇ ರೀತಿಯಾಗಿ ಎಂ. ಕಾಂತರಾಜ್ ಅಧ್ಯಕ್ಷತೆ ಲೋಕಲ್‌ಸೆಲ್ಫ್ ಸರಕಾರಿ ಸಮಿತಿ ನೇಮಿಸಲಾಯಿತು. ೧೯೧೫ರಲ್ಲಿ ದಿವಾನ್ ಪುಟ್ಟಣ್ಣ ಶೆಟ್ಟಿ ಅಧ್ಯಕ್ಷತೆಯಲ್ಲಿ ಸ್ಥಳೀಯ ಸರಕಾರ ಸಮ್ಮೇಳನ ನಡೆಯಿತು. ೧೯೧೮ರಲ್ಲಿ ಮೈಸೂರು ವಿಲೇಜ್ ಪಂಚಾಯತ್ ಕಾಯಿದೆ ಜಾರಿಗೆ ತರಲಾಯಿತು. ಇದು ಗ್ರಾಮೀಣ ಪ್ರದೇಶಗಳಲ್ಲಿ ಸ್ಥಳೀಯ ಜನರ ಭಾಗವಹಿಸುವಿಕೆಯಲ್ಲಿ ಗಮನಾರ್ಹ ಹೆಜ್ಜೆಯಾಗಿತ್ತು.

೧೯೧೯ರಲ್ಲಿ ಮೈಸೂರು ವಿಲೇಜ್ ಪಂಚಾಯತ್ ಕಾಯಿದೆಯಂತೆ ೧೯೧೯-೧೯೪೮ರ ಅವಧಿಯಲ್ಲಿ ದೇಶಿಯ ಸಂಸ್ಥಾನಗಳಲ್ಲಿ ಸ್ಥಳೀಯ ಸರಕಾರಕ್ಕೆ ನಿಯಮಾವಳಿ ರೂಪಿಸಿದವು. ಇದರ ಜೊತೆಗೆ ೨೦ ವರ್ಷಕ್ಕಿಂತ ಮೇಲಿನವರೆಗೆ ಮತದಾನದ ಹಕ್ಕು ನೀಡಲಾಯಿತು. ಆದರೆ ಮಹಿಳೆಯರಿಗೆ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಲು ಇದು ಅವಕಾಶ ನೀಡಲಿಲ್ಲ. ಇಲ್ಲಿಂದ ೧೯೫೨ರವರೆಗೆ ಸ್ಥಳೀಯ ಮಟ್ಟದಲ್ಲಿ ಸಂಪೂರ್ಣವಾಗಿ ಸ್ಥಳೀಯ ಅಧಿಕಾರದಿಂದ ಹೊರಗಿಟ್ಟಿತು.

ಸ್ವಾತಂತ್ರ್ಯ ನಂತರ ಬೆಳವಣಿಗೆ

ಸ್ವಾತಂತ್ರ್ಯ ನಂತರ ಭಾರತದಲ್ಲಿ ಕೈಗಾರಿಕೆ ಮತ್ತು ಗ್ರಾಮೀಣ ಅಭಿವೃದ್ಧಿಗೆ ಹೆಚ್ಚು ಗಮನ ಹರಿಸಲಾಯಿತು. ೧೯೪೮ರಿಂದಲೇ ಕೇಂದ್ರ ಸರಕಾರವು ಗ್ರಾಮೀಣ ಅಭಿವೃದ್ಧಿ ಯೋಜನೆಗಳನ್ನು

ರೂಪಿಸಲಾಯಿತು. ೧೯೫೦ರಲ್ಲಿ ಪ್ರಾರಂಭವಾದ ಸಮುದಾಯ ಅಭಿವೃದ್ಧಿ ಯೋಜನೆ ಕೆಳಜಾತಿ ವರ್ಗಗಳ ಸಾಮಾಜಿಕ, ಆರ್ಥಿಕ ಬದಲಾವಣೆಗೆ ಅಭಿವೃದ್ಧಿ ಕಾರ್ಯಕ್ರಮ ರೂಪಿಸಲಾಯಿತು. ೧೯೫೬ರ ಹೊತ್ತಿಗೆ ೧೧೪ ಬ್ಲಾಕ್ ಸಮುದಾಯ ಅಭಿವೃದ್ಧಿ ಯೋಜನೆ ಜಾರಿಗೆ ತರಲಾಯಿತು.

ಮಹಾತ್ಮ ಗಾಂಧೀಜಿಯವರ ಪ್ರಕಾರ ಗ್ರಾಮಗಳು ಸ್ವಾವಲಂಬಿಯಾಗಬೇಕಾದರೆ ಚುನಾಯಿತ ಸಂಸ್ಥೆಗಳ ಮೂಲಕ ಸ್ವಯಂ ಅಧಿಕಾರ ಪಡೆಯಬೇಕು ಎಂದು ಅಭಿಪ್ರಾಯ ಪಟ್ಟಿದ್ದರು. ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕಲ್ಪನೆಯನ್ನು ಸಂವಿಧಾನದ ೪ನೇ ಭಾಗದಲ್ಲಿ ೪೬ನೇ ವಿಧಿಯಲ್ಲಿ ರಾಜ್ಯವು ಗ್ರಾಮ ಪಂಚಾಯತ್‌ಗಳನ್ನು ಸ್ಥಾಪಿಸಿ ಅವುಗಳ ಸ್ವಯಂ ಅಧಿಕಾರ ನೀಡಬೇಕು ಎಂದು ನಿರ್ದಶಿಸಿದೆ. ಇದಕ್ಕನುಗುಣವಾಗಿ ೧೯೫೬ರಲ್ಲಿ ಬಲವಂತರಾವ್ ಮೆಹತಾ ಸಮಿತಿ ನೇಮಿಸಲಾಯಿತು. ಸಮಿತಿಯ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ನೀಡಿ ವಿಕೇಂದ್ರೀಕರಣ ವ್ಯವಸ್ಥೆ ಜಾರಿಗೆ ತರಬೇಕು ಶಿಫಾರಸ್ಸು ಮಾಡಿತು. ೧೯೫೯ರಲ್ಲಿ ಮೊದಲ ಬಾರಿಗೆ ರಾಜಸ್ಥಾನ ಮತ್ತು ಆಂಧ್ರಪ್ರದೇಶ ರಾಜ್ಯಗಳು ಪಂಚಾಯತ್ ರಾಜ್ ಕಾಯಿದೆಯನ್ನು ಜಾರಿಗೆ ತರುವುದರ ಮೂಲಕ ವಿಕೇಂದ್ರೀಕರಣಕ್ಕೆ ನಾಂದಿ ಹಾಡಿದವು.[೫]

೧೯೮೩ರ ಕರ್ನಾಟಕ ಪಂಚಾಯತ್ ಕಾಯ್ದೆ

೧೯೮೩ರ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಭಾರತದ ಇತಿಹಾಸದಲ್ಲಿ ಒಂದು ಹೊಸ ಮೈಲುಗಲ್ಲು ಎಂದು ಹೇಳಬಹುದು ಮತ್ತು ವಿಕೇಂದ್ರೀಕರಣ ವ್ಯವಸ್ಥೆಗೆ ಹೊಸ ಭಾಷ್ಯವನ್ನು ಬರೆಯಿತು.(ಶ್ರೀಧರ ಎ. ೨೦೦೬). ೧೯೮೩ರಲ್ಲಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಜನತಾ ಪಕ್ಷದ ಸರಕಾರವು ವಿಕೇಂದ್ರೀಕರಣಕ್ಕೆ ಒತ್ತು ನೀಡುವ ಉದ್ದೇಶದಿಂದ ಜನತೆಗೆ ಅಧಿಕಾರ ಎಂಬ ಘೋಷಣೆಯೊಂದಿಗೆ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಶಾಸನಾತ್ಮಕ ಕ್ರಮಗಳನ್ನು ರೂಪಿಸಿತು. ಈ ನಿಟ್ಟಿನಲ್ಲಿ ೧೯೮೩ರ ಮಂಡಲ ಪಂಚಾಯತ್, ತಾಲೂಕು ಅಭಿವೃದ್ಧಿ ಮಂಡಳಿ ಮತ್ತು ಜಿಲ್ಲಾ ಪರಿಷತ್ ಮತ್ತು ನ್ಯಾಯ ಪಂಚಾಯಿತಿ ಕಾಯಿದೆಯನ್ನು ಜಾರಿಗೊಳಿಸಿತು. ೧೯೮೭ರಲ್ಲಿ ಪಂಚಾಯಿತಿ ಗಳಿಗೆ ಚುನಾವಣೆ ನಡೆಸಿತು. ಈ ಕಾಯಿದೆ ದೇಶದಲ್ಲೆ ಹಲವು ಪ್ರಥಮಗಳ ದಾಖಲೆಯನ್ನು ತನ್ನೊಳಗೆ ಅಂತರ್ಗತಗೊಳಿಸಿತು. ಈ ಕಾಯಿದೆ ಪ್ರಕಾರ ಜಿಲ್ಲಾ ಅಭಿವೃದ್ಧಿ ಯೋಜನೆಗಳ, ಚುನಾಯಿತ ಪ್ರತಿನಿಧಿಗಳಿಗೆ ಸೇರಿತು. ಚುನಾಯಿತ ಪ್ರತಿನಿಧಿಗಳು ಪಂಚಾಯತ್‌ಗಳಿಗೆ ಉತ್ತರದಾಯಿ ಗಳಾದರು. ಜನರ ಸಹಭಾಗಿತ್ವಕ್ಕೆ ಅವಕಾಶ ನೀಡಿತು. ಮೊದಲ ಬಾರಿಗೆ ಮಹಿಳೆಯರಿಗೆ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಶೇ. ೨೫ರಷ್ಟು ಸ್ಥಾನಗಳ ಮೀಸಲಾತಿ ನೀಡಲಾಯಿತು. ಗ್ರಾಮಸಭೆ ಅವಕಾಶ ನೀಡಿ ಪಂಚಾಯತ್ ಸಂಸ್ಥೆಗಳ ಮೂಲಕ ನೇರ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅನುವು ಮಾಡಿಕೊಡ ಲಾಯಿತು.[೬]

ಕರ್ನಾಟಕದಲ್ಲಿ ಪಂಚಾಯತ್ ರಾಜ್

ಕರ್ನಾಟಕದಲ್ಲಿಯೂ ಇತರ ರಾಜ್ಯಗಳಂತೆ ಪಂಚಾಯತ್ ಸಂಸ್ಥೆ ಅಳವಡಿಸಿಕೊಂಡಿತು. ಕರ್ನಾಟಕದ ಇತಿಹಾಸ ಅಧ್ಯಯನ ಮಾಡಿದಾಗ ತಿಳಿಯುವುದು ಅಂದರೆ ರಾಷ್ಟ್ರಕೂಟರು,

ಕದಂಬರು, ಜೋಳರು, ಗಂಗರು ಅನೇಕ ಪ್ರಾಚೀನ ರಾಜಮನೆತನಗಳಲ್ಲಿ ಪಂಚಮರ ಆಡಳಿತ ಇದೆ ಎಂದು ಇತಿಹಾಸವೇ ತಿಳಿಸುತ್ತದೆ. ಮಧ್ಯಕಾಲದಲ್ಲಿಯೂ ಪಂಚಾಯತ್ ವ್ಯವಸ್ಥೆ ಇದೆ. ಆಧುನಿಕ ಕಾಲದಲ್ಲಿ ಪಂಚಾಯತಿ ಆಡಳಿತ ಇದೆ. ಅಂದರೆ ಬ್ರಿಟಿಷ್ ಅವಧಿಯಲ್ಲಿ ಸ್ಥಳೀಯ ಸರಕಾರಗಳ ರೂಪದಲ್ಲಿ ಪಂಚಾಯಿತಿ ವ್ಯವಸ್ಥೆ ಜಾರಿಯಲ್ಲಿ ಇತ್ತು. ಹಾಗೆಯೇ ಕರ್ನಾಟಕದಲ್ಲಿ ಅನೇಕ ಸಮಿತಿಗಳಿದ್ದವು. ಅವು ಯಾವುವೆಂದರೆ ದಿವಾನ ರಂಗಾಚಾರ್ಲು ಸಮಿತಿ, ಸರದಾರ್ ಸಮಿತಿ, ಕಾಂತರಾಜ್ ಅರಸ್ ಸಮಿತಿ, ಮೈಸೂರು ಸ್ಥಳೀಯ ಸಮಿತಿಗಳಿದ್ದವು. ಸ್ವಾತಂತ್ರ್ಯಾನಂತರ ಅನೇಕ ಸಮಿತಿಗಳು ಜಾರಿಗೆ ಬಂದವು. ಅವು ಯಾವವೆಂದರೆ ವೆಂಕಟಪ್ಪ ಸಮಿತಿ, ಕೊಂಡಜ್ಜಿ ಬಸಪ್ಪ ಸಮಿತಿ, ಕರ್ನಾಟಕದಲ್ಲಿ ಜಿಲ್ಲಾ ಪರಿಷತ್ ಮಂಡಳಿ, ೭೩ ತಿದ್ದುಪಡಿ ೧೯೯೩ರಲ್ಲಿ ರಮೇಶಕುಮಾರ ಸಮಿತಿ ೨೦೧೪. ಹೀಗೆ ನಮ್ಮ ಕರ್ನಾಟಕದಲ್ಲಿ ಪಂಚಾಯತ್ ರಾಜ್ ಪ್ರಯೋಗ ಸಹ ವಿಸ್ತಾರವಾದ ವಿಚಾರಗಳಿಂದ ಕೂಡಿದೆ ಎಂದು ತಿಳಿಸಲಾಗಿದೆ.

ಕರ್ನಾಟದಲ್ಲಿಯೂ ಸಹ ಭಾರತದ ಇತರೆ ರಾಜ್ಯಗಳಂತೆ ಪಂಚಾಯತ್ ರಾಜ್ ಸಂಸ್ಥೆಗಳು ವಿಕಾಸಗೊಳ್ಳುವಂತಹ ಹಂತ ಹಂತವಾಗಿ ಜಾರಿಗೆ ಬಂದಿದೆ. ಇದೊಂದು ಸುದೀರ್ಘ ಪ್ರಕ್ರಿಯೆಯಾಗಿದ್ದು, ಹಲವಾರು ಮಜಲುಗಳನ್ನು ದಾಟಿ ಬಂದಿದ್ದು ಅವುಗಳೆಂದರೆ ರಾಷ್ಟ್ರಕೂಟರು, ಕದಂಬರು, ಗಂಗರು, ಜೋಳರ ಆಡಳಿತ ಕಾಲದಲ್ಲೂ ಪಂಚಾಯತ್ ರಾಜ್ ವ್ಯವಸ್ಥೆ ಇತ್ತೆಂದು ಹಲವಾರು ಶಾಸನಗಳು ತಿಳಿಯಪಡಿಸುತ್ತವೆ. ಅಂದರೆ ಪ್ರಾಚೀನ ಕಾಲದಲ್ಲಿ ಗೌಡರು, ತಳವಾರರು, ಶಾನಭೋಗರು ಹೀಗೆ ಅನೇಕ ಹೆಸರುಗಳಿಂದ ಪಂಚಾಯಿತಿ ಜಾರಿಗೆ ಬಂದಿತು. ಅಂದರೆ ಗ್ರಾಮಸಭೆಗಳ ಮೂಲಕ ಗ್ರಾಮಗಳ ಅಭಿವೃದ್ಧಿ ಪಂಚಾಯಿತಿ ಆಡಳಿತ ಇತ್ತು. ಹಾಗೆ ಕರ್ನಾಟಕದಲ್ಲಿ ಯಾವ ರೀತಿ ಈ ಪಂಚಾಯಿತಿ ವಿಕಾಸ ಆಗಿದೆ ಅನ್ನುವುದನ್ನು ಈ ಕೆಳಗಡೆ ವಿವರಿಸಿದೆ.

೧೮೮೧ರಲ್ಲಿ ದಿವಾನ್ ರಂಗಾಚಾರ್ಲು ಅವರಿಂದ ಪ್ರಾರಂಭವಾದ 'ಪ್ರಜಾಪ್ರತಿನಿಧಿ ಸಭೆ'ಯು ಪಂಚಾಯತ್ ವ್ಯವಸ್ಥೆ ಆರಂಭಿಕ ಬುನಾದಿಯಾಯಿತು. ನಂತರ ಘೋಷಣೆಯಾದ 'ರಿಪ್ಪನ್ ಘೋಷಣೆ' ಕರ್ನಾಟಕದ ಯೋಜನೆ ನಕಲಿನಂತಿತ್ತು.

೧೯೦೨ರಲ್ಲಿ 'ಮೈಸೂರು ಜಿಲ್ಲಾ ನಿಬಂಧನೆ ಕಾಯ್ದೆ'ಯು ೩ ಹಂತದ ಪಂಚಾಯತ್ ರಾಜ್ ವ್ಯವಸ್ಥೆಗೆ ಒತ್ತು ನೀಡಿತು. ಇಲ್ಲಿ ಎರಡು ಸಮಿತಿಗಳು ನೇಮಕಗೊಂಡವು. ೧೯೧೨ರಲ್ಲಿ ಸ್ಥಳೀಯ ಹಣಕಾಸು ಸಮಿತಿ ಶ್ರೀನಿವಾಸ ಅಯ್ಯಂಗಾರ್ ನೇತೃತ್ವದಲ್ಲಿ ರಚಿಸಲಾಯಿತು. ೧೯೧೪ರಲ್ಲಿ ಸ್ಥಳೀಯ ಸರಕಾರ ಸುಧಾರಣೆಗೆ 'ಸರ್ದಾರ್ ಕಾಂತರಾಜ್ ಅರಸ್' ಸಮಿತಿ ನೇಮಕ ಮಾಡಿತು. ೧೯೧೭-೧೮ರಲ್ಲಿ 'ಮೈಸೂರು ಸ್ಥಳೀಯ ಮಂಡಳಿ ಮತ್ತು ಗ್ರಾಮ ಪಂಚಾಯತ್ ಕಾಯ್ದೆ' ಜಾರಿಗೆ ಬಂದಿತು. ಕಾಂತರಾಜ್ ಅರಸ್ ಸಮಿತಿ ಶಿಫಾರಸ್ಸು ಪರಿಗಣನೆ ಮಾಡಲಾಯಿತು. ಇದರ ಜೊತೆಯಲ್ಲೇ ಭಾರತ ಸರ್ಕಾರದ ೧೯೧೯ರ ದ್ವಿ-ಸರ್ಕಾರ ಕಾಯ್ದೆ ಜಾರಿಗೆ ತಂದಿತು.

೧೯೨೬ರಲ್ಲಿ ಮೈಸೂರು ಗ್ರಾಮ ಪಂಚಾಯತ್ ಜಾರಿಗೆ ಬಂದು ಚುನಾವಣೆಗೆ ಒತ್ತು ನೀಡಿತು. ೨೧ ದಾಟಿದವರಿಗೆ ಮತದಾನಕ್ಕೆ ಅವಕಾಶ ಇಲ್ಲಿ ನೀಡಲಾಯಿತು. ಗ್ರಾಮ ಪಂಚಾಯ್ತಿ ಮತ್ತು ಜಿಲ್ಲಾ ಮಂಡಳಿ ಎಂಬ ಎರಡು ಹಂತಕ್ಕೆ ಶಿಫಾರಸ್ಸು ಮಾಡಲಾಯಿತು.

ಸ್ವಾತಂತ್ರ್ಯಾನಂತರ

ಸ್ವಾತಂತ್ರ್ಯಾನಂತರ ರಾಜ್ಯದಲ್ಲಿ ಗಾಂಧಿವಾದ ಮತ್ತು ಗ್ರಾಮ ಸ್ವರಾಜ್ಯದ ರೀತಿಯ ಕಲ್ಪನೆ ಪ್ರತಿಧ್ವನಿಸತೊಡಗಿದವು. ಹಾಗಾಗಿ ಹಲವಾರು ಸಮಿತಿಗಳ ನೇಮಕಾತಿಯಾಯಿತು.

ವೆಂಕಟಪ್ಪ ಸಮಿತಿ

* ಚಂದ್ರಶೇಖರಯ್ಯ ಸಮಿತಿ
* ಕೊಂಡಜ್ಜಿ ಬಸಪ್ಪ ಸಮಿತಿ
* ಕರ್ನಾಟಕ ಜಿಲ್ಲಾ ಪರಿಷತ್, ಮಂಡಲ ಪಂಚಾಯ್ತಿ
* ತಾಲ್ಲೂಕು ಪಂಚಾಯ್ತಿ ಅಧಿನಿಯಮ - ೧೯೮೩

೭೩ನೇ ತಿದ್ದುಪಡಿ–೧೯೯೩

೧೯೫೩ರಲ್ಲಿ ಚಂದ್ರಶೇಖರಯ್ಯ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯನ್ನು ಸ್ಥಳೀಯ ಮಂಡಳಿಗಳ ವಿಚಾರಣಾ ಸಮಿತಿ ಎಂತಲೂ ಕರೆಯಲಾಯಿತು. ಈ ಸಮಿತಿಯು ಶಿಫಾರಸ್ಸುಗಳು ಹೀಗಿವೆ.

೧. ಎಲ್ಲಾ ಮಂಡಳಿಗಳು ರದ್ದಾಗಿ ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ನೀಡಲಾಯಿತು. ಜಿಲ್ಲಾಧಿಕಾರಿಯನ್ನು ವಿಶೇಷ ಅಧಿಕಾರಿಗಳೆಂದು ಘೋಷಣೆ ಮಾಡಿದರು.

೨. ಜಿಲ್ಲಾ ಮತ್ತು ತಾಲ್ಲೂಕು ಮಂಡಳಿಗಳಿಗೆ ಚುನಾವಣೆ ನಡೆದು ಚುನಾಯಿತ ಸದಸ್ಯರು ಇರಬೇಕು ಎಂದರು.

೩. ತಾಲ್ಲೂಕು ಮಂಡಳಿಯ ಆಡಳಿತಾತ್ಮಕ ಮತ್ತು ಕಾರ್ಯಾಂಗೀಯ ಕಾರ್ಯ ನಿರ್ವಹಿಸುವುದಲ್ಲದೇ ಜನತೆಯು ಸಂಪೂರ್ಣವಾಗಿ ಆಡಳಿತದಲ್ಲಿ ಪಾಲ್ಗೊಳ್ಳುವಂತೆ ಮಾಡುವುದು.

೪. ಮಹಿಳೆ ಮತ್ತು ದುರ್ಬಲ ವರ್ಗದವರಿಗೆ ಆದ್ಯತೆ (ತಾಲ್ಲೂಕು ಮಂಡಳಿಗಳ ಪ್ರಾಮುಖ್ಯತೆ ನೀಡುವುದೇ ಇವರ ಶಿಫಾರಸ್ಸು)

ರಾಜ್ಯ ಪುನರ್‌ವಿಂಗಡಣೆಯಿಂದ ಸೇರ್ಪಡೆಯಾದ ರಾಜ್ಯಗಳಲ್ಲಿ ಹಲವಾರು ಕಾನೂನುಗಳಿದ್ದವು. **ಉದಾ:** ಮುಂಬಯಿ ಜಿಲ್ಲಾ ಮಂಡಳಿ ಅಧಿನಿಯಮ-೧೯೨೩/ಹೈದ್ರಾಬಾದ್ ಅಧಿನಿಯಮ-೧೯೫೬.

ಕೊಡಗು ಪಂಚಾಯ್ ಕಾನೂನು-೧೯೫೬

೧೯೫೬ರ ಬಲವಂತರಾಯ್ ಮಹ್ತಾ ಸಮಿತಿಯ ಶಿಫಾರಸ್ಸಿನ ಮೇರೆಗೆ ೨ ಹಂತದ ಪಂಚಾಯತ್ ರಾಜ್ ವ್ಯವಸ್ಥೆ ಅಳವಡಿಸಿಕೊಳ್ಳಲಾಯಿತು. ಮೈಸೂರು ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಮಂಡಲಿ ಅಧಿನಿಯಮ-೧೯೫೯.

* ವೆಂಕಟಪ್ಪ ಸಮಿತಿ (೧೯೪೯)

* ನಾಯಕ ಸಮಿತಿ (೧೯೫೫)

* ಬೇಲೂರು ಘೋಷಣೆ (೨೦೦೪)

* ರಮೇಶ ಕುಮಾರ್ ಸಮಿತಿ (೨೦೧೪)

*** ರಚನೆ: ೧೯೪೯ ವಿ. ವೆಂಕಟಪ್ಪ ಅಧ್ಯಕ್ಷತೆಯಲ್ಲಿ** ೧೯೪೯ರಲ್ಲಿ ಈ ಸಮಿತಿಯನ್ನು ರಚಿಸಲಾಯಿತು. ಇದರ ಉದ್ದೇಶ ಸ್ಥಳೀಯ ಸಮಸ್ಯೆಗಳನ್ನು ಐಕ್ಯಗೊಳಿಸುವ ಮತ್ತು ಸಮನ್ವಯ ಗೊಳಿಸುವುದಾಗಿತ್ತು. ಈ ಸಮಿತಿಯು ತನ್ನ ವರದಿಯನ್ನು ೧೯೫೦ರಲ್ಲಿ ಸಲ್ಲಿಸಿತು. ಅದರಲ್ಲಿನ ಶಿಫಾರಸ್ಸುಗಳು ಈ ಕೆಳಕಂಡಂತಿವೆ.

೧. ಇದು ಗ್ರಾಮ ಮತ್ತು ಜಿಲ್ಲಾ ಮಟ್ಟದ ಎರಡು ಹಂತದ ಪದ್ಧತಿಯ ಬಗ್ಗೆ ಹೆಚ್ಚು ವಿಶ್ವಾಸ ತೋರಿತು.

೨. ತಾಲ್ಲೂಕು ಹಂತದಲ್ಲಿ ತಾಲ್ಲೂಕು ಮಂಡಳಿ ಸ್ಥಾಪಿಸಬೇಕು. ಇದು ಚುನಾಯಿತವಲ್ಲದ ಸಂಸ್ಥೆ, ಸಲಹೆ ಮಾತ್ರ ನೀಡಬೇಕು.

೩. ಜಿಲ್ಲಾ ಹಂತದಲ್ಲಿ ಮತ್ತೊಂದು ಮಂಡಳಿ ಸ್ಥಾಪಿಸಿ ಎಸ್.ಸಿ./ಎಸ್.ಟಿ. ಪ್ರತಿನಿಧಿಗಳಿಗೆ ವಿಶೇಷ ಪ್ರಾತಿನಿಧ್ಯ ನೀಡಬೇಕು.

೪. ಸಮೂಹ ಪಂಚಾಯಿತಿಗಳಿಗೆ ಒತ್ತು(೧೦-೧೫ ಸದಸ್ಯರು)

೫. ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಗೆ ಶಿಫಾರಸ್ಸು.

ಇದರನ್ವಯ ೧೯೫೨ರಲ್ಲಿ ಮೈಸೂರು ಗ್ರಾಮ ಪಂಚಾಯತ್ ಜಿಲ್ಲಾ ಮಂಡಳಿ ಅಧಿನಿಯಮ ಜಾರಿಗೆ ಬಂದಿತು.

ಕೊಂಡಜ್ಜಿ ಬಸಪ್ಪ ಸಮಿತಿ (೧೯೬೩)

ಈ ಕಾಯ್ದೆಗೆ ಸೂಕ್ತ ಬದಲಾವಣೆ ತರಲು ಈ ಸಮಿತಿ ನೇಮಕ ಮಾಡಿದರು. ಈ ಸಮಿತಿಯು ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ತಮಿಳುನಾಡು ಮಾದರಿಯಲ್ಲಿ ಅನುಷ್ಠಾನಗೊಳಿಸಲು ಮುಂದಾಯಿತು.

ಶಿಫಾರಸ್ಸುಗಳು

೧. ಇದು ಮೂರು ಹಂತದ ವ್ಯವಸ್ಥೆಯನ್ನು ಶಿಫಾರಸ್ಸು ಮಾಡಿತು.

೨. ತಾಲ್ಲೂಕು ಮಂಡಳಿಗಳು ಸಂಪನ್ಮೂಲ ಸ್ಥಿತಿ ಉತ್ತಮಪಡಿಸಲು ಹೊಸ ತೆರಿಗೆ ಸಂಗ್ರಹಿಸಲು ಶಿಫಾರಸ್ಸು.

೩. ತಾಲ್ಲೂಕು ಮಂಡಳಿ ಪ್ರತ್ಯಕ್ಷ ಮತ್ತು ಪರೋಕ್ಷ ಚುನಾಯಿತ ಸದಸ್ಯರನ್ನೊಳಗೊಂಡಿರಬೇಕೆಂದಿತು.

೪. ನ್ಯಾಯ ಪಂಚಾಯತಿ ರಚನೆಗೆ ಶಿಫಾರಸ್ಸು.

ಗ್ರಾಮ ಪಂಚಾಯತಿ ತಾಲ್ಲೂಕು ಅಭಿವೃದ್ಧಿ ಸಲಹಾ ಸಮಿತಿ

ಈ ಕಾಯ್ದೆಯ ನಂತರ ಬಂದ ಅಶೋಕ್ ಮೆಹ್ತಾ ವರದಿಯ ಶಿಫಾರಸ್ಸು ಪರಿಗಣಿಸಿ ರಾಮಕೃಷ್ಣ ಹೆಗಡೆ ಸರ್ಕಾರವು ೧೯೮೩ರಲ್ಲಿ ಜಾರಿಗೆ ತಂದಿತು.

ಇದು ಆಗಸ್ಟ್ ೧೯೮೫ ರಿಂದ ಜಾರಿಗೆ ಬಂದಿತು. ಇಲ್ಲಿ ಎರಡು ಹಂತದ ಸಂಸ್ಥೆಗಳಿವೆ.

೧. ಗ್ರಾಮ ಸಭೆ ಮತ್ತು ಮಂಡಲ ಪಂಚಾಯಿತಿ

೨. ತಾಲ್ಲೂಕು ಪಂಚಾಯಿತಿ

ಅಶೋಕ್ ಮೆಹ್ತಾ ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೆ ತಂದ ಮೊದಲ ರಾಜ್ಯ ಕರ್ನಾಟಕವಾಯಿತು. ನಂತರ ೭೩ನೇ ತಿದ್ದುಪಡಿಯ ಎಲ್ಲಾ ಅಂಶಗಳನ್ನು ಇದು ಅಳವಡಿಸಿಕೊಂಡಿತು.

ನಾಯಕ್ ಸಮಿತಿ (೧೯೯೫)

ಇದು ೧೯೯೫ರ ಪಂಚಾಯತ್ ರಾಜ್ ಕಾಯ್ದೆಯ ಪರಿಶೀಲನೆಗಾಗಿ ಬಂದಿತು. ಆರ್.ಬಿ.ಐ. ಗವರ್ನರ್‌ರಾಗಿದ್ದ ಪಿ.ಆರ್. ನಾಯಕ್ ನೇತೃತ್ವದಲ್ಲಿ ನೇಮಕಾತಿ ಮಾಡಲಾಯಿತು.

ಶಿಫಾರಸ್ಸು

೧. ಪಂಚಾಯತ್ ರಾಜ್ ಸಂಸ್ಥೆಗಳನ್ನು ಅದರ ಮೇಲಿನ ಹಂತದ ಪಂಚಾಯತ್ ಸಂಸ್ಥೆಗಳೇ ನಿಯಂತ್ರಿಸಬೇಕು.

೨. ಜಿಲ್ಲಾ ಪಂಚಾಯಿತಿಯಿಂದಲೇ ಮೌಲ್ಯಮಾಪನ ಮಾಡಿಸಬೇಕು.

೩. ಜಿಲ್ಲಾ ಪಂಚಾಯತ್ ಶಿಫಾರಸ್ಸಿನ ಮೇರೆಗೆ ತಾಲ್ಲೂಕು ಪಂಚಾಯತ್ ವಿಸರ್ಜನೆಯಾಗಬೇಕು.

೪. ಅಧ್ಯಕ್ಷ ಉಪಾಧ್ಯಕ್ಷರ ಅವಧಿ ೩ ವರ್ಷಕ್ಕೆ ನಿಗದಿ ಮಾಡಲಾಯಿತು.

ಬೇಲೂರು ಘೋಷಣೆ (೨೦೦೪)

ಧಾರವಾಡದ ಬೇಲೂರಿನ ಬಳಿ ರಾಜ್ಯದ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳ ಬೃಹತ್ ಸಮಾವೇಶವಾಗಿದ್ದು, ಇದು ೧೬-೧೦-೨೦೦೪ ಐತಿಹಾಸಿಕವಾಗಿ ನಡೆದ ಆದೇಶವಾಗಿದೆ. ಇದರಲ್ಲಿ ಸಿಬ್ಬಂದಿ ಅಧಿಕಾರಿಗಳು ಸದಸ್ಯರ ನಡುವೆ ವ್ಯಾಪಕವಾದ ಚರ್ಚೆ ನಡೆದು, ಅದರನ್ವಯ ಹಲವು ಇದರ ಪ್ರಕಾರ -

೧. ಪಂಚಾಯತ್ ರಾಜ್ ಎಲ್ಲಾ ಕಾರ್ಯಕ್ರಮಗಳು ಟೆಂಡರ್ ಮೂಲಕವೇ ಕಾರ್ಯಗತಗೊಳಿಸಬೇಕು.

೨. ನ್ಯಾಯ ಪಂಚಾಯತಿಗಳು ಅಸ್ತಿತ್ವಕ್ಕೆ ಬರಬೇಕು.

೩. ರಾಷ್ಟ್ರೀಕೃತ ಬ್ಯಾಂಕ್ ಮೂಲಕವೇ ಹಣಕಾಸು ಬಿಡುಗಡೆಯಾಗಬೇಕು.

೪. ಸ್ಥಳೀಯ ಯೋಜನೆ ರೂಪಿಸಲು ಸಾಕಷ್ಟು ಮುಕ್ತನಿಧಿ ಸಿಗಬೇಕು.

೫. ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಸರ್ಕಾರದ ಮೂಗು ತೂರಿಸುವಿಕೆ ಕಮ್ಮಿಯಾಗಬೇಕು.

ಕರ್ನಾಟಕದ ಪಂಚಾಯತ್ ರಾಜ್ ತಿದ್ದುಪಡಿ ಸಮಿತಿ ವರದಿ (೨೦೧೪)

ಅಧ್ಯಕ್ಷರು: ರಮೇಶ್ ಕುಮಾರ್

ಸದಸ್ಯರು: ೨೨ (ಡಿ.ಆರ್. ಪಟೇಲ್, ಚಂದ್ರ ಪೂಜಾರಿ, ನಂದನಾ ರಿಟ್ಟಿ ಇತ್ಯಾದಿ)

ಈ ಸಮಿತಿಯ ಅಧ್ಯಕ್ಷರಾಗಿ ರಮೇಶ್ ಕುಮಾರ್ ಅವರನ್ನು ನೇಮಕಮಾಡಿದರು. ಇಲ್ಲಿ ೨೨ ಜನ ಸದಸ್ಯರಿದ್ದರು.

ರಮೇಶ್‌ಕುಮಾರ್ ವರದಿಯ ಶಿಫಾರಸ್ಸುಗಳು

೧. ಅಧ್ಯಕ್ಷರಿಗೆ ೫ ವರ್ಷದ ಅಧಿಕಾರ ನಿಗದಿ(೩ ಹಂತಗಳಲ್ಲೂ)

೨. ಅವಿಶ್ವಾಸ ನಿರ್ಣಯಕ್ಕೆ ಮಾನದಂಡ : ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ದಿನದಿಂದ ೩೦ ತಿಂಗಳೊಳಗೆ ಅವಿಶ್ವಾಸ ಮಂಡಿಸುವಂತಿಲ್ಲ(ಶೇ. ೫೦ ಸಹಿ ಮಾಡಬೇಕು. ಸೋಲಾದರೆ ಮತ್ತೆ ೨ ವರ್ಷ ಮಂಡಿಸುವಂತಿಲ್ಲ) (೨/೩ ಬಹುಮತ ಕಡ್ಡಾಯವಾಗಿ ಇರಬೇಕಿತ್ತು).

೩. ರಾಜೀನಾಮೆ ನೀಡಿದರೆ ಅದನ್ನು ಚುನಾವಣಾ ಆಯೋಗವೇ ಅಂಗೀಕರಿಸಬೇಕು.

೪. ಪಂಚಾಯ್ತಿ ವ್ಯಾಪ್ತಿಯ ಜಾತಿವಾರು ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕಲ್ಪಿಸಬೇಕು. ಇದು ೧೦ ವರ್ಷಗಳಿಗೆ ನಿಗದಿಪಡಿಸಲಾಯಿತು.

೫. ಮೀಸಲಾತಿ ನಿಗದಿ ಅಧಿಕಾರವನ್ನು ರಾಜ್ಯ ಸರ್ಕಾರದಿಂದ ರಾಜ್ಯ ಚುನಾವಣಾ ಆಯೋಗವೆ ನೀಡಬೇಕು.

೬. ಚುನಾವಣಾ ಅಕ್ರಮಕ್ಕೆ ಕಡಿವಾಣ, ಪ್ರಚಾರ ಮತ್ತು ಕರವೆಚ್ಚವನ್ನು ಸರ್ಕಾರವೇ ನೋಡಿಕೊಳ್ಳಬೇಕು. ಚುನಾವಣೆ ಘೋಷಣೆಯಾದ ದಿನದಿಂದಲೇ ಮದ್ಯದಂಗಡಿ ಬಂದ್ ಮಾಡಿ ಕೀಲಿ ಜಿಲ್ಲಾಧಿಕಾರಿಯವರ ವಶದಲ್ಲಿಡಬೇಕು.

೭. ಚುನಾವಣಾ ಪ್ರಕ್ರಿಯೆ ದೀರ್ಘವಾಗಿರಬಾರದು. ಚುನಾವಣೆ ಮುಗಿದ ಒಂದು ತಿಂಗಳೊಳಗೆ ಪಂಚಾಯ್ತಿ ಸದಸ್ಯರು ತಮ್ಮ ಆಸ್ತಿ ವಿವರವನ್ನು ಜಿಲ್ಲಾ ಪಂಚಾಯ್ತಿ ಸಿ.ಇ.ಓ.ಗೆ ಸಲ್ಲಿಸಬೇಕು.

ಪಕ್ಷಾಂತರ ನಿಷೇಧ ಕಾಯ್ದೆ ಜಾರಿ

೮. ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೆ ರಾಜ್ಯ ಸಚಿವರ ಸ್ಥಾನಮಾನ ನೀಡಬೇಕು.

೯. ಜಿಲ್ಲಾ ಪಂಚಾಯತ್ ಸಿ.ಇ.ಓ. ಸೇರಿದ್ದಂತೆ ತನ್ನ ಕೆಳಗಿನ ಅಧಿಕಾರಗಳ 'ಗೌಪ್ಯವರದಿ' ನೀಡುವ ಅಧಿಕಾರ.

೧೦. ಸಿ.ಇ.ಓ. ಹುದ್ದೆಗೆ ಐ.ಎ.ಎಸ್. ಅಧಿಕಾರಿಯೇ ನೇಮಕವಾಗಬೇಕು.

೧೧. ಜಿಲ್ಲಾ ಯೋಜನಾ ಸಮಿತಿಯಂತೆ ತಾಲ್ಲೂಕು ಯೋಜನಾ ಸಮಿತಿಯಿರಬೇಕು.

೧೨. ಗ್ರಾಮಸಭೆ, ವಾರ್ಡ್ ಸಭೆ ನಿಯಮಿತವಾಗಿ ನಡೆಯಬೇಕು.

೧೩. ವಾರ್ಷಿಕ ಲೆಕ್ಕಪರಿಶೋಧನ ನಡೆಸುವುದು ಕಡ್ಡಾಯ ಎಂದು ಸೂಚಿಸಲಾಯಿತು.

೧೪. ಪಂಚಾಯತ್ ರಾಜ್ ಅವಧಿ ಕೊನೆಗೊಳ್ಳುವ ೩ ತಿಂಗಳ ಮೊದಲೇ ಚುನಾವಣೆ.

೧೫. ಅಭ್ಯರ್ಥಿಗಳಿಗೆ ಎ.ಟಿ.ಇ. ನಲ್ಲಿ ತರಬೇತಿ

೧೬. ಗ್ರಾಮ ನ್ಯಾಯಾಲಯ ಸ್ಥಾಪನೆ

೧೭. ಕಡ್ಡಾಯ ಮತದಾನ.[೬]

ಎಲ್ಲ ರಾಜ್ಯಗಳಂತೆ ಭಾರತದ ಕರ್ನಾಟಕದಲ್ಲಿಯೂ ಪಂಚಾಯತ್ ರಾಜ್ ಸಂಸ್ಥೆ ಉತ್ತಮ ರೀತಿಯಿಂದ ಜಾರಿಗೆ ಬಂದಿದೆ. ಅಂದರೆ ಪಂಚಾಯಿತಿಯಿಂದಭಾರತೀಯ ಪ್ರಜೆಗಳಿಗೆ ಗ್ರಾಮೀಣ ಅಭಿವೃದ್ಧಿಯ ಮೂಲಭೂತ ಸೌಕರ್ಯಗಳು ಸಂಪೂರ್ಣವಾಗಿ ತಲುಪಲು ಸಹಾಯಕವಾಗಿದೆ. ಇದರಿಂದ ಕರ್ನಾಟಕ ಅಭಿವೃದ್ಧಿಯ ಜೊತೆ ಭವ್ಯ ಭಾರತ ನಿರ್ಮಾಣಕ್ಕೆ ಪಂಚಾಯತ್ ರಾಜ್ ಸಂಸ್ಥೆಯು ಅಪಾರ ಕೊಡುಗೆ ಕೊಟ್ಟಿದೆ ಎಂದು ಕರ್ನಾಟಕದ ಪ್ರಸ್ತುತ ಅಭಿವೃದ್ಧಿಯ ಚಿತ್ರಣದಿಂದ ತಿಳಿಯಲು ಸಹಾಯಕವಾಗಿದೆ.

ಹೀಗೆ ಈ ಅಧ್ಯಾಯವು ಪಂಚಾಯತ್‌ರಾಜ್ಯ ವಿಕಾಸದ ಚರಿತ್ರೆಯನ್ನು ಸ್ಥೂಲವಾಗಿ ಪರಿಚಯಿಸಲು ಪ್ರಯತ್ನಿಸುತ್ತದೆ ಈ ಪ್ರಯತ್ನ ಮಾಡುವಾಗ ಒಬ್ಬ ಸಂಶೋದಕನಾಗಿ ನಾನು ಚರ್ಚಿಸಿದಾಗ ನಾನು ಓದಿದಾಗ ನನಗೆ ಮುಖ್ಯವೆನಿಸಿದ ಅಂಶಗಳನ್ನು ದಾಖಲಿಸಲು ಪ್ರಯತ್ನಿಸಿದ್ದೇನೆ. ಈ ಪ್ರಯತ್ನದಲ್ಲಿ ಮಿತಿಗಳಿರುವುದು ನನಗೆ ಅರಿವಿದೆ.

ಕೊನೆ ಟಿಪ್ಪಣಿ

೧. ಸುರೇಶ ಕೆ ಜೆ, ೨೦೧೩, ಸ್ಥಳೀಯ ಸ್ವಯಂ ಸರ್ಕಾರಗಳು, ಲಕ್ಷ್ಮಿ ಪ್ರಿಂಟಿಂಗ್ ಆಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, ಪು.೦೬–೮.

೨. ಕಿಚ್ಚಡಿ ಚನ್ನಪ್ಪ, ೨೦೧೪, ಗ್ರಾಮ ಪಂಚಾಯಿತಿ: ಮಹಿಳಾ ಪ್ರಾತಿನಿಧ್ಯ ಮತ್ತು ಮಹಿಳಾ ಸಬಲೀಕರಣ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ. ಪು.೧೯

೩. ಅಸ್ಲಮ್ ಎಂ, (ಮೂ), ಈಶ್ವರಚಂದ್ರ, (ಅನು), ೨೦೧೦, ಭಾರತದಲ್ಲಿ ಪಂಚಾಯತ್ ರಾಜ್, ನ್ಯಾಷಿನಲ್ ಬುಕ್ ಟ್ರಸ್ಟ್, ನವ ದೆಹಲಿ.

೪. ನೇರಿ ಕರ್ನೆಲಿಯೋ ಕರ್ನಾಟಕ ಗ್ರಾಮ ಪಂಚಾಯತ್‌ಗಳು ಗ್ರಾಮ ಸ್ವರಾಜ್ಯದಡೆಗೆ ಕರ್ನಾಟಕ ರಾಜ್ಯ ಉಪನ್ಯಾಸಕರ ಸಂಘ, ಬೆಂಗಳೂರು, ಪುಟ, ೨೨೧-೨೨೫.

೫. ಶಿವಪುತ್ರ ಗಗನಮಾಲಿ, ೨೦೧೮, ಶಿಕ್ಷಣ ಸೌಧ, ಸಂಪುಟ-೮, ಸಂಚಿಕೆ-೧, ಪು.೧೯

೬. ಅಂತರ್ಜಾಲದ ಮಾಹಿತಿ,

೭. ಶಿವಪುತ್ರ ಗಗನಮಾಲಿ, ೨೦೧೮, ಶಿಕ್ಷಣ ಸೌಧ, ಸಂಪುಟ-೮, ಸಂಚಿಕೆ-೧, ಪು.೨೦-೨೧.

ಅಧ್ಯಾಯ ನಾಲ್ಕು

ಕೋಲಾರ ಜಿಲ್ಲೆಯ ದಲಿತರ ಸಾಮಾಜಿಕ ಸ್ಥಿತಿಗತಿ

೪.೧. ದಲಿತರಿಗಾಗಿ ಇರುವ ಸಾಮಾಜಿಕ ಸಂರಕ್ಷಣ ಕ್ರಮಗಳು

೪.೨. ಅಸ್ಪೃಶ್ಯತೆ

೪.೩. ಶಿಕ್ಷಣ

೪.೪. ಸಾಕ್ಷರತೆ

೪.೫. ಆರೋಗ್ಯ

೪.೬. ಮೂಲಭೂತ ಸೌಕರ್ಯ

ಅಧ್ಯಾಯ ನಾಲ್ಕು

ಕೋಲಾರ ಜಿಲ್ಲೆಯ ದಲಿತರ ಸಾಮಾಜಿಕ ಸ್ಥಿತಿಗತಿ

ಯಾವುದೇ ಪ್ರದೇಶದಲ್ಲಿ ಇತರೆ ಮೇಲ್ಮಟ್ಟದ ಗುಂಪುಗಳಂತೆಯೇ ಅತಿ ಸಂಕಷ್ಟಕ್ಕೀಡಾಗುವಂತಹ ಮತ್ತು ಅಂಚಿನಲ್ಲಿರುವ ಗುಂಪುಗಳಿಗೆ ವ್ಯಕ್ತಿಗತ ಬೆಳವಣಿಗೆ ಸಮಾನ ಅವಕಾಶಗಳನ್ನು ಖಾತ್ರಿ ಪಡಿಸಿದಾಗ ಮಾತ್ರ ಸುಸ್ಥಿರ ಮಾನವ ಅಭಿವೃದ್ಧಿ ಸಾಧಿಸಬಹುದು. ಸಮಾಜದಲ್ಲಿ ಅನುಚಿತವಾಗಿ ನಡೆದುಕೊಳ್ಳುವ ಗುಂಪುಗಳು ಇತರ ಮೇಲೆ ಹೆಚ್ಚು ಅವಲಂಬನೆಯಾಗುವಂತಹ ಜನರನ್ನು ಸಮಾಜದ ಅಂಚಿನಲ್ಲಿರುವ ಜನರೆಂದು/ಗುಂಪುಗಳೆಂದು ವ್ಯಾಖ್ಯಾನಿಸಲಾಗಿದೆ. ಇದರಿಂದಾಗಿ ತಮ್ಮ ಸ್ವಂತ ಬಲದ ಮೇಲೆ ತಮ್ಮ ಜೀವನೋಪಾಯ ನಿರ್ವಹಣೆ ಮತ್ತು ತಮ್ಮ ಹಕ್ಕುಗಳ ರಕ್ಷಣೆಗೆ ಕಷ್ಟಪಡುತ್ತಾರೆ. ಸಮಾಜದಲ್ಲಿ ಸಂಕಷ್ಟಕ್ಕೀಡಾಗುವಂತಹ ಗುಂಪುಗಳ ಸಹ ತಾರತಮ್ಯವನ್ನು ಎದುರಿಸುತ್ತಾರೆ ಮತ್ತು ಕಡೆಗಣಿಸಿರುವ ಗುಂಪುಗಳಂತೆ ಭಾವಿಸುತ್ತಾರೆ. ಶೋಷಣೆಯನ್ನು ತಪ್ಪಿಸಲು ಇವರಿಗೆ ವಿಶೇಷ ಗಮನದ ಅಗತ್ಯವಿದೆ.

ಈ ಸಂಕಷ್ಟಕ್ಕೀಡಾಗಿರುವ ಸಾಮಾಜಿಕ ಗುಂಪು ಗುಂಪುಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳೆಂದು ವಿಂಗಡಿಸಲಾಗಿದೆ. ಇವರ ಸಮಸ್ಯೆ ಮತ್ತು ಸ್ವಭಾವಕ್ಕನುಗುಣವಾಗಿ ಸೂಚಕಗಳನ್ನು ನೀಡಲಾಗಿದೆ. ಸಾಂಪ್ರದಾಯಿಕವಾಗಿ ಭಾರತ ಮತ್ತು ಕರ್ನಾಟಕದ ಎಲ್ಲಾ ಪ್ರದೇಶಗಳಲ್ಲಿಯೂ ಅಭಿವೃದ್ಧಿಯೂ ಸಾಮಾಜಿಕ ವರ್ಗಗಳಲ್ಲಿ ಹಿಂದುಳಿದಿದೆ. ಇದನ್ನು ೨೦೦೫ರ ಮಾನವ ಅಭಿವೃದ್ಧಿ ವರದಿಯಲ್ಲಿ ದಾಖಲಿಸಲಾಗಿದೆ. ಇದರ ಪ್ರಕಾರ ರಾಜ್ಯದ ಸರಾಸರಿಗಳ ಹೋಲಿಕೆಯಲ್ಲಿ ಎಸ್.ಸಿ. ಮತ್ತು ಎಸ್.ಟಿ.ಗಳ ಮಾನವ ಅಭಿವೃದ್ಧಿಯಲ್ಲಿ ಲಿಂಗಸಂಬಂಧಿ ಅಭಿವೃದ್ಧಿ ಮಟ್ಟಗಳು ತೀರ ಕಳಪೆಯನ್ನು ತೋರಿಸಿವೆ. ಎಸ್.ಸಿ. ಹಾಗೂ ಎಸ್.ಟಿ. ಸ್ಥಿತಿಗೆ ಸಂಬಂಧಿಸಿದಂತೆ ೨೦೦೧ರಿಂದ ೨೦೦೪ರ ಅವಧಿಯಲ್ಲಿ ತೀರ ಹಿಂದುಳಿದಿರುವಿಕೆಯನ್ನು ಹೊರಹಾಕಿದೆ.

೪.೧. ದಲಿತರಿಗಾಗಿ ಇರುವ ಸಾಮಾಜಿಕ ಸಂರಕ್ಷಣ ಕ್ರಮಗಳು

ಪರಿಶಿಷ್ಟ ಜಾತಿಗಳವರ ಹಾಗೂ ಸಂವಿಧಾನಕ್ಕೆ ಸಂಬಂಧಿಸಿದಂತೆ ಬ್ರಿಟೀಷ್ ಸರ್ಕಾರದ ಘೋಷಣೆ: ಬ್ರಿಟಿಷರು ಭಾರತೀಯರ ಕೈಗೆ ಅಧಿಕಾರವನ್ನು ಹಸ್ತಾಂತರ ಮಾಡುವುದಕ್ಕೆ ಮುನ್ನ ಎಲ್ಲಕ್ಕಿಂತ ಹೆಚ್ಚಾಗಿ ದಲಿತರು ಸ್ವಾತಂತ್ರ್ಯ ಭಾರತದ ಸಂವಿಧಾನ ರಚನೆಗೆ ಒಪ್ಪಿಗೆ ನೀಡಬೇಕು ಇದು ಅತ್ಯಂತ ಮಹತ್ವದ್ದು ಮತ್ತು ಅತ್ಯವಶ್ಯಕ ಕಟ್ಟಳೆಯಾಗಿದೆ ಎಂದು ಬ್ರಿಟಿಷ್ ಸರ್ಕಾರವು ಘೋಷಿಸಿದೆ. ಅದನ್ನೇ ವೈಯಸ್‌ರಾಯ್ ಅವರು ಪುನರುಚ್ಚಿಸಿದ್ದಾರೆ. ದಲಿತರ ಸಂಘದ ಒಕ್ಕೂಟವು ಈ ಹೇಳಿಕೆಗಳನ್ನು ಸ್ವಾಗತಿಸುತ್ತದೆ. ಅದೇ ವೇಳೆಗೆ ವರ್ಕಿಂಗ್ ಕಮಿಟಿಯು ಭಾರತದ ಕಾಂಗ್ರೆಸ್ ಮತ್ತು ಇತರ ರಾಜಕೀಯ ಪಕ್ಷಗಳ ಒಲವಿನತ್ತ ಬ್ರಿಟಿಷ್ ಸರ್ಕಾರದ ಗಮನಸೆಳೆಯಲು ಇಚ್ಚಿಸುತ್ತದೆ. ಬ್ರಿಟಿಷ್ ಸರ್ಕಾರದ ಘೋಷಣೆ ಸೂಕ್ತವಲ್ಲವೆಂದು ಈ ಪಕ್ಷಗಳು ಪರಿಭಾವಿಸುತ್ತವೆ. ಅಲ್ಲದೆ ಈ ಘೋಷಣೆ ಭಾರತೀಯರು ಗೌರವಿಸುವ ಯಾವ ಉದ್ದೇಶವೂ ಇಲ್ಲದೆ ಮಾಡಿದುದೂ ಅಧಿಕಾರವನ್ನು ಹಸ್ತಾಂತರ ಮಾಡುವಲ್ಲಿ ಕೇವಲ ವಿಳಂಬನೀತಿಯನ್ನು ಅನುಸರಿಸುವ ತಂತ್ರವೆಂದೂ ಮತ್ತು ದಲಿತರೊಡನೆ ನಿರ್ಣಯಕ್ಕೆ ಬರುವುದರಲ್ಲಿ ಬಹುಸಂಖ್ಯಾತರು ಬಹುತೇಕ ಒಪ್ಪಬಾರದೆಂಬುದನ್ನು ಸೂಚಿಸುತ್ತದೆ ಈ ಅಪಾದನೆಯು. ಅಪರಾಧವೆಂದು ವರ್ಕಿಂಗ್ ಕಮಿಟಿಯು ಭಾವಿಸುತ್ತದೆ. ಅಲ್ಲದೆ ಬ್ರಿಟೀಷರು ಅವರ ಸರ್ಕಾರವು ಯಾವುದೇ ರೀತಿಯ ಸಂಶಯಕ್ಕೊಳಗಾಗಬಾರದೆಂದೂ ಅದು ಕೇಳಿಕೊಳ್ಳುತ್ತದೆ. ಅಲ್ಲದೆ ಮತ್ತೆ ಎಲ್ಲ ಕಾಲಕ್ಕೂ ಎಲ್ಲ ಪರಿಸ್ಥಿತಿಯಲ್ಲೂ ಘೋಷಣೆಗೆ ಬದ್ಧವಾಗಿ ಪಡೆದುಕೊಳ್ಳುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.[೧]

ಸಂವಿಧಾನವು ನೀಡುವ ಹಿತರಕ್ಷಣಾ ಸ್ವರೂಪ

೧. ಕಾರ್ಯಕಾರಿ ಸಮಿತಿಯು ಈ ಕೆಳಗಿನ ಷರತ್ತುಗಳನ್ನು ಒಳಪಡದ ಹೊರತು ಸಂವಿಧಾನವು ಸ್ವೀಕಾರಾರ್ಹವಲ್ಲವೆಂದು ಘೋಷಿಸುತ್ತದೆ. ಅದಕ್ಕೆ ದಲಿತರ ಒಪ್ಪಿಗೆ ಇರಬೇಕು.

೨. ಅದು(ಸಂವಿಧಾನವೂ) ದಲಿತರನ್ನು ಪ್ರತ್ಯೇಕ ಹಾಗೂ ಸ್ಪಷ್ಟ ಘಟಕವೆಂದು ಮಾನ್ಯ ಮಾಡಬೇಕು.

೩. ಅದು ದಲಿತರಿಗೆ ಕೆಳಗಿನ ಉದ್ದೇಶಗಳನ್ನು ದೊರಕಿಸಿಕೊಡಲು ಅವಕಾಶಗಳನ್ನು ಹೊಂದಿರಬೇಕು.

೪. ರಾಜ್ಯದ ಹಾಗೂ ಕೇಂದ್ರದ ಮುಂಗಡ ಪತ್ರಗಳಲ್ಲಿ ದಲಿತರಿಗೆ ಮಾಧ್ಯಮಿಕ, ವಿಶ್ವವಿದ್ಯಾಲಯದ ಹಾಗೂ ಉನ್ನತ ಶಿಕ್ಷಣಕ್ಕಾಗಿ ಇಂತಿಷ್ಟು ಹಣವೆಂದು ನಿರ್ದಿಷ್ಟ ಪಡಿಸಬೇಕು.

೫. ಸೆಟ್ಲಮೆಂಟ್ ಕಮೀಷನರ್ ಮೂಲಕ ದಲಿತರ ವಾಸಕ್ಕಾಗಿ ಸರ್ಕಾರದ ಭೂಮಿಯನ್ನು ಕಾಯ್ದಿರಿಸಬೇಕು.

೬. ಪರಿಶಿಷ್ಟ ಜಾತಿಗಳವರ ಪ್ರಮಾಣ, ಮಹತ್ವ ಮತ್ತು ಅವಶ್ಯಕತೆಗಳಿಗೆ ಅನುಗುಣವಾಗಿ ಶಾಸಕಾಂಗಗಳು, ಕಾರ್ಯಾಂಗ, ಮುನ್ಸಿಪಾಲಿಟಿ ಮತ್ತು ಸ್ಥಳೀಯ ಮಂಡಳಿಗಳು ಸಾರ್ವಜನಿಕ ಸೇವೆಗಳು, ಲೋಕಸೇವಾ ಆಯೋಗ ಇವುಗಳಲ್ಲಿ ದಲಿತರ ಪ್ರಾತಿನಿಧ್ಯ ನೀಡಬೇಕು.

೭. ಶಾಸಕಾಂಗ ಇಲ್ಲವೆ ಕಾರ್ಯಾಂಗಗಳ ಆಚೆಗೆ, ಈ ಹಕ್ಕುಗಳನ್ನು ಸಂವಿಧಾನಿಕ ಹಕ್ಕುಗಳೆಂದು ಮಾನ್ಯ ಮಾಡಬೇಕು ಮತ್ತು ಅವುಗಳಲ್ಲಿ ಸೂಕ್ತ ಬದಲಾವಣೆ ತರಲು ಇಲ್ಲವೆ ಅವುಗಳನ್ನು ಕಿತ್ತುಹಾಕಲು ಅವಕಾಶವಿರಬೇಕು.[೨]

೮. ಕ್ರಿ.ಶ. ೧೯೩೫ರ ಭಾರತ ಸಂವಿಧಾನ ಸರ್ಕಾರದ ಕಾಯ್ದೆಯ ಕಲಮು ೧೬೬ರಲ್ಲಿ ಉಲ್ಲೇಖಿತವಾದಂತೆ ಆಡಿಟರ್ ಜನರಲ್ ಇವರ ಸ್ಥಾನದಂತಹ ಸ್ಥಾನಗಳಿಗೆ ನೇಮಕವಾಗಲು ಅದೇ ರೀತಿ ಅಧಿಕಾರದಿಂದ ಕಿತ್ತುಹಾಕಲು ಅದೇ ರೀತಿ ಫೆಡರಲ್ ಕೋರ್ಟಿನ್ ನ್ಯಾಯ ಮೂರ್ತಿಗಳನ್ನು ನೇಮಿಸಲು ಮತ್ತು ಮೂಲಭೂತ ಹಕ್ಕುಗಳ ಕಾರ್ಯಾಚರಣೆಯ ಬಗೆಗೆ ವರದಿ ಮಾಡುವ ಅವಕಾಶವಿರಬೇಕು.

ಪರಿಶಿಷ್ಟ ಜಾತಿಗಳವರ ರಾಜಕೀಯ ಬೇಡಿಕೆಗಳು

ದಿನಾಂಕ ೨೬.೦೯.೧೯೪೪ರಂದು ರಾವ್ ಬಹುದ್ದೂರಂ ಬಿ.ಎ.ಬಿ.ಎಲ್., ಎಂ.ಎಲ್.ಎ. ಅವರ ಅಧ್ಯಕ್ಷತೆಯಲ್ಲಿ ಮದ್ರಾಸ್ ನಗರದಲ್ಲಿ ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟುದ ಕಾರ್ಯಾಕಾರಿ ಸಮಿತಿಯು ಸಭೆ ಸೇರಿ ಹೊಸ ಸಂವಿಧಾನದಲ್ಲಿ ದಲಿತರಿಗೆ ಹಿತರಕ್ಷಣೆಯ ಸಲುವಾಗಿ ತಯಾರಿಸಿದ ರೂಪರೇಷೆಗಳ ಬಗೆಗೆ ಕೈಗೊಂಡ ನಿರ್ಣಯ. ಪರಿಶಿಷ್ಟ ಜಾತಿಗಳವರನ್ನು ಒಂದು ಪ್ರತ್ಯೇಕ ಘಟಕವೆಂದು ಮನ್ನಿಸುವುದು

ಕೆಲ ಪತ್ರಿಕೆಗಳಲ್ಲಿ ವೈಸ್‌ರಾಯ್‌ರ ಹೇಳಿಕೆಯ ಬಗೆಗೆ ಪ್ರಕಟಿಸಿರುವ ಆಪಾದನೆಯನ್ನು ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಕಾರ್ಯಾಕಾರಿ ಸಮಿತಿಯು ಗಮನಿಸಿದೆ. ವೈಸ್‌ರಾಯರು ದಿನಾಂಕ ೧೫.೦೮.೧೯೪೪ರಂದು ಗಾಂಧೀಯವರಿಗೆ ಬರೆದೆ ಪತ್ರದಲ್ಲಿ ಭಾರತೀಯರ ಸಾಮಾಜಿಕ ಬದುಕಿನಲ್ಲಿ ದಲಿತರು ಪ್ರತ್ಯೇಕ ಮತ್ತು ಮಹತ್ವದ ಘಟಕವಾಗಿದ್ದು. ಭಾರತೀಯರಿಗೆ ಅಧಿಕಾರ ಹಸ್ತಾಂತರ ಮಾಡುವುದಕ್ಕೆ ಮೊದಲು ಸಂವಿಧಾನ ರಚನೆಗೆ ಅವರ ಅನುಮತಿ ಅವಶ್ಯ ಪಡೆಯಬೇಕೆಂದು ಬರೆದಿದ್ದು. ಅದು ಬ್ರಿಟಿಷ್ ಸರ್ಕಾರವು ಕ್ರಿಪ್ಸ್‌ರ ಪ್ರಸ್ತಾವಗಳ ಮೂಲಕ ನೀಡಿದ ಹೇಳಿಕೆಗೆ ಭಿನ್ನವಾಗಿದೆಯೆಂದು ಆಪಾದನೆಯಾಗಿದೆ. ಆ ಅಪಪ್ರಚಾರಕ್ಕೆ ಈ ಸಮಿತಿಗೆ ತನ್ನ ಆಕ್ರೋಶವನ್ನು ವ್ಯಕ್ತಪಡಿಸಿದೆ. ಬೇರೆ ದಾರಿ ಇಲ್ಲ. ಅಲ್ಲದೇ ದಲಿತರು ಭಾರತೀಯ ಬದುಕಿನ ಪ್ರವಾಹದ ಪ್ರತ್ಯೇಕ ಹಾಗೂ ಎದ್ದು ಕಾಣುವ ಘಟಕವಾಗಿದ್ದಾರೆಂಬುದನ್ನು ಒತ್ತಾಯದ ಶಬ್ದಗಳಲ್ಲಿ ಹಾಗೂ ನೇರವಾಗಿ ಹೇಳಲು ಈ ಅವಕಾಶವನ್ನು ಸಮಿತಿಯು ಉಪಯೋಗಿಸಿಕೊಳ್ಳುತ್ತದೆ. ಅಲ್ಲದೆ ಅವರು ಸಿಖ್ಖರು ಹಾಗೂ ಮುಸ್ಲಿಂರಂತೆ ಧಾರ್ಮಿಕ ಅಲ್ಪಸಂಖ್ಯಾತರೆಂಬುದು ಅತ್ಯಂತ ಸತ್ಯವಾದುದು ಎಂಬ ಅಂಶ ಕ್ರಿಪ್ಸ್‌ರ ಸೂಚನೆಗಳಲ್ಲಿ ಅಡಕವಾಗಿದೆ. ಲಾರ್ಡ್ ವೇವೆಲ್‌ರು, ಗಾಂಧೀಜಿಯವರಿಗೆ ಬರೆದ ಪತ್ರದಲ್ಲಿ ತಿಳಿಸಿರುವ ಸಂಗಿತಿಗಳು ಬ್ರಿಟೀಷ್ ಸರ್ಕಾರವು ಮೊದಲಿನಿಂದಲೂ ಹೇಳುತ್ತಿದ್ದ ಸಂಗತಿಗಳೇ. ಇವುಗಳನ್ನು ಕ್ರಿ.ಶ. ೧೯೧೭ರಲ್ಲಿ ಮೊಂಟೆಗೋ ಚೆಲ್ಮ್ಸ್‌ಫರ್ಡ್‌ರ ವರದಿಯಲ್ಲಿ ಸ್ಪಷ್ಟ ಶಬ್ದಗಳಲ್ಲಿ ಬರೆಯಲಾಗಿದೆ. ಅದೇ ವೇಳೆಗೆ ಹೊಣೆಗಾರ ಸರ್ಕಾರವನ್ನು ಹೊಂದುವುದು ಭಾರತದ ರಾಜಕೀಯ

ವಿಕಾಸವಾಗಿದೆ. ದುಂಡುಮೇಜಿನ ಪರಿಷತ್ತಿನಲ್ಲಿ ಸಂಸತ್ತಿನ ಸಂಯುಕ್ತ ಸಮಿತಿ ಅಲ್ಲದೆ ೧೯೩೫ರ ಭಾರತ ಸರ್ಕಾರದ ಅಧಿನಿಯಮದಲ್ಲಿ ದಲಿತರಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಬ್ರಿಟಿಷ್ ಸರ್ಕಾರವು ಒಪ್ಪಿಕೊಂಡಿರುವುದು ಇವೆಲ್ಲ ಕಾರ್ಯಗಳಿಂದ ದಲಿತರು ಹಿಂದೂಗಳಿಂದ ಪ್ರತ್ಯೇಕ ಎಂಬುದು ಬ್ರಿಟಿಷ್ ಸರ್ಕಾರದ ನಂತರದ ಕಾರ್ಯಗಳಿಂದ ವ್ಯಕ್ತವಾಗುತ್ತದೆ. ಆದುದರಿಂದ ಬ್ರಿಟಿಷ್ ಸರ್ಕಾರವು ತನ್ನ ಧೋರಣೆಯಿಂದ ದೂರ ಸರಿದಿದೆ ಎಂದು ಹೇಳುವುದು ಅಪಚಾರದ್ದೂ, ಅಪಪ್ರಚಾರದ ಸಂಗತಿಯೂ ಆಗಿದೆಯೆಂಬುದನ್ನು ಈ ಕಾರ್ಯಕಾರಿ ಸಮಿತಿಯು ನಿರ್ಭಯವಾಗಿ ಪ್ರತಿಪಾದಿಸುತ್ತದೆ. ಅಲ್ಲದೆ ಇದು ದಲಿತರ ವಿರೋಧಿಗಳು ಹೂಡಿದ ಕುತಂತ್ರವೆಂದೂ ಹಾಗೂ ದಲಿತರು ತಮ್ಮ ಹಿತರಕ್ಷಣೆಗೆ ಕೇಳುವ ಸಂವಿಧಾನದ ಹಕ್ಕುಗಳನ್ನು ಹಾಳುಗೆಡವಲು ಮಾಡಿದ ಯೋಜನೆ ಎಂದೂ ಅದು ಭಾವಿಸುತ್ತದೆ. ಅಲ್ಲದೆ ಹಿಂದೂ ಮತ್ತು ದಲಿತ ವರ್ಗದವರಲ್ಲಿ ಶಾಂತಿ ಸೌಹರ್ದಭಾವನೆಗಳು ನೆಲೆಗೊಳ್ಳಲು ಮತ್ತು ಭಾರತದ ರಾಜಕೀಯ ಗುರಿಯನ್ನು ತೀವ್ರದಲ್ಲಿಯೇ ಸಾಧಿಸಲು ಹಿಂದೂ ನಾಯಕರು ಈ ಅಂಶಗಳನ್ನು ಗಮನಿಸಬೇಕೆಂದು ಅದು ಕೇಳಿಕೊಳ್ಳುತ್ತದೆ.[೩]

ಜಾತಿ ಮತ್ತು ಸಂವಿಧಾನ

ಅಸ್ಪೃಶ್ಯರ ಈ ಬೇಡಿಕೆಗಳಿಂದ ಹುಟ್ಟಿಕೊಂಡಿರುವಂತಹ ಪ್ರಶ್ನೆಗಳಿಗೆ ಸಂವಿಧಾನದಲ್ಲಿ ಏಕೆ ಅವಕಾಶವಿರಬೇಕೆಂದು ಕೇಳಬಹುದು. ಜಗತ್ತಿನಲ್ಲಿ ಎಲ್ಲೂ ಸಂವಿಧಾನ ಕರ್ತೃಗಳು ಇಂತಹ ವಿಷಯಗಳನ್ನು ಪರಿಹರಿಸಬೇಕಾದ ಅನಿವಾರ್ಯತೆ ಉಂಟಾಗಿಲ್ಲ. ಇದೊಂದು ಮಹತ್ವಪೂರ್ಣವಾದ ಪ್ರಶ್ನೆ. ಈ ಪ್ರಶ್ನೆಗಳನ್ನು ಎತ್ತುವವರು ಮತ್ತು ಇವುಗಳ ಸಂವಿಧಾನಾತ್ಮಕವಾಗಿ ಮಹತ್ವಪೂರ್ಣವಾದವು ಎಂದು ಒತ್ತಾಯಿಸುವವರಲ್ಲಿ ಇದಕ್ಕೆ ಪರಿಹಾರವಿರಬೇಕೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಈ ಪ್ರಶ್ನೆಗೆ ಉತ್ತರ ತೀರಾ ಸ್ಪಷ್ಟವಿದೆ ಎಂದು ನನಗನಿಸುತ್ತದೆ. ಭಾರತದ ಸಾಮಾಜಿಕ ಲಕ್ಷಣವೇ ಈ ಪ್ರಶ್ನೆಗೆ ಸಂವಿಧಾನಾತ್ಮಕ ಮಹತ್ವವನ್ನು ನೀಡಿದೆ. ಇದಕ್ಕೆ ಹಿಂದುಗಳ ಜಾತಿ ವ್ಯವಸ್ಥೆ ಮತ್ತು ಧಾರ್ಮಿಕ ವ್ಯವಸ್ಥೆಯೇ ಸಂಪೂರ್ಣ ಹೊಣೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಹಿಂದು ಧರ್ಮ ಮತ್ತು ಜಾತಿ ವ್ಯವಸ್ಥೆ ರಾಜಕೀಯದ ಮೇಲೆ ಬೀರುವ ಪರಿಣಾಮಗಳ ಬಗ್ಗೆ ಅರ್ಥೈಹಿಸಿಕೊಳ್ಳಲು ಅಸಮರ್ಥವಾಗುತ್ತದೆ. ಯಾಕೆಂದರೆ ಧರ್ಮವು ರಾಜಕೀಯವನ್ನು ನಿಯಂತ್ರಿಸುವುದು ಹೊಸ ವಿಷಯವೇನಲ್ಲ. ಈ ಕುರಿತು ಸಂವಿಧಾನದ ಮೇಲೆ ಜಾತಿ ವ್ಯವಸ್ಥೆ ಬೀರುವ ಪರಿಣಾಮಗಳನ್ನು ಕುರಿತು ಚರ್ಚಿಸುವುದು ಅಸಾಧ್ಯವೆನ್ನುವುದು ಅಷ್ಟೆ ನಿಜ. ಈ ವಿಷಯವನ್ನು ಕುರಿತು ಪೂರ್ಣವಾದ ಹಾಗೂ ವಿವರವಾದ ಸ್ಪಷ್ಟತೆ ನೀಡುವುದು ಸಂಕೀರ್ಣವೆನಿಸಿದರು ಅದು ಹಿಂದುಗಳ ಜಾತಿ ಮತ್ತು ಧಾರ್ಮಿಕ ವ್ಯವಸ್ಥೆ ಹಾಗೂ ಆರ್ಥಿಕ ಮತ್ತು ಸಾಮಾಜಿಕ ಶಾಳೆಗಳ ಸಂಕೀರ್ಣ ರಚನೆಯ ಪರಿಣಾಮದ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಬಹುದು ಎಂದು ನಂಬಿದ್ದೇನೆ. ಸಾಮಾನ್ಯ ಸಮೀಕ್ಷೆಗಳನ್ನು ಮಾಡುವುದರಲ್ಲಷ್ಟೆ ತೃಪ್ತಿಗೊಳ್ಳುತ್ತೇನೆ. ಸಂವಿಧಾನವನ್ನು ರಚಿಸುವಾಗ ಸಾಮಾಜಿಕ ರಚನೆಯೊಂದಿಗೆ ಮೇಳಗೊಂಡಿರಬೇಕು. ಸಾಮಾಜಿಕ ಶಕ್ತಿಗಳ ಚಟುವಟಿಕೆ ಸಾಮಾಜಿಕ ಕ್ಷೇತ್ರಕ್ಕಷ್ಟೇ ಸೀಮಿತಗೊಂಡಿಲ್ಲ. ಅವು ರಾಜಕೀಯ

ಕ್ಷೇತ್ರಕ್ಕೂ ವ್ಯಾಪಿಸಿಕೊಂಡಿವೆ. ಇದು ಅಸ್ಪೃಶ್ಯರ ನಿಲುವು. ಈ ನಿಲುವು ವಿವಾದತೀತ ಎಂಬುದರ ಬಗ್ಗೆ ನನಗೆ ಖಾತ್ರಿ ಇದೆ. ಹಿಂದುಗಳಿಗೆ ಈ ವಾದದ ಬಗ್ಗೆ ಮತ್ತು ಅದರ ಬಲದ ಬಗ್ಗೆ ಸಂಪೂರ್ಣ ತಿಳುವಳಿಕೆ ಇದೆ. ಆದರೆ ಹಿಂದೂ ಸಮಾಜದ ರಚನೆ ಐರೋಪ್ಯ ಸಾಮಾಜಿಕ ರಚನೆಗಿಂತ ಎಲ್ಲಾ ರೀತಿಯರಲ್ಲೂ ಭಿನ್ನವಾಗಿದೆ ಎಂಬುದನ್ನು ಅವರು ಅಲ್ಲಗಳೆಯುತ್ತಾರೆ. ಹಿಂದೂಗಳ ಜಾತಿ ವ್ಯವಸ್ಥೆ ಮತ್ತು ಪಾಶ್ಚಿಮಾತ್ಯರ ವರ್ಗವ್ಯವಸ್ಥೆ ನಡುವೆ ಯಾವುದೇ ವ್ಯತ್ಯಾಸವಿಲ್ಲ ಎಂದು ಹೇಳುವುದರ ಮೂಲಕ ಈ ವಾದವನ್ನು ಎದುರಿಸಲು ಪ್ರಯತ್ನಿಸುತ್ತಾರೆ.*

ಇದು ಸುಳ್ಳು ಎಂದು ಸ್ಪಷ್ಟ ಮತ್ತು ಇದು ಜಾತಿ ವ್ಯವಸ್ಥೆ ಮತ್ತು ವರ್ಗವ್ಯವಸ್ಥೆಯ ಬಗ್ಗೆ ಸಂಪೂರ್ಣ ಅಜ್ಞಾನವನ್ನು ತೋರಿಸುತ್ತದೆ. ಜಾತಿವ್ಯವಸ್ಥೆ ಅದು ಒಂದು ಜಾತಿಯನ್ನು ಮತ್ತೊಂದರಿಂದ ಪ್ರತ್ಯೇಕಗೊಳಿಸುವುದನ್ನೇ ಒಂದು ಸದ್ಗುಣವಾಗಿಸಿದೆ. ವರ್ಗವ್ಯವಸ್ಥೆಯಲ್ಲೂ ಪ್ರತ್ಯೇಕತೆ ಇದೆ. ಆದರೆ ಅದು ಪ್ರತ್ಯೇಕತೆಯನ್ನು ಒಂದು ಸದ್ಗುಣವೆಂದು ಭಾವಿಸುವುದಿಲ್ಲ ಅಥವಾ ಪರಸ್ಪರ ಸಾಮಾಜಿಕ ವ್ಯವಹಾರವನ್ನು ನಿಷೇಧಿಸುವುದಿಲ್ಲ. ವರ್ಗ ವ್ಯವಸ್ಥೆ ಗುಂಪುಗಳನ್ನು ಸೃಷ್ಟಿಸುತ್ತದೆ ಎಂಬುದು ನಿಜ. ಆದರೆ ಜಾತಿ ವ್ಯವಸ್ಥೆಯಲ್ಲಿನ ಜಾತಿಗಳು ಕೇವಲ ಅಸಾಮಾಜಿಕವಾದವು. ಆದರೆ ಜಾತಿ ವ್ಯವಸ್ಥೆಯಲ್ಲಿನ ಜಾತಿಗಳು ಅವುಗಳ ಪರಸ್ಪರ ಸಂಬಂಧದಲ್ಲಿ ನಿಶ್ಚಿತವಾಗಿ ಮತ್ತು ಇತ್ಯಾತ್ಮಕವಾಗಿ ಸಮಾಜ ವಿರೋಧಿಯಾದಂತಹವು. ಈ ವಿಶ್ಲೇಷಣೆ ನಿಜವಾದಲ್ಲಿ ಹಿಂದೂ ಸಮಾಜದ ಸಾಮಾಜಿಕ ವ್ಯವಸ್ಥೆ ಭಿನ್ನವಾದದ್ದು ಮತ್ತು ಅದರ ಪರಿಣಾಮವಾಗಿ ಅದರ ರಾಜಕೀಯ ವ್ಯವಸ್ಥೆಯೂ ಭಿನ್ನವಾಗಿರಲೇಬೇಕು. ಸಾಮಾನ್ಯ ಮಾತುಗಳಲ್ಲಿ ಹೇಳುವುದಾದರೆ ಅಸ್ಪೃಶ್ಯರು ಮನವಿ ಮಾಡಿಕೊಳ್ಳುತ್ತಿರುವುದು ಗುರಿ ಮತ್ತು ಅದನ್ನು ಸಾಧಿಸುವ ಮಾರ್ಗದ ನಡುವಿನ ಸೂಕ್ತ ಸಂಬಂಧಕ್ಕಾಗಿ ಸಾಧಿಸಬೇಕಾದ ಗುರಿ ಒಂದೇ ಆಗಿರಬಹುದು. ಅದನ್ನು ಸಾಧಿಸುವ ಮಾರ್ಗವೂ ಒಂದೇ ಆಗಿರಬೇಕಿಲ್ಲ. ಗುರಿ ಒಂದೇ ಆಗಿದ್ದಾಗ್ಯೂ ಅದನ್ನು ಹೊಂದುವ ಮಾರ್ಗವು ದೇಶ ಮತ್ತು ಪರಿಸ್ಥಿತಿಗೆ ಅನುಗುಣವಾಗಿ ಬದಲಾಗಬೇಕು. ಯಾರು ತಮ್ಮ ಗುರಿಗೆ ಬದ್ಧರಾಗಿರುತ್ತಾರೋ ಅವರು ಈ ಅಂಶವನ್ನು ಒಪ್ಪಿಕೊಳ್ಳಬೇಕು ಮತ್ತು ಅವರು ದೃಷ್ಟಿಯಲ್ಲಿಟ್ಟುಕೊಂಡಿರುವ ಗುರಿ ನಿರರ್ಥಕವಾಗದಿರಬೇಕಾದರೆ ವಿವಿಧ ಮಾರ್ಗಗಳನ್ನು ಅಳವಡಿಸಲು ಸಮ್ಮತಿಸಬೇಕು.

ಈ ಸಂದರ್ಭದಲ್ಲಿ ಪ್ರಸ್ತುತ ಉಲ್ಲೇಖಿಸಲು ಬಯಸುವ ಮತ್ತೊಂದು ವಿಷಯವಿದೆ. ನಾನು ಹೇಳಿದಂತೆ ಹಿಂದೂ ಸಮಾಜದ ಜಾತಿಯ ತಳಹದಿಗೆ ಮತ್ತು ಅದರ ಸಾಮಾಜಿಕ ರಚನೆಗೆ ಹೊಂದಿಕೆಯಾಗುವಂತಹ ಭಿನ್ನವಾದ ರಾಜಕೀಯ ರಚನೆಯೂ ಅವಶ್ಯಕ. ಕೆಲವರು ಇದನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಹಿಂದೂ ಸಮಾಜದಿಂದ ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಬಹುದು ಎಂದು ವಾದಿಸುತ್ತಾರೆ. ಪ್ರಸ್ತುತ ಇದನ್ನು ಒಪ್ಪುವುದಿಲ್ಲ. ಇಂತಹ ಅಭಿಪ್ರಾಯವನ್ನು ಪ್ರತಿಪಾದಿಸುವವರು. ಜಾತಿವ್ಯವಸ್ಥೆಯನ್ನು ಒಂದು ಕ್ಲಬ್ ಅಥವಾ ಒಂದು ಮುನ್ಸಿಪಾಲಿಟಿ ಅಥವಾ ಒಂದು ಸಮಿತಿಯಂಥ ಒಂದು ಸಂಸ್ಥೆ ಎಂದು ಭಾವಿಸುತ್ತಾರೆ. ಇದೊಂದು ದೊಡ್ಡ ತಪ್ಪು, ಇಲ್ಲಿ ಜಾತಿಯೇ ಒಂದು

ಧರ್ಮ. ಹಾಗಾಗಿ ಒಂದು ಧರ್ಮ ಏನೇ ಆದರೂ ಸಂಸ್ಥೆ ಆಗಲಿಕ್ಕೆ ಸಾಧ್ಯವಿಲ್ಲ. ಅದನ್ನು ಸಾಂಸ್ಥೀಕರಿಸಬಹುದು. ಆದರೆ ಅದೇ ಧರ್ಮವಲ್ಲ. ಧರ್ಮ ಪ್ರತಿ ವ್ಯಕ್ತಿಯ ಬದುಕಿನಲ್ಲಿ ವ್ಯಾಪಿಸಿಕೊಂಡು ಅವನ ಸ್ವಭಾವವನ್ನು ರೂಪಿಸುವಂತಹ ಅವನ ಕ್ರಿಯೆ ಮತ್ತು ಪ್ರತಿಕ್ರಿಯೆನ್ನು ಅವು ಆಸಕ್ತಿ-ನಿರಾಸಕ್ತಿಯನ್ನು ನಿರ್ಧರಿಸುವಂತಹ ಒಂದು ಪ್ರಭಾವ ಅಥವಾ ಒಂದು ಶಕ್ತಿ. ಈ ಇಷ್ಟಾನಿಷ್ಟಗಳು ಕ್ರಿಯೆ-ಪ್ರತಿಕ್ರಿಯೆ ಇವುಗಳು ತೊರಿದು ಹಾಕಿ ಬಿಡಬಹುದಾದ ಸಂಸ್ಥೆಗಳಲ್ಲ. ಅವುಗಳನ್ನು ನಿಯಂತ್ರಿಸುವ ಹಾಗೂ ನಿಷ್ಫಲಗೊಳಿಸುವುದರಿಂದ ಅಷ್ಟೇ ಎದುರಿಸಬಹುದಾದಂತ ಪ್ರಭಾವಿ ಅಥವಾ ಶಕ್ತಿ ಅವುಗಳದಾಗಿದೆ. ಸಾಮಾಜಿಕ ಶಕ್ತಿಗಳು ರಾಜಕೀಯವನ್ನು ಕಲುಷಿತಗೊಳಿಸಿದಂತೆ ಮತ್ತು ಕೆಲವೇ ಮಂದಿಯ ಅಧಿಕಾರವನ್ನು ಹೆಚ್ಚಿಸಿದಂತೆ ಆ ಮೂಲಕ ಬಹುಸಂಖ್ಯಾತರ ಅವನತಿಗೆ ಕಾರಣವಾಗದಂತೆ ಅವುಗಳನ್ನು ನಿಯಂತ್ರಿಸಬೇಕು. ಎಂದಾದಲ್ಲಿ ಈ ಸಾಮಾಜಿಕ ಶಕ್ತಿಗಳನ್ನು ಸಡಿಲಬಿಟ್ಟಲ್ಲಿ ಅವು ಉಂಟುಮಾಡಬಹುದಾದ ಪೂರ್ವಗ್ರಹಗಳನ್ನು ಎದುರಿಸಬಲ್ಲಂಥ ಹಾಗೂ ಅನ್ಯಾಯಗಳನ್ನು ತೊಡೆದು ಹಾಕುವಂತಹ ತಂತ್ರಗಳನ್ನು ಒಳಗೊಂಡಿರುವ ರಾಜಕೀಯ ರಚನೆಯನ್ನು ರೂಪಿಸಬೇಕು.[೫]

ದಲಿತರು ಎಂದರೆ ಯಾರು?

'ದಲಿತರು' ಎಂದರೆ ಯಾರು? ಎಂಬ ಅಭಿಪ್ರಾಯಕ್ಕೆ ಸ್ಪಷ್ಟೀಕರಣ ನೀಡುತ್ತಾ ಅನೇಕ ಚಿಂತಕರ ಅಭಿಪ್ರಾಯವನ್ನು ದಾಖಲಿಸಿದ್ದಾರೆ. 'ದಲಿತ' ಎಂಬ ಪದ ಈಗಾಗಲೇ ಸಾಕಷ್ಟು ವಿವಾದಕ್ಕೆ ಒಳಗಾಗಿದ್ದರೂ ಅನೇಕ ವಿದ್ವಾಂಸರು ಅನೇಕ ರೀತಿಯ ವ್ಯಾಖ್ಯಾನ ಮಾಡಿದ್ದಾರೆ. ಜಾತಿಯತೆಯಿಂದ ಸಾಮಾಜಿಕವಾಗಿ ಆರ್ಥಿಕ 'ದಲಿತರು' ಎಂದು ಕರೆಯಬಹುದು. ದಲಿತ ಎಂಬುದು ಸಂಸ್ಕೃತ ಶಬ್ದದ 'ದಲ' ಎಂಬ ಮೂಲಧಾತುವಿನಿಂದ ಬಂದಿದೆ. 'ದಲ' ಎಂದರೆ ಚೂರು, ತುಂಡು, ಕತ್ತಿಯ ಒರೆ, ಹುಲ್ಲಿನ ಎಸಳು, ಎಲೆ ಎಂದು ಅರ್ಥ ಇದೆ. ಅಂದರೆ ಅನ್ಯಾಯಕ್ಕೆ ಒಳಗಾದವರು ವಿನಾಶಕ್ಕೆ ಒಳಗಾದವರು, ನುಚ್ಚುನೂರಾದವರು, ದಿಕ್ಕಾಪಾಲಾದವರು, ವರ್ಣಾಶ್ರಮ ಧರ್ಮದ ಮೇಲೆ ನಿರ್ಮಿತಗೊಂಡ ಈ ಹಿಂದೂ ಸಮಾಜದಲ್ಲಿನ ಜಾತಿಯತೆಯಿಂದ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳಿಂದ ವಂಚಿತರಾದವರು ನಿಜವಾದ ದಲಿತರು.

ಡಾ. ಬಿ.ಎ. ವಿವೇಕ್ ರೈ ಅವರ ಪ್ರಕಾರ "ಅಸ್ಪೃಶ್ಯರೆ ದಲಿತರು ಸಮಾಜದ ನಾಲ್ಕು ವರ್ಣಗಳಿಂದ ಹೊರಗಿನ ಪಂಚಮರೆ ದಲಿತರು." ಅದೇ ರೀತಿಯಾಗಿ ಡಾ. ಅರವಿಂದ ಮಾಲಗತ್ತಿ ಅವರ ಪ್ರಕಾರ "ಶತಮಾನಗಳಿಂದ ಜನಸಮುದಾಯದಲ್ಲಿ ಆರ್ಥಿಕ ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಮತ್ತು ಸಾಂಸ್ಕೃತಿಕವಾಗಿ ಶೋಷಣೆಗೆ ಒಳಗಾದವರು ದಲಿತರು."

ಡಾ. ಸಿದ್ಧಲಿಂಗಯ್ಯ ಅವರ ಪ್ರಕಾರ "ಆತ ದಲಿತನಾಗಿ ಹುಟ್ಟಿರಬೇಕು. ದಲಿತರ ಬಗ್ಗೆ ಅನುಕಂಪವುಳ್ಳವನಾಗಿರಬೇಕು. ಇದರ ಜೊತೆಗೆ ಆತ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಧಾರ್ಮಿಕವಾಗಿ ಶೋಷಿಸಲ್ಪಟ್ಟ ಆ ಶೋಷಣೆಯ ಪ್ರಜ್ಞೆಯು ಅವನಿಗಿರಬೇಕು. ತಾನಿರುವ ಮಿತಿಯೊಳಗಿಂದ ಹೊರಬಂದು ಉಳಿದವರಿಗೆ ಇರುವ ಹಕ್ಕುಗಳೆಲ್ಲವನ್ನು ಪಡೆದುಕೊಳ್ಳಲು

ಹೋರಾಡಲು ಸಿದ್ಧನಿರಬೇಕು. ಯಾರಿಗೆ ಶೋಷಣೆಯ ಪ್ರಜ್ಞೆ ಇಲ್ಲವೋ ಯಾರಲ್ಲಿ ಹೋರಾಟದ ಮನೋಭಾವನೆ ತಣ್ಣಗಿರುತ್ತದೆಯೋ ಅವರ್ಯಾರು ದಲಿತರಲ್ಲ."

ಚಾಂಡಾಳ ಅವರ ಪ್ರಕಾರ ದಲಿತರೆಂದರೆ "ಅಸ್ಪೃಶ್ಯ ಜಾತಿಗಳಾದ ಹೊಲೆಯ ಮತ್ತು ಮಾದಿಗರನ್ನು ಕೇಂದ್ರೀಕರಿಸಿ ಹೇಳಲಾಗುತ್ತಿತ್ತು." ಆದರೆ ಅದು ಬರುಬರುತ್ತಾ ಅದು ತನ್ನ ವ್ಯಾಪ್ತಿಯನ್ನು ಸಾಮಾಜಿಕವಾಗಿ ಅವಮಾನಗೊಂಡವರೆಲ್ಲರನ್ನು ದಲಿತರು ಎಂದು ಪರಿಭಾವಿಸಿ ಕೊಳ್ಳಲಾಗಿದೆ. ಒಟ್ಟಾರೆಯಾಗಿ ದಲಿತ ಎಂಬ ಪದವು ಪ್ರಾರಂಭದಲ್ಲಿ ಕೇವಲ ಅಸ್ಪೃಶ್ಯರಿಗೆ ಸಿಮೀತವಾಗಿದ್ದ ಪದ ಕಾಲಾಂತರದಲ್ಲಿ ಸಮಾಜದ ಎಲ್ಲಾ ಜನರನ್ನು ಒಳಗೊಳ್ಳುವಂತೆ ಮಾಡಿದ್ದು ಆ ಪದದಲ್ಲಿರುವ ಅಂತಃಶಕ್ತಿಯೇ ಕಾರಣವೆಂದು ಹೇಳಬಹುದು.[೬]

'ದಲಿತ' ಎಂಬ ಪದವು 'ದಲ' ಎಂಬ ಮೂಲಧಾತುವಿನಿಂದ ಬಂದಿದೆ. "ದಲಿತರು ಎಂದರೆ ದಮನಕ್ಕೆ ಒಳಗಾದವರು" ಎಂಬ ಅರ್ಥ ನೀಡುತ್ತದೆ. ಈ ಪದವನ್ನು ಮೊದಲು ಪ್ರಯೋಗಿಸಿದರವರು ಮಹಾರಾಷ್ಟ್ರದ ಜ್ಯೋತಿ ಬಾ ಪುಲೆ ಭಾರತದ ಶ್ರೇಣೀಕೃತ ಜಾತಿವ್ಯವಸ್ಥೆ ವಿರುದ್ಧ ಸಂಘಟನಾತ್ಮಕ ಹೋರಾಟ ನಡೆಸಿ. ದಲಿತ ಪ್ರಜ್ಞೆಗೆ ಭಾರ ಹಾಕಿದವರು ನಂತರ ಬಿ.ಆರ್. ಅಂಬೇಡ್ಕರ್ ಅವರು ದಲಿತರೆಂದರೆ ನಿಮ್ನ ವರ್ಗದವರು. ಬಲಹೀನ ವರ್ಗಗಳು ಮತ್ತು ದಮನಕ್ಕೆ ಶೋಷಣೆಗೆ ಒಳಗಾದವರು, ಅಸ್ಪೃಶ್ಯರು ಪಂಚಮರು ಎಂದು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದರು. ಮತ್ತು ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿ ಯಶಸ್ವಿಯಾದವರು ಇದನ್ನೇ ಗಾಂಧೀಜಿಯವರು ಹರಿಜನ ಎಂಬ ಪದವನ್ನು ಒಳಕ್ಕೆ ತಂದರು. ಆದರೆ ಅಂಬೇಡ್ಕರ್ ಅವರು ಈ ಪದದ ಬಳಕೆಯನ್ನು ವಿರೋಧಿಸಿದರು. ಆ ಪದದ ಬಳಕೆ ಅಸ್ಪೃಶ್ಯರಲ್ಲಿ ಕೀಳರಿಮೆಯನ್ನು ಇನ್ನಷ್ಟು ಹೆಚ್ಚಾಗಲು ಕಾರಣವಾಗಿತ್ತು. ಆದ್ದರಿಂದಲೇ ಬಿ.ಆರ್.ಅಂಬೇಡ್ಕರ್‌ರು ಈ ಪದವನ್ನು ತಿರಸ್ಕರಿಸಿದರು. ೧೯೩೫ರಲ್ಲಿ ಬ್ರಿಟಿಷ್ ಸರ್ಕಾರ ಒಂದು ಅಧಿನಿಯಮ ಹೊರಡಿಸಿ ಅವಕಾಶವಂಚಿತ ಜಾತಿಗಳ ಯಾದಿಯನ್ನು ಸಿದ್ಧಪಡಿಸಿತು. ಅವುಗಳನ್ನು ಪರಿಶಿಷ್ಟ ಜಾತಿಗಳೆಂದು ಕರೆಯಲಾಯಿತು. ಸ್ವಾತಂತ್ರ್ಯ ನಂತರ ರಚನೆಯಾದ ಸಂವಿಧಾನದಲ್ಲಿ ಅವಕಾಶವಂಚಿತ ಪರಿಶಿಷ್ಟ ಜಾತಿಗಳನ್ನು ಮತ್ತು ಪರಿಶಿಷ್ಟ ಪಂಗಡಗಳನ್ನು ಎರಡು ಪ್ರತ್ಯೇಕ ಯಾದಿಗಳಲ್ಲಿ ವಿಂಗಡಿಸಿ ಸಂವಿಧಾನದಲ್ಲಿ ಸೇರಿಸಲಾಯಿತು. ಸಂವಿಧಾನದ ೩೪೧ನೇ ಪರಿಚ್ಛೇದದಲ್ಲಿ ಸೇರಿಸಲಾದ ಜಾತಿಗಳು ಪರಿಶಿಷ್ಟ ಜಾತಿಗಳೆಂದು ೩೪೨ ಪರಿಚ್ಛೇದದಲ್ಲಿ ಸೇರಿಸಲ್ಪಟ್ಟ ಪಂಗಡಗಳನ್ನು ಬುಡಕಟ್ಟುಗಳನ್ನು ಪರಿಶಿಷ್ಟ ಪಂಗಡಗಳೆಂದು ಕರೆಯಲಾಯಿತು. ಪರಿಶಿಷ್ಟ ಪಂಗಡಗಳನ್ನು ಅವರ ವಿಭಿನ್ನ ಭಾಷೆ, ಸಂಸ್ಕೃತಿಯ ಲಕ್ಷಣಗಳಿಂದ ಗುರುತಿಸಲಾಗುತ್ತಿದೆ. ೧೯೭೭ರಲ್ಲಿ ಜಾತಿಗಳ, ಜನಸಂಖ್ಯೆ ಆಧಾರದ ಮೇಲೆ ಮೀಸಲಾತಿ ನಿಗದಿಪಡಿಸಲಾಯಿತು. ಅದರ ಪ್ರಕಾರ ಕರ್ನಾಟಕದಲಲಿ ೧೦೧ ಪರಿಶಿಷ್ಟ ಜಾತಿಗಳೂ ಹಾಗೂ ೫೦ ಪರಿಶಿಷ್ಟ ಪಗಂಡಗಳಿವೆ. ಒಂದು ಕಾಲದಲ್ಲಿ ದಲಿತರು ಎಂದರೆ ಅಸ್ಪೃಶ್ಯ(ಹೊಲೆ, ಮಾದಿಗರು)ರಿಗೆ ಸಿಮೀತವಾಗಿದ್ದ ಪದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳನ್ನು ದಾಟಿ ಹಿಂದುಳಿದ

ವರ್ಗಗವನ್ನು ತಲುಪಿದೆ. ಹಿಂದೆ ದಲಿತರೆಂದರೆ ಸಾಮಾಜಿಕವಾಗಿ ಹಿಂದುಳಿದವರು ಎಂಬ ಭಾವನೆ ಇತ್ತು. ಆದರೆ ಈಗ ಆರ್ಥಿಕವಾಗಿ ಹಿಂದುಳಿದವರು ಎಂಬ ಅರ್ಥವನ್ನು ನೀಡುತ್ತಿದ್ದಾರೆ. ಅವಕಾಶ, ಅಧಿಕಾರವನ್ನು ಬಿಟ್ಟುಕೊಡದ ಮೇಲ್ಜಾತಿಯವರು ನಾವು ದಲಿತರು ಎಂಬ ವಾದವನ್ನು ಮಂಡಿಸುತ್ತಿದ್ದಾರೆ. ಇದೇ ಮನಸ್ಸುಗಳು ಹಿಂದಿನಿಂದಲೂ ಇಂತಹ ವಿತಂಡವಾದದಿಂದ ದಲಿತರಿಗೆ ಅವಕಾಶ ತಪ್ಪಿಸಿ ಅಧಿಕಾರದಿಂದ ದೂರ ಇಡಲು ಪ್ರಯತ್ನ ಮಾಡುತ್ತಾ ಬಂದಿದ್ದಾರೆ. ಇದನ್ನು ದಲಿತರು ಪ್ರಜ್ಞಾಪೂರ್ವಕವಾಗಿ ವಿವೇಚಿಸಿ ತೀರ್ಮಾನ ತೆಗೆದುಕೊಂಡು ಅಧಿಕಾರ ಹಂಚಿಕೆಯನ್ನು ಜನಸಂಖ್ಯೆಯ ಅನುಗುಣವಾಗಿ ವಿತರಣೆಯಾಗಲು ಒತ್ತಾಯ ಮಾಡಬೇಕಾಗಿದೆ.[೭]

ದಲಿತ ಪದದ ಬಗ್ಗೆ ಅನೇಕ ರೀತಿಯ ಗೊಂದಲ ಉಂಟಾಗಿರುವುದರಿಂದ ಇದನ್ನು ಸ್ಪಷ್ಟಿಕರೀಸುವ ಅಗತ್ಯವಿದೆ. ದಲಿತ ಎಂಬುದು ಜಾತಿ ಸೂಚಕವಾಗಿ ಮತ್ತು ವರ್ಗ ಸೂಚಕವಾಗಿ ಬಳಕೆಯಾಗುತ್ತಿರುವ ಪದವಾದರೂ ಈ ಎರಡು ಸೂಚಿಗಳಾಚೆಗೆ ದಲಿತರೆಂದರೆ ಕ್ರಾಂತಿಯ ಸಂಕೇತ. ಒಬ್ಬ ದಲಿತ ಈ ದೇಶದ ಶೋಷಿತ ವ್ಯಕ್ತಿಯನ್ನು ಸಂಕೇತಿಸುತ್ತಾನೆ. ಒಂದು ಸಾಂಸ್ಕೃತಿಕ ಅಸ್ಮಿತೆ(ಐಡೆಂಟಿಟಿ)ಯನ್ನು ಸಾಧಿಸುವ ಆ ಮೂಲಕ ಸಾಮಾಜಿಕ ರಚನೆಯಲ್ಲಿ ಒಂದು ಅಮೂಗ್ರ ಬದಲಾವಣೆಯನ್ನು ತರುವ ಉದ್ದೇಶ ದಲಿತನದ್ದು.

ಕರ್ನಾಟಕದಲ್ಲಿ ದಲಿತ ಪದವನ್ನು ಬಳಸಿ ಚಲಾವಣೆಗೆ ತಂದವರು ದಲಿತ ಕ್ರಿಯಾ ಸಮಿತಿಯವರು. ದಲಿತರು ಎಂಬ ಪದವನ್ನು ಹಲವು ವಿದ್ವಾಂಸರು ಅನೇಕ ರೀತಿಯಲ್ಲಿ ವ್ಯಾಖ್ಯಾನಿಸುತ್ತಾ ಬಂದಿರುವುದು ಕಂಡುಬರುತ್ತದೆ. ದಲಿತರ ಎಂದರ ಹಿಂಸೆಗೆ ಒಳಗಾದ, ದಲನಕ್ಕೆ ಒಳಗಾದ, ಶೋಷಣೆಗೆ ಒಳಗಾದ ಎಂಬುದರಿದಂ ಹಿಡದು ಅದೊಂದು ಜೀವನ ಪದ್ಧತಿಯನ್ನುವವರೆಗೆ ಅದರ ಅರ್ಥಗಳನ್ನು ವಿಸ್ತರಿಸಲಾಗಿದೆ. 'ದಲ' ಎಂಬ ಸಂಸ್ಕೃತ ಶಬ್ದದಿಂದ ಬಂದದು. ದಲಿತ ದಲದ ದಲನಕ್ಕೆ ಒಳಗಾದವರು. ದಲಿತರು ದಲ ಎಂದರೆ ಚೂರು, ತುಂಡು, ಭಾಗ, ಛಿದ್ರವಾದವರು, ದಲನ ಕ್ರಿಯೆಗೆ ಒಳಗಾದವರು ಯಾರು ಶೋಷಿತರೋ ಅವರೇ ದಲಿತರು.

ದಲಿತ ಪದವನ್ನು ದೇವಯ್ಯ ಹರವೆ ಹೀಗೆ ವ್ಯಾಖ್ಯಾನಿಸುತ್ತಾರೆ. ಅಸ್ಪೃಶ್ಯ ಜನಾಂಗಕ್ಕೆ ಇಂಡಿಯಾದ್ಯಾಂತ ಹೊಂದಿಕೆಯಾಗಬಹುದಾದ ಒಂದೇ ಒಂದು ಪದ ದಲಿತ ಎಂಬುದು ಮಾತ್ರ (ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು) ವಿ. ಮುನಿವೆಂಕಟಪ್ಪ ಹೀಗೆ ವ್ಯಾಖ್ಯಾನಿಸುತ್ತಾರೆ. ದಲಿತ ಎಂದರೆ ಯಾರು ಹುಟ್ಟಿನಿಂದ ಅಸ್ಪೃಶ್ಯರಾಗಿದ್ದು. ನಿರಂತರವಾಗಿ ದಲಿತ ಮನೋಧರ್ಮವನ್ನು ಮೈಗೂಡಿಸಿಕೊಂಡು ದಲಿತರ ಕಾಳಜಿಯನ್ನು ಕಾಯ್ದುಕೊಳ್ಳುತ್ತಾರೋ ಅವರೇ ದಲಿತ.

'ದಲಿತ' ಎಂಬ ಪದ ಕನ್ನಡಕ್ಕೆ ಮರಾಠಿ ದಲಿತ ಸಾಹಿತ್ಯಗಳಿಂದ ಬಂದದು ದಲಿತ ಪ್ಯಾಂಥರ್ಸ್ ಸಂಘಟನೆಗಳನ್ನು ಪ್ರಾರಂಭಿಸುವ ಮೂಲಕ ದಲಿತ ಪದವನ್ನು ಬಳಕೆಗೆ ತಂದರು. ಡಾ. ಅಂಬೇಡ್ಕರ್ ಈ ಶಬ್ದವನ್ನು ಪರಿಶಿಷ್ಟ ಜಾತಿ ಸಮುದಾಯವನ್ನು ಸ್ಪಷ್ಟವಾಗಿ ಗುರುತಿಸುವ ನಿಟ್ಟಿನಲ್ಲಿ ದಲಿತ ಶಬ್ದವನ್ನು ಮೊದಲಿಗೆ ಹುಟ್ಟು ಹಾಕಿದರು. ಆ ನಂತರ ಇದು ಅಂಗೀಕರಿಸಲ್ಪಟ್ಟು

ವ್ಯಾಪಕವಾಗಿ ಬಳಕೆಗೆ ಬಂತು. ಯಾರು ಶೋಷಣೆಗೆ ಒಳಪಡುತ್ತಾರೋ ಅವರೆ ದಲಿತರು. ದಲಿತ ಎಂಬುದು ಎಲ್ಲಾ ಶೋಷಿತರನ್ನು ಒಳಗೊಳ್ಳುವಂತದ್ದು. ಅಸ್ಪೃಶ್ಯರು, ಗ್ರಾಮಜೀವಿಗಳು, ಭೂಹೀನರು, ಕೃಷಿಕಾರ್ಮಿಕರು, ಅದಿವಾಸಿಗಳು, ಮುಸ್ಲಿಂರು, ಶೋಷಣೆಗೆ ಒಳಗಾದ ಮಹಿಳೆಯರು, ಇಂಥಾ ತುಳಿತಕ್ಕೊಳಗಾದವರೇ ದಲಿತರು ಎಂಬುದು ದಲಿತ ಪ್ಯಾಂಥರ್ಸ್‌ನ ವ್ಯಾಖ್ಯಾನ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ನಿರಂತರವಾಗಿ ಶೋಷಣೆಗೊಳಗಾದವರೇ ದಲಿತರೆಂಬ ಭಾವನೆಯೇ ಎಲ್ಲಡೆ ಇರುವಂಥದ್ದು.

ಕರ್ನಾಟಕದಲ್ಲಿನ ಕೋಲಾರ ಜಿಲ್ಲೆಯಲ್ಲಿ ದಲಿತ ಸಂಘರ್ಷ ಸಮಿತಿ ಹಲವು ಹೋರಾಟಗಳನ್ನು ನಡೆಸಿ, ಮನೆಮಾತಾಯಿತು. ೧೯೭೯ರಲ್ಲಿ ನಡೆದ ಮಾಲೂರು ತಾಲೂಕಿನ ಹುಣಿಸೇಕೋಟೆ ಗ್ರಾಮದ ಶೇಷಗಿರಿಯಪ್ಪನ ಕೊಲೆ ಪ್ರಕರಣವನ್ನು ಯಶಸ್ವಿಯಾಗಿ ನಡೆಸಿ ಕೊಲೆಗಡಕುರನ್ನು ಜೈಲಿಗೆ ಹಾಕಿಸಿದ ಕೀರ್ತಿ ದಲಿತ ಸಂಘರ್ಷ ಸಮಿತಿಗೆ ಬಂತು. ಅದೇ ರೀತಿಯಾಗಿ ಗೌರಿಬಿದನೂರು ತಾಲೂಕಿನ ಎಚ್.ನಾಗಸಂದ್ರದ ಭೂಹೋರಾಟ ದೊಡ್ಡ ಪ್ರಮಾಣದ ಹೋರಾಟವಾಗಿತ್ತು.

ನಂತರ ಕೋಲಾರ ಜಿಲ್ಲೆ ಕೋಲಾರ ತಾಲೂಕಿನ ಹರಟಿಗ್ರಾಮದಲ್ಲಿ ದಲಿತನಿಗೆ ಮಲ ತಿನ್ನಿಸಿದರ ಪ್ರಕರಣ ನೋಡಬಹುದು. ಅದೇ ರೀತಿಯಾಗಿ ಕೋಲಾರ ಜಿಲ್ಲೆ ಕೋಲಾರ ತಾಲೂಕಿನ ಬೆಳ್ಳಂಬರಿ ಭೂ ಹೋರಾಟ ದಲಿತರ ಜಮೀನನ್ನು ಜೋಡಿಯಾಗಿಸಿಕೊಂಡಿದ್ದನ್ನು ಬಿಡಿಸಿದ್ದು. ಅದೇ ಸಾಲಿನಲ್ಲಿ ಶ್ರೀನಿವಾಸಪುರ ತಾಲೂಕು ಮರಸನಲ್ಲಿಯ ದಲಿತರ ಬದುಕಿಗಾಗಿ ನಡೆಸಿದ ಭೂ ಹೋರಾಟ, ಮರಸಪಲ್ಲಿಯಿಂದ ಕೋಲಾರ ಜಿಲ್ಲಾ ಕಚೇರಿವರೆಗೆ ಕಾಲ್ನಡಿಗೆ ಜಾತಿ ನಡೆಸಿತು.

ಕೋಲಾರ ಅವಿಭಜಿತ ಜಿಲ್ಲೆ ಚಿಕ್ಕಬಳ್ಳಾಪುರ, ಚಿಂತಾಮಣಿ ತಾಲೂಕಿನ ಕಂಬಾಲಪಲ್ಲಿ ೭ ಮಂದಿ ಚಿಕಿತ್ಸೆಯಲ್ಲಿ ಒಬ್ಬರು ಸಜೀವ ದಹನ ಇತಿಹಾಸದಲ್ಲಿ ದಾಖಲಾಗುವಂತ ನರಮೇಧ ಪ್ರಕರಣಗಳ ವಿರುದ್ಧ ಧ್ವನಿ ಎತ್ತಿ ದಲಿತರಿಗೆ ರಕ್ಷಣೆ ನೀಡಿದ ಕೀರ್ತಿ ದಲಿತ ಸಂಘರ್ಷ ಸಮಿತಿಗೆ ಸಲ್ಲಬೇಕಾಗುತ್ತದೆ.[೮]

ದಲಿತರ ರಕ್ಷಣೆಗಾಗಿರುವ ಕಾನೂನುಗಳು

ಭಾರತದ ಸಂವಿಧಾನವು ಭಾರತದ ಪ್ರತಿಯೊಬ್ಬ ಪ್ರಜೆಯು ಹಕ್ಕುಗಳ ವಿಭಾಗದಲ್ಲಿ (ವಿಭಾಗ-III) ಎಲ್ಲ ಪೌರರಿಗೂ ಪ್ರಾಥಮಿಕವಾದ ಮೂಲಭೂತ ಸ್ವಾತಂತ್ರ್ಯ, ನಾಗರೀಕ ಮತ್ತು ರಾಜಕೀಯ ಹಕ್ಕುಗಳನ್ನು ಖಾತರಿ ಮಾಡುವುದರ ಜೊತೆಗೆ ಜಾತಿ ತಾರತಮ್ಯದ ಆಚರಣೆಗಳನ್ನು ತೊಡೆದು ಹಾಕುವುದಕ್ಕೆ ವಿಶೇಷ ಒತ್ತು ನೀಡಿದೆ.

೧. ಅನುಚ್ಛೇದ ೧೫ : ಯಾವುದೇ ನಾಗರಿಕರನ್ನು ಜಾತಿಯ ಕಾರಣದಿಂದ ತಾರತಮ್ಯಕ್ಕೆ ಗುರಿ ಮಾಡುವುದನ್ನು, ಅದೇ ಆಧಾರದ ಮೇಲೆ ಅಂಗಡಿಗಳ ಸಾರ್ವಜನಿಕ ಉಪಹಾರ ಗೃಹಗಳ, ಹೋಟೆಲ್‌ಗಳ, ಸಾರ್ವಜನಿಕ ಮನೋರಂಜನಾ ಸ್ಥಳಗಳ ಪ್ರವೇಶವನ್ನು ಸ್ಥಳಗಳ ಪ್ರವೇಶ ನಿರಾಕರಿಸುವುದನ್ನು ನಿಷೇಧಿಸಿದೆ.

೨. ಅನುಚ್ಛೇದ ೧೬ : ಪ್ರಭುತ್ವದ ಯಾವುದೇ ಹುದ್ದೆಗೆ ನಿಯೋಜನೆ ಮಾಡಿಕೊಳ್ಳುವಾಗ ಜಾತಿ ಅಥವಾ ಹುಟ್ಟಿನ ಮೂಲವನ್ನು ಪರಿಗಣಿಸಿ ತಾರತಮ್ಯ ಮಾಡುವುದನ್ನು ನಿಷೇಧಿಸಿದೆ.

೩. ಅನುಚ್ಛೇದ ೧೭ : ಅಸ್ಪೃಶ್ಯತೆಯನ್ನು ನಿರ್ಮೂಲನೆಗೊಳಿಸುತ್ತದೆ ಮತ್ತು ಯಾವುದೇ ರೂಪದಲ್ಲಿ ಅದರ ಆಚರಣೆಯನ್ನು ನಿಷೇಧಿಸುತ್ತದೆ.

೪. ಅನುಚ್ಛೇದ ೨೩ : ಜಾತಿಯ ಆಧಾರದ ಮೇಲೆ ಬಲಾಥ್ಯರಾಗಿ ದುಡಿಮೆ ಮಾಡಿಸುವುದನ್ನು ನಿಷೇಧಿಸಿದೆ. ಜೊತೆಗೆ ಸಾರ್ವಜನಿಕ ಉದ್ದೇಶಗಳಿಗಾಗಿ ಪ್ರಭುತ್ವವು ಕಡ್ಡಾಯ ಸೇವೆಯನ್ನು ವಿಧಿಸಿದಾಗ ಜಾತಿಯ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡುವುದನ್ನು ನಿಷೇಧಿಸುತ್ತದೆ.

೫. ಅನುಚ್ಛೇದ ೨೯ (೨): ಯಾವುದೇ ಶೈಕ್ಷಣಿಕ ಸಂಸ್ಥೆಯು ಜಾತಿಯ ಆಧಾರದ ಮೇಲೆ ಪ್ರವೇಶವನ್ನು ನಿರಾಕರಿಸುವುದನ್ನು ನಿಷೇಧಿಸಿದೆ.

೬. ಈ ಹಿಂದೆ ಅಸ್ಪೃಶ್ಯರಿಗಾಗಿರುವ ಐತಿಹಾಸಿಕ ಅನ್ಯಾಯವನ್ನು ಸರಿಪಡಿಸುವ ಉದ್ದೇಶದಿಂದ ಕೆಲವು ಪ್ರಗತಿಪರವಾದ ಕರ್ತವ್ಯಗಳನ್ನು ಪ್ರಭುತ್ವಕ್ಕೆ ವಿಧಿಸಲಾಗಿದೆ.

೭. ಅನುಚ್ಛೇದ ೧೫ (೪): ಅನುಸೂಚಿತ ಜಾತಿ ಮತ್ತು ಬುಡುಕಟ್ಟಿಗೆ ಸೇರಿದವರನ್ನು ಒಳಗೊಂಡಂತೆ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಯಾವುದೇ ನಾಗರೀಕರನ ಅಭಿವೃದ್ಧಿ, ರಾಜ್ಯವು ಯಾವುದೇ ವಿಶೇಷ ಕ್ರಮಕೈಗೊಳ್ಳಲು ಅನುಮತಿ ನೀಡಿದೆ.

೮. ಅನುಚ್ಛೇದ ೧೬ (೪): ಯಾವುದೇ ಹಿಂದುಳಿದ ವರ್ಗದವರಿಗೆ ಪ್ರಭುತ್ವದ ಅಧೀನದಲ್ಲಿರುವ ಸೇವೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯವಿಲ್ಲವೆಂದು ಸರ್ಕಾರವು ಅಭಿಪ್ರಾಯಪಟ್ಟಲ್ಲಿ ಅಂಥವರಿಗಾಗಿ ನೇಮಕಾತಿಗಳಲ್ಲಿ ಹುದ್ದೆಗಳನ್ನು ಮೀಸಲಾಗಿಡುವುದಕ್ಕಾಗಿ ಪ್ರಭುತ್ವವೂ ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳಲು ನೀಡಲಾಗಿದೆ.

೯. ಅನುಚ್ಛೇದ ೧೫ (೪) ಮತ್ತು ೧೬ (೪)ಗಳು: ಪ್ರಭುತ್ವವು ಹಿಂದುಳಿದವರಿಗೆ ಅನುಕೂಲವಾಗುವಂತೆ ತಾರತಮ್ಯವನ್ನು ಮಾಡುವಂಥ ಅಥವಾ ಹಿಂದುಳಿದವರನ್ನು ರಕ್ಷಿಸುವಂಥ ರಕ್ಷಣಾತ್ಮಕ ಅಥವಾ ಪರಿಹಾರಾತ್ಮಕ ಅಥವಾ ಸರಳವಾಗಿ ಹೇಳುವುದಾದರೆ ಪ್ರಭುತ್ವವು ವಂಚಿತರ ಪರವಾಗಿ ಸಕಾರಾತ್ಮಕ ತಾರತಮ್ಯ ನೀತಿಯನ್ನು ಅನುಸರಿಸುವುದನ್ನು ಎತ್ತಿಹಿಡಿಯುತ್ತದೆ. ವಾಸ್ತವವಾಗಿ ಪ್ರಭುತ್ವದ ನಿರ್ದೇಶನ ತತ್ವಗಳು ಅನುಚ್ಛೇದ ೪೬ರಲ್ಲಿ ಪ್ರಭುತ್ವವು ದುರ್ಬಲ ವರ್ಗಗಳ ವಿಶೇಷವಾಗಿ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಜನತೆಯ ಶೈಕ್ಷಣಿಕ ಮತ್ತು ಆರ್ಥಿಕ ಮತ್ತು ಹಿತಾಸಕ್ತಿಗಳನ್ನು ವಿಶೇಷ ಜಾಗರೂಕತೆಯಿಂದ ವೃದ್ಧಿಗೊಳಿಸುತ್ತಿದ್ದು ಮತ್ತು ಎಲ್ಲರನ್ನು ಎಲ್ಲ ಬಗೆಯ ಸಾಮಾಜಿಕ ಅನ್ಯಾಯಗಳಿಂದ ಮತ್ತು ಎಲ್ಲ ರೀತಿಯ ಶೋಷಣೆಯಿಂದ ಸಂರಕ್ಷಿಸತಕ್ಕದ್ದು ಎಂದು ಸೂಚಿಸಲಾಗಿದೆ. ಆದರೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವ ವಿಷಯವೆಂದರೆ ಈ ಆಶಯಗಳನ್ನು ಜಾರಿಗೆ ತರುವಾಗ

ಆಡಳಿತಾಂಗದ ಸಾಮರ್ಥ್ಯವನ್ನು ರಾಜಿಮಾಡಿಕೊಳ್ಳದಂತೆ ಎಚ್ಚರಿಕೆ ವಹಿಸಿಕೊಳ್ಳತಕ್ಕದ್ದು ಎಂದು ಹೇಳಲಾಗಿದೆ. ಅನುಚ್ಛೇದ-೧(೩೫೫)ನ್ನು ಓದಿಗೆ ಗಮನಿಸಬಹುದು.[೧೦]

೧೯೫೧ರ ಜನವರಿ ೨೬ರಂದು ಸ್ವತಂತ್ರ ಭಾರತ ಗಣರಾಜ್ಯವಾಯಿತು. ನಮ್ಮ ಸಂವಿಧಾನವು ಅಸ್ಪೃಶ್ಯತೆಯನ್ನು ನಿರ್ಮೂಲನೆಗೊಳಿಸುವುದಾಗಿ ಘೋಷಿಸಿದಲ್ಲದೆ ಅದನ್ನು ಯಾವುದೇ ರೀತಿಯಲ್ಲಿ ಆಚರಣೆಗೆ ತಂದಲ್ಲಿ ಶಿಕ್ಷಾರ್ಹ ಅಪರಾಧವಾಗುತ್ತದೆ ಎಂಬುದಾಗಿ ಆದೇಶಿಸಿತು. ಅಸ್ಪೃಶ್ಯತೆಯನ್ನು ಬೋಧಿಸುವ ಮತ್ತು ಆಚರಿಸುವ ಬಗ್ಗೆ ಮತ್ತು ಅದರಿಂದ ಉದ್ಭವಿಸುವ ಅನರ್ಹತೆಯನ್ನು ಒತ್ತಾಯಪೂರ್ವಕವಾಗಿ ಕಾರ್ಯರೂಪಕ್ಕೆ ತರುವ ಬಗ್ಗೆ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಶಿಕ್ಷೆಯನ್ನು ವಿಧಿಸುವ ಒಂದು ಕಾನೂನನ್ನು ತರಲಾಯಿತು. ಈ ಕಾನೂನಿನ ಹೆಸರೇ ಅಸ್ಪೃಶ್ಯತೆ. ಅಪರಾಧ ಕಾಯ್ದೆ ೧೯೫೫ ಈ ಕಾಯ್ದೆ ಜಾರಿಗೆ ಬಂದ ಪ್ರಾರಂಭದಿಂದಲೇ ಸಂಸತ್ತಿನ ಒಳಗಡೆ ಮತ್ತು ಹೊರಗಡೆ ಟೀಕೆಗೆ ಗುರಿಯಾಯಿತು. ಕಾಯ್ದೆಯಲ್ಲಿ ಸೂಚಿಸಿರುವ ಶಿಕ್ಷೆ ಸಮರ್ಪಕವಾಗಿಲ್ಲ.[೧೧]

ಶಿಕ್ಷೆಯನ್ನು ತಪ್ಪಿಸಿಕೊಳ್ಳಲು ಅವಕಾಶವಿದೆ ಎಂಬ ಟೀಕೆಗೆ ಗುರಿಯಾಯಿತು. ಇದರ ಪರಿಣಾಮವಾಗಿ ಭಾರತ ಸರ್ಕಾರ ಈ ಕಾಯ್ದೆಗೆ ತಿದ್ದುಪಡಿ ತಂದು ಅದಕ್ಕೆ ನಾಗರೀಕ ಹಕ್ಕುಗಳ ಅಧಿನಿಯಮ ೧೯೫೫ ಎಂದು ಬದಲಾಯಿಸಲಾಯಿತು.

೧. ನಾಗರಿಕ ಹಕ್ಕುಗಳು ಎಂದರೆ ಸಂವಿಧಾನದ ೧೭ನೇ ಅನುಚ್ಛೇದ ಮೂಲಕ ಅಸ್ಪೃಶ್ಯತೆಯ ನಿರ್ಮೂಲನೆಯ ಕಾರಣದಿಂದಾಗಿ ವ್ಯಕ್ತಿಗೆ ಪ್ರಾಪ್ತವಾಗುವ ಯಾವುದೇ ಹಕ್ಕು.

೨. ಹೋಟೆಲ್ ಎಂಬುದು ಉಪಹಾರ ಮಂದಿರವನ್ನು ಭೋಜನ ಗೃಹವನ್ನು, ವಸತಿಗೃಹವನ್ನು, ಕಾಫಿ ಮಂದಿರವನ್ನು ಮತ್ತು ಕೆಫೆಯನ್ನು ಒಳಗೊಳ್ಳುತ್ತದೆ.

೩. ಸ್ಥಳ ಎಂಬುದು ಮನೆಯನ್ನು ಕಟ್ಟಡವನ್ನು ಮತ್ತು ಇತರ ನಿರ್ಮಿತಿಯನ್ನು ಹಾಗೂ ಆವರಣವನ್ನು ಒಳಗೊಳ್ಳುತ್ತದೆ. ಡೇರೆಯನ್ನು ಮತ್ತು ನೌಕೆಯನ್ನ ಸಹ ಒಳಗೊಳ್ಳುತ್ತದೆ.

೪. ಸಾರ್ವಜನಿಕ ಮನರಂಜನೆಯ ಸ್ಥಳ ಎಂಬುದು ಸಾರ್ವಜನಿಕರಿಗೆ ಪ್ರವೇಶಾಧಿಕಾರವಿರುವ ಮತ್ತು ಮನೋರಂಜನೆಯನ್ನು ಒದಗಿಸಲಾಗುವ ಅಥವಾ ಮನೋರಂಜನೆಯನ್ನು ನಡೆಸಲಾಗುವ ಸ್ಥಳವನ್ನು ಒಳಗೊಳ್ಳುತ್ತದೆ. ಮನೋರಂಜನೆ ಎಂಬುದು ಯಾವುದೇ ಪ್ರದರ್ಶನವನ್ನು ಕಲಾ ನಿರ್ವಹಣೆಯನ್ನು ಆಟವನ್ನು ಮತ್ತು ಇತರ ಯಾವುದೇ ಬಗೆಯ ವಿನೋದವನ್ನು ಒಳಗೊಳ್ಳುತ್ತದೆ.

೫. ಸಾರ್ವಜನಿಕೆ ಪೂಜಾಸ್ಥಳ ಎಂದರೆ ಅದನ್ನು ಯಾವುದೇ ಹೆಸರಿನಿಂದ ಕರೆಯಲಿ ಸಾರ್ವಜನಿಕವಾದ ಧಾರ್ಮಿಕ ಪೂಜಾಸ್ಥಳವಾಗಿ ಉಪಯೋಗಿಸಲಾಗುವ ಅಥವಾ ಅದರಲ್ಲಿ ಯಾವುದೇ ಧರ್ಮವನ್ನು ಅನುಸರಿಸುವ ಅಥವಾ ಯಾವುದೇ ಧಾರ್ಮಿಕ ವರ್ಗಕ್ಕೆ ಅಥವಾ ಅವರ ಯಾವುದೇ ವಿಭಾಗಕ್ಕೆ ಸೆರಿದ ವ್ಯಕ್ತಿಗೆ ಸಾಮಾನ್ಯವಾಗಿ ಅರ್ಪಿತವಾಗಿರುವ ಅಥವಾ

ಸಾಮಾನ್ಯವಾಗಿ ಅವರು ಉಪಯೋಗಿಸುವ ಸ್ಥಳ ಮತ್ತು ಅಂತಹ ಯಾವುದೇ ಸ್ಥಳಕ್ಕೆ ಹೊಂದಿಕೊಂಡಿರುವ ಅಥವಾ ಲಗತ್ತಾಗಿರುವ ಎಲ್ಲ ಭೂಮಿಗಳನ್ನು ಮತ್ತು ಉಪ ಪೂಜಾಮಂದಿರಗಳನ್ನು, ಖಾಸಗಿ ಒಡೆತನದಲ್ಲಿದ್ದು ವಾಸ್ತವವಾಗಿ ಸಾರ್ವಜನಿಕ ಪೂಜಾಸ್ಥಳವಾಗಿ ಉಪಯೋಗಿಸಲು ಅಂಥಾ ಖಾಸಗಿ ಒಡೆತನದಲ್ಲಿರುವ ಪೂಜಾಸ್ಥಳಕ್ಕೆ ಹೊಂದಿಕೊಂಡಿದ್ದು, ಸಾರ್ವಜನಿಕವಾಗಿ ಧಾರ್ಮಿಕ ಪೂಜಾಸ್ಥಳವಾಗಿ ಉಪಯೋಗಿಸಲು ಅದರ ಒಡೆಯನು ಅನುಮತಿಸಿರುವ ಭೂಮಿಯನ್ನು ಅಥವಾ ಉಪ ಪೂಜಾಮಂದಿರವಾಗಿ ಒಳಗೊಳ್ಳುತ್ತದೆ.

"ನಿಯಮಿಸಲಾದದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು.

"ಅನುಸೂಚಿತ ಜಾತಿಗಳು" ಎಂಬುದಕ್ಕೆ ಸಂವಿಧಾನ ಸಂವಿಧಾನದ ೩೬೬ನೇ ಅನುಚ್ಛೇದದ ೨೪ನೇ ಖಂಡದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥ ಈ ಕೆಳಗಿನಂತಿರುತ್ತದೆ. ಅಂಗಡಿ ಎಂದರೆ ಸರಕುಗಳನ್ನು ಸಗುಟಾಗಿ ಅಥವಾ ಚಿಲ್ಲರೆಯಾಗಿ ಅಥವಾ ಸಗಟಾಗಿಯೂ ಮತ್ತು ಚಿಲ್ಲರೆಯಾಗಿಯೂ ಮಾರಲಾಗುವ ಯಾವುದೇ ಆವರಣ ಮತ್ತು ಇದು.

ಹೊತ್ತು ಮಾರುವವನು ಅಥವಾ ಮಾರಾಟಗಾರನು ಅಥವಾ ಸಂಚಾರಿ ವಾಹನದ ಮೂಲಕ ಅಥವಾ ಗಾಡಿಯ ಮೂಲಕ ಸರಕುಗಳನ್ನು ಮಾರುವ ಯಾವುದೇ ಸ್ಥಳವನ್ನು ಅಗಸನ ಅಂಗಡಿಯನ್ನು ಮತ್ತು ಕ್ಷೌರಿಕನ ಅಂಗಡಿಯನ್ನು, ಗ್ರಾಹಕರಿಗೆ ಸೇವೆ ಸಲ್ಲಿಸುವಾಗ ಇತರ ಯಾವುದೇ ಸ್ಥಳವನ್ನು ಒಳಗೊಳ್ಳುತ್ತದೆ. ಈ ಧಾರ್ಮಿಕ ಅನರ್ಹತೆಗಳನ್ನು ಒತ್ತಾಯಪೂರ್ವಕವಾಗಿ ಕಾರ್ಯರೂಪದಲ್ಲಿ ತರುವುದಕ್ಕೆ ದಂಡನೆ, ಯಾವುದೇ ವ್ಯಕ್ತಿಯ ಅಸ್ಪೃಶ್ಯತೆಯ ಕಾರಣದಿಂದಾಗಿ ಯಾವುದೇ ವ್ಯಕ್ತಿಯನ್ನು ಅದೇ ಧರ್ಮವನ್ನು ಅಥವಾ ಯಾವುದೇ ಪಂಗಡದವನು ಅನುಸರಿಸುವ ಇತರ ವ್ಯಕ್ತಿಗಳಿಗೆ ಪ್ರವೇಶವಿರುವ ಸಾರ್ವಜನಿಕ ಪೂಜಾಸ್ಥಳವನ್ನು ಅಂತ ವ್ಯಕ್ತಿಯಂತೆ ಪ್ರವೇಶಿಸುವುದಕ್ಕೆ ಅಥವಾ ಅದೇ ಧರ್ಮವನ್ನು ಅದರ ಯಾವುದೇ ಪಂಗಡವನ್ನು ಅಂತ ವ್ಯಕ್ತಿಯಂತೆ ಪ್ರವೇಶಿಸುವುದಕ್ಕೆ ಅನುಸರಿಸುವ ಇತರ ವ್ಯಕ್ತಿಗಳು ನೇರವೇರಿಸಲು ಅವಕಾಶವಿರುವ ರೀತಿಯಲ್ಲಿ ಮತ್ತು ಅಷ್ಟರ ಮಟ್ಟಿಗೆ ಯಾವುದೇ ಧಾರ್ಮಿಕ ಪೂಜಾಸ್ಥಳದಲ್ಲಿ ಅಂತ ವ್ಯಕ್ತಿಯಂತೆ ಪೂಜೆ ಮಾಡುವುದಕ್ಕೆ ಅಥವಾ ಪ್ರಾರ್ಥನೆ ಸಲ್ಲಿಸುವುದಕ್ಕೆ ಅಥವಾ ಸರೋವರದಲ್ಲಿ ಸ್ನಾನ ಮಾಡುವುದಕ್ಕೆ ಅಥವಾ ಸರೋವರದಲ್ಲಿ ಯಾವುದೋ ಸ್ನಾನಘಟ್ಟದಲ್ಲಿ ಸ್ನಾನ ಮಾಡುವುದಕ್ಕೆ ಪ್ರತಿಬಂಧಿಸಿದರೆ ಅವನು ಒಂದು ತಿಂಗಳಿಗೆ ಕಡಿಮೆಯಿಲ್ಲದೆ ಮತ್ತು ಆರು ತಿಂಗಳಿಗೆ ಹೆಚ್ಚಾಗಿರದ ಮತ್ತು ಐದುನೂರು ರೂಪಾಯಿಗಳಿಗೆ ಹೆಚ್ಚಾಗಿರದ ಜುಲ್ಮಾನೆಗೆ ಒಳಗಾಗ ಬೇಕಾಗುತ್ತದೆ.[೨]

ಭಾರತ ಸಂವಿಧಾನದಲ್ಲಿ ೨೧ನೇ ವಿಧಿ ವ್ಯಕ್ತಿ ಸ್ವಾತಂತ್ರ್ಯ ಮತ್ತು ರಕ್ಷಣೆ ಕಲ್ಪಿಸುತ್ತದೆ. ಶಾಸನ ಪದ್ಧತಿಯಲ್ಲಿ ಹೊರತುಪಡಿಸಿ ಸಾಮಾನ್ಯ ಪರಿಸ್ಥಿತಿಯಲ್ಲಿ ಯಾವ ವ್ಯಕ್ತಿಯ ಜೀವನಕ್ಕೂ ವ್ಯಕ್ತಿಗತ ಸ್ವಾತಂತ್ರಕ್ಕೂ ಭಂಗ ಬರಬಾರದು.

ಸಂವಿಧಾನದ ೧೫ (೧)ರ ಪ್ರಕಾರ ಯಾವ ಪೌರರ ಮೇಲೆ ಕೂಡಾ ದೇಶ, ಜಾತಿ ಲಿಂಗ ಧರ್ಮ ಪ್ರದೇಶಗಳ ಆಧಾರದ ಮೇಲೆ ತಾರತಮ್ಯ ತೋರಿಸುವಂತಿಲ್ಲ. ೧೫(೩) ಮಹಿಳೆಯರು ಮತ್ತು ಮಕ್ಕಳ ಬಗ್ಗೆ ವಿಶೇಷ ಸೌಲಭ್ಯ ಕಲ್ಪಿಸಬೇಕು.

ಸಂವಿಧಾನದ ೧೫(೪) ೧೬(೪) (೪ಎ) ಎಸ್‌ಸಿ/ಎಸ್‌ಟಿಗೆ ವಿಶೇಷ ಸ್ಥಾನಮಾನ ಮತ್ತು ಅವಕಾಶಗಳನ್ನು ಒದಗಿಸುತ್ತದೆ. ೧೫(೪)ರ ಸಾಮಾಜಿಕವಾಗಿ ಹಿಂದುಳಿದ ಶೈಕ್ಷಣಿಕ ಹಿಂದುಳಿದ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಪ್ರತ್ಯೇಕ ಸೌಕರ್ಯಗಳನ್ನು ಕಲ್ಪಿಸುವುದರಲ್ಲಿ ಸರ್ಕಾರಕ್ಕೆ ಅಡ್ಡಬರಬಾರದೆಂದು ೧೫(೪)ನೇ ವಿಧಿ ೨೯ನೇ ವಿಧಿಯಲ್ಲಿ ೨ನೇ ಕ್ಲಾಜ್ ನಿಷೇಧಿಸಿದವು.

೩೯(ಎ) ಪೌರರೆಲ್ಲರಿಗೆ ಸಮಾನ ನ್ಯಾಯ, ಉಚಿತ ನ್ಯಾಯದ ಸಹಾಯ ಒದಗಿಸಬೇಕು.

೪೦ ಪೌರರೆಲ್ಲರಿಗೂ ಶಿಕ್ಷಣ, ಉದ್ಯೋಗ ಅವಕಾಶ ಒದಗಿಸಬೇಕು.

೪೬ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ದುರ್ಬಲವರ್ಗಗಳಿಗೆ ಶಿಕ್ಷಣ ಆರ್ಥಿಕ ಅಭಿವೃದ್ಧಿಗೆ ಕ್ರಮಕೈಗೊಳ್ಳಬೇಕು.[೧೩]

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಕಾಯ್ದೆ, ೧೯೮೯

೧೯೮೯ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೇಲೆ ನಡೆದ ದೌರ್ಜನ್ಯ. ದೌರ್ಜನ್ಯದ ಅಪರಾಧಗಳಿಗಾಗಿ ದಂಡನೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಯಾವುದೇ ವ್ಯಕ್ತಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವ್ಯಕ್ತಿಗೆ ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನನ್ನು ತಿನ್ನತಕ್ಕದಲ್ಲದೆ ಅಥವಾ ಅಸಹ್ಯಕರವಾದ ಯಾವುದೇ ಪದಾರ್ಥವನ್ನು ಕುಡಿಯುವಂತೆ ಅಥವಾ ತಿನ್ನುವಂತೆ ಬಲಾತ್ಕರಿಸಿದರೆ, ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನ ಆವರಣ ಅತವಾ ನೆರೆಹೊರೆಯಲ್ಲಿ ಮಲಮೂತ್ರಗಳು ಕಚಡಾ ವಸ್ತು, ಪ್ರಾಣಿ ಶವಗಳು ಅಥವಾ ಯಾವುದೇ ಇತರ ಅಸಹ್ಯಕರ ಪದಾರ್ಥವನ್ನು ಹಾಕುವ ಮೂಲಕ ಅವನಿಗೆ ಹಾನಿ, ಅಸಮಾನ ಅಥವಾ ಕಿರುಕುಳವನ್ನುಂಟು ಮಾಡುವ ಉದ್ದೇಶದಿಂದ ವರ್ತಿಸಿದರೆ ಬುಡಕಟ್ಟಿನ ಸದಸ್ಯನ ಮೈಮೇಲೆ ಬಲತ್ಕಾರವಾಗಿ ಬಟ್ಟೆಗಳನ್ನು ಕಳಚಿದರೆ ಅಥವಾ ಅವನನ್ನು ಬೆತ್ತಲೆಯಾಗಿ ಅಥವಾ ಮುಖಕ್ಕೆ ಅಥವಾ ಶರೀರಕ್ಕೆ ಬಣ್ಣ ಬಳಿದು ಮೆರೆಸಿದರೆ ಅಥವಾ ಮಾನವ ಘನತೆಗೆ ಕುಂದುಂಟುಮಾಡಿದೆರ ಅದೇ ಬಗೆಯ ಯಾವುದೇ ಕಾರ್ಯವನ್ನು ಮಾಡಿದರೆ ಬುಡಕಟ್ಟಿನ ಸದಸ್ಯನ ಒಡೆತನದಲ್ಲಿರುವ ಅಥವಾ ಅವನಿಗೆ ಹಂಚಿರುವ ಅಥವಾ ಅವನಿಗೆ ಹಂಚಬೇಕೆಂದು ಯಾವುದೇ ಪ್ರಾಧಿಕಾರವು ಅಧಿಸೂಚಿಸಿರುವ ಯಾವುದೇ ಭೂಮಿಯನ್ನು ಆಕ್ರಮವಾಗಿ, ಆಕ್ರಮಿಸಿಕಂಡರೆ ಅಥವಾ ಸಾಗುವಳಿ ಮಾಡಿದರೆ ಅಥವಾ ಅವನಿಗೆ ಹಂಚಿರುವ ಭೂಮಿಯನ್ನು ವರ್ಗಾವಣೆ ಮಾಡಿಸಿಕೊಂಡರೆ ಅನುಸೂಚಿತ ಜಾತಿ, ಅನುಸೂಚಿತ ಪಂಗಡ/ಬುಡಕಟ್ಟಿನ ಸದಸ್ಯನನ್ನು ಅವನ ಭೂಮಿ ಅಥವಾ

ಆವರಣದಿಂದ ಅಕ್ರಮವಾಗಿ ಸ್ವಾಧೀನವನ್ನು ತಪ್ಪಿಸಿದರೆ ಅಥವಾ ಯಾವುದೇ ಭೂಮಿ ಆವರಣ ಥವಾ ನೀರಿನ ಬಗೆಗಿನ ಅವನ ಹಕ್ಕುಗಳನ್ನು ಅನುಭೋಗಿಸುವುದಕ್ಕೆ ಅಡ್ಡಿಪಡಿಸಿದರೆ ಸರ್ಕಾರವು ವಿಧಿಸಿದ ಸಾರ್ವಜನಿಕ ಉದ್ದೇಶಗಳಿಗಾಗಿರುವ ಯಾವುದೇ ಕಡ್ಡಾಯ ಸೇವೆಯನ್ನು ಹೊರತುಪಡಿಸಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟಿನ ಸದಸ್ಯನನ್ನು ಬೇಗಾರ ಅಥವಾ ಅಂಥದೇ ಇತರ ಸ್ವರೂಪಗಳು ಬಲತ್ಕಾರಿಸಿದ ಜೀವನದ ದುಡಿಮೆಯನ್ನು ಮಾಡಲು ಒತ್ತಾಯಿಸಿದರೆ ಅಥವಾ ಪುಸಲಾಯಿಸಿದರೆ ಅಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನನ್ನು ನಿರ್ದಿಷ್ಟ ಅಭ್ಯರ್ಥಿಗೆ ಮತದಾನ ಮಾಡದಂತೆ ಅಥವಾ ಮತದಾನ ಮಾಡುವಂತೆ ಅಥವಾ ಕಾನೂನಿನ ಮೂಲಕ ಉಪಬಂಧಿಸಿದಂತೆ ಅಲ್ಲಿಗೆ.

ಯಾವುದೇ ಇತರೆ ರೀತಿಯಲ್ಲಿ ಮತದಾನ ಮಾಡುವಂತೆ ಬಲತ್ಕರಿಸಿದರೆ ಅಥವಾ ಬೆದರಿಸಿದರೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟಿನ ಸದಸ್ಯನ ವಿರುದ್ಧ ಸುಳ್ಳು ಉದ್ದೇಶಪೂರ್ವಕ ಅಥವಾ ಕಿರುಕುಳಕಾರಿಯಾದ ದಾವೆ ಮತ್ತು ಅಪರಾಧಿತ ಅಥವಾ ಇತರೆ ಕಾನೂನು ವ್ಯವಹಾರಗಳನ್ನು ಹೂಡಿದರೆ, ಈ ಜಾತಿ ಮತ್ತು ಬುಡಕಟ್ಟಿನವರು ಯಾವುದೇ ಸರ್ಕಾರಿ ನಔಕರನಿಗೆ ಯಾವುದೇ ಸುಳ್ಳು ಅಥವಾ ಕ್ಷುಲ್ಲಕ ಮಾಹಿತಿಯನ್ನು ಕೊಟ್ಟರೆ ಮತ್ತು ಆ ಮೂಲಕ ಅಂಥ ಸರ್ಕಾರ ನೌಕರನು ತನ್ನ ಕಾನೂನು ಬದ್ಧ ಅಧಿಕಾರವನ್ನು ಅನುಸೂಚಿತ ಜಾತಿ ಮತ್ತು ಬುಡಕಟ್ಟಿನ ಸದಸ್ಯನಿಗೆ ಹಾನಿ ಅಥವಾ ಕಿರುಕುಳಕಾರಿಯಾಗುವಂತೆ ಉಪಯೋಗಿಸುವಂತೆ ಮಾಡಿದರೆ ಸಾರ್ವಜನಿಕರಿಗೆ ಕಾಣಿಸುವಂತೆ ಯಾವುದೇ ಸ್ಥಳದಲ್ಲಿ ಅನುಸೂಚಿತ ಜಾತಿ ಮತ್ತು ಬುಡಕಟ್ಟಿನ ಸದಸ್ಯನಿಗೆ ಉದ್ದೇಶಪೂರ್ವಕವಾಗಿ ಅಸಮಾನಗೊಳಿಸಿದರೆ ಅಥವಾ ಅಪಮಾನಗೊಳಿಸಿರುವ ಉದ್ದೇಶದಿಂದ ಬೆದರಿಸಿದರೆ, ಈ ಎರಡು ಜಾತಿಗಳನ್ನು ಸೇರಿದ ಯಾವುದೇ ಮಹಿಳೆಯ ಮಾನಕ್ಕೆ ಅಗೌರವನ್ನುಂಟು ಮಾಡುವುದನ್ನು ಅಥವಾ ಅವಳ ಅತ್ಯಾಚಾರ ಮಾಡುವ ಉದ್ದೇಸದಿಂದ ಅವಳ ಮೇಲೆ ಹಲ್ಲೆ ಮಾಡಿದರೆ ಅಥವಾ ಬಲವನ್ನು ಪ್ರಯೋಗಿಸಿದರೆ ಅನುಸೂಚಿತ ಜಾತಿ ಮತ್ತು ಬುಡಕಟ್ಟಿಗೆ ಸೇರಿದ ಮಹಿಳೆಯ ಮನಸ್ಸಿನ ಮೇಲೆ ಪ್ರಭಾವ ಬೀರುವ ಸ್ಥಾನದಲ್ಲಿದ್ದು ಮತ್ತು ಯಾವುದಕಕೆ ಅವಲು ಅನ್ಯಥಾ ಒಪ್ಪಿಕೊಳ್ಳುತ್ತಿರಲಿಲ್ಲವೋ ಅದಕ್ಕಾಗಿ ಅವಳನ್ನು ಲೈಂಗಿಕವಾಗಿ ಶೋಷಿಸಲು ಆ ಸ್ಥಾನವನ್ನು ಬಳಸಿದರೆ. ಈ ಎರಡು ಜಾತಿಗಳ ಸದಸ್ಯರು ಸಾಮಾನ್ಯವಾಗಿ ಉಪಯೋಗಿಸುತ್ತಿರುವ ಯಾವುದೇ ಚಿಲುಮೆ ಜಲಾಶಯ ಅಥವಾ ಇತರ ಯಾವುದೇ ಮೂಲವನ್ನು, ಯಾವುದೇ ಉದ್ದೇಶಕ್ಕಾಗಿ ಅದನ್ನು ಸಾಮಾನ್ಯವಾಗಿ ಉಪಯೋಗಿಸಲಾಗುತ್ತಿದಿಯೋ ಆ ಉದ್ದೇಶಕ್ಕಾಗಿ ಅದರ ಸೂಕ್ಷ್ಮತೆಯನ್ನು ಕಡಿಮೆಗೊಳಿಸುವ ಕಡಿಮೆ ಮಲಿನಗೊಳಿಸಿದರೆ ಈ ಅನುಸೂಚಿತ ಜಾತಿ ಮತ್ತು ಬುಡಕಟ್ಟಿನ ಸದಸ್ಯರಿಗೆ ಸಾರ್ವಜನಿಕರು ಸೇರುವ ಸ್ಥಳಕ್ಕೆ ಹೋಗುವ ದಾರಿಯ ಬಗ್ಗೆ ಯಾವುದೇ ರೂಢಿಗರ ಹಕ್ಕನ್ನು ನಿರಾಕರಿಸಿದರೆ. ಅಥವಾ ಯಾವುದಕ್ಕೆ ಸಾರ್ವಜನಿಕರು ಇತರ ಸದಸ್ಯರು ಅತವಾ ಅವರ ಯಾವುದೇ ಭಾಗವು ಉಪಯೋಗಿಸುವ ಅಧಿಕಾರವನ್ನು ಹಾಗೂ ಪ್ರವೇಶಧಿಕಾರವನ್ನು

ಹೊಂದಿರುವರೋ, ಆ ಸಾರ್ವಜನಿಕರು ಸೇರುವ ಆ ಸ್ಥಳವನ್ನು ಅವನು ಉಪಯೋಗಿಸುವುದನ್ನು ಅಥವಾ ಅದಕ್ಕೆ ಪ್ರವೇಶವಕಾಶವನ್ನು ಹೊಂದಿರುವುದನ್ನು ತಡೆಗಟ್ಟುವ ಹಾಗೆ ಅಂಥಹ ಸದಸ್ಯನಿಗೆ ಅಡ್ಡಿಪಡಿಸಿದರೆ ಏನಾಗಬಹುದು. ಈ ದೌರ್ಜನ್ಯ ಅಡಿಯಲ್ಲಿ ಬರುವ ಎರಡು ಜಾತಿ ಬುಡಕಟ್ಟಿನ ಸದಸ್ಯನನ್ನು ಅವನ ಮನೆ, ಗ್ರಾಮ ಅಥವಾ ವಾಸದ ಇತರೆ ಸ್ಥಳದಿಂದ ಬಿಟ್ಟು ಹೋಗುವಂತೆ ಬಲತ್ಕರಿಸಿದರೆ ಅಥವಾ ಹಾಗೆ ಮಾಡದಂತೆ ಮಾಡಿದರೆ ಅವನು ಆರು ತಿಂಗಳಿಗಿಂತ ಕಡಿಮೆ ಇಲ್ಲದ ಆದರೆ ಐದು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರವಾಸದಿಂದ ಮತ್ತು ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.[೧೪]

ಭಾರತದ ವಿವಿಧ ರಾಜ್ಯಗಳಲ್ಲಿ ದಲಿತರ ಮೇಲೆ ನಡೆದ ದೌರ್ಜನ್ಯಗಳು

೧. ತಾ. ೧೨, ೧೩ ಫೆಬ್ರವರಿ ೧೯೭೮ರಂದು ಉತ್ತರ ಪ್ರದೇಶದ ಮುಜಾಫರ್‌ನಲ್ಲಿ ಹತ್ತಾರು ದಲಿತ ಮಹಿಳೆಯರ ಮೇಲೆ ಅತ್ಯಾಚಾರ. ದಲಿತ ಕೇರಿಯ ಮೇಲೆ ಬಂದೂಕು ದಾಳಿ.

೨. ತಾ. ೧೫.೧೧.೧೯೭೮ರಂದು ಬಿಹಾರದ ಖಜಿತ್‌ಪುರದಲ್ಲಿ ೧೦ ದಲಿತರ ಮಹಿಳೆಯರ ಮೇಲೆ ಅತ್ಯಾಚಾರ, ೨೬ ದಲಿತ ಮಹಿಳೆಯರ ಬೆತ್ತಲೆ ಪ್ರಕರಣ.

೩. ತಾ. ೦೯.೧೨.೧೯೭೮ರಂದು ಬಿಹಾರದ ಕೈಲಾ ಗ್ರಾಮದಲ್ಲಿ ಕೂಲಿಗಾರರಾದ ರಾಮಚಂದ್ರ ಪಾಸ್ವಾನ್, ಹೋಮನ್ ಪಾಸ್ವಾನ್ ಧನಿ ಮಂಜು ಎಂಬ ದಲಿತ ಯುವಕರನ್ನು ಕತ್ತು ಕತ್ತರಿಸಿ ಭರ್ಜಿಯಿಂದ ತಿವಿದು ಭೀಕರ ಕಗ್ಗೊಲೆ.

೪. ತಾ. ೨೭.೫.೧೯೭೭ರಂದು ಬಿಹಾರದ ಬೆಲ್ಚಿಯಲ್ಲಿ ೧೪ ಜನ ದಲಿತರ ಜೀವಂತ ದಹನ ಮತ್ತು ೧೫ ಜನ ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ

೫. ತಾ. ೨೫.೦೨.೧೯೮೦ರಂದು ಬಿಹಾರದ ವಿಪ್ರಾ ಗ್ರಾಮದಲ್ಲಿ ದಲಿತ ಕಾಲೋನಿ ಭಸ್ಮ, ೧೪ ಜನರ ಜೀವಂತ ದಹನ.

೬. ತಾ. ೨೧.೦೬.೧೯೯೧ರಂದು ಆಂಧ್ರದ ಸುಂಡೂರಿನಲ್ಲಿ ೨೧ ಜನ ದಲಿತರ ಕಗ್ಗೊಲೆ.

೭. ತಾ. ೧೭.೦೭.೧೯೮೫ರಲ್ಲಿ ಆಂಧ್ರದ ಕರಂಚೇಡುವಿನಲ್ಲಿ ೮ ಜನರ ಕಗ್ಗೊಲೆ.

೮. ೧೯೯೯ರಲ್ಲಿ ಒರಿಸ್ಸಾದಲ್ಲಿ ಕ್ರಿಶ್ಚಿಯನ್ ಪಾದ್ರಿ, ಗ್ರಹಂಸ್ಟೆನ್ ಹಾಗೂ ಅವರ ಇಬ್ಬರ ಮಕ್ಕಳ ಜೀವಂತ ದಹನ ಮತ್ತು ದಾರಾಸಿಂಗ್‌ಗೆ ಗಲ್ಲು ಶಿಕ್ಷೆ.

೯. ತಾ. ೧೯೭೨ರಲ್ಲಿ ತಮಿಳುನಾಡಿನ ಕಿಳಮೇಳ್‌ಮಣಿಯಲ್ಲಿ ೪೭ ಜನ ದಹನ. ೧೯೮೮ರ ಕೇಂದ್ರ ಸರ್ಕಾರದ ವರದಿಯೊಂದರ ಪ್ರಕಾರ ೪ % ವರ್ಷಗಳಲ್ಲಿ ೪೪ ಸಾವಿರ ಮಹಿಳೆಯರ ಅತ್ಯಾಚಾರ ಹಾಗೂ ೩೨ ಸಾವಿರ ದಲಿತರ ಕೊಲೆ ವರದಿಯಾಗಿತ್ತು. ಉತ್ತರ ಪ್ರದೇಶದಲ್ಲಿ ೧೬೩೨ ಕೊಲೆ ಮತ್ತು ೧೮೧೩ ಅತ್ಯಾಚಾರ, ಮಧ್ಯಪ್ರದೇಶದಲ್ಲಿ ೨ನೇ ಸ್ಥಾನ, ೯೭೨ ಕೊಲೆ

ಮತ್ತು ೧೬೧ ಅತ್ಯಾಚಾರ ಪ್ರಕರಣಗಳು ಜರುಗಿರುವುದನ್ನು ಸರ್ಕಾರದ ಅಧೀಕೃತ ವರದಿಯಿಂದ ದಾಖಲಿಸಲಾಗಿದೆ. ಇಂತಹ ಅನೇಕ ಕೊಲೆ, ಅತ್ಯಾಚಾರ, ಅಮಾನುಷ ದೌರ್ಜನ್ಯಗಳ ಪ್ರಕರಣಗಳು ನಿರಂತರವಾಗಿ ನಡೆಯುತ್ತಲೇ ಇವೆ.

೧೦. , ಮಹಾರಾಷ್ಟ್ರದ ಖೈರ್ಲಾಂಜೆಯಲ್ಲಿನ ಕೊಲೆ ಮತ್ತು ಅತ್ಯಾಚಾರದಿಂದ ಕೂಡಿದ ಜಂಟಿ ಪ್ರಕರಣ ಇತ್ಯಾದಿ.

ಕರ್ನಾಟಕದಲ್ಲಿ ದಲಿತರ ಮೇಲಿನ ದೌರ್ಜನ್ಯಗಳು

೧. ತಾ. ೦೬.೦೪.೧೯೭೩ರಂದು ತುಮಕೂರು ಜಿಲ್ಲೆ ದಾಸಾನಪುರದಲ್ಲಿ ಚಿಕ್ಕತಿಮ್ಮಯ್ಯನ ಕಗ್ಗೊಲೆ.

೨. ತಾ. ೦೬.೧೦.೧೯೭೮ರಂದು ಬಿಜಾಪುರ ಜಿಲ್ಲೆ ಕಕ್ಕಿಲಗಿರಿಯಲ್ಲಿ ಮಾಜಿ ಸೈನಿಕ ಸಿದ್ಧಪ್ಪನ ಕಗ್ಗೊಲೆ ಹಾಗೂ ಇದೇ ಜಿಲ್ಲೆಯಲ್ಲಿ ೧೦ ಜನರ ದಹನ.

೩. ತಾ. ೧೬.೦೬.೧೯೭೮ರಂದು ದಕ್ಷಿಣ ಕನ್ನಡ ಜಿಲ್ಲೆ ಸನ್ನದುಕ್ಕು ಗ್ರಾಮದಲ್ಲಿ ದಲಿತ ಯುವಕ ಕೊರಗನ ಕೊಲೆ.

೪. ತಾ. ೦೧.೦೨.೧೯೭೬ರಂದು ಗೋಕಾಕದ ಕುಲಿಗೋಡುವಿನಲ್ಲಿ ದಲಿತ ಯುವಕ ಭೀಮಪ್ಪನಿಗೆ ೨ ಕಾಲು ಕತ್ತರಿಸಿದ ಪ್ರಕರಣ.

೫. ತಾ. ೨೦.೦೯.೧೯೭೦ರಂದು ನರಸಿಂಹರಾಜಪುರದಲ್ಲಿ ದಲಿತ ತರುಣಿಯ ಮೇಲೆ ಅತ್ಯಾಚಾರ.

೬ ತಾ. ೨೦.೦೩.೧೯೭೦ರಂದು ಹಾಸನ ಜಿಲ್ಲೆ ನಾಯಕನಹಳ್ಳಿಯ ದಲಿತ ಯುವತಿ ಬೋರಮ್ಮನ ಕಗ್ಗೊಲೆ.

೭. ತಾ. ೧೧.೧೦.೧೯೭೮ರಂದು ಬಾಗೇವಾಡಿ ತಾಲೂಕಿನ ಸಿಂದಗೇರಿಯಲ್ಲಿ ದಲಿತ ಗರ್ಭಿಣಿಯ ಮೇಲೆ ಅತ್ಯಾಚಾರ.

೮. ತಾ. ೦೩.೦೮.೧೯೮೮ರಂದು ಬೆಳಗಾವಿ ಜಿಲ್ಲೆ ಕಿತ್ತೂರಿನಲ್ಲಿ ಕ್ಷುಲ್ಲಕ ಕಾರಣಕ್ಕಾಗಿ ೫ ಜನ ದಲಿತರಿಗೆ ಮಾನವ ಮಲ ತಿನ್ನಿಸಿದ್ದ ಕೃತ್ಯ.

೯. ತಾ. ೨೫.೦೩.೧೯೯೩ರಲ್ಲಿ ಮೈಸೂರುಜಿಲ್ಲೆ ನಂಜನಗೂಡು ತಾಲೂಕಿನ ಬದನವಾಳದಲ್ಲಿ ೩ ಜನ ದಲಿತರ ಕಗ್ಗೊಲೆ.

೧೦. ೧೯೯೧ರಲ್ಲಿ ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆಯಲ್ಲಿ ೭ ಜನ ದಲಿತರ ಕಗ್ಗೊಲೆ.

೧೧. ತಾ. ೧೧.೦೮.೧೯೯೧ರಂದು ಮೈಸೂರು ಜಿಲ್ಲೆ ಕೊಳ್ಳೇಗಾಲ ತಾಲೂಕು ಆಲದಹಳ್ಳಿಯಲ್ಲಿ ಮತ್ತು ಚಿತ್ರದುರ್ಗ ಜಿಲ್ಲೆ ಜಗಳೂರುನಲ್ಲಿ ದಲಿತ ಯುವಕನಿಗೆ ಮಾನವ ಮೂತ್ರ ಕುಡಿಸಿದ ಪ್ರಕರಣ.

೧೨. ತಾ. ೨೫.೧೧.೧೯೯೯ರಂದು ಆನೇಕಲ್ ತಾಲೂಕು ನರಸಾಪುರದಲ್ಲಿ ದಲಿತ ಚಿಕ್ಕರಾಮಯ್ಯನ ಕೊಲೆ.

೧೩. ೧೯೮೪ರಲ್ಲಿ ಶಿವಮೊಗ್ಗ ಜಿಲ್ಲೆ ಹರೆಬೊಮ್ಮನಹಳ್ಳಿಯಲ್ಲಿ ದುರ್ಗಪ್ಪನ ಕೊಲೆ

೧೪. ಜೂನ್ ೨೦೦೦ರಲ್ಲಿ ಮಂಡ್ಯ ಜಿಲ್ಲೆ ಹಂಗರಹಳ್ಳಿಯಲ್ಲಿ ಗೋಣಿಚೀಲದಲ್ಲಿ ಕಾಲುಗಳಿಗೆ ೨೬ ಕೆ.ಜಿ. ತೂಕದ ಸರಪಳಿಗಳನ್ನು ತೋಡಿಸಿ ೨ ವರ್ಷಗಳ ಜೀತ ಪ್ರಕರಣ.[೧೫]

ಕೋಲಾರ ಜಿಲ್ಲೆಯ ದಲಿತರ ಮೇಲಿನ ದೌರ್ಜನ್ಯಗಳು

೧. ತಾ. ೧೪.೦೨.೧೯೭೯ರಂದು ಕೋಲಾರ ಜಿಲ್ಲೆ ಜಾಡಗಾನಹಳ್ಳಿಯಲ್ಲಿ ದಲಿತ ನರಸಮ್ಮನ ಮೇಲೆ ಅಮಾನುಷವಾಗಿ ಅತ್ಯಾಚಾರ ಕೊಲೆ.

೨. ತಾ. ೦೧.೦೫.೧೯೭೯ರಂದು ಕೋಲಾರ ಜಿಲ್ಲೆ ತಿಮ್ಮಸಂದ್ರದಲ್ಲಿ ಜೀತಗಾರ ರಾಮಣ್ಣನ ಕಗ್ಗೊಲೆ.

೩. ತಾ. ೩೦.೦೩.೧೯೮೦ರಂದು ಕೋಲಾರ ಜಿಲ್ಲೆ ಹುಣಸೆಕೋಟೆ ಶೇಷಗಿರಿಯಪ್ಪನ ಕಗ್ಗೊಲೆ ಹಾಗೂ ಈತನ ಮಗಳಾದ ಅನುಸೂಯಮ್ಮನ ಮೇಲೆ ನಡೆದ ಅತ್ಯಾಚಾರ.

೪. ತಾ. ೧೧.೦೩.೨೦೦೦ರಲ್ಲಿ ಕೋಲಾರ ಜಿಲ್ಲೆ ಕಂಬಾಲಪಲ್ಲಿ ೮ ಜನ ದಲಿತರ ಸಜೀವ ಜೀವಂತ ದಹನ.

೫.೨೦೦೪ರಲ್ಲಿ ಕೋಲಾರ ಜಿಲ್ಲೆ ಮಾಲೂರು ತಾಲೂಕು ಲಕ್ಕೂರು ಹೋಬಳಿ ಬೆನಗಟ್ಟಾ ಗ್ರಾಮದ ವಾಸಿ, ದಲಿತ ಯುವಕ ಮುನಿರಾಜು ಕಗ್ಗೊಲೆ.

೬. ಕೋಲಾರ ಜಿಲ್ಲೆ ಮುಳಬಾಗಿಲು ತಾಲೂಕು ಕಾಶೀಪುರದ ವಾಸಿ ದಲಿತ ರಾಮಕೃಷ್ಣಪ್ಪನ ಕಗ್ಗೊಲೆ.

೭. ಕೋಲಾರ ಜಿಲ್ಲೆ ಮುಳಬಾಗಿಲು ತಾಲೂಕು, ಕಾಶೀಪುರದ ವಾಸಿ ಗ್ರಾಮದ ದಲಿತ ಮುನಿವೆಂಕಟಪ್ಪ, ೧೦ನೇ ತರಗತಿ ಉತ್ತೀರ್ಣರಾದ ಕಾರಣಕ್ಕೆ ಸಹಿಸದ ಸವರ್ಣಿಯರು ಕಗ್ಗೋಲೆ ಮಾಡಿದರು.

೮. ಕೋಲಾರ ಜಿಲ್ಲೆ ಬಂಗಾರುಪೇಟೆ ತಾಲೂಕು ನಾಗಲಾಪಲ್ಲಿ ಗ್ರಾಮದ ವಾಸಿ ದಲಿತ ಯುವಕನ ಕಗ್ಗೊಲೆ.

೯. ಬಿಜಾಪುರ ಜಿಲ್ಲೆಯಲ್ಲಿ ದಾನಮ್ಮ ಎಂಬ ದಲಿತ ಹೆಣ್ಣುಮಗಳ ಮೇಲೆ ನಡೆದ ಅತ್ಯಾಚಾರ ಮತ್ತು ಕಗ್ಗೊಲೆ.[೧೬]

೪.೨. ಅಸ್ಪೃಶ್ಯತೆ

ಅಸ್ಪೃಶ್ಯತೆ ಎಂದರೇನು? ಅದು ಹೇಗೆ ಮಾನವ ವಿರೋಧಿ

ಭಾರತದಲ್ಲಿ ಮೊದಲು ವರ್ಣವ್ಯವಸ್ಥೆ ರೂಢಿಯಲ್ಲಿತ್ತು. ಇದರ ಹುಟ್ಟು ಬೆಳವಣಿಗೆ ಬಗ್ಗೆ ನಿಕರವಾದ ಆಧಾರಗಳನ್ನು ಸಂಶೋಧಕರು ಹೀಗಾಗಲೇ ಗುರುತಿಸಿದಾಗ ಸಾಮಾಜಿಕ ವ್ಯವಸ್ಥೆಯ ಉಗಮದ ಬಗ್ಗೆ ಹೇಳುವುದಾದರೆ, ವರ್ಣಾವ್ಯವಸ್ಥೆ ವೇದಗಳಿಂದಲೇ ಮೊದಲಗೊಂಡಿದೆ ಎಂಬ ಅಭಿಪ್ರಾಯ ಎಲ್ಲಾ ವಿದ್ವಾಂಸರ ವಾದವಾಗಿದೆ. ಈ ವ್ಯವಸ್ಥೆಯು ಚಾತುರ್ವಣ ಎಂಬುದು ಮೇಲು-ಕೀಳು ಎಂಬ ಹಿಂದೂ ದರ್ಮದ ಒಂದು ರೀತಿಯ ಸಾಮಾಜಿಕ ವಿಭಜನಾ ವ್ಯವಸ್ಥೆಯಾಗಿದೆ. ಇಲ್ಲಿಂದ ಅಸ್ಪೃಶ್ಯರು ಎನ್ನಿಸಿಕೊಲ್ಳುವ ಅಸ್ತಿತ್ವಕ್ಕೆ ಬಂತು. ಸ್ಪೃಶ್ಯ ಮತ್ತು ಅಸ್ಪೃಶ್ಯ ಎಂಬುದು ಶುದ್ಧತೆ, ಅಶುದ್ಧತೆಗೆ ಸಂಬಂಧಪಟ್ಟಿದ್ದು.

ಸಾಮಾಜಿಕ ನೆಲೆಯಲ್ಲಿ ಅಸ್ಪೃಶ್ಯ ಎಂದರೆ ಮನುಷ್ಯ - ಮತ್ತೊಬ್ಬ ಮನುಷ್ಯನನ್ನು ಮುಟ್ಟಲಾಗದೆ ನಿರಾಕರಿಸಿರುವವರನ್ನು ಅಸ್ಪೃಶ್ಯರೆಂದು ಗುರುತಿಸಿದ್ದಾರೆ. ಅಸ್ಪೃಶ್ಯ ಎನ್ನಲು ಅವರದೇ ಆದ ಶ್ರಮವಿಭಜನೆಯನ್ನು ಹಿಂದೂ ಧರ್ಮ ರೂಪಿಸಿಕೊಟ್ಟಿದೆ. ಅದು ಯಾವುದೆಂದರೆ, ಬೀದಿ ಕಸ ಗುಡಿಸುವುದು, ಚರಂಡಿ, ಶೌಚಾಲಯಗಳನ್ನು ಶುಚಿ ಮಾಡುವುದು. ಸತ್ತ ಪ್ರಾಣಿಗಳನ್ನು ಊರ ಹೊರಕ್ಕೆ ಸಾಗಿಸಿ ಚರ್ಮ ಸುಲಿಯುವುದು, ಅವರ ಮೈ, ಕೈ ಕೊಳಕಾಗಿ ಹಾಗೂ ಜಿಡ್ಡಾಗಿ ಕಾಣುತ್ತಿರುವ ರೀತಿಯಿಂದಲೇ ಅವರನ್ನು ಮುಟ್ಟಬಾರದು. ಮನೆಯೊಳಗೆ ಕರೆಯಿಸಿ ಉಪಚರಿಸಬಾರದು ಎಂಬ ಮೈಲಿಗೆಯಂತೆ ಕಂಡು ಅವರನ್ನು ಅಸ್ಪೃಶ್ಯರು ಎಂದು ಕರೆಯಲಾಯಿತು. ಈ ರೀತಿಯಾದ ಆಚರಣೆಗಳನ್ನು ವರ್ಣಾಶ್ರಮಗಳು ಅಸ್ಪೃಶ್ಯರೆಂದರೆ ಈ ರೀತಿಯ ಕಸಬುಗಳನ್ನು ತೊಡಗಿಸಿಕೊಳ್ಳುವುದನ್ನು ಅಸ್ಪೃಶ್ಯತೆ ಎನ್ನುತ್ತಾರೆ.

"ಇದು ಮಾನವ ವಿರೋಧಿ ಹೇಗೆ" ಸಮಾಜದಲ್ಲಿ ಸಾಮಾಜಿಕ ವ್ಯವಸ್ಥೆಯು ಅಸ್ಪೃಶ್ಯರನ್ನು ವರ್ಣಾಶ್ರಮಗಳ ವಿರುದ್ಧ ನಡೆದುಕೊಂಡು ಬರುವ ಕುಲ ಕಸಬುಗಳನ್ನು ಹೊಂದಿದ್ದಾರೆ. ಅದಕ್ಕಾಗಿ ಇವರನ್ನು ಮೇಲ್ಜಾತಿಗಳು, ದೇವಾಲಯಗಳ ಪ್ರವೇಶ ನಿಷೇಧಿಸಿದೆ. ವೇದಗಳನ್ನು ಓದುವಂತಿಲ್ಲ. ಕೆರೆ, ಕೊಳ, ಬಾವಿ, ಕಟ್ಟೆ , ಸ್ಮಶಾನ ನಿಷೇಧಗಳು ನಿರ್ಬಂಧ ವಿಧಿಸಿದ್ದಾರೆ. ಯಾಕೆಂದರೆ ಇವರು ಕೇವಲ ಊರಿನ, ಹಳ್ಳಿಯ ಬಿಟ್ಟಿ ಚಾಕರಿ ಮಾಡುವವರಾಗಿರಬೇಕು. ಕಲುಷಿತ ಕೆಲಸಗಳನ್ನು ಶುಚಿ ಮಾಡಿಕೊಡಲು ಇವರು ಸೀಮಿತವಾಗಿರಬೇಕು. ಇವರು ಎಚ್ಚರಗೊಂಡರೆ ಜೀತವನ್ನು ಬಿಟ್ಟು, ಸಮಾಜದಲ್ಲಿ ಸ್ಥಾನಮಾನಗಳನ್ನು ಪಡೆಯಲು ಬರಬಾರದೆಂದು ಮುಖ್ಯ ಉದ್ದೇಶವಿರುವುದರಿಂದ, ಇವರು ಅರ್ಹತೆಗಳನ್ನು, ಅವಕಾಶಗಳನ್ನು, ಧಾರ್ಮಿಕ ಆಚರಣೆಗಳನ್ನು, ಶಿಕ್ಷಣವನ್ನು ಪಡೆಯಲು ಹೋದಾಗ ಅವರು ಮಾನವ ವಿರೋಧಿಯಾಗುತ್ತಾರೆ. ಹೇಗೆಂದರೆ:- ಅಸ್ಪೃಶ್ಯರು ಅನೇಕ ಸಾಮಾಜಿಕ ಅನರ್ಹತೆ - ಸಮಸ್ಯೆಗಳಲ್ಲಿ ಇರಬೇಕು. ಅವರ ಸಾಮಾಜಿಕವಾಗಿ ಉಳಿಯಬೇಕು. ಯಾವುದೇ ರೀತಿಯ ಸಮಾನತೆ ಕಡೆ ಹೆಜ್ಜೆ ಇಡಬಾರದು ಎಂಬ ದೃಢ ನಿಲುವಾಗಿದೆ. ಅದಕ್ಕೆ ಡಾ. ಬಿ.ಆರ್.

ಅಂಬೇಡ್ಕರ್ ಅವರು ಹೇಳುವಂತೆ "ಹೊರಗಿನಿಂದ ಬಂದವರು, ಊರಿನಿಂದ ಹೊರಗಡೆ ನೆಲೆಸಿದರೋ ಅಥವಾ ಊರೊಳಗಿಂದ ಇದ್ದವರನ್ನು ಕಾರಣಾಂತರಗಳಿಂದ ಊರು ಹೊರಕ್ಕೆ ತಳ್ಳಲಾಯಿತೋ ಎಂಬುದನ್ನು ವಿಚಾರ ಮಾಡಿದರೆ ಅಸ್ಪೃಶ್ಯತೆ ಉಗಮ ಮತ್ತು ಅಸ್ಪೃಶ್ಯರು ಯಾರು, ಅವರು ಯಾಕೆ ಮಾನವ ವಿರೋಧಿ ಎಂದು ಗೊತ್ತಾಗುತ್ತದೆ. ಇದೇ ನೆಲೆಯಲ್ಲಿ ಮಹಾತ್ಮಗಾಂಧಿಯವರ ಪ್ರಕಾರ "ಅಸ್ಪೃಶ್ಯತೆ ಜಾತಿಯ ಅತ್ಯಂತ ತಿರಸ್ಕಾರಾರ್ಹವಾದ ಅಭಿವ್ಯಕ್ತಿ. ಇದು ಹಿಂದೂ ಸಮಾಜದ ಶರೀರವನ್ನು ಕುಷ್ಠರೋಗದ ಹುಣ್ಣಿನಂತೆ ಪೀಡಿಸುತ್ತದೆ" ಎಂದಿದ್ದಾರೆ. ಹಿಂದೂ ಸಮಾಜದ ಪ್ರಶ್ನೆ ಬಂದಾಗ, "ಅಸ್ಪೃಶ್ಯತೆ ಕುಷ್ಠರೋಗ ಹುಣ್ಣಿನಂತೆ" ಎಂದಿರುವ ವ್ಯಾಖ್ಯಾನದಂತೆ ಹುಣ್ಣನ್ನು ಚಿಕಿತ್ಸೆ ಪಡೆಯಲು ಅಶ್ಪೃಶ್ಯರು ಧ್ವನಿ ಎತ್ತಿದಾಗಲೇ ಅದು ಮಾನವ ವಿರೋಧಿಯಾಗುತ್ತದೆ. ಕಾಲಕ್ಕೆ ತಕ್ಕಂತೆ ಬದಲಾಗದಂತೆ, ಪಳೆಯುಳಿಕೆಗಳನ್ನೇ ಉಳಿಸಿಕೊಂಡು, ಹೀನಾಯ ಸ್ಥಿತಿಗಳನ್ನು ಒಪ್ಪಿಕೊಂಡು ಬರುವುದಕ್ಕೆ ಅಸ್ಪೃಶ್ಯತೆ ಎನ್ನುತ್ತೇವೆ. ಅದರ ಸ್ಥಿತಿಗತಿಗಳನ್ನು ಬದಲಾಗಿ ಕೇಳುವುದು ಮಾನವ ವಿರೋಧಿ ಎನ್ನುತ್ತಾರೆ. "ಇದನ್ನು ಆಚರಣೆಗೆ ಹೇಗೆ ತರಲಾಯಿತು" - ಭಾರತದ ಸಂದರ್ಭದಲ್ಲಿ ಹಿಂದೂ ಧರ್ಮವು ಎಲ್ಲಾ ಜಾತಿ-ಉಪಜಾತಿಗಳನ್ನು ಒಳಗೊಂಡು ಜಾತಿ ಆಧಾರಿತವಾಗಿ ಕುಲಗಳನ್ನು ಒಳಗೊಂಡಿರುವ ಸಾಮಾಜಿಕ ವ್ಯವಸ್ಥೆಯನ್ನು ಒಳಗೊಂಡಿದೆ. ಅವುಗಳಲ್ಲಿ ಪ್ರತಿ ಕುಲಗಳು ಇದೇ ಕಸಬುಗಳನ್ನು ಮಾಡಬೇಕು. ಇದೇ ರೀತಿಯಾದ ಆಚರಣೆಗಳನ್ನು ಮಾಡಬೇಕು ಎಂಬ ನಿರ್ಬಂಧ ನೆಲೆಯಲ್ಲಿ ಬಂಧಿಸಿರುವುದರಿಂದ ಆಯಾ ಕುಲಗಳು, ಕಸಬುಗಳ ಅಧಾರವಾಗಿ ಬೆಳೆದುಕೊಂಡು ಬಂದಿವೆ. ಉದಾಹರಣೆಗೆ ಅಸ್ಪೃಶ್ಯ, ಬೀದಿ ಗುಡಿಸುವುದು, ಊರಿನ ಬಿಟ್ಟಿ ಕೆಲಸ ಮಾಡುವುದು. ಸತ್ತ ದನವನ್ನು ಊರಿಂದ ಊರಿಗೆ ಸಾಗಿಸುವುದು. ಊರಿನ ಸ್ವಚ್ಛತೆ ಕಾಪಾಡುವುದಾಗಿರುತ್ತದೆ. ಅದೇ ರೀತಿಯಾಗಿ ಮಡಿವಾಳರು ಮೇಲ್ಜಾತಿಗಳ ಬಟ್ಟೆಗಳನ್ನು ಶುಚಿಗೊಳಿಸುವುದು, "ಭಜಂತ್ರಿಗಳ ಕೆಲಸ". ತಲೆಕೂದಲು ತೆಗೆಯುವುದು, ಮುಖದ ಮೇಲಿನ ಕೂದಲು ತೆಗೆಯುವುದು, ಮನುಷ್ಯನನ್ನು ಶುಚಿಗೊಳಿಸುವುದು ಅವರ ಕಸುಬಾಗಿದೆ. ಈ ರೀತಿಯಾಗಿ ಕುಲಕಸಬುಗಳ ಆಧಾರ ಮೇಲೆ ಆಚರಣೆಗಳು ಚಾಲ್ತಿಯಲ್ಲಿ ಬರುತ್ತಾ, ಜಾತಿ-ಜನಾಂಗಗಳ ಸ್ಥಾನಮಾನಗಳ ತಕ್ಕ, ಅರ್ಹತೆಗಳನ್ನು ನೀಡುವ ಮೂಲಕ, ಅಸಮಾನತೆಗಳನ್ನು ಗುರುತಿಸುವ ಮೂಲಕ ಆಚರಣೆಗಳಿಂದ ಕಸಬು ಆಧಾರಿತವಾಗಿ ಸ್ಥಾನಮಾನಗಳನ್ನು, ಶಾಲೆಗಳನ್ನು, ಪ್ರವೇಶವನ್ನು ನಿಯಂತ್ರಿಸುತ್ತಾ ಅದರೊಂದಿಗೆ ಅವಮಾನದ ನೆಲೆಗಳು ಮಾಸದಂತೆ ನಿಯಂತ್ರಿಸುತ್ತಾ ಆಚರಣೆಗಳಿಗೆ ಒತ್ತು ನೀಡುತ್ತಾ ಬಂದಿದೆ.

ಅಸ್ಪೃಶ್ಯತೆಯನ್ನು ಮಾನವ ವಿರೋಧಿ ಎಂದು ಯಾಕೆ ವಿರೋಧಿಸಬೇಕು

ಸನಾತನ ಬ್ರಾಹ್ಮಣವಾದ ಸಿದ್ಧಾಂತ, ಕರ್ಮಸಿದ್ಧಾಂತಗಳು ಅಸ್ಪೃಶ್ಯತೆಯನ್ನು ಅಳಿಸದಂತೆ ಉಳಿಸಿಕೊಳ್ಳುವ ಬೆಂಬಲಿತವಾದವಾಗಿದೆ. ಕಾಲಕ್ರಮೇಣ ಬ್ರಾಹ್ಮಣವಾದವು ಹಿಂದೂಧರ್ಮದ ಮೂಲ ನೆಲೆಗಳು ಭದ್ರವಾಗಿರಲು ಸೂಕ್ತ ರಕ್ಷಣೆ ಕೊಡುತ್ತಾ, ತಳಸಮುದಾಯಗಳ(ದಲಿತರ) ಮೇಲೆ ದೌರ್ಜನ್ಯಗಳನ್ನು ಮಾಡುವ, ದಲಿತರನ್ನು ನಿಯಂತ್ರಿಸುವ, ಗುಲಾಮಗಿರಿಯನ್ನಾಗಿ ಹಾಗೂ

ಅಸಮಾನವಾದ ಶೋಷಣೆಗೆ ಒಳಪಡಿಸುವುದೇ ಹಿಂದೂ ಧರ್ಮದ ಕೆಲಸವಾಗುತ್ತಾ ಬಂದಿದೆ. ಅವಮಾನ ಶೋಷಣೆಗಳ ವಿರುದ್ಧ ಸೆಟೆದು ನಿಂತು ನಾಗರಿಕವಾಗಿ ನಮ್ಮ ಹಕ್ಕುಗಳನ್ನು ಕೇಳುವ ಹಾಗೂ ಸಾಮಾಜಿಕ ಸಮಾನತೆಯ ಕಡೆಗೆ ಇಟ್ಟ ನಡಿಗೆ ಸವರ್ಣೀಯರಿಂದ ವಿರೋಧವನ್ನು ಎದುರಿಸಬೇಕಾಗುತ್ತದೆ.

ಇದರಿಂದ ಅವಮಾನಿತ ಸಮುದಾಯವು ೧೯೭೦ರ ದಶಕದಲ್ಲಿ ಭಾರತಾದ್ಯಂತ ಸಾಮಾಜಿಕ ಅಸಮಾನತೆಗಾಗಿ ಹುಟ್ಟಿ ಚಳುವಳಿಗಳ ಸ್ವರೂಪವನ್ನು ಪಡೆದುಕೊಂಡಿರುವುದೇ ದಲಿತ ಚಳುವಳಿಗಳು. ಟಿ.ಕೆ. ಓಮನ್ ಅವರ ಪ್ರಕಾರ "ಸಾಮಾಜಿಕ ಚಳುವಳಿ" ಎಂದರೆ ನಿರ್ದಿಷ್ಟವಾದ ಸಾಂಸ್ಥಿಕ ಚೌಕಟ್ಟಿನೊಳಗಡೆ ಸಿದ್ಧಾಂತ, ಒಂದರಿಂದ ಪ್ರೇರೇಪಿತವಾದ ಸಾಮೂಹಿಕ ಕ್ರಿಯೆಯಾಗಿದೆ. ಇದು ಬದಲಾವಣೆ ಅಥವಾ ಸ್ಥಿರತೆಯನ್ನು ತರುವ ಆಶಯವನ್ನು ಹೊಂದಿರುತ್ತದೆ. ಸ್ಮೆಲ್ಸರ್ ಅವರ ಪ್ರಕಾರ ಸಾಮಾಜಿಕ ಬದಲಾವಣೆಯನ್ನು ತರುವ ಅಥವಾ ತಡೆಯಲು ನಡೆಸುವ ಸಂಘಟಿತ ಪ್ರಯತ್ನವೇ ಸಾಮಾಜಿಕ ಚಳುವಳಿಯಾಗಿದೆ. ಮೇಲು-ಕೀಳು ಎಂಬ ಭಾವನೆ ತುಂಬಿ ತುಳುಕುವ ಕಾಲದಲ್ಲಿ ದಲಿತರು ಅವಮಾನಿತರಾಗಬೇಕು. ಹೊಲಸು ಕಸುಬುಗಳಿಂದ ಹೊರ ಬರಬಾರದು. ಪ್ರಜ್ಞಾವಂತರಾಗಬಾರದು. ಶಿಕ್ಷಣ ಪಡೆಯಬಾರದು, ಆರ್ಥಿಕವಾಗಿ ಕೃಷಿ, ಭೂಮಿ, ಉತ್ಪಾದನೆ ವ್ಯವಸ್ಥೆಯಿಂದ ದೂರವಿರಬೇಕು. ಕೀಳು ಜಾತಿಯವರು ಕೀಳಾಗಿರಬೇಕೆಂದೇ ಅವರಗಳ ಪ್ರಜ್ಞಾವಂತಿಕೆ ಸಹಿಸದ ಸನಾತಿಗಳು, ದಲಿತರನ್ನು ಮಾನವ ವಿರೋಧಿಗಳಂತೆ ಕಾಣುತ್ತಾರೆ.[೧೭]

ಕರ್ನಾಟಕ ರಾಜ್ಯದ ಸಾಕಷ್ಟು ಗ್ರಾಮ ಪಂಚಾಯತಿಗಳಲ್ಲಿ ಅಸ್ಪೃಶ್ಯತೆ ಇನ್ನೂ ಆಚರಣೆಯಲ್ಲಿದೆ. ಎಂದು ಐಸೆಕ್ ಪ್ರಾಧ್ಯಾಪಕರು ಅಧ್ಯಯನದಲ್ಲಿ ಹೇಳಿದ್ದಾರೆ ಹಾಗೆಯೇ ಗ್ರಾಮ ಪಂಚಾಯಿತಿ ಸಭೆಗಳು ನಡೆಯುವಾಗ ದಲಿತ ಸಮುದಾಯಕ್ಕೆ ಸೇರಿದ ಸದಸ್ಯರನ್ನು ಉದ್ದೇಶ ಪೂರ್ವಕವಾಗಿ ಹೊರಗೆ ಕೂರಿಸಲಾಗುತ್ತಿದೆ ಎಂದು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ ನಡೆಸಿರುವ ಅಧ್ಯಯನಕಾರರಾದ ಕೆ. ಶಿವಣ್ಣ, ಮಂಜುಳ ಭಾರತಿ ಮತ್ತು ಕೆ.ಜಿ. ಗಾಯತ್ರಿದೇವಿ. ವಿಶ್ಲೇಷಿಸಿದ್ದಾರೆ. ಇದರ ಕ್ಷೇತ್ರ ಕಾರ್ಯಕ್ಕಾಗಿ ಬಳ್ಳಾರಿ, ಕಲಬುರ್ಗಿ, ಬಾಗಲಕೋಟೆ, ಮಂಡ್ಯ, ದಕ್ಷಿಣ ಕನ್ನಡ, ಜಿಲ್ಲೆಗಳಲ್ಲಿ ಮಾತ್ರ ಅಸ್ಪೃಶ್ಯತೆ ಇನ್ನೂ ಇದೆ ಎಂಬುದು ಅವರ ಅಧ್ಯಯನ ಹೇಳುತ್ತದೆ.

ಆದರೆ ಭಾರತದ ಪ್ರತಿಹಳ್ಳಿ ನಗರ, ಪಟ್ಟಣಗಳಲ್ಲಿ ಬಿಟ್ಟು ಉಳಿದೆಲ್ಲ ಪ್ರದೇಶಗಳಲ್ಲಿ ಅಸ್ಪೃಶ್ಯತೆ ಇಲ್ಲಾ ಎನ್ನುವಂತಿದೆ ಹಾಗೂ ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಭಾರತದ್ಯಾಂತ ಸಾಮಾಜಿಕ ಸಮಾನತೆ ಸಿಕ್ಕಿದೆ ಎನ್ನುವಂತ ಗ್ರಹಿಕೆಗೆ ಬರುತ್ತದೆ. ೧೯೯೩ ಅಧಿನಿಯಮ ೭೩/೭೪ರ ಕಾಯ್ದೆಯ ತಿದ್ದುಪಡಿಯು ಗ್ರಾಮೀಣ ಪ್ರದೇಶದಲ್ಲಿ ಜನತೆ ಮತ್ತು ಸಮಾನಸಮಾಜ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಆರೋಗ್ಯ, ಆಹಾರ ಮುಂತಾದ ಮೂಲಭೂತ ಸೌಲಭ್ಯಗಳು ಸಿಗುತ್ತಿದೆ ಎನ್ನುವ ಕಡೆ ಗ್ರಾಮ ಪಂಚಾಯಿತಿಗಳು ನಡೆಯುತ್ತಿವೆ ಎಂಬಂತೆ ಉಲ್ಲೇಖಿಸಲಾಗಿದೆ.

ಭಾರತ ಸಂದರ್ಭದಲ್ಲಿ ದೇಶದ ಎಲ್ಲಾ ಗ್ರಾಮ ಪಂಚಾಯಿತಿಗಳ ಆಡಳಿತ ವೈಖರಿ ಈ ಮೇಲಿನ ೫ ಜಿಲ್ಲೆಗಳಂತಿವೆ. ಪ್ರಸಕ್ತ ಸಾಲಿನಲ್ಲಿಯೂ ಗ್ರಾಮೀಣ ಪ್ರದೇಶದಲ್ಲಿ ಅಧಿಕಾರ ವಿಕೇಂದ್ರೀಕರಣಕ್ಕಾಗಿ ರೂಪುಗೊಂಡ ಪಂಚಾಯತ್‌ರಾಜ್ ವ್ಯವಸ್ಥೆಯಿಂದ ಏನು ಬದಲಾಯಿಸಲಾಗಲಿಲ್ಲ ಕೇವಲ ಅವುಗಳ ಸ್ವರೂಪ ಬದಲಾಯಿಸಿಕೊಂಡು ಅಸಲಿ ಅಸಮಾನತೆ, ಶೋಷಣೆ, ಗುಲಾಮಗಿರಿ, ಅಸ್ಪೃಶ್ಯತೆ, ನಿರಂತರತೆಯಲ್ಲಿವೆ, ಉಳಿದಂತೆ ೧೯೯೩ ಅಧಿನಿಯಮ ೭೩/೭೪ನೇ ತಿದ್ದುಪಡಿಯಿಂದ ಗ್ರಾಮೀಣ ಅಭಿವೃದ್ಧಿ ಮತ್ತು ಅಧಿಕಾರ ಹಂಚಿಕೆಗಾಗಿ ರಾಜಕೀಯ ಮೀಸಲಾತಿ ಕೊಟ್ಟಿದೆ. ಈ ಮೀಸಲಾತಿಯ ಪ್ರತಿನಿಧಿಕರಣದ ಆಯ್ಕೆಗೆ ಮಾತ್ರ ಸದ್ಯಸತ್ವದ ಸ್ಥಾನ ದೊರಕಿದೆ. ಇದರ ಅಧಿಕಾರ ಪ್ರಬಲ ಕೋಮಿಗೆ ಸೇರಿದ, ಮೇಲ್ವರ್ಗದವರು ಹಾಗೂ ಭೂಮಾಲೀಕರ ಕೊಡುವ ಭಿಕ್ಷೆಯಾಗಿದೆ, ಹೆಸರಿಗೆ ಮಾತ್ರ ಸಂವಿಧಾನಾತ್ಮಕ ರಾಜಕೀಯ ಮೀಸಲಾತಿ ಪ್ರತಿನಿಧೀಕರಣ ಎಂದು ಕೋರಿಕೆಗೆ ಮಾತ್ರ ಕಾಣುತ್ತದೆ. ಉದಾ: ಯಾವುದೇ ಹಳ್ಳಿಯಲ್ಲಿ ನೀರಿನ ಕೊಳಾಯಿ, ಹಾಗೂ ದೇವಾಲಯಗಳ ಪ್ರದೇಶ ಇನ್ನೂ ದಲಿತರು ಪ್ರವೇಶಿಸಲು ಸಾಧ್ಯವಾಗುತಿಲ್ಲ ಸದಸ್ಯರೆ ಸಾಮಾಜಿಕ ನ್ಯಾಯ ಕೇಳಲು ಹೋದವರನ್ನು "ಸಾಮಾಜಿಕ ಬಹಿಷ್ಕಾರಗಳಿಗೆ" ಒಳಗಾಗಿರುವುದು ನಮ್ಮೆಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಈ ಸಾಮಾಜಿಕ ಪಿಡುಗುಗಳು ಪ್ರತಿ ಗ್ರಾಮ ಪಂಚಾಯಿತಿಗಳಲ್ಲಿ ಜೀವಂತವಾಗಿದೆ. ಈ ಹಿನ್ನೆಲೆಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯು ಅಸ್ಪೃಶ್ಯತೆ ನಿವಾರಿಸುವಲ್ಲಿ ವಿಫಲವಾಗಿದೆ ಎನ್ನಬಹುದು.[೧೮]

ಕೋಲಾರ ಜಿಲ್ಲೆ ಕರ್ನಾಟಕದ ೩೦ ಜಿಲ್ಲೆಗಳಲ್ಲಿ ಒಂದಾಗಿದ್ದು, ಕೋಲಾರ ಜಿಲ್ಲಾ ಮಾನವ ಅಭಿವೃದ್ಧಿ ವರದಿ-೨೦೧೪ ಕರ್ನಾಟಕದಲ್ಲಿ ಕೋಲಾರ ಜಿಲ್ಲೆ ಅತೀ ಹೆಚ್ಚಿನ ಎಸ್.ಸಿ. ಜನಸಂಖ್ಯೆಯನ್ನು ಹೊಂದಿದೆ. ಜಿಲ್ಲೆಯಲ್ಲಿ ೪೬೫೮೬೭ ಎಸ್.ಸಿ.ಗಳಿದ್ದು, ಕೋಲಾರ ಜಿಲ್ಲೆಯ ಒಟ್ಟು ಜನಸಂಖ್ಯೆ

ಕೋಷ್ಟಕ ೪.೧. ಕೋಲಾರ ಜಿಲ್ಲೆಯ ಪ.ಜಾ./ಪ.ಪಂ. ಜನಸಂಖ್ಯಾ ಪ್ರಮಾಣ

ತಾಲೂಕು	ಪ.ಜಾತಿ ಜನಸಂಖ್ಯೆ	ಜನಸಂಖ್ಯೆ ಪ್ರಮಾಣ	ಪ.ಪಂಗಡ ಜನಸಂಖ್ಯೆ	ಜನಸಂಖ್ಯೆ ಪ್ರಮಾಣ
ಶ್ರೀನಿವಾಸಪುರ	೫೭೮೩೨	೨೮.೫೯	೨೧೫೩೭	೧೦.೬೫
ಕೋಲಾರ	೯೦೯೮೯	೨೩.೬೧	೧೫೪೧೦	೪
ಮಾಲೂರು	೬೦೧೮೪	೨೫.೪	೨೨೩೭೫	೯.೪೪
ಬಂಗಾರಪೇಟೆ	೧೮೯೬೧	೪೦.೧೮	೧೦೯೦೫	೨.೪೧
ಮುಳಬಾಗಿಲು	೭೪೯೦೧	೨೮.೯೩	೮೬೪೮	೩.೩೪
ಜಿಲ್ಲೆ	೪೬೫೮೬೭	೩೦.೩೨	೭೮೮೭೫	೫.೧೩

ಆಧಾರ: ಕೋಲಾರ ಜಿಲ್ಲಾ ಮಾನವ ಅಭಿವೃದ್ಧಿ ವರದಿ-೨೦೧೪

ಪೈಕಿ ೩೦.೨ರಷ್ಟಾಗುತ್ತದೆ. ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಎಸ್.ಸಿ. ಜನಸಂಖ್ಯೆಯ ಪ್ರಮಾಣ ೧೭.೧೫ರಷ್ಟಿದೆ.

ರಾಜ್ಯದಲ್ಲಿ ಒಟ್ಟು ೧೦೪.೭೪೯೨ ಎಸ್.ಸಿ. ಜನಸಂಖ್ಯೆಯ ಪೈಕಿ ಕೋಲಾರದ ಎಸ್.ಟಿ. ಜನಸಂಖ್ಯೆ ೪.೪೫ರಷ್ಟಾಗುತ್ತದೆ. ಕೋಲಾರದಲ್ಲಿ ಎಸ್.ಟಿ. ಜನಸಂಖ್ಯೆ ೭೮೮೭೫ ಇದ್ದು ಇದು ಜಿಲ್ಲೆಯ ಒಟ್ಟು ಜನಸಂಖ್ಯೆ ೫.೧೩ರಷ್ಟಾಗುತ್ತದೆ. ಕರ್ನಾಟಕ ಒಟ್ಟು ಜನಸಂಖ್ಯೆಯ ಪೈಕಿ ೬.೯೫ರಷ್ಟಾಗುತ್ತದೆ. ಬಂಗಾರಪೇಟೆಯಲ್ಲಿ ಅತಿ ಹೆಚ್ಚಿನ ಎಸ್.ಸಿ. ಜನಸಂಖ್ಯೆ ಇರುವುದನ್ನು ಸೂಚಿಸುತ್ತದೆ. ತಾಲೂಕಿನ ಒಟ್ಟು ಜನಸಂಖ್ಯೆಯ ಪೈಕಿ ೪೦.೧೮ ರಷ್ಟು ಎಸ್.ಸಿ. ಜನಸಂಖ್ಯೆ ಇರುತ್ತದೆ. ಜೊತೆಗೆ ಬಂಗಾರ ಪೇಟೆ ಜಿಲ್ಲೆಯ ಒಟ್ಟು ಜನಸಂಖ್ಯೆ ೩೯-%ರಷ್ಟು ಜನಸಂಖ್ಯೆಯನ್ನು ಹೊಂದಿದೆ. ಅತಿ ಕಡಿಮೆ ಎಸ್.ಸಿ. ಜನಸಂಖ್ಯೆಯನ್ನು ಕೋಲಾರ ತಾಲೂಕಿನಲ್ಲಿದೆ. ೨೩.೬೧%ರಷ್ಟು ಜಿಲ್ಲೆಯಲ್ಲಿ ಮಾಲೂರು ಅತಿ ಹೆಚ್ಚಿನ ಎಸ್.ಟಿ. ಜನಸಂಖ್ಯೆಯನ್ನು ಹೊಂದಿದೆ. ಶ್ರೀನಿವಾಸಪುರ ತಾಲೂಕು ನಂತರದ ಸ್ಥಾನದಲ್ಲಿದೆ. ಶ್ರೀನಿವಾಸಪುರ ತಾಲೂಕಿನ ಒಟ್ಟು ಜನಸಂಖ್ಯೆಯ ಪೈಕಿ ಎಸ್.ಟಿ. ಜನಸಂಖ್ಯೆ ೧೦.೬೫%ರಷ್ಟಿದೆ. ಜಿಲ್ಲೆಯಲ್ಲಿ ಬಂಗಾರಪೇಟೆ ತಾಲೂಕು ಅತಿ ಕಡಿಮೆ ಎಸ್.ಟಿ. ಜನಸಂಖ್ಯೆಯನ್ನು ಹೊಂದಿರುವ ತಾಲೂಕು ಆಗಿದೆ. ಜಿಲ್ಲೆಯಲ್ಲಿ ಮುಳಬಾಗಿಲು ಅತಿ ಕಡಿಮೆ ಎಸ್.ಟಿ. ಜನಸಂಖ್ಯೆ ಇರುವ ತಾಲೂಕಾಗಿದೆ.

ಕೋಷ್ಟಕ ೪.೨. ಕೋಲಾರ ಜಿಲ್ಲೆಯ ಪ.ಜಾ./ಪ.ಪಂ.ಗಳ ಗ್ರಾಮೀಣ ಮತ್ತು ನಗರ ಜನಸಂಖ್ಯಾ ಪ್ರಮಾಣ

ತಾಲೂಕು	ಪ.ಜಾತಿ		ಪ.ಪಂಗಡ	
	ಗ್ರಾಮೀಣ	ನಗರ	ಗ್ರಾಮೀಣ	ನಗರ
ಶ್ರೀನಿವಾಸಪುರ	೯೧.೯೬	೮.೦೪	೯೬.೬೫	೩.೩೫
ಕೋಲಾರ	೮೧.೮೩	೧೮.೧೭	೮೬.೪೧	೧೩.೫೯
ಮಾಲೂರು	೮೮.೬೯	೧೧.೩೧	೯೩.೭೩	೬.೨೭
ಬಂಗಾರಪೇಟೆ	-೪೩.೭೩	೫೬.೨೭	೮೩.೨೮	೧೬.೭೨
ಮುಳಬಾಗಿಲು	೮೯.೨೩	೧೦.೭೭	೯೨.೦೨	೭.೯೮
ಜಿಲ್ಲೆ	೭೦.೨೮	೨೯.೭೨	೯೧.೪೬	೮.೫೮

ಆಧಾರ: ಕೋಲಾರ ಜಿಲ್ಲಾ ಮಾನವ ಅಭಿವೃದ್ಧಿ ವರದಿ - ೨೦೧೪

ಬಂಗಾರಪೇಟೆ ತಾಲೂಕು ಹೊರತುಪಡಿಸಿದಂತೆ ಬಹುತೇಕವಾಗಿ ಜಿಲ್ಲೆಯಲ್ಲಿ ಬಹುತೇಕವಾಗಿ ಎಸ್.ಸಿ. ಹಾಗೂ ಎಸ್.ಟಿ. ಜನಸಂಖ್ಯೆ ಗ್ರಾಮೀಣ ಪ್ರದೇಶದಲ್ಲಿದೆ. ಬಂಗಾರಪೇಟೆಯಲ್ಲಿ ಬಹುತೇಕವಾಗಿ

ಎಸ್.ಸಿ. ಜನಸಂಖ್ಯೆ ಹಾಗೂ ಎಸ್.ಟಿ. ಜನಸಂಖ್ಯೆ ಸ್ವಲ್ಪ ಪ್ರಮಾಣದಲ್ಲಿ ನಗರ ಪ್ರದೇಶಗಳಲ್ಲಿ ನೆಲೆಸಿವೆ. ಈ ಪ್ರಕಾರ ಸಂಕಷ್ಟಕ್ಕೀಡಾದ ಜನರ ಅಭಿವೃದ್ಧಿಯಲ್ಲಿ ಗ್ರಾಮೀಣ ಅಭಿವೃದ್ಧಿ ಬಹುಮುಖ ಪಾತ್ರ ನಿರ್ವಹಿಸುತ್ತದೆ. ಕೋಲಾರ ೧೦.೭೭%ರಷ್ಟು ಒಟ್ಟಾರೆ ದಶಕವಾರು ಬೆಳವಣಿಗೆ ಸಾಕ್ಷಿಯಾಗಿದೆ. ಎಸ್.ಸಿ. ಜನಸಂಖ್ಯೆ ಬೆಳವಣಿಗೆ ೧೭.೩೬ರಷ್ಟಿದೆ ಮತ್ತು ಎಸ್.ಟಿ. ಜನಸಂಖ್ಯೆ ಬೆಳವಣಿಗೆ ೧೫.೬ರಷ್ಟಿದೆ.

ಕೋಷ್ಟಕ ೪.೩. ಕೋಲಾರ ಜಿಲ್ಲೆಯ ಸಾಮಾಜಿಕ ಗುಂಪುಗಳಲ್ಲಿ ಲಿಂಗಾನುಪಾತ

ತಾಲೂಕು	ಪ.ಜಾತಿ	ಪ.ಪಂಗಡ	ಇತರೆ	ಒಟ್ಟು
ಶ್ರೀನಿವಾಸಪುರ	೯೯೦.೨೩	೯೯೮೨.೭೮	೯೯೭೮೮	೯೮೧.೯೨
ಕೋಲಾರ	೯೯೧.೪೪	೯೬೭.೮೨	೯೭೦.೩೧	೯೭೫.೧೫
ಮಾಲೂರು	೯೯೨.೧೯	೯೬೨.೭೨	೯೪೨.೩೧	೯೫೬.೬೭
ಬಂಗಾರಪೇಟೆ	೧೦೧೯.೧೬	೯೮೭೦೬	೯೬೯.೨	೯೮೯.೪೧
ಮುಳಬಾಗಿಲು	೯೯೮.೯೧	೯೫೮.೩೩	೯೭೯.೫	೯೮೪.೩೬
ಜಿಲ್ಲೆ	೧೦೦೩.೩೩	೯೭೨.೦೨	೯೬೮.೧೫	೯೭೮.೮೯

ಆಧಾರ: ಕೋಲಾರ ಜಿಲ್ಲಾ ಮಾನವ ಅಭಿವೃದ್ಧಿ ವರದಿ-೨೦೧೪

ಈ ಮೇಲಿನ ಕೋಷ್ಟಕದಿಂದ ಎಸ್.ಸಿ. ಸಮುದಾಯಗಳು ಅತಿ ಹೆಚ್ಚಿನ ಲಿಂಗಾನುಪಾತ ಹೊಂದಿದೆ ಮತ್ತು ಎಸ್.ಸಿ., ಎಸ್.ಟಿ.ಯೇತರ ಜನಸಂಖ್ಯೆ ಪೈಕಿ ಲಿಂಗಾನುಪಾತ ಬಹಳ ಕಡಿಮೆ ಇದೆ. ಎಸ್.ಟಿ ಸಮುದಾಯಗಳ ಪೈಕಿ ಮತ್ತು ಇತರ ತಾಲೂಕುಗಳ ಪೈಕಿ ಇತರೆ ಸಾಮಾಜಿಕ ವರ್ಗಗಳ ಹೋಲಿಕೆಯಲ್ಲಿಯೂ ಮುಳಬಾಗಿಲು ತಾಲೂಕು ಹಾಗೂ ಮಾಲೂರು ತಾಲೂಕುಗಳಲ್ಲಿ ಅತಿ ಕಡಿಮೆ ಲಿಂಗಾನುಪಾತವಿದೆ. ಜಿಲ್ಲೆಯಲ್ಲಿ ಎಸ್.ಸಿ. ಹಾಗೂ ಎಸ್.ಟಿ.ಗಳ ಲಿಂಗಾನುಪಾತಗಳು ೧೯೯೧ರ ನಂತರ ಸತತವಾಗಿ ಜನಗಣತಿ ವರದಿಯಲ್ಲಿ ಹೆಚ್ಚಿನ ಪ್ರವೃತ್ತಿಯನ್ನು ಸೂಚಿಸುತ್ತವೆ.

೪.೩. ಶಿಕ್ಷಣ

ಭಾರತದ ೨೦೦೧ರ ಜನಗಣತಿಯಂತೆ ೪,೪೨,೨೪೦(ಅಂದರೆ ಒಟ್ಟು ಜನಸಂಖ್ಯೆಯ ಶೇಕಡ ೧೬.೨೧ರಷ್ಟು) ಜನರು ದಲಿತರು. ಇದರಲ್ಲಿ ಗ್ರಾಮೀಣ ಭಾರತದ ಶೇಕಡ ೪೧.೫ರಷ್ಟು ದಲಿತರು ಮಾತ್ರ ಸಾಕ್ಷರರು. ಇದೇ ಸಂದರ್ಭದಲ್ಲಿ ಕರ್ನಾಟಕದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಒಟ್ಟು ದಲಿತರಲ್ಲಿ ಶೇ. ೪೭.೨ರಷ್ಟು ಜನರು ಮಾತ್ರ ಸಾಕ್ಷತರಾಗಿದ್ದಾರೆ. ಇದನ್ನು ಲಿಂಗವಾರು ಬಿಡಿ ಬಿಡಿಯಾಗಿ ನೋಡಿದರೆ ಪುರುಷರಲ್ಲಿ ಶೇಕಡ ೫೮.೭೦ರಷ್ಟು ಮತ್ತು ಮಹಿಳೆಯರಲ್ಲಿ ಶೇಕಡ ೩೫.೬ರಷ್ಟು ಜನರು ಮಾತ್ರ ಸಾಕ್ಷರರಾಗಿರುತ್ತಾರೆ. ೧೬.೧೪ ವಯಸ್ಸಿನ ಮಕ್ಕಳಲ್ಲಿ ಕೇವಲ

ಶೇಕಡ ೬೨.೫ರಷ್ಟು ಮಕ್ಕಳು ಮಾತ್ರ ಒಂದಲ್ಲೊಂದು ಘಟ್ಟದಲ್ಲಿ, ಶಾಲೆಗೆ ದಾಖಲಾತಿ ಹೊಂದಿದವರಾಗಿದ್ದರೆ, ಉಳಿದ ಶೇಕಡಾ ೧೭.೫ರಷ್ಟಕ್ಕಿಂತಲೂ ಹೆಚ್ಚಿನ ಮಕ್ಕಳಲ್ಲಿ ಕೆಲವರು ಶಾಲೆಗೆ ದಾಖಲಾದವರು ಹಾಗೂ ಮಧ್ಯದಲ್ಲಿಯೇ ಶಾಲೆಯನ್ನು ಬಿಟ್ಟವರಾಗಿದ್ದಾರೆ. ಆದ್ದರಿಂದ ದಲಿತ ಮಕ್ಕಳ ಶಿಕ್ಷಣ ಬಹುಮುಖ್ಯವಾದ ವಿಷಯವಾಗಿದೆ. ದಲಿತರ ಶೈಕ್ಷಣಿಕ ಅವಕಾಶದ ಬಗ್ಗೆ ಯೋಚಿಸುವಾಗ ನಾವು ಅದನ್ನು ಸಾಮಾಜಿಕ ನ್ಯಾಯದ ದೃಷ್ಟಿಕೋನದಿಂದ ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು. ಏಕೆಂದರೆ ಅವರು ಪರಂಪರಗತವಾಗಿ ಸಾಮಾಜಿಕ ನಿಕೃಷ್ಟತೆಗೆ ಒಳಗಾಗಿದ್ದಾರೆ ಹಾಗೂ ಶಿಕ್ಷಣದಿಂದ ವಂಚಿತರಾಗಿದ್ದಾರೆ.

ಇದಕ್ಕೆ ಪ್ರಮುಖ ಕಾರಣ, ಸಾಮಾಜಿಕ ಸ್ಥಾನಮಾನದ ಬದಲಾವಣೆಗೂ ಆರ್ಥಿಕ ಪರಿಸ್ಥಿತಿಗೂ ಶೈಕ್ಷಣಿಕ ಅವಕಾಶಕ್ಕೂ ನೇರ ಸಂಬಂಧವಿರುವುದನ್ನು ಗಮನಿಸಿದ ಮೂಲಭೂತವಾದಿಗಳು ದಲಿತರ ಮೇಲೆ ಅದರಲ್ಲಿಯೂ ಅಸ್ಪೃಶ್ಯರಿಗೆ ಎಲ್ಲಾ ಆಧುನಿಕ ಸಾಮಾಜಿಕ ಸಂಸ್ಥೆ ಮತ್ತು ಸಂಘಟನೆಗಳ ಅವಕಾಶಗಳು ದೊರಕದಂತೆ, ತಮಗೆ ಬೇಕಾದ ರೀತಿಯ ಸಾಮಾಜಿಕ ವ್ಯವಸ್ಥೆಯನ್ನು ಹುಟ್ಟು ಹಾಕಿತ್ತು. ಈಗಲೂ ಕೂಡಾ ಇಂಡಿಯಾದ ಸಾಮಾಜಿಕ ರಚನೆ ಕುರಿತು ಮಾತನಾಡುವ ಬರೆಯುವ ಬಹುತೇಕರು ಏಣಿಶ್ರೇಣಿಯನ್ನು ಒಂದು ಸಾಮಾಜಿಕ ವ್ಯವಸ್ಥೆಯೆಂದು ಕರೆಯುತ್ತಾರೆ. ಇದು ವ್ಯವಸ್ಥೆಯಲ್ಲ, ಅವ್ಯವಸ್ಥೆ. ಏಕೆಂದರೆ ಒಂದು ವ್ಯವಸ್ಥೆಯಲ್ಲಿ ಸಾಮಾಜಿಕ ನ್ಯಾಯ, ಸಮಾನತೆಗೆ ಅವಕಾಶವಿರಬೇಕು. ಜಾತಿ ಏಣಿಶ್ರೇಣಿಯಲ್ಲಿ ಅವಕಾಶ ಎಲ್ಲಿದೆ?

ಸಾಂಪ್ರದಾಯಿಕ ಸಾಮಾಜಿಕ ಪರಿಸರದಲ್ಲಿ ದಲಿತರ ಕಲಿಯುವಿಕೆಯನ್ನು ನಿಷೇಧಿಸಲಾಗಿತ್ತು. ಬ್ರಿಟೀಷ್ ಪೂರ್ವ ಇಂಡಿಯಾದಲ್ಲಿ ತಳ ಸಮುದಾಯಗಳು ಪ್ರಾಥಮಿಕ ಶಿಕ್ಷಣ ನೀಡುತ್ತಿದ್ದ ಸಾಂಪ್ರದಾಯಿಕ ಸಂಸ್ಥೆಗಳಿಂದಲೂ ಬಹಿಷ್ಕರಿಸಲ್ಪಟ್ಟರು. ಆದರೂ ೧೯ನೇ ಶತಮಾನದ ಮಧ್ಯಭಾಗದಲ್ಲಿ ಅದರಲ್ಲಿಯೂ ಬ್ರಿಟೀಷ್ ಆಡಳಿತದಲ್ಲಿ ಶೈಕ್ಷಣಿಕ ಅವಕಾಶಗಳು ಮತ್ತು ಹೊಸ ರೀತಿಯ ಕಸಬುಗಳು ಸಾಂಪ್ರದಾಯಿಕ ವ್ಯವಸ್ಥೆಯಿಂದ ಪ್ರತ್ಯೇಕಿಸಲ್ಪಟ್ಟು, ಅಸ್ಪೃಶ್ಯರಿಗೂ ತೆರೆಯಲ್ಪಟ್ಟವು. ಕೇವಲ ಕೆಲವೇ ದಲಿತ ಉಪ ಜಾತಿಗಳಿಗೆ ಅದನ್ನು ಪಡೆಯಲು ಸಾಧ್ಯವಾಯಿತು. ಹೀಗೆ ದೊರತ ಅವಕಾಶದ ಪ್ರಮಾಣ ಇದ್ದಿದ್ದರಿಂದ ಅದರಲ್ಲಿಯೂ ನಿರ್ದಿಷ್ಟವಾಗಿ ಅನುಕೂಲಕರ ಸಾಮಾಜಿಕ ರಚನೆಯಲ್ಲಿದ್ದ ದಲಿತರಿಗೆ ಮಾತ್ರ ಹೆಚ್ಚಿನ ಅನುಕೂಲವಾಗಿದೆ ಹೊರತು ಅಸ್ಪೃಶ್ಯತೆ ಅನುಭವಿಸಿದ ದಲಿತ ಜಾತಿಯ ಒಳಗೆ ಇರುವ ಕೆಳವರ್ಗಕ್ಕೆ ಇನ್ನೂ ಶೈಕ್ಷಣಿಕ ಅವಕಾಶ ದೊರಕಬೇಕಾದ ಅಗತ್ಯವಿದೆ.

ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಶೈಕ್ಷಣಿಕವಾಗಿ ಶತಮಾನಗಳಿಂದ ವಂಚಿತರಾದ ದಲಿತರನ್ನು ರಕ್ಷಿಸಲು ಹಾಗೂ ಅವರನ್ನು ಪ್ರೋತ್ಸಾಹಿಸಲು ಸ್ವಾತಂತ್ರ್ಯ ಭಾರತದ ಸಂವಿಧಾನದಲ್ಲಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಂವಿಧಾನದ ಪರಿಚ್ಛೇದ ೪೬ರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ದಲಿತರ ಹಾಗೂ ಇತರೆ ಹಿಂದುಳಿದ ವರ್ಗದವರ ಶೈಕ್ಷಣಿಕ ಹಾಗೂ ಆರ್ಥಿಕ ಅಗತ್ಯಗಳನ್ನು ಪೂರೈಸಲು ವಿಶೇಷ ಯೋಜನೆಗಳ ಮೂಲಕ ಕ್ರಮಕೈಗೊಳ್ಳಲು ನಿರ್ದೇಶಿಸಿದೆ.

ಕರ್ನಾಟಕದಲ್ಲಿ ದಲಿತರು ಇತರ ಜಾತಿಗಳಿಗೆ ಹೋಲಿಸಿದರೆ ಆರ್ಥಿಕವಾಗಿ ಬಹಳ ದುರ್ಬಲರಾಗಿದ್ದಾರೆ. ೨೦೦೩-೦೪ನೇ ಇತರ ಜಾತಿಗಳು ಶೇಕಡ ೩೧.೩೦ಕ್ಕೆ ಹೋಲಿಸಿದರೆ, ಶೇಕಡ ೪೯.೧೮ರಷ್ಟು ಗ್ರಾಮೀಣ ಪ್ರದೇಶದ ದಲಿತ ಕುಟುಂಬಗಳು ಅಧಿಕೃತವಾಗಿ ಬಡತನರೇಖೆಗಿಂತ ಕೆಳಗಿದ್ದಾರೆ(ಇತರ ಪರಿಶಿಷ್ಟ ಪಂಗಡವನ್ನು ಹೊರತುಪಡಿಸಿ) ಅದೇ ವರ್ಷದಲ್ಲಿ ಶೇಕಡ ೫೪.೧೪ರಷ್ಟು ನಗರ ಪ್ರದೇಶದ ದಲಿತರ ಕುಟುಂಬಗಳು ಕೇವಲ ಒಂದು ಎಕರೆ ಅಥವಾ ಅದಕ್ಕಿಂತಲೂ ಕಡಿಮೆ ಭೂಮಿ ಹೊಂದಿದವರಾಗಿದ್ದರು. ಕೃಷಿ ಭೂಮಿಯ ಒಡೆತನವು ಪರಿಶಿಷ್ಟ ಜಾತಿಗಳಲ್ಲಿ ಕನಿಷ್ಟ ಮಟ್ಟದಲ್ಲಿದೆ. ಬಹುತೇಕ ದಲಿತ ಭೂಹಿಡುವಳಿದಾರರು ಸಣ್ಣ ಹಾಗೂ ಆರ್ಥಿಕವಾಗಿ ಲಾಭವಲ್ಲದ ಭೂಹಿಡುವಳಿದಾರರು, ಕರ್ನಾಟಕ ಭೂ ಸುಧಾರಣೆ ಕಾಯಿದೆಯ ಮೂಲಕ ಕರ್ನಾಟಕವು ತೆಗೆದುಕೊಂಡ ವಿವಿಧ ಕ್ರಮಗಳು ಸ್ವಲ್ಪಮಟ್ಟಿಗೆ ಪರಿಶಿಷ್ಟ ಜಾತಿಗೆ ಸೇರಿದ ಗೇಣಿದಾರರು ಭೂಮಿಯ ಮಾಲೀಕರಾಗುವಂತೆ ಮಾಡಿತು. ಆದರೂ ಕರ್ನಾಟಕದ ಒಟ್ಟು ೭೦.೭೯ ಲಕ್ಷ ಸಾಗುವಳಿಯ ಹಿಡುವಳಿಯಲ್ಲಿ ಶೇಕಡ ೧೧.೬ರಷ್ಟು ಸಾಗುವಳಿ ಹಿಡುವಳಿಗಳನ್ನು ಪರಿಶಿಷ್ಟ ಜಾತಿಯಗಳ ಜನರು ಹೊಂದಿರುತ್ತಾರೆ. ೧೨೩.೦೭ ಲಕ್ಷ ಹೆಕ್ಟೇರುಗಳಷ್ಟು ಸಾಗುವಳಿ ಪ್ರದೇಶದಲ್ಲಿ ಪರಿಶಿಷ್ಟ ಜಾತಿಗಳು ೧೦.೭೧ ಲಕ್ಷ ಹೆಕ್ಟೇರುಗಳಲ್ಲಿ ಸಾಗುವಳಿ ಪ್ರದೇಶಗಳನ್ನು ಹೊಂದಿದ್ದಾರೆ. ಅದು ಸುಮಾರು ಶೇಕಡ ೮.೭ರಷ್ಟು ಇರುತ್ತದೆ. ರಾಜ್ಯದ ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಜನರು ಶೇಕಡ ೧೬.೨೬ರಷ್ಟು ಇದೆ. ಅವರ ಕೃಷಿ ಭೂಮಿ ಒಡೆತನವು ಜನಸಂಖ್ಯೆಗೆ ಅನುಗುಣವಾಗಿರುವುದಿಲ್ಲ ಎಂಬುದು ಸ್ಪಷ್ಟ ಹಾಗೂ ಶೇಕಡ ೬೧.೦೦ರಷ್ಟು ಕುಟುಂಬಗಳು ಜೀವನಕ್ಕೆ ಕೂಲಿಯನ್ನು ಆಧರಿಸಿವೆ. ಈಗಲೂ ಜಾತಿಪದ್ಧತಿಯು ಸಾಮಾಜಿಕ ಹಾಗೂ ಆರ್ಥಿಕ ಸಂಬಂಧಗಳಲ್ಲಿ ಬಹುಮುಖ್ಯ ಪಾತ್ರವಹಿಸುತ್ತಿದೆ. ಇದು ಪ್ರಾದೇಶಿಕವಾಗಿ ಅತ್ಯಂತ ಹಿಂದುಳಿದಿರುವ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ಕಾಣುತ್ತದೆ.

ಇಂದು ಕೂಡ ಹಳ್ಳಿಗಳಲ್ಲಿ ದಲಿತರು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಅತ್ಯಂತ ಕೆಳಮಟ್ಟದಲ್ಲಿದ್ದಾರೆ. ಬಹುಸಂಖ್ಯಾತ ದಲಿತ ಕುಟುಂಬಗಳು ಅತಿಕಡಿಮೆ ಅಥವಾ ಭೂಮಿಯನ್ನು ಹೊಂದಿರುವುದಿಲ್ಲವಾದ್ದರಿಂದ ಅವರು ಪ್ರಬಲ ಹಾಗೂ ಮೇಲ್ಜಾತಿಯ ಮತ್ತು ವರ್ಗಕ್ಕೆ ಸೇರಿದವರನ್ನು ಆರ್ಥಿಕವಾಗಿ ಅವಲಂಬಿಸಬೇಕಾಗಿದೆ. ಹೀಗಾಗಿ ಅವರು ಸಾಮಾಜಿಕವಾಗಿಯು ದುರ್ಬಲರಾಗುತ್ತಾರೆ. ಅವರು ಮೇಲ್ಜಾತಿಯ ಮತ್ತು ವರ್ಗದವರಿಂದ ದಮನಿತಗೊಳ್ಳುತ್ತಿದ್ದರೂ ಅದು ಸರಿಯಾಗಿ ದಾಖಲಾಗಿಲ್ಲ ಮತ್ತು ದಾಖಲಾಗುತ್ತಿಲ್ಲ.

ದಲಿತರು ಈಗಲೂ ಪ್ರತ್ಯೇಕವಾದ ಗುಂಪುಗಳಲ್ಲಿ, ಅದರಲ್ಲಿಯೂ ಹಳ್ಳಿಗಳಲ್ಲಿ ಪ್ರತ್ಯೇಕವಾದ ಕೇರಿಗಳಲ್ಲಿ ವಾಸಿಸುತ್ತಿದ್ದಾರೆ. ಅವರು ಸಾಮಾನ್ಯ ಜನ ಉಪಯೋಗಿಸುವ ಬಾವಿಗಳನ್ನು ಉಪಯೋಗಿಸುವಂತಿಲ್ಲ. ದೇವಸ್ಥಾನಗಳನ್ನು ಪ್ರವೇಶಿಸುವಂತಿಲ್ಲ. ಈಗಲೂ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಹಳ್ಳಿಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಜನರಿಗೆ ಹೋಟೆಲ್‌ಗಳಲ್ಲಿ ಪ್ರತ್ಯೇಕ ವ್ಯವಸ್ಥೆ ಇದೆ. ಈ ಭಾಗದ ಹೋಟೆಲ್‌ಗಳಲ್ಲಿ ಅಸ್ಪೃಶ್ಯ ಜಾತಿಗೆ ಸೇರಿದ ಜನರಿಗೆ (ಪ್ರತ್ಯೇಕವಾದ ಗ್ಲಾಸ್, ತೋಟಗಳು)

ಇಟ್ಟಿರುತ್ತಾರೆ. ಅವರಿಗೆ ಹೋಟೆಲ್‌ಗಳಲ್ಲಿ ಪ್ರತ್ಯೇಕ ಸಣ್ಣ ಸ್ಥಳವನ್ನು ನಿಗದಿಪಡಿಸಲಾಗಿದೆ. ಸಾರ್ವಜನಿಕ ಸಿಹಿ ನೀರಿನ ಬಾವಿಯಿಂದ ಅಸ್ಪೃಶ್ಯರು ನೀರು ತೆಗೆದುಕೊಳ್ಳುವಾಗಿಲ್ಲ. ನಿರ್ದಿಷ್ಟವಾಗಿ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನಲ್ಲಿ (ಸಿದ್ದೇಕೊಪ್ಪ ಗ್ರಾಮದಲ್ಲಿ) ಹಳ್ಳಿಗಳಲ್ಲಿರುವ ದೇವಸ್ಥಾನಗಳಿಗೆ ಇವರಿಗೆ ಪ್ರವೇಶ ಇರಲಿಲ್ಲ. ಈಗಲೂ ಸಾರ್ವಜನಿಕ ಸ್ಥಳಗಳಲ್ಲಿ ದಲಿತರು ಹೆಚ್ಚು ಸ್ವಾತಂತ್ರ್ಯದಿಂದ ವ್ಯವಹರಿಸಲಾಗದ ಸಾಮಾಜಿಕ ಸ್ಥಿತಿ ಹೈದ್ರಾಬಾದ್ ಕರ್ನಾಟಕದ ಹಳ್ಳಿ ಪ್ರದೇಶಗಳಲ್ಲಿದೆ. ಗದಗ ಜಿಲ್ಲೆಯಲ್ಲಿ ಕ್ಷೌರಿಕರ(ಬಾರ್ಬರ್) ಅಂಗಡಿ ಪ್ರವೇಶ ನಿಷೇಧ. ಇನ್ನೂ ಮುಂತಾದ ಸಾಮಾಜಿಕ ಬಹಿಷ್ಕಾರಗಳು ದಲಿತರನ್ನು ಒಂದು ಪ್ರತ್ಯೇಕ ಗುಂಪಾಗಿ, ಸಾಮಾಜಿಕ ಆಚರಣೆಗಳು ಮೂಲಕ ನೋಡಿಕೊಳ್ಳಲಾಗುತ್ತಿದೆ. ಅವರ ಮೇಲೆ ದಬ್ಬಾಳಿಕೆ, ದೌರ್ಜನ್ಯ ಹಲವಾರು ವಿವಿಧ ಸಾಮಾಜಿಕ ಅಡ್ಡಿ–ಆಂತಕಗಳು ಕನಿಷ್ಟ ಧಾರ್ಮಿಕ ಸ್ಥಾನ, ಕಡುಬಡತನ ಹಾಗೂ ರಾಜಕೀಯ ಅಧಿಕಾರದಲ್ಲಿ ಶಕ್ತಿಹೀನತೆಯನ್ನು ದಲಿತರು ಅನುಭವಿಸುತ್ತಿದ್ದಾರೆ. ಇದು ಅವರ ಸಾಮಾಜಿಕ ಅಭಿವೃದ್ಧಿಗೆ ನಿರ್ದಿಷ್ಟವಾಗಿ ಶೈಕ್ಷಣಿಕ ಪ್ರಗತಿಗೆ ಅಡ್ಡಿಯಾಗಿದೆ.[೧೯]

೪.೪. ಸಾಕ್ಷರತೆ

ಮಾನವ ಅಭಿವೃದ್ಧಿಯಲ್ಲಿ ಶಿಕ್ಷಣ ಪ್ರಧಾನ ಪಾತ್ರ ವಹಿಸುತ್ತದೆ. ಆದರೆ ಶಿಕ್ಷಣ ಪ್ರಭಾವ ಮತ್ತು ಅದರ ಲಭ್ಯತೆ ಎಲ್ಲರಿಗೂ ಒಂದೇ ರೀತಿಯಾಗಿ ಲಭ್ಯವಾಗುವುದಿಲ್ಲ. ಈ ಲಭ್ಯತೆ ತಾರಮತ್ಯವನ್ನು ತೋರಿಸುತ್ತದೆ. ವಿಶೇಷವಾಗಿ ದಲಿತರಲ್ಲಿ ಇದರ ಪ್ರಮಾಣ ಅತ್ಯಂತ ಕಡಿಮೆ ಎಂದು ಅನೇಕ ಅಧ್ಯಯನಗಳು ಈಗಾಗಲೇ ಹೊರಹಾಕಿವೆ. ಸಾಕ್ಷರತೆಯನ್ನು ಅಭಿವೃದ್ಧಿಯ ಸಾಧನ ಎಂದು ಪರಿಭಾವಿಸಿಕೊಂಡು ಬರಲಾಗಿದೆ. ನಿಜ ಅಭಿವೃದ್ಧಿಯಲ್ಲಿ ಅದರ ಕಾಣಿಕೆ ಮತ್ತು ಫಲಗಳು ಜನರ ಧಾರಣ ಶಕ್ತಿಯನ್ನು ನಿರ್ಧರಿಸುವ ಒಂದು ನಿರ್ಣಾಯಕ ಸಂಗತಿ. ಕರ್ನಾಟಕದಲ್ಲಿ ಒಟ್ಟು ಸಾಕ್ಷರತಾ ಪ್ರಮಾಣ ೨೦೦೧ರಲ್ಲಿ ೬೬.೬೪ರಷ್ಟಿತ್ತು. ಇದರಲ್ಲಿ ದಲಿತೇತರ ಪ್ರಮಾಣ ಶೇ. ೭೦. ೭೦.೯೪ರಷ್ಟಿದ್ದರೆ ದಲಿತರಲ್ಲಿ ಅದು ಶೇ. ೫೧.೫೫ರಷ್ಟಿತ್ತು. ಅಂತರ ೧೯.೩೯. ಈ ಅಂತರ ಅಭಿವೃದ್ಧಿಯೂ ಎಲ್ಲರನ್ನು ಒಳಗೊಳ್ಳುವುದಿಲ್ಲ ಎಂಬುದನ್ನು ತೋರಿಸುತ್ತದೆ. ಅದೇ ರೀತಿಯಾಗಿ (ಟಿ.ಆರ್. ಚಂದ್ರಶೇಖರ, ಪುಟ ೬೩). ೨೦೧೧ರಲ್ಲಿ ಕರ್ನಾಟಕದಲ್ಲಿ ಒಟ್ಟು ಸಾಕ್ಷರತೆ ೭೫.೬೦. ಆದರೆ ಯಾದಗಿರಿ ಜಿಲ್ಲೆಯಲ್ಲಿ ಅದು ೨೦೧೧ರಲ್ಲಿ ಶೇ. ೫೨.೩೬. ರಾಯಚೂರು ಜಿಲ್ಲೆಯಲ್ಲಿ ಮಹಿಳಾ ಸಾಕ್ಷರತಾ ಪ್ರಮಾಣ ೨೦೧೧ರಲ್ಲಿ ಶೇ. ೪೯.೫೬. ಹೀಗೆ ಅಭಿವೃದ್ಧಿ ನಿರ್ವಚನೆಯಲ್ಲಿ ಅಂಕಿಸಂಖ್ಯೆಗಳನ್ನು ಸಂಗ್ರಹಿಸಿ ನೋಡುವುದಕ್ಕಿಂತ ಅದರ ಮೂಲ ಯಾವುದು ಎಂದು ನೋಡುವುದು ಮುಖ್ಯ ಆದ್ದರಿಂದ ನುಸ್‌ಬೌಮ್ ತನ್ನ ಕೃತಿಯಲ್ಲಿ ಒಂದು ದೇಶದ ಸ್ಥಿತಿಗತಿಯ ಮೌಲ್ಯಮಾಪನಕ್ಕೆ ಸಂಗ್ರಹಿಸಿದ ಸಮಗ್ರ ಮಾಹಿತಿ ದೊರೆತರೆ ಸಾಲದು. ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ ಎಂದರೆ ಪ್ರತಿಯೊಬ್ಬರು ಒಂದು ಬಿಡಿಯಾದ ವ್ಯಕ್ತಿಯಾಗಿ ಹೇಗೆ ಬದುಕು ಸಾಗಿಸುತ್ತಿದ್ದಾರೆ ಎಂಬುದಾಗಿದೆ ಎಂದಿದ್ದಾರೆ. ಕರ್ನಾಟಕದಲ್ಲಿರುವ ಸಾಮಾಜಿಕ ಗುಂಪುಗಳಲ್ಲಿ ಅಕ್ಷರದ ಹಸಿವು ಮತ್ತು ಲಿಂಗತಾರತಮ್ಯವನ್ನು ವಿಶ್ಲೇಷಣೆ ಒಳಪಡಿಸಿದ್ದಾರೆ.[೨೦]

ಕೋಷ್ಟಕ ೪.೪. ಕೋಲಾರ ಜಿಲ್ಲೆಯ ಸಾಮಾಜಿಕ ಗುಂಪುಗಳಲ್ಲಿ ಸಾಕ್ಷರತಾ ಪ್ರಮಾಣ

ಕ್ರಸಂ.	ವಿವರಗಳು	ಅಕ್ಷರಸ್ಥರು	ಅನಕ್ಷರಸ್ಥರು	ಸಾಕ್ಷರತಾ ಪ್ರಮಾಣ
೧	ಒಟ್ಟು ಜನಸಂಖ್ಯೆ	೩೦೪.೪	೧೫೨.೩೪	೬೬.೬
೨	ಒಟ್ಟು ಮಹಿಳೆಯರು	೧೨೭.೭	೯೬.೮೭	೫೬.೯
೩	ಒಟ್ಟು ಪುರುಷರು	೧೭೬.೬	೫೫.೪೭	೭೬.೧
೪	ಒಟ್ಟು ದಲಿತ ಜನಸಂಖ್ಯೆ	೫೨.೪೯	೪೯.೩೩	೫೫.೫೫
೫	ದಲಿತ ಮಹಿಳೆಯರು	೨೦.೨೩	೩೦.೦೫	೪೦.೨೩
೬	ದಲಿತ ಪುರುಷರು	೩೨.೨೬	೧೯.೨೯	೬೨.೫೮
೭	ಒಟ್ಟು ದಲಿತೇತರ ಜನಸಂಖ್ಯೆ	೨೫೧.೯	೧೦೨	೭೧.೪೫
೮	ದಲಿತೇತರ ಮಹಿಳೆಯರು	೧೦೭.೫	೬೫.೯೨	೬೩.೩೯
೯	ದಲಿತೇತರ ಪುರುಷರು	೧೪೪.೪	೩೬.೦೮	೮೦.೧೮

ಆಧಾರ: ಕೋಲಾರ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ-೨೦೧೪

ಈ ಮೇಲಿನ ಅಂಕಿ ಸಂಖ್ಯೆಗಳ ಮೂಲಕ ಕಂಡು ಬರುವುದೇನೆಂದರೆ ಸಮಾಜದಲ್ಲಿ ಅತ್ಯಂತ ದುಸ್ಥಿತಿಗೆ ಒಳಗಾಗಿರುವ ವರ್ಗ ಎಂದರೆ ದಲಿತ ಮಹಿಳೆಯರು ಎಂಬುದಾಗಿದೆ. ಈ ಅಧ್ಯಯನದಿಂದ ಕಂಡುಕೊಂಡ ಮತ್ತೊಂದು ಸತ್ಯ. ಎಂದರೆ ಸಾಕ್ಷರತೆಗೆ ಸಂಬಂಧಿಸಿದ ಅಂತರವನ್ನು ನೋಡುವಾಗ ಒಟ್ಟು ಜನಸಂಖ್ಯೆಯನ್ನು ದಲಿತರು ಮತ್ತು ದಲಿತೇತರರ ನಡುವಿನ ಅಂತರವನ್ನು ಗುರುತಿಸಲಾಗಿದೆ. ಮಹಿಳೆಯ ಮತ್ತು ಪುರುಷರ ಅಂತರ ೧೩.೫೨ರಷ್ಟು ಪುರುಷರು ಮತ್ತು ೧೬.೬೭ ಮಹಿಳೆಯರಿಗೆ ಸಂಬಂಧಿಸಿದ ಅಂಶಗಳಾಗಿವೆ. ಅದೇ ರೀತಿಯಾಗಿ ದಲಿತರು ಮತ್ತು ದಲಿತೇತರರ ನಡುವಿನ ಅಂತರವನ್ನು ಗಮನದಲ್ಲಿಟ್ಟುಕೊಂಡು ನೋಡಿದರೆ ಪುರುಷರು ಶೇ. ೧೭.೫ರಷ್ಟಾಗಿದ್ದರೆ ಮಹಿಳೆಯರು ಶೇ. ೨೩.೧೬ರಷ್ಟಾಗಿರುವುದು ತಿಳಿದುಬರುತ್ತದೆ. ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಗೋಪಾಲಗುರು(೧೯೯೫) ತಮ್ಮ ಕೃತಿ ದಲಿತ ವುಮೆನ್ ಟಾಕ್ ಡಿಫೆರೆಂಟ್ಲಿಯಲ್ಲಿ ವಾದಿಸಿರುವ ಸಂಗತಿಯ ಮಹತ್ವ ಅರ್ಥವಾಗುತ್ತದೆ.

ಕೋಲಾರ ಜಿಲ್ಲೆಯ ದಲಿತರ ಶಿಕ್ಷಣ ಚಿತ್ರಣ

ಕೋಲಾರ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ-೨೦೧೪ ಬಡವರ ಸಬಲೀಕರಣ ಮತ್ತು ಅಂಚಿನಲ್ಲಿರುವ ಸಮುದಾಯಗಳ ಸಬಲೀಕರಣದಲ್ಲಿ ಶಿಕ್ಷಣ ಪ್ರಮುಖ ಪಾತ್ರವಹಿಸುತ್ತದೆ. ಮನುಷ್ಯರ ಮಾನವ ಅಭಿವೃದ್ಧಿಯನ್ನು ಸುಧಾರಿಸಲು ಜ್ಞಾನದ ದೊರೆಯುವಿಕೆ ಬಹಳ ಮುಖ್ಯ ಎಂಬ ಅಂಶ ಸ್ಪಷ್ಟವಾಗಿದೆ. ಶಿಕ್ಷಣ, ಆರೋಗ್ಯವು ಮಾನವ ಅಭಿವೃದ್ಧಿಗೆ ನೇರವಾದ ಕೊಡುಗೆಯನ್ನು ನೀಡುತ್ತವೆ. ಯಾಕೆಂದರೆ ರಾಜ್ಯದ ಅಭಿವೃದ್ಧಿ ಒದಗಿಸುವ ಅವಕಾಶಗಳನ್ನು ಪಡೆಯಲು ಅಂಚಿನಲ್ಲಿರುವ ಸಮುದಾಯಗಳಿಗೆ ಮೂಲಭೂತ ವೇದಿಕೆಯನ್ನು ಶಿಕ್ಷಣ ಸೃಷ್ಟಿಸುತ್ತದೆ.

ಕೋಷ್ಟಕ ೪.೫. ಸಾಮಾಜಿಕ ಗುಂಪುಗಳಲ್ಲಿ ಸಾಕ್ಷರತಾ ಸ್ಥಿತಿಗತಿ

ಪ್ರದೇಶ	ಪ.ಜಾತಿ ಸಾಕ್ಷರತಾ ಪ್ರಮಾಣ			ಪ.ಪಂಗಡ ಸಾಕ್ಷರತಾ ಪ್ರಮಾಣ			ಇತರೆ ಸಾಕ್ಷರತಾ ಪ್ರಮಾಣ		
	ಗ್ರಾಮೀಣ	ನಗರ	ಒಟ್ಟು	ಗ್ರಾಮೀಣ	ನಗರ	ಒಟ್ಟು	ಗ್ರಾಮೀಣ	ನಗರ	ಒಟ್ಟು
ಭಾರತ	೬೨.೮೫	೭೬.೧೭	೬೬.೦೭	೫೬.೮೯	೭೬.೭೮	೫೮.೯೬	೫೮.೭	೭೯.೧	೬೪.೮
ಕರ್ನಾಟಕ	೬೦.೪೪	೭೭.೪೩	೬೫.೩೩	೫೮.೯೯	೭೪.೮೨	೬೨.೦೮	೬೮.೭೩	೮೫.೮	೭೫.೪
ಜಿಲ್ಲೆ	೬೩.೮೬	೮೬.೪೪	೭೦.೬೪	೬೧.೭೫	೮೩.೫೭	೬೩.೬೧	೬೯.೦೦	೮೬.೧	೭೪.೪

ಆಧಾರ: ಕೋಲಾರ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ-೨೦೧೪

ಕೋಲಾರ ಜಿಲ್ಲೆಯಲ್ಲಿ ಎಸ್.ಸಿ. ಮತ್ತು ಎಸ್.ಟಿ.ಗಳ ಒಟ್ಟಾರೆ ಸಾಕ್ಷರತಾ ಪ್ರಮಾಣಗಳು ರಾಜ್ಯ ಹಾಗೂ ರಾಷ್ಟ್ರದ ಸರಾಸರಿಗಳ ಹೋಲಿಕೆಯಲ್ಲಿ ಉತ್ತಮವಾಗಿದೆ. ಇತರೆ ಸಾಮಾಜಿಕ ವರ್ಗಗಳಲ್ಲಿ ರಾಜ್ಯ ಮತ್ತು ರಾಷ್ಟ್ರದ ಸರಾಸರಿಯಲ್ಲಿ ಕಡಿಮೆಯಿದೆ. ಒಟ್ಟಾರೆಯಾಗಿ ಮೂರು ಸಾಮಾಜಿಕ ಗುಂಪುಗಳಲ್ಲಿ ಸಾಕ್ಷರತಾ ಪ್ರಮಾಣದಲ್ಲಿ ವ್ಯತ್ಯಾಸವಿದೆ. ಗ್ರಾಮೀಣ ಪ್ರದೇಶಗಳಲ್ಲಿನ ಸಾಕ್ಷರತಾ ಪ್ರಮಾಣಕ್ಕಿಂತ ನಗರ ಪ್ರದೇಶದ ಸಾಕ್ಷರತಾ ಪ್ರಮಾಣ ಹೆಚ್ಚಿದೆ. ಅದೇ ರೀತಿಯಾಗಿ ಕೋಲಾರ ಜಿಲ್ಲೆಯಲ್ಲಿ ನಗರ ಎಸ್.ಸಿ. ಮತ್ತು ನಗರ ಎಸ್.ಟಿ. ಜನಸಂಖ್ಯೆಗಳ ನಡುವಿನ ಅಂತರ ಗಣನೀಯ ಪ್ರಮಾಣದಲ್ಲಿ ಕಂಡುಬರುತ್ತದೆ.

ಈ ಮೇಲೆ ನೀಡಲಾದ ಕೋಷ್ಟಕದಲ್ಲಿ ಕಾಣುವ ಪ್ರವೃತ್ತಿಗಳು ಎಸ್.ಸಿ. ಹಾಗೂ ಎಸ್.ಟಿ. ಸಮುದಾಯಗಳು ಸೇರಿದಂತೆ ಎಲ್ಲಾ ಸಾಮಾಜಿಕ ವರ್ಗಗಳ ಪುರುಷ ಹಾಗೂ ಮಹಿಳಾ ಸಾಕ್ಷರತೆಯ ಪ್ರಮಾಣಗಳಿಗೂ ಅನ್ವಯಿಸುತ್ತದೆ. ಜಿಲ್ಲೆಯಲ್ಲಿ ಸಾಕ್ಷರತೆಯ ಪ್ರಮಾಣದಲ್ಲಿ ಲಿಂಗ ಅಂತರಗಳು ಇಳಿಕೆಯಾಗುತ್ತಿದ್ದರೂ ಸಹ ಪುರುಷ ಹಾಗೂ ಮಹಿಳೆಯರ ಸಾಕ್ಷರತೆ ಶೇ. ೧೫ರಷ್ಟು ವ್ಯತ್ಯಾಸವಿರುವುದು ಕಂಡುಬರುತ್ತದೆ. ಕೋಲಾರದಲ್ಲಿ ಎಸ್.ಸಿ. ಪುರುಷ ಸಾಕ್ಷರತಾ ಪ್ರಮಾಣ(೭೮.೪%) ರಾಜ್ಯದ ಸರಾಸರಿಗಿಂತ (೭೪%) ಮತ್ತು ದೇಶದ ಸರಾಸರಿ ೭೫%ಗಿಂತ ಹೆಚ್ಚಾಗಿದೆ. ಇದೇ ರೀತಿ ಕೋಲಾರದಲ್ಲಿ ಮಹಿಳಾ ಎಸ್.ಸಿ. ಜನಸಂಖ್ಯೆಯ ಸಾಕ್ಷರತೆ ಪ್ರಮಾಣಗಳು (೬೮.೮%) ರಾಜ್ಯದ(೫೬%) ಮತ್ತು ರಾಷ್ಟ್ರದ ಸರಾಸರಿ (೫೬%)ಗಿಂತ ಹೆಚ್ಚಾಗಿದೆ. ಜಿಲ್ಲೆಯಲ್ಲಿ ಎಸ್.ಸಿ. ಸಾಕ್ಷರತಾ ಪ್ರಮಾಣದಲ್ಲಿನ ಲಿಂಗ ಅಂತರ(೧೬.೦%) ರಾಜ್ಯ(೧೮%) ರಾಷ್ಟ್ರ(೧೯%)ಗಿಂತ ಕಡಿಮೆಯಿದೆ.

ಅದೇ ರೀತಿಯಾಗಿ ಕೋಲಾರದಲ್ಲಿ ಪುರುಷ ಎಸ್.ಟಿ.ಗಳ ಸಾಕ್ಷರತಾ ಪ್ರಮಾಣ(೭೨%) ರಾಜ್ಯ(೭೧%) ದೇಶದ ಸರಾಸರಿ ೬೯%ಕ್ಕೆ ಹತ್ತಿರದಲ್ಲಿದೆ. ಕೋಲಾರ ಜಿಲ್ಲೆಯ ಮಹಿಳಾ ಸಾಕ್ಷರತಾ ಪ್ರಮಾಣದಲ್ಲಿ ಇದೇ ರೀತಿಯ ಪ್ರವೃತ್ತಿಗಳು. ೫೪.೭% ಗೋಚರಿಸುತ್ತದೆ ಮತ್ತು ಇದು ರಾಜ್ಯ ಸರಾಸರಿ ೫೩% ಹಾಗೂ ರಾಷ್ಟ್ರದ ಸರಾಸರಿ ೪೯.೩%ಗಿಂತ ಹೆಚ್ಚಾಗಿದೆ. ಈ ಪ್ರಕಾರವಾಗಿ ಎಸ್.ಸಿ.ಗಳು ಹಾಗೂ ಎಸ್.ಟಿ.ಗಳ ಸಾಕ್ಷರತೆ ಪ್ರಮಾಣಗಳು ರಾಜ್ಯ ಹಾಗೂ ರಾಷ್ಟ್ರದ ಸರಾಸರಿಗಿಂತ ಉತ್ತಮವಾಗಿದೆ. ಈ ನಿಟ್ಟಿನಲ್ಲಿ ರಾಷ್ಟ್ರದ ಗುರಿಯನ್ನು ತಲುಪಲು ಇನ್ನೂ ಮಹತ್ತರವಾದ ಪ್ರಗತಿ ಸಾಧಿಸಬೇಕಾಗಿದೆ.

ಎಸ್.ಸಿ. ಹಾಗೂ ಎಸ್.ಟಿ. ಮಕ್ಕಳ ದಾಖಲಾತಿ ಪ್ರಮಾಣ

ಯಾವುದೇ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಪ್ರತಿಯೊಂದು ಮಗುವು ಶಾಲೆಗೆ ಹೋಗುತ್ತಿರುವುದರ ಬಗ್ಗೆ ಮಾಹಿತಿ ಹೊಂದಲು ಶಾಲಾ ದಾಖಲಾತಿ ಪ್ರಮಾಣ ಬಹಳ ಮುಖ್ಯವಾದುದು.

ಕೋಷ್ಟಕ ೪.೬. ಕೋಲಾರ ಜಿಲ್ಲೆಯ ಪ್ರಾಥಮಿಕ ಶಿಕ್ಷಣಕ್ಕೆ ದಾಖಲಾತಿ ಪಡೆದ ಮಕ್ಕಳ ಪ್ರಮಾಣ

ತಾಲೂಕು	ಪ.ಜಾತಿ (ಎಸ್.ಸಿ.)			ಪ.ಪಂಗಡ (ಎಸ್.ಟಿ.)		
	ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು
ಶ್ರೀನಿವಾಸಪುರ	೨೯.೮೮	೩೦.೮೮	೩೦.೩೭	೧೧.೯೯	೨೫.೬೧	೨೫.೩೮
ಕೋಲಾರ	೨೫.೪೯	೨೫.೦೧	೨೫.೨೫	೪.೭೯	೪.೫೯	೪.೬೯
ಮಾಲೂರು	೨೬.೧೬	೨೭.೨೦	೨೬.೬೭	೧೧.೨೯	೧೧.೫೦	೧೧.೩೯
ಬಂಗಾರಪೇಟೆ	೪೦.೪೭	೪೧.೫೫	೪೦.೯೯	೪.೧೨	೩.೮೩	೩.೯೮
ಮುಳಬಾಗಿಲು	೩೧.೧೩	೩೧.೭೭	೩೧.೪೫	೪.೪೧	೪.೧೧	೪.೨೬
ಜಿಲ್ಲೆ	೩೧.೫೭	೩೨.೦೯	೩೧.೮೨	೬.೫೫	೬.೪೫	೬.೫೦

ಆಧಾರ: ಕೋಲಾರ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ-೨೦೧೪

ಈ ಕೋಷ್ಟಕವು ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ದಾಖಲಾತಿ ಪಡೆದಂತಹ ಎಸ್.ಸಿ., ಎಸ್.ಟಿ. ಮಕ್ಕಳ ಪ್ರಮಾಣವನ್ನು ಸೂಚಿಸುತ್ತದೆ. ಒಟ್ಟು ಜಿಲ್ಲೆ ೩೨% ಎಸ್.ಸಿ. ಮತ್ತು ೫.೫% ಎಸ್.ಟಿ. ದಾಖಲಾತಿಯಿದೆ. ೩೧.೫% ಬಾಲಕರು ೩೨% ಬಾಲಕಿಯರು ಎಸ್.ಸಿ.ಗಳು ೬.೫. ಬಾಲಕರು ೪೬.೫ ಬಾಲಕಿಯರು ಎಸ್.ಟಿ.ಗಳಿದ್ದಾರೆ. ಎಸ್.ಸಿ. ಹಾಗೂ ಎಸ್.ಟಿ. ದಾಖಲಾತಿಯಲ್ಲಿ ಲಿಂಗ ಅಂತರವಿಲ್ಲ. ತಾಲೂಕಗಳ ಪೈಕಿ ಬಂಗಾರಪೇಟೆ ಹೆಚ್ಚಿಸಿದ ದಾಖಲಾತಿ ಶೇ. ೪೦% ಎಸ್.ಸಿ. ಮತ್ತು ಮುಳಬಾಗಿಲು ೩೧.೪% ಕಡಿಮೆ ದಾಖಲಾತಿ ಹೊಂದಿದೆ. ಶ್ರೀನಿವಾಸಪುರದಲ್ಲಿ ಎಸ್.ಟಿ. ಮಕ್ಕಳ ದಾಖಲಾತಿ ಪ್ರಮಾಣ ಹೆಚ್ಚಾಗಿದ್ದರೆ ಮಾಲೂರು ನಂತರದ ಸ್ಥಾನದಲ್ಲಿದೆ. ಮತ್ತು ಈ ತಾಲೂಕುಗಳಲ್ಲಿ ಎಸ್.ಟಿ.ಗಳ ಜನಸಂಖ್ಯೆ ಮಾದರಿಗಳು ದೃಢಪಡಿಸುತ್ತವೆ.

ಜಿಲ್ಲೆಯಲ್ಲಿ ಶಾಲೆಯಿಂದ ಮಧ್ಯದಲ್ಲಿಯೇ ಹೊರಗುಳಿದ ಮಕ್ಕಳ ಸಂಖ್ಯೆ ೨೦೧೦-೧೧ರಲ್ಲಿ ೩೫೮ರಷ್ಟಿತ್ತು. ಅಂದರೆ ೨೦೧೧-೧೨ರಲ್ಲಿ ೭೫೮ಕ್ಕೆ ಹೆಚ್ಚಿತ್ತು. ೨೦೧೦ರಲ್ಲಿ ೧೬೫(೪೫.೨೫) ಎಸ್.ಸಿ.ಗಳು ಹಾಗೂ ೫೫(೧೫-೩೬) ಎಸ್.ಟಿ.ಗಳಿದ್ದರು. ೨ರಿ೧೧ರಲ್ಲಿ ೧೨೬(೧೬.೬೨) ಎಸ್.ಸಿ.ಗಳು ಹಾಗೂ ೬೦(೭.೯೧) ಮಕ್ಕಳು ಎಸ್.ಟಿ.ಗಳಿದ್ದಾರೆ.

ಶಿಕ್ಷಣದ ಮೂಲಭೂತ ಸೌಕರ್ಯ

ಸಾಮಾನ್ಯವಾಗಿ ಎಸ್.ಸಿ. ಹಾಗೂ ಎಸ್.ಟಿ. ಸಮುದಾಯಗಳ ವಿಚಾರದಲ್ಲಿ ಶಿಕ್ಷಣದ ಮೂಲಭೂತ ಸೌಕರ್ಯಗಳೆಂದರೆ ವಸತಿ ನಿಲುವುಗಳೆಂದು ಸೂಚಿಸುತ್ತದೆ. ಕೋಲಾರ ಜಿಲ್ಲೆಯಲ್ಲಿ ಎಸ್.ಸಿ.ಗಳಿಗೆ ೩೫೦೭ ವಿದ್ಯಾರ್ಥಿಗಳಿಗೆ ಪ್ರವೇಶವಿರುವಂತಹ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳಿವೆ. ಈ ಪೈಕಿ ೩೯ ಬಾಲಕರಿಗೆ ಮತ್ತು ೧೪ ವಿದ್ಯಾರ್ಥಿ ನಿಲಯಗಳು ಬಾಲಕಿಯರಿಗೆ ಬಂಗಾರ

ಪೇಟೆಯಲ್ಲಿ ಅತಿ ಹೆಚ್ಚಿನ ಸಂಖ್ಯೆ ಬಾಲಕರು ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಿವೆ. ೯೨೭ ವಿದ್ಯಾರ್ಥಿಗಳೊಂದಿಗೆ ಒಟ್ಟು ೧೫ ಜಿಲ್ಲೆಯಲ್ಲಿ ೩೦೦ ವಿದ್ಯಾರ್ಥಿ ಎಸ್.ಸಿ. ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸುವಂತಹ ೩ ಪರಿಶಿಷ್ಟ ಜಾತಿ ರಹಿತ ವಿದ್ಯಾರ್ಥಿ ನಿಲಯಗಳಿವೆ. ಈ ಎಲ್ಲವು ಬಂಗಾರಪೇಟೆಯಲ್ಲಿವೆ. ಜಿಲ್ಲೆಯಲ್ಲಿ ೨೨೭೦ ಎಸ್.ಸಿ. ವಿದ್ಯಾರ್ಥಿಗಳಿಗೆ ವಸತಿ ನಿಲಯದಲ್ಲಿ ಅವಕಾಶ ನೀಡಲಾಗಿದೆ. ೧೫೯ ಬಾಲಕರಿಗೆ ೨೧೭ ಬಾಲಕಿಯರಿಗೆ ೨೦ ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯಗಳನ್ನು ಹೊಂದಿದೆ. ಇದರಲ್ಲಿ ೬ ವಿದ್ಯಾರ್ಥಿ ನಿಲಯಗಳು ಕೋಲಾರ ತಾಲೂಕಿನಲ್ಲಿವೆ.

ಒಟ್ಟಾರೆಯಾಗಿ ಎಸ್.ಸಿ. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳ ಸೌಲಭ್ಯಗಳನ್ನು ಒದಗಿಸುವ ಮೂಲಕ ಸೌಕರ್ಯ ಕಡಿಮೆಯಿದೆ. ಹಾಗೆ ನೋಡಿದರೆ ಎಸ್.ಟಿ. ಮಕ್ಕಳ ಮೂಲ ಸೌಕರ್ಯ ಹೆಚ್ಚಿಸಬೇಕಾದ ಅಗತ್ಯತೆ ಇದೆ. ಇದರ ಜೊತೆಗೆ ಎಸ್.ಟಿ.ಗಳಿಗೆ ವಿಶೇಷವಾದ ಮತ್ತು ಅನುದಾನರಹಿತ ಶಾಲೆಗಳಲ್ಲಿ ಹಾಗಾಗಿ ಎಸ್.ಸಿ. ಮತ್ತು ಎಸ್.ಟಿ. ಮಕ್ಕಳಿಗೆ ವಿಶೇಷವಾದ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಬೇಕಾದ ಅಗತ್ಯವಿದೆ. ಎಸ್.ಟಿ. ಮಕ್ಕಳಿಗಾಗಿ ೨೨೧ ಮಕ್ಕಳಿಗೆ ಸ್ಥಳಾವಕಾಶವಿರುವ ೫ ಮೆಟ್ರಿಕ್‌ಪೂರ್ವ ಸರಕಾರಿ ವಿದ್ಯಾರ್ಥಿನಿಲಯಗಳಿವೆ ಮತ್ತು ಈ ಪೈಕಿ ೧೭೭ ಬಾಲಕರಿಗೆ ಮತ್ತು ೪೪ ಬಾಲಕಿಯರಿಗೆ ವಿದ್ಯಾರ್ಥಿನಿಲಯಗಳು. ಕೋಲಾರ, ಮಾಲೂರು ಮತ್ತು ಶ್ರೀನಿವಾಸಪುರ ತಾಲೂಕುಗಳಿದ್ದರೆ, ಎಸ್.ಟಿ. ಬಾಲಕಿಯರ ಏಕೈಕ ವಿದ್ಯಾರ್ಥಿನಿಲಯ ಶ್ರೀನಿವಾಸಪುರ ತಾಲೂಕಿನಲ್ಲಿದೆ.

ಜಿಲ್ಲೆಯಲ್ಲಿ ೨೧೦೬ ವಿದ್ಯಾರ್ಥಿಗಳಿಗೆ ಸ್ಥಳಾವಕಾಶವಿರುವಂತಹ ಒಟ್ಟು ೩೪ ಮೆಟ್ರಿಕ್ ಪೂರ್ವ ಸರಕಾರಿ ವಿದ್ಯಾರ್ಥಿನಿಲಯಗಳಿವೆ. ಜಿಲ್ಲೆಯಲ್ಲಿ ೧೩೦೦ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವ ಮತ್ತು ಮೆಟ್ರಿಕ್ ನಂತರ ಸರಕಾರಿ ವಿದ್ಯಾರ್ಥಿನಿಲಯಗಳಿವೆ. ಇದರ ಜೊತೆಗೆ ೨ ಮೆಟ್ರಿಕ್ ಪೂರ್ವ ಅನುದಾನರಹಿತ ವಿದ್ಯಾರ್ಥಿಗಳು ಸಹ ಇವೆ. ಜಿಲ್ಲೆಯಲ್ಲಿ ಒಟ್ಟು ೧೫೨೧ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿರುವಂತಹ ೧೦ ಮುರಾರ್ಜಿ ದೇಸಾಯಿ ವಸತಿ ಶಾಲೆಗಳಿವೆ. ಈ ಪೈಕಿ ೩ ಬಂಗಾರಪೇಟೆ ತಾಲೂಕಿನಲ್ಲಿದ್ದರೆ. ಉಳಿದವು ಇತರ ತಾಲೂಕಿನಲ್ಲಿ ಹರಡಿವೆ. ಇದರ ಜೊತೆಗೆ ೩೪೫ ವಿದ್ಯಾರ್ಥಿಗಳಿಗೆ ಅವಕಾಶವಿರುವ ಮತ್ತು ೪ ಕಿತ್ತೂರುರಾಣಿ ಚೆನ್ನಮ್ಮ ಬಾಲಕಿಯರ ವಸತಿ ಶಾಲೆಗಳಿವೆ.

ಒಟ್ಟಾರೆಯಾಗಿ ಜಿಲ್ಲಾ ಮಟ್ಟದಲ್ಲಿ ನೋಡಿದರೆ ಒಂದು ಮಟ್ಟಿಗೆ ಸರಿ ಎನಿಸಿದರೂ ತಾಲೂಕು ಮಟ್ಟದಲ್ಲಿ ನೋಡಿದರೆ ಎಸ್.ಸಿ./ಎಸ್.ಟಿ. ಜನಸಂಖ್ಯೆಯ ದೃಷ್ಟಿಯಿಂದ ಈ ಸೌಲಭ್ಯ ಅತ್ಯಂತ ಕಡಿಮೆ ಎನಿಸುತ್ತದೆ. ಶಿಕ್ಷಣ ಮಾನವ ಅಭಿವೃದ್ಧಿಯನ್ನು ಎತ್ತರಕ್ಕೇರಿಸುವ ಮೊದಲ ಸಾಧನ. ಅದನ್ನು ಪ್ರಜ್ಞಾಪೂರ್ವಕವಾಗಿ ಜಾರಿಗೆ ತಂದು ಆಜ್ಞಾನಪೂರ್ವಕವಾಗಿ ನಡೆಸಿಕೊಂಡು ಹೋಗಬೇಕು. ಅವುಗಳು ರೋಗಗ್ರಸ್ಥವಾಗಿ ಮಾಡುವ ವಾತಾವರಣ ಸೃಷ್ಟಿಸಬಾರದು. ಈ ಹಿನ್ನೆಲೆಯಲ್ಲಿ ಎಸ್.ಸಿ. ಮತ್ತು ಎಸ್.ಟಿ.ಗಳ ದೃಷ್ಟಿಯಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಅವಕಾಶಗಳು ವಿಸ್ತರಿಸಬೇಕಾದ ಅಗತ್ಯತೆ ಇದೆ.

೪.೫. ಆರೋಗ್ಯ

ಯಾವುದೇ ದೇಶದ ಆರ್ಥಿಕ ಮತ್ತು ಮಾನವ ಅಭಿವೃದ್ಧಿಯು ಆ ದೇಶದ ನಾಗರಿಕರ ವೈಯಕ್ತಿಕ ಆರೋಗ್ಯ ಮತ್ತು ಜ್ಞಾನವನ್ನು ಅವಲಂಬಿಸಿರುತ್ತದೆ. ಈ ಪ್ರಕಾರವಾಗಿ ಆ ಪ್ರದೇಶದ ಮಾನವ ಅಭಿವೃದ್ಧಿಯ ಮಟ್ಟವನ್ನು ಅಳೆಯುವ ಸೂಚಕದಂತೆ ಬಳಸಲಾಗುತ್ತಿದೆ. ಪ್ರದೇಶದ ಆರೋಗ್ಯ ಸ್ಥಿತಿಗತಿಯ ವಿಶ್ಲೇಷಣೆಯಲ್ಲಿ ಪ್ರದೇಶದ ಜನಸಂಖ್ಯೆ ಶಾಸ್ತ್ರ ಸಂತಾನೋತ್ಪತ್ತಿ ಮತ್ತೆ ಮಗುವಿನ ಆರೋಗ್ಯ ಸ್ಥಿತಿಗತಿ, ಕುಟುಂಬ ಕಲ್ಯಾಣ, ಸಾಂಕ್ರಾಮಿಕ ರೋಗಗಳ ಮಟ್ಟಗಳು ಮಾನವ ಸಂಪನ್ಮೂಲಗಳು ಒಳಗೊಂಡಂತೆ ಮೂಲಭೂತ ಸೌಕರ್ಯಗಳ ಸ್ಥಿತಿಗತಿಗಳನ್ನು ಪರಿಮಾಣಾತ್ಮಕವಾಗಿ ಅಂದಾಜಿಸಲಾಗುತ್ತದೆ. ಈ ವಿಶ್ಲೇಷಣೆಯ ಜನರ ಆರೋಗ್ಯ ಸ್ಥಿತಿ ಆರೋಗ್ಯಕ್ಕೆ ಸಂಬಂಧಿಸಿದ ಸಂಭವನೀಯ ಪರಿಣಾಮಗಳನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಆರೋಗ್ಯ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಆರೋಗ್ಯ ಸ್ಥಿತಿಗತಿಯನ್ನು ಆಯಾ ಪ್ರದೇಶದ ಆ ಸಮುದಾಯದ ಸಮಸ್ತ ನಾಗರಿಕರ ಉತ್ತಮ ಆರೋಗ್ಯ ಸ್ಥಿತಿಯನ್ನು ಸಾಧಿಸುವ ಸಲುವಾಗಿ ಎಲ್ಲಾ ಭಾಗಿದಾರರ ಸಹ ಭಾಗಿತ್ವವನ್ನು ಕೋರುತ್ತದೆ. ಭಾರತದ ಸಂದರ್ಭದಲ್ಲಿ ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಲ್ಲಿ ಪಿತೃಪ್ರಧಾನ ಕುಟುಂಬಗಳು ಶಿಕ್ಷಣದ ಕೊರತೆ, ಪ್ರಾದೇಶಿಕ ಮತ್ತೆ ನಗರ ಗ್ರಾಮೀಣ ಅಸಮಾನತೆಗಳು ಗುಣಮಟ್ಟದ ಆರೋಗ್ಯ ರಕ್ಷಣೆ ಸಮಾನ ದೊರೆಯುವಿಕೆಯನ್ನು ಖಾತ್ರಿಪಡಿಸುವಂತಹ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗಳಂತಹ ಅಂಶಗಳು ದೊಡ್ಡ ಸವಾಲಾಗಿದೆ.

ಜನರ ಉತ್ತಮ ರೋಗ್ಯ ಸ್ಥಿತಿಗತಿಯನ್ನು ಹೊಂದುವಲ್ಲಿ ಕರ್ನಾಟಕ ರಾಜ್ಯವು ಭಾರತದಲ್ಲಿ ಉತ್ತಮ ಸ್ಥಾನವನ್ನು ಹೊಂದಿದೆ ಮತ್ತು ಆರೋಗ್ಯ ವಲಯದಲ್ಲಿ ಕೌಶಲ್ಯ ಭರಿತ ಸಂಪನ್ಮೂಲಗಳನ್ನು ಮತ್ತು ಮೂಲಭೂತ ಸೌಕರ್ಯವನ್ನು ಕಲ್ಪಿಸುವ ನಿಟ್ಟಿನಲ್ಲಿ ಉತ್ತಮ ಉಪಕ್ರಮಗಳನ್ನು ಕೈಗೊಂಡಿದೆ.

ಕರ್ನಾಟಕದ ಆರೋಗ್ಯಕ್ಕೆ ಸಂಬಂಧಿಸಿದಂತೆ ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕದ ಜಿಲ್ಲೆಗಳ ನಡುವೆ ಪ್ರಾದೇಶಿಕ ಅಸಮಾನತೆಗಳಿರುವುದು ವಾಸ್ತವಿಕ ಸಂಗತಿ. ೨೦೦೪ರ ಕರ್ನಾಟಕ ರಾಜ್ಯ ಯೋಗ್ಯನೀತಿಯು ಜಿಲ್ಲೆಯನ್ನು ಸಾಧಾರಣ ಪ್ರದರ್ಶನ ನೀಡುವಲ್ಲಿ ಜಿಲ್ಲೆ ಎಂದು ವರ್ಗೀಕರಿಸಿತು ಮತ್ತು ಮಹಿಳಾ ಸಾಕ್ಷರತೆ ಪ್ರಮಾಣ ಕುಟುಂಬ ಯೋಜನೆಗಳ ವಿಧಾನ ಬಳಕೆ ಬಗ್ಗೆ ಸೂಕ್ತ ಸಲಹೆಗಳನ್ನು ನೀಡಲಾಗಿದೆ.

೨೦೦೫ರ ಕರ್ನಾಟಕ ರಾಜ್ಯ ಅಭಿವೃದ್ಧಿ ವರದಿ ಆಧರಿಸಿ, ಕೋಲಾರ ಜಿಲ್ಲೆಯ ಮಾನವ ಅಭಿವೃದ್ಧಿ ಹಾಗೂ ಆಯಾಮಗಳನ್ನು ನೋಡಿದರೆ ಸಾಧಾರಣ ಹೋಲಿಕೆಯನ್ನು ಮಂಡಿಸುತ್ತದೆ. ಕರ್ನಾಟಕ ಮಾನವ ಅಭಿವೃದ್ಧಿ ವರದಿ ಪ್ರಕಾರ ಜಿಲ್ಲೆ ಹೆಚ್.ಟಿ.ಐ.ನಲ್ಲಿ ೧೯೯೧ರಲ್ಲಿ ೧೫ನೇ ಕ್ರಮಾಂಕ ಹೊಂದಿತ್ತು. ೨೦೦೧ರಲ್ಲಿ ೧೭ನೇ ಕ್ರಮಾಂಕದಲ್ಲಿತ್ತು. ಆದಾಗ್ಯೂ ಆರೋಗ್ಯ ವಲಯದಲ್ಲಿ ಈ ವರದಿ ಪ್ರಕಾರ ಜಿಲ್ಲೆ ೧೩ನೇ ಶ್ರೇಯಾಂಕವನ್ನು ಹೊಂದಿತ್ತು.೨೧ ಕೋಲಾರದ ಮತ್ತೊಂದು ಆರೋಗ್ಯ ಸಮಸ್ಯೆ ಎಂದರೆ ಫ್ಲೋರೋಸಿಸ್. ಇದರಿಂದ ದೇಹದಲ್ಲಿ ಫ್ಲೋರೈಡ್ ಅಂಶ ಹೆಚ್ಚು

ಶೇಖರಣೆಯಾಗುವುದರಿಂದ ಉದ್ಭವಿಸುವಂತಹ ನೋವು ಮತ್ತು ನಿತ್ರಾಣಗೊಳಿಸುವಂತಹ ಖಾಯಿಲೆ ಬರುತ್ತದೆ. ಇದು ಹಲ್ಲು ಮತ್ತು ಮೂಳೆಗಳ ಸಮಸ್ಯೆಗೆ ಕಾರಣವಾಗುತ್ತದೆ. ಜಿಲ್ಲೆಯಲ್ಲಿ ಅನೇಕ ಮಕ್ಕಳು ವಯಸ್ಕರಲ್ಲಿಯೂ ಖಾಯಂ ದೈಹಿಕ ವಿಕಲತೆ ಉಂಟಾಗಲು ಕಾರಣವಾಗುತ್ತದೆ. ಈ ಸಮಸ್ಯೆಯನ್ನು ಬಗೆಹರಿಸಲು ಹೆಚ್ಚು ಆಸಕ್ತಿ ಮತ್ತು ಬಹು ಆಯಾಮಗಳ ದೃಷ್ಟಿಕೋನದ ಅಗತ್ಯವಿದೆ. ಇದರ ಜೊತೆಗೆ ಕೋಲಾರ ಜಿಲ್ಲೆಯ ಜನರನ್ನು ಬಾಧಿಸುತ್ತಿರುವ ಮತ್ತೊಂದು ಸಮಸ್ಯೆ ಎಂದರೆ ಬಹಳ ದೀರ್ಘಕಾಲದವರೆಗೆ ಚಿನ್ನದ ಗಣಿಯನ್ನು ಬಳಸುತ್ತಿದ್ದ ಪರಿಣಾಮ ಇಲ್ಲಿ ಜನರಲ್ಲಿ ಉಸಿರಾಟದ ತೊಂದರೆಗಳು ಚರ್ಮದ ಸಮಸ್ಯೆಗಳು ಇತ್ಯಾದಿಗಳ ಕಳೆದ ಎರಡು ದಶಕಗಳಲ್ಲಿ ಇವು ಕೋಲಾರದಲ್ಲಿ ಕಂಡುಬರುವ ಪ್ರಮುಖ ಸಮಸ್ಯೆಗಳಾಗಿವೆ.

ತಾಯಂದಿರ ಆರೋಗ್ಯ

ಕೋಲಾರ ಜಿಲ್ಲೆಯ ಮಹಿಳಾ ಜನಸಂಖ್ಯೆ ಒಟ್ಟು ಜನಸಂಖ್ಯೆಯ ಅರ್ಧದಷ್ಟು ಇದೆ. ಇಲ್ಲಿಯ ಮಹಿಳೆಯರ ಪೌಷ್ಟಿಕತೆ, ಸಂತಾನೋತ್ಪತ್ತಿ, ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ವೈಯಕ್ತಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವಂತಹ ವಿಶೇಷ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಹಾಗಾಗಿ ಮಹಿಳೆಯರ ಮತ್ತು ಮಕ್ಕಳ ಆರೋಗ್ಯದ ಗುಣಮಟ್ಟದ ಸುಧಾರಣೆಗೆ ಹೆಚ್ಚಿನ ಗಮನಹರಿಸಬೇಕಾದ ಅಗತ್ಯತೆ ಇದೆ. ಇದರ ಜೊತೆಗೆ ಮಹಿಳೆಯರು ಆರ್ಥಿಕ, ಸಾಮಾಜಿಕ ಆಚರಣೆಗಳನ್ನು ಎದುರಿಸುತ್ತಿದ್ದಾರೆ. ಆರ್ಥಿಕ ಸ್ಥಿತಿಗತಿಗಳಲ್ಲಿ ಮಹಿಳೆಯರ ಕಳಪೆ ಸ್ಥಿತಿ, ವಿವಾಹ, ಕುಟುಂಬ ನಿಯಂತ್ರಣಗಳ ಸಾಧನ ಬಳಕೆ, ಮಕ್ಕಳ ವಿವಾಹ ಪದ್ಧತಿ, ಲೈಂಗಿಕ ನಿಂದನೆ, ಭ್ರೂಣಹತ್ಯೆ ಮೊದಲಾದವುಗಳ ನಿರ್ಧಾರ ತೆಗೆದುಕೊಳ್ಳದ ಸಮಸ್ಯೆಗಳ ಸುಳಿಯಲ್ಲಿರುತ್ತದೆ.

ಭಾರತವು ತಾಯಿ ಮಕ್ಕಳ ಆರೋಗ್ಯ ಸುಧಾರಣೆ ಸಂಬಂಧಿಸಿದಂತೆ ಶತಮಾನದ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಬದ್ಧವಾಗಿದೆ. ೨೦೦೫ರಲ್ಲಿ ಎನ್.ಆರ್.ಎಮ್. ಯೋಜನೆಯ ಮೂಲಕ ತಾಯಂದಿರ ಮತ್ತು ಮಕ್ಕಳ ಮರಣ ಪ್ರಮಾಣ ಕಡಿಮೆ ಮಾಡಲು ಹೆಚ್ಚಿನ ಆದ್ಯತೆ ನೀಡಲಾಗಿದೆ. ಮುಖ್ಯವಾಗಿ ಕರ್ನಾಟಕದಲ್ಲಿ ಆರೋಗ್ಯ ಸುಧಾರಣೆ ಸಮಾಧಾನಕರವೆನಿಸಿದರೂ ಪ್ರಾದೇಶಿಕತೆಯಲ್ಲಿ ಭಾರಿ ಅಂತರ ಕಂಡುಬರುತ್ತದೆ. ಹೀಗಾಗಿ ಕೋಲಾರ ಜಿಲ್ಲೆಯೂ ಸಹ ಇಂತಹ ಸ್ಥಿತಿಗತಿಗಳು ಇವೆ. ಸಾಂಸ್ಥಿಕ ಹೆರಿಗೆಗಳು, ತಾಯಂದಿರ ಮರಣ ಪ್ರವೃತ್ತಿಗಳು ಹಾಗೂ ಪ್ರಸವ ಪೂರ್ವ ಆರೈಕೆಗಳು ಇವುಗಳನ್ನು ನೋಡುವುದು ಅಗತ್ಯವಾಗಿದೆ.

೨೦೦೭ ರಿಂದ ೨೦೦೯ರ ನಡುವೆ ಭಾರತದಲ್ಲಿ ಮರಣ ಪ್ರಮಾಣ ೨೧೨ರಷ್ಟಿತ್ತು ಮತ್ತು ಇದೇ ಅವಧಿಯಲ್ಲಿ ಕರ್ನಾಟಕದಲ್ಲಿ ೧೭೮ರಷ್ಟಿತ್ತು. ಇದನ್ನು ಕಡಿಮೆ ಮಾಡಲು ಎನ್.ಆರ್.ಹೆಚ್.ಎಂ. ಮೂಲಕ ಸಾಕಷ್ಟು ಪ್ರಯತ್ನ ಮಾಡಲಾಗುತ್ತಿದೆ.

ಕೋಲಾರ ಜಿಲ್ಲೆಯಲ್ಲಿ ತಾಯಂದಿರ ಮರಣ ಪ್ರಮಾಣವು ೧೪೦ರಷ್ಟಿದೆ ಹಾಗೂ ಎಲ್ಲಾ ತಾಲೂಕು ಹೋಲಿಕೆಯಲ್ಲಿ ಮುಳಬಾಗಿಲು ಅತಿಹೆಚ್ಚು ತಾಯಂದಿರ ಮರಣ ಪ್ರಮಾಣ ೨೧೧ರಷ್ಟು

ದಾಖಲಿಸಿದೆ. ಇದು ರಾಜ್ಯದ ಸರಾಸರಿ ೧೭ಕ್ಕಿಂತ ಹೆಚ್ಚಿನ ಪ್ರಮಾಣವಾಗಿದೆ. ಮಾಲೂರು ಎರಡನೇ ಅತಿ ಹೆಚ್ಚಿನ ಎಂ.ಎಂ.ಆರ್.(೧೯೬) ಪ್ರಮಾಣವನ್ನು ಹೊಂದಿದೆ. ಶ್ರೀನಿವಾಸಪುರ ಮತ್ತು ಕೋಲಾರ ಎನ್.ಆರ್.ಹೆಚ್.ಎಂ.ನ ಗುರಿ ೧೦೦ಕ್ಕಿಂತ ಕೆಳಮಟ್ಟದಲ್ಲಿದೆ.

ಪರಿಶಿಷ್ಟ ಜಾತಿ ಸಮುದಾಯಗಳ ಆರೋಗ್ಯ ಪರಿಸ್ಥಿತಿ

ಕೋಲಾರ ಜಿಲ್ಲಾ ಮುಳಬಾಗಿಲು ತಾಲೂಕು ಅವಣಿ ಗ್ರಾಮದ ಪ್ರಕರಣ ಅಧ್ಯಯನ ಮೂಲಕ ಪರಿಶಿಷ್ಟರ ಆರೋಗ್ಯ ಸ್ಥಿತಿ ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ. ಅವಣಿ ಗ್ರಾಮ ಎಸ್.ಸಿ. ಗೊಲ್ಲ, ಬಣಜಿಗ ಮತ್ತು ಗೌಡ ಸಮುದಾಯಗಳನ್ನು ಒಳಗೊಂಡಿದೆ. ಎಸ್.ಸಿ.ಗಳ ಪೈಕಿ ಮೂರು ಉಪಜಾತಿಗಳಿವೆ. ಆದಿಕರ್ನಾಟಕ, ಆದಿದ್ರಾವಿಡ ಮತ್ತು ಭೋವಿ ಸಮುದಾಯಗಳಿವೆ. ಎಸ್.ಸಿ. ಸಮುದಾಯದ ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಇತರೆ ಸಾಮಾಜಿಕ ಗುಂಪುಗಳ ಹೋಲಿಕೆಯಲ್ಲಿ ಕಳಪೆ ಮಟ್ಟದಲ್ಲಿದೆ. ಇವರ ಪ್ರಮುಖ ಉದ್ಯೋಗದ ಮೂಲ ಕೃಷಿ, ಕೂಲಿ ಮತ್ತು ಗಣಿಗಳ ಕಾರ್ಮಿಕರಾಗಿರುತ್ತಾರೆ ಅಥವಾ ಆಂಧ್ರ ಪ್ರದೇಶ ಅಥವಾ ಬೆಂಗಳೂರಿಗೆ ವಲಸೆ ಹೋಗುವ ಪ್ರಮಾಣ ದೊಡ್ಡಮಟ್ಟದಲ್ಲಿದೆ.

ಸಾಂಸ್ಥಿಕ ಹೆರಿಗೆಗಳು

ತಾಯಂದಿರ ಮರಣ ಪ್ರಮಾಣ ಕಡಿಮೆ ಮಾಡಲು ಹೆರಿಗೆ ಸಮಯದಲ್ಲಿ ಅನುಭವವುಳ್ಳವರ ಉಪಸ್ಥಿತಿ ಅತ್ಯಂತ ಮುಖ್ಯ. ಇದರ ಜೊತೆಗೆ ತಾಯಿ ಮಕ್ಕಳ ಜೀವವುಳಿಸುವ ಸಾಧನಗಳು ಮತ್ತು ನೈರ್ಮಲ್ಯದ ಸ್ಥಿತಿಗಳ ಸೂಕ್ತ ನಿರ್ವಹಣೆ, ತುರ್ತು ಸೇವೆಗಳ ಲಭ್ಯತೆಯೂ ಕೂಡ ಗಮನಾರ್ಹ ಸಂಗತಿಯಾಗಿದೆ.

ಕೋಷ್ಟಕ ೪.೭. ೨೦೧೧ರಲ್ಲಿ ಕೋಲಾರ ಜಿಲ್ಲೆಯಲ್ಲಿ ಸಾಂಸ್ಥಿಕ ಹೆರಿಗೆಗಳು

ತಾಲೂಕು	ಒಟ್ಟು ಹೆರಿಗೆಗಳು	ಸಾಂಸ್ಥಿಕ ಹೆರಿಗೆಗಳು	ಸರ್ಕಾರಿ ಅಸ್ಪತ್ರೆ	ಖಾಸಗಿ ಆಸ್ಪತ್ರೆ	ಮನೆ
ಶ್ರೀನಿವಾಸಪುರ	೨೫೫೯	೯೮.೬೩	೯೫.೬೬	೨.೯೬	೧.೩೬
ಕೋಲಾರ	೮೫೫೬	೯೭.೯೩	೫೫.೬	೪೨.೧೧	೨.೨೬
ಮಾಲೂರು	೩೧೩೦	೯೭.೪೧	೭೦.೩೧	೨೭.೦೯	೨.೫೮
ಬಂಗಾರಪೇಟೆ	೬೬೯೯	೯೭.೩೮	೭೩.೨೪	೨೪.೬೯	೨.೦೬
ಮುಳಬಾಗಿಲು	೩೯೦೨	೯೭.೯೭	೮೩.೩೬	೧೪.೨೪	೨.೫೮
ಜಿಲ್ಲೆ	೨೪೮೪೬	೯೭.೭೯	೭೦.೬೬	೨೭.೧೧	೨.೨೦.

೨೦೧೧ರಲ್ಲಿ ಕೋಲಾರ ಜಿಲ್ಲೆಯಲ್ಲಿ ಸಾಂಸ್ಥಿಕ ಹೆರಿಗೆಗಳ ಪ್ರಮಾಣ ೯೭.೭೯% ಸಾಂಸ್ಥಿಕ ಹೆರಿಗೆಗಳು ಪೈಕಿ ಶೇಕಡ ೭೦.೬೬% ಹೆರಿಗೆಗಳು ಸರ್ಕಾರಿ ಆಸ್ಪತ್ರೆಗಳಲ್ಲಾಗಿವೆ ಮತ್ತು ಶೇಕಡ ೨೭%ರಷ್ಟು ಖಾಸಗಿ ಆಸ್ಪತ್ರೆಗಳಲ್ಲಾಗಿವೆ. ಕೋಲಾರ ಜಿಲ್ಲೆಯಲ್ಲಿ ಶೇಕಡ ೨.೨%ರಷ್ಟು ಹೆರಿಗೆಗಳು(ಒಟ್ಟು ಹೆರಿಗೆಗಳಲ್ಲಿ) ಮನೆಯಲ್ಲಿ ಆಗಿವೆ. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಅತಿ ಹೆಚ್ಚಿನ ಸಾಂಸ್ಥಿಕ ಹೆರಿಗೆಗಳ ಪ್ರಮಾಣವನ್ನು ಹೊಂದಿದೆ. ಈ ಪ್ರವೃತ್ತಿಗಳ ರಾಜ್ಯಮಟ್ಟದ ಪ್ರವೃತ್ತಿಗಳನ್ನು ಹೊಂದಿದೆ.[೨೨]

ತಾಯಂದಿರ ಮರಣ

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ತಾಯಂದಿರ ಮರಣವನ್ನು ಗರ್ಭ ವ್ಯವಸ್ಥೆಯಲ್ಲಿರುವಾಗ ಹೊಂದುವ ಮಹಿಳೆಯರ ಮರಣ ಅಥವಾ ಅವಧಿ ಹಾಗೂ ಸ್ಥಳ ಯಾವುದೇ ಕಾರಣ ಹೆರಿಗೆ ನಿರ್ವಹಣಾ ಸಂದರ್ಭ, ಅಪಘಾತ ಮತ್ತು ಪ್ರಾಸಂಗಿಕ ಕಾರಣಗಳನ್ನು ಹೊರತುಪಡಿಸಿದಂತಹ ಹೆರಿಗೆ ಮುಕ್ತಾಯದ ನಂತರ ೪೨ ದಿನದೊಳಗೆ ಮರಣ ಹೊಂದುವುದು ಎಂದರ್ಥ.

೨೦೧೨ರ ವೇಳೆಗೆ ಭಾರತದಲ್ಲಿ ತಾಯಂದಿರ ಮರಣ ಪ್ರಮಾಣವನ್ನು ಪ್ರತಿ ೧,೦೦,೦೦೦ ಜೀವಂತ ಜನನಗಳ ವಿರುದ್ಧ ತಾಯಂದಿರ ಮರಣ ಪ್ರಮಾಣ ೧೦೦ಕ್ಕಿಂತ ಕಡಿಮೆ ಸಂಖ್ಯೆಗೆ ಇಳಿಸುವಂತಹ ಮಹತ್ತರವಾದ ಗುರಿಯನ್ನು ಎನ್.ಆರ್.ಹೆಚ್.ಎಂ. ನಿಗದಿಪಡಿಸಿತ್ತು. ೨೦೧೨ರ ವಿಶ್ವ ಆರೋಗ್ಯ ಸಂಸ್ಥೆಯ ವರದಿ ಪ್ರಕಾರ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ತಾಯಂದಿರ ಮರಣ ಪ್ರಮಾಣ ಪ್ರತಿ ೧,೦೦,೦೦೦ ಜೀವಂತ ಜನಗಳ ವಿರುದ್ಧ ೨೪೦ ಮರಣಗಳಿದ್ದ, ಅಭಿವೃದ್ಧಿ ಹೊಂದಿದ ರಾಷ್ಟ್ರ ರಾಷ್ಟ್ರಗಳಲ್ಲಿ ಪ್ರತಿ ೧,೦೦,೦೦೦ ಜೀವಂತ ಜನನಗಳ ವಿರುದ್ಧ ೧೬ ತಾಯಂದಿರ ಮರಣ ಪ್ರಮಾಣವಿದೆ. ಮುಂದುವರೆದ ಮತ್ತು ಹಿಂದುಳಿದ ದೇಶಗಳ ನಡುವೆ ದೊಡ್ಡ ಪ್ರಮಾಣದ ಅಂತರವಿದೆ. ಕೆಲವು ರಾಷ್ಟ್ರಗಳಲ್ಲಿ ಅತಿ ಹೆಚ್ಚಿನ ಪ್ರಮಾಣ ಅಂದರೆ ಪ್ರತಿ ೧,೦೦,೦೦೦ ಜೀವಂತ ಜನನಗಳ ವಿರುದ್ಧ ೧೦೦೦ ತಾಯಂದಿರ ಮರಣ ಪ್ರಮಾಣವಿದೆ. ದೇಶಗಳ ನಡುವೆ ನಗರ - ಗ್ರಾಮೀಣ ಕಡಿಮೆ ಆದಾಯವಿರುವ ಜನರ ನಡುವೆ ದೊಡ್ಡ ಅಸಮಾನತೆಗಳಿವೆ. ಪ್ರಾದೇಶಿಕ ಅಸಮಾನತೆಗಳಲ್ಲಿ ಈ ರೀತಿಯ ವ್ಯತ್ಯಾಸಗಳು ಕಂಡುಬರುತ್ತಿವೆ. ಬಹುತೇಕ ಎಸ್.ಸಿ. ಕುಟುಂಬದ ಪ್ರತಿ ಸದಸ್ಯರು ಕಾರ್ಮಿಕರಾಗಿರುತ್ತಾರೆ. ಬಡತನ ಮತ್ತು ಅಜ್ಞಾನದಿಂದ ಗರ್ಭಾವತಿ ಮಹಿಳೆಯರು, ಯುವ ತಾಯಂದಿರಿಗೆ ಆಹಾರ ಮತ್ತು ಪೌಷ್ಟಿಕ ಆಹಾರ ದೊರಕುವುದಿಲ್ಲ. ಇದರಿಂದ ಮಹಿಳೆಯರು ಮತ್ತು ಮಕ್ಕಳಿಗೆ ಅನಿಮಾಯಾ ಅಪೌಷ್ಟಿಕತೆಗೆ ದೂಡುತ್ತದೆ. ಎಸ್.ಸಿ. ಸಮುದಾಯಗಳಲ್ಲಿ ಚಿಕ್ಕವಯಸ್ಸಿನಲ್ಲಿಯೇ ಮದುವೆ ಮಾಡುವುದು ಮತ್ತು ಬಯಲಿನಲ್ಲಿ ಮೂತ್ರ ವಿಸರ್ಜನೆ ಸಾಮಾನ್ಯ. ಕ್ಷೇತ್ರಕಾರ್ಯದಲ್ಲಿ ಕಂಡುಬಂದ ಮಾಹಿತಿ ಪ್ರಕಾರ ಶೌಚಾಲಯದ ಪ್ರಾಮುಖ್ಯತೆ ಬಗ್ಗೆ ಅವರಲ್ಲಿ ಅರಿವಿಲ್ಲ. ಇವರಲ್ಲಿ ವಲಸೆ ಹೋದರೂ ಸಹ ಬಹುತೇಕ ಹೆರಿಗೆಗಳ ಸಾಂಸ್ಥಿಕ ಹೆರಿಗೆಗಳಾಗಿವೆ.[೨೩]

ಮಕ್ಕಳ ಆರೋಗ್ಯ : ಯಾವುದೇ ರಾಷ್ಟ್ರದ ಭವಿಷ್ಯ ಆ ರಾಷ್ಟ್ರದ ಮಕ್ಕಳ ಆರೋಗ್ಯದ ಮೇಲೆ ಅವಲಂಬಿಸಿರುತ್ತದೆ. ಕರ್ನಾಟಕ ಮತ್ತು ಕೋಲಾರದ ಜನಸಂಖ್ಯೆಯ ವಿಶ್ಲೇಷಣೆಯು ರಾಜ್ಯದ ಮತ್ತು ಕೋಲಾರ ಜಿಲ್ಲೆಯ ಇಡೀ ಜನಸಂಖ್ಯೆಯ ಪೈಕಿ ಕಾಲು ಭಾಗಕ್ಕಿಂತ ಹೆಚ್ಚು ಮಕ್ಕಳು ೧೪ ವರ್ಷದ ಕೆಳಗಿದ್ದಾರೆ. ಈ ವಾಸ್ತವಾಂಶಗಳು ಮಕ್ಕಳ ಆರೋಗ್ಯದ ಸ್ಥಿತಿಗತಿ ಮತ್ತು ಪ್ರದೇಶದ ಮಾನವ ಅಭಿವೃದ್ಧಿಯ ಮೇಲೆ ಒಟ್ಟಾರೆ ಭವಿಷ್ಯದ ಪರಿಣಾಮಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಒತ್ತನ್ನು ಒದಗಿಸುತ್ತದೆ. ಮಕ್ಕಳ ಉತ್ತಮ ಆರೋಗ್ಯವನ್ನು ಖಾತ್ರಿ ಪಡಿಸುವ ಸುಲವಾಗಿ ಸರ್ಕಾರ ಮಕ್ಕಳ ಪ್ರತಿ ರಕ್ಷಣೆ, ಪೌಷ್ಟಿಕತೆ ಮತ್ತು ಒಟ್ಟಾರೆ ವೈದ್ಯಕೀಯ ಆರೋಗ್ಯ ಹಾಗೂ ಆರೈಕೆಗೆ ಸಂಬಂಧಿಸಿದಂತೆ ವಿವಿಧ ಉಪಕ್ರಮಗಳನ್ನು ಅನುಷ್ಠಾನಗೊಳಿಸುತ್ತದೆ. ಮಕ್ಕಳ ಆರೋಗ್ಯದ ಸೂಚಕಗಳು ಮೇಲಿನ ಹೆಚ್ಚಿನ ಒತ್ತು ನೀಡಿರುವ ಫಲವಾಗಿ ದೇಶದಲ್ಲಿ ಅದರಲ್ಲಿಯೂ ಕರ್ನಾಟಕದಲ್ಲಿಯೂ ಶಿಶು ಮತ್ತು ಮಕ್ಕಳ ಮರಣಗಳ ಪ್ರಮಾಣದಲ್ಲಿ ತೀವ್ರ ಇಳಿಕೆ ಕಂಡು ಬಂದಿದೆ.

ಶಿಶು ಮತ್ತು ಮಕ್ಕಳ ಮರಣ: ಜನಿಸಿದ ಒಂದು ವರ್ಷದೊಳಗೆ ಮಗು ಮರಣವನ್ನಪ್ಪಿದರೆ ಶಿಶು ಮರಣ ಎಂದು ವ್ಯಾಖ್ಯಾನಿಸಲಾಗಿದೆ. ತಾಯಂದಿರ ಮರಣಗಳಂತೆ ಶಿಶು ಮರಣವೂ ಸಹ ಆ ಪ್ರದೇಶದ ಒಟ್ಟಾರೆ ಆರೋಗ್ಯ ಸ್ಥಿತಿಗತಿಯ ಸೂಚಕದಂತೆ ಕಾರ್ಯನಿರ್ವಹಿಸುತ್ತದೆ ಮತ್ತು ಶಿಕ್ಷಣ, ನೈರ್ಮಲ್ಯ, ಸಾಮಾಜಿಕ - ಆರ್ಥಿಕ ಸ್ಥಿತಿಗತಿ, ದೊರೆಯುವಿಕೆ, ಆರೋಗ್ಯ ರಕ್ಷಣೆ, ಮೂಲಭೂತ ಸೌಕರ್ಯದ ಲಭ್ಯತೆ ಮತ್ತು ಪ್ರತಿಕ್ರಿಯೆಗಳಂತಹ ಮಾನವ ಅಭಿವೃದ್ಧಿಯ ಬಹು ಆಯಾಮಗಳನ್ನು ಅವಲಂಬಿಸಿದೆ.

ಶಿಶು ಮರಣ ಪ್ರಮಾಣವನ್ನು ಒಂದು ವರ್ಷದಲ್ಲಿ ಆಗಿರುವಂತಹ ಪ್ರತಿ ೧೦೦೦ಗಳ ಜೀವಂತ ಜನನಗಳ ಪೈಕಿ ಶಿಶುಗಳ ಮರಣಗಳ (ಹುಟ್ಟಿದ ಒಂದು ವರ್ಷದೊಳಗೆ ಮಕ್ಕಳ ಮರಣಗಳು) ಸಂಖ್ಯೆಯಂತೆ ಲೆಕ್ಕ ಮಾಡಲಾಗುತ್ತದೆ. ವೈದ್ಯಕೀಯವಾಗಿ ಇದು ಹುಟ್ಟಿನಿಂದ ಬರುವಂತಹ ತೊಂದರೆಗಳು, ಗರ್ಭ ವ್ಯವಸ್ಥೆಯಲ್ಲಿರುವಾಗ ಉಂಟಾಗುವ ತೊಂದರೆಗಳು, ಸೋಂಕುಗಳು ಕಡಿಮೆ ತೂಕದ ಜನನ, ಅವಧಿ ಪೂರ್ವ ಜನನ ಮತ್ತು ಪೌಷ್ಟಿಕತೆ ಕೊರತೆಯಂತಹ ಹಲವು ವಿಷಯಗಳಿಂದಾಗಿ ನೇರವಾಗಿ ಉಂಟಾಗುವ ರೋಗದ ಹರಡುವಿಕೆಯ ಹಂತಗಳನ್ನು ಸೂಚಿಸುತ್ತದೆ. ಮಗು ಜನಿಸಿದ ಐದು ವರ್ಷಗಳೊಳಗೆ ಮರಣವನ್ನಪ್ಪಿದರೆ ಅದನ್ನು ಮಕ್ಕಳ ಮರಣ ಎಂಬ ವ್ಯಾಖ್ಯಾನಿಸಲಾಗಿದೆ. ಮಕ್ಕಳ ಮರಣವನ್ನಪ್ಪಿದರೆ ಅದನ್ನು ಮಕ್ಕಳ ಮರಣ ಎಂದು ವ್ಯಾಖ್ಯಾನಿಸಲಾಗಿದೆ. ಮಕ್ಕಳ ಮರಣ ಪ್ರಮಾಣವನ್ನು ಒಂದು ವರ್ಷದಲ್ಲಿ ಜನಿಸುವ ಪ್ರತಿ ೧೦೦೦ ಜೀವಂತ ಜನನಗಳ ಪೈಕಿ ಉಂಟಾಗುವ ಒಟ್ಟು ಮಕ್ಕಳ ಮರಣಗಳು (೫ ವರ್ಷಗಳಿಗಿಂತ ಮುಂಚಿತವಾಗಿ ಉಂಟಾಗುವ ಮಕ್ಕಳ ಮರಣಗಳು) ಪ್ರಮಾಣವೆಂದು ಲೆಕ್ಕ ಮಾಡಲಾಗುತ್ತದೆ.

ಅತಿಸಾರ, ಉಸಿರಾಟದ ಸೋಂಕುಗಳು, ದಡಾರ, ಮಲೇರಿಯಾ ಮತ್ತು ಅಪೌಷ್ಟಿಕತೆಯಂತಹ ಸಮಸ್ಯೆಗಳಿಂದಾಗಿ ಉಂಟಾಗುವ ರೋಗದ ಹರಡುವಿಕೆ ಮಟ್ಟವೆಂದು ಸೂಚಿಸಲಾಗಿದೆ. ಭಾರತದಲ್ಲಿ

೨೦೧೨ರೊಳಗೆ ಐ.ಎಂ.ಆರ್. ಪ್ರಮಾಣವನ್ನು ಎಲ್ಲಾ ಪ್ರದೇಶದಲ್ಲಿಯೂ ೩೦ಕ್ಕಿಂತ ಕಡಿಮೆಗೊಳಿಸುವ ಮಹತ್ವಾಕಾಂಕ್ಷೆ ಗುರಿಯನ್ನು ಎನ್.ಆರ್.ಎಚ್.ಎಂ. ನಿಗದಿಪಡಿಸಿತು.

ಈ ಕೆಳಕಂಡ ಕೋಷ್ಟಕವು ಕೋಲಾರ ಜಿಲ್ಲೆಯ ಶಿಶು ಮತ್ತು ಮಕ್ಕಳ ಮರಣಗಳ ಸಂಖ್ಯೆಯನ್ನು ಸೂಚಿಸುತ್ತದೆ. ಈ ಕೋಷ್ಟದಿಂದ ಮುಳಬಾಗಿಲು ಮತ್ತು ಶ್ರೀನಿವಾಸಪುರ ತಾಲ್ಲೂಕುಗಳಾಗಿ ಐ.ಎಂ.ಆರ್‌ನ(I.M.R.) ರಾಷ್ಟ್ರೀಯ ಗುರಿಗಳನ್ನು ತಲುಪಲು ಗಮನಾರ್ಹ ಪ್ರಯತ್ನಗಳನ್ನು ಮಾಡಿರುವುದು ಸೂಚಿತವಾಗುತ್ತದೆ.

ಕೋಷ್ಟಕ ೪.೮. ಕೋಲಾರ ಜಿಲ್ಲೆಯ ಶಿಶು ಮತ್ತು ಮಕ್ಕಳ ಮರಣಗಳ ಸಂಖ್ಯಾ ಪ್ರಮಾಣ

ತಾಲೂಕುಗಳು	ಐ.ಎಂ.ಆರ್.	ಸಿ.ಎಂ.ಆರ್.
ಶ್ರೀನಿವಾಸಪುರ	೩೭	೬೨
ಕೋಲಾರ	೧೮	೨೩
ಮಾಲೂರು	೩೦	೩೬
ಬಂಗಾರಪೇಟೆ	೩೦	೩೭
ಮುಳಬಾಗಿಲು	೫೧	೬೩
ಜಿಲ್ಲೆ	೩೪	೩೯

ಈ ಕೋಷ್ಟಕದಲ್ಲಿ ಒಂದು ಯೋಚಿಸುವಂತಹ ಅಂಶವೆಂದರೆ, ಸಿ.ಎಂ.ಎರ್. ಪ್ರಮಾಣ (೫ರ ಕೆಳಗಿನ ಮರಣ ಪ್ರಮಾಣ), ಶ್ರೀನಿವಾಸಪುರ ಮತ್ತು ಮುಳಬಾಗಿಲಿನಲ್ಲಿ ಹೆಚ್ಚಿದೆ ಮತ್ತು ಇದು ಈ ತಾಲ್ಲೂಕುಗಳಲ್ಲಿ ಮಕ್ಕಳ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮವನ್ನು ಬೀರುವ ಸಂಭವನೀಯ ವ್ಯವಸ್ಥಿತಿ ವಿಷಯಗಳನ್ನು ತೋರಿಸುತ್ತದೆ. ಈ ಹಿಂದೆಯೇ ಚರ್ಚಿಸಿದಂತೆ ಕೋಲಾರದಲ್ಲಿನಂತಹ, ಸ್ಥಳೀಯವಾಗಿ ಮರುಕಳಿಸುವಂತಹ ಆರೋಗ್ಯ ಸಮಸ್ಯೆಗಳಿವೆ. ಮತ್ತು ಇದು ಸಹ ಈ ತಾಲ್ಲೂಕುಗಳಲ್ಲಿ ಮಕ್ಕಳ ಜನಸಂಖ್ಯೆಯು ಆರೋಗ್ಯದ ಪರಿಸ್ಥಿತಿಗಳ ಮೇಲೆ ಮಹತ್ತರವಾದ ಪರಿಣಾಮವನ್ನು ಬೀರಬಹುದು.[೨೨]

೪.೬. ಮೂಲಭೂತ ಸೌಕರ್ಯ

ಯಾವುದೇ ಪ್ರದೇಶದ ಜನರ ಆರೋಗ್ಯ ರೂಪಿಸುವಲ್ಲಿ ಆರೋಗ್ಯ ಸೇವೆಯ ಹಂಚಿಕೆ ಸಂಸ್ಥೆಗಳ ಪಾತ್ರ ಬಹಳ ಮುಖ್ಯವಾಗುತ್ತದೆ. ಅಗತ್ಯ ಆರೋಗ್ಯ ಮೂಲಭೂತ ಸೌಕರ್ಯವನ್ನು ಖಾತ್ರಿಪಡಿಸುವುದು. ಸಂಪನ್ಮೂಲಗಳ ಹಂಚಿಕೆಯ ಕಾರ್ಯತಂತ್ರಗಳನ್ನು ಅವಲಂಬಿಸಿದೆ ಮತ್ತು ಸ್ಥಾಪಿತ ಆರೋಗ್ಯ ಮೂಲಭೂತ ಸೌಕರ್ಯದ ಬಳಕೆಗೆ ಬೇಡಿಕೆಗಳನ್ನು ಸೃಷ್ಟಿಸುತ್ತದೆ. ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ಉಪಕೇಂದ್ರ, ಮೊದಲಾದವು.

ರಾಷ್ಟ್ರದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ತರ್ಕಬದ್ಧಗೊಳಿಸುವ ಸಲುವಾಗಿ ಎನ್.ಆರ್. ಎಚ್.ಎಂ. ಮತ್ತು ಭಾರತೀಯ ಸಾರ್ವಜನಿಕ ಆರೋಗ್ಯ ಪ್ರಮಾಣಗಳು(ಐ.ಪಿ.ಎಚ್.ಎಸ್.) ದೇಶದಲ್ಲಿ ಸಾರ್ವಜನಿಕ ಆರೋಗ್ಯ ಸೇವೆಗಳ ಕಾರ್ಯಚರಣೆ ವಿಧಾನಗಳಿಗೆ ಸಂಬಂಧಿಸಿದ ಮಾರ್ಗಗಳ ಸಲಹೆ ನೀಡಿವೆ. ಜಿಲ್ಲಾ ಆಸ್ಪತ್ರೆಗಳು ಮತ್ತು ಇತರ ವ್ಯವಸ್ಥಿತಗಳ ಮೂಲಕ ಪ್ರಾಥಮಿಕ ಆರೋಗ್ಯ ರಕ್ಷಣೆ (ಉಪಕೇಂದ್ರಗಳು ಹಾಗೂ ಪಿ.ಎಚ್.ಸಿ.ಗಳ ಮೂಲಕ) ಮಾಧ್ಯಮಿಕ ಆರೋಗ್ಯ ರಕ್ಷಣೆ ಸಿ.ಎಚ್.ಸಿ.ಗಳ ಹಾಗೂ ತಾಲ್ಲೂಕು ಆಸ್ಪತ್ರೆಗಳ) ಮತ್ತು ತೃತೀಯ ಆರೋಗ್ಯ ರಕ್ಷಣೆಗಳನ್ನು ಒದಗಿಸುವ ಅಗತ್ಯ ಚೌಕಟ್ಟನ್ನು ಮೇಲ್ಕಂಡ ವಿಷಯ ಒದಗಿಸುತ್ತದೆ. ಜೊತೆಗೆ ಈ ಪ್ರತಿಯೊಂದು ಸಾರ್ವಜನಿಕ ಆರೋಗ್ಯ ಸಂಸ್ಥೆಯೂ ಸೇವೆ ತಲುಪಿಸಬೇಕಾದ ಸ್ಥಳಗಳ ಜನರು, ನಿರೀಕ್ಷಿತ ಮೂಲಭೂತ ಸೌಕರ್ಯ ಮತ್ತು ಸೇವೆಗಳು ಹಾಗೂ ಈ ಸಂಸ್ಥೆಗಳಲ್ಲಿ ಲಭ್ಯವಿರುವಂತಹ ಆರೋಗ್ಯ ರಕ್ಷಣೆಯ ಗುಣಮಟ್ಟಗಳನ್ನು ಸಹ ವಿವರಿಸುತ್ತದೆ. ಈ ಅಂಶಗಳಿಗೆ ಸಂಬಂಧಿಸಿದಂತೆ ಕೋಲಾರ ಜಿಲ್ಲೆಯ ಸಾರ್ವಜನಿಕ ಆರೋಗ್ಯ ಸಂಸ್ಥೆಗಳ ಸ್ಥಿತಿಯನ್ನು ಹೋಲಿಕೆ ಮಾಡಲು ಈ ಕೆಳಗಿನ ಕೋಷ್ಟಕದಲ್ಲಿ ಕೆಲವು ಮುಖ್ಯ ಗುಣಮಟ್ಟಗಳನ್ನು ಒದಗಿಸಿದೆ.

ಕೋಷ್ಟಕ ೪.೯. ಕೋಲಾರ ಜಿಲ್ಲೆಯ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಲಭ್ಯವಿರುವಂತಹ ಆರೋಗ್ಯ ರಕ್ಷಣೆಯ ಗುಣಮಟ್ಟಗಳು

ಸಂಖ್ಯೆ	ಜನಸಂಖ್ಯೆ ವ್ಯಾಪ್ತಿ	ಹಾಸಿಗೆಗಳ ಸಾಮರ್ಥ್ಯ	ಉಲ್ಲೇಖ ಘಟಕ	ಉಲ್ಲೇಖಿಸಿದ ಕೇಂದ್ರಗಳು	ಮುಖ್ಯ ಸಿಬ್ಬಂದಿ
ಪ.ಜಾತಿ	೫೦೦೦	೦	–	PHC	ANM
ಪಿಎಚ್‌ಸಿ	૩೦೦೦೦	೬	೬ ಉಪಕೇಂದ್ರ	CHC	೧– ವೈದ್ಯರು ಸಿಎಚ್‌ಸಿಯಲ್ಲಿ ૩– ಶೂಶ್ರಕಿಯರು
ಸಿಎಚ್‌ಸಿ	೧ ಲಕ್ಷ	૩೦	૩ ಪಿಎಚ್‌ಸಿ	TH	೫– ತಜ್ಞರು ೪– ಕರ್ತವ್ಯ ವೈದ್ಯರು ೧೦– ಸಿಬ್ಬಂದಿ
ಟಿಎಚ್	೫–೬ ಲಕ್ಷ	೧೦೦	ಪ.ಜಾತಿ ಪಿಎಚ್‌ಸಿ ಸಿಎಚ್‌ಸಿ	ಜಿಲ್ಲಾ ಅಸ್ಪತ್ರೆ	೧೦– ತಜ್ಞರು ೭– ಕರ್ತವ್ಯ ವೈದ್ಯರು ೧೮– ಸಿಬ್ಬಂದಿ
ಡಿಎಚ್	ಜಿಲ್ಲೆಯ ಜನಸಂಖ್ಯೆ	೫೦೦	ಪ.ಜಾತಿ ಪಿಎಚ್‌ಸಿ ಸಿಎಚ್‌ಸಿ	–	–

ಈ ವಿಭಾಗದಲ್ಲಿ ಕೋಷ್ಟಕಗಳಿಂದ ಅತಿಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ತಾಲೂಕಾದ ಬಂಗಾರಪೇಟೆಯಲ್ಲಿ ಕೇವಲ ೭ ಪಿಎಚ್.ಸಿ.ಗಳಿವೆ ಮತ್ತು ಪ್ರತಿ ಪಿಎಚ್.ಡಿ. ૩೦೦೦೦ಕ್ಕೂ ಗ್ರಾಮೀಣ ಜನಸಂಖ್ಯೆಯನ್ನು ಹೊಂದಿದೆ. ಜಿಲ್ಲೆಯ ೭ ತಾಲೂಕುಗಳಲ್ಲಿರುವ ಉಪಕೇಂದ್ರಗಳ ಸಂಖ್ಯೆಯು ಐ.ಪಿಎಚ್.ಎಸ್ ಪ್ರಮಾಣಗಳ ಪ್ರಕಾರ ನಿರ್ದಿಷ್ಟ ಜನಸಂಖ್ಯೆಯ ಪ್ರಕಾರ ಇದೆ.

ಮಾಲೂರು ತಾಲೂಕು ಹಾಗೂ ಬಂಗಾರಪೇಟೆಯ ತಾಲೂಕುಗಳ ಹೋಲಿಕೆಯಲ್ಲಿ ಮುಳಬಾಗಿಲು, ಶ್ರೀನಿವಾಸಪುರ ಹಾಗೂ ಕೋಲಾರ ತಾಲೂಕುಗಳು ಹೆಚ್ಚಿನ ಪಿಎಚ್.ಸಿ.ಗಳ ಸಾಂದ್ರತೆಯನ್ನು ಹೊಂದಿದೆ. ಶ್ರೀನಿವಾಸಪುರ ಸಿಎಚ್‌ಸಿಯನ್ನು ಹೊಂದಿದೆ. ಜಿಲ್ಲೆಯಲ್ಲಿ ಕೇವಲ ೨ ಸಿಹೆಚ್.ಸಿ.ಗಳನ್ನು ಹೊಂದಿದೆ. ಜಿಲ್ಲೆಯಲ್ಲಿ ಕೇವಲ ೭ ಸಿಹೆಚ್‌ಸಿಗಳಿದ್ದು ತಾಲೂಕ ಆಸ್ಪತ್ರೆಗಳು ಮತ್ತು ಜಿಲ್ಲಾ ಆಸ್ಪತ್ರೆಯಂತಹ ತೃತೀಯ ಹಾರೈಕೆ ಘಟಕಗಳ ಮುಂದಿನ ಒತ್ತು ಹೆಚ್ಚಾಗುತ್ತದೆ.

ಕೋಷ್ಟಕ ೪.೧೦. ಸಮೀಕ್ಷೆಗೊಳಪಟ್ಟ ಲಿಂಗವಾರು ವಯೋಮಿತಿಯ ವಿವರ

ಕ್ರಸಂ.	ಸೂಚಕಗಳು	ಲಿಂಗವಾರು	ಮುಳಬಾಗಿಲು ತಾಲೂಕು			
			ಗಡ್ಡೂರು ಪಂಚಾಯತಿ		ನಂಗಲಿ ಪಂಚಾಯಿತಿ	
			ಸಂಖ್ಯೆ	ಶೇ.	ಸಂಖ್ಯೆ	ಶೇ.
೧	೨೦ ರಿಂದ ೩೦	ಗಂಡು	೧೫	೧೫%	೧೩	೧೩%
		ಹೆಣ್ಣು	೧೦	೧೦%	೧೧	೧೧%
೨	೩೧ ರಿಂದ ೪೦	ಗಂಡು	೧೫	೧೫%	೧೬	೧೬%
		ಹೆಣ್ಣು	೧೩	೧೩%	೧೩	೧೩%
೩	೪೧ ರಿಂದ ೫೦	ಗಂಡು	೧೨	೧೨%	೧೨	೧೨%
		ಹೆಣ್ಣು	೧೫	೧೫%	೧೦	೧೦%
೪	೫೧ ರಿಂದ ೬೦	ಗಂಡು	೧೨	೧೨%	೧೩	೧೩%
		ಹೆಣ್ಣು	೮	೮%	೧೨	೧೨%
ಒಟ್ಟು			೧೦೦	೧೦೦%	೧೦೦	೧೦೦%

ಮೂಲ: ಕ್ಷೇತ್ರಕಾರ್ಯ

ಈ ಮೇಲಿನ ಕೋಷ್ಟಕವು ಕೊಲಾರ ಜಿಲ್ಲೆಯ, ಮುಳಬಾಗಿಲು ತಾಲೂಕಿನ ಎರಡು ಪಂಚಾಯತಿ ವ್ಯಾಪ್ತಿಗೆ ಸಂಬಂಧಿಸಿದ ವಯೋಮಿತಿಯ ವಿವರವನ್ನು ಒಳಗೊಂಡಿರುತ್ತದೆ. ಕ್ಷೇತ್ರಕಾರ್ಯದ ಅಧ್ಯಯನ ಉದ್ದೇಶಗಳನ್ನು ಇಟ್ಟುಕೊಂಡು ಈ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಮುಳಬಾಗಿಲು ತಾಲೂಕಿನಲ್ಲಿ ಗಡ್ಡೂರು ಪಂಚಾಯತಿ ಮತ್ತು ನಂಗಲಿ ಪಂಚಾಯತಿ ಪುರುಷ ಮತ್ತು ಮಹಿಳೆಯರನ್ನು ಅವರ ವಯೋ ವಿವರವನ್ನು ಈ ಕೋಷ್ಟಕವು ಸೂಚಿಸುತ್ತದೆ. ಗಡ್ಡೂರು ಮತ್ತು ನಂಗಲಿ ಪಂಚಾಯಿತಿಗಳಲ್ಲಿ ೨೦ರಿಂದ ೩೦ರ ವಯೋಮಾನದವರು ಕ್ರಮವಾಗಿ ಗಂಡು ಮತ್ತು ಹೆಣ್ಣುಮಕ್ಕಳು ೧೫, ೧೦ ಹಾಗೂ ೧೩, ೧೧ ಅಂದರೆ ಶೇ. ೧೫, ೧೦, ೧೩, ೧೧ರಂತೆ ತೋರಿಸಲಾಗಿದೆ. ಅದೇ ರೀತಿಯಾಗಿ ೩೧ರಿಂದ ೪೦ ವಯಸ್ಸಿನವರನನು ಕ್ರಮವಾಗಿ ೧೫, ೧೩ ಹಾಗೂ ೧೬, ೧೩ರಂತೆ ಶೇ. ೧೫, ೧೩, ೧೬ ಮತ್ತು ೧೩ರಂತೆ ಮತ್ತು ೪೧ರಿಂದ ೫೦ ಮತ್ತು ೫೧ ರಿಂದ ೬೦ರ ವಯೋಮಾನದವರನ್ನು ಕ್ರಮವಾಗಿ ೧೨, ೧೫, ೧೩, ೧೨ ಹಾಗೂ ೧೨, ೦೮, ೧೩, ೧೨ರಂತೆ ಶೇ. ೧೨, ೧೫, ೧೩, ೧೨ ಹಾಗೂ ಶೇ. ೧೨, ೮, ೧೩ ಮತ್ತು ೧೨ರಂತೆ ವಯೋಮಿತಿಯವರನ್ನು ಸಂದರ್ಶನಕ್ಕೆ ಆಯ್ಕೆ ಮಾಡಿಕೊಂಡಿರುವುದನ್ನು ಈ ಕೋಷ್ಟಕವು ಸೂಚಿಸುತ್ತದೆ.

ಕೋಷ್ಟಕ ೪.೧೧. ಸಮೀಕ್ಷೆಗೊಳಪಟ್ಟ ಲಿಂಗವಾರು ವೈವಾಹಿಕ ಸಂಬಂಧ

ಕ್ರಸಂ.	ಸೂಚಕಗಳು	ಲಿಂಗವಾರು	ಮುಳಬಾಗಿಲು ತಾಲೂಕು			
			ಗಡ್ಡೂರು ಪಂಚಾಯತಿ		ನಂಗಲಿ ಪಂಚಾಯಿತಿ	
			ಸಂಖ್ಯೆ	ಶೇ.	ಸಂಖ್ಯೆ	ಶೇ.
೧	ವಿವಾಹಿತ	ಗಂಡು	೩೪	೩೪%	೩೨	೩೨%
		ಹೆಣ್ಣು	೩೧	೩೧%	೩೩	೩೩%
೨	ಅವಿವಾಹಿತ	ಗಂಡು	೧೫	೧೫%	೧೫	೧೫%
		ಹೆಣ್ಣು	೧೪	೧೪%	೧೨	೧೨%
೩	ವಿವಾಹ ವಿಚ್ಛೇದನ		೨	೨%	೩	೩%
೪	ವಿಧವೆ		೪	೪%	೫	೫%
ಒಟ್ಟು			೧೦೦	೧೦೦%	೧೦೦	೧೦೦%

ಮೂಲ: ಕ್ಷೇತ್ರಕಾರ್ಯ

ಈ ಕೋಷ್ಟಕದಲ್ಲಿ ಮುಳಬಾಗಿಲು ತಾಲೂಕಿನ ಗಡ್ಡೂರು ಪಂಚಾಯಿತಿ ಮತ್ತು ನಂಗಲಿ ಪಂಚಾಯತಿಯ ವ್ಯಾಪ್ತಿಯ ಜನರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ವಿವಾಹಿತರು, ಅವಿವಾಹಿತರು, ವಿವಾಹವಿಚ್ಛೇದನ ಪಡೆದವರು ಮತ್ತು ವಿಧವೆಯರನ್ನೊಳಗೊಂಡು ವೈವಾಹಿಕ ಸಂಬಂಧ ಕುರಿತು ಅಧ್ಯಯನ ನಡೆಸಲಾಗಿದೆ.

ಇಲ್ಲಿ ಗಡ್ಡೂರು ಪಂಚಾಯತಿಯಲ್ಲಿ ಲಿಂಗವಾರು ಗಮನಿಸಿದಾಗ ವಿವಾಹಿತರಾದ ಗಂಡು-ಹೆಣ್ಣು, ಅವಿವಾಹಿತರಾದ ಗಂಡು-ಹೆಣ್ಣು, ವಿವಾಹ ವಿಚ್ಛೇದನ ಪಡೆದ ಗಂಡು-ಹೆಣ್ಣು ಹಾಗೂ ವಿಧವೆಯರಲ್ಲಿ ಮಹಿಳೆಯರನ್ನು ಮಾತ್ರ ವಿಧವೆಯರಷ್ಟು ಎಷ್ಟಿದ್ದಾರೆ ಎಂದು ತೋರಿಸಿದೆ. ಕೋಷ್ಟಕದಲ್ಲಿ ತೋರಿಸಿರುವಂತೆ ಕ್ರಮವಾಗಿ ೩೪, ೩೧, ೧೫, ೧೪, ೨,೪ ಅದೇ ಕ್ರಮವಾಗಿ ನಂಗಲಿ ಗ್ರಾಮಪಂಚಾಯಿತಿಯ ವ್ಯಾಪ್ತಿಯ ೩೨, ೩೩, ೧೫, ೧೨, ೦೩, ೦೫ ಈ ಎರಡು ಪಂಚಾಯಿತಿಯಲ್ಲಿ ಪ್ರತಿಶತ ಒಂದೊಂದು ಪಂಚಾಯಿತಿಯಿಂದ ನೂರು ಜನಸಂಖ್ಯೆಯನ್ನು ಆಯ್ಕೆ ಮಾಡಿಕೊಂಡು ಅವರ ವೈವಾಹಿಕ ಜೀವನ ಸಂಬಂಧವನ್ನು ಹೇಳಲಾಗಿದೆ. ಶೇಕಡವಾರು ಕ್ರಮದಲ್ಲಿ ಗಡ್ಡೂರು ಮತ್ತು ನಂಗಲಿ ಗ್ರಾಮಪಂಚಾಯಿತಿಯಲ್ಲಿ ಶೇ. ೩೪, ೩೧, ೧೫, ೧೪, ೨,೪ ಮತ್ತು ಶೇ. ೩೨, ೩೩, ೧೫, ೧೨, ೦೩, ೦೫ರಷ್ಟು ಅಲ್ಲಿನ ಜನರ ವೈವಾಹಿಕ ಸಂಬಂಧವನ್ನು ತೋರಿಸಲಾಗಿದೆ. ಗಡ್ಡೂರು ಮತ್ತು ನಂಗಲಿ ವಿಧವಾ ಮಹಿಳೆಯರು ಶೇ. ೪ ಮತ್ತು ಶೇ. ೫ರಷ್ಟು ಗಂಡ ತಿರಿಕೊಂಡ ನಂತರ ವಿಧವೆಯರಾಗಿ ಜೀವನ ನಡೆಸುತ್ತಿದ್ದಾರೆ.

ಕೋಷ್ಟಕ ೪.೧೨. ಸಮೀಕ್ಷೆಗೊಳಪಟ್ಟ ಕುಟುಂಬದ ವಿವರ

ಕ್ರಸಂ.	ಸೂಚಕಗಳು	ಮುಳಬಾಗಿಲು ತಾಲೂಕು			
		ಗಡ್ದೂರು ಪಂಚಾಯತಿ		ನಂಗಲಿ ಪಂಚಾಯಿತಿ	
		ಸಂಖ್ಯೆ	ಶೇ.	ಸಂಖ್ಯೆ	ಶೇ.
೧	ವಿಭಕ್ತ ಕುಟುಂಬ	೮೭	೮೭%	೮೫	೮೫%
೨	ಅವಿಭಕ್ತ ಕುಟುಂಬ	೧೩	೧೩%	೧೫	೧೫%
ಒಟ್ಟು		೧೦೦	೧೦೦%	೧೦೦	೧೦೦%

ಮೂಲ: ಕ್ಷೇತ್ರಕಾರ್ಯ

ಈ ಮೇಲಿನ ಕೋಷ್ಟಕವು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಗಡ್ಡೂರು ಮತತು ನಂಗಲಿ ಕುಟುಂಬದ ವಿವರವನ್ನು ನೀಡುತ್ತದೆ. ಇಲ್ಲಿ ಮುಖ್ಯವಾಗಿ ವಿಭಕ್ತ ಕುಟುಂಬ ಹಾಗೂ ಅವಿಭಕ್ತ ಕುಟುಂಬದಿಂದ ಆದ ಬದಲಾವಣೆಯನ್ನು ನೂರಕ್ಕೆ ಪ್ರತಿಶತವಾಗಿ ಗುರುತಿಸಲಾಗಿದೆ. ಪ್ರಸ್ತುತ ಈ ಕೋಷ್ಟಕವು ಇಂದಿನ ಜಾಗತೀಕ ಸಂದರ್ಭದಿಂದ ಅವಿಭಕ್ತ ಕುಟುಂಬಗಳು ವಿಘಟನೆಯಾಗಿ ಸ್ವತಂತ್ರ ವಿಭಕ್ತ ಕುಟುಂಬಗಳಾಗಿ ಜೀವಿಸುತ್ತಿವೆ. ಇದು ಕೂಡ ಕೋಲಾರ ಜಿಲ್ಲೆಯಲ್ಲಿ ಮುಂದುವರೆದಿದೆ. ಈ ಎರಡು ಪಂಚಾಯಿತಿ ವ್ಯಾಪ್ತಿಯಲ್ಲಿ ವಿಭಕ್ತ ಕುಟುಂಬಗಳು ಕ್ರಮವಾಗಿ ನೂರಕ್ಕೆ ಶೇ. ೮೭ ಮತ್ತು ಶೇ. ೮೫ರಷ್ಟು ವಿಭಕ್ತ ಕುಟುಂಬಗಳಾಗಿ ಜೀವನ ಸಾಗಿಸುತ್ತಿದ್ದಾರೆ. ಅದೇ ರೀತಿಯಾಗಿ ಅವಿಭಕ್ತ ಕುಟುಂಬಗಳು ಶೇ. ೧೩ ಮತ್ತು ಶೇ. ೧೫ರಷ್ಟು ಪ್ರಮಾಣದಲ್ಲಿ ಮಾತ್ರ ಉಳಿದುಕೊಂಡಿವೆ. ಇದರಿಂದ ತಿಳಿದುಬರುವ ಮುಖ್ಯ ಸಂಗತಿಯೆಂದರೆ ಅವಿಭಕ್ತ ಕುಟುಂಬಗಳು ಪೋಷಿಸುತ್ತಿರುವುದು ಕಂಡುಬರುತ್ತದೆ.

ಸಾಮಾಜಿಕ ಸ್ಥಾನಮಾನ

ಕೋಷ್ಟಕ ೪.೧೩. ದಲಿತರು ಎನ್ನುವ ಕಾರಣಕ್ಕೆ ನಿಮ್ಮನ್ನು/ನಿಮ್ಮ ಕುಟುಂಬದವರನ್ನು ಹೊರಗಿಡಲಾದ ಸಂದರ್ಭ

ಕ್ರಸಂ.	ಸೂಚಕಗಳು	ಹೊರಗಿಡುವ ಸಂದರ್ಭಗಳು	ಲಿಂಗ ವಾರು	ಮುಳಬಾಗಿಲು ತಾಲೂಕು			
				ಗಡ್ಡೂರು ಪಂಚಾಯತಿ		ನಂಗಲಿ ಪಂಚಾಯಿತಿ	
				ಸಂಖ್ಯೆ	ಶೇ.	ಸಂಖ್ಯೆ	ಶೇ.
೧	ಮನೆ/ವಾಸಸ್ಥಳ	ಎಲ್ಲಾ ಸಂದರ್ಭ	ಗಂಡು	೨೨	೨೨%	೨೩	೨೩%
			ಹೆಣ್ಣು	೩೬	೩೬%	೩೩	೩೩%
		ಬಹುತೇಕ ಸಂದರ್ಭ	ಗಂಡು	೧೨	೧೨%	೧೧	೧೧%
			ಹೆಣ್ಣು	೧೫	೧೫%	೧೩	೧೩%
		ಅಪರೂಪ ಸಂದರ್ಭ	ಗಂಡು	೧೨	೧೨%	೧೪	೧೪%
			ಹೆಣ್ಣು	೩	೩%	೬	೬%
			ಒಟ್ಟು	೧೦೦	೧೦೦%	೧೦೦	೧೦೦%

೨	ಹೋಟೆಲ್‌ಗಳು	ಎಲ್ಲಾ ಸಂದರ್ಭ	ಗಂಡು	೨೬	೨೬%	೨೮	೨೮%
			ಹೆಣ್ಣು	೮	೮%	೧೧	೧೧%
		ಬಹುತೇಕ ಸಂದರ್ಭ	ಗಂಡು	೨೬	೨೬%	೨೩	೨೩%
			ಹೆಣ್ಣು	೧೩	೧೩%	೧೩	೧೩%
		ಅಪರೂಪ ಸಂದರ್ಭ	ಗಂಡು	೧೫	೧೫%	೧೪	೧೪%
			ಹೆಣ್ಣು	೧೨	೧೨%	೧೧	೧೧%
			ಒಟ್ಟು	೧೦೦	೧೦೦%	೧೦೦	೧೦೦%
೩	ದೇವಸ್ಥಾನಗಳಲ್ಲಿ	ಎಲ್ಲಾ ಸಂದರ್ಭ	ಗಂಡು	೨	೨%	೩	೩%
			ಹೆಣ್ಣು	೦	೦%	೦	೦%
		ಬಹುತೇಕ ಸಂದರ್ಭ	ಗಂಡು	೦	೦%	೮	೮%
			ಹೆಣ್ಣು	೦	೦%	೦	೦%
		ಅಪರೂಪ ಸಂದರ್ಭ	ಗಂಡು	೪	೪%	೦	೦%
			ಹೆಣ್ಣು	೫	೫%	೦	೦%
			ಒಟ್ಟು	೧೧	೧೦೦%	೧೧	೧೦೦%
೪	ಮಾತು/ಚರ್ಚೆಗಳಲ್ಲಿ	ಎಲ್ಲಾ ಸಂದರ್ಭ	ಗಂಡು	೦	೦%	೦	೦%
			ಹೆಣ್ಣು	೦	೦%	೦	೦%
		ಬಹುತೇಕ ಸಂದರ್ಭ	ಗಂಡು	೦	೦%	೦	೦%
			ಹೆಣ್ಣು	೦	೦%	೦	೦%
		ಅಪರೂಪ ಸಂದರ್ಭ	ಗಂಡು	೦	೦%	೦	೦%
			ಹೆಣ್ಣು	೦	೦%	೦	೦%
			ಒಟ್ಟು	೦	೦%	೦	೦%
೫	ಸಂಘಟನೆಗಳಲ್ಲಿ	ಎಲ್ಲಾ ಸಂದರ್ಭ	ಗಂಡು	೨೮	೨೮%	೨೬	೨೬%
			ಹೆಣ್ಣು	೧೩	೧೩%	೧೨	೧೨%
		ಬಹುತೇಕ ಸಂದರ್ಭ	ಗಂಡು	೨೨	೨೨%	೨೬	೨೬%
			ಹೆಣ್ಣು	೧೦	೧೦%	೧೦	೧೦%
		ಅಪರೂಪ ಸಂದರ್ಭ	ಗಂಡು	೧೫	೧೫%	೧೪	೧೪%
			ಹೆಣ್ಣು	೧೨	೧೨%	೧೨	೧೨%
			ಒಟ್ಟು	೧೦೦	೧೦೦%	೧೦೦	೧೦೦%
೬	ಹಬ್ಬ–ಹರಿದಿನಗಳಲ್ಲಿ	ಎಲ್ಲಾ ಸಂದರ್ಭ	ಗಂಡು	೨೬	೨೬%	೨೫	೨೫%
			ಹೆಣ್ಣು	೧೨	೧೨%	೧೧	೧೧%
		ಬಹುತೇಕ ಸಂದರ್ಭ	ಗಂಡು	೨೬	೨೬%	೨೪	೨೪%
			ಹೆಣ್ಣು	೧೦	೧೦%	೧೫	೧೫%
		ಅಪರೂಪ ಸಂದರ್ಭ	ಗಂಡು	೧೪	೧೪%	೧೨	೧೨%
			ಹೆಣ್ಣು	೧೨	೧೨%	೧೩	೧೩%
			ಒಟ್ಟು	೧೦೦	೧೦೦%	೧೦೦	೧೦೦%

೭	ನಿಮ್ಮ ಮೇಲೆ ದೌರ್ಜನ್ಯ ಆಗಿದೆಯೇ?	ಎಲ್ಲಾ ಸಂದರ್ಭ	ಗಂಡು	೩೩	೩೩%	೩೧	೩೧%
			ಹೆಣ್ಣು	೧೬	೧೬%	೧೫	೧೫%
		ಬಹುತೇಕ ಸಂದರ್ಭ	ಗಂಡು	೧೨	೧೨%	೧೪	೧೪%
			ಹೆಣ್ಣು	೧೬	೧೬%	೧೭	೧೭%
		ಅಪರೂಪ ಸಂದರ್ಭ	ಗಂಡು	೧೩	೧೩%	೧೨	೧೨%
			ಹೆಣ್ಣು	೧೦	೧೦%	೧೧	೧೧%
			ಒಟ್ಟು	೧೦೦	೧೦೦%	೧೦೦	೧೦೦%
೮	ನಿಮ್ಮ ಮೇಲೆ ಬಹಿಷ್ಕರ ಹಾಕಲಾಗಿದೆಯೇ?	ಎಲ್ಲಾ ಸಂದರ್ಭ	ಗಂಡು	೦	೦%	೦	೦%
			ಹೆಣ್ಣು	೦	೦%	೦	೦%
		ಬಹುತೇಕ ಸಂದರ್ಭ	ಗಂಡು	೦	೦%	೦	೦%
			ಹೆಣ್ಣು	೦	೦%	೦	೦%
		ಅಪರೂಪ ಸಂದರ್ಭ	ಗಂಡು	೦	೦%	೦	೦%
			ಹೆಣ್ಣು	೦	೦%	೦	೦%
			ಒಟ್ಟು	೦	೦%	೦	೦%

ಮೂಲ: ಕ್ಷೇತ್ರಕಾರ್ಯ

ಈ ಮೇಲಿನ ಕೋಷ್ಟಕದಲ್ಲಿ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕು ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಗಡ್ಡೂರು ಹಾಗೂ ನಂಗಲಿ ಪಂಚಾಯತಿ ವ್ಯಾಪ್ತಿಯಲ್ಲಿ ವಾಸಿಸುವ ಜನರನ್ನು ಅದರಲ್ಲಿ ಮುಖ್ಯವಾಗಿ ತಳಸಮುದಾಯವಾದ ದಲಿತರನ್ನು ಸಂದರ್ಶನಕ್ಕೆ ಒಳಪಡಿಸಲಾಗಿದೆ. ಇತರೆ ಸಮುದಾಯಗಳು ಇವರನ್ನು ಸಾರ್ವಜನಿಕ ಸ್ಥಳದಿಂದ ದೂರವಿಡುವುದರಿಂದ ಇವರ ಮಾನಸಿಕ ಬೆಳವಣಿಗೆ ಮತ್ತು ಸಾಮಾಜಿಕ ಪ್ರತಿಷ್ಠೆಯನ್ನು ಕುಗ್ಗಿಸುತ್ತದೆ. ಕೆಲವೊಂದು ಸೂಚಕಗಳನ್ನು ಇಟ್ಟುಕೊಂಡು ಇವರನ್ನು ಪ್ರಶ್ನೆ ಮಾಡಲಾಗಿದೆ. ಮನೆ/ವಾಸಸ್ಥಳ, ಹೋಟೆಲ್‌ಗಳಲ್ಲಿ, ದೇವಸ್ಥಾನಗಳಲ್ಲಿ, ಮಾತು/ ಚರ್ಚೆಗಳಲ್ಲಿ, ಸಂಘಟನೆಗಳಲ್ಲಿ, ಹಬ್ಬ-ಹರಿದಿನಗಳಲ್ಲಿ, ನಿಮ್ಮ ಮೇಲೆ ದೌರ್ಜನ್ಯ, ಬಹಿಷ್ಕಾರ ಇತ್ಯಾದಿ ಸೂಚಕಗಳಿಂದ ಅಧ್ಯಯನ ಮಾಡಿದಾಗ ಮೇಲಿನ ಕೋಷ್ಟಕದ ರೀತಿಯಲ್ಲಿ ನೂರಕ್ಕೆ ಶೇಕಡವಾರು ಜನರು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ.

ಎಲ್ಲಾ ಸಂದರ್ಭದಲ್ಲಿ ಮನೆಯೊಳಗೆ ಬಿಟ್ಟುಕೊಳ್ಳುತ್ತಾರೆ ಎಂಬುದಕ್ಕೆ ಶೇ. ೨೨, ೩೬ ಹಾಗೂ ಶೇ. ೨೩, ೩೩ರಷ್ಟು ಪುರುಷರು ಮಹಿಳೆಯರು ಬಿಡುತ್ತಾರೆ ಎಂದಿದ್ದಾರೆ. ಬಹುತೇಕ ಸಂದರ್ಭ ಎಂದಾಗ ಶೇ. ೧೨, ೧೫ ಹಾಗೂ ೧೧, ೧೩ರಷ್ಟು ಅಪರೂಪದ ಸಂದರ್ಭ ಎಂದಾಗ ಶೇ. ೧೨, ೦೩ ಹಾಗೂ ೧೪, ೦೬ ಎಂದು ಉತ್ತರಿಸಿದ್ದಾರೆ. ಮನೆಯೊಳಗೆ ಬಿಟ್ಟುಕೊಳ್ಳುತ್ತಾರೆ ಎಂಬುದು ಬಹುತೇಕ ಅಭಿಮತವಿದ್ದು, ಅವರ ಮನಸ್ಸಿನ ಒಳಗಡೆ ಜಾತಿಯ ತಾರತಮ್ಯ ಹಾಗೇ ಇರುವುದು ಕಂಡುಬಂದಿದೆ. ಹೋಟೆಲ್‌ಗಳಲ್ಲಿ ಎಂದಾಗ ಪುರುಷ ಮತ್ತು ಮಹಿಳೆಯರು ಕ್ರಮವಾಗಿ

ಗಡ್ಡೂರು ಮತ್ತು ನಂಗಲಿ ಪಂಚಾಯತಿಯಲ್ಲಿ ಶೇ. ೨೬, ೮ ಹಾಗೂ ೨೮, ೧೧ ಬಹುತೇಕ ಸಂದರ್ಭ ಎಂದಾಗ ಶೇ. ೨೬, ೧೩ ಹಾಗೂ ೨೩, ೧೩ರಷ್ಟು ಎಂದಿದ್ದಾರೆ. ಅಪರೂಪದ ಸಂದರ್ಭ ಎಂದಾಗ ಶೇ. ೧೫, ೧೨ ಹಾಗೂ ೧೪, ೧೧ರಷ್ಟು ಜನರು ಮಾಹಿತಿಯನ್ನು ನೀಡಿರುತ್ತಾರೆ. ದೇವಸ್ಥಾನದಲ್ಲಿ ಕೇವಲ ಶೇ. ೨ರಷ್ಟು ಮಹಿಳೆಯರಿಗೆ ಅವಕಾಶವೇ ಇಲ್ಲ. ಅಪರೂಪದ ಸಂದರ್ಭದಲ್ಲಿ ಮಾತ್ರ ಕ್ರಮವಾಗಿ ಶೇ. ೪, ೫ ಹಾಗೂ ನಂಗಲಿ ಪಂಚಾಯತಿಯಲ್ಲಿ ಅವಕಾಶವೇ ಇಲ್ಲ ಎಂದಿದ್ದಾರೆ. ಇನ್ನೂ ಮಾತು ಅಥವಾ ಚರ್ಚೆಗಳಲ್ಲಿ ಇವರಿಗೆ ಅವಕಾಶ ದೊರೆತಿಲ್ಲ. ಸಂಘಟನೆಗಳಲ್ಲಿ ಕ್ರಮವಾಗಿ ಶೇ. ೨೮, ೧೩, ೨೨, ೧೦, ೧೫, ೧೨ ಹಾಗೂ ೨೬, ೧೨, ೨೬, ೧೦, ೧೪, ೧೨ ರಷ್ಟು ಎಂದು ಉತ್ತರಿಸಿದ್ದಾರೆ.

ಹಬ್ಬ-ಹರಿದಿನಗಳಲ್ಲಿ ಇವರ ಭಾಗವಹಿಸುವಿಕೆಯ ಪ್ರಮಾಣ ಗಂಡು ಮತ್ತು ಹೆಣ್ಣು ಎರಡು ಪಂಚಾಯತಿಯಿಂದ ಈ ರೀತಿಯಾಗಿದೆ. ಶೇ. ೨೬, ೧೨, ೨೬, ೧೦, ೧೪, ೧೨ ಹಾಗೂ ಶೇ. ೨೫, ೧೧, ೨೪, ೧೫, ೧೨, ೧೩ರಷ್ಟು ಈ ಪ್ರಮಾಣದಲ್ಲಿ ಅವಕಾಶ ಸಿಕ್ಕಿರುವುದನ್ನು ಕಾಣಬಹುದಾಗಿದೆ. ದೌರ್ಜನ್ಯ ವಿಷಯ ಕುರಿತು ಪ್ರಶ್ನಿಸಿದಾಗ ಪುರುಷ ಮತ್ತು ಮಹಿಳೆಯರು ಕ್ರಮವಾಗಿ ಶೇ. ೩೩, ೧೬, ೧೨, ೧೬, ೧೩, ೧೦ ಹಾಗೂ ಶೇ. ೩೧, ೧೫, ೧೪, ೧೭, ೧೨, ೧೧ರಷ್ಟು ಈ ಪ್ರಮಾಣದಲ್ಲಿ ದೌರ್ಜನ್ಯ ನಡೆದಿದೆ ಎಂದು ಗುರುತಿಸಲಾಗಿದೆ. ಇನ್ನೂ ಬಹಿಷ್ಕಾರದ ವಿಷಯದ ಮೇಲೆ ಪ್ರಶ್ನಿಸಿದಾಗ ಈ ಪಂಚಾಯತಿ ವ್ಯಾಪ್ತಿಯಲ್ಲಿ ಕಂಡುಬರುವುದಿಲ್ಲ.

ಕೋಷ್ಟಕ ೪.೧೪. ಸಮೀಕ್ಷೆಗೊಳಪಟ್ಟ ಮಾಹಿತಿದಾರರ ಶಿಕ್ಷಣದ ವಿವರ

ಕ್ರ.ಸಂ.	ಸೂಚಕಗಳು	ಲಿಂಗವಾರು	ಮುಳಬಾಗಿಲು ತಾಲೂಕು			
			ಗಡ್ಡೂರು ಪಂಚಾಯತಿ		ನಂಗಲಿ ಪಂಚಾಯಿತಿ	
			ಸಂಖ್ಯೆ	ಶೇ.	ಸಂಖ್ಯೆ	ಶೇ.
೧	ಅಕ್ಷರಸ್ಥರು	ಗಂಡು	೧೦	೧೦%	೧೧	೧೧%
		ಹೆಣ್ಣು	೧೪	೧೪%	೧೩	೧೩%
೨	ಪ್ರಾಥಮಿಕ ಶಿಕ್ಷಣ	ಗಂಡು	೧೨	೧೨%	೧೧	೧೧%
		ಹೆಣ್ಣು	೬	೬%	೬	೬%
೩	ಮಾಧ್ಯಮಿಕ ಶಿಕ್ಷಣ	ಗಂಡು	೯	೯%	೮	೮%
		ಹೆಣ್ಣು	೭	೭%	೬	೬%
೪	ಪ್ರೌಢ ಶಿಕ್ಷಣ	ಗಂಡು	೮	೮%	೯	೯%
		ಹೆಣ್ಣು	೬	೬%	೭	೭%
೫	ಪದವಿ ಪೂರ್ವ	ಗಂಡು	೭	೭%	೬	೬%
		ಹೆಣ್ಣು	೬	೬%	೬	೬%
೬	ಪದವಿಯೇತರ	ಗಂಡು	೩	೩%	೪	೪%
		ಹೆಣ್ಣು	೨	೨%	೩	೩%

೭	ಸ್ನಾತಕೋತ್ತರ	ಗಂಡು	೪	೪%	೩	೩%
		ಹೆಣ್ಣು	೩	೩%	೫	೫%
೮	ವೃತ್ತಿಪರ ಶಿಕ್ಷಣ	ಗಂಡು	೨	೨%	೧	೧%
		ಹೆಣ್ಣು	೧	೧%	೧	೧%
ಒಟ್ಟು			೧೦೦	೧೦೦%	೧೦೦	೧೦೦%

ಮೂಲ: ಕ್ಷೇತ್ರಕಾರ್ಯ

ಈ ಮೇಲಿನ ಕೋಷ್ಟಕವು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಎರಡು ಪಂಚಾಯಿತಿಗಳಾದ ಗಡ್ಡೂರ ಮತ್ತು ನಂಗಲಿ ಗ್ರಾಮ ವ್ಯಾಪ್ತಿಯನ್ನು ಮಾತ್ರ ಸಂದರ್ಶಿಸಲಾಗಿದೆ. ಅವರ ಶಿಕ್ಷಣವನ್ನು ತಿಳಿಯುವುದಕ್ಕಾಗಿ ಪುರುಷರು ಮತ್ತು ಮಹಿಳೆಯ ವಿವರವನ್ನು ಪಡೆದುಕೊಂಡು ಮಾಹಿತಿಯನ್ನು ಇದು ತಿಳಿಸುತ್ತದೆ.

ಈ ಎರಡು ಪಂಚಾಯಿತಿಗಳಲ್ಲಿನ ಜನರ ಅನುಕ್ಷರಸ್ಥರು ಕ್ರಮವಾಗಿ ಗಂಡು ಮತ್ತು ಹೆಣ್ಣು ನೂರಕ್ಕೆ ಶೇಕಡವಾರು ಕ್ರಮದಲ್ಲಿ ಗುರುತಿಸಲಾಗಿದೆ. ಇಲ್ಲಿ ಅನುಕ್ರಮವಾಗಿ ಶೇ. ೧೦, ೧೪ ಹಾಗೂ ೧೧, ೧೩ ಮತ್ತು ಪ್ರಾಥಮಿಕ ಶಿಕ್ಷಣ ಪಡೆದವರು ಕ್ರಮವಾಗಿ ಶೇ. ೧೨, ೦೬ ಹಾಗೂ ೧೧, ೦೬ರಷ್ಟಿದ್ದಾರೆ. ಮಾಧ್ಯಮಿಕ ಶೇ. ೯, ೭ ಹಾಗೂ ೮, ೬ರಷ್ಟಿದೆ. ಪ್ರೌಢಶಿಕ್ಷಣ ಶೇ. ೮, ೬ ಹಾಗೂ ೯, ೭ ಪದವಿಪೂರ್ವ ಶೇ. ೭, ೬ ಹಾಗೂ ೬, ೬ ಪದವಿ ಹಂತದ ಶಿಕ್ಷಣದಲ್ಲಿ ಶೇ. ೩, ೨ ಹಾಗೂ ೪, ೩ ಮತ್ತು ಸ್ನಾತಕೋತ್ತರ ಪದವಿ ಶೇ. ೪, ೩ ಹಾಗೂ ೩, ೫ ಇನ್ನು ವೃತ್ತಿಪೂರ್ವ ಶಿಕ್ಷಣ ಭಾಗದಲ್ಲಿ ಕೇವಲ ಶೇ. ೨, ೧ ಹಾಗೂ ೧, ೧ ಎಂಬ ಮಹತ್ವದ ಅಂಶವು ಬೆಳಕಿಗೆ ಬಂದಿದೆ. ಮುಂದೆ ಶಿಕ್ಷಣ ಪಡೆಯುವವರ ಸಂಖ್ಯೆ ಈ ದಲಿತ ವರ್ಗದಲ್ಲಿ ಕ್ಷೀಣಿಸುತ್ತಿರುವುದು ಕಳವಳಕಾರಿಯಾದ ಸಂಗತಿಯಾಗಿದೆ.

ಕೋಷ್ಟಕ ೪.೧೫. ಸಮೀಕ್ಷೆಗೊಳಪಟ್ಟ ಮಾಹಿತಿದಾರರ ಮಕ್ಕಳು ಶಾಲೆಗೆ ಹೋಗುತ್ತಿರುವ ವಿವರ

ಕ್ರ ಸಂ.	ಸೂಚಕಗಳು	ಮುಳಬಾಗಿಲು ತಾಲೂಕು									
		ಗಡ್ಡೂರು ಪಂಚಾಯತಿ					ನಂಗಲಿ ಪಂಚಾಯಿತಿ				
		ಹೌದು		ಇಲ್ಲ		ಒಟ್ಟು	ಹೌದು		ಇಲ್ಲ		ಒಟ್ಟು
		ಸಂಖ್ಯೆ	ಶೇ.	ಸಂಖ್ಯೆ	ಶೇ.		ಸಂಖ್ಯೆ	ಶೇ.	ಸಂಖ್ಯೆ	ಶೇ.	
೧	ನಿಮ್ಮ ಮಕ್ಕಳು ಶಾಲೆಗೆ ಹೋಗುತ್ತಾರೆಯೆ?	೭೫	೭೫%	೨೫%	೨೫%	೧೦೦%	೭೩	೭೩%	೨೭	೨೭%	೧೦೦%

ಮೂಲ: ಕ್ಷೇತ್ರಕಾರ್ಯ

ಈ ಮೇಲಿನ ಕೋಷ್ಟಕವು ಈ ಜಿಲ್ಲೆಯ ಮುಳಬಾಗಿಲು ತಾಲೂಕಿನ ಎರಡು ಗ್ರಾಮಗಳಾದ ಗಡ್ಡೂರು ಮತ್ತು ನಂಗಲಿ ವ್ಯಾಪ್ತಿಗೆ ಮಾತ್ರ ಸೀಮಿತಗೊಂಡಿರುತ್ತದೆ. ಇಲ್ಲಿ ಸಂದರ್ಶನಕ್ಕೆ ಒಳಗಾದವರ ಮಕ್ಕಳು ಶಾಲೆಗೆ ಹೋಗುತ್ತಿರುವುದರ ವಿವರಣೆಯನ್ನು ಪಡೆಯಲಾಗಿದೆ. ನಿಮ್ಮ ಮಕ್ಕಳು ಶಾಲೆಗೆ ಹೋಗುತ್ತಾರೆಯೇ? ಎಂದು ಕೇಳಿದಾಗ ಈ ಮೇಲಿನ ಕೋಷ್ಟಕವು ಕ್ರಮವಾಗಿ ವಿವರಣೆಯನ್ನು ಒಳಗೊಂಡಿದೆ. ಹೋಗುತ್ತಾರೆ ಎಂದು ಉತ್ತರಿಸಿದವರು ಕ್ರಮವಾಗಿ ಶೇ. ನೂರಕ್ಕೆ ಪ್ರತಿಶತ ಶೇ. ೭೫, ೭೩ ಹಾಗೂ ಇಲ್ಲವೆಂದು ಹೇಳಿದವರು ಶೇ. ೨೫, ೨೭ರಷ್ಟು ಮಕ್ಕಳು ಶಾಲೆಯನ್ನೇ ನೋಡಿಲ್ಲದಿರುವುದು ಈ ಜಿಲ್ಲೆಯ ಮುಳಬಾಗಿಲು ತಾಲೂಕಿನ ಈ ಪಂಚಾಯತಿಯಲ್ಲಿ ಕಂಡುಬಂದಿದೆ.

ಕೋಷ್ಟಕ ೪.೧೬. ಯಾವ ಶಾಲೆಗೆ ಹೋಗುತ್ತಾರೆ

ಕ್ರಸಂ.	ಸೂಚಕಗಳು	ಮುಳಬಾಗಿಲು ತಾಲೂಕು			
		ಗಡ್ಡೂರು ಪಂಚಾಯತಿ		ನಂಗಲಿ ಪಂಚಾಯಿತಿ	
		ಸಂಖ್ಯೆ	ಶೇ.	ಸಂಖ್ಯೆ	ಶೇ.
೧	ಸರ್ಕಾರಿ ಶಾಲೆ/ಕಾಲೇಜು	೪೫	೪೫%	೪೮	೪೮%
೨	ಖಾಸಗಿ ಶಾಲೆ/ಕಾಲೇಜು	೫೫	೫೫%	೫೨	೫೨%
	ಒಟ್ಟು	೧೦೦	೧೦೦%	೧೦೦	೧೦೦%

ಮೂಲ: ಕ್ಷೇತ್ರಕಾರ್ಯ

ಈ ಕೋಷ್ಟಕದಲ್ಲಿ ಗಡ್ಡೂರು ಮತ್ತು ನಂಗಲಿ ವಾಸಿಸುತ್ತಿರುವ ದಲಿತ ವರ್ಗದ ಮಕ್ಕಳು ಯಾವ ಶಾಲೆಗೆ ಬಹುತೇಕವಾಗಿ ಹೋಗುತ್ತಾರೆಂದು ಪ್ರಶ್ನೆ ಮಾಡಿದಾಗ ಈ ಮಾಹಿತಿಯು ದೊರಕಿದೆ. ಸರ್ಕಾರಿ ಶಾಲೆ ಅಥವಾ ಕಾಲೇಜಿಗೆ ಕ್ರಮವಾಗಿ ಶೇ. ೫೫, ೫೨ ಎಂದು ಉತ್ತರಿಸಿದ್ದಾರೆ. ಇನ್ನು ಖಾಸಗಿ ಶಾಲೆ / ಕಾಲೇಜಿಗೆ ಶೇ. ೪೫, ೪೬ ವಿದ್ಯಾರ್ಥಿಗಳು ದಾಖಲಾಗುತ್ತಿದ್ದಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ದಲಿತ ವರ್ಗದ ಮಕ್ಕಳು ಬಹುತೇಕ ಸರ್ಕಾರಿ ಶಾಲೆ, ಕಾಲೇಜಿಗೆ ಹೋಗುವುದು ಕಂಡುಬರುತ್ತದೆ.

ಕೋಷ್ಟಕ ೪.೧೭. ಸಮೀಕ್ಷೆಗೊಳಪಟ್ಟ ಶಿಕ್ಷಣ ಮುಂದುವರೆಸುತ್ತಿರುವ ಮಕ್ಕಳ ಹಾಗೂ ಶಾಲೆಬಿಟ್ಟ ಮಕ್ಕಳ ಲಿಂಗವಾರು ವಿವರ

ಕ್ರ.ಸಂ.	ಸೂಚಕಗಳು	ಲಿಂಗ ವಾರು	ಮುಳಬಾಗಿಲು ತಾಲೂಕು							
			ಗಡ್ಡೂರು ಪಂಚಾಯತಿ				ನಂಗಲಿ ಪಂಚಾಯಿತಿ			
			ಓದುತ್ತಿರುವ ಮಕ್ಕಳು		ಶಾಲೆಬಿಟ್ಟ ಮಕ್ಕಳು		ಓದುತ್ತಿರುವ ಮಕ್ಕಳು		ಶಾಲೆಬಿಟ್ಟ ಮಕ್ಕಳು	
			ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
೧	ಪ್ರಾಥಮಿಕ ಶಿಕ್ಷಣ	ಗಂಡು	೮	೮%	೭	೭%	೭	೭%	೬	೬%
		ಹೆಣ್ಣು	೬	೬%	೫	೫%	೮	೮%	೭	೭%
೨	ಮಾಧ್ಯಮಿಕ ಶಿಕ್ಷಣ	ಗಂಡು	೬	೬%	೫	೫%	೫	೫%	೪	೪%
		ಹೆಣ್ಣು	೫	೫%	೬	೬%	೬	೬%	೫	೫%
೩	ಪ್ರೌಢ ಶಿಕ್ಷಣ	ಗಂಡು	೩	೩%	೩	೩%	೪	೪%	೩	೩%
		ಹೆಣ್ಣು	೨	೨%	೨	೨%	೩	೩%	೨	೨%
೪	ಪದವಿ ಪೂರ್ವ	ಗಂಡು	೫	೫%	೪	೪%	೩	೩%	೩	೩%
		ಹೆಣ್ಣು	೪	೪%	೫	೫%	೬	೬%	೩	೩%
೫	ಪದವಿ ಯೇತರ	ಗಂಡು	೩	೩%	೩	೩%	೪	೪%	೨	೨%
		ಹೆಣ್ಣು	೨	೨%	೨	೨%	೩	೩%	೧	೧%
೬	ಸ್ನಾತಕೋತ್ತರ	ಗಂಡು	೩	೩%	೨	೨%	೨	೨%	೨	೨%
		ಹೆಣ್ಣು	೧	೧%	೧	೧%	೩	೩%	೩	೩%
೭	ವೃತ್ತಿಪರ ಶಿಕ್ಷಣ	ಗಂಡು	೨	೨%	೩	೩%	೨	೨%	೧	೧%
		ಹೆಣ್ಣು	೧	೧%	೧	೧%	೧	೧%	೧	೧%
ಒಟ್ಟು			೫೧	೧೦೦%	೪೯	೧೦೦%	೫೭	೧೦೦%	೪೩	೧೦೦%

ಮೂಲ: ಕ್ಷೇತ್ರಕಾರ್ಯ

ಈ ಕೋಷ್ಟಕವು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನಲ್ಲಿ ಶಾಲೆ ಮುಂದುವರೆಸಿದ ಮತ್ತು ಮಧ್ಯದಲ್ಲಿ ಶಾಲೆಬಿಟ್ಟ ಮಕ್ಕಳ ವಿವರಣೆ ನೀಡುತ್ತದೆ. ಈ ತಾಲೂಕಿನಲ್ಲಿ ಎರಡು ಪಂಚಾಯತಿಗಳಾದ ಗಡ್ಡೂರು ಹಾಗೂ ನಂಗಲಿ ವ್ಯಾಪ್ತಿಯನ್ನು ಮಾತ್ರ ಕೇಂದ್ರಿಕರಿಸಲಾಗಿದೆ. ಇಲ್ಲಿ ಅಂಶಗಳ ಮೇಲೆ ಸಂದರ್ಶನ ಮಾಡಲಾಗಿದೆ. ಅವುಗಳೆಂದರೆ, ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣ, ಪ್ರೌಢ ಶಿಕ್ಷಣ, ಪದವಿಪೂರ್ವ, ಪದವಿ, ಸ್ನಾತಕೋತ್ತರ, ವೃತ್ತಿ ಶಿಕ್ಷಣ ಇಷ್ಟು ಸೂಚಕಗಳಿಂದ ಯಾವ ಪ್ರಮಾಣದಲ್ಲಿ ಶಿಕ್ಷಣ ದಲಿತ ಸಮುದಾಯದಲ್ಲಿ ಮುಂದುವರೆದಿದೆ. ಹಾಗೂ ಅರ್ಧಕ್ಕೆ ಬಿಟ್ಟಿದ್ದಾರೆ ಎಂದು ಗುರುತಿಸಿದೆ. ಇದರಲ್ಲಿ ಪುರುಷರು ಹಾಗೂ ಮಹಿಳೆಯರು ಒಳಗೊಂಡಿರುತ್ತಾರೆ.

ಮೊದಲನೆಯದಾಗಿ ಶಿಕ್ಷಣ ಮುಂದುವರೆಸುತ್ತಿರುವವರು ವಿವರವನ್ನು ಎರಡು ಪಂಚಾಯಿತಿಗಳಿಂದ ಕ್ರಮವಾಗಿ ಶೇಕಡವಾರು ಈ ರೀತಿಯಾಗಿದೆ. ಶೇ. ೮, ೬, ೬, ೫, ೩, ೨, ೫, ೪, ೩, ೨, ೩, ೧, ೨, ೧ ಹಾಗೂ ೭, ೮, ೫, ೬, ೪, ೩, ೩, ೬. ೪, ೩, ೨, ೩, ೨, ೧ ಈ ಪ್ರಮಾಣದಲ್ಲಿ ಅನುಕ್ರಮವಾಗಿ ಪುರುಷರು ಮತ್ತು ಮಹಿಳೆಯರು ಶಿಕ್ಷಣದ ಮುಂದುವರಿಕೆಯನ್ನು ಕಾಣಬಹುದು. ಹಾಗೂ ಅರ್ಧದಲ್ಲೇ ಶಾಲೆಬಿಟ್ಟ ಮಕ್ಕಳ ವಿವರ ಎರಡು ಪಂಚಾಯತಿಯಿಂದ ಕ್ರಮವಾಗಿ ಶೇ. ೭, ೫, ೫, ೬, ೩, ೨, ೪, ೫, ೩, ೨, ೨, ೧, ೩, ೧ ಹಾಗೂ ಶೇ. ೬, ೭, ೪, ೫, ೩, ೨, ೩, ೩, ೨, ೧, ೨, ೩, ೧, ೧ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ ಶಾಲೆಯನ್ನು ಮುಂದುವರೆಸುತ್ತಿರುವ ಮಕ್ಕಳ ಆಸುಪಾಸಿನಲ್ಲೇ ಶಾಲೆ ಬಿಡುತ್ತಿರುವ ಮಕ್ಕಳ ಪ್ರಮಾಣವು ಸಹ ಅಷ್ಟೇ ಸಮಸಮನಾಗಿ ಮುಂದುವರೆಸುತ್ತಿದೆ. ದಲಿತರಲ್ಲಿ ಶಿಕ್ಷಣದಿಂದ ವಂಚಿತತೆಯನ್ನು ತಡೆಯಲು ಸರ್ಕಾರ ಈ ಭಾಗದಲ್ಲಿ ಮುಂದಾಗಬೇಕಾಗಿದೆ.

ಕೋಷ್ಟಕ ೪.೧೮. ಸಮೀಕ್ಷೆಗೊಳಪಟ್ಟ ವಸತಿ ವಿವರ

ಕ್ರಸಂ.	ಸೂಚಕಗಳು	ಮುಳಬಾಗಿಲು ತಾಲೂಕು									
		ಗಡ್ಡೂರು ಪಂಚಾಯತಿ					ನಂಗಲಿ ಪಂಚಾಯಿತಿ				
		ಹೌದು		ಇಲ್ಲ		ಒಟ್ಟು	ಹೌದು		ಇಲ್ಲ		ಒಟ್ಟು
		ಸಂಖ್ಯೆ	ಶೇ.	ಸಂಖ್ಯೆ	ಶೇ.		ಸಂಖ್ಯೆ	ಶೇ.	ಸಂಖ್ಯೆ	ಶೇ.	
೧	ನಿಮಗೆ ಸ್ವಂತ ಮನೆ ಇದೆಯೇ?	೭೫	೭೫%	೨೨	೨೨%	೧೦೦%	೭೫	೭೫%	೨೫	೨೫%	೧೦೦%
೨	ನೀವೆ ಕಟ್ಟಿಸಿದ್ದೀರಾ?	೮೬	೮೬%	೧೪	೧೪%	೧೦೦%	೬೫	೬೫%	೩೫	೩೫%	೧೦೦%
೩	ಸರ್ಕಾರದ ಸಹಾಯಧನ ಸಿಕ್ಕಿದೆಯಾ?	೩೫	೩೫%	೬೫	೬೫%	೧೦೦%	೩೩	೩೩%	೬೭	೬೭%	೧೦೦%
೪	ನಿಮಗೆ ಯಾವುದಾದರೂ ವಸತಿ ಯೋಜನೆ ಸಿಕ್ಕಿದೆಯಾ?	೩೫	೩೫%	೬೫	೬೫%	೧೦೦%	೩೬	೩೬%	೬೪	೬೪%	೧೦೦%

ಮೂಲ: ಕ್ಷೇತ್ರಕಾರ್ಯ

ಈ ಕೋಷ್ಟಕವು ಮುಳಬಾಗಿಲು ತಾಲೂಕಿನ ಗಡ್ಡೂರು ಮತ್ತು ನಂಗಲಿ ಪಂಚಾಯಿತಿ ವ್ಯಾಪ್ತಿಯ ಜನರ ವಸತಿಯ ವಿವರವನ್ನು ನೀಡುತ್ತದೆ. ನಾಲ್ಕು ಪ್ರಶ್ನೆಗಳನ್ನಿಟ್ಟುಕೊಂಡು ಜನರನ್ನು ಸಂದರ್ಶಿಸಲಾಗಿದೆ. ಆ ನಾಲ್ಕು ಪ್ರಶ್ನೆಗಳು ಸ್ವಂತ ಮನೆ, ನಿವೇ ಕಟ್ಟಿಸಿದ್ದೀರಾ? ಸರ್ಕಾರದ ಧನಸಹಾಯ, ಯಾವುದಾದರೂ ವಸತಿ ಸೌಲಭ್ಯ ಸಿಕ್ಕಿದೆಯೇ? ಎಂದು ವಿಚಾರಿಸಿದಾಗ ಈ ಎರಡು ಪಂಚಾಯಿ ಗ್ರಾಮದವರು(ದಲಿತ) ಹೌದು ಮತ್ತು ಇಲ್ಲ ಎನ್ನುವ ಮೂಲಕ ಉತ್ತರವನ್ನು ಕ್ರಮವಾಗಿ ಹೀಗೆ ನೀಡಿರುತ್ತಾರೆ. ಹೌದು ಎಂದು ಕ್ರಮವಾಗಿ ಶೇ. ೭೮, ೭೫ ಹಾಗೂ ಇಲ್ಲ ಎಂದು ಶೇ. ೨೨, ೨೫, ನೀವೇ ಕಟ್ಟಿಸಿದ್ದೀರಾ ಎಂದಾಗ ಶೇ. ೮೬, ೬೫ ಹಾಗೂ ಶೇ. ೧೪, ೩೫ ಅದೇ ರೀತಿ ಸರ್ಕಾರದ ಸಹಾಯಧನದ ಬಗ್ಗೆ ಹೌದು ಎಂದವರು ಶೇ. ೩೫, ೩೩ ಹಾಗೂ ಇಲ್ಲ ಎಂದವರು ಶೇ. ೬೫, ೬೭ ಯಾವುದಾದರೂ ವಸತಿ ಸೌಲಭ್ಯ ಎಂದಾಗ ಹೌದು ಎಂದವರು ಶೇ. ೩೫, ೩೬ ಹಾಗೂ ಶೇ. ೬೫, ೬೪ರಷ್ಟು ಮಂದಿ ಇಲ್ಲ ಎಂದಿದ್ದಾರೆ. ಇಲ್ಲಿ ಜನರು ವಾಸ ಮಾಡುವ ಮನೆಗಳಿಗೆ ಸರ್ಕಾರದಿಂದ ಕಡಿಮೆ ಪ್ರಮಾಣ ಸಹಾಯ ಮಾತ್ರ ಸಿಕ್ಕಿದೆ.

ಕೋಷ್ಟಕ ೪.೧೯. ಸಮೀಕ್ಷೆಗೊಳಪಟ್ಟ ಮನೆಯ ಸ್ವರೂಪ

ಕ್ರ.ಸಂ.	ಸೂಚಕಗಳು	ಮುಳಬಾಗಿಲು ತಾಲೂಕು			
		ಗಡ್ಡೂರು ಪಂಚಾಯತಿ		ನಂಗಲಿ ಪಂಚಾಯಿತಿ	
		ಸಂಖ್ಯೆ	ಶೇ.	ಸಂಖ್ಯೆ	ಶೇ.
೧	ಗುಡಿಸಲು	೧೨	೧೨%	೧೫	೧೫%
೨	ಮಣ್ಣಿನ ಮನೆ	೨೩	೨೩%	೨೧	೨೧%
೩	ಶೀಟಿನ್ ಮನೆ	೧೭	೧೭%	೧೬	೧೬%
೪	ಹೆಂಚಿನ ಮನೆ	೧೨	೧೨%	೧೩	೧೩%
೫	ಜನತಾ ಆಶ್ರಯ	೧೯	೧೯%	೧೭	೧೭%
೬	ಆರ್.ಸಿ.ಸಿ.	೧೭	೧೭%	೧೮	೧೮%
	ಒಟ್ಟು	೧೦೦	೧೦೦%	೧೦೦	೧೦೦%

ಮೂಲ: ಕ್ಷೇತ್ರಕಾರ್ಯ

ಈ ಮೇಲಿನ ಕೋಷ್ಟಕವು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ವ್ಯಾಪ್ತಿಯಾದ ಗಡ್ಡೂರು ಮತ್ತು ನಂಗಲಿ ಪಂಚಾಯಿತಿ ಜನರಿಗೆ ಮಾತ್ರ ಸೀಮಿತವಾಗಿರುತ್ತದೆ. ಇಲ್ಲಿ ವಾಸ ಮಾಡುತ್ತಿರುವ ದಲಿತ ಕುಟುಂಬಗಳ ಮನೆಯ ಸ್ವರೂಪದ ವಿವರವನ್ನು ನೀಡುತ್ತದೆ. ನಾಲ್ಕು ಸೂಚಕಗಳನ್ನಿಟ್ಟುಕೊಂಡು ಸಂದರ್ಶಿಸಿದೆ. ಅವುಗಳೆಂದರೆ ಮೊದಲನೆಯದು ಗುಡಿಸಲು, ಮಣ್ಣಿನ ಮನೆ, ಶೀಟಿನ್ ಮನೆ, ಹಂಚಿನ ಮನೆ, ಜನತಾ ಆಶ್ರಯ, ಆರ್.ಸಿ.ಸಿ. ಮನೆ ಇವುಗಳನ್ನು

ಹೊಂದಿದವರು ಕ್ರಮವಾಗಿ ಈ ಎರಡು ಗ್ರಾಮಗಳಿಂದ ಈ ರೀತಿಯಾಗಿ ನೂರಕ್ಕೆ ಪ್ರತಿಶತ ಶೇಕಡವಾರು ೧೨, ೨೩, ೧೭, ೧೨, ೧೯, ೧೭ ಹಾಗೂ ಶೇ. ೧೫, ೨೧, ೧೬, ೧೩, ೧೭, ೧೮ ಮನೆಯ ಸ್ವರೂಪವನ್ನು ನೋಡಬಹುದಾಗಿದೆ. ಬಹುತೇಕವಾಗಿ ಮಣ್ಣಿನ ಮನೆಗಳು ಹೆಚ್ಚಾಗಿರುವುದು ಈ ಸಮೀಕ್ಷೆಯಿಂದ ಕಂಡುಬರುತ್ತದೆ.

ಕೋಷ್ಟಕ ೪.೨೦. ಸಮೀಕ್ಷೆಗೊಳಪಟ್ಟ ಶೌಚಾಲಯ ವಿವರ

ಕ್ರ.ಸಂ.	ಸೂಚಕಗಳು		ಮುಳಬಾಗಿಲು ತಾಲೂಕು			
			ಗಡ್ಡೂರು ಪಂಚಾಯತಿ		ನಂಗಲಿ ಪಂಚಾಯಿತಿ	
			ಸಂಖ್ಯೆ	ಶೇ.	ಸಂಖ್ಯೆ	ಶೇ.
೧	ನಿಮ್ಮ ಮನೆಯಲ್ಲಿ ಶೌಚಾಲಯವಿದೆಯೆ?	ಹೌದು	೬೨	೬೨%	೬೦	೬೦%
		ಇಲ್ಲ	೩೮	೩೫%	೪೦	೪೦%
		ಒಟ್ಟು	೧೦೦	೧೦೦%	೧೦೦	೧೦೦%
೨	ಸಮೂಹ ಶೌಚಾಲಯ ವಿದೆಯೆ?	ಹೌದು	೩	೩%	೪	೪%
		ಇಲ್ಲ	೪	೪%	೩	೩%
		ಒಟ್ಟು	೭	೭%	೭	೭%
೨	ಬಯಲು ಶೌಚಾಲಯ ಬಳಸುವಿಕೆ?	ಹೌದು	೫೫	೫೫%	೬೫	೫೫%
		ಇಲ್ಲ	೪೫	೪೫%	೩೫	೫೨%
		ಒಟ್ಟು	೧೦೦	೧೦೦%	೧೦೦	೧೦೦%

ಮೂಲ: ಕ್ಷೇತ್ರಕಾರ್ಯ

ಈ ಕೋಷ್ಟಕವು ಗಡ್ಡೂರು ಮತ್ತು ನಂಗಲಿ ವಾಸ ಮಾಡುತ್ತಿರುವ ದಲಿತ ಸಮುದಾಯದ ಶೌಚಾಲಯದ ವಿವರಣೆಯನ್ನು ನೀಡುತ್ತದೆ. ಇಲ್ಲಿ ಮೂರು ಪ್ರಶ್ನೆಗಳನ್ನಿಟ್ಟುಕೊಂಡು ಮಾಹಿತಿಯನ್ನು ಪಡೆಯಲಾಗಿದೆ. ಮೊದಲನೆಯದಾಗಿ ಶೌಚಾಲಯ ಇದೆ – ಇಲ್ಲ ಎನ್ನುವುದು, ಎರಡನೆಯದಾಗಿ ಇಲ್ಲವಾದರೆ ಸಮೂಹ ಶೌಚಾಲಯ ಇದೆ – ಇಲ್ಲ ಎನ್ನುವುದರ ಕುರಿತು, ಕೊನೆಯದಾಗಿ ಬಯಲು ಶೌಚಾಲಯವನ್ನು ಬಳಸುವವರ ಪ್ರಮಾಣವನ್ನು ಇಲ್ಲಿ ಒರೆಗೆ ಹಚ್ಚಲಾಗಿದೆ. ಮನೆಯಲ್ಲಿ ಶೌಚಾಲಯವಿದೆ ಎಂದವರು ಕ್ರಮವಾಗಿ ಶೇ. ೬೨, ೬೦ ಹಾಗೂ ಇಲ್ಲ ಎಂದವರು ಶೇ. ೨೮, ೪೦ರಷ್ಟು ಎಂದಾಗಿದೆ. ಸಮೂಹ ಶೌಚಾಲಯ ಬಳಸುವವರ ಪ್ರಮಾಣ ಸ್ತ್ರೀಯರು ಮತ್ತು ಪುರುಷರು ಕ್ರಮವಾಗಿ ಶೇ. ೩, ೪ ಹಾಗೂ ಸ್ತ್ರೀಯರ ಪ್ರಮಾಣ ಶೇ. ೪, ೩ರಷ್ಟು ಬಳಸುತ್ತಿದ್ದಾರೆ ಎಂಬುದಾಗಿ ತಿಳಿದುಬರುತ್ತದೆ. ಇನ್ನು ಬಯಲು ಶೌಚಾಲಯ ಬಳಸುವವರ ಲಿಂಗವಾರು ಪ್ರಮಾಣ ಶೇ. ೬೫, ೬೭ ಹಾಗೂ ಶೇ. ೫೫, ೫೨ರಷ್ಟು ಬಹಿರ್ದೆಸೆಗೆ ಹೋಗುತ್ತಿರುವುದು ಅಂಕಿ ಅಂಶಗಳಿಂದ ಕಂಡುಬರುತ್ತದೆ. ಸ್ವಚ್ಛಭಾರತ ಎನ್ನುವುದು ಇಲ್ಲಿ ಹಾಸ್ಯಸ್ಪದವಾಗುತ್ತದೆ.

ಕೋಷ್ಟಕ ೪.೨೧. ಸಮೀಕ್ಷೆಗೊಳಪಟ್ಟ ಕುಡಿಯುವ ನೀರಿನ ಮೂಲ

ಕ್ರಸಂ.	ಸೂಚಕಗಳು	ಮುಳಬಾಗಿಲು ತಾಲೂಕು			
		ಗಡ್ಡೂರು ಪಂಚಾಯತಿ		ನಂಗಲಿ ಪಂಚಾಯಿತಿ	
		ಸಂಖ್ಯೆ	ಶೇ.	ಸಂಖ್ಯೆ	ಶೇ.
೧	ಕೆರೆ	೧೦	೧೦%	೯	೯%
೨	ಬಾವಿ	೫	೫%	೬	೬%
೩	ಹಳ್ಳ	೧೨	೧೨%	೧೩	೧೩%
೪	ಬೋರ್‌ವೆಲ್	೩೨	೩೨%	೩೧	೩೧%
೫	ಮೀಸಲಾದ ಬಾವಿ	೧೨	೧೨%	೧೨	೧೨%
೬	ವೈಯಕ್ತಿಕ ನಲ್ಲಿಗಳು	೧೫	೧೫%	೧೪	೧೪%
೭	ಸಾರ್ವಜನಿಕ ನಲ್ಲಿಗಳು	೧೪	೧೪%	೧೫	೧೫%
	ಒಟ್ಟು	೧೦೦	೧೦೦%	೧೦೦	೧೦೦%

ಮೂಲ: ಕ್ಷೇತ್ರಕಾರ್ಯ

ಈ ಮೇಲಿನ ಕೋಷ್ಟಕವು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಗಡ್ಡೂರು ಮತ್ತು ನಂಗಲಿ ಜನರು ಅದರಲ್ಲಿ ದಲಿತ ಸಮುದಾಯದವರು ಕುಡಿಯುವ ನೀರಿನ ಮಟ್ಟ ಯಾವುದಾಗಿರುತ್ತದೆ ಎಂದು ಪ್ರಶ್ನೆ ಮಾಡಿದಾಗ ಅವರು ಬಳಸುತ್ತಿರುವ ವ್ಯವಸ್ಥೆಯನ್ನು ಈ ಕೋಷ್ಟಕದ ಅಂಕಿ ಸಂಖ್ಯೆಗಳು ನೀಡುತ್ತವೆ. ಯಾವ ಮೂಲದಿಂದ ನೀರು ಪಡೆಯುತ್ತಾರೆ ಎನ್ನುವುದು ಕ್ರಮವಾಗಿ ಈ ರೀತಿ ವಿಂಗಡಿಸಿದೆ. ಕೆರೆ, ಬಾವಿ, ಹಳ್ಳ, ಬೊರವೇಲ್, ಮೀಸಲಾದ ಬಾವಿ, ವೈಯಕ್ತಿಕ ನಲ್ಲಿಗಳು, ಸಾರ್ವಜನಿಕ ನಲ್ಲಿಗಳು ಇವುಗಳನ್ನು ಎರಡು ಪಂಚಾಯತಿಯಲ್ಲಿ ಯಾವ ಪ್ರಮಾಣದಲ್ಲಿ ಬಳಸುತ್ತಾರೆ ಎನ್ನುವುದನ್ನು ನೂರಕ್ಕೆ ಪ್ರತಿಶತ ಶೇಕಡವಾರು ಹೀಗೆ ನೋಡಬಹುದು. ಶೇ. ೧೦, ೧೫, ೧೨, ೩೨, ೧೨, ೧೫, ೧೪ ಹಾಗೂ ಶೇ. ೯, ೬, ೧೩, ೩೧, ೧೨, ೧೪, ೧೫ ಈ ಕ್ರಮದಲ್ಲಿ ಇಲ್ಲಿನ ಜನರು ನೀರನ್ನು ಬಳಸುತ್ತಿದ್ದಾರೆ ಇಲ್ಲಿನ ಜನರು ಅತೀ ಹೆಚ್ಚು ಬೋರವೆಲ್ ಬಳಸುತ್ತಿರುವುದು ಕಂಡು ಬಂದಿದೆ.

ಕೋಷ್ಟಕ ೪.೨೨. ಸಮೀಕ್ಷೆಗೊಳಪಟ್ಟ ಕುಡಿಯುವ ನೀರಿನ ಗುಣಮಟ್ಟ

ಕ್ರಸಂ.	ಸೂಚಕಗಳು	ಮುಳಬಾಗಿಲು ತಾಲೂಕು			
		ಗಡ್ಡೂರು ಪಂಚಾಯತಿ		ನಂಗಲಿ ಪಂಚಾಯಿತಿ	
		ಸಂಖ್ಯೆ	ಶೇ.	ಸಂಖ್ಯೆ	ಶೇ.
೧	ಉತ್ತಮ	೩೪	೩೪%	೩೦	೩೦%
೨	ಅತ್ಯುತ್ತಮ	೧೦	೧೦%	೬	೬%
೩	ಪರವಾಗಿಲ್ಲ	೫೬	೫೬%	೬೪	೬೪%
ಒಟ್ಟು		೧೦೦	೧೦೦%	೧೦೦	೧೦೦%

ಮೂಲ: ಕ್ಷೇತ್ರಕಾರ್ಯ

ಈ ಮೇಲಿನ ಕೋಷ್ಟಕವು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಗಡ್ಡೂರು ಪಂಚಾಯತಿ ಮತ್ತು ನಂಗಲಿ ಪಂಚಾಯತಿ ದಲಿತ ಸಮುದಾಯದವರು ಕುಡಿಯುವ ನೀರಿನ ಗುಣಮಟ್ಟ ಹೇಗಿದೆ ಎಂದು ವಿಚಾರಿಸಿದಾಗ ಅವರಿಂದ ಮಾಹಿತಿಯ ಪ್ರಮಾಣವು ಉತ್ತಮ, ಅತ್ಯುತ್ತಮ, ಪರವಾಗಿಲ್ಲ ಎಂಬ ಅಂಶಗಳಿಂದ ಪಡೆದ ವಿವರವನ್ನು ಈ ಅಂಕಿ ಅಂಶಗಳಿಂದ ಕಾಣಬಹುದು. ಅನುಕ್ರಮವಾಗಿ ಶೇ. ೩೪,೧ ೦, ೫೬ ಹಾಗೂ ಶೇ. ೩೦, ೬, ೬೪ ಎಂದು ಉತ್ತರಿಸಿದ್ದಾರೆ. ಕುಡಿಯುವ ನೀರಿನ ಗುಣಮಟ್ಟ ಅಷ್ಟೊಂದು ಉತ್ತಮವಾಗಿಲ್ಲವೆಂಬುದು ಬಹುತೇಕ ಅಭಿಮತವಾಗಿದೆ.

ಆರ್ಥಿಕ ಸ್ಥಿತಿಗತಿ

ಕೋಷ್ಟಕ ೪.೨೩. ಸಮೀಕ್ಷೆಗೊಳಪಟ್ಟ ಭೂಮಿಯ ವಿವರ

ಕ್ರಸಂ.	ಸೂಚಕಗಳು		ಮುಳಬಾಗಿಲು ತಾಲೂಕು			
			ಗಡ್ಡೂರು ಪಂಚಾಯತಿ		ನಂಗಲಿ ಪಂಚಾಯಿತಿ	
			ಸಂಖ್ಯೆ	ಶೇ.	ಸಂಖ್ಯೆ	ಶೇ.
೧	ಭೂಮಿ ಇದೆಯಾ?	ಇದೆ	೬೩	೬೩%	೬೫	೬೫%
		ಇಲ್ಲ	೩೭	೩೭%	೩೫	೩೫%
ಒಟ್ಟು			೧೦೦	೧೦೦%	೧೦೦	೧೦೦%

ಮೂಲ: ಕ್ಷೇತ್ರಕಾರ್ಯ

ಈ ಮೇಲಿನ ಕೋಷ್ಟಕವು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಗಡ್ಡೂರು ಮತ್ತು ನಂಗಲಿ ಗ್ರಾಮಗಳಲ್ಲಿ ದಲಿತ ಸಮುದಾಯವು ಹೊಂದಿದ ಭೂಮಿಯ ವಿವರವನ್ನು ಒಳಗೊಂಡಿದೆ. ಭೂಮಿ ಹೊಂದಿದವರು ಕ್ರಮವಾಗಿ ಇದೆ ಎಂದವರು ಶೇ. ೬೩, ೬೫ ಹಾಗೂ ಇಲ್ಲ ಎಂದವರು ಶೇ. ೩೭, ೩೫ ಈ ಭಾಗದಲ್ಲಿ ಶೇ. ೩೭, ೩೫ರಷ್ಟು ಪ್ರಮಾಣದಲ್ಲಿ ಭೂರಹಿತ ಕುಟುಂಬಗಳು ಕಂಡು ಬರುತ್ತಾರೆ.

ಕೊನೆ ಟಿಪ್ಪಣಿಗಳು

೧. ಪ್ರಧಾನ್ ಗುರುದತ್ತ, (ಪ್ರ.ಸಂ), ಬಾಬ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಸಂಪುಟ-೭, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು. ಪುಟ.೪೦೨.

೨. ಪ್ರಧಾನ್ ಗುರುದತ್ತ, (ಪ್ರ.ಸಂ), ಬಾಬ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಸಂಪುಟ--೭, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, ಪು.೩೩೯

೩. ಪ್ರಧಾನ್ ಗುರುದತ್ತ, (ಪ್ರ.ಸಂ), ಬಾಬ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಸಂಪುಟ-೭, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, ಪು.೩೩೭,

೪. ಪ್ರಧಾನ್ ಗುರುದತ್ತ, (ಪ್ರ.ಸಂ), ಬಾಬ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಸಂಪುಟ-೭, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, ಪು.೪೦೨.

೫. ಪ್ರಧಾನ್ ಗುರುದತ್ತ, (ಪ್ರ.ಸಂ), ಬಾಬ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಸಂಪುಟ-೭, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, ಪು.೪೦೩.

೬. ಮುನಿವೆಂಕಟಪ್ಪ, ವಿ, ದಲಿತ ಚಳುವಳಿ ಮತ್ತು ಸಾಹಿತ್ಯ, ತನುಮನ ಪ್ರಕಾಶನ, ಮೈಸೂರು, ೨೦೦೮

೭. ಜಿವಿ.ಶ್ರೀರಾಮರೆಡ್ಡಿ, (ಸಂ), ನಿತ್ಯಾನಂದ ಸ್ವಾಮಿ,(ಲೇ), ಕರ್ನಾಟಕದಲ್ಲಿ ದಲಿತರ ಹಕ್ಕುಗಳಿಗೆ ಹೋರಾಟ,ಜನಶಕ್ತಿ ವಾರ ಪತ್ರಿಕೆ, ಸಂಚಿಕೆ ೫೧-೫೨, ಬೆಂಗಳೂರು, ೨೦೧೫, ಪು.೬೭.

೮. ವಿ. ಮುನಿವೆಂಕಟಪ್ಪ, ದಲಿತ ಚಳುವಳಿ ಮತ್ತು ಸಾಹಿತ್ಯ, ತನುಮನ ಪ್ರಕಾಶನ, ಮೈಸೂರು, ೨೦೦೮, ಪು.೨೩.

೯. ಎನ್. ಚಿನ್ನಸ್ವಾಮಿ ಸೋಸಲೆ, ದಲಿತರ ಮೇಲಿನ ದೌರ್ಜನ್ಯ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಗಳು, ೨೦೧೩, ಯಾಜಿ ಪ್ರಕಾಶನ, ಹೊಸಪೇಟೆ. ಪು ೬೧

೧೦. ಎನ್. ಚಿನ್ನಸ್ವಾಮಿ ಸೋಸಲೆ, ದಲಿತರ ಮೇಲಿನ ದೌರ್ಜನ್ಯ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಗಳು, ೨೦೧೩, ಯಾಜಿ ಪ್ರಕಾಶನ, ಹೊಸಪೇಟೆ. ಪು ೬೨.

೧೧. ಎನ್. ಚಿನ್ನಸ್ವಾಮಿ ಸೋಸಲೆ, ದಲಿತರ ಮೇಲಿನ ದೌರ್ಜನ್ಯ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಗಳು, ೨೦೧೩, ಯಾಜಿ ಪ್ರಕಾಶನ, ಹೊಸಪೇಟೆ. ಪು ೬೫.

೧೨. ಎನ್. ಚಿನ್ನಸ್ವಾಮಿ ಸೋಸಲೆ, ದಲಿತರ ಮೇಲಿನ ದೌರ್ಜನ್ಯ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಗಳು, ೨೦೧೩, ಯಾಜಿ ಪ್ರಕಾಶನ, ಹೊಸಪೇಟೆ. ಪು ೬೬–೬೭..

೧೩. ರಾಮ್ ಪುನಿಯಾನಿ, (ಮೂ), ಸುಜ್ಞಾನಮೂರ್ತಿ (ಅನು), ೨೦೧೬, ದಲಿತ ರಾಜಕೀಯ, ಲಡಾಯಿ ಪ್ರಕಾಶನ, ಗದಗ, ಪು.೧೦೬.

೧೪. ಎನ್. ಚಿನ್ನಸ್ವಾಮಿ ಸೋಸಲೆ, ದಲಿತರ ಮೇಲಿನ ದೌರ್ಜನ್ಯ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಗಳು, ೨೦೧೩, ಯಾಜಿ ಪ್ರಕಾಶನ, ಹೊಸಪೇಟೆ. ಪು.೭೨–೭೪.

೧೫. ಎನ್. ಮೂರ್ತಿ, ೨೦೦೬, ಹೋರಾಟದ ಮಹಾಪ್ರಬಂಧ ಸಂಪುಟ–೨, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಬೆಂಗಳೂರು,ಪು.,೩೧೧.

೧೬. ಸೂಲಿಕುಂಟೆ ರಮೇಶ, ವಯಸ್ಸು,೪೨, ದಸಂಸ, ಪಧಾದಿಕಾರಿಗಳು, ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ.

೧೭. ಪ್ರಧಾನ್ ಗುರುದತ್ತ, (ಪ್ರಸಂ), ಬಾಬ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಸಂಪುಟ–೧೦, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು. ಪುಟ.೧–೩.

೧೮. ಪ್ರಜಾವಾಣಿ ದಿನಪತ್ರಿಕೆ, ಡಿಸೆಂಬರ್, ೧೩.೨೦೧೬, ಐಸೆಕ್ ನಡೆಸಿದ ಅಧ್ಯಯನದಲ್ಲಿ ಬಹಿರಂಗ ಗ್ರಾಮ ಪಂಚಾಯಿತಿಗಳಲ್ಲಿ ಇನ್ನು ಅಸ್ಪೃಶತೆ ಜೀವಂತ

೧೯. ಪ್ರಶಾಂತ್ ಎಚ್.ಡಿ., **ದಲಿತ ಶಿಕ್ಷಣ ಮಕ್ಕಳ ಸ್ಥಿತಿಗತಿ ಶಾಲಾ ಶಿಕ್ಷಣ ಸಾರ್ವತ್ರೀಕರಣ**, ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು, ೨೦೦೯, ಪು.೫.

೨೦. ಚಂದ್ರಶೇಖರ ಟಿ.ಆರ್. ೨೦೧೧, ಕರ್ನಾಟಕ ಜನಗಣತಿ–೨೦೧೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ.೭೦.

೨೧. ಕೋಲಾರ ಜಿಲ್ಲೆ ಮಾನವ ಅಭಿವೃದ್ಧಿ ವರದಿ ೨೦೧೪, ಕೋಲಾರ ಜಿಲ್ಲಾ ಪಂಚಾಯತ್ ಯೋಜನೆ ಮತ್ತು ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು. ಪು.೪೯.

೨೨. ಕೋಲಾರ ಜಿಲ್ಲೆ ಮಾನವ ಅಭಿವೃದ್ಧಿ ವರದಿ ೨೦೧೪, ಕೋಲಾರ ಜಿಲ್ಲಾ ಪಂಚಾಯತ್ ಯೋಜನೆ ಮತ್ತು ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು,ಪು. ೫೦).

೨೩. ಕೋಲಾರ ಜಿಲ್ಲೆ ಮಾನವ ಅಭಿವೃದ್ಧಿ ವರದಿ ೨೦೧೪, ಕೋಲಾರ ಜಿಲ್ಲಾ ಪಂಚಾಯತ್ ಯೋಜನೆ ಮತ್ತು ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು ಪು. ೫೬).

೨೪. ಕೋಲಾರ ಜಿಲ್ಲೆ ಮಾನವ ಅಭಿವೃದ್ಧಿ ವರದಿ ೨೦೧೪, ಕೋಲಾರ ಜಿಲ್ಲಾ ಪಂಚಾಯತ್ ಯೋಜನೆ ಮತ್ತು ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು, ಪು.೫೮

೨೫. ಕೋಲಾರ ಜಿಲ್ಲೆ ಮಾನವ ಅಭಿವೃದ್ಧಿ ವರದಿ ೨೦೧೪, ಕೋಲಾರ ಜಿಲ್ಲಾ ಪಂಚಾಯತ್ ಯೋಜನೆ ಮತ್ತು ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು, ಪು.೬೫

ಅಧ್ಯಾಯ ಐದು

ಕೋಲಾರ ಜಿಲ್ಲೆಯ ದಲಿತರ ಆರ್ಥಿಕ ಸ್ಥಿತಿಗತಿ

೫.೧. ದಲಿತರ ಅಭಿವೃದ್ಧಿಗಾಗಿ ಇರುವ ಕಾರ್ಯಕ್ರಮಗಳು

೫.೨. ಭೂಮಿ

೫.೩. ದಲಿತರ ಭೂ ಒಡೆತನ

೫.೪ ಕೋಲಾರ ಜಿಲ್ಲೆಯ ದಲಿತರ ಭೂಮಾಲಿಕತ್ವದ ರಾಚನಿಕ ಸ್ವರೂಪ

೫.೫. ಆದಾಯ

ಅಧ್ಯಾಯ ಐದು

ಕೋಲಾರ ಜಿಲ್ಲೆಯ ದಲಿತರ ಆರ್ಥಿಕ ಸ್ಥಿತಿಗತಿ

ಆರ್ಥಿಕ ವ್ಯವಸ್ಥೆಯಲ್ಲಿ ಎಲ್ಲಾ ಸ್ಥಾನಮಾನಗಳನ್ನು ನಿರ್ಧರಿಸುವ ಏಕೈಕ ಮಾನದಂಡವಾಗಿದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲಾ ಕಾಲದಲ್ಲಿ ಅರ್ಥವ್ಯವಸ್ಥೆಯು ಸುಭದ್ರವಾಗಿದ್ದರೆ, ಜನರು ಸಹ ಸುಸ್ಥಿರ ಅಭಿವೃದ್ಧಿ ಹೊಂದಲು ಸಾಧ್ಯ. ಅರ್ಥವ್ಯವಸ್ಥೆಯು ರಾಜಕೀಯ ವ್ಯವಸ್ಥೆಯನ್ನೇ ತಿರುವುಮುರವು ಮಾಡುವ ಶಕ್ತಿಯನ್ನೇ ಹೊಂದಿದೆ. ಹಾಗಾಗಿ ಜನರ ಜೀವನಮಟ್ಟ, ಸಾಮಾಜಿಕ, ಸಾಂಸ್ಕೃತಿಕ, ಶಿಕ್ಷಣ, ಆರೋಗ್ಯವನ್ನು ನಿರ್ಧರಿಸುತ್ತದೆ. ಒಂದು ದೇಶದ ಅರ್ಥವ್ಯವಸ್ಥೆಯು ಆ ದೇಶದ ಜನರ ಜೀವನ ವಿದಾನವನ್ನು ರೂಪಿಸುತ್ತದೆ. ಅದೇ ರೀತಿ ಒಂದು ಜನಾಂಗದ ಜೀವನ ವಿಧಾನವನ್ನು ಅವರ ಆರ್ಥಿಕ ಸ್ಥಿತಿಗತಿಯನ್ನು ನಿರ್ಧರಿಸುತ್ತದೆ. ಭಾರತದಲ್ಲಿ ಬಹುತೇಕವಾಗಿ ಅರ್ಥವ್ಯವಸ್ಥೆಯು ಕೇಲವೆ ಸಮುದಾಯಗಳಲ್ಲಿ ಕೇಂದ್ರೀಕರಣಗೊಂಡಿರುವುದು ಸರ್ಕಾರದ ಅಂಕಿ ಸಂಖ್ಯೆಗಳು ಮತ್ತು ಯೋಜನಾ ಆಯೋಗದ ಬಡತನದ ವರದಿಗಳು ವಿವರಿಸುತ್ತವೆ. ಅದರಲ್ಲಿ ವಿಶೇಷವಾಗಿ ಭಾರತದ ಸಂದರ್ಭದಲ್ಲಿ ದಲಿತರ ಸ್ಥಿತಿಗತಿಯು ಯಾವ ಕಾಲದಲ್ಲಿ ಮಹತ್ತರವಾದ ಬದಲಾವಣೆ ಕಾಣಲೇ ಇಲ್ಲ. ಸಾಮಾಜಿಕ ಅಸಮಾನತೆ ಆರ್ಥಿಕ ದುಸ್ಥಿತಿ, ಸಾಂಸ್ಕೃತಿಕ ಹಿಂದುಳಿವಿಕೆ, ರಾಜಕೀಯ ಅಧಿಕಾರದ ಹತಾಶೆ ಉದ್ಯೋಗದ ಕೊರತೆ ನಿರಂತರವಾಗಿ ಎದುರಿಸುತ್ತಾ ಬಂದಿದ್ದಾರೆ. ಆದರೆ ಈ ಸಮಸ್ಯೆಗಳ ಸುಳಿಯಲ್ಲಿ ಬದಲಾವಣೆಗಳಾಗಿವೆ. ಬದಲಾವಣೆಗಳಾಗಿವೆ ಎಂದಲ್ಲಿ ಆದರೆ ಎಲ್ಲಾ ಸಮುದಾಯಗಳು ಎಲ್ಲವು ಬದಲಾದ ರೀತಿಯಲ್ಲಿ ಬದಲಾಗಲಿಲ್ಲ ಎನ್ನುವುದೆ ಅವರ ಕೊರಗು. ಅದಕ್ಕಾಗಿ ಕೆಲವು ಭಾರಿ ಕಂಡಂತೆ, ಕೆಲವು ಭಾರಿ ಕಾಣದಂತೆ ಸಂಗ್ರಹಿಸಿದ್ದಾರೆ. ಹಾಗಾಗಿ ದಲಿತರ ಆರ್ಥಿಕ ಸ್ಥಿತಿಗತಿಯನ್ನು ನೋಡುವುದು ಬಹಳ ಮುಖ್ಯ ಪ್ರಶ್ನೆಯಾಗಿದೆ.

ದಲಿತರು ನಮ್ಮ ಸಮಾಜದ ಸಂದರ್ಭದಲ್ಲಿ ಎಲ್ಲಾ ಬಗೆಯ ದುಸ್ಥಿತಿಗಳಿಂದ ನರಳುತ್ತಿದ್ದಾರೆ. ಸಾಮಾಜಿಕ ದುಸ್ಥಿತಿ, ಆರ್ಥಿಕ ದುಸ್ಥಿತತಿ, ಧಾರ್ಮಿಕ ಮತ್ತು ಶಿಕ್ಷಣದ ದುಸ್ಥಿತಿಯನ್ನು ಅನುಭವಿಸುತ್ತಿದ್ದಾರೆ. ದಲಿತ ಸಾಮಾಜಿಕ ದುಸ್ಥಿತಿಗೆ ಬಂಡವಾಳದ ಅಗತ್ಯವಿಲ್ಲ. ಇದಕ್ಕೆ ಸಾಮಾಜಿಕ ಪರಿವರ್ತನೆಯ

ಅಗತ್ಯವಿದೆ. ಆರ್ಥಿಕ ಅಭಿವೃದ್ಧಿಗೆ ಬಂಡವಾಳದ ಅಗತ್ಯವಿದೆ. ಆದರೆ ಬಂಡವಾಳ ಹೂಡಿಕೆಯ ಅನುಕೂಲತೆಗಳೆಲ್ಲವು ಮೇಲ್ಜಾತಿಯ ಶ್ರೀಮಂತರ ಪಾಲಾಗುತ್ತವೆ. ಸಾಮಾಜೀಕವಾಗಿ ದಲಿತರು ಸಾಮಾನ್ಯವಾಗಿ ಜಾತಿ ಸಂಬಂಧ ತಾರತಮ್ಯವನ್ನು ಎದುರಿಸುತ್ತಿದ್ದಾರೆ. ಆರ್ಥಿಕವಾಗಿ ವರ್ಗ ಸಂಬಂಧಿ ಶೋಷಣೆಯನ್ನು ಎದುರಿಸುತ್ತಿದ್ದಾರೆ. ಹೀಗೆ ದಲಿತರು ಭೂಮಿ ಮತ್ತು ಬಂಡವಾಳ, ಶಿಕ್ಷಣ ಮತ್ತು ಉದ್ಯೋಗ, ವ್ಯಾಪಾರ, ಕೈಗಾರಿಕರಣ ಕ್ಷೇತ್ರದಲ್ಲಿ ಗೋಚರಿಸುವುದೇ ಇಲ್ಲ. ಇವುಗಳ ನೆಲೆಯಲ್ಲಿ ಸುಧಾರಿಸಲು ಪ್ರಯತ್ನಿಸುವುದು ಅಗತ್ಯ[೧]

ಗ್ರಾಮೀಣ ಅರ್ಥಶಾಸ್ತ್ರ ವ್ಯವಸ್ಥೆಯಲ್ಲಿ ಭೂಮಾಲೀಕನಿಗಿರುವ ಲಾಭದಾಯಕ ಲೇವಾದೇವಿಗಳಲ್ಲಿ ಜೀತದಾಳಗಳ್ನನು ನೇಮಿಸಿಕೊಳ್ಳುವುದು ಒಂದು ಈ ವ್ಯವಸ್ಥೆಯು ಭೂ ಮಾಲೀಕರ ಅಗಾಧ ಆರ್ಥಿಕ ಸಾಮರ್ಥ್ಯವನ್ನು ಮುಂಗಡ ಪಡೆದ ಹಣದ ಬಡ್ಡಿಗಾಗಿ ದುಡಿಮೆಯನ್ನು ಉತ್ಪಾದನಾ ಸಾಮರ್ಥ್ಯವನ್ನು ಗಿರವಿಯಿಡುವ ಭೂರಹಿತ ಕೃಷಿ ಕಾರ್ಮಿಕರ ದರಿದ್ರ್ಯಾ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತದೆ. ಈ ಸಮಸ್ಯೆಯು ಲಾಗಾಯ್ತುನಿಂದ ಬಂದ ಕೃಷಿ ಅರ್ಥವ್ಯವಸ್ಥೆಯನ್ನು ನಾಣ್ಯದ ಎರಡು ಮುಖಗಳಿದ್ದಂತೆ ಎನ್ನಬಹುದು. ಹಿಂದಿನ ಕಾಲದಿಂದಗಾಲೀ ಅಪರಾಧವಾಗಲಿಲ್ಲ. ಜೀತಪದ್ಧತಿಯನ್ನು ಸಾಮಾಜಿಕವಾಗಿಯಾಗಲೀ ಕಾನೂನಿನ ದೃಷ್ಟಿಯಿಂದಾಗಲೀ ಅಪರಾಧವಾಗಿರಲಿಲ್ಲ. ಜೀತದಪದ್ಧತಿಯನ್ನು ಅಪರಾಧ ಎಂದು ಪರಿಗಣಿಸದಿದ್ದರೂ ಅನಿಷ್ಟ ಪದ್ಧತಿಯೆಂದು ಬಗೆದು ಅದನ್ನು ತೊಡೆದು ಹಾಕುವ ಪ್ರಯತ್ನಗಳು ನಡೆದವು. ಉದಾಹರಣೆಗೆ ಅಕ್ಬರನ ನಂತರ ಸುಮಾರು ಮೂರು ಶತಮಾನಗಳ ನಂತರ ೧೯ನೇ ಶತಮಾನದ ಆದಿ ಭಾಗದಲ್ಲಿ ತಿರುವಾಂಕೂರು ಸಂಸ್ಥಾನದ ರಾಣಿ ಲಕ್ಷ್ಮೀಬಾಯಿ ಈ ದಿಕ್ಕಿನಲ್ಲಿ ಕಾರ್ಯೋನ್ಮುಖವಾದ ದಾಖಲೆಗಳಿವೆ. ಹಾಗೆಯೇ ಬ್ರಿಟೀಷ್ ಸಂಸತ್ತು ೧೮೩೩ರಲ್ಲಿ ಕಾನೂನೊಂದನ್ನು ರಚಿಸಲು ಪ್ರಯತ್ನಿಸಿತು. ಭಾರತದ ಕೆಲವು ರಾಜಮನೆತನಗಳ ಅಗೀಕಾರ ಅದಕ್ಕೆ ದೊರೆಯಲಿಲ್ಲ. ಆದರೂ ಸುಮಾರು ಹತ್ತು ವರ್ಷಗಳ ನಂತರ ಜೀತ ನಿರ್ಮೂಲನೆಯ ಬಗ್ಗೆ ಕೆಲವು ಸೂಚನೆಗಳನ್ನು ಒಳಗೊಂಡ ಆಜ್ಞೆಯನ್ನು ಹೊರಡಿತು. ೧೯೩೦ರಲ್ಲಿ ಜಿನಿವಾದಲ್ಲಿ ನಡೆದ ಅಂತರಾಷ್ಟ್ರೀಯ ಕಾರ್ಮಿಕ ಮಹಾ ಸಂಘಟನೆಯ ೧೪ನೇ ಆದಿವೇಶನವು ಜೀತಪದ್ಧತಿಯ ಸಮಸ್ಯೆಯನ್ನು ಚರ್ಚೆಗೆತ್ತಿಕೊಂಡಿತು. ಜೀತಪದ್ಧತಚಿಯು ಮಾನವ ಘನತೆಗೆ ಮಾರಾಕವಾದ ಆಚರಣೆಯಾಗಿರುವುದೆಂದೂ ಅದನ್ನು ರದ್ದು ಮಾಡಲು ಸರ್ಕಾರಗಳು ಪ್ರಯತ್ನ ಮಾಡಬೇಕೆಂದೂ ಗೊತ್ತುವಳಿಯನ್ನು ಸ್ವೀಕರಿಸಿತು. ಈ ಗೊತ್ತುವಳಿಗೆ ಮನ್ನಣೆ ಕೊಟ್ಟ ಬ್ರಿಟಿಷ್ ಸರ್ಕಾರವು ೧೯೩೧ರಲ್ಲಿ ಜೀತಪದ್ಧತಿಯನ್ನು ರದ್ದು ಮಾಡುವ ಕ್ರಮಕೈಗೊಳ್ಳಬೇಕೆಂದು ಸಂಸ್ಥಾನಿಕ ಸರ್ಕಾರಗಳಿಗೆ ಮನವಿಯೊಂದನ್ನು ಕಳುಹಿಸಿತು. ಆದರೆ ಅವುಗಳಿಗೆ ಪ್ರಜಾಪ್ರಭುತ್ವದ ನಾಗರೀಕ ಹಕ್ಕುಗಳ ಹಿನ್ನೆಲೆ ಇರಲಿಲ್ಲ. ಪ್ರಾಣಿ ಸಮಾನವಾದ ಅನಿಶ್ಚಿತ, ಶೋಚನೀಯ ಬಡತನದ ಭೂರಹಿತ ಕೃಷಿಕಾರ್ಮಿಕ ತಾನೂ ತನ್ನ ಕುಟುಂಬವೂ ಬದುಕಿ ಉಳಿಯಲು ಭೂಮಾಲೀಕನಿಂದ ಮುಂಗಡ ಹಣವನ್ನು ಸಾಲವಾಗಿ ಪಡೆಯುತ್ತಾನೆ. ಹೀಗೆ ಋಣಬಂಧರಾಗಿ ಪರಿಸ್ಥಿತಿಯ ಒತ್ತಡಕ್ಕೆ ಭಾಗಿ

ಪುಕ್ಕಟೆ ಜೀತಕ್ಕೆ ಬಲಿಯಾಗುವ ಈ ಪದ್ಧತಿಯಲ್ಲಿ ಆರ್ಥಿಕವಾಗಿ ಎರಡು ಬಗೆಯ ಭೂರಹಿತ ಕೃಷಿ ಕಾರ್ಮಿಕರಿದ್ದಾರೆ.

೧. ಕಾರ್ಮಿಕ ಅಥವಾ ಆರ್ಥಿಕ ಒತ್ತಡಗಳಿಂದ ತಮಗಿದ್ದ ಚೂರುಪಾರು ಭೂಮಿಯನ್ನ ಕಳೆದುಕೊಂಡು ದಿವಾಳಿಯಾಗಿ ಸಾಲಕ್ಕೆ ಬಿದ್ದವರು.

೨. ಜನ್ಮತಃ ಭೂಮಿಕಾಣಿಯಿಲ್ಲದ ಅಥವಾ ಪೂರ್ವಿಕರು ಮಾಡಿದ ಸಾಲಕ್ಕಾಗಿ ಬಿದ್ದವರು. ಹಾಗೂ ದುಡಿಯುತ್ತಿರುವವರು. ಈ ಎರಡೂ ಬಗೆಯ ಸಾಲಗಾರರು ಹಣವನ್ನು ಹಿಂತಿರುಗಿಸುವ ಮಾರ್ಗವಿಲ್ಲದೆ ಬಡ್ಡಿಗಾಗಿ ಆಯುಷ್ಯ ಪೂರ್ತಿ ಜೀತ ದುಡಿಯುವುದರ ಜೊತೆಗೆ ಹುಟ್ಟಿನಿಂದಲೇ ಈ ಎರಡು ಬಗೆಯ ಸಾಲಗಾರರು ಹಣವನ್ನು ಹಿಂತಿರುಗಿಸುವ ಮಾರ್ಗವಿಲ್ಲದೆ ಬಡ್ಡಿಗಾಗಿ ಹುಟ್ಟಿನಿಂದಲೇ ಈ ಸಂಕೋಲೆಯೊಳಗೆ ಕಾಲಿಟ್ಟ ಮಕ್ಕಳೊಂದಿಗೆ ದುಡಿಯುತ್ತಾ ಕೊನೆಗೊಂದು ದಿನ ಸಾಯುತ್ತಾರೆ. ಜೀತದ ಸಂಕೋಲೆ 'ಹುಟ್ಟುವ ಕಾಲುಗಳಿಗಾಗಿ' ಸದಾ ಕಾಯುತ್ತಿರುತ್ತದೆ. ಮುಂಗಡ ಹಣ ಪಡೆಯುವ ಸಾಲಗಾರ ಸಾಲ ತೀರಿಸುವವರಿಗೂ ಬಡ್ಡಿಗಾಗಿ ಯಾವುದೇ ಕೆಲಸ ಮಾಡಲು ತಯಾರಿರುವುದಾಗಿ ಭೂಮಾಲೀಕನೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತಾನೆ. ಇದು ಋಣಬಂಧದ ಜೀತವೆನ್ನಿಸುತ್ತದೆ.

ಈ ರೀತಿಯಾಗಿ ಒಪ್ಪಂದವು ಲಿಖಿತ ರೂಪದಲ್ಲಿರಬಹುದು ಅಥವಾ ಕಂಠಸ್ಥವಾಗಿರಬಹುದು. ಜೀತದಾಳುಗಳು ಅಕ್ಷರ ಜ್ಞಾನವಿಲ್ಲದವರಾಗಿದ್ದರಿಂದ ಯಾವಾಗ ಎಷ್ಟು ಹಣವನ್ನು ತೆಗೆದುಕೊಂಡಿದ್ದು ಎನ್ನುವುದರ ಬಗೆಗಾಗಲೀ, ಬಡ್ಡಿ ಎಷ್ಟಾಗುತ್ತದೆ ಎಂಬುದರ ಬಗೆಗಾಗಲಿ ವಿಚಾರ ಮಾಡಲಾಗದವ ರಾಗಿರುತ್ತಾರೆ. ಅಲ್ಲದೆ ತಮ್ಮ ಧೀನಸ್ಥಿತಿಯಿಂದಾಗಿ ಅಗತ್ಯ ಬಿದ್ದಾಗಲೆಲ್ಲ ಭೂಮಾಲೀಕರನಿಂದ ಹಣ ಪಡೆಯುತ್ತಲೇ ಹೋಗುತ್ತಾರೆ. ಹುಟ್ಟು, ಸಾವು, ಮದುವೆ, ಹಬ್ಬ-ಹರಿದಿನಗಳು ಬಂದಾಗಲೆಲ್ಲಾ ಭೂಮಾಲೀಕರ ಬಳಿಗೆ ದುಡ್ಡಿಗಾಗಿ ಓಡುತ್ತಾರೆ. ಅವರು ಕೊಟ್ಟಷ್ಟುನ್ನು ಪಡೆದು ತಮ್ಮ ಜೀತದಾಳುಗಳನ್ನು ದೀರ್ಘಾಗೊಳಿಸಿಕೊಳ್ಳುವುದು ಮಾತ್ರವೇ ಅಲ್ಲದೆ ಹೊಸ ಜೀತದಾಳುಗಳನ್ನು ಸೃಷ್ಟಿಸುತ್ತಾರೆ. ಇವೆಲ್ಲವೂ ತೀರಾ ಸಹಜವೆನ್ನುವಂತೆ ಸಾಯುವವರಿಗೂ ಹೊಟ್ಟೆ ಮತ್ತು ಜೀತಗಳ ಪರಸ್ಪರ ಅನಿವಾರ್ಯತೆಯಲ್ಲಿ ಬದುಕುಸವೆಸುತ್ತವೆ.

ಭೂರಹಿತ ಕೃಷಿಕಾರ್ಮಿಕರು ಜೀತದಾಳುಗಳಾಗಲು ಇರುವ ಆರ್ಥಿಕ, ಸಾಮಾಜಿಕ ಕಾರಣಗಳು ಅವುಗಳ ಮೇಲೆ ಬೆಳಕನ್ನು ಚೆಲ್ಲುವ ಕೆಳಗಿನ ಪ್ರಯತ್ನದ ವರದಿಗಳನ್ನು ಕಾಣಬಹುದು.

೧. ಖಂಭಾಪುರ ಉತ್ತರ ಪ್ರದೇಶದ ಗೊಂಡಾ ಜಿಲ್ಲೆಯ ಒಂದು ಗ್ರಾಮ. ಅಲ್ಲಿನ ಒಬ್ಬ ಮುದುಕ ಜೀತಾದಾಳು ತನ್ನ ಅಜ್ಜನ ಅಪ್ಪ(ಮುತ್ತಜ್ಜ) ಭೂಮಾಲೀಕನಿಂದ ಸಾಲವಾಗಿ ಪಡೆದ ಇನ್ನೂರು ರೂಪಾಯಿಗಳಿಗೆ ೭೫ ವರ್ಷಗಳಿಂದ ಜೀತ ದುಡಿಯುತ್ತಿದ್ದಾನೆ. ಇದ್ದ ಎರಡು ಎಕರೆಯಷ್ಟು ಜಮೀನನ್ನು ಮಾಲೀಕ ಕಿತ್ತುಕೊಂಡಿದ್ದಾನೆ. ನಾಲ್ಕು ತಲೆಮಾರುಗಳಲ್ಲಿ ಬಡ್ಡಿ ಬೆಳೆದು ಈಗ ಹಿಂತಿರುಗಿಸಬೇಕಾದ ಒಟ್ಟು ಮೊತ್ತ ೪,೧೮೦ ರೂ.ಗಳಾಗಿವೆ.

೨. ಒರಿಸ್ಸಾದ ಕಾಲಹಂದಿ ಗ್ರಾಮ. ಲಡಾ ಎಂಬ ವಯಸ್ಸಿಗೆ ಬಂದ ಹುಡುಗಿಯನ್ನು ೬೫ ಕೆ.ಜಿ. ಭತ್ತದ ಸಾಲಕ್ಕಾಗಿ ಮಗಳನ್ನು ಗಿರಿವಿ ಇಡುತ್ತಾಳೆ. ಇಂತಹ ಉದಾಹರಣೆಗಳು ಅನೇಕ ಗ್ರಾಮೀಣ ಸಮಾಜದಲ್ಲಿ ಆರ್ಥಿಕವಾಗಿ ಬಲಿಷ್ಠವಾದ ಮತ್ತು ರಾಜಕೀಯವಾಗಿ ಪ್ರಭಾವಶಾಲಿಯಾದ ಭೂಮಾಲೀಕರನ್ನು ಸರ್ಕಾರವು ರೂಪಿಸಿದ ಯಾವ ಕಾಯ್ದೆಗಳೂ ತೀವ್ರ ಸ್ವರೂಪದಲ್ಲಿ ವಿಚಲತೆಗೊಳ್ಳಲಿಲ್ಲ. ಜೀತಪದ್ಧತಿಯು ನಾಗರೀಕ ಸಮಾಜಕ್ಕೆ ಕಳಂಕ ತರುವ ಆಚರಣೆ. ಭಾರತದ ಸರ್ಕಾರದ ಅಭಿಪ್ರಾಯದಲ್ಲಿ ಇದು ಜೀತದಾಳುಗಳನ್ನು ಊಳಿಗಮಾನ್ಯ ಪದ್ಧತಿಯಲ್ಲಿ ಆಸ್ತಿಯ ಅಂಗವಾಗಿ ಮಾರ್ಪಡಿಸುತ್ತದೆ. ಸಾಲವನ್ನು ಅವನನ್ನು ಮನುಷ್ಯ ಜೀವನದಿಂದ ಪಶುಸಮಾನ ಜೀವಕ್ಕೆ ತಳ್ಳುತ್ತದೆ. ದೇಹವನ್ನುಳ್ಳ ಒಂದು ವಸ್ತುವಿನಂತಹ ಅಸ್ತಿತ್ವ ಅವನದಾಗಿಬಿಡುತ್ತದೆ. ಆದರೆ ಇಂತಹ ಅವಮಾನವೀಕರಣಗೊಳಿಸುವ ಜೀತ ಪದ್ಧತಿಯು ಸಮಸ್ಯೆಯ ಸ್ವರೂಪದಲ್ಲಿ ಭೂಮಾಲೀಕರಿಗೆ ಎದುರಾಯಿತು ಎನ್ನುವುದನ್ನು ಪರಿಶೀಲಿಸುವುದು ಅಗತ್ಯ. ಭೂ ಸುಧಾರಣೆಯ ಕಾನೂನುಗಳು ತಮ್ಮ ಹಿತಾಶಕ್ತಿಗೆ ಸಮಸ್ಯೆಯನ್ನೊಳಗೊಂಡಂತೆ ನಿವಾರಣೋಪಾಯಗಳನ್ನು ಕಂಡುಹಿಡಿಯುವುದು ಸಾಧ್ಯವಾದಂತೆಯೇ ಜೀತಪದ್ಧತಿಯನ್ನು ತೊಡೆದು ಹಾಕುವ ಕಾಯ್ದೆಗಳ ಉದ್ದೇಶವನ್ನು ಭಂಗಗೊಳಿಸುವುದು ಭೂಮಾಲೀಕ ವರ್ಗಕ್ಕೆ ಅಸಾಧ್ಯವಾಗಿರಲಿಲ್ಲ. ಆದ್ದರಿಂದಲೇ “ಕೈಲಿ ನೇಗಿಲು ಮುಟ್ಟದವರಿಗೂ ಒಡೆತನ” ದೊರೆತು ಉಸ್ತುವಾರಿ ವ್ಯವಸಾಯದ ರೂಪದಲ್ಲಿ ಭೂ ಒಡೆತನ ಮುಂದುವರಿಯಿತು.

೧೯೭೫ರಲ್ಲಿ ಜೀತವನ್ನು ರದ್ದುಪಡಿಸುವ ಸುಗ್ರೀವಾಜ್ಞೆಯು ಹೊರಡಿತು. ೧೯೭೬ರಲ್ಲಿ ಕಾಯ್ದೆಯಾಗಿ ಅಂಗೀಕರವನ್ನು ಪಡೆದು ಜೀತಪದ್ಧತಿಯನ್ನು ಪೋಷಿಸುವುದು ಶಿಕ್ಷಾರ್ಹವೆನ್ನುವ ಅಂಶವನ್ನು ಒತ್ತಿ ಹೇಳಲಾಯಿತು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸಂವಿಧಾನದ ಅಧಿನಿಯಮ ೨೨ರಂತೆ ಪದ್ಧತಿಯನ್ನು ಹಿಂದೆಯೇ ನಿಷೇಧಿಸಲಾಗಿತ್ತು. ಅಲ್ಲಿಂದೀಚೆಗೆ ಈ ಬಗೆಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸುತ್ತೋಲೆಗಳನ್ನು ಕಳುಹಿಸಲಾಗುತ್ತಿತ್ತು. ಜೀತಕ್ಕಿಟ್ಟುಕೊಳ್ಳುವುದು ಭಾರತೀಯ ದಂಡಸಂಹಿತೆ ೩೭೨–೧೮ರ ಪ್ರಕಾರ ಶಿಕ್ಷಾರ್ಹ ಎಂದು ಹೇಳಿದಾಯಿತು. ಆದರೂ ಜೀತಪದ್ಧತಿ ಮುಂದುವರೆದು ಬಂತು. ಇಂದಿರಾಗಾಂಧೀಯವರ ೨೦ ಅಂಶಗಳ ಕಾರ್ಯಕ್ರಮದಲ್ಲಿ ಬಹುಶಃ ಜೀತಪದ್ಧತಿ(ನಿರ್ಮೂಲನಾ) ಕಾಯಿದೆಯೊಂದೇ ಈ ದೇಶಕ್ಕೆ ನೀಡಿದ ಮಹತ್ವದ ಕೊಡುಗೆ ಎಂಬ ಅಭಿಪ್ರಾಯವೂ ಇದೆ. ಕಾಯಿದೆಗಳು ಕಾನೂನನ್ನು ರಚಿತವಾದರೂ ರಾಜ್ಯಾಡಳಿತದ ಕಡಿವಾಣವನ್ನು ಹಿಡಿದಿದ್ದ ಕಾಂಗ್ರೇಸ್ ಕಾರ್ಯಕರ್ತರುಗಳು ಧೋರಣೆ ಮಾತ್ರ ಬದಲಾಗಲಿಲ್ಲ. ಬದಲಾವಣೆಯನ್ನು ತರುವ ಸಂಕಲ್ಪ ಬಲವಿಲ್ಲದೆ ಕಾನೂನುಗಳೇ ಬದಲಾವಣೆ ತರುವುದು ಸಾಧ್ಯವಿಲ್ಲ. ಅದೂ ಅಲ್ಲದೇ ಶ್ರೀಮಂತ ವರ್ಗಗಳ ಬಗೆಗೆ ಕಾಂಗ್ರೇಸ್ ಪಕ್ಷಕ್ಕೆ ಮೂಲಭೂತವಾದ ಭಿನ್ನಾಭಿಪ್ರಾಯವಿರಲಿಲ್ಲ ಎಂಬ ಅಂಶವನ್ನು ಮರೆತರೆ ನಾವು ವಾಸ್ತವವನ್ನೇ ಮರೆತಂತಾಗುತ್ತದೆ. ಭಾರತದ ದುಡಿಯುವ ವರ್ಗವನ್ನು ಅನೂಚೂನವಾಗಿ ಶೋಷಿಸುತ್ತಾ ಬಂದಿದೆ. ಈ ಶ್ರೀಮಂತ ವರ್ಗಗಳ ಬಗ್ಗೆ ಇಂದಿರಾ ಅವರಿಗೆ

ಗಾಂಧೀಜಿಯವರಿಗಿಂತ ಭಿನ್ನವಾದ ನಿಲುವಾಗಿತ್ತೇ ಎನ್ನುವುದು ಕೂಡ ಸಂದೇಹಾಸ್ಪದ ವಿಷಯವಾಗಿದೆ. ಹಳ್ಳಿಗಾಡಿನ ಮಟ್ಟದಲ್ಲಿ ಅಧಿಕಾರ ಸೂತ್ರವನ್ನು ಹಿಡಿದಿದ್ದ ಕಾಂಗ್ರೆಸ್ ಕಾರ್ಯಕರ್ತರುಗಳ ನಿಲುವು ಇರಲಿಲ್ಲ. ಇಂತಹ ರಾಜಕೀಯ ಸನ್ನಿವೇಶದಲ್ಲಿ ಜೀತಪದ್ಧತಿಯನ್ನು ಬದಲಾಗಬೇಕಾದ ಗ್ರಾಮ ಸಮಾಜದ ಸಮಸ್ಯೆಯಾಗಿ ಪರಿಗಣಿಸುವುದಕ್ಕೂ ಸಿದ್ಧರಿಲ್ಲದ ಭೂಮಾಲೀಕರು ತಾವೇ ಪರಿಹಾರ ಸೂಚಿಸುತ್ತಾರೆಂದರೆ ಅದು ತಪ್ಪಾಗುತ್ತದೆ.

ಪ್ರಜಾಪ್ರಭುತ್ವದ ಹೊಸ ಸಂದರ್ಭದಲ್ಲಿ ಹುಟ್ಟಿಕೊಂಡ ಹಲವು ವಿಧದ ಸಮಸ್ಯೆಗಳ ನಡುವೆ ನಾವು ಬದುಕುತ್ತಿದ್ದೇವೆ ಎಂಬ ಅರಿವನ್ನು ಸದಾ ಕಾಯ್ದುಕೊಳ್ಳಬೇಕಾಗುತ್ತದೆ. ಸಂವಿಧಾನ ಹಾಗೂ ಕಾಯಿದೆಗಳು ವಿವಿಧ ನ್ಯಾಯಗಳಿಂದ ವಂಚಿತರಾದವರಿಗೆ ನಾಗರೀಕ ಜೀವನದ ಹಕ್ಕುಗಳನ್ನು ನೀಡಿವೆ. ಈ ಹಕ್ಕುಗಳನ್ನು ಪಡೆಯುವ ಅಪೇಕ್ಷೆ ಮೂರ್ತುಗೊಳ್ಳುವ ಸಂದರ್ಭವು ಘರ್ಷಣೆಗೆ ಎಡೆಮಾಡಿಕೊಡುತ್ತದೆ. ಹಕ್ಕುಗಳ ಪ್ರತಿಪಾದನೆ ಅದುವರೆಗೆ ಒಂದು ವ್ಯವಸ್ಥೆಯ ಸಮತೋಲನವನ್ನು ಮಾಡಲಾರದು. ಹೀಗಾಗಿ ಘರ್ಷಣೆಯು ಪ್ರಜಾಪ್ರಭುತ್ವದಲ್ಲಿ ಮಾನ್ಯ ಹಾಗೂ ಅನಿವಾರ್ಯ. ಗ್ರಾಮೀಣ ಸಮಾಜದ ಪ್ರತಿಯೊಬ್ಬ ವರ್ಗವು ಅಧಿಕಾರ ಸೂತ್ರವನ್ನು ವಶಪಡಿಸಿಕೊಂಡು ಈ ಗತಿ ತಾರ್ಕಿಕ ಚೌಕಟ್ಟಿನಿಂದ ಹೊರಬರಲು ಯತ್ನಿಸುತ್ತದೆ ಎನ್ನಬುಹುದು. ಭೂಸುಧಾರಣೆ ಮತ್ತು ಜೀತಪದ್ಧತಿಯ ನಿರ್ಮೂಲನೆಗೆ ಸಂಬಂಧಿಸಿದಂತೆ ರೂಪಿಸಿದ ಕಾಯ್ದೆಗಳನ್ನು ನಿರ್ವಿರ್ಯಗೊಳಿಸಲು ವಾಸ್ತವವನ್ನು ತಾವು ಈ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕೆನ್ನಿಸುತ್ತದೆ.

ಒಂದು ಅಧ್ಯಯನದ ಪ್ರಕಾರ ಜೀತಪದ್ಧತಿಗೆ ಜೀತದಾಳುಗಳು ತೋರಿದ ಪ್ರತಿಕ್ರಿಯೆ ಹೀಗಿದೆ.

೧. ಜೀತದಿಂದ ಬಿಡುಗಡೆ ಬಯಸಿದವರು ಶೇ. ೫೪.೦ರಷ್ಟು.

೨. ಜೀತದಲ್ಲೇ ಉಳಿಯ ಬಯಸಿದವರು ಶೇ. ೨೩.೮ರಷ್ಟು

೩. ತೀರ್ಮಾನ ತೆಗೆದುಕೊಳ್ಳಲಾರದವರು. ಶೇ. ೩೩.೫ರಷ್ಟು

ಜೀತದಲ್ಲೇ ಉಳಿಯ ಬಯಸಿದವರು ನೀಡಿದ ಕಾರಣಗಳು

೧. ಶೇ. ೧೬ರಷ್ಟು ಜೀತದಾಳುಗಳು ತಮ್ಮ ಜೀವನಕ್ರಮದ ಬದಲಾವಣೆಯ ಬಗ್ಗೆ ಯೋಚಿಸಲಾರದವರು.

೨. ಶೇ. ೧೬ರಷ್ಟು ಜೀತದಾಳುಗಳು ತಮ್ಮ ಧಣಿಗೆ(ಮಾಲೀಕನಿಗೆ) ವಂಚನೆ ಮಾಡಬಾರದೆಂದು ನಂಬಿರುವರು.

೩. ಶೇ. ೧೯ರಷ್ಟು ಜೀತದಾಳುಗಳು ಜೀವನ ನಿರ್ವಹಣೆಯ ಬೇರೆ ಮಾರ್ಗ ತಿಳಿಯದವರು.

೪. ಶೇ. ೧.೬ರಷ್ಟು ಜೀತದಾಳುಗಳು ತಮಗೆ ಯಾವುದೇ ಬಗೆಯ ರಕ್ಷಣೆ ದೊರೆಯದಿಲ್ಲವೆಂದು ಭೀತಿಯುಳ್ಳವರು. ಈ ಅಂಕಿ ಅಂಶಗಳನ್ನು ಪರಿಶೀಲಿಸಿದರೆ ಜೀತ ಮುಕ್ತರಾಗಬಯಸಿ.೨

೫.೧. ದಲಿತರ ಅಭಿವೃದ್ಧಿಗಾಗಿ ಇರುವ ಕಾರ್ಯಕ್ರಮಗಳು

ಪರಿಶಿಷ್ಟ ಜಾತಿ ಉಪಯೋಜನೆ

ಕರ್ನಾಟಕವು ಪರಿಶಿಷ್ಟ ಜಾತಿ ಜನರ ಸಮಗ್ರ ಅಭಿವೃದ್ಧಿಗಾಗಿ ಪರಿಶಿಷ್ಟ ಜಾತಿ ಉಪ ಯೋಜನೆಯನ್ನು ಜಾರಿಗೊಳಿಸುವಲ್ಲಿ ಮುಂಚೂಣಿಯಲ್ಲಿರುವ ರಾಜ್ಯಗಳಲ್ಲೊಂದು ಪರಿಶಿಷ್ಟ ಜಾತಿ ಉಪಯೋಜನೆಯಡಿ ಪರಿಶಿಷ್ಟ ಜಾತಿಯ ಜನರ ತ್ವರಿತ ಸಾಮಾಜಿಕ ಆರ್ಥಿಕ ಪ್ರಗತಿಯನ್ನು ಖಚಿತಗೊಳಿಸುವ ಯೋಜನಾ ಪ್ರಕ್ರಿಯೆಯಲ್ಲಿ ಒಂದು ಸಮಗ್ರ ಮತ್ತು ಪ್ರಮುಖ ಭಾಗವಾಗಿದೆ.

ಪರಿಶಿಷ್ಟ ಜಾತಿ ಉಪಯೋಜನೆಗೆ ಸಂಪನ್ಮೂಲದ ನೇರ ಹರಿವಿಗೆ ಎರಡು ಅಂಶಗಳಿವೆ. ಮೊದಲನೆಯದಾಗಿ, ಕುಟುಂಬ ಮತ್ತು ವ್ಯಕ್ತಿ ಆಧಾರಿತ ಕಾರ್ಯಕ್ರಮಗಳ ಮೂಲಕ ಹಣದ ನೇರ ಹರಿವು ಆರ್ಥಿಕ ಅಭಿವೃದ್ಧಿಯ ಉದ್ದೇಶವನ್ನು ಒಳಗೊಂಡಿರುತ್ತದೆ. ಎರಡನೆಯದಾಗಿ ಮೂಲಸೌಕರ್ಯ, ಸೇವೆಗಳು ಮತ್ತು ಇತರ ಸೌಲಭ್ಯಗಳನ್ನು ಒದಗಿಸುವ ಮೂಲಕ ಪರಿಶಿಷ್ಟ ಜಾತಿ ಜನರಿಗೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಆರ್ಥಿಕ ನೆರವು ನೀಡಲಾಗುವುದು.

ಪರಿಶಿಷ್ಟ ಜಾತಿ ಉಪಯೋಜನೆಯ ಪರಿಕಲ್ಪನೆಯು ೧೨ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಜಾರಿಗೆ ಬಂದಿದೆ. ಅದಕ್ಕಿಂತ ಮೊದಲು ಪರಿಶಿಷ್ಟ ಜಾತಿ ಕುಟುಂಬಗಳ ಅಭ್ಯುದಯಕ್ಕೆ ಕೇವಲ ಕೆಲವು ಯೋಜನೆಗಳು ಮಾತ್ರ ಇದ್ದವು. ಆದ್ದರಿಂದಲೇ ಪರಿಶಿಷ್ಟ ಜಾತಿಗಳ ಜನರ ಸರ್ವಾಂಗೀಣ ಅಭಿವೃದ್ಧಿಗಾಗಿ ಪರಿಶಿಷ್ಟ ಜಾತಿ ಉಪಯೋಜನೆ ಎಂಬ ಹೆಸರಿನ ಯೋಜನೆಯೊಂದನ್ನು ಆರಂಭಿಸಲಾಯಿತು. ಎಲ್ಲ ಅಭಿವೃದ್ಧಿ ಇಲಾಖೆಗಳು ರಾಜ್ಯದ ಜನಸಂಖ್ಯೆಗೆ ಅನುಗುಣವಾಗಿ ತಮ್ಮ ಒಟ್ಟು ಆಯವ್ಯಯ ಹಂಚಿಕೆಯಲ್ಲಿನ ಶೇ. ೧೬.೨೦ರಷ್ಟನ್ನು ಪರಿಶಿಷ್ಟ ಜಾತಿಗಳವರ ಅಭಿವೃದ್ಧಿಗೆ ಮೀಸಲಾತಿಯಂತೆ ಸೂಚಿಸಲಾಗಿದೆ. ಯಾವ ಇಲಾಖೆಗಳಲ್ಲಿ ನೆರವಾಗಿ ಫಲಾನುಭವಿಗಳಿಗೆ ಕಾರ್ಯಕ್ರಮವನ್ನು ಒದಗಿಸಲು ಸಾಧ್ಯವಿಲ್ಲವೋ ಅಂತಹ ಇಲಾಖೆಯಲ್ಲಿನ ಭಾಗ-೮ ಹಣವನ್ನು ಒಟ್ಟುಗೂಡಿಸಿ ಪರಿಶಿಷ್ಟ ಜಾತಿಯ ಜನರ ಸರ್ವಾಂಗೀಣ ಆರ್ಥಿಕ ಅಭಿವೃದ್ಧಿ ಮತ್ತು ಮೂಲ ಸೌಕರ್ಯ ಅಭಿವೃದ್ಧಿಗೆ ಕಾರಣವಾಗುವ ಶಿಕ್ಷಣ, ವಸತಿ ಮತ್ತು ನೀರಾವರಿಗಳಂತಹ ಆದ್ಯತಾ ವಲಯಗಳಲ್ಲಿ ವ್ಯಯಿಸಲಾಗುವುದು.

೧. ಕೃಷಿ ಇಲಾಖೆ ಭೂಸಾರ ಸಂರಕ್ಷಣೆ

೨. ತೋಟಗಾರಿಕಾ ಇಲಾಖೆ

೩. ರೇಷ್ಮೆ ಇಲಾಖೆ

೪. ಅರಣ್ಯ ಇಲಾಖೆ

೫. ಸಹಕಾರ ಇಲಾಖೆ

೬. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

೭. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

೮. ಕೈಗಾರಿಕ ಮತ್ತು ವಾಣಿಜ್ಯ

೯. ಸೆಕೆಂಡರಿ ಶಿಕ್ಷಣ

೧೦. ಕನ್ನಡ ಮತ್ತು ಸಂಸ್ಕೃತಿ

೧೧. ಯುವಜನ ಮತ್ತು ಸೇವೆ

೧೨. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

೧೩. ವಸತಿ ಇಲಾಖೆ

೧೪. ಉದ್ಯೋಗ ಮತ್ತು ತರಬೇತಿ

೧೫. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ

೧೬. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ

೧೭. ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ

೧೮. ಕೆಎಸ್‌ಸಿಎಆರ್‌ಡಿ ಬ್ಯಾಂಕ್

೧೯. ತಾಂತ್ರಿಕ ಶಿಕ್ಷಣ

೨೦. ವಿಶೇಷ ಪ್ರದೇಶ ಯೋಜನೆ

೨೧. ಕೈಮಗ್ಗ ಮತ್ತು ಜವಳಿ ಇಲಾಖೆ

೨೨. ಕಂದಾಯ ಇಲಾಖೆ

೨೩. ಪದವಿಪೂರ್ವ ಶಿಕ್ಷಣ ಇಲಾಖೆ

೨೪. ಗ್ರಂಥಾಲಯ ಇಲಾಖೆ

೨೫. ಲೋಕೋಪಯೋಗಿ ಇಲಾಖೆ

೨೬. ಸಣ್ಣ ನೀರಾವರಿ ಇಲಾಖೆ

೨೭. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಸಾರಿಗೆ ಇಲಾಖೆ

೨೮. ಸಾರಿಗೆ ಇಲಾಖೆ

೨೯. ಮಾಹಿತಿ ತಂತ್ರಜ್ಞಾನ

೩೦. ವಯಸ್ಕರ ಶಿಕ್ಷಣ ಇಲಾಖೆ

೩೧. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

೩೨. ಭಾರಿ ಮತ್ತು ಮಧ್ಯದ ನೀರಾವರಿ ಇಲಾಖೆ

೩೩. ಪ್ರವಾಸೋದ್ಯಮ ಇಲಾಖೆ

೩೪. ಸಮಾಜಕಲ್ಯಾಣ ಇಲಾಖೆ

೩೫. ವಿಶೇಷ ಪ್ರದೇಶ ಯೋಜನೆ

ಕೃಷಿ ಇಲಾಖೆ

ಕೃಷಿ ಇಲಾಖೆಯು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಪರಿಶಿಷ್ಟ ಜಾತಿ ಜನರಿಗಾಗಿ ಪರಿಶಿಷ್ಟ ಜಾತಿ ಉಪ ಯೋಜನೆಯಡಿಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ.

೧. ಕೃಷಿ ಉಪಕರಣಗಳ ಪೂರೈಕೆ

೨. ಸಸ್ಯ ಸಂರಕ್ಷಣಾ ಉಪಕರಣಗಳ ಪೂರೈಕೆ

೩. ಯಾಂತ್ರಿಕ ಕೃಷಿ ಉಪಕರಣಗಳ ಪೂರೈಕೆ

೪. ಪವರ್ ಟಿಲ್ಲರ್‌ಗಳ ಪೂರೈಕೆ

೫. ಸಬ್‌ಮರ್ಸಿಬಲ್ ಪಂಪ್‌ಸೆಟ್ಟುಗಳ ಪೂರೈಕೆ

೬. ಡೀಸೆಲ್/ಸೀಮೆಎಣ್ಣೆ/ಎಲೆಕ್ಟ್ರಿಕ್ ಪಂಪ್‌ಸೆಟ್ಟುಗಳ ಪೂರೈಕೆ

೭. ಆಹಾರ ಪದಾರ್ಥ ಬಾಕ್ಸ್‌ಗಳ ಪೂರೈಕೆ

೮. ಕಾಟನ್ ಮಿನಿ ಮಿಷನ್ ಯೋಜನೆ

೯. ವೈಟಪ್

೧೦. ಮೈಕ್ರೊಂ ನೀರಾವರಿ ಯೋಜನೆ

ಭೂಸಾರ ಸಂರಕ್ಷಣೆ

ಕೃಷಿ ಇಲಾಖೆಯು(ಮಣ್ಣು ಸಂರಕ್ಷಣೆ) ಈ ಕೆಳಕಂಡ ಕಾರ್ಯಕ್ರಮಗಳನ್ನು ವಿಶೇಷ ಘಟಕ ಯೋಜನೆಯಡಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಪರಿಶಿಷ್ಟ ಜಾತಿಗಳ ಜನರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಜಾರಿಗೊಳಿಸಲಾಗುತ್ತಿದೆ.

೧. ಜಮೀನು ಅಭಿವೃದ್ಧಿ

೨. ಬೆಂಚ್ ಟೆರ್ರಾಸಿಂಗ್

೩. ಗಲ್ಲಿ ಚೆಕ್ಸ್

೪. ಕೃಷಿ ಹೊಂಡಗಳು

೫. ರಾವೀನ್ ರಿಕ್ಲಮೇಷನ್ ಸ್ಟ್ರಕ್ಚರ್

೬. ನಾಲಾ ಬಂಡುಗಳು

೭. ಚೆಕ್ ಡ್ಯಾಂಗಳು

೮. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ

೯. ಸುಜಾಲ ವಾಟರ್‌ಶೆಡ್ ಯೋಜನೆ

ತೋಟಗಾರಿಕಾ ಇಲಾಖೆ

ತೋಟಗಾರಿಕಾ ಇಲಾಖೆಯು ಈ ಕೆಳಕಂಡ ಕಾರ್ಯಕ್ರಮಗಳನ್ನು ವಿಶೇಷ ಘಟಕ ಯೋಜನೆಯಡಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಪರಿಶಿಷ್ಟ ಜಾತಿಗಳ ಜನರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಜಾರಿಗೊಳಿಸುತ್ತಿದೆ.

೧. ತೆಂಗಿನ ತೋಟಗಳ ನಿರ್ವಹಣೆ

೨. ಹಣ್ಣಿನ ತೋಟಗಳ ನಿರ್ವಹಣೆ

೩. ತೆಂಗಿನ ಸಸಿಗಳ ಪೂರೈಕೆ

೪. ಹಳೆಯ ತೋಟಗಳ ನಿರ್ವಹಣೆ

೫. ವೀಳ್ಯೆದೆಲೆ, ಕನಕಾಂಬರ, ಗುಲಾಬಿ, ಮಲ್ಲಿಗೆ, ಕಾಕಡ ಹೂಗಳ ಹೊಸ ತೋಟಗಳ ಸ್ಥಾಪನೆ

೬. ಟಿಶ್ಯೂಕಲ್ಚರ್, ಬನಾನಾ ಸಕ್ಕರ್

೭. ವರ್ಮಿನ್ ಕಾಂಪೋಸ್ಟ್‌ಗಳ ವಿತರಣೆ

೮. ತೋಟಗಾರಿಕೆಯಲ್ಲಿ ಸಂಸ್ಕರಣೆ

೯. ವಿಸರಣೆ ಮತ್ತು ತರಬೇತಿ

೧೦. ಡ್ರಿಫ್ ನೀರಾವರಿ

೧೧. ಎಣ್ಣೆ ಬೀಜ ಸಾಗುವಳಿ

೧೨. ನರ್ಸರಿ ಅಭಿವೃದ್ಧಿ

ರೇಷ್ಮೆ ಇಲಾಖೆ

ರೇಷ್ಮೆ ಇಲಾಖೆಯು ಈ ಕೆಳಕಂಡ ಕಾರ್ಯಕ್ರಮಗಳನ್ನು ವಿಶೇಷ ಘಟಕ ಯೋಜನೆಯಡಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಪರಿಶಿಷ್ಟ ಜಾತಿಗಳ ಜನರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಜಾರಿಗೊಳಿಸುತ್ತಿದೆ.

೧. ರೇರಿಂಗ್ ಹೌಸ್ ನಿರ್ಮಾಣಕ್ಕೆ ಸಹಾಯಧನ

೨. ರೀಲಿಂಗ್ ಚಟುವಟಿಕೆಗಳಿಗಾಗಿ ಸಹಾಯಧನ

೩. ಹಿಪ್ಪುನೇರಳೆ ಬೆಳೆಯಲು ಹಣ ಸಹಾಯ ನೀಡಿಕೆ

೪. ಪ್ಯಾಕೇಜ್ ಅನುಕೂಲತೆಗಳ ಕಾರ್ಯಕ್ರಮ

೫. ಎರೆಹುಳ ಸಂಯುಕ್ತ ಗೊಬ್ಬರ ಶೆಡ್‌ಗೆ ಸಹಾಯಧನ

೬. ಮೌಂಟಿಂಗ್ ಹೌಸ್‌ಗಳ ನಿರ್ಮಾಣಕ್ಕೆ ಸಹಾಯಧನ

೭. ಹನಿ ನೀರಾವರಿ ವ್ಯವಸ್ಥೆ ಅಳವಡಿಸಲು ಸಹಾಯಧನ

೮. ಯಾಂತ್ರೀಕೃತ ಚರಗಳ ಅಳವಡಿಕೆಗೆ ಸಹಾಯಧನ

೯. ಉಷ್ಣಕೋಠಿ(ಹಾಟ್ ಏರ್-ಡ್ರಯರ್ ಚೇಂಬರ್) ಅಳವಡಿಕೆಗೆ ಧನಸಹಾಯ.

ಅರಣ್ಯ ಇಲಾಖೆ

ಅರಣ್ಯ ಇಲಾಖೆಯು ಈ ಕೆಳಕಂಡ ಕಾರ್ಯಕ್ರಮಗಳನ್ನು ವಿಶೇಷ ಘಟಕ ಯೋಜನೆಯಡಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಪರಿಶಿಷ್ಟ ಜಾತಿಗಳ ಜನರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಜಾರಿಗೊಳಿಸುತ್ತಿದೆ.

೧. ಸಾಮಾಜಿಕ ಸುರಕ್ಷಾ ಅರಣ್ಯವನ್ನು ಬೆಳೆಸುವುದು/ನಿರ್ವಹಿಸುವುದು

೨. ಬಿದಿರು ಎಸ್ಟೇಟ್ ಪ್ಲಾಂಟೇಷನ್ ಬೆಳೆಸಲು ಮುಂಗಡ ಕಾಮಗಾರಿಗಳು ಮತ್ತು ಪೂರೈಕೆ

೩. ಮನೆಗಳಿಗೆ ಬಿದಿರಿನ/ಬೆತ್ತ ಪೂರೈಕೆ

೪. ಹೊಗೆ ರಹಿತ ಒಲೆಗಳ ಪೂರೈಕೆ

೫. ಮಳೆಗಾಲದ ಕಾಮಗಾರಿ

ಸಹಕಾರ ಇಲಾಖೆ

ಪರಿಶಿಷ್ಟ ಜಾತಿಗಳವರಿಗೆ ಚಾಲ್ತಿಯಲ್ಲಿರುವ ಸಹಕಾರ ಸಂಘಗಳು/ಸಕ್ಕರೆ ಕಾರ್ಖಾನೆಗಳು ಸಂಸ್ಥೆಗಳಲ್ಲಿ ಸದಸ್ಯರಾಗಿ ನೋಂದಣಿ ಮಾಡಿಕೊಳ್ಳುವ ಉದ್ದೇಶದಿಂದ ಆರ್ಥಿಕ ನೆರವನ್ನು ನೀಡಲಾಗುತ್ತಿದೆ. ಮುಂದುವರೆದಂತೆ ಸದಸ್ಯರು ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲ ಪಡೆಯಲು ಅರ್ಹರಾಗಿರುತ್ತಾರೆ. ಸಹಕಾರ ಇಲಾಖೆಯು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಪರಿಶಿಷ್ಟ ಜಾತಿಗಳ ಜನರಿಗಾಗಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ.

೧. ಪಿಸಿಎಆರ್‌ಡಿ ಬ್ಯಾಂಕ್‌ಗಳಲ್ಲಿ ಸಾಲ ಸೌಲಭ್ಯ

೨. ಸಹಕಾರ ಸಂಘಗಳು/ಕಾರ್ಖಾನೆಗಳಲ್ಲಿ ಸದಸ್ಯತ್ವಕ್ಕಾಗಿ ಆರ್ಥಿಕ ಸಹಾಯ

೩. ಪರಿಶಿಷ್ಟ ಜಾತಿಗಳ ರೈತರಿಗೆ ಬೆಳೆಸಾಲ

೪. ಸ್ವಸಹಾಯ ಗುಂಪುಗಳ ಪರಿಶಿಷ್ಟ ಜಾತಿ ಸದಸ್ಯರಿಗೆ ಸಾಲದ ಬಡ್ಡಿ ಧನ ಸಹಾಯ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ(ಕೆಪಿಟಿಸಿಎಲ್)

ಕೆಪಿಟಿಸಿಎಲ್ ಪರಿಶಿಷ್ಟ ಜಾತಿಯವರ ಮನೆಗಳಿಗೆ ಕುಟೀರ ಜ್ಯೋತಿ ಯೋಜನೆಯ ಮೂಲಕ ಕಾಲೋನಿಗಳಲ್ಲಿ ವಿದ್ಯುತ್ ಸಂಪರ್ಕ ನೀಡಲಾಗುತ್ತಿದೆ. ಮುಂದುವರೆದಂತೆ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೂಡ ಫಲಾನುಭವಿಗಳಿಗೆ ವಿದ್ಯುತ್ ಸಂಪರ್ಕ ಸೌಲಭ್ಯವನ್ನು ವಿಶೇಷ ಘಟಕ ಯೋಜನೆಯಡಿ ಅನುಕೂಲತೆಯನ್ನು ಕಲ್ಪಿಸುತ್ತದೆ. ಸಹಕಾರ ಇಲಾಖೆಯು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಪರಿಶಿಷ್ಟ ಜಾತಿಗಳ ಜನರಿಗಾಗಿ ವಿಶೇಷ ಘಟಕ ಯೋಜನೆಯಡಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ.

೧. ಪರಿಶಿಷ್ಟ ಜಾತಿಗಳವರಿಗೆ ಒದಗಿಸಿದ ನೀರಾವರಿ ಪಂಪ್‌ಸೆಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು.

೨. ದಲಿತ ಬಸ್ತಿಗಳು/ತಾಂಡಾಗಳು/ಜನತಾ ಕಾಲೋನಿಗಳಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸುವುದು.

ಪರಿಶಿಷ್ಟ ಜಾತಿಗಳವರ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಪರಿಶಿಷ್ಟ ಜಾತಿಗಳ ಜನರಿಗಾಗಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ.

೧. ಸ್ವರ್ಣ ಜಯಂತಿ ಗ್ರಾಮ ಸ್ವರಾಜ್ಗಾರ್ ಯೋಜನೆ(ಎಸ್‌ಜಿಎಸ್‌ವೈ)

೨. ಸಾಂಪ್ರದಾಯಿಕವಲ್ಲದ ಇಂಧನ ಮೂಲ

೩. ಗ್ರಾಮೀಣ ಉದ್ಯೋಗ (ಓ.ಖ.ಇ.ಉಂ.)

೪. ಗ್ರಾಮೀಣ ನೀರು ಸರಬರಾಜು

೫. ಗ್ರಾ.ಪಂ./ಪಿಆರ್‌ಐ ಅಭಿವೃದ್ಧಿ ಅನುದಾನ

೬. ಗ್ರಾಮೀಣ ರಸ್ತೆಗಳು

೭. ಜಲನಿರ್ಮಲ ಯೋಜನೆ

೮. ಸುವರ್ಣ ಗ್ರಾಮೋದಯ

ಕೈಗಾರಿಕೆ ಮತ್ತು ವಾಣಿಜ್ಯ

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ಬಡಗಿ ಕೆಲಸ, ಟೈಲರಿಂಗ್, ಚರ್ಮ ಕೈಗಾರಿಕೆ ಸೇರಿದಂತೆ ವಿವಿಧ ತರಬೇತಿಗಳನ್ನು ನೀಡುತ್ತದೆ ಮತ್ತು ತರಬೇತಿಯ ನಂತರ ಅಗತ್ಯ ಉಪಕರಣಗಳ ಕಿಟ್ ಅನ್ನು ಒದಗಿಸುತ್ತದೆ. ಸಹಕಾರ ಇಲಾಖೆಯು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಪರಿಶಿಷ್ಟ ಜಾತಿಗಳ ಜನರಿಗಾಗಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ.

೧. ಪರಿಶಿಷ್ಟ ಜಾತಿ ಕುಶಲಕರ್ಮಿಗಳಿಗೆ ಕಾರ್ಯತಾಣ ಸಹಿತ ನಿವಾಸ(ಲಿವಿಂಗ್ ಕಮ್ ವರ್ಕ್‌ಶೆಡ್) ನಿರ್ಮಾಣ
೨. ಜಿಟಿಟಿಸಿ, ಸಿಐಪಿಇಟಿ, ಎಟಿಐ, ಎಸ್‌ಟಿಇಪಿ, ಕೆಐಐಟಿ/ಲಿಡ್‌ಕರ್ ಇತ್ಯಾದಿ ಅಪೆಕ್ಸ್ ಸಂಸ್ಥೆಗಳ ಮೂಲಕ ಕೌಶಲ್ಯ ಸುಧಾರಣಾ ತರಬೇತಿ ಕಾರ್ಯಕ್ರಮ.
೩. ಡಿಐಸಿಗಳ ಮೂಲಕ ತರಬೇತಿ ಮತ್ತು ಟೂಲ್ ಕಿಟ್ ವಿತರಣೆ

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ

ಶಿಕ್ಷಣ ಇಲಾಖೆಯು ಜಿಲ್ಲಾ ಮಟ್ಟದಲ್ಲಿ ಪ್ರಾಥಮಿಕ ಶಾಲೆಗಳಿಗೆ ಹೋಗುವ ಪರಿಶಿಷ್ಟ ಜಾತಿಗಳ ಮಕ್ಕಳ ಸಮ್ರಹ ಪಟ್ಟಿಯನ್ನು ತಯಾರಿಸಿ ಅವರಿಗೆ ಪಠ್ಯ ಪುಸ್ತಕಗಳು ಮತ್ತು ಶಾಲಾ ಸಮವಸ್ತ್ರಗಳನ್ನು ಒದಗಿಸುತ್ತದೆ. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಪರಿಶಿಷ್ಟ ಜಾತಿಗಳ ಜನರಿಗಾಗಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ.

೧. ಶಾಲಾ ಸಮವಸ್ತ್ರ ಪೂರೈಕೆ
೨. ಉಚಿತ ಪಠ್ಯಪುಸ್ತಕಗಳು ಮತ್ತು ಶಾಲಾ ಬ್ಯಾಗ್‌ಗಳ ಪೂರೈಕೆ
೩. ಎಸ್‌ಸಿ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ
೪. ಸರ್ಕಾರೇತರ ಪ್ರಾಥಮಿಕ ಶಾಲೆಗಳಿಗೆ ನೆರವು.
೫. ಪ್ರಾಥಮಿಕ ಶಾಲಾ ಶಿಕ್ಷಣ ಚಟುವಟಿಕೆಗಳಿಗೆ ಪ್ರೋತ್ಸಾಹ
೬. ೮ನೇ ತರಗತಿಯ ವಿದ್ಯಾರ್ಥಿಗಳಿಗೆ ಬೈಸಿಕಲ್ ನೆರವು
೭. ಸರ್ವ ಶಿಕ್ಷಣ ಅಭಿಯಾನ
೮. ಕುವೆಂಪು ಮಾದರಿ ಶಾಲೆಗಳು

ಕಾಲೇಜು ಶಿಕ್ಷಣ

ಕಾಲೇಜು ಶಿಕ್ಷಣ ಇಲಾಖೆಯು ಸರ್ಕಾರಿ ಕಾಲೇಜುಗಳ ನಿರ್ವಹಿಸುವ ವಿದ್ಯಾರ್ಥಿನಿಲಯಗಳಿಗೆ ಉಪಕರಣಗಳು, ಪೀಠೋಪಕರಣಗಳು ಮತ್ತು ಸೋಲಾರ್ ವಾಟರ್ ಹೀಟರ್‌ಗಳನ್ನು ಒದಗಿಸುತ್ತದೆ. ಅದು ಈ ಯೋಜನೆಯಡಿಯಲ್ಲಿ ಹಾಲಿ ಇರುವ ಸರ್ಕಾರಿ ಕಾಲೇಜುಗಳ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಒದಗಿಸುತ್ತದೆ. ಸಹಕಾರ ಇಲಾಖೆಯು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಪರಿಶಿಷ್ಟ ಜಾತಿಗಳ ಜನರಿಗಾಗಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ.

೧. ಕೋಚಿಂಗ್ ಕ್ಲಾಸ್ ನಡೆಸುವುದು
೨. ವಿದ್ಯಾರ್ಥಿನಿಲಯಗಳಿಗೆ ಉಪಕರಣಗಳು ಮತ್ತು ಪೀಠೋಪಕರಣಗಳ ಪೂರೈಕೆ
೩. ವಿದ್ಯಾರ್ಥಿನಿಲಯಗಳಿಗೆ ಸೋಲಾರ್ ವಾಟರ್ ಹೀಟರ್
೪. ಕಾಲೇಜು ಗ್ರಂಥಾಲಯಕ್ಕೆ ಪುಸ್ತಕಗಳ ಪೂರೈಕೆ

ಕನ್ನಡ ಮತ್ತು ಸಂಸ್ಕೃತಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಜನಪದ ಕಲೆಗಳು, ಶಾಸ್ತ್ರೀಯ ಸಂಗೀತ, ನೃತ್ಯ, ವಾದ್ಯ ಸಂಗೀತ, ಗಮಕಗಳಂತಹ ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿ ಪ್ರೋತ್ಸಾಹಿಸುತ್ತದೆ ಮತ್ತು ನೋಂದಾಯಿತ ಪರಿಶಿಷ್ಟ ಜಾತಿಗಳ ಸಂಸ್ಥೆಗಳಿಗೆ ಹಣಕಾಸಿನ ನೆರವನ್ನು ನೀಡುತ್ತದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಪರಿಶಿಷ್ಟ ಜಾತಿಗಳ ಜನರಿಗಾಗಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ.

೧. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಾಯೋಜಿಸುವುದು ಮತ್ತು ಜಾನಪದ ಕಲೆಗಳನ್ನು ಪ್ರೋತ್ಸಾಹಿಸುವುದು.

೨. ಸಂಗೀತ ಉಪಕರಣ, ಉಡುಪು ಹಾಗೂ ಪ್ರಸಾಧನ ಸಾಮಗ್ರಿ ಖರೀದಿಗೆ ಹಣಕಾಸಿನ ನೆರವು.

೩. ನೋಂದಾಯಿತ ಪರಿಶಿಷ್ಟ ಜಾತಿಗಳ ಸಂಸ್ಥೆಗಳಿಗೆ ಸಂಗೀತ ಉಪಕರಣಗಳನ್ನು ಖರೀದಿಸಲು ಹಣಕಾಸಿನ ನೆರವು

೪. ನೋಂದಾಯಿತ ಪರಿಶಿಷ್ಟ ಜಾತಿಗಳ ಸಂಸ್ಥೆಗಳಿಗೆ ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಸಾಂಸ್ಕೃತಿಕ ಕಟ್ಟಡಗಳನ್ನು ನಿರ್ಮಿಸಲು ಹಣಕಾಸಿನ ನೆರವು

೫. ಪುಸ್ತಕಗಳ ಪ್ರಕಟಣೆಗೆ ಹಣಕಾಸಿನ ನೆರವು

೬. ಕಲಾ ಮಹೋತ್ಸವಗಳಿಗೆ ಹಣಕಾಸಿನ ನೆರವು

೭. ರಾಜ್ಯ ಮಟ್ಟದ ಸಮತಾ ಸಂಭ್ರಮ

೮. ಸಾಕ್ಷ್ಯ ಚಿತ್ರಗಳಿಗೆ ಹಣಕಾಸಿನ ನೆರವು

೯. ಗುರು–ಶಿಷ್ಯ ಪರಂಪರೆ

೧೦. ಜಾನಪದ ಗೀತೆಗಳ ಸಂಗ್ರಹ ಮತ್ತು ಪ್ರಕಟಣೆ

೧೧. ರಂಗ ಸುಗ್ಗಿ ಯೋಜನೆ

೧೨. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡುವ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು

ಯುವಜನ ಮತ್ತು ಕ್ರೀಡೆ

ಯುವಜನ ಮತ್ತು ಕ್ರೀಡೆ ಇಲಾಖೆಯು ವಿದ್ಯಾರ್ಥಿನಿಲಯಲದ ನಿವಾಸಿಗಳಾಗಿರುವ ಪರಿಶಿಷ್ಟ ಜಾತಿ ಬಾಲಕರು ಮತ್ತು ಬಾಲಕಿಯರಿಗಾಗಿ ವಿಶೇಷ ಕ್ರೀಡಾಕೂಟಗಳು, ತರಬೇತಿ ಶಿಬಿರಗಳನ್ನು ನಡೆಸುತ್ತದೆ ಮತ್ತು ವಿದ್ಯಾರ್ಥಿನಿಲಯಗಳ ನಿರ್ವಹಣೆ ಹಾಗೂ ಪರಿಶಿಷ್ಟ ಜಾತಿಗಳ ಕ್ರೀಡಾ

ಶಾಲೆಗಳ ನಿವಾಸಿಗಳಿಗೆ ಕ್ರೀಡಾ ಕಿಟ್ಟುಗಳು ಮತ್ತು ಭತ್ಯೆಗಳನ್ನು ನೀಡುತ್ತದೆ. ಯುವಜನ ಮತ್ತು ಕ್ರೀಡಾ ಇಲಾಖೆಯು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಪರಿಶಿಷ್ಟ ಜಾತಿಗಳ ಜನರಿಗಾಗಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ.

೧. ರಾಜ್ಯಮಟ್ಟದ ವಿಶೇಷ ಕ್ರೀಡಾಕೂಟಗಳು, ತರಬೇತಿ ಶಿಬಿರಗಳು ನಡೆಸುವುದು

೨. ಕ್ರೀಡಾ ಶಾಲೆಗಳ ನಿವಾಸಿಗಳಿಗೆ / ಕ್ರೀಡಾಪಟುಗಳಿಗೆ ಕಿಟ್ಟುಗಲು ಮತ್ತು ಇತರ ಭತ್ಯೆಗಳ/ ವಿದ್ಯಾರ್ಥಿ ವೇತನ ನೀಡಿಕೆ.

೩. ಕ್ರೀಡಾ ಶಾಲೆಗಳ ಅಭಿವೃದ್ಧಿ

ವಸತಿ ಇಲಾಖೆ

ಪರಿಶಿಷ್ಟ ಜಾತಿಗಳ ವಸತಿರಹಿತ ಜನರಿಗೆ ಅಂಬೇಡ್ಕರ್ ವಸತಿ ಯೋಜನೆಯಡಿಯಲ್ಲಿ ಪ್ರತಿ ಘಟಕಕ್ಕೆ ರೂ. ೪೦,೦೦೦ ವೆಚ್ಚದಲ್ಲಿ ಮನೆಗಳನ್ನು ಒದಗಿಸಲಾಗುವುದು. ಫಲಾನುಭವಿಗಳಿಗೆ ರೂ. ೪೦,೦೦೦ಗಳ ಒಟ್ಟು ಮೊತ್ತವನ್ನು ಸಬ್ಸಿಡಿಯಾಗಿ ಮಂಜೂರು ಮಾಡಲಾಗುವುದು ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ನಿವೇಶನ ರಹಿತರಿಗೆ ನಿವೇಶನಗಳನ್ನೂ ಒದಗಿಸಲಾಗುವುದು.

ಉದ್ಯೋಗ ಮತ್ತು ತರಬೇತಿ

ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳಿಗೆ ಐಟಿಐ., ಟರ್ನರ್, ವೆಲ್ಡರ್, ಫಿಟ್ಟರ್, ಮಿಷಿನಿಸ್ಟ್ ತರಬೇತಿ ಒದಗಿಸುವ ಕಾರ್ಯಕ್ರಮ, ತರಬೇತಿ ಪಡೆಯುತ್ತಿರುವವರಿಗೆ ಸ್ಟೈಫಂಡ್ ಮತ್ತು ಸಣ್ಣ ಟೂಲ್ ಕಿಟ್‌ಗಳನ್ನು ಒದಗಿಸುವುದು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಸಂಕಷ್ಟ ಪರಿಸಥಿತಿಯಲ್ಲಿರುವ ಮಕ್ಕಳು ಮತ್ತು ಮಹಿಳೆಯರು ಹಾಗೂ ಬಾಲಕಿಯರಿಗೆ ವೃತ್ತಿ ಪರ ಕೋರ್ಸ್‌ಗಳನ್ನು ತೆಗೆದುಕೊಳ್ಳಲು ಹಣಕಾಸಿನ ನೆರವನ್ನು ಒದಗಿಸುತ್ತದೆ. ಮಹಿಳಾ ಉದ್ಯಮಿಗಳು, ವಿಧವೆಯರು ಮತ್ತಿತರ ಆರ್ಥಿಕವಾಗಿ ದುರ್ಬಲ ವರ್ಗದ ಮಹಿಳೆಯರಿಗೆ ತರಬೇತಿಯನ್ನು ಇಲಾಖೆ ಒದಗಿಸುತ್ತದೆ. ಯೋಜನೆಯ ವಿವರಗಳು ಕೆಳಕಂಡಂತಿವೆ.

೧. ಸ್ತ್ರೀ ಶಕ್ತಿ ಯೋಜನೆ

೨. ಭಾಗ್ಯಲಕ್ಷ್ಮಿ ಯೋಜನೆ

೩. ಮಹಿಳೆಯರಿಗೆ ವೃತ್ತಿಪರ ಕೋರ್ಸುಗಳನ್ನು ತೆಗೆದುಕೊಳ್ಳಲು ಆರ್ಥಿಕ ನೆರವು

೪. ಮಹಿಳೆಯರಿಗೆ ತರಬೇತಿ ಕಾರ್ಯಕ್ರಮ

೫. ದೇವದಾಸಿ ಪುನರ್ವಸತಿ ಯೋಜನೆ

೬. ಉದ್ಯೋಗಿನಿ

೭. ವಿಶೇಷ ಪೌಷ್ಠಿಕ ಯೋಜನೆ

ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ

ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ಜವಾಹರ್ ಲಾಲ್ ರಾಷ್ಟ್ರೀಯ ಯೋಜನೆ ವಾಂಬೆ ಯೋಜನೆಯಡಿ ಮನೆಗಳ ನಿರ್ಮಾಣ/ವಿದ್ಯುತ್ ಒದಗಿಸುವುತ, ಆರೋಗ್ಯ ತಪಾಸಣೆ, ವರ್ಕ್‌ಶಾಪ್ ಘಟಕಗಳ ನಿರ್ಮಾಣ, ಮೂಲ ಸೌಕರ್ಯ ಸೌಲಭ್ಯ ಮುಂತಾದ ಕಾರ್ಯಕ್ರಮಗಳನ್ನು ರೂಪಿಸುತ್ತದೆ.

ಕೆಎಎಸ್‌ಸಿಎಆರ್‌ಡಿ ಬ್ಯಾಂಕ್

ಕೆಎಎಸ್‌ಸಿಎಆರ್‌ಡಿ ಬ್ಯಾಂಕು ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿಗಳ ಜನರಿಗೆ ಕೆಳಕಂಡ ಯೋಜನೆಗಳಲ್ಲಿ ಸಾಲ ನೀಡುವ ಮೂಲಕ ಆರ್ಥಿಕ ನೆರವನ್ನು ಕಲ್ಪಿಸುತ್ತದೆ.

೧. ಕಿರು ನೀರಾವರಿ

೨. ತೋಟಗಾರಿಕೆ

೩. ರೇಷ್ಮೆ

೪. ಬಹು ಉಪಯೋಗಿ ಪಶುಸಂಗೋಪನೆ

೫. ಕೃಷಿ ಯಾಂತ್ರೀಕರಣ ಯೋಜನೆ

ತಾಂತ್ರಿಕ ಶಿಕ್ಷಣ

ತಾಂತ್ರಿಕ ಶಿಕ್ಷಣ ನಿರ್ದೇಶನಾಲಯವು ಇಂಜನಿಯರಿಂಗ್ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಡ್ರಾಯಿಂಗ್ ಉಪಕರಣಗಳನ್ನು ಒದಗಿಸುತ್ತದೆ ಮತ್ತು ಇಂಜನಿಯರಿಂಗ್ ವಿದ್ಯಾರ್ಥಿಗಳಿಗೆ ಸಂಬಂಧಿತ ಕಾಲೇಜುಗಳ ಪ್ರಾಂಶುಪಾಲರ ಮೂಲಕ ವಿಶೇಷ ತರಬೇತಿಯನ್ನು ಒದಗಿಸುತ್ತದೆ.

೨. ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಮತ್ತು ಇಂಜನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ನಡೆಸುತ್ತಿರುವ ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳನ್ನು ಪೂರೈಸುತ್ತದೆ.

೩. ಸರ್ಕಾರಿ ಹಾಗೂ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಶುಲಕದ ಮರುಪಾವತಿ

ಕೈಮಗ್ಗ ಮತ್ತು ಜವಳಿ ಇಲಾಖೆ

ಕೈಮಗ್ಗ ಮತ್ತು ಜವಳಿ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ಪರಿಶಿಷ್ಟ ಜಾತಿಯವರಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸೌಲಭ್ಯಗಳನ್ನು ಒದಗಿಸಲಾಗುವುದು.

೧. ಕೈಮಗ್ಗ ತರಬೇತಿ

೨. ವಿದ್ಯುತ್ ಮಗ್ಗ ತರಬೇತಿ

೩. ವಿನ್ಯಾಸ ಮತ್ತು ಮಾದರಿಯಲ್ಲಿ ತರಬೇತಿ

೪. ಸಾಮಾನ್ಯ ತರಬೇತಿ ಕೇಂದ್ರ

೫. ಮನೆಗಳ ಕಾರ್ಯಾಗಾರ

೬. ದುಡಿಯುವ ಬಂಡವಾಳ

೭. ಆಧುನಿಕ ಮಗ್ಗದ ಉಪಕರಣಗಳ ಸರಬರಾಜು

೮. ಹೊಸ ಸದಸ್ಯರಿಗೆ ಷೇರು ಹಣ

೯. ಮಾರುಕಟ್ಟೆ ಉತ್ತೇಜಿಸುವ ಯೋಜನೆ

೧೦. ಷೇರು ಬಂಡವಾಳ

ಕಂದಾಯ ಇಲಾಖೆ

ಕಂದಾಯ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ಪರಿಶಿಷ್ಟ ಜಾತಿಯವರಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸೌಲಭ್ಯಗಳನ್ನು ಒದಗಿಸಲಾಗುವುದು.

ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಪಿಂಚಣಿ

ಪದವಿ ಪೂರ್ವ ಶಿಕ್ಷಣ ಇಲಾಖೆ

ಪದವಿಪೂರ್ವ ಶಿಕ್ಷಣ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ಪರಿಶಿಷ್ಟ ಜಾತಿಯವರಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸೌಲಭ್ಯಗಳನ್ನು ಒದಗಿಸಲಾಗುವುದು.

೧. ಪದವಿಪೂರ್ವ ಕಾಲೇಜುಗಳಿಗೆ ಪಠ್ಯಪುಸ್ತಕ ಮತ್ತು ಪರಾಮರ್ಶೆ ಪುಸ್ತಕಗಳನ್ನು ಪುಸ್ತಕ ಭಂಡಾರಗಳಿಗೆ ಸರಬರಾಜು ಮಾಡುವುದು.

೨. ಶೈಕ್ಷಣಿಕ ಸುಧಾರಣೆ

೩. ಮೂಲಭೂತ ಸೌಲಭ್ಯಗಳು

ಗ್ರಂಥಾಲಯ ಇಲಾಖೆ

ಗ್ರಂಥಾಲಯ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ಪರಿಶಿಷ್ಟ ಜಾತಿಯವರಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸೌಲಭ್ಯಗಳನ್ನು ಒದಗಿಸಲಾಗುವುದು.

ಪದವಿ ಪೂರ್ವ ಕಾಲೇಜು ಮತ್ತು ಸಾರ್ವಜನಿಕ ಗ್ರಂಥಾಲಯಗಳಲ್ಲಿ ಪುಸ್ತಕ ಭಂಡಾರ ಯೋಜನೆ.

ಲೋಕೋಪಯೋಗಿ ಇಲಾಖೆ

ಲೋಕೋಪಯೋಗಿ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ಪರಿಶಿಷ್ಟ ಜಾತಿಯವರಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸೌಲಭ್ಯಗಳನ್ನು ಒದಗಿಸಲಾಗುವುದು.

೧. ಇತರೆ ರಸ್ತೆಗಳ ನಿರ್ಮಾಣ– ಒಆರ್‌ಎಫ್

೨. ರಾಜ್ಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿ- ಕೆಎಸ್‌ಹೆಚ್‌ಐಪಿ

೩. ನೆಬಾರ್ಡ್ ಗ್ರಾಮೀಣ ರಸ್ತೆ

೪. ನೆಬಾರ್ಡ್ ಗ್ರಾಮೀಣ ಸೇತುವೆ

ಸಣ್ಣ ನೀರಾವರಿ ಇಲಾಖೆ

ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ಪರಿಶಿಷ್ಟ ಜಾತಿಯವರಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸೌಲಭ್ಯಗಳನ್ನು ಒದಗಿಸಲಾಗುವುದು.

೧. ಹೊಸ ಕೆರೆಗಳ ನಿರ್ಮಾಣ

೨. ಕೆರೆಗಳ ಆಧುನಿಕರಣ

೩. ಅಣೆಕಟ್ಟು ನಿರ್ಮಾಣ

೪. ವಿಶ್ವ ಬ್ಯಾಂಕ್ ನೆರವು ಯೋಜನೆ – ಜಲಸಂವರ್ಧನ ಯೋಜನೆ

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ

ಪೀಠಿಕೆ ಮತ್ತು ಯೋಜನೆಯ ವಿವರಣೆ

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ಪರಿಶಿಷ್ಟ ಜಾತಿಯವರಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸೌಲಭ್ಯಗಳನ್ನು ಒದಗಿಸಲಾಗುವುದು.

೧. ತುಂಗಭದ್ರ ಯೋಜನೆ, ಮುನಿರಾಬಾದ್

೨. ಮಲಪ್ರಭ ಮತ್ತು ಘಟಪ್ರಭ ಯೋಜನೆ

೩. ಕಾವೇರಿ ಬೇಸಿನ್ ಯೋಜನೆ

೪. ಕೃಷ್ಣ ಮೇಲ್ದಂಡೆ ಯೋಜನೆ

೫. ಭದ್ರಾ ರಿಸರ್ವಾಯರ್ ಯೋಜನೆ

೬. ನೀರಾವರಿ ಯೋಜನೆ

ಸಾರಿಗೆ ಇಲಾಖೆ

ಸಾರಿಗೆ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ಪರಿಶಿಷ್ಟ ಜಾತಿಯವರಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸೌಲಭ್ಯಗಳನ್ನು ಒದಗಿಸಲಾಗುವುದು.

೧. ಆಟೋರಿಕ್ಷಾ/ಲಘು ವಾಹನ ಚಾಲನಾ ತರಬೇತಿ

೨. ಭಾರಿ ಮೋಟಾರ್ ವಾಹನ ತರಬೇತಿ

೩. ಮೂಲಭೂತ ಸೌಲಭ್ಯಗಳು

ಮಾಹಿತಿ ತಂತ್ರಜ್ಞಾನ ಇಲಾಖೆ

ಮಾಹಿತಿ ತಂತ್ರಜ್ಞಾನ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ಪರಿಶಿಷ್ಟ ಜಾತಿಯವರಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸೌಲಭ್ಯಗಳನ್ನು ಒದಗಿಸಲಾಗುವುದು.

೧. ಕಿಯೋನಿಕ್ಸ್ ಮೂಲಕ ಗಣಕಯಂತ್ರ ತರಬೇತಿ.

ವಯಸ್ಕರ ಶಿಕ್ಷಣ ಇಲಾಖೆ

ವಯಸ್ಕರ ಶಿಕ್ಷಣ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ಪರಿಶಿಷ್ಟ ಜಾತಿಯವರಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸೌಲಭ್ಯಗಳನ್ನು ಒದಗಿಸಲಾಗುವುದು.

ರಾಜ್ಯಮಟ್ಟದ ಸಾಕ್ಷರತಾ ಯೋಜನೆ (ಪ್ರತಿ ಶಿಬಿರದಲ್ಲಿ ಊಟ ಸೇರಿದಂತೆ ೫೦ ವಯಸ್ಕರಗಳನ್ನೊಳಗೊಂಡ ೬೭೦ ಶಿಬಿರಗಳು)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ವತಿಯಿಂದ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ಪರಿಶಿಷ್ಟ ಜಾತಿಯವರಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸೌಲಭ್ಯಗಳನ್ನು ಒದಗಿಸಲಾಗುವುದು.

೧. ತಾಯಿ ಭಾಗ್ಯ ಯೋಜನೆ (ಆರೋಗ್ಯ ಕಿಟ್)

೨. ಸುವರ್ಣ ಸುರಕ್ಷ

೩. ಆರೋಗ್ಯ ಕವಚ

೪. ಕೆ.ಹೆಚ್.ಎಸ್.ಆರ್.ಡಿ.ಪಿ.

೫. ಆಸ್ಪತ್ರೆ ಕಟ್ಟಡಗಳು

ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆ

ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ಪರಿಶಿಷ್ಟ ಜಾತಿಯವರಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸೌಲಭ್ಯಗಳನ್ನು ಒದಗಿಸಲಾಗುವುದು.

೧. ಯು.ಕೆ.ಪಿ. ವಲಯ

೨. ಕೆ.ಎನ್.ಎನ್.ಎಲ್. ನಿಗಮ

೩. ಕೆ.ಬಿ.ಜೆ.ಎನ್.ಎಲ್. – ಬಂಡವಾಳ

ಪ್ರವಾಸೋದ್ಯಮ ಇಲಾಖೆ

ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ಪರಿಶಿಷ್ಟ ಜಾತಿಯವರಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸೌಲಭ್ಯಗಳನ್ನು ಒದಗಿಸಲಾಗುವುದು.

೧. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರವಾಸದ ಬಗ್ಗೆ ಮಾರ್ಗದರ್ಶಕ ತರಬೇತಿ

೨. ಕಸ್ತುರ್ಬಾ ಗಾಂಧಿ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಕೆ.ಎಸ್.ಟಿ.ಡಿ.ಸಿ. ಮೂಲಕ ಕರ್ನಾಟಕದ ಪ್ರವಾಸ ಸ್ಥಳಗಳಿಗೆ ನಾಲ್ಕು ದಿನಗಳ ಭೇಟಿ ಕಾರ್ಯಕ್ರಮವನ್ನು ಏರ್ಪಡಿಸುವುದು

೩. ಸಮಾಜ ಕಲ್ಯಾಣ ಇಲಾಖೆಯ ವಸತಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳಿಗೆ ಕೆ.ಎಸ್.ಟಿ.ಡಿ.ಸಿ ಮೂಲಕ ಪ್ರಮುಖ ಸ್ಥಳಗಳಿಗೆ ಪ್ರವಾಸ ಏರ್ಪಡಿಸುವುದು

೪. ವಿಶ್ವವಿದ್ಯಾಲಯದ ಸ್ನಾತೋಕತ್ತರ ವಿದ್ಯಾರ್ಥಿಗಳಿಗೆ ಕೆ.ಎಸ್.ಟಿ.ಡಿ.ಸಿ. ಮೂಲಕ ಪ್ರವಾಸ ಏರ್ಪಡಿಸುವುದು

೫. ಪ್ರವಾಸದ ಸಮಯದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು, ಸಾಂಸ್ಕೃತಿಕ ಸ್ಪರ್ಧೆ, ಚಿತ್ರಕಲೆ ಸ್ಪರ್ಧೆಗಳನ್ನು ಪ್ರಾಯೋಜಿಸುವುದು ಮತ್ತು ವಿದ್ಯಾರ್ಥಿಗಳಿಗೆ ಪ್ರವಾಸದ ನಕ್ಷೆ, ಲೇಖನ ಸಾಮಗ್ರಿ, ಶಾಲಾ ಪುಸ್ತಕಗಳು, ಬ್ಯಾಗ್‌ಗಳು, ಟಿ–ಶರ್ಟ್‌ಗಳನ್ನು ಒದಗಿಸುವುದು.

೬. ಹಂಪಿ ಉತ್ಸವದಲ್ಲಿ ವಿದ್ಯಾರ್ಥಿಗಳಿಗೆ ಸಾಹಸ ಕ್ರೀಡೆ, ಪ್ರಕೃತಿ ವೀಕ್ಷಣೆ ಏರ್ಪಡಿಸುವುದು ಮತ್ತು ಊಟ, ವಸತಿ, ಪ್ರಯಾಣ ಭತ್ಯೆ ಒದಗಿಸುವುದು.

೭. ಇನ್ಸ್‌ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್, ಬೆಂಗಳೂರು, ಸಂಸ್ಥೆಯ ಮೂಲಕ ವಿದಯಾರ್ಥಿಗಳಿಗೆ ಅಲ್ಪಾವಧಿ ಹೋಟೆಲ್ ನಿರ್ವಹಣಾ ತರಬೇತಿ ನೀಡಲಾಗುವುದು.

೮. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಮೂಲಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.

೯. ಭಾರತ ಪ್ರವಾಸದ ಬಗ್ಗೆ ಪರಿಶಿಷ್ಟ ಜಾತಿಯವರಿಗೆ ಸಂಶೋಧನಾ ಕಾರ್ಯಕ್ರಮ

೧೦. ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ ಮೂಲಕ ತೊಗಲು ಗೊಂಬೆ ಕಾರ್ಯಾಗಾರ

೧೧. ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಯುವಕರಿಗೆ ಪ್ರವಾಸಿ ಟ್ಯಾಕ್ಸಿಗಳನ್ನು ಒದಗಿಸುವುದು.

ಸಮಾಜ ಕಲ್ಯಾಣ ಇಲಾಖೆ

ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ಪರಿಶಿಷ್ಟ ಜಾತಿಯವರಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸೌಲಭ್ಯಗಳನ್ನು ಒದಗಿಸಲಾಗುವುದು.

೧. ರಾಮಕೃಷ್ಣ ಆಶ್ರಮದಂತಹ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸುವುದು.

೨. ಸ್ವಯಂಸೇವಾ ಸಂಸ್ಥೆಗಳಿಗೆ ಧನ ಸಹಾಯ

೩. ಶ್ರೇಷ್ಠತೆ ಪಡೆದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಸಹಾಯ ಧನ

೪. ವಿದೇಶಿ ವಿಶ್ವವಿದ್ಯಾಲಯದಲ್ಲಿ ಐ.ಟಿ.ಐ./ಐ.ಐ.ಟಿ.ಯಲ್ಲಿ ರ್‍ಯಾಂಕ್ ಪಡೆದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ

೫. ವಸತಿ ಶಾಲಾ ಸಂಸ್ಥೆ

೬. ಹೊಸ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರಾರಂಭ

೭. ಹೊಸ ವಿದ್ಯಾರ್ಥಿನಿಲಯಗಳ ಪ್ರಾರಂಭ

೮. ಡಾ. ಬಿ.ಆರ್. ಅಂಬೇಡ್ಕರ್ ಜನ್ಮಶತಾಬ್ಧಿ ಕಾರ್ಯಕ್ರಮದ ಅಂಗವಾಗಿ ಸಂಶೋಧನಾ ಸಂಸ್ಥೆ

೯. ವಿಚಾರ ಸಂಕಿರಣ ಮತ್ತು ಕಮ್ಮಟಗಳನ್ನು ನಡೆಸುವುದು.

೧೦. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಜನರಿಗೆ ಪರಿಹಾರ

೧೧. ಡಾ. ಬಿ.ಆರ್. ಅಂಬೇಡ್ಕರ್ ಜನ್ಮಶತಾಬ್ಧಿ ಆಚರಣೆ– ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಲಯಗಳಿಗೆ ನಿವೇಶನ, ಕಛೇರಿ ಕಟ್ಟಡಗಳು, ಇತರೆ ಕಟ್ಟಡಗಳು

೧೨. ಅಂಬೇಡ್ಕರ್ ಭವನಗಳ ನಿರ್ವಹಣೆ

೧೩. ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಆಯೋಗ

೧೪. ಅಸ್ಪೃಶ್ಯತೆ ನಿವಾರಣೆ

೧೫. ವಿದ್ಯಾರ್ಥಿನಿಲಯದ ಕಟ್ಟಡಗಳ ನಿರ್ಮಾಣ

೧೬. ವಸತಿ ಶಾಲಾ ಕಟ್ಟಡಗಳ ನಿರ್ಮಾಣ

೧೭. ವಸತಿ ಶಾಲಾ ಕಟ್ಟಡಗಳ ನಿರ್ಮಾಣ(ಮುಖ್ಯ ಕಾಮಗಾರಿಗಳು)

೧೮. ಬೆಂಗಳೂರು ಜಿಲ್ಲೆಯಲ್ಲಿ ಜಗಜೀವನರಾಂ ಭವನ ನಿರ್ಮಾಣ(ಮುಖ್ಯ ಕಾಮಗಾರಿಗಳು)

ತರಬೇತಿ ಕಾರ್ಯಕ್ರಮಗಳು

೧. ಬಿ.ಎಸ್ಸಿ ಮತ್ತು ಜಿ.ಎನ್.ಎಂ. ನರ್ಸಿಂಗ್

೨. ಗಗನಸಖಿ

೩. ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ ಮೂಲಕ ವಿವಿಧ ಕೋರ್ಸ್‌ಗಳಲ್ಲಿ ತರಬೇತಿ

೪. ನೆಮ್ಮದಿ ಟೆಲಿಸೆಂಟರ್ಸ್ ಮೂಲಕ ಬಿ.ಪಿ.ಒ.ಗೆ ಸಂಬಂಧಿಸಿದ ತರಬೇತಿಗಳು

೫. ಆದಿತ್ಯಾ ಕಾಲ್ ಸೆಂಟರ್ ಮೂಲಕ ಕಾಲ್ ಸೆಂಟರ್ ತರಬೇತಿ

೬. ಐ.ಐ.ಐ.ಟಿ.–ಬಿ (ಇನ್ಫೋಸಿಸ್) ಮೂಲಕ ವಿಶೇಷ ತರಬೇತಿ ಕಾರ್ಯಕ್ರಮ

ವಿಶೇಷ ಪ್ರದೇಶ ಯೋಜನೆ

ವಿಶೇಷ ಪ್ರದೇಶ ಯೋಜನೆಗಳನ್ನು ಹೆಚ್‌ಕೆಡಿಬಿ, ಎಂಎಡಿಬಿ ಮತ್ತು ಬಿಎಡಿಬಿಗಳ ಮೂಲಕ ಅನುಷ್ಠಾನಗೊಳಿಸಲಾಗುವುದು. ಈ ಯೋಜನೆಯನ್ನು ಬೀದರ್, ಗುಲಬರ್ಗಾ, ರಾಯಚೂರು ಮತ್ತು ಬಳ್ಳಾರಿ ಈ ನಾಲ್ಕು ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗುವುದು.

೧. ಹೆಚ್‌ಕೆಡಿಬಿ ಅಡಿಯಲ್ಲಿ ರಸ್ತೆ, ಸೇತುವೆಗಳು, ನೀರಿನ ಪೂರೈಕೆ, ಆರೋಗ್ಯ, ಸಣ್ಣ ನೀರಾವರಿ, ಶಾಲಾ ಕಟ್ಟಡ ಇತ್ಯಾದಿ ಮೂಲಸೌಕರ್ಯ ಅಭಿವೃದ್ಧಿ ಸೌಲಭ್ಯಗಳನ್ನು ಒದಗಿಸಲಾಗುವುದು.

೨. ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ: ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ಸಾರಿಗೆ ಮತ್ತು ಸಂಪರ್ಕ ಜಾಲ ಅಭಿವೃದ್ಧಿ, ಪೆಹೆಚ್‌ಸಿಎಸ್‌ಗಳ ನಿರ್ಮಾಣ, ಗ್ರಾಮೀಣ ನೀರು ಪೂರೈಕೆಗಳನ್ನು ಮಾಡಲಾಗುವುದು.

ಗಡಿಪ್ರದೇಶಾಭಿವೃದ್ಧಿ ಮಂಡಳಿ: ಪ್ರಾಥಮಿಕ ಮತ್ತು ಪ್ರೌಢಶಾಲಾ ಕಟ್ಟಡ ನಿರ್ಮಾಣ, ಆರೋಗ್ಯ ಸಂಸ್ಥೆಗಳು, ಅಂಗನವಾಡಿ ಕಟ್ಟಡಗಳು, ಸಣ್ಣ ನೀರಾವರಿ ಕಾಮಗಾರಿಗಳು ಮತ್ತು ಎಸ್.ಸಿ. ಕಾಲೋನಿಗಳಿಗೆ ವಿದ್ಯುತ್ ಸಂಪರ್ಕ ಮುಂತಾದ ಮೂಲಭೂತ ಸೌಕರ್ಯ ಒದಗಿಸುವುದು.

ಉದ್ಯೋಗ ಮತ್ತು ತರಬೇತಿ ಕಾರ್ಯಕ್ರಮಗಳು

ಸಮಾಜ ಕಲ್ಯಾಣ ಇಲಾಖೆಯ ಉದ್ಯೋಗ ಮತ್ತು ತರಬೇತಿ ಕಾರ್ಯಕ್ರಮಗಳು ಈ ಕೆಳಕಂಡಂತಿವೆ.

• ನವಚೇತನ – ನಿರುದ್ಯೋಗಿ ಎಸ್‌ಸಿ ಯುವಕರಿಗೆ ತರಬೇತಿ ನೀಡುವ ಯೋಜನೆ, ೧೯೯೬–೯೭ರಿಂದ ಸರ್ಕಾರದಿಂದ ಜಾರಿಗೊಳಿಸಲಾದ ಯೋಜನೆ

• ಕೇಂದ್ರ ಪ್ರಾಯೋಜಿತ ಕೋಚಿಂಗ್ ಮತ್ತು ಸಂಬಂಧಿತ ಯೋಜನೆಗಳು – ಪರೀಕ್ಷಾ ಪೂರ್ವ ತರಬೇತಿ ಕೇಂದ್ರಗಳ ಮೂಲಕ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರಿಶಿಷ್ಟ ಜಾತಿಗಳು/ಪರಿಶಿಷ್ಟ ಪಂಗಡಗಳು/ಇತರೆ ಹಿಂದುಳಿದ ವರ್ಗಗಳವರಿಗೆ ಕೋಚಿಂಗ್ ನೀಡುವ ಯೋಜನೆ.

• ಎಸ್‌ಸಿ/ಎಸ್‌ಟಿಗಳಿಗೆ ಮೀಸಲಾತಿಯ ಎಲ್ಲ ಸೌಲಭ್ಯಗಳನ್ನು ಪಡೆದುಕೊಳ್ಳಲು ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.

ಯಾವುದೇ ಮಟ್ಟದ ವಿದ್ಯಾಭ್ಯಾಸ ಹೊಂದಿರುವ ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳು ತಮ್ಮ ಹೆಸರುಗಳನ್ನು ನೊಂದಾಯಿಸಿಕೊಳ್ಳಲು ವಿಶೇಷವಾದ ಒಂದು ಉದ್ಯೋಗ ಘಟಕ ಇರುತ್ತದೆ.

ಜಾತಿ ಪ್ರಮಾಣಪತ್ರ

ಮೀಸಲಾತಿಯ ಸೌಲಭ್ಯವನ್ನು ಪಡೆದುಕೊಳ್ಳಲು ಎಸ್‌ಸಿ/ಎಸ್‌ಟಿ ಜನರು ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾಗುತ್ತದೆ.

ವಿವರಣೆ ಕರ್ನಾಟಕ ಎಸ್‌ಸಿ/ಎಸ್‌ಟಿ/ಓಬಿಸಿ(ನೇಮಕಾತಿಯಲ್ಲಿ ಮೀಸಲಾತಿ) ಕಾಯಿದೆ ೧೯೯೦ ಮತ್ತು ನಿಯಮಾವಳಿ ೧೯೯೨ರಂತೆ ರಾಜ್ಯ ಸಿವಿಲ್ ಸೇವೆಗಳು ಮತತು ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಹಾಗೂ ವಿಶ್ವವಿದ್ಯಾಲಯ ಮತ್ತು ರಾಜ್ಯ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಅಥವಾ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಎಸ್‌ಸಿ/ಎಸ್‌ಟಿ ಮತ್ತು ಓಬಿಸಿಗಳವರಿಗೆ ನೇಮಕಾತಿಯಲ್ಲಿ ಮೀಸಲಾತಿ ಒದಗಿಸುತ್ತದೆ.

ಅರ್ಹತೆ ಮತ್ತು ಜಾತಿ ಪ್ರಮಾಣಪತ್ರ ಪಡೆಯುವ ಪ್ರಕ್ರಿಯೆ

ಅಭ್ಯರ್ಥಿಗಳು ನಮೂನೆ 'ಎ' ಯಲ್ಲಿ ಸಂಬಂಧಿತ ತಹಶೀಲ್ದಾರ್ ಅವರಿಗೆ ಜಾತಿ ಪ್ರಮಾಣ ಪತ್ರ ಕೋರಿ ಅರ್ಜಿ ಸಲ್ಲಿಸಬೇಕು ಮತ್ತು ತಹಶೀಲ್ದಾರ್ ಅವರು ಅರ್ಜಿ ಸ್ವೀಕರಿಸಿದ ಎರಡು ತಿಂಗಳೊಳಗೆ ಪರಿಶೀಲನೆ ನಡೆಸಿ ಜಾತಿ ಪ್ರಮಾಣ ಪತ್ರವನ್ನು ನೀಡಬೇಕು ಅಥವಾ ಅರ್ಜಿಯನ್ನು ತಿರಸ್ಕರಿಸಬೇಕು. ತಹಶೀಲದಾರರ ಆದೇಶದಿಂದ ನೊಂದ ಅರ್ಜಿದಾರರು ವಿಭಾಗಾಧಿಕಾರಿಗಳಿಗೆ ಅಪೀಲು ಸಲ್ಲಿಸಬಹುದು ಮತ್ತು ಅವರು ಅಪೀಲು ಸಲ್ಲಿಸಿದ ಒಂದು ತಿಂಗಳೊಳಗಾಗಿ ಸೂಕ್ತ ಆದೇಶ ಮಾಡುತ್ತಾರೆ. ಎಸ್‌ಸಿ/ಎಸ್‌ಟಿ ವರ್ಗದ ಜನರಿಗೆ ಜಾತಿ ಪ್ರಮಾಣ ಪತ್ರವನ್ನು ನೀಡಿದ ಪ್ರಾಧಿಕಾರವು ಪ್ರಮಾಣ ಪತ್ರವನ್ನು ರದ್ದುಪಡಿಸುವವರೆಗೂ ಪ್ರಮಾಣ ಪತ್ರವು ಚಾಲ್ತಿಯಲ್ಲಿರುತ್ತದೆ. ತಾಂತ್ರಿಕ ಮತ್ತು ವೃತ್ತಿಪರ ಕೋರ್ಸ್‌ಗಳಲ್ಲಿ ಮತ್ತು ಸರ್ಕಾರದ ಅಥವಾ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ನೇಮಕಾತಿಗೆ ಮೀಸಲಾತಿಯ ಸೌಲಭ್ಯವನ್ನು ಪಡೆದುಕೊಳ್ಳಲು ಅಭ್ಯರ್ಥಿಯು ಜಿಲ್ಲೆಯ ಜಾತಿ ಪರಿಶೀಲನಾ ಸಮಿತಿಗೆ ಜಾತಿ ಪರಿಶೀಲನೆಗಾಗಿ ನಮೂನೆ ನಂ. ೧ನ್ನು ಸಲ್ಲಿಸಬೇಕು. ಸಮಿತಿಯು ಒಂದು ತಿಂಗಳೊಳಗಾಗಿ ಶಾಲಾ ದಾಖಲೆಗಳು, ಸಂಬಂಧಿಕರು/ ಸಹೋದರಿಯರು/ ಸಹೋದರರು/ಪೋಷಕರ ಪ್ರಮಾಣ ಪತ್ರಗಳು ಹಾಗೂ ಅಗತ್ಯವಾದರೆ ಅಂತಹ ಇತರ ಇನ್ನಿತರ ಅಗತ್ಯ ದಾಖಲೆಗಳನ್ನು ಪರಿಶೀಲಿಸಿ ಎಲ್ಲವೂ ಸರಿಯಾಗಿದ್ದರೆ ನಮೂನೆ ನಂ. ೧ಎ ರಲ್ಲಿ ಸಿಂಧುತ್ವ ಪ್ರಮಾಣಪತ್ರವನನು ನೀಡುತ್ತಾರೆ. ಒಂದು ವೇಳೆ ಅಭ್ಯರ್ಥಿಯು ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದರೆ. ಸಮಿತಿಯು ಕಾರಣಗಳನ್ನು ಉಲ್ಲೇಖಿಸಿ ಅರ್ಜಿಯನ್ನು ತಿರಸ್ಕರಿಸುತ್ತದೆ. ಶಿಕ್ಷಣ ಮತ್ತು ಉದ್ಯೋಗದ ಉದ್ದೇಶಕ್ಕಾಗಿ ಜಾತಿ ಪರಿಶೀಲನಾ ಸಮಿತಿಯು ನೀಡುವ ಸಿಂಧುತ್ವ ಪ್ರಮಾಣಪತ್ರವು ಅದು ರದ್ದಾಗುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೂ ಸಿಂಧುವಾಗಿರುತ್ತದೆ. ಈ ಸಿಂಧುತ್ವ ಪ್ರಮಾಣಪತ್ರವು ಉದ್ಯೋಗಕ್ಕೆ ಹೊಸದಾಗಿ ನೇಮಕಾತಿಯ ಸಂದರ್ಭದಲ್ಲಿ ಅತ್ಯಗತ್ಯ ಮತ್ತ ಎಸ್‌ಸಿ/ಎಸ್‌ಟಿ ಮತ್ತು ಓಬಿಸಿ ನೇಮಕಾತಿಯಲ್ಲಿ ಮೀಸಲಾತಿ ಇತ್ಯಾದಿ ನಿಯಮಾವಳಿ ೧೯೯೨ರ ನಿಯಮ ೯ರಂತೆ ನೆಮಕಾತಿ ಪ್ರಾಧಿಕಾರವು ಸಿಂಧುತ್ವ ಪ್ರಮಾಣ ಪತ್ರವನ್ನು ಪಡೆದುಕೊಳ್ಳದೇ ನೇಮಕಾತಿ ಆದೇಶವನ್ನು ಹೊರಡಿಸುವಂತಿಲ್ಲ. ಕರ್ನಾಟಕ ರಾಜ್ಯದ ಎಸ್‌ಸಿ/ಎಸ್‌ಟಿ ಜಾತಿಗಳ ಪಟ್ಟಿಯನ್ನು ೧೯೭೭ರಲ್ಲಿ ಭಾರತ ಸರ್ಕಾರವು ಪ್ರಕಟಿಸಿದಂತೆ ಎಸ್.ಸಿ ಜಾತಿಗಳ ಪಟ್ಟಿಯಲ್ಲಿ ನೀಡಲಾಗಿದೆ.

ಸಂವಿಧಾನ ತಿದ್ದುಪಡಿ ಕಾಯಿದೆ ೧೯೦೦ರಂತೆ ಬೌದ್ಧ ಮತವನ್ನು ಅನುಸರಿಸುವ ಪರಿಶಿಷ್ಟ ಜಾತಿಗಳ ಜನರೂ ಸಹ ಎಸ್‌ಸಿ ಪ್ರಮಾಣಪತ್ರ ಪಡೆಯಲು ಅರ್ಹರಾಗಿರುತ್ತಾರೆ.

ಉದ್ಯೋಗ ಮತ್ತು ತರಬೇತಿ

ಉದ್ಯೋಗ ಘಟಕ

ಯಾವುದೇ ಮಟ್ಟದ ವಿದ್ಯಾಭ್ಯಾಸ ಹೊಂದಿರುವ ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳ ಹೆಸರುಗಳನ್ನು ಉದ್ಯೋಗಕ್ಕಾಗಿ ನೋಂದಾಯಿಸಿಕೊಳ್ಳಲು ಪ್ರತ್ಯೇಕವಾದ ಉದ್ಯೋಗ ಘಟಕ ಇರುತ್ತದೆ.

ವಿವರಣೆ ಮತ್ತು ಉದ್ದೇಶ: ಉದ್ಯೋಗ ಘಟಕದಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿ ಕೊಂಡಿರುವ ಅಭ್ಯರ್ಥಿಗಳನ್ನು ಜೇಷ್ಠತೆ ಆಧಾರದ ಮೇಲೆ ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳನ್ನು ನೇಮಕಾತಿಗೆ ಪ್ರಾಯೋಜಿಸಲು ಇಚ್ಛಿಸಿ ಉದ್ಯೋಗ ಘಟಕವನ್ನು ಸಂಪರ್ಕಿಸುವ ನೇಮಕಾತಿ ಏಜನ್ಸಿಗಳಿಗೆ ಪ್ರಾಯೋಜಿಸುತ್ತದೆ. ಈ ಘಟಕವು, ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಅಭ್ಯರ್ಥಿಗಳನ್ನು ಪ್ರಾಯೋಜಿಸುವುದಿಲ್ಲ. ಬ್ಯಾಕ್‌ಲಾಗ್ ಹುದ್ದೆಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಸಂಬಂಧಿತ ಇಲಾಖೆಗಳನ್ನು ಸಂಪರ್ಕಿಸಬಹುದು.

ಈ ಘಟಕಕ್ಕೆ ಹೆಚ್ಚಿನ ಭವಿಷ್ಯ ಇಲ್ಲದಿರುವುದರಿಂದ ಮತ್ತು ದಿನಪತ್ರಿಕೆಗಳಲ್ಲಿ ಹೆಚ್ಚಿನ ಪ್ರಚಾರಕ್ಕೆ ಆದ್ಯತೆ ಹೆಚ್ಚಾಗುತ್ತಿರುವುದರಿಂದ ಈ ಘಟಕವನ್ನು ಮುಚ್ಚುವ ಪ್ರಸ್ತಾವನೆ ಇದೆ.

ಬ್ಯಾಕ್‌ಲಾಗ್ ಖಾಲಿ ಹುದ್ದೆಗಳ ವಿವರ

ಸರ್ಕಾರವು ದಿನಾಂಕ ೨೭.೧೧.೨೦೦೧ರಲ್ಲಿ ಅಧಿಸೂಚನೆಯೊಂದನ್ನು ಹೊರಡಿಸಿದ್ದು ಅದರಂತೆ ಬ್ಯಾಕ್‌ಲಾಗ್ ಖಾಲಿ ಹುದ್ದೆಗಳನ್ನು ಗುರುತಿಸಲು ಮತ್ತು ಭರ್ತಿಮಾಡುವುದಕ್ಕೆ ಸಂಬಂಧಿಸಿದಂತೆ ವಿಶೇಷ ನಿಯಮಾವಳಿಗಳನ್ನು ರಚಿಸಲಾಗಿದೆ. ಈ ನಿಯಮಾವಳಿಗಳನ್ನು ತಿದ್ದುಪಡಿ ಮಾಡಲಾಗಿದ್ದು ೧.೦೬.೨೦೦೨ರಲ್ಲಿ ಪ್ರಕಟಿಸಲಾಗಿದೆ. ಈ ನಿಯಮಾವಳಿಗಳಂತೆ ವಿವಿಧ ಸರ್ಕಾರಿ ಇಲಾಖೆಗಳು, ನಿಗಮ ಮತ್ತು ಮಂಡಳಿಗಳು, ವಿಶ್ವವಿದ್ಯಾಲಯಗಳು, ಸಹಕಾರಿ ಕಲ್ಯಾಣ ಇಲಾಖೆಯ ಸಹಕಾರದೊಂದಿಗೆ ಖಾಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಿವೆ. ವಿವಿಧ ಸಂಸ್ಥೆಗಳಲ್ಲಿನ ಎಸ್‌ಸಿ/ ಎಸ್‌ಟಿ ವಾರು ಖಾಲಿ ಹುದ್ದೆಗಳ ವಿವರವನ್ನು ಕೆಳಕಂಡ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ ೫.೧. ವಿವಿಧ ಸಂಸ್ಥೆಗಳಲ್ಲಿನ ಎಸ್‌ಸಿ/ಎಸ್‌ಟಿ ವಾರು ಬ್ಯಾಕ್‌ಲಾಗ್ ಖಾಲಿ ಹುದ್ದೆಗಳ ವಿವರ

ಕ್ರ.ಸಂ.	ನೇಮಕಾತಿ ಪ್ರಾಧಿಕಾರ	ಗುರುತಿಸಲಾದ ಖಾಲಿ ಹುದ್ದೆಗಳು		ಅನುಸೂಚಿತ ಖಾಲಿ ಹುದ್ದೆಗಳು		ಭವಿಷ್ಯದ ನೇಮಕಾತಿ ಮತ್ತು ರೋಗಗ್ರಸ್ಥ ಘಟಕಗಳಲ್ಲಿನ ಖಾಲಿ ಹುದ್ದೆಗಳು		ಅನುಸೂಚಿಸಲ್ಪಡದೇ ಕಾದ ಖಾಲಿ ಹುದ್ದೆ		ಅಭ್ಯರ್ಥಿಗಳ ಸಂಖ್ಯೆ: ಆಯ್ಕೆ ಯಾದವರು		ಅಭ್ಯರ್ಥಿಗಳ ಸಂಖ್ಯೆ: ನೇಮಕ ಗೊಂಡವರು	
1	2	3		4		5		6		7		8	
		ಎಸ್‌ಸಿ	ಎಸ್‌ಟಿ	ಎಸ್‌ಸಿ	ಎಸ್‌ಟಿ	ಎಸ್‌ಸಿ	ಎಸ್‌ಟಿ	ಎಸ್‌ಸಿ	ಎಸ್‌ಟಿ	ಎಸ್‌ಸಿ	ಎಸ್‌ಟಿ	ಎಸ್‌ಸಿ	ಎಸ್‌ಟಿ
1	ಇಲಾಖೆ	10220	2969	8619	2356	1545	605	56	0	8300	2159	8035	2101
2	ವಿಶ್ವವಿದ್ಯಾಲಯ	567	356	544	327	23	29	0	0	336	164	325	159
3	ನಿಗಮ/ಮಂಡಳಿಗಳು ಮತ್ತು ಸಹಕಾರ ಸಂಸ್ಥೆಗಳು	3570	1127	2616	589	388	133	566	135	2454	713	2177	503
ಒಟ್ಟು		**14357**	**4452**	**11779**	**3272**	**1956**	**767**	**622**	**143**	**11090**	**3036**	**10537**	**2763**
		18809		**15051**		**2723**		**765**		**14126**		**13300**	

ವಿವಿಧ ಇಲಾಖೆಗಳಲ್ಲಿ ಬ್ಯಾಕ್‌ಲಾಗ್ ಹುದ್ದೆ ಭರ್ತಿಗೆ ಸ್ಪಷ್ಟ ಖಾಲಿ ಹುದ್ದೆಗಳು ಇಲ್ಲವಾದ್ದರಿಂದ ಬ್ಯಾಕ್‌ಲಾಗ್ ಹುದ್ದೆಗಳ ಮೇಲಿನ ಸಂಪುಟ ಉಪ ಸಮಿತಿಯು ಭವಿಷ್ಯದಲ್ಲಿ ಯಾವಾಗ ಹುದ್ದೆಗಳು ತೆರವಾಗುತ್ತವೆಯೋ ಆಗ ೨೪೯೮ ಹುದ್ದೆಗಳನ್ನು ಭರ್ತಿ ಮಾಡಲು ತೀರ್ಮಾನಿಸಿದೆ. ವಿವಿಧ ಸಂಸ್ಥೆಗಳಲ್ಲಿ ಇರುವ ಅಂತಹ ಖಾಲಿ ಹುದ್ದೆಗಳ ವಿವರವನ್ನು ಕೆಳಕಂಡ ಕೋಷ್ಟಕವು ನೀಡುತ್ತದೆ.

ಕೋಷ್ಟಕ ೫.೨. ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ ಪ್ರಾಧಿಕಾರ ಇಲಾಖೆಗಳ ವಿವರ

ಕ್ರಸಂ.	ನೇಮಕಾತಿ ಪ್ರಾಧಿಕಾರ ಇಲಾಖೆಗಳು	ಎಸ್.ಸಿ.	ಎಸ್.ಟಿ.
೧	ಜಿಐಎ ಪದವಿ ಕಾಲೇಜು	೬೯೨	೩೧೪
೨	ಜಿಐಎ ಪದವಿ ಪೂರ್ವ ಕಾಲೇಜು	೧೩೫	–
೩	ಜಿಐಎ ಇಂಜಿನಿಯರಿಂಗ್ ಕಾಲೇಜು	೧೦೦	೯೦
೪	ಜಿಐಎ ಪಾಲಿಟೆಕ್ನಿಕ್‌ಗಳು	೧೯	೧೪
೫	ಜಿಐಎ ಪ್ರೌಢಶಾಲೆಗಳು	೯೨	೧೦೭
೬	ಜಿಐಎ ಪ್ರಾಥಮಿಕ ಶಾಲೆಗಳು	೬೬	೩೫
೭	ಗಣಿ ಮತ್ತು ಭೂಗರ್ಭಶಾಸ್ತ್ರ	–	೧
೮	ರೇಷ್ಮೆ	೧೦೦	೨೬
೯	ಲೋಕೋಪಯೋಗಿ ಮತ್ತು ಜಲಸಂಪನ್ಮೂಲ	೩೨೦	–
೧೦	ಸಹಕಾರಿ ಲೆಕ್ಕಪರಿಶೋಧನೆ	೨	೧
೧೧	ರಾಜ್ಯ ಪತ್ರಾಗಾರ	–	೧
೧೨	ನೋಂದಣಿ ಮತ್ತು ಮುದ್ರಾಂಕ(೧೮.೪.೦೫ರಲ್ಲಿದ್ದಂತೆ)	೧೪	೧೨
೧೩	ಆರ್ಕಿಯಾಲಜಿ ಮತ್ತು ಮ್ಯೂಸಿಯಂ, ಬಳ್ಳಾರಿ	೨	೨
೧೪	ವಾಣಿಜ್ಯ ಮತ್ತು ಕೈಗಾರಿಕೆ	೩	೧
	ಒಟ್ಟು	೧೫೪೫	೬೦೪
	ನಿಗಮ ಮತ್ತು ಮಂಡಳಿಗಳು		
೧೫	ಸಕ್ಕರೆ ಕಾರ್ಖಾನೆಗಳು	೧೮೭	೩೯
೧೬	ಕೊಳಚೆ ನಿರ್ಮೂಲನಾ ಮಂಡಳಿ	೪	೪
೧೭	ಕರ್ನಾಟಕ ಕೈಮಗ್ಗ ನೇಕಾರರ ಸಹಕಾರ ಬ್ಯಾಂಕ್	೧೩	೨
೧೮	ಕರ್ನಾಟಕ ರಾಜ್ಯ ಕೈಗಾರಿಕಾ ಸಹಕಾರ ಬ್ಯಾಂಕ್	೨೫	೧೦

೧೯	ಕರ್ನಾಟಕ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಮಂಡಳಿ	೯	೨
೨೦	ಡಿಸಿಸಿ ಬ್ಯಾಂಕುಗಳು	೧	೧
	ಒಟ್ಟು	೨೩೯	೫೮
	ವಿಶ್ವವಿದ್ಯಾಲಯಗಳು		
	ಕರ್ನಾಟಕ ವಿಶ್ವವಿದ್ಯಾಲಯ	೨೧	೨೧
	ಮಂಗಳೂರು ವಿಶ್ವವಿದ್ಯಾಲಯ	೨	೮
	ಒಟ್ಟು	೨೩	೨೯

ನವಚೇತನ

ನವಚೇತನ ಇದು ರಾಜ್ಯ ಸರ್ಕಾರವು ೧೯೯೬-೯೭ರಿಂದ ಕೈಗೆತ್ತಿಕೊಂಡಿರುವ ಪರಿಶಿಷ್ಟ ಜಾತಿಯ ನಿರುದ್ಯೋಗಿ ಯುವಕ/ಯುವತಿಯರಿಗೆ ತರಬೇತಿ ನೀಡುವ ಕಾರ್ಯಕ್ರಮದ ಹೆಸರು. ಈ ಯೋಜನೆಯನ್ನು ೨೦೦೫-೦೬ನೇ ಸಾಲಿನಿಂದ ರಾಜ್ಯಮಟ್ಟದಿಂದ ಕೈಬಿಟ್ಟು ಜಿಲ್ಲಾ ಮಟ್ಟದ ಯೋಜನೆಯನ್ನಾಗಿ ವರ್ಗಾಯಿಸಲಾಗಿದೆ.

ವಿವರಣೆ ಮತ್ತು ಉದ್ದೇಶ: ಸಮಾಜ ಕಲ್ಯಾಣ ಇಲಾಖೆಯು ಬಡಗಿ, ಕಮ್ಮಾರಿಕೆ, ಫಿಟ್ಟರ್ಸ್, ಲೇತ್, ಆಟೋಮೊಬೈಲ್, ಗಾರ್ಮೆಂಟ್ಸ್, ಹೋಟೆಲ್ ಉದ್ಯಮ, ಚರ್ಮ ಉದ್ಯಮ, ಐಟಿ ವಲಯ, ಹಾರ್ಡ್‌ವೇರ್ ವಲಯ, ಟಿವಿ ರಿಪೇರಿ, ಗೃಹೋಪಯೋಗಿ ವಸ್ತುಗಳ ರಿಪೇರಿ, ಸ್ಕ್ರೀನ್ ಪ್ರಿಂಟಿಂಗ್ ಇತ್ಯಾದಿಗಳಲ್ಲಿ ಪರಿಶಿಷ್ಟ ಜಾತಿಗಳ ಯುವಕರಿಗೆ ಪ್ರಮುಖವಾಗಿ ಅವರನ್ನು ಸ್ವಾವಲಂಬಿಗಳನ್ನಾಗಿಸುವ ಮತ್ತು ಸ್ವಯಂ ಉದ್ಯೋಗ ಯೋಜನೆಗಳನ್ನು ಕೈಗೊಳ್ಳುವ ಹಾಗೂ ಕುಶಲ ಉದ್ಯೋಗಾವಕಾಶಗಳನ್ನು ಬಳಸಿಕೊಳ್ಳುವ ಉದ್ದೇಶದಿಂದ ಅವರ ವಿದ್ಯಾರ್ಹತೆ, ಆಸಕ್ತಿ ಮತ್ತು ಕುಶಲತೆಯನ್ನು ಆಧರಿಸಿ ತರಬೇತಿ ನೀಡುತ್ತದೆ. ತರಬೇತಿಯನ್ನು ಸರ್ಕಾರಿ, ಅರೆ ಸರ್ಕಾರಿ, ಸಾರ್ವಜನಿಕ ಕ್ಷೇತ್ರ ಮತ್ತು ಪ್ರತಿಷ್ಠಿತ ಖಾಸಗಿ ಸಂಸ್ಥೆಗಳಿಂದ ದೊರಕಿಸಲಾಗುವುದು.

ಪರೀಕ್ಷಾ ಪೂರ್ವ ತರಬೇತಿ ಕೇಂದ್ರಗಳು

ಕೇಂದ್ರ ಪ್ರಾಯೋಜಿತ ಕೋಚಿಂಗ್ ಮತ್ತು ತತ್ಸಂಬಂಧ ಯೋಜನೆಗಳು ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ/ ಓಬಿಸಿಗಳಿಗೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಬೆಂಗಳೂರಿನಲ್ಲಿರುವ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ ಕೋಚಿಂಗ್ ನೀಡಲಾಗುವುದು.

ವಿವರಣೆ : ಬೆಂಗಳೂರಿನಲ್ಲಿ ಪರೀಕ್ಷಾ ಪೂರ್ವ ತರಬೇತಿ ಕೇಂದ್ರ(ಪಿಇಟಿಸಿ) ಇದ್ದು, ಈ ಕೇಂದ್ರವು ಯುಪಿಎಸ್‌ಸಿ/ಕೆಪಿಎಸ್‌ಸಿ/ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳು ನಡೆಸುವ ಸಿವಿಲ್ ಸರ್ವಿಸ್

ಪರೀಕ್ಷೆ, ರೈಲ್ವೆ ನೇಮಕಾತಿ ಮಂಡಳಿ/ಬ್ಯಾಂಕಿಂಗ್ ಸೇವಾ ಪರೀಕ್ಷೆ ಇತ್ಯಾದಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ/ಓಬಿಸಿ ವಿದ್ಯಾರ್ಥಿಗಳಿಗೆ ಕೋಚಿಂಗ್ ನೀಡಲಾಗುವುದು. ಈ ಪಿಇಟಿಸಿಗಳಲ್ಲಿ ಕೋಚಿಂಗ್ ಪಡೆದುಕೊಳ್ಳುವ ವಿದ್ಯಾರ್ಥಿಗಳಿಗೆ ಸ್ಟೈಫಂಡ್ ನೀಡಲಾಗುವುದು.

ಉದ್ದೇಶ : ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಡೆಸುವ ಎಲ್ಲಾ ರೀತಿಯ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪಿಇಟಿಸಿಗಳಲ್ಲಿ ಎಸ್‌ಸಿ/ಎಸ್‌ಟಿ/ಒಬಿಸಿ ಅಭ್ಯರ್ಥಿಗಳಿಗೆ ಕೋಚಿಂಗ್ ನೀಡುವ ಮೂಲಕ ವಿವಿದ ನಾಗರಿಕ ಸೇವೆಗಳಲ್ಲಿ ಎಸ್‌ಸಿ/ಎಸ್‌ಟಿಗಳ ಪ್ರಾತಿನಿಧ್ಯವನ್ನು ಸುಧಾರಿಸಲಾಗುವುದು.

ಅರ್ಹತೆ:

೧. ಆತ/ಆಕೆ ಎಸ್‌ಸಿ/ಒಬಿಸಿ ವರ್ಗಕ್ಕೆ ಸೇರಿರಬೇಕು

೨. ೧೮ರಿಂದ ೩೫ರ ವಯೋಮಿತಿಯೊಳಗಿರಬೇಕು.

೩. ಪದವಿ ಕನಿಷ್ಟ ವಿದ್ಯಾರ್ಹತೆಯಾಗಿರುವ ಐಎಎಸ್/ಐಪಿಎಸ್ ಕೋಚಿಂಗ್ ಹೊರತುಪಡಿಸಿ ಉಳಿದೆಲ್ಲಾ ಎಸ್‌ಎಸ್‌ಎಲ್‌ಸಿ ತೇರ್ಗಡೆ ಕನಿಷ್ಠ ವಿದ್ಯಾರ್ಹತೆಯಾಗಿದೆ.

೪. ಅಭ್ಯರ್ಥಿಯ ಕುಟುಂಬದ ಆದಾಯಮಿತಿಯು ವಾರ್ಷಿಕ ರೂ. ೧೦೦ ಲಕ್ಷದೊಳಗಿರತಕ್ಕದ್ದು.

ಇತರೆ ಯೋಜನೆಗಳು

ಅಸ್ಪೃಶ್ಯತೆ ನಿವಾರಣೆ– ಅಂತರ್‌ಜಾತಿ ವಿವಾಹವಾದ ಜೋಡಿಗೆ ಆರ್ಥಿಕ ನೆರವು.

ಕಾನೂನು ಪದವಿಧರರಿಗೆ ಆರ್ಥಿಕ ನೆರವು

ಅಮಾನವೀಯ ಕೃತ್ಯಗಳಿಗೆ ಬಲಿಯಾದ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಜನರು ಅಥವಾ ಅವರ ಅವಲಂಬಿತರಿಗೆ ಪರಿಹಾರ ಮತ್ತು ಪುನರ್ವಸತಿ ಒದಗಿಸುವ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಗಳ (ಶೋಷಣೆ ತಡೆ) ಕಾಯಿದೆ, ೧೯೮೯ರ ಅನುಷ್ಠಾನಗೊಳಿಸುವ ಕೇಂದ್ರೀಯ ಪ್ರಾಯೋಜಿತ ಕಾರ್ಯಕ್ರಮ.

ಪರಿಶಿಷ್ಟ ಜಾತಿಯ ಕಾನೂನು ಪದವೀಧರರಿಗೆ ಆಡಳಿತ ನ್ಯಾಯದಲ್ಲಿ ತರಬೇತಿ

ಯೋಜನೆ: ಅಸ್ಪೃಶ್ಯತೆ ನಿವಾರಣೆ ಅಂತರ್‌ಜಾತಿ ವಿವಾಹದ ದಂಪತಿಗಳಿಗೆ ಹಣಕಾಸಿ ನೆರವು.

ರಾಜ್ಯ ಸರ್ಕಾರವು ಅಸ್ಪೃಶ್ಯತೆ ನಿವಾರಣೆಗಾಗಿ ಪ್ರಚಾರ, ಶೈಕ್ಷಣಿಕ ಕಾರ್ಯಕ್ರಮಗಳು, ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸುವುದು ಮತ್ತು ಪರಿಶಿಷ್ಟ ಜಾತಿಗಳವರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಅವಕಾಶಗಳ ಮೂಲಕ ಹಲವಾರು ಕಾರ್ಯಕ್ರಮಗಳನ್ನು ಆರಂಭಿಸಿದೆ. ಅಂತರ್ಜಾತಿ ವಿವಾಹವಾದ ದಂಪತಿಗಳಿಗೆ ಆರ್ಥಿಕ ನೆರವು ನೀಡುವುದು ಇಂತಹ ಕಾರ್ಯಕ್ರಮ ಗಳಲ್ಲೊಂದಾಗಿದೆ.

ಯೋಜನೆ: ಅಂತರ್ಜಾತಿ ವಿವಾಹವಾದ ದಂಪತಿಗಳಿಗೆ ರೂ. ೫೦,೦೦೦ಗಳ ಆರ್ಥಿಕ ನೆರವು ನೀಡಲಾಗುವುದು. ಇದೊಂದು ಕೇಂದ್ರ ಪ್ರಾಯೋಜಿತ ಕಾರ್ಯಕ್ರಮವಾಗಿದ್ದು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ವೆಚ್ಚವನ್ನು ಸಮನಾಗಿ ಅಂದರೆ ೫೦:೫೦ರಂತೆ ಹಂಚಿಕೊಳ್ಳುತ್ತವೆ.

ವಿವರಣೆ :

೧. ಅಂತರ್ಜಾತಿ ವಿವಾಹವಾದ ಜೋಡಿಗಳಿಗೆ ರೂ. ೫೦,೦೦೦ಗಳನ್ನು ೪ ಕಂತುಗಳಲ್ಲಿ ನೀಡಲಾಗುವುದು. ಈ ಮೊತ್ತದಲ್ಲಿ ರೂ. ೨೫,೦೦೦ಗಳನ್ನು ಎನ್‌ಎಸ್‌ಸಿ ರೂಪದಲ್ಲಿ ಮತ್ತು ಬಾಕಿ ಮೊತ್ತವನ್ನು ನಗದು ರೂಪದಲ್ಲಿ ನೀಡಲಾಗುವುದು.

೨. ಅರ್ಜಿದಾರರು ಒದಗಿಸಿದ ಮಾಹಿತಿಗಳ ಸತ್ಯಾಸತ್ಯತೆಯನ್ನು ಸಂಬಂಧಿತ ತಾಲೂಕುಗಳ ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳು ಪರಿಶೀಲನೆ ನಡೆಸುತ್ತಾರೆ. ಅರ್ಜಿ ಮತ್ತು ಪರಿಶೀಲನಾ ವರದಿಗಳನ್ನು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ ಮೂಲಕ ಜಿಲ್ಲೆಯ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಪರಿಗಣನೆಗಾಗಿ ಸಲ್ಲಿಸಲಾಗುವುದು. ಅಂತಹ ನೆರವನ್ನು ಬಯಸುವವರು ನಿಗದಿತ ಅರ್ಜಿ ನಮೂನೆಯಲ್ಲಿ ಸಂಬಂಧಿತ ತಾಲೂಕಿನ ತಹಶೀಲ್ದಾರ್ ಅವರಲ್ಲಿ ಅರ್ಜಿ ಸಲ್ಲಿಸಬೇಕು.

ಅರ್ಹತೆ:

೧. ಅಂತರ್ಜಾತಿ ವಿವಾಹ ಸಂದರ್ಭಗಳಲ್ಲಿ ಇಬ್ಬರಲ್ಲೊಬ್ಬರು ಪರಿಶಿಷ್ಟ ಜಾತಿಯ ವ್ಯಕ್ತಿಯಾಗಿರಬೇಕು.

೨. ದಂಪತಿಗಳ ಒಟ್ಟಾರೆ ವಾರ್ಷಿಕ ಆದಾಯ ರೂ. ೫೦,೦೦೦ ಮೀರುವಂತಿಲ್ಲ.

೩. ಈ ಯೋಜನೆಯ ಸೌಲಭ್ಯ ಪಡೆಯಲು ದಂಪತಿಗಳು ಕಾನೂನುಬದಧವಾಗಿ ಮದುವೆಯಾಗಿರ ಬೇಕಲ್ಲದೇ, ಯಾವುದೇ ಪದ್ಧತಿಯಲ್ಲಿ ವಿವಾಹವಾಗಿದ್ದರೂ, ಉಪನೋಂದಣಾಧಿಕಾರಿ ಕಚೇರಿ ಯಲ್ಲಿ ವಿವಾಹದ ನೋಂದಣಿ ಮಾಡಿಸಿಕೊಂಡಿರಬೇಕು.

೪. ಆತ/ಆಕೆ ಎರಡನೇ ವಿವಾಹಕ್ಕೆ ಅನುದಾನ ಪಡೆಯಲು ಅರ್ಹರಾಗಿರುವುದಿಲ್ಲ.

ಅಗತ್ಯ ದಾಖಲಾತಿಗಳು:

೧. ಉಪ ನೋಂದಣಾಧಿಕಾರಿಗಳು ನೀಡಿರುವ ವಿವಾಹ ಪ್ರಮಾಣ ಪತ್ರ.

೨. ಸಕ್ಷಮ ಪ್ರಾಧಿಕಾರವು ನೀಡಿರುವ ಪತಿ ಮತ್ತು ಪತ್ನಿಯರ ಪ್ರತ್ಯೇಕ ಆದಾಯ ಪ್ರಮಾಣ ಪತ್ರಗಳು.

೩. ಸಕ್ಷಮ ಪ್ರಾಧಿಕಾರವು ನಿಗದಿತ ನಮೂನೆಯಲ್ಲಿ ನೀಡಿರುವ ಪತಿ ಮತ್ತು ಪತ್ನಿಯ ಜಾತಿ ಪ್ರಮಾಣ ಪತ್ರ.

೪. ದಂಪತಿಗಳ ಜೋಡಿ ಭಾವಚಿತ್ರ

೫. ಸಕ್ಷಮ ಪ್ರಾಧಿಕಾರವು ನೀಡಿರುವ ವಾಸಸ್ಥಳ ಪ್ರಮಾಣ ಪತ್ರ

ಕಾನೂನು ಪದವೀಧರರಿಗೆ ಆರ್ಥಿಕ ನೆರವು

ನಿರುದ್ಯೋಗಿ ಕಾನೂನು ಪದವೀಧರರು ವಕೀಲಿ ವೃತ್ತಿ ಆರಂಭಿಸಲು ಅನುವಾಗಲು ಬಾರ್ ಕೌನ್ಸಿಲ್‌ನಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಮತ್ತು ಕಾನೂನು ಪುಸ್ತಕಗಳನ್ನು, ಪೀಠೋಪಕರಣಗಳು ಇತ್ಯಾದಿಗಳನ್ನು ಖರೀದಿಸಲು ಅನುಕೂಲವಾಗುವಂತೆ ರೂ. ೫೦೦೦ಗಳ ಆರ್ಥಿಕ ನೆರವನ್ನು ಮಂಜೂರು ಮಾಡಲಾಗುವುದು.

ಯೋಜನೆ: ಆರ್ಥಿಕ ನೆರವನ್ನು ಪರಿಶಿಷ್ಟ ಜಾತಿ ಕಾನೂನು ಪದವೀಧರರಿಗೆ ನೀಡಲಾಗುವುದು. ಈ ಯೋಜನೆಯನ್ನು ರಾಜ್ಯ ಸರ್ಕಾರದ ಸಂಪನ್ಮೂಲದಿಂದ ಜಾರಿಗೊಳಿಸಲಾಗುವುದು.

ವಿವರಣೆ: ನಿರುದ್ಯೋಗಿ ಕಾನೂನು ಪದವೀಧರರು ವಕೀಲಿ ವೃತ್ತಿ ಆರಂಭಿಸಲು ಅನುವಾಗಲು ಬಾರ್ ಕೌನ್ಸಿಲ್‌ನಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಮತ್ತು ಕಾನೂನು ಪುಸ್ತಕಗಳು, ಪೀಠೋಪಕರಣಗಳು ಇತ್ಯಾದಿಗಳನ್ನು ಖರೀದಿಸಲು ಅನುಕೂಲವಾಗುವಂತೆ ಆರ್ಥಿಕ ನೆರವನ್ನು ಮಂಜೂರು ಮಾಡಲಾಗುವುದು. ರೂ. ೫೦೦೦ಗಳ ಈ ನೆರವು ಒಮ್ಮೆ ಮಾತ್ರ ಲಭ್ಯವಿರುತ್ತದೆ. ಅರ್ಹ ಅಭ್ಯರ್ಥಿಗಳು ಸಂಬಂಧಿತ ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಅಗತ್ಯ ದಾಖಲಾತಿಗಳೊಂದಿಗೆ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು.

ಅರ್ಹತೆ: ೧. ಅಭ್ಯರ್ಥಿಯು ಕಾನೂನು ಪದವಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.

೨. ಪರಿಶಿಷ್ಟ ಜಾತಿಗೆ ಸೇರಿದವರಾಗಿರಬೇಕು.

ಅಗತ್ಯ ದಾಖಲಾತಿಗಳು : ೧. ಸಕ್ಷಮ ಪ್ರಾಧಿಕಾರವು ನಿಗದಿತ ನಮೂನೆಯಲ್ಲಿ ನೀಡಿರುವ ಜಾತಿ ಪ್ರಮಾಣಪತ್ರ

೨. ಸಕ್ಷಣ ಪ್ರಾಧಿಕಾರವು ನೀಡಿರುವ ವಾಸಸ್ಥಳ ಪ್ರಮಾಣಪತ್ರ

೩. ಆದಾಯ ಪ್ರಮಾಣ ಪತ್ರ

೪. ಕಾನೂನು ಪದವಿ ಪ್ರಮಾಣಪತ್ರ

ಅಮಾನವೀಯ ಕೃತ್ಯಗಳಿಗೆ ಬಲಿಯಾದ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಜನರು ಅಥವಾ ಅವರ ಅವಲಂಬಿತರಿಗೆ ಪರಿಹಾರ ಮತ್ತು ಪುನರ್ವಸತಿ ಒದಗಿಸುವ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಗಳ (ಶೋಷಣೆ ತಡೆ) ಕಾಯಿದೆ, ೧೯೮೯ರ ಅನುಷ್ಠಾನಗೊಳಿಸುವ ಕೇಂದ್ರಿಯ ಪ್ರಾಯೋಜಿತ ಕಾರ್ಯಕ್ರಮ.

ಅಮಾನವೀಯ ಕೃತ್ಯಗಳಿಗೆ ಬಲಿಯಾದ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಜನರು ಅಥವಾ ಅವರ ಅವಲಂಬಿತರಿಗೆ ಪರಿಹಾರ ಮತ್ತು ಪುನರ್ವಸತಿ ಒದಗಿಸುವ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಗಳ (ಶೋಷಣೆ ತಡೆ) ಕಾಯಿದೆ, ೧೯೮೯ರ ಅನುಷ್ಠಾನಗೊಳಿಸುವ ಕೇಂದ್ರಿಯ ಪ್ರಾಯೋಜಿತ ಕಾರ್ಯಕ್ರಮ.

ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಜನರನ್ನು ಇತರ ಸಮುದಾಯಗಳವರು ಶೋಷಿಸುವುದನ್ನು ತಡೆಗಟ್ಟಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ (ಶೋಷಣೆ ತಡೆ) ಕಾಯಿದೆ ೧೯೮೯ನ್ನು ೩೦.೦೧.೧೯೯೦ರಿಂದ ಜಾರಿಗೆ ತರಲಾಗಿದೆ. ಶೋಷಣೆ ತಡೆ ಕಾಯಿದೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿರುದ್ಧ ಎಸಗಲಾಗುವ ಕೆಲ ಅಪರಾಧಗಳನ್ನು ಕಾಯಿದೆಯ ಉದ್ದೇಶಕ್ಕಾಗಿ "ಶೋಷಣೆ" ಎಂದು ಗುರುತಿಸಿದೆ. ಈ ಕಾಯಿದೆಯಡಿಯಲ್ಲಿ ಸಮಗ್ರ ನಿಯಮಾವಳಿಗಳನ್ನು ೧೯೯೫ರಲ್ಲಿಯೇ ಅಧಿಸೂಚಿಸಲಾಗಿದ್ದು ಇನ್ನಿತರ ಅಂಶಗಳೊಂದಿಗೆ ಪರಿಹಾರ ಮತ್ತು ಪುನರ್ವಸತಿಯ ನಿಯಮಗಳನ್ನು ಅದು ಒಳಗೊಂಡಿದೆ. ಅಮಾನವೀಯ ಕೃತ್ಯಗಳಿಗೆ ಬಲಿಯಾದವರು ಅಥವಾ ಅವರ ಅವಲಂಬಿತರಿಗೆ ಪರಿಹಾರ ಮತ್ತು ಪುನರ್ವಸತಿ ಒದಗಿಸಲು ಕೇಂದ್ರ ಪ್ರಾಯೋಜಿತ ಯೋಜನೆಯಾದ ಶೋಷಣೆ ತಡೆ ಕಾಯಿದೆ- ೧೯೮೯ರ ಅನುಷ್ಠಾನದ ಅಡಿಯಲ್ಲಿ ಭಾರತ ಸರ್ಕಾರವು ಕೇಂದ್ರದ ನೆರವನ್ನು ೫೦:೫೦ರ ಆಧಾರದಲ್ಲಿ ಬಿಡುಗಡೆ ಮಾಡುತ್ತದೆ.

ಯೋಜನೆ ವಿವರಣೆ: ಅಮಾನವೀಯ ಕೃತ್ಯಗಳಿಗೆ ಬಲಿಯಾದವರು ಅಥವಾ ಅವರ ಅವಲಂಬಿತರಿಗೆ ಪರಿಹಾರ ಮತ್ತು ಪುನರ್ವಸತಿ ಒದಗಿಸುವ ಶೋಷಣೆ ತಡೆ ಕಾಯಿದೆ ಅಡಿಯಲ್ಲಿ ರಾಜ್ಯ ಸರ್ಕಾರವು ಹಲವಾರು ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅವುಗಳಲ್ಲಿ ಕೆಲವೆಂದರೆ:

೧. ಕಾನೂನು ನೆರವು ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಒದಗಿಸುವುದು.

೨. ಅಮಾನವೀಯ ಕೃತ್ಯಗಳಿಗೆ ಬಲಿಯಾದವರು ಮತ್ತು ಸಾಕ್ಷಿಗಳಿಗೆ ಪ್ರವಾಸ ಮತ್ತು ನಿರ್ವಹಣಾ ವೆಚ್ಚ ನೀಡುವುದು.

೩. ಪ್ರಾಸಿಕ್ಯೂಷನ್ ಆರಂಭಿಸುವುದು ಮತ್ತು ಮೇಲ್ವಿಚಾರಣೆ ನಿರ್ವಹಣೆಗೆ ಅಧಿಕಾರಿಗಳನ್ನು ನೇಮಕ ಮಾಡುವುದು.

೪. ಅಂತಹ ಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ವಿವಿಧ ಹಂತಗಳಲ್ಲಿ ಸಮಿತಿಗಳನ್ನು ರೂಪಿಸುವುದು.

೫. ಉತ್ತಮ ಅನುಷ್ಠಾನಕ್ಕಾಗಿ ಕ್ರಮಗಳನ್ನು ಸೂಚಿಸುವ ಉದ್ದೇಶದಿಂದ ಕಾಯಿದೆಯ ಕಾರ್ಯ ನಿರ್ವಹಣೆಯ ಕುರಿತಾಗಿ ಕಾಲಕಾಲಕ್ಕೆ ಸರ್ವೇ ನಡೆಸುವುದು.

೬. ಶೋಷಣೆ ಪೀಡಿತ ಪ್ರದೇಶವನ್ನು ಗುರುತಿಸುವುದು ಮತ್ತು ಅಂತಹ ಪ್ರದೇಶದಲ್ಲಿ ಪರಿಶಿಷ್ಟ ಜಾತಿಗಳು/ ಪರಿಶಿಷ್ಟ ವರ್ಗಗಳವರ ಸುರಕ್ಷತೆಯನ್ನು ಖಾತರಿಪಡಿಸಲು ಕ್ರಮಗಳನ್ನು ಕೈಗೊಳ್ಳುವುದು.

೭. ಅಮಾನವೀಯ ಕೃತ್ಯಗಳಿಗೆ ಬಲಿಯಾದವರು/ಅವಲಂಬಿತರಿಗೆ ಪರಿಹಾರ ಮತ್ತು ಪುನರ್ವಸತಿ.

೮. ೧. ಅಮಾನವೀಯ ಕೃತ್ಯಗಳಿಗೆ ಬಲಿಯಾದವರ ಪರಿಹಾರ ಮತ್ತು ಪುನರ್ವಸತಿಯು ಈ ಕೆಳಕಂಡ ಅಂಶಗಳನ್ನು ಒಳಗೊಂಡಿದೆ.

೨. (ಎ) ಪರಿಹಾರದ ಮೊತ್ತವು ಅಪರಾಧದ ರೀತಿಯ ಆಧಾರದ ಮೇಲೆ ರೂ. ೨೫,೦೦೦ರಿಂದ ರೂ. ೨ ಲಕ್ಷಗಳ ವರೆಗೆ ಇರುತ್ತದೆ.

(ಬಿ) ಮೃತ ಎಸ್‌ಸಿ/ಎಸ್‌ಟಿಗಳ ವಿಧವೆ ಮತ್ತು / ಅಥವಾ ಇತರ ಅವಲಂಬಿತರಿಗೆ ರೂ. ೧೦೦೦ಗಳ ಮಾಶಾಸನ ಅತವಾ ಮೃತರ ಕುಟುಂಬದ ಓರ್ವ ಸದಸ್ಯರಿಗೆ ಉದ್ಯೋಗ/ ಅಥವಾ ಕೃಷಿ ಭೂಮಿ ಒದಗಿಸುವುದು, ಅಗತ್ಯಬಿದ್ದರೆ ಒಂದು ಮನೆಯ ಪೂರ್ಣ ಖರೀದಿ.

(ಸಿ) ಬಲಿಯಾದವರ ಮಕ್ಕಳ ವಿದ್ಯಾಭ್ಯಾಸ ಮತ್ತು ನಿರ್ವಹಣೆಯ ಪೂರ್ಣ ವೆಚ್ಚ. ಮಕ್ಕಳನ್ನು ಇಲಾಖೆಯ ಆಶ್ರಮ ಶಾಲೆಗಳು/ ವಸತಿ ಶಾಲೆಗಳಿಗೆ ಸೇರಿಸಬಹುದು.

(ಡಿ) ಪಾತ್ರೆಗಳು ಮತ್ತು ಮೂರು ತಿಂಗಳ ದಿನಸಿಗೆ ವ್ಯವಸ್ಥೆ

(ಇ) ಒಂದು ವೇಳೆ ಮನೆಯನ್ನು ಸುಟ್ಟಿದ್ದರೆ ಅಥವಾ ಹಾಳುಗೆಡವಿದ್ದರೆ ಸರ್ಕಾರಿ ವೆಚ್ಚದಲ್ಲಿ ಇಟ್ಟಿಗೆ/ಸೈಜು ಕಲ್ಲಿನಲ್ಲಿ ಮನೆ ಕಟ್ಟಿಸಿಕೊಡುವುದು.

ಶೋಷಣೆಗೆ ಗುರಿಯಾದವರಿಗೆ ಪರಿಹಾರ ಮತ್ತು ಪುನರ್ವಸತಿಗಳೊಂದಿಗೆ ಅಪರಾಧದ ಪ್ರಮಾಣಕ್ಕೆ ತಕ್ಕಂತೆ ಅಮಾನವೀಯ ಕೃತ್ಯ ನಡೆಸಿದವರಿಗೆ ಕನಿಷ್ಠ ಆರು ತಿಂಗಳು ಮತ್ತು ಗರಿಷ್ಠ ಐದು ವರ್ಷಕ್ಕೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ರೂ. ೧೦೦ರಿಂದ ೫೦೦ರ ದಂಡದೊಂದಿಗೆ ಶಿಕ್ಷಿಸಬಹುದು.

ಕೆಲವು ಪ್ರಕರಣಗಳಲ್ಲಿ ಎಸ್‌ಸಿ/ಎಸ್‌ಟಿ ಜನಾಂಗದ ವ್ಯಕ್ತಿ ಎಸ್‌ಸಿ/ಎಸ್‌ಟಿ ಜನಾಂಗಕ್ಕೆ ಸೇರಿದ ವ್ಯಕ್ತಿ ಅಥವಾ ವ್ಯಕ್ತಿಗಳ ಆಸ್ತಿಗಳಿಗೆ ಹಾನಿಮಾಡಿದ ಅಥವಾ ಅಪರಾಧ ನಡೆಸುವ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ೧೦ ವರ್ಷ ಅಥವಾ ಹೆಚ್ಚಿನ ಅವಧಿಯ ಜೈಲು ಶಿಕ್ಷೆ ಅಥವಾ ಜೀವಾವಧಿ ಶಿಕ್ಷೆ ಹಾಗೂ ದಂಡದೊಂದಿಗೆ ಶಿಕ್ಷೆ ವಿಧಿಸಬಹುದಾಗಿದೆ.

ಅರ್ಹತೆ: ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಬಲಿಪಶು/ ಅಮಾವೀಯತೆಗೆ ಬಲಿಯಾದವರ ಅವಲಂಬಿತರು.

ಅಗತ್ಯ ದಾಖಲಾತಿಗಳು: ೧. ಜಾತಿ ಪ್ರಮಾಣ ಪತ್ರ

೨. ಎಫ್.ಐ.ಆರ್. ಪ್ರತಿ

೩. ಪೋಲೀಸಂ ಅಧೀಕ್ಷಕರ ವರದಿ

೪. ಮರಣೋತ್ತರ ಪರೀಕ್ಷೆ/ ವೈದ್ಯಕೀಯ ಪರೀಕ್ಷೆಯ ವರದಿ.

ಪರಿಶಿಷ್ಟ ಜಾತಿಗಳ ಕಾನೂನು ಪದವೀಧರರಿಗೆ ನ್ಯಾಯಾಧೀಕರಣ ಪದ್ಧತಿಯಲ್ಲಿ ತರಬೇತಿ

ಪರಿಶಿಷ್ಟ ಜಾತಿಗಳ ಬಹುತೇಕ ಕಾನೂನು ಪದವೀಧರರು ಹಣಕಾಸಿನ ಕೊರತೆಯಿಂದಾಗವಕೀಲಿ ವೃತ್ತಿಯನ್ನು ಕೈಗೆತ್ತಿಕೊಳ್ಳುತ್ತಿಲ್ಲ ಎನ್ನುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಸರ್ಕಾರವು ಪರಿಶಿಷ್ಟ ಜಾತಿಗಳ ಹೊಸ ಕಾನೂನು ಪದವೀಧರರಿಗೆ ಆರ್ಥಿಕ ನೆರವು ಮತ್ತು ನ್ಯಾಯದಾನ ಪದ್ಧತಿಯಲ್ಲಿ ತರಬೇತಿ ಸೌಲಭ್ಯವನ್ನು ಒದಗಿಸುತ್ತದೆ.

ಯೋಜನೆ: ಆಯ್ಕೆಯಾದ ಪರಿಶಿಷ್ಟ ಜಾತಿಯ ಕಾನೂನು ಪದವೀಧರರಿಗೆ ಮಾಸಿಕ ರೂ. ೧೦೦೦ಗಳ ಶಿಷ್ಯವೇತನವನ್ನು ನಾಲ್ಕು ವರ್ಷಗಳ ತರಬೇತಿ ಅವಧಿಯಲ್ಲಿ ನೀಡುತ್ತದೆ.

ವಿವರಣೆ:

೧. ತರಬೇತಿಯನ್ನು ಆಯಾ ಜಿಲ್ಲೆಗಳಲ್ಲೇ ನೀಡಲಾಗುವುದು.

೨. ಅಭ್ಯರ್ಥಿಗಳ ಆಯ್ಕೆಯನ್ನು ಜಿಲ್ಲಾಮಟ್ಟದಲ್ಲಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಅಧ್ಯಕ್ಷತೆಯಲ್ಲಿರುವ ಆಯ್ಕೆ ಸಮಿತಿಯಿಂದ ನಡೆಸಲಾಗುತ್ತದೆ. ಆಯ್ಕೆಯಾದ ಅಭ್ಯರ್ಥಿಗಳನ್ನು ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್/ಸರ್ಕಾರಿ ವಕೀಲರು ಅಥವಾ ಕನಿಷ್ಠ ೨೦ ವರ್ಷಕ್ಕೆ ಕಡಿಮೆ ಇಲ್ಲದ ಸೇವಾ ಅನುಭವಹೊಂದಿರುವ ವಕೀಲರ ಬಳಿ ತರಬೇತಿಗಾಗಿ ನಿಯೋಜಿಸಲಾಗುವುದು.

೩. ಸಂಬಂಧಿತ ವಿಶ್ವವಿದ್ಯಾಲಯಗಳು ಕಾನೂನು ಪದವಿಯ ಫಲಿತಾಂಶಗಳನ್ನು ಪ್ರಕಟಿಸಿದ ನಂತರ ಸದಸ್ಯ ಕಾರ್ಯದರ್ಶಿಯು ಸಮಿತಿಯ ಅನುಮತಿ ಪಡೆದು ಪರಿಶಿಷ್ಟ ಜಾತಿಯ ಕಾನೂನು ಪದವೀಧರರಿಂದ ಅರ್ಜಿಗಳನ್ನು ಆಹ್ವಾನಿಸುತ್ತಾರೆ. ಅರ್ಜಿ ಕರೆಯುವ ಅಧಿಸೂಚನೆಗೆ ಹೆಚ್ಚಿನ ಪ್ರಚಾರ ನೀಡಲಾಗುವುದು. ಕರ್ನಾಟಕ ಗೆಜೆಟ್ ಮತ್ತು ದಿನಪತ್ರಿಕೆಗಳಲ್ಲಿ ಇದನ್ನು ಪ್ರಕಟಿಸಲಾಗುವುದು ಅಧಿಸೂಚನೆಯನ್ನು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾ ಬಾರ್ ಅಸೋಸಿಯೇಷನ್ ಕಚೇರಿಗಳ ಪ್ರಕಟಣಾ ಫಲಕದಲ್ಲೂ ಪ್ರಕಟಿಸಲಾಗುವುದು.

೪. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಗೆಜೆಟ್ ಪ್ರಕಟಣೆಯ ದಿನಾಂಕದಿಂದ ಒಂದು ತಿಂಗಳಾಗಿರುತ್ತದೆ.

೫. ಸ್ವೀಕೃತ ಅರ್ಜಿಗಳನ್ನು ಸದಸ್ಯ ಕಾರ್ಯದರ್ಶಿಯು ಪರಿಶೀಲಿಸುತ್ತಾರೆ. ಅಪೂರ್ಣ ಅರ್ಜಿಗಳು/ ತಡವಾಗಿ ಬಂದ ಅರ್ಜಿಗಳು, ಅಗತ್ಯ ಷರತ್ತುಗಳನ್ನು ಪೂರೈಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

೬. ತರಬೇತಿಯ ಅವಧಿಯು ೪ ವರ್ಷಗಳಾಗಿದೆ ಮತ್ತು ಅಭ್ಯರ್ಥಿಯು ತರಬೇತಿಯನ್ನು ಮಧ್ಯದಲ್ಲಿಯೇ ಕೈಬಿಡುವಂತಿಲ್ಲ. ಒಂದು ವೇಳೆ ಅಭ್ಯರ್ಥಿಯು ಕೇಂದ್ರ/ರಾಜ್ಯ ಸರ್ಕಾರದಲ್ಲಿ ನೌಕರಿ ಪಡೆದಲ್ಲಿ ಈ ಷರತ್ತು ಅನ್ವಯವಾಗುವುದಿಲ್ಲ.

೭. ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ಹಿರಿಯ ವಕೀಲರಿಂದ ಮೇಲುಸಹಿ ಮಾಡಿಸಿದ ಮಾಸಿಕ ದಿನಚರಿಯನ್ನು ಸಲ್ಲಿಸಬೇಕು.

ಅರ್ಹತೆ:

೧. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನದಂದು ಗರಿಷ್ಠ ವಯೋಮಿತಿ ೩೫ ವರ್ಷಗಳಾಗಿರುತ್ತದೆ.

೨. ಪರಿಶಿಷ್ಟ ಜಾತಿಗಳ ಅಭ್ಯರ್ಥಿಗಳು ತಮ್ಮ ಕಾನೂನು ಪದವಿ ಮುಗಿಸಿದ ಎರಡು ವರ್ಷದೊಳಗಾಗಿ ಅರ್ಜಿ ಸಲ್ಲಿಸಬೇಕು.

೩. ಅಭ್ಯರ್ಥಿಗಳು ತಮ್ಮ ಹೆಸರನ್ನು ಬಾರ್ ಕೌನ್ಸಿಲ್‌ನಲ್ಲಿ ನೋಂದಾಯಿಸಿಕೊಂಡಿರಬೇಕು.

ಅಗತ್ಯ ದಾಖಲಾತಿಗಳು:

೧. ಸಕ್ಷಮ ಪ್ರಾಧಿಕಾರವು ನಿಗದಿತ ನಮೂನೆಯಲ್ಲಿ ನೀಡಿರುವ ಜಾತಿ ಪ್ರಮಾಣಪತ್ರ/ಆದಾಯ ಪ್ರಮಾಣಪತ್ರ

೨. ಕಾನೂನು ಪದವಿ ಪ್ರಮಾಣಪತ್ರ

೩. ವಯಸ್ಸಿನ ದೃಢೀಕರಣ(ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ ಅಥವಾ ಶಾಲೆ ಬಿಡುವ ಪ್ರಮಾಣಪತ್ರ)

ಅಂಬೇಡ್ಕರ್ ಸಂಶೋಧನಾ ಸಂಸ್ಥೆ

ಡಾ. ಅಂಬೇಡ್ಕರ್ ಸಂಶೋಧನಾ ಸಂಸ್ಥೆಯನ್ನು ಭಾರತ ರತ್ನ ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರು ದೇಶ ಮತ್ತು ಶೋಷಿತ ವರ್ಗಗಳಿಗೆ ಸಲ್ಲಿಸಿದ ಅಪೂರ್ವ ಸೇವೆಗಾಗಿ ಅವರ ಶತಮಾನೋತ್ಸವ(೧೯೯೧-೯೯೧) ಸ್ಮರಣೆಗಾಗಿ ೧೯೯೩-೯೪ರಲ್ಲಿ ಕರ್ನಾಟಕ ಸರ್ಕಾರವು ಸ್ಥಾಪಿಸಿತು.

ಸಂಸ್ಥೆಯು ಸಮಾಜ ಕಲ್ಯಾಣ ಇಲಾಖೆಯ ಆಡಳಿತ ನಿಯಂತ್ರಕ್ಕೊಳಪಟ್ಟಿರುತ್ತದೆ. ಸಂಸ್ಥೆಯ ಮುಖ್ಯ ಉದ್ದೇಶವು ಕರ್ನಾಟಕದಲ್ಲಿನ ಎಸ್‌ಸಿ/ಎಸ್‌ಟಿ ಜನರ ಸಾಮಾಜಿಕ-ಆರ್ಥಿಕ ಸ್ಥಿತಿಗತಿ ಅಧ್ಯಯನ, ಅವರ ಸಣ್ಣ ಮತ್ತು ದೊಡ್ಡ ಸಮಸ್ಯೆಗಳನ್ನು ಪಟ್ಟಿ ಮಾಡುವುದು, ಸಮುದಾಯದ ಅಗತಯತೆಗಳು ಮತ್ತಿತರ ವಿಷಯಗಳ ಕುರಿತು ಅಧ್ಯಯನ ನಡೆಸುವುದಾಗಿದೆ. ಅದರೊಂದಿಗೆ ಇಲಾಖೆಯ ಕಾರ್ಯಕ್ರಮಗಳು ಮತ್ತು ಚಾಲ್ತಿಯಲ್ಲಿರುವ ಯೋಜನೆಗಳ ಮೌಲ್ಯಮಾಪನ ಮತ್ತು ಈ ಯೋಜನೆಗಳು ಶೋಷಿತ ವರ್ಗಗಳ ಜನರಿಗೆ ತಲುಪುವಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಅಧ್ಯಯನ ನಡೆಸುತ್ತದೆ. ಏಕೆಂದರೆ ಅಧಿಕಾರಿಗಳ ತಪಾಸಣೆ ವರದಿಗಳಿಗಿಂತ ಈ ಅಧ್ಯಯನ ಹೆಚ್ಚು ವಿವರವಾಗಿರುತ್ತದೆ ಮತ್ತು ಸಮಸ್ಯೆಗಳತ್ತ ಹೆಚ್ಚಿನ ಬೆಳಕು ಚೆಲ್ಲುತ್ತದೆ.

ಅಂಬೇಡ್ಕರ್ ಸಂಶೋಧನಾ ಸಂಸ್ಥೆಯು ಎಸ್‌ಸಿ/ಎಸ್‌ಟಿ ಜನರ ಸಾಮಾಜಿಕ-ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ತಾಕತ್ತಿನ ಭವಿಷ್ಯದ ಸಾಧ್ಯತೆಗಳ ಬಗ್ಗೆ ಸಮಗ್ರ ಅಧ್ಯಯನ ನಡೆಸಲು

ಪ್ರಯತ್ನಿಸುವ ಉದ್ದೇಶವನ್ನು ಹೊಂದಿದೆ. ಎಸ್‌ಸಿ/ಎಸ್‌ಟಿ ಜನರ ಎಲ್ಲಾ ವಿಷಯಗಳಿಗೆ ಸಂಬಂಧಿಸಿದ ಅಂಕಿ ಅಂಶಗಳನ್ನು ಸಂಗ್ರಹಿಸುವುದು ಮತ್ತು ಅದನ್ನು ಸಂಶೋಧನೆ ಮತ್ತು ಪರಾಮರ್ಶನ ಕಾರ್ಯಕ್ಕೆ ದತ್ತಾಂಶ ಬ್ಯಾಂಕ್ ರೂಪದಲ್ಲಿ ಸಂಗ್ರಹಿಸುವುದು.

ಎಸ್‌ಸಿ/ಎಸ್‌ಟಿಗಳ ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳ ಅಧ್ಯಯನ ಮತ್ತು ಸರ್ವೇ, ಜಾತಿ ಮತ್ತು ಉಪಜಾತಿಗಳ ಕುರಿತು ಬುಡಕಟ್ಟುಗಳ ತುಲನಾತ್ಮಕ ಅಧ್ಯಯನ ಮತ್ತು ಮಾನವಶಾಸ್ತ್ರ ಅಧ್ಯಯನವನ್ನು ಕೈಗೆತ್ತಿಕೊಳ್ಳಲು, ಮೀಸಲಾತಿ ನೀತಿಗೆ ಸಂಬಂಧಿಸಿದಂತೆ ಸಮಾನಾರ್ತಕ ಪದಗಳ ಸೇರ್ಪಡೆ/ತೆಗೆದುಹಾಕಲು, ಎಸ್‌ಸಿಪಿ/ಟಿಎಸ್‌ಪಿಗಳ ಅನುಷ್ಠಾನದ ಸಂದರ್ಭದಲ್ಲಿ ಮಾದರಿ ಸರ್ವೇ ಮತ್ತು ಮೌಲ್ಯಮಾಪನ ಅಧ್ಯಯನ ಕೈಗೆತ್ತಿಕೊಳ್ಳಲು, ಕರ್ನಾಟಕದ ವಿವಿಧ ಭಾಗಗಳಲ್ಲಿ ಎಸ್‌ಸಿ/ಎಸ್‌ಟಿಗಳ ಸಮಸ್ಯೆಗಳ ಕುರಿತು ಅಧ್ಯಯನ ಕೈಗೆತ್ತಿಕೊಳ್ಳಲು ಉತ್ಸುಕರಾಗಿರುವ ಸಂಶೋದನಾ ವಿದ್ಯಾರ್ಥಿಗಳಿಗೆ (ಎಂ.ಫಿಲ್/ಪಿಎಚ್.ಡಿ) ನೆರವಾಗಲು, ಶೋಷಣ ಮತ್ತು ಅಸ್ಪೃಶ್ಯತೆಗಳ ಕುರಿತು ಮತ್ತು ಅವುಗಳನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ವಿಶೇಷ ಅಧ್ಯಯನ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಜಾರಿಗೊಳಿಸುತ್ತಿರುವ ಕಲ್ಯಾಣ ಕಾರ್ಯಕ್ರಮಗಳ ಪರಿಣಾಮವನ್ನು ಪರೀಕ್ಷೆ ಮತ್ತು ಮೌಲ್ಯಮಾಪನಕ್ಕಾಗಿ ನಿರ್ದಿಷ್ಟ ಮತ್ತು ಸಾಮಾನ್ಯ ಕ್ಷೇತ್ರಗಳಲ್ಲಿ ಸಂಶೋಧನೆ ನಡೆಸುವುದು.[೩]

ಭಾರತ ದೇಶವು ವ್ಯವಸಾಯಿಕ ದೇಶ, ಹಳ್ಳಿಗಳೇ ಇಲ್ಲಿಯ ಐಶ್ವರ್ಯದ ಆಧಾರ. ರೈತನೇ ಹಳ್ಳಿಗ ಮತ್ತು ರಾಷ್ಟ್ರದ ತಳಹದಿ. ಅವನ ಸಂಪತ್ತೇ ದೇಶದ ಸಂಪತ್ತು. ಅವನ ಭಾಗ್ಯವೇ ದೇಶದ ಭಾಗ್ಯ ಅವನ ಉದ್ಧಾರವೇ ದೇಶೋದ್ಧಾರ. ಗ್ರಾಮೀಣ ಜನರಲ್ಲಿ ಸುಖ ಸಂಪತ್ತು ಸಮೃದ್ಧಿಯಾಗಿದ್ದರೆ ದೇಶದಲ್ಲಿ ನೆಲವೂ ಬಲವೂ ಸಂಪತ್ತೂ ನದಿಯಂತೆ ಅವಿಚ್ಛಿನವಾಗಿ ಹರಿಯುತ್ತದೆ. ಪಾರಂಪರಿಕವಾಗಿ ಚರ್ಮ ಕೈಗಾರಿಕೆ, ಗ್ರಾಮ ನೈರ್ಮಲ್ಯವನ್ನು ನೋಡಿಕೊಳ್ಳುವ ಸತ್ತ ಜಾನುವಾರುಗಳನ್ನು ಹೊರಗೆ ಹಾಕುವ ತೋತ್ತು ಕೆಲಸ ಮಾಡುವ ಕಾಯಕದಲ್ಲಿ ಅವರು ನಿರತರಾಗಿದ್ದರು ಗ್ರಾಮಕ್ಕೆ ಹಾಗೂ ಸರ್ಕಾರದ ಇತರ ಅಧಿಕಾರಿಗಳ ಸ್ವಾರ್ಥಕ್ಕಾಗಿ ಅವರು ಕೆಲಸಗಳನ್ನು ಮಾಡಬೇಕಾಗಿತ್ತು. ವಸಾಹತು ಕಾಲದಲ್ಲಿ ಭೂಮಿಯ ಖಾಸಗೀಕರಣ ಹಾಗೂ ವಾಣಿಜ್ಯೀಕರಣದ ಹೆಚ್ಚಳದಿಂದ ದಲಿತರು ಅತ್ಯಂತ ದಯಾನೀಯ ಸ್ಥಿತಿಗೆ ದೂಡಲ್ಪಟ್ಟರು. ಆದರೆ ಕರ್ನಾಟಕದ ಖುಷ್ಕಿ ಪ್ರದೇಶದಲ್ಲಿ ಮಾತ್ರ ಅವರು ಸ್ವಲ್ಪ ಭೂಮಿ ಹೊಂದಿದ್ದರು ಎಂಬುದು ಇಲ್ಲಿನ ಭೂದಾಖಲೆಗಳಿಂದ ಕಂಡುಬರುತ್ತದೆ. ಖಾಸಗೀಕರಣದಿಂದಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಭೂಮಾಲೀಕರು ಹೆಚ್ಚು ಬಲವಾಗ ತೊಡಗಿದಂತೆ ಅಸ್ಪೃಶ್ಯರು ಇತರ ಕುಲಕಸುಬುಧಾರಂತೆಯೇ ಭೂಮಿಯ ಮೇಲೆ ಇನ್ನು ತಮ್ಮ ಪಾರಂಪರಿಕವಾಗಿ ಹಕ್ಕನ್ನು ಕಳೆದುಕೊಂಡರು. ಕಾನೂನಿನ ದೃಷ್ಟಿಯಲ್ಲಿ ಜಾತಿ-ಜಾತಿಗಳ ನಡುವೆ ಯಾವ ಅಂತರ ವಿಲ್ಲದಿದ್ದರೂ ಸಾಮಾಜಿಕ, ಧಾರ್ಮಿಕ ವಲಯದ ಆಚರಣೆಗಳ ವಿಷಯದಲ್ಲಿ ಮಧ್ಯ ಪ್ರವೇಶಿಸಿ ಬಾರದೆಂದು ಸರ್ಕಾರದ ನೀತಿಯಿಂದಾಗಿ ಈ ಕಾನೂನು ನಿಷ್ಪ್ರಯೋಜನವಾಯಿತು.

ಮೊದಲೇ ತಿಳಿಸಿರುವ ಹಾಗೆ ಸಂಸ್ಥಾನದ ಆರ್ಥಿಕ ಬೆನ್ನೆಲುಬು ಕೃಷಿ ಅದರ ಅಧಾರಗಳೇ ರೈತರು. ಇಂದಿಗೂ ಸಹ ನಮ್ಮ ದೇಶದ ಜನರ ಪ್ರಧಾನ ವೃತ್ತಿ ಕೃಷಿಯೇ ಆಗಿದೆ. ಈ ಕ್ಷೇತ್ರವೂ ಬಹುಸಂಖ್ಯಾತ ಜನರಿಗೆ ಉದ್ಯೋಗವನ್ನು ಒದಗಿಸಿದೆ. ಇಂದಿಗೂ ದಲಿತ ಜನತೆಯ ಶೇ. ೬೦ರಷ್ಟು ಜನರು ಕೃಷಿಯನ್ನೆ ನಂಬಿ ಜೀವನ ನಡೆಸುತ್ತಿದ್ದಾರೆ. ದಲಿತರು ಈ ಕೃಷಿ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚಾಗಿ ಅವಲಂಬಿತಗಳಾದಂತೆ ಸಮಸ್ಯೆಗಳು ಅಷ್ಟೇ ಹೆಚ್ಚಾದವು. ಇಂತಹವುಗಳಲ್ಲಿ ಪ್ರಮುವಾದದ್ದೆಂದರೆ ಕೃಷಿಗೆ ಬೇಕಾದ ಬಂಡವಾಳದ ಕೊರತೆ. ಈ ಕೊರತೆಯನ್ನು ನೀಗಿಸಲು ನಾಲ್ವಡಿಯವರು ಆರ್ಥಿಕ ಪರಿಷತ್ತನ್ನು ಸ್ಥಾಪಿಸಿದರು. ಈ ಪರಿಷತ್ತಿನ ಸ್ಥಾಪನೆಯಿಂದಾಗಿ ಅದರ ಅಂಗವಾಗಿದ್ದಂತಹ ವ್ಯವಸಾಯ ಸಮಿತಿಯು ಅಸ್ತಿತ್ವಕ್ಕೆ ಬಂದಿತು. ಅದು ಸಂಸ್ಥಾನದಲ್ಲಿ ಕಬ್ಬು ಬೆಳೆ ಅಭಿವೃದ್ಧಿ, ರೇಷ್ಮೆ ಕೃಷಿ ವಿಸ್ತರಣೆ, ಕೆರಗಳ ಅಭಿವೃದಧಿ, ಖಾಯಂ ನೀರಾವರಿಗೆ ಅಂತರಜಲ ಬಳಕೆ, ಗ್ರಾಮೀಣ ಕೈಗಾರಿಕೆಗಳ ಸ್ಥಾಪನೆ, ವ್ಯವಸಾಯದ ಶಿಕ್ಷಣದ ವಿಸ್ತರಣೆ ಇವುಗಳ ಬಗ್ಗೆ ಹೆಚ್ಚಿನ ರೀತಿಯಲ್ಲಿ ರೈತರಿಗೆ ತರಬೇತಿ ನೀಡು, ಮುಂದೆ ಈ ಕೆಲಸಕ್ಕಾಗಿಯೇ ಪ್ರತ್ಯೇಕ ಸರ್ಕಾರಿ ಇಲಾಖೆಯನ್ನು ತೆರೆಯಿತು. ೧೯೧೨ರಲ್ಲಿ ವ್ಯವಸಾಯ ಇಲಾಖೆಯು ಅಸ್ಥಿತ್ವಕ್ಕೆ ಬಂದಿತ್ತು. ಈ ಇಲಾಖೆಯಿಂದ ಅಸಂಖ್ಯಾತ ದಲಿತರು ಆರ್ಥಿಕ ನೆರವು ಪಡೆದು ತಮ್ಮಗೆ ಇದ್ದಂತಹ ಬಂಜರು ಭೂಮಿಯನ್ನೇ ಹಸನು(ಹದ) ಮಾಡಿಕೊಂಡು ವ್ಯವಸಾಯ ಮಾಡುವಂತೆ ಅನುಕೂಲ ಮಾಡಿಕೊಟ್ಟಿತ್ತು.

ಮೈಸೂರು ಸಂಸ್ಥಾನವು ೧೮೯೪ರಲ್ಲೇ ಕೃಷಿ ಬ್ಯಾಂಕ್‌ನ್ನು ಸ್ಥಾಪಿಸುವ ಮೂಲಕ ಕೃಷಿಕರಿಗೆ ಕಡಿಮೆ ಬಡ್ಡಿ ಧರದಲ್ಲಿ ಮತ್ತು ಬಹು ಸುಲಭವಾಗಿ ಸಾಲ ದೊರೆಯುವಂತೆ ಮಾಡಿತು. ಆದರೆ ಕೃಷಿ ಬ್ಯಾಂಕ್‌ಗಳಲ್ಲಿದ್ದಂತಹ ಅನೇಕ ದೋಷಗಳು ಅವರ ನೈಜ ಉದ್ದೇಶವನ್ನು ಹಾಳುಗೆಡವಿ ಬ್ಯಾಂಕುಗಳನ್ನು ಮುಚ್ಚುವಂತೆ ಮಾಡಿತು. ನಾಲ್ವಡಿಯವರ ಸರ್ಕಾರ ರೈತರಿಗೆ ಅವಶ್ಯಕವಾದಂತಹ ಸೌಲಭ್ಯಗಳನ್ನು ಒದಗಿಸಲು ತೀರ್ಮಾನಿಸಿ ೧೯೦೫ರಲ್ಲಿ ಸಹಕಾರಿ ಸೊಸೈಟಿಗಳ ಕಾಯ್ದೆಯನ್ನು ಜಾರಿಗೆ ತಂದಿತು. ಈ ಕಾಯ್ದೆಯ ಆಧಾರದ ಮೇಲೆ ಅನೇಕ ಸದಸ್ಯರು ಒಗ್ಗೂಡಿ ಷೇರುಗಳ ಮೂಲಕ ಬಂಡವಾಳವನ್ನು ತೊಡಗಿಸಿ ಮತ್ತು ಸರ್ಕಾರದ ಸಹಾಯಧನವನ್ನು ಉಪಯೋಗಿಸಿಕೊಂಡೆ ಅನೇಕ ಸಹಕಾರಿ ಬ್ಯಾಂಕುಗಳನ್ನು ಸ್ಥಾಪಿಸಿದರು.(ಈ ಸರ್ಕಾರಿ ಸಂಘಗಳನ್ನು ಸಂಸ್ಥಾನದ ಪರಿಶಿಷ್ಟ ಜಾತಿಯ ಸಮುದಾಯದವರೂ ಸಹ ಸ್ಥಾಪಿಸಿದರು. ೧೯೧೫ರಲ್ಲಿ ಪರಿಶಿಷ್ಟರ ಈ ರೀತಿಯ ಸಹಕಾರಿ ಬ್ಯಾಂಕುಗಳ ಸಂಖ್ಯೆ ೯ಕ್ಕೆ ಏರಿತು. ಇದರಲ್ಲಿ ಪ್ರಮುಖವಾಗಿ ೧೯೦೮ರಲ್ಲಿಯೇ ಸ್ಥಾಪನೆಯಾದಂತಹ ಮೈಸೂರಿನ ಆದಿಕರ್ನಾಟಕದ ಜನಾಂಗದ ಅಭಿವೃದ್ಧಿ ಸಂಘ, ಅಶೋಕಪುರಂ, ಮೈಸೂರು, ಗುಂಡ್ಲುಪೇಟೆಯ ಪಂಚಮ ಜನಾಂಗ ಅಭಿವೃದ್ಧಿ ಸಂಘ. ಚಿಕ್ಕಮಗಳೂರು, ಹಾಸನ, ಹೊಳೆನರಸೀಪುರ, ಮಂಗಳೂರು, ಸೋಸಲೆಯ ಆದಿಕರ್ನಾಟಕದ ಸಹಕಾರ ಸಂಸ್ಥೆಗಳು ಪ್ರಮುಖವಾದವು. ಈ ಸಹಕಾರಿ ಸೊಸೈಟಿಗಳು ಕೃಷಿಗೆ ಬೇಕಾದ ಆಧುನಿಕ ಕೃಷಿ ಸಲಕರಣೆಗಳು, ಉತ್ತಮ ತಳಿಯ ರಾಸುಗಳು ಮತ್ತು ಬಿತ್ತನೆ ಬೀಜಗಳು, ರಾಸಾಯನಿಕ ಗೊಬ್ಬರ, ಕಬ್ಬು

ಅರೆಯುವ ಯಂತ್ರಗಳು, ಹೊಸದಾದ ಹಾಗೂ ಹೆಚ್ಚು ಹೆಚ್ಚಾಗಿ ಇಳುವರಿ ನೀಡುವ ಭತ್ತ, ರಾಗಿ, ಜೋಳ, ದ್ವಿದಳ ಧಾನ್ಯಗಳು ಮುಂತಾದವುಗಳನ್ನು ರೈತರಿಗೆ ಒದಗಿಸುತ್ತಿದ್ದವು.[೯]

ಬಡತನ ಎಂಬುದು ದುಸ್ಥಿತಿಗೆ ಸಂಬಂಧಿಸಿದ ಸಂಗತಿಯಾಗಿದೆ. ಲಾಗಾಯ್ತಿನಿಂದ ಬಡತವನ್ನು ವರಮಾನದ ಕೊರತೆಯೆ ಮಾಪನದ ಮೂಲಕ (ಬಡತನರೇಖೆ) ಗುರುತಿಸಿಕೊಂಡು ಬರಲಾಗಿದೆ.(ಅಮರ್ತ್ಯ ಸೇನ್, ೧೯೯೯, ೧೦೮) ಬಡವರು ಎಂಬುದನ್ನು ಶ್ರೀಮಂತರು ಎಂಬುದಕ್ಕೆ ವಿರುದ್ಧವೆಂದು ತಿಳಿಯಲಾಗಿದೆ.(ಮಜೀದ್ ರಹೆಮಾನ್, ೧೯೯೩, ೧೫೮ ಶ್ರೀಮಂತರು ಎನ್ನುವದಾಗಲಿ ಅಥವಾ ಒಡೆಯರು ಎಂಬುದಾಗಲಿ ಅಖಂಡವಾದ ಪರಿಭಾವನೆಗಳಲ್ಲಿ ಶ್ರೀಮಂತರು ಮತ್ತು ಬಡವರು ಎಂಬ ಗುಂಪುಗಳ ನಡುವೆ ಅನೇಕ ಇತರೆ (ಮಧ್ಯಮವರ್ಗ, ಕೆಳಮಧ್ಯಮ ವರ್ಗ ಮೇಲು ಮಧ್ಯಮ ವರ್ಗ ಇತ್ಯಾದಿ) ಗುಂಪುಗಳಿರುವ ಸಾಧ್ಯತೆಯಿದೆ. ಇಲ್ಲಿ ಎರಡಕ್ಕೂ ಮಾನದಂಡ ಯಾವುದೆಂದರೆ ವರಮಾನ/ಸಂಪತ್ತು/ಶ್ರೀಮಂತಿಕೆ ಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಅರ್ಥರ್ ಲಿವೀಸ್, ಪಾಲ್ ಬಾರನ್, ಡಬ್ಲೂ, ಡಬ್ಲ್ಯು ರಾಸ್ಟೋ, ಸೈಮನ್ ಕುಜನ್ಸ್ ಮುಂತಾದವರಲ್ಲಿ ವರಮಾನದಲ್ಲಿನ ಏರಿಕೆಯ ಚೌಕಟ್ಟಿನಲ್ಲಿ ಅಭಿವೃಗದ್ಧಿಯನ್ನು ನಿರ್ವಚಿಸಲು ಪ್ರಯತ್ನಿಸಿದರು. (ಗಸ್ಟೋವೂ ಎಸ್ಟೆವ್, ೧೯೯೨, ೦೮, ೨೫) ವಿಶ್ವಸಂಸ್ಥೆಯು ೧೯೪೮ರಲ್ಲಿ ವಿಶ್ವದ ದೇಶಗಳನ್ನು ವರಮಾನದ ಆಧಾರದ ಮೇಲೆ ಬಡದೇಶಗಳು ಮತ್ತು ಮುಂದುವರಿದ ದೇಶಗಳು ಎಂದು ವರ್ಗೀಕರಿಸತೊಡಗಿತು. ಅಂದು ಯಾವ ದೇಶದ ತಲಾ ಜಿಎನ್‌ಪಿ ಯು ನೂರು ಡಾಲರ್‌ಗಿಂತ ಕಡಿಮೆಯಿತ್ತೋ ಆ ದೇಶವನ್ನು ಬಡದೇಶವೆಂದು ಅಭಿವೃದ್ಧಿಶೀಲ ದೇಶವೆಂದು ವರ್ಗೀಕರಿಸಿತು. ಮಜೀದ್ ರಹೆನೇಯ ಹೇಳುವಂತೆ ಚರಿತ್ರೆಯಲ್ಲಿ ಪ್ರಥಮ ಬಾರಿಗೆ ಇಡೀ ದೇಶ-ದೇಶಗಳನ್ನೇ ಬಡದೇಶವೆಂದು ವರ್ಗೀಕರಿಸಲು ಆಧಾರ ಅವುಗಳ ವರಮಾನವಾಗಿತ್ತು. ದೇಶಕ್ಕೆ ದೇಶವೇ ಬಡತನದಿಂದ ಕೂಡಿರಲು ಸಾಧ್ಯವಿಲ್ಲ. ಅಲ್ಲಿ ಶ್ರೀಮಂತರು, ಮಧ್ಯಮ ವರಮಾನದ ಮಂದಿ, ಸರಾಸರಿ ವರಮಾನದವರು ಬಡವರು ಹೀಗೆ ವಿವಿಧ ವರ್ಗದವರು ಇರಲು ಸಾಧ್ಯ. ಹೀಗೆ ಜಿಎನ್‌ಪಿ ಯು ಅಭಿವೃದ್ಧಿಯ ವಿವಿಧ ಹಂತಗಳನ್ನು ಅಳೆಯುವ ಮಾಪನವಾಗಿ ಬಳಕೆಗೆ ಬಂತು. ಆದರೆ ಅಭಿವೃದ್ಧಿ ಎನ್ನುವುದು ಕೇವಲ ವರಮಾನಕ್ಕೆ / ಸಂಪತ್ತಿಗೆ ಸಂಬಂಧಿಸಿದ ಸಂಗತಿಯಲ್ಲ, ವರಮಾನವು ಅಭಿವೃದ್ಧಿಯ ಸಾಧನ ಮಾತ್ರ, ಅರಿಸ್ಟಾಟಲ್ ಹೇಳಿದಂತೆ "Wealth is evidently not the good we are seeking for it is merty useful and for the sake of some thing else." ಈ ಬಗ್ಗೆ ಅಮರ್ತ್ಯ ಸೇನ್ ಮಾನವ ಅಭಿವೃದ್ಧಿ ಕುರಿತಂತೆ ಯುಎನ್‌ಡಿಪಿಗೆ ನೀಡಿದ ಸಂದೇಶ ಹೀಗಿದೆ. Human Development as an approach is concerned with what I take to be the basic. Development idea: namely advancing the richness of human life. rather than the richness of the economy in which human beings live. which is only a part of it(1998). ಮಾನವ ಅಭಿವೃದ್ಧಿಯ ಪ್ರಧಾನ ಕಾಳಜಿಯು ಜನರ ಬದುಕನ್ನು ಹೇಗೆ ಸಮೃದ್ಧಿಗೊಳಿಸಬೇಕು ಎಂಬುದಾಗಿರುತ್ತದೆ. ವಿನಾ ಆರ್ಥಿಕತೆಯ ಸಮೃದ್ಧತೆಯಲ್ಲಿ ಇದೇ ವಿಷಯವನ್ನು ಚರ್ಚೆ ಮಾಡುತ್ತಾ ಮಾರ್ತಾ ನುಸ್‌ಚಾಮ್ ಹೀಗೆ ಹೇಳುತ್ತಾಳೆ "aggregate

data are not enough for assessment of how a nation is doing we need to know how each preson is doing considering each as a separate life."(2006:60)

ಮಾರ್ತಾ ನುಸು ಚಾಮ್ ಪ್ರಕಾರ ವರಮಾನ-ಸಂಪತ್ತಿನ ಆಧಾರದ ಮೇಲೆ ಮಾಪನ ಮಾಡಲು ಸಾಧ್ಯವಿಲ್ಲದ ಅನೇಕ ಅಭಿವೃದ್ಧಿ ಸೂಚಿಗಳಿವೆ. ಅವು ಬದುಕು ಉತ್ತಮವಾಗಿಯೋ ಅಥವಾ ಇಲ್ಲವೋ ಎಂಬುದನ್ನು ತಿಳಿಸುವ ಸಂಗತಿಗಳಾಗಿವೆ. ಅವು ಬದುಕನ್ನು ಉತ್ತಮಪಡಿಸುವ ಚಾಲಕ ಶಕ್ತಿಗಳಾಗಿವೆ. ಉದಾಹರಣೆಗೆ ಜೀವನಾಯುಷ್ಯ, ಶಿಶುಗಳ ಮರಣ ಪ್ರಮಾಣ, ಶೈಕ್ಷಣಿಕ ಅವಕಾಶಗಳನ್ನು ಉದ್ಯೋಗದ ಅವಕಾಶಗಳು, ರಾಜಕೀಯ ಸ್ವಾತಂತ್ರ್ಯ ಲಿಂಗ ಸಂಬಂಧಗಳು ಮುಂತಾದವು. ಇವುಗಳಿಗೆ ಸಂಬಂಧಿಸಿದ ಸಾಧನೆಗಳನ್ನು ಜಿಎನ್‌ಪಿ ಮೂಲಕ ಮಾಪನ ಮಾಡಲು ಸಾಧ್ಯವಿಲ್ಲ. ಅಥವಾ ಈ ಸೂಚಿಗಳಲ್ಲಿನ ಸಾಧನೆಗಳನ್ನು ಜಿಎನ್‌ಪಿ ಯು ಅಭಿವ್ಯಕ್ತ ಪಡಿಸುವುದಿಲ್ಲ. ಇವು ವರಮಾನಕ್ಕೆ ಸಂಬಂಧಿಸಿದ ಸೂಚಿಗಳಲ್ಲ. ಆದರೆ ಅವು ಸುಖಕರ ಬದುಕನ್ನು ನಿರ್ಧರಿಸುವ ಸೂಚಿಗಳಾಗಿವೆ. ಅವುಗಳಿಗೆ ಸಂಬಂಧಿಸಿದಂತೆ ಸುಧಾರಣೆಯಾಗದಿದ್ದರೆ ಜನರ ಬದುಕು ಸುಖಕರವಾಗುವುದಿಲ್ಲ. ಅಭಿವೃದ್ಧಿಯ ಮೇಲೆ ಹೀಗೆ ಅನೇಕ ವರಮಾನೇತರ ಸಂಗತಿಗಳು ಪ್ರಭಾವ ಬೀರುತ್ತಿರುತ್ತವೆ.

ಬಡತನ ಎನ್ನುವುದು ವರಮಾನವಿಲ್ಲದಿರುವುದರಿಂದ ಅಥವಾ ಅದು ಕಡಿಮೆಯಿರುವ ಸಮಸ್ಯೆಯಲ್ಲ. ಅದನ್ನು ಪಡೆಯಲು ಸಮಾಜದಲ್ಲಿ ಕೆಲವರಿಗೆ ಸಾಧ್ಯವಾಗದೆ ಇರುವುದರ ಸಮಸ್ಯೆ ಯುಎನ್‌ಡಿಪಿ ಯು ತನ್ನ ೧೯೯೭ರ ಮಾನವ ಅಭಿವೃದ್ಧಿ ವರದಿಯಲ್ಲಿ ಸಾಮಾನ್ಯವಾದ ಬದುಕನ್ನು ಸಾಗಿಸಲು ಅಗತ್ಯವಾದ ಆಯ್ಕೆಗಳು ಮತ್ತು ಅವಕಾಶಗಳು ದೊರೆಯದಿರುವುದು ಬಡತನ ಎಂದು ಅದನ್ನು ನಿರ್ವಚಿಸದೆ (ಪು.೧೫) ಇದು ಜನರ ಹಕ್ಕುದಾರಿಕೆಯ ವೈಫಲ್ಯದ ಸಂಗತಿಯಾಗಿದೆ. ಈ ಬಗ್ಗೆ ಹಸಿವನ್ನು ಕುರಿತಂತೆ ಅಮರ್ತ್ಯ ಸೇನ್ ಹೇಳಿರುವ ಮಾತು ಹೀಗಿದೆ. ೨೦೧೧ರ ಸಾಮಾಜಿಕ-ಆರ್ಥಿಕ ಜಾತಿ ಗಣತಿಯು (ಎಸ್.ಐ.ಸಿ.ಸಿ.) ಗ್ರಾಮೀಣ ಪ್ರದೇಶದಲ್ಲಿ ಇರುವ ಶೇ. ೪೯ರಷ್ಟು ಕುಟುಂಬಗಳು ಬಡತನದಲ್ಲಿವೆ. ಶೇ. ೫೧ರಷ್ಟು ಕುಟುಂಬಗಳ ಬದುಕಿಗೆ ಪ್ರತಿದಿನವೂ ಕೂಲಿ ಕೆಲಸವನ್ನು ಅವಲಂಬಿಸಿವೆ. ಶೇ. ೩೦ರಷ್ಟು ಕುಟುಂಬಗಳು ಭೂ ಮಾಲೀಕತ್ವವನ್ನು ಹೊಂದಿಲ್ಲ. ಹಳ್ಳಿಗಳಲ್ಲಿರುವ ಶೇ. ೭೭ ಕುಟುಂಬಗಳು ಪ್ರತಿದಿನ ದುಡಿಮೆಗಾಗಿ ೫ ಕಿ.ಮೀ. ಪ್ರಯಾಣ ಮಾಡಲೇಬೇಕಾಗಿದೆ. ಕಳೆದ ಮೂರು ಜನಗಣತಿ(೧೯೯೧-೨೦೧೧) ಅವಧಿಯಲ್ಲಿ ಭೂರಹಿತ ಕೃಷಿಕೂಲಿ ಕಾರ್ಮಿಕರ ಸಂಖ್ಯೆ ಶೇ. ೨೯ರಿಂದ ೩೦ರಷ್ಟು ಹೆಚ್ಚಾಗಿದೆ. ಆದರೆ ಕೂಲಿಯು ೧೯೮೦ರಲ್ಲಿ ಶೇ. ೫ರಷ್ಟು ಪ್ರಮಾಣದಲ್ಲಿ ಹೆಚ್ಚಳ ಕಂಡರೆ ೧೯೯೦ರಲ್ಲಿ ಶೇ. ೨ರಷ್ಟು ಬೆಳವಣಿಗೆ ಸಾಧಿಸಿ, ೨೦೦೦ರ ಮೊದಲಾರ್ಧದಲ್ಲಿ ಶೂನ್ಯವಾಗಿದೆ. ಹೀಗಾಗಿ ಅರ್ಧದಷ್ಟು ಜನರ ಮಾಸಿಕ ತಲಾ ಅನುಭೋಗ ವೆಚ್ಚ ರೂ. ೧೦೩೦ಕ್ಕಿಂತಲೂ ಕಡಿಮೆ. ಸ್ವಲ್ಪ ಹೆಚ್ಚು ಕಡಿಮೆ ಶೇ. ೪೦ರಷ್ಟು ಜನರ ಮಾಸಿಕ ತಲಾ ಅನುಭೋಗ ವೆಚ್ಚ ರೂ. ೯೨೨ಕ್ಕಿಂತಲೂ ಕಡಿಮೆ. ಸಾರ್ವಜನಿಕ ಆರೋಗ್ಯ

ವ್ಯವಸ್ಥೆ ಮತ್ತು ಪಡಿತರ ವ್ಯವಸ್ಥೆಗಳ ಸವಕಳಿಯು ಆಹಾರ ಪದಾರ್ಥಗಳ ಬೆಲೆಯ ಹೆಚ್ಚಳವು ಅಪೌಷ್ಠಿಕ ಮಹಿಳೆಯರು ಮತ್ತು ಮಕ್ಕಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಲು ಕಾರಣವಾಗಿದೆ.[೫]

ನಮ್ಮ ಸಮಾಜ ಚಾರಿತ್ರಿಕವಾಗಿ ಏಣಿಶ್ರೇಣಿಯಾಗಿ ರಚನೆಯಾದದ್ದು. ಅದರಲ್ಲಿ ಮೇಲು-ಕೀಳು, ಶುದ್ಧ-ಅಶುದ್ಧ, ಪವಿತ್ರ-ಅಪವಿತ್ರ ಮುಂತಾದ ತಾರತಮ್ಯಗಳಿಂದಾಗಿ ಮತ್ತು ಏಣಿಶ್ರೇಣಿಯಿಂದ ಅಭಿವೃದ್ಧಿಯ ಫಲಗಳು ಶಿಷ್ಟ ಸಮುದಾಯಗಳಿಗೆ ದೊರಕಿದಷ್ಟು ಪರಿಶಿಷ್ಟ ಸಮುದಾಯಗಳಿಗೆ ದೊರೆಯುತ್ತಿಲ್ಲ. ಇದೊಂದು ಚಾರಿತ್ರಿಕ ವಿಕಲತೆ. ಅಭಿವೃದ್ಧಿಯ ಫಲಗಳು ಜನರನ್ನು ಒಳಗೊಳ್ಳುವಂತಿರಬೇಕು. ಕೆಲವರಿಗೆ ಸಿಗುವಂತಿದ್ದರೆ ಅಥವಾ ಕೆಲವರ ಪಾಲಾದರೆ ಸಾಮಾಜಿಕ ಅಸಮಾನತೆ ಎಂದು ಗೋಚರಿಸುತ್ತದೆ. ಇದನ್ನೇ ನಾವು ಸಾಮಾಜಿಕ ನ್ಯಾಯ ಏಕೆ ಪರಿಶಿಷ್ಟ ಮತ್ತು ಪಂಗಡಗಳು ಚಾರಿತ್ರಿಕವಾಗಿ ಅಭಿವೃದ್ಧಿಯಿಂದ ವಂಚಿತರಾಗಿದ್ದಾರೆ. ಹಾಗಾಗಿ ಸಮಾಜದ ಅಂಚಿನಲ್ಲಿ ಈ ಸಮುದಾಯಗಳು ಸಮಾಜದ ಮುಖ್ಯವಾಹಿನಿಗೆ ಬರಬೇಕಾದರೆ ಸಾಮಾಜಿಕ ನ್ಯಾಯದ ದೃಷ್ಟಿಯಲ್ಲಿ ಯೋಚಿಸುವ ಅಗತ್ಯವಿದೆ.[೬]

ಕರ್ನಾಟಕದಲ್ಲಿ ೨೦೧೧ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ ೬೧೦.೯೫ಲಕ್ಷ ಅದರಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯಾ ಪ್ರಮಾಣ (೧೦೪.೭೫ ಲಕ್ಷ) ಶೇ. ೧೭.೧೪ರಷ್ಟಿದ್ದರೆ, ಪರಿಶಿಷ್ಟ ಪಂಗಡದವರ ಪ್ರಮಾಣ (೪೨,೪೯ ಲಕ್ಷ) ಶೇ. ೬.೯೫ರಷ್ಟು ಒಟ್ಟಾರೆ ಪರಿಶಿಷ್ಟರ ಪ್ರಮಾಣ ಶೇ. ೨೪.೦೯ರಷ್ಟಿದೆ. ಆದರೆ ಗುಲಬರ್ಗಾ ವಿಭಾಗದಲ್ಲಿ ಪರಿಶಿಷ್ಟ ಜಾತಿಯ ಪ್ರಮಾಣ ಶೇ. ೨೨.೧೦ ಮತ್ತು ಪರಿಶಿಷ್ಟ ಪಂಗಡದ ಪ್ರಮಾಣ ಶೇ. ೧೪.೨೯ರಷ್ಟಿದೆ. ಒಟ್ಟಾರೆ ಪರಿಶಿಷ್ಟರ ಪ್ರಮಾಣ ಇಲ್ಲಿ ೩೪.೭೬ರಷ್ಟಿದೆ. ಒಟ್ಟಾರೆಯಾಗಿ ಹೈದಾರಾಬಾದ್ ಕರ್ನಾಟಕದಲ್ಲಿ ಪರಿಶಿಷ್ಟ ಜನಸಂಖ್ಯೆಗೂ ಮತ್ತು ಅವರ ಅಭಿವೃದ್ಧಿಯ ಫಲಗಳಿಗೂ ಸಂಬಂಧವಿಲ್ಲ. ಹೀಗಾಗಿ ೩೭೧(ಜೆ)ನೆಲೆಯಲ್ಲಿ ಪರಿಶಿಷ್ಟರಿಗೆ ಪ್ರತ್ಯೇಕ ಪ್ಲಾಟ್‌ಫಾರಂ ಸೃಷ್ಟಿಸಿದರೆ ಅವರನ್ನು ಇತರರ ಅಸುಪಾಸಿನಲ್ಲಿಟ್ಟು ನೋಡಬಹುದು.

ಕರ್ನಾಟಕ ಇಂದು ಕೃಷಿ ಪ್ರಧಾನ ಆರ್ಥಿಕತೆಯಾಗಿ ಉಳಿದಿಲ್ಲ. ಜನಸಂಖ್ಯೆ ಮತ್ತು ಕೃಷಿಯ ಮಧ್ಯ ಸಂಬಂಧಗಳು ಉತ್ತಮ ರೀತಿಯಲ್ಲಿ ಅಥವಾ ಆರೋಗ್ಯಕರ ರೀತಿಯಲ್ಲಿ ಇಲ್ಲ. ರಾಜ್ಯದ ಒಟ್ಟು ದುಡಿಮೆಗಾರರಲ್ಲಿ ೨೭೮.೭೨ ಲಕ್ಷ. ಇದರಲ್ಲಿ ಕೃಷಿಯನ್ನು ಅವಲಂಬಿಸಿರುವವರ ಪ್ರಮಾಣ ೨೦೧೧ರಲ್ಲಿ ಶೇ. ೪೯.೫೩(೧೩೭.೩೭ ಲಕ್ಷ) ರಾಜ್ಯಮಟ್ಟದ ದುಡಿಮೆಗಾರರಲ್ಲಿ ಭೂರಹಿತ ಕೃಷಿ ದಿನಗೂಲಿಗಳ (೭೧.೫೬ ಲಕ್ಷ) ಪ್ರಮಾಣ ಕೇವಲ ಶೇ. ೨೫.೬೭ ಇದು ರಾಜ್ಯಮಟ್ಟದಲ್ಲಾಗುತ್ತಿರುವ ಅಭಿವೃದ್ಧಿ ರಾಜಕೀಯ ಆರ್ಥಿಕ ನೆಲೆಗಳನ್ನು ತೋರಿಸುತ್ತದೆ. ಇಲ್ಲಿ ಸಾಮಾಜಿಕ ಬದಲಾವಣೆ ಮತ್ತು ಆರ್ಥಿಕ ಅಭಿವೃದ್ಧಿ ವೇಗವಾಗಿ ಮತ್ತು ವಿಸ್ತೃತವಾಗಿ ನಡೆಯುತ್ತದೆ. ಆದರೆ ಪ್ರಾದೇಶಿಕವಾಗಿ ಹಿನ್ನಡೆಯನ್ನು ತೋರಿಸುತ್ತದೆ. ಕರ್ನಾಟಕದ ನಾಲ್ಕು ವಿಭಾಗಗಳಲ್ಲಿ ಆರ್ಥಿಕತೆಯ ಮಾದರಿಗಳು ಒಂದೇ ರೀತಿಯಾಗಿಲ್ಲ. ಹೀಗಾಗಿ ಗುಲಬರ್ಗಾ ವಿಭಾಗದಲ್ಲಿ ೨೦೧೧ರಲ್ಲಿ ಒಬ್ಬ ದುಡಿಮೆಗಾರರಲ್ಲಿ ೫೦.೮೯ ಲಕ್ಷ ಕೃಷಿಯನ್ನು ಅವಲಂಬಿಸಿ(೩೭.೧೭ಲಕ್ಷ)ಕೊಂಡಿರುವವರ ಪ್ರಮಾಣ ಶೇ. ೬೮.೩೧

ಇದಕ್ಕಿಂತ ಮುಖ್ಯವಾಗಿ ಅಲ್ಲಿನ ಒಟ್ಟು ಮುಖ್ಯ ದುಡಿಮೆಗಾರರಲ್ಲಿ ಭೂರಹಿತ ಕೃಷಿ ದುಡಿಮೆಗಾರರ ಪ್ರಮಾಣ ಶೇ. ೪೦ರಷ್ಟು ಈ ವಿಭಾಗದಲ್ಲಿ ನಾವು ಕಳೆದ ೫೦ ವರ್ಷಗಳಲ್ಲಿ ಕೃಷಿಯೇತರ ಚಟುವಟಿಕೆ ಬೆಳೆಸುವವರಲ್ಲಿ ವಿಫಲರಾಗಿದ್ದೇವೆ. ೨೦೧೧ರಲ್ಲಿ ಶೇ. ೩೬.೯೯ರಷ್ಟು ರಾಜ್ಯಮಟ್ಟದಲ್ಲಿ ಇದು ಶೇ. ೫೧ರಷ್ಟಿದೆ. ಹಾಗಾಗಿ ಪ್ರಾದೇಶಿಕ ಅಸಮಾನತೆ ಪ್ರಾಥಮಿಕ ವಲಯ ಮಾತ್ರವಲ್ಲ ಎಲ್ಲಾ ಕ್ಷೇತ್ರಗಳಲ್ಲಿ ಇದರ ಪ್ರಭಾವವನ್ನು ಕಾಣಬಹುದಾಗಿದೆ.[೭]

ದುಡಿಮೆ ಮತ್ತು ಮಹಿಳಾ ಸಶಕ್ತಿಕರಣ

ಮಹಿಳಾ ಸಶಕ್ತಿಕರಣ ಮತ್ತು ದುಡಿಮೆಯಲ್ಲಿನ ಅಭಿವೃದ್ಧಿಯ ಕೀಲಿಕೈ ಮಹಿಳಾ ದುಡಿಮೆಗಾರರ ವಶದಲ್ಲಿದೆ ಎಂದರೆ ಅತಿಶಯೋಕ್ತಿಯಲ್ಲ. ವಿಶ್ವಬ್ಯಾಂಕ್ ತನ್ನ ೨೦೧೨ರ ವಿಶ್ವ ಅಭಿವೃದ್ಧಿ ವರದಿಯಲ್ಲಿ ಲಿಂಗಸಮಾನತೆಯನ್ನು ಸ್ಮಾರ್ಟ್ ಎಕಾನಾಮಿಕ್ಸ್ ಎಂದು ಹೇಳಿದೆ. ಗುಲಬರ್ಗಾ ವಿಭಾಗದಲ್ಲಿ ಒಟ್ಟು ದುಡಿಮೆಗಾರರಲ್ಲಿ (೫೦.೯ ಲಕ್ಷ) ಮಹಿಳಾ ದುಡಿಮೆಗಾರರ ಪ್ರಮಾಣ ಶೇ. ೩೮.೬೫(೧೯.೩೩) ಇದು ರಾಜ್ಯಮಟ್ಟದಲ್ಲಿ ಶೇ. ೨೪.೪೫. ಆದರೆ ಒಬ್ಬ ಮಹಿಳಾ ದುಡಿಮೆಗಾರರಲ್ಲಿ ಭೂರಹಿತ ಕೃಷಿ ದಿನಗೂಲಿ ಮಹಿಳಾ ದುಡಿಮೆಗಾರರ ಪ್ರಮಾಣ ಶೇ. ೫೯.೧೮ರಷ್ಟಿದೆ. ಒಟ್ಟಾರೆಯಾಗಿ ಗುಲಬರ್ಗಾ ವಿಭಾಗದಲ್ಲಿ ಮಹಿಳಾ ದುಡಿಮೆಗಾರರ ಪ್ರಮಾಣ ಅಧಿಕವಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯಮಟ್ಟದಿಂದ ಮಹಿಳಾ ನೆಲೆಯಲ್ಲಿ ಅಭಿವೃದ್ಧಿಯ ಪರಿಭಾವಿಸುವಕ್ರಮ ಅಗತ್ಯ. ಈ ವಿಭಾಗದ ೧೧ ತಾಲೂಕುಗಳಲ್ಲಿ ಮಹಿಳಾ ಸಾಕ್ಷರತೆ ಪ್ರಮಾಣ ಶೇ. ೫೦ಕ್ಕಿಂತ ಕಡಿಮೆ ಇದೆ. ಶೇ. ೩೦.೩೫ರಷ್ಟು ಮಹಿಳೆಯರು ಅನಿಮಿಯಾದಿಂದ ಬಳಲುತ್ತಿದ್ದಾರೆ. ಲಿಂಗವರ್ಗ, ಪ್ರದೇಶ, ವೃತ್ತಿ ಹೀಗೆ ಎಲ್ಲಾ ಬಗೆಯ ತಾರತಮ್ಯಗಳಿಂದ ನೋವನ್ನು ಅನುಭವಿಸುತ್ತಿದ್ದಾರೆ. ಇದರ ಜೊತೆಗೆ ಅವರು ಹೆಚ್ಚಿನ ಸಂತಾನೋತ್ಪತ್ತಿ ದುಡಿಮೆಯನ್ನು ನಿರ್ವಹಿಸಬೇಕಾಗಿದೆ. ೨೦೧೨ರ ವಿಶ್ವಬ್ಯಾಂಕ್ ವರದಿ ೧೯೯೫ರ ಯು.ಎನ್.ಡಿ.ಪಿ ವರದಿಗಳ ಮಾಹಿತಿಯಲ್ಲಿ ಲಿಂಗಸಮಾನತೆಯನ್ನು ಸಾಮಾಜಿಕ ವೈಫಲ್ಯ ಎಂದು ಸೇನ್ ಅವರು ವಿವರಿಸಿದ್ದಾರೆ. ಲಿಂಗ ಅಸಮಾನತೆ ಎನ್ನುವುದು ಅಭಿವೃದ್ಧಿಯ ಸಂಗತಿ ಮತ್ತು ಅದು ಸಾಮಾಜಿಕ ನ್ಯಾಯದ ಸಂಗತಿ.

ಸಾಮಾನ್ಯವಾಗಿ ದುಡಿಮೆಯನ್ನು ನಮ್ಮಲ್ಲಿ ಪುರುಷ ನೆಲೆಯಲ್ಲಿ ನೋಡುವ ಕ್ರಮವಿದೆ. ಆದರೆ ಮಹಿಳೆಯ ದುಡಿಮೆಗೆ ಮತ್ತು ಪುರುಷರಿಗೆ ಹೋಲಿಕೆ ಮಾಡಿ ನೋಡಿದರೆ ಮಹಿಳೆಯ ದುಡಿಮೆಯು ಅಧಿಕವೆನಿಸುತ್ತದೆ. ಉದಾಹರಣೆಗೆ ಒಂದು ಕುಟುಂಬದಲ್ಲಿ ಮಹಿಳೆ ಬೆಳಿಗ್ಗೆಯಿಂದ ಅಡುಗೆ ಮಾಡುವುದಕ್ಕೆ ಕೂಲಿ, ಬಟ್ಟೆ ತೊಳೆಯುವುದಕ್ಕೆ, ಕೂಲಿ, ಮಕ್ಕಳ ಲಾಲನೆ–ಪಾಲನೆ ಮಾಡುವುದಕ್ಕೆ ಕೂಲಿ ನೀಡಿದರೆ ಎಷ್ಟಾಗುತ್ತದೆ ಎಂಬುದನ್ನು ಗಮನಿಸಬಹುದು. ಇದರ ಜೊತೆಗೆ ಪಾತ್ರೆ ತೊಳೆಯುವುದು ಮತ್ತು ಹೊರಗೆ ದುಡಿಯುವ ದುಡಿಮೆಯನ್ನು ಗಮನಿಸಿದರೆ ಪುರುಷನಿಗಿಂತ ಮಹಿಳೆಯ ದಿನದ ದುಡಿಮೆಯೇ ಹೆಚ್ಚಾಗುತ್ತದೆ. ಇದನ್ನು ಇಲ್ಲಿಯವರೆಗಿನ ಅಧ್ಯಯನಗಳು ಪರಿಗಣನೆಗೆ ತೆಗೆದುಕೊಂಡಿಲ್ಲ.

ಸಾಂಪ್ರದಾಯಿಕವಾಗಿ ಮಹಿಳೆಯನ್ನು ಒಂದು ಸಂಪನ್ಮೂಲ ದೃಷ್ಟಿಯಲ್ಲಿ ನೋಡುತ್ತಾ ಬರಲಾಗಿದೆ. ಭೋಗದ ವಸ್ತು ಮತ್ತು ಸಂಪತ್ತು ಮನೆ ಬಿಟ್ಟು ಹೋಗಬಾರದು ಎನ್ನುವುದರಲ್ಲಿಯೇ ಮಹಿಳೆಯನ್ನು ಬಂಧಿಯನ್ನಾಗಿಸಲಾಗಿದೆ. ಸಾಮಾಜಿಕ ಕಟ್ಟಳೆಗಳು, ಸಾಂಪ್ರದಾಯಗಳ ಹಿಡಿತ ಇನ್ನು ಸರಳೀಕರಣ ಗೊಂಡಿಲ್ಲ. ಹಾಗಾಗಿ ಮಹಿಳೆಯು ಪುರುಷರ ರೀತಿಯಲ್ಲಿ ಸಮಾಜದ ಪ್ರಧಾನಧಾರೆಗೆ ತರಬೇಕಾದರೆ ಅವರದ್ದೇ ಆದ ಸಮಸ್ಯೆಯು ನೆಲೆಯಲ್ಲಿ ಪರಿಹಾರ ಕಂಡುಕೊಳ್ಳಬೇಕು. ಅಂದರೆ ಆರೋಗ್ಯ, ದುಡಿಮೆ, ಸಾಮಾಜಿಕ ವ್ಯವಸ್ಥೆಯಲ್ಲಿ ಅವರು ಪಾಲ್ಗೊಳ್ಳುವ ರೀತಿಯಲ್ಲಿ ವಾತವರಣ ಕಲ್ಪಿಸಬೇಕು.[೮]

ಕರ್ನಾಟಕ ಆರ್ಥಿಕತೆಗೆ ದಲಿತರು ನೀಡುತ್ತಿರುವ ಕೊಡುಗೆಯನ್ನು ಭೂಮಿ ಮತ್ತು ಜನಸಂಖ್ಯೆಯ ಮೂಲಕ ವಿಶ್ಲೇಷಿಸಿದ್ದಾರೆ. ಭೂಮಿಯು ಒಂದು ಸರಕಲ್ಲ ಅದೊಂದು ಪ್ರತಿಷ್ಠೆಯ ಸಂಗತಿ. ಅದಕ್ಕೆ ಸಮಾಜದಲ್ಲಿ ಪವಿತ್ರವಾದ ಸ್ಥಾನವಿದೆ. ಅನಾದಿಕಾಲದಿಂದಲೂ ಭೂಮಿಯು ಪ್ರತಿಷ್ಠೆಯ ಮಾಲೀಕತ್ವದಲ್ಲೇ ಇರುತ್ತದೆ. ಪರಿಶಿಷ್ಟರಿಗೆ ಭೂಮಾಲೀಕತ್ವದಲ್ಲಿ ಅವಕಾಶವೆ ಇರಲಿಲ್ಲ. ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ (೫೨೮.೫೨) ದಲಿತರ ಸಂಖ್ಯೆ ೧೨೦.೨೮ ಲಕ್ಷ ದಷ್ಟದರೆ ಪ್ರತಿಷ್ಠರ ಸಂಖ್ಯೆ ೪೦೮.೨೩ ಲಕ್ಷ ಇದೇ ರೀತಿ ಪರಿಶಿಷ್ಟ ದುಡಿಮೆಗಾರರಲ್ಲಿ (೫೬.೭೬) ಸಾಗುವಳಿದಾರರಲ್ಲಿ ಶೇ. ೨೧.೫೩ ಪ್ರತಿಷ್ಠವರ್ಗದಲ್ಲಿ, ಈ ಪ್ರಮಾಣ ಶೇ. ೨೭.೮೦ ಕರ್ನಾಟಕದಲ್ಲಿ ೨೦೦೧ರ ಜನಗಣತಿ ಪ್ರಕಾರ ಒಟ್ಟು ದಿನಗೂಲಿಗಳ ಸಂಖ್ಯೆ ೬೨.೨೭ ಲಕ್ಷ ಇವರಲ್ಲಿ ಪರಿಶಿಷ್ಟರ ಸಂಖ್ಯೆ ೨೪.೭೫ ಶೇ.(೩೯.೭೪) ಆದರೆ ಪ್ರತಿಷ್ಠರಲ್ಲಿ ಇವರ ಪ್ರಮಾಣ ಕೇವಲ ೬೦.೭೬ ಅದಕ್ಕಿಂತ ಅಧಿಕವಾಗಿ ಇಲ್ಲ ಅಂದರೆ ೩೭.೫೨ ಲಕ್ಷ, ಅಂದರೆ ಜನಸಂಖ್ಯೆಯಲ್ಲಿ ಪರಿಶಿಷ್ಟರು ಎಷ್ಟು ಪಾಲು ಪಡೆದಿದ್ದಾರೋ ಶೇ. ೨೨.೭೬ ಅದಕ್ಕಿಂತ ಅವರ ದಿನಗೂಲಿ (ಶೇ. ೩೯.೭೪) ಕೆಲಸಗಳಲ್ಲಿ ಮುಗಿಬಿದ್ದಿದ್ದಾರೆ. ಪರಿಶಿಷ್ಟರಲ್ಲಿ ದಿನಗೂಲಿಗಳ ಪ್ರಮಾಣ ಶೇ. ೪೩–೬೦ರಷ್ಟಾಗುತ್ತದೆ. ಪ್ರತಿಷ್ಠರಲ್ಲಿ ಅವರ ಪ್ರಮಾಣ ಶೇ. ೨೧.೨೦ ಮಾತ್ರ, ಈ ಎಲ್ಲ ವಿವರಗಳನ್ನು ಇಲ್ಲಿ ನೀಡುವ ಕಾರಣವೆಂದರೆ ಪರಿಶಿಷ್ಟರ ಸಮಾಜದಲ್ಲಿ ದುಡಿಮೆಗೆ ನೀಡುತ್ತಿರುವ ಕಾಣಿಕೆ ಅಪಾರ. ಈ ಮೇಲಿನ ಸಂಗತಿಗಳು ಚಾರಿತ್ರಿಕ ಶ್ರೇಣಿಕರಣವನ್ನು ಪ್ರತಿನಿಧಿಸಿದರೆ ಅಭಿವೃದ್ಧಿಯ ಫಲಗಳು ಇದಕ್ಕಿಂತ ಭಿನ್ನವಾದ ಸಂಗತಿಗಳನ್ನು ಹೊರಹಾಕಿದೆ. ಎನ್.ಸಿ.ಈ.ಎ.ಆರ್. ಸಂಸ್ಥೆಯು ಭಾರತದಲ್ಲಿ ಮಾನವ ಅಭಿವೃದ್ಧಿ ಸವಾಲುಗಳು ಎಂಬ ಅಧ್ಯಯನದಲ್ಲಿ ಸಾಮಾಜಿಕ ಅಸಮಾನತೆ ಹಿಡಿದಿಡುವ ಪ್ರಯತ್ನ ಮಾಡಿದೆ.

ಈ ಅಧ್ಯಯನಕ್ಕೆ ಸುಮಾರು ೧೫೦೩ ಹಳ್ಳಿಗಳಲ್ಲಿ ೪೦೦೦೦ ಕುಟುಂಬಗಳನ್ನು ಸಮೀಕ್ಷೆ ಮಾಡಲಾಗಿದೆ. ಈ ಅಧ್ಯಯನದಲ್ಲಿ ಅದು ಕಂಡುಕೊಂಡ ಸತ್ಯವೆಂದರೆ ಏರಿಕೆಯಾದ ವರಮಾನವು ತನ್ನಷ್ಟಕ್ಕೆ ತಾನೆ ಸಮಾಜದ ಕೆಳಸ್ತರದಲ್ಲಿರುವ ದಲಿತರಿಗೆ, ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ ಒದಗಿಬರುತ್ತದೆ ಎಂಬ ಸಾಂಪ್ರದಾಯಿಕ ನಂಬಿಕೆಯು ಹುಸಿಯಾದದ್ದು, ನೊಬೆಲ್ ಪ್ರಶಸ್ತಿ ಅರ್ಥಶಾಸ್ತ್ರಜ್ಞ ಜೋಸೆಫ್ ಸ್ಟಿಗ್ ಲಿಡ್ಜ್ ತನ್ನ ಪ್ರಸಿದ್ಧ ಜಾಗತೀಕರಣ ಕೃತಿಯಲ್ಲಿ ನಾವು ಯಾವುದನ್ನು ಟ್ರಿಕಲ್ ಡೌನ್ ಥೇರಿ ಎಂದು ಕರೆಯುತ್ತಾ ಬಂದಿದ್ದೆವೆಯೋ ಅದು ಹುಸಿ ಎಂಬುದನ್ನು ಸಿದ್ಧಮಾಡಿ

ತೋರಿಸಿದ್ದಾನೆ. ಎನ್‌ಸಿಈಎಆರ್ ಅಧ್ಯಯನದ ಪ್ರಕಾರ ದಲಿತ ಕುಟುಂಬಗಳ ತಲಾ ವಾರ್ಷಿಕ ವರಮಾನ ರೂ. ೨೦೦೦೦ದಿಂದ ೩೨೦೦೦ದಷ್ಟಿದ್ದಾರೆ. ಹಿಂದುಳಿದವರ, ಸಿಖ್ಖರು, ಜೈನ ಮತ್ತು ಕ್ರೈಸ್ತರ ತಲಾ ವರಮಾನ ೪೮೦೦೦ದಿಂದ ೫೨೦೦೦ ರೂ. ಅಂದರೆ ನಮ್ಮ ಸಮಾಜದ ಶ್ರೇಣೀಕರಣ ಹೇಗಿದೆಯೋ ಹಾಗೆ ಅಭಿವೃದ್ಧಿಯೂ ಸಾಗಿದೆ. ಈ ಕಾರಣದಿಂದಾಗಿ ಅಭಿವೃದ್ಧಿಯೂ ಪರಿಶಿಷ್ಟರನ್ನೊಳಗೊಳ್ಳುತ್ತಿಲ್ಲ. ಅದೇ ರೀತಿಯಾಗಿ ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರ ದುಡಿಮೆಯು ಪುರುಷ ದುಡಿಮೆಯ ಶೇ. ೫೪ರಷ್ಟಿದ್ದಾರೆ. ನಗರ ಪ್ರದೇಶದಲ್ಲಿ ಅವರ ಪ್ರಮಾಣ ಶೇ. ೬. ಈ ವಿಷಯದಲ್ಲಿ ಹೆಚ್ಚು ವಂಚನೆಗೆ ಮತ್ತು ದಮನಕ್ಕೆ ಒಳಗಾದವರೆಂದರೆ ದಲಿತ ಮಹಿಳೆಯರು ಕರ್ನಾಟಕದಲ್ಲಿ ಪರಿಶಿಷ್ಟರ ದಿನಗೂಲಿ ದುಡಿಮೆಗಾರರಲ್ಲಿ (೨೪.೭೫ ಲಕ್ಷ) ಪುರುಷರ ಪ್ರಮಾಣ ೪೪.೬೪ರಷ್ಟಾದರೆ ಮಹಿಳೆಯರ ಪ್ರಮಾಣ ಶೇ. ೫೫.೩೬. ಒಟ್ಟಾರೆಯಾಗಿ ಕರ್ನಾಟಕದಲ್ಲಿ ಕಳೆದ ೧೦ ವರ್ಷಗಳಲ್ಲಿ ರಾಜ್ಯದ ತಲಾ ವರಮಾನವು ಎರಡು ಪಟ್ಟು ಹೆಚ್ಚಾಗಿದೆ. ಆದರೆ ಜನರ ಬದುಕು ಶೋಚನೀಯವಾಗಿದೆ. ಈ ಏರಿಕೆಯ ಪರಿಣಾಮ ದಲಿತರ ಯಾವ ಪರಿಣಾಮ ಬೀರಿಲ್ಲ.[೯]

೫.೨. ಭೂಮಿ

ಕರ್ನಾಟಕದಲ್ಲಿ ದಲಿತರ ಭೂಮಾಲಿಕತ್ವಕ್ಕೆ ಸಂಬಂಧಿಸಿದಂತೆ ಅನೇಕ ಅಧ್ಯಯನಗಳು, ವರದಿಗಳು, ದಲಿತರಲ್ಲಿ ಭೂ ಒಡೆತನವು ಕನಿಷ್ಠವಾಗಿದೆ ಎಂದು ಅಭಿಪ್ರಾಯಪಟ್ಟಿವೆ. ಕರ್ನಾಟಕದ ಕೃಷಿಭೂಮಿಯ ಒಡೆತನವು ಪರಿಶಿಷ್ಟ ಜಾತಿಗಳಲ್ಲಿ ಅತ್ಯಂತ ಕನಿಷ್ಠವಾಗಿದೆ. ಬಹುತೇಕ ಹಿಡುವಳಿದಾರರು ಸಣ್ಣ ಹಾಗೂ ಆರ್ಥಿಕವಲ್ಲದ ಹಿಡುವಳಿಗಳನ್ನು ಹೊಂದಿದ್ದಾರೆ., ೨೦೦೧ರ ಜನಗಣತಿ ಪ್ರಕಾರ ರಾಜ್ಯದ ಒಟ್ಟು ೭೦.೭೯ ಲಕ್ಷ ಹಿಡುವಳಿಗಳ ಪೈಕಿ ೮.೨೩ ಲಕ್ಷದಷ್ಟು(ಶೇ. ೧೧.೬೫) ಮಾತ್ರ ಹಿಡುವಳಿಗಳನ್ನು ಪರಿಶಿಷ್ಟ ಜಾತಿಗಳು ಹೊಂದಿದ್ದಾರೆ. ಒಟ್ಟು ೧೨೩.೦೭ಲಕ್ಷ ಹೆಕ್ಟೇರ್ (ಶೇ. ೮.೭) ಸಾಗುವಳಿ ಪ್ರದೇಶವನ್ನು ಪರಿಶಿಷ್ಟರು ಹೊಂದಿದ್ದಾರೆ.

ಪರಿಶಿಷ್ಟ ಜಾತಿಯ ಜನಸಂಖ್ಯೆ ಶೇ. ೧೬.೨೦ರಷ್ಟು ಇರುವಾಗ ಕನಿಷ್ಠ ಅವರ ಜನಸಂಖ್ಯೆಗೆ ಅನುಗುಣವಾಗಿಯೂ ಅವರಿಗೆ ಭೂಮಿಯು ದಕ್ಕಿಲ್ಲ ಎಂದು ಸ್ಪಷ್ಟವಾಗುತ್ತದೆ. ಪರಿಶಿಷ್ಟ ಜಾತಿಗಳಿಗೆ ಸೇರಿರುವ ಹಿಡುವಳಿಗಳಲ್ಲಿ ಶೇ. ೮೨ರಷ್ಟು ಹಿಡುವಳಿಗಳು ಸಣ್ಣ ಮತ್ತು ಅತಿಸಣ್ಣ ಹಿಡುವಳಿಗಳಾಗಿವೆ. ಅಂದರೆ ೧–೨ ಹೆಕ್ಟೇರ್‌ಗಿಂತ ಕಡಿಮೆ. ಇಂತಹ ಹಿಡುವಳಿಗಳಿಂದ ಗಮನಾರ್ಹ ಆದಾಯ ಬರುವುದಿಲ್ಲ. ಹೀಗಾಗಿ ಪರಿಶಿಷ್ಟ ಜಾತಿಗಳಿಗೆ ಸೇರಿದ ಕೃಷಿಕರು ಹೆಚ್ಚಾಗಿ ಸಾಲಗಾರರಾಗಿದ್ದಾರೆ. ಮತ್ತು ಬಡತನದ ಕೂಪಕ್ಕೆ ಬಿದ್ದಿದ್ದಾರೆ. ಹೀಗಾಗಿ ಬಹುತೇಕ ದಲಿತರು ಆರ್ಥಿಕ ಭದ್ರತೆಯಿಂದ ಬಳಲುತ್ತಿದ್ದಾರೆ. ಇದರಿಂದ ಶಿಕ್ಷಣ ಆರೋಗ್ಯ ಕುಟುಂಬ ನಿರ್ವಹಣೆ ಸಾಧ್ಯವಾಗುತ್ತಿಲ್ಲ. ಅದ್ದರಿಂದ ದಲಿತರ ಮಾನವ ಅಭಿವೃದ್ಧಿಯನ್ನು ಕೇಂದ್ರಿಕರಿಸಿ ಯೋಜನೆಗಳನ್ನು ರೂಪಿಸುವ ಅಗತ್ಯತೆ ಇದೆ.[೧೦]

ಕೋಷ್ಟಕ ೫.೩. ವರ್ಗವಾರು ಕೃಷಿ ಭೂ ಹಿಡುವಳಿಗಳ ವಿವರ ಕೃಷಿ ಗಣತಿ ೨೦೧೦-೧೧

(ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ, ಹಿಡುವಳಿಗಳು ಸಂಖ್ಯೆಗಳಲ್ಲಿ)

ಕ್ರ.ಸಂ	ಜಿಲ್ಲೆಯ ಹೆಸರು	ಒಟ್ಟು ಕೃಷಿ ಭೂ ಹಿಡುವಳಿಗಳು		ಪರಿಶಿಷ್ಟ ಜಾತಿ		ಪರಿಶಿಷ್ಟ ಪಂಗಡ		ಇತರೆ	
		ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ
೧	ಬಾಗಲಕೋಟೆ	೨೨೭೭೩೧	೪೮೭೧೧೭	೨೧೨೧೨	೨೯೫೯೦	೯೬೫೭	೧೭೨೬೪	೧೯೬೮೧೭	೪೩೯೩೧೮
೨	ಬೆಂಗಳೂರು. ನ	೮೦೬೧೫	೭೯೩೪೫	೭೦೫೩	೪೭೧೦	೭೯೪	೬೩೭	೭೨೬೭೮	೭೩೪೫೨
೩	ಬೆಂಗಳೂರು ಗ್ರಾ	೧೭೮೮೬೫	೧೫೨೦೩೪	೧೫೬೦೫	೧೩೩೯೩	೬೧೭೬	೪೮೯೫	೧೫೩೦೨೮	೧೩೩೬೬೧೫
೪	ಬೆಳಗಾವಿ	೫೩೦೯೩೫	೯೯೨೨೯೦	೩೬೭೬೮	೪೦೩೧೦	೨೧೯೩೫	೩೩೪೩೩	೪೭೨೧೧೦	೯೧೫೧೨೩
೫	ಬಳ್ಳಾರಿ	೨೭೫೧೩೫	೫೨೭೫೨೬	೩೫೨೪೬	೫೦೪೫೭	೪೨೬೭೫	೭೫೩೧೬	೧೯೬೩೦೩	೪೦೮೦೨೮
೬	ಬೀದರ್	೨೫೦೯೮೫	೪೫೧೭೭೫	೨೯೨೮೭	೪೧೨೭೩	೨೩೨೦೫	೩೬೧೮೮	೧೯೮೪೧೯	೩೭೩೩೮೬
೭	ವಿಜಯಪುರ	೩೪೨೨೦೩	೯೫೦೩೩೨	೪೭೪೪೦	೯೯೧೭೮	೨೬೩೧	೫೯೮೨	೨೯೨೦೯೪	೮೪೪೫೦೦
೮	ಚಾಮರಾಜನಗರ	೨೧೨೧೯೬	೨೧೫೧೪೨	೪೦೦೮೫	೩೩೦೩೪	೧೨೦೩೩	೯೭೪೭	೧೫೯೬೩೨	೧೭೦೭೧೨
೯	ಚಿಕ್ಕಬಳ್ಳಾಪುರ	೨೧೪೪೬೨	೨೨೬೩೫೬	೩೩೮೫೪	೩೦೫೩೪	೨೪೫೭೮	೨೨೭೫೬	೧೫೫೯೨೩	೧೭೦೯೦೪
೧೦	ಚಿಕ್ಕಮಗಳೂರು	೨೨೩೪೭೭	೩೧೩೩೭೭	೨೪೩೦೭	೨೨೭೭೩	೩೯೩೦	೩೯೯೦	೧೯೩೮೭೪	೨೭೩೦೦೪
೧೧	ಚಿತ್ರದುರ್ಗ	೨೯೦೫೭೭	೫೬೦೭೭೭	೪೪೧೫೨	೬೪೧೭೬	೪೬೪೧೭	೮೯೮೩೪	೧೯೯೮೬೦	೪೦೨೨೨೫
೧೨	ದಕ್ಷಿಣ ಕನ್ನಡ	೨೦೯೦೯೭	೧೭೮೪೧೫	೧೦೫೩೯	೫೪೦೮	೯೬೧೮	೬೫೮೫	೧೮೮೦೯೩	೧೬೪೫೦೩
೧೩	ದಾವಣಗೆರೆ	೨೮೨೬೭೭	೪೧೩೬೮೬	೩೬೬೭೭	೪೪೪೬೨	೩೦೧೫೭	೪೧೭೧೧	೨೧೪೪೦೯	೩೨೩೪೬೩
೧೪	ಧಾರವಾಡ	೧೪೩೨೨೫	೩೪೨೯೭೮	೪೯೭೮	೭೫೮೦	೫೧೪೬	೯೧೧೨	೧೩೨೮೯೭	೩೨೪೮೬೧
೧೫	ಗದಗ	೧೬೩೪೬೬	೩೯೦೨೬೫	೧೩೦೫೨	೨೦೪೩೮	೮೦೦೮	೧೪೫೯೧	೧೪೨೦೮೯	೩೫೩೪೩೨

೧೬	ಕಲಬುರುಗಿ	೩೯೫೪೯೭	೯೩೭೫೫೭	೭೦೨೦೩	೧೨೪೮೭೨	೩೯೨೦	೮೧೩೦	೩೨೧೧೦೪	೮೦೨೬೨೭
೧೭	ಹಾಸನ	೪೩೫೬೮೧	೪೬೩೫೦೦	೬೦೧೬೨	೪೫೫೦೮	೫೮೦೧	೫೫೦೭	೩೬೯೧೩೯	೪೦೮೮೫೦
೧೮	ಹಾವೇರಿ	೨೧೮೩೫೧	೩೭೬೯೧೮	೧೬೬೮೭	೨೧೩೫೪	೧೭೮೪೨	೨೫೦೧೪	೧೮೩೪೬೭	೩೨೯೨೨೦೬
೧೯	ಕೊಡಗು	೬೮೮೮೧	೧೬೭೮೬೧	೨೮೨೩	೨೦೧೭	೧೧೪೧	೯೮೧	೬೪೪೯೦	೧೫೪೫೧೩
೨೦	ಕೋಲಾರ	೨೩೬೮೫೫	೨೩೩೯೨೩	೪೧೫೮೨	೩೫೧೫೩.	೯೮೫೨	೧೮೫೦೩೧	೧೮೫೦೩೧	೧೮೯೧೦೪
೨೧	ಕೊಪ್ಪಳ	೨೧೮೧೦೨	೪೩೩೪೪೮	೧೯೨೭೦	೨೭೯೩೪	೨೨೧೫೮	೪೧೬೨೮	೧೭೬೬೪೦	೩೬೨೬೯೨
೨೨	ಮಂಡ್ಯ	೩೯೫೭೬೬	೩೦೯೪೩	೩೬೩೭೫	೧೯೯೮೬	೨೩೮೩	೧೫೩೯	೩೫೪೬೬೪	೨೮೩೯೯೩
೨೩	ಮೈಸೂರು	೩೮೫೨೨೬	೩೬೮೫೩೦	೬೪೭೩೫	೪೮೧೦೧	೩೮೧೭೫	೩೦೫೯೨	೨೮೨೬೨೪	೨೮೭೮೯೨
೨೪	ರಾಯಚೂರು	೩೩೨೦೩೩	೬೯೫೭೮೭	೪೨೦೧೪	೬೮೧೯೨	೬೦೩೯೯	೧೧೫೮೩೧	೨೨೯೬೦೯	೫೧೧೧೭೬
೨೫	ರಾಮನಗರ	೨೭೧೪೪೮	೨೦೨೫೬೬	೨೫೮೬೬	೧೬೭೭೫	೨೦೩೮	೧೭೨೦	೨೪೩೩೮೧	೧೮೩೮೧೦
೨೬	ಶಿವಮೊಗ್ಗ	೨೧೪೦೦೮	೨೬೨೨೯೮	೨೧೬೮೯	೨೧೪೪೪	೪೫೫೩	೪೮೧೮	೧೮೭೪೬೯	೨೩೪೭೩೮
೨೭	ತುಮಕೂರು	೪೧೪೪೨೮	೬೭೬೩೮೮	೫೩೧೬೫	೬೩೭೨೫	೨೭೨೯	೪೨೦೮೯	೩೩೩೭೩೮	೫೬೯೨೪೮
೨೮	ಉಡುಪಿ	೨೦೦೪೮೫	೧೪೯೬೧೭	೫೦೮೧	೨೩೬೩	೬೨೬೬	೪೮೯೪	೧೮೮೫೯೫	೧೪೦೧೩೯
೨೯	ಉತ್ತರ ಕನ್ನಡ	೧೯೨೮೨೨	೧೪೯೯೬೬	೭೦೪೭	೫೩೨೩	೨೪೨೮	೨೬೩೦	೧೮೨೮೩೯	೧೪೧೨೭೧
೩೦	ಯಾದಗಿರಿ	೨೨೬೪೫೮	೪೪೨೨೭೨	೪೩೦೨೬	೬೪೧೪೫	೨೧೩೪೮	೩೮೫೨೭	೧೬೨೦೦೧	೩೩೯೩೨೨
	ರಾಜ್ಯ	೭೮೩೨೧೮೯	೧೨೧೬೧೪೫೨	೯೧೩೯೮೫	೧೦೭೪೨೦೮	೪೭೨೫೬೧	೭೦೫೧೬೫	೬೪೩೩೦೧೭	೧೦೩೦೯೧೫೫

ಆಧಾರ : ಕರ್ನಾಟಕ ಕೈಪಿಡಿ, ೨೦೧೭, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೫.೩ ದಲಿತರ ಭೂ ಒಡೆತನ

ಕರ್ನಾಟಕದಲ್ಲಿ ಕೃಷಿ ಭೂಮಿಯ ಒಡೆತನವು ಪರಿಶಿಷ್ಟ ಜಾತಿಗಳಲ್ಲಿ ಕನಿಷ್ಠವಾಗಿದೆ. ಬಹುತೇಕ ಹಿಡುವಳಿದಾರರು ಸಣ್ಣ ಹಾಗೂ ಆರ್ಥಿಕವಲ್ಲದ ಹಿಡುವಳಿಗಳನ್ನು ಹೊಂದಿದ್ದಾರೆ. ೨೦೦೧ರ ಜನಗಣತಿ ಪ್ರಕಾರ ರಾಜ್ಯದ ಒಟ್ಟು ೭೦.೭೯ ಲಕ್ಷ ಹಿಡುವಳಿಗಳ ಪೈಕಿ ೮.೨೩ ಲಕ್ಷದಷ್ಟು (ಶೇ, ೧೧.೬೫) ಹಿಡುವಳಿಗಳನ್ನು ಮಾತ್ರ ಪರಿಶಿಷ್ಟ ಜಾತಿಗಳು ಹೊಂದಿದ್ದಾರೆ. ಒಟ್ಟು ೧೨.೦೭ಲಕ್ಷ ಹೆಕ್ಟರ್ (ಶೇ. ೮.೭) ಸಾಗುವಳಿ ಪ್ರದೇಶವನ್ನು ಪರಿಶಿಷ್ಟರು ಹೊಂದಿದ್ದಾರೆ. ಪರಿಶಿಷ್ಟ ಜಾತಿಯ ಜನಸಂಖ್ಯೆಯ ಶೇ. ೧೬.೨೧ರಷ್ಟು ಇರುವಾಗ ಕನಿಷ್ಠ ಅವರ ಜನಸಂಖ್ಯೆಯ ಪ್ರಮಾಣಕ್ಕನು ಗುಣವಾಗಿಯೂ ಅವರಿಗೆ ಭೂಮಿ ದಕ್ಕಿಲ್ಲ ಎಂದು ಸ್ಪಷ್ಟವಾಗುತ್ತದೆ.

ಪರಿಶಿಷ್ಟ ಜಾತಿಗಳಿಗೆ ಸೇರಿರುವ ಹಿಡುವಳಿಗಳಲ್ಲಿ ಶೇ. ೮೨ರಷ್ಟು ಹಿಡುವಳಿಗಳು ಸಣ್ಣ ಮತ್ತು ಅತಿಸಣ್ಣ ಹಿಡುವಳಿಗಳಾಗಿವೆ. ಅಂದರೆ ೧ರಿಂದ ೨ ಹೆಕ್ಟೇರ್‌ಗಿಂತ ಕಡಿಮೆ ಇಂತಹ ಹಿಡುವಳಿಗಳಿಂದ ಗಮನಾರ್ಹ ಆದಾಯ ದೊರಕುವುದಿಲ್ಲ. ಹೀಗಾಗಿ ಪರಿಶಿಷ್ಟ ಜಾತಿಗೆ ಕೃಷಿಕರು ಹೆಚ್ಚಾಗಿ ಸಾಲಗಾರರಾಗಿದ್ದಾರೆ ಮತ್ತು ಬಡತನದ ಕೂಪಕ್ಕೆ ಬಿದಿದ್ದಾರೆ.

೫.೪ ಕೋಲಾರ ಜಿಲ್ಲೆಯ ದಲಿತರ ಭೂಮಾಲಿಕತ್ವದ ರಾಚನಿಕ ಸ್ವರೂಪ

ಕೋಲಾರ ಜಿಲ್ಲೆಯಲ್ಲಿ ಬಹುಸಂಖ್ಯಾತರು ದಲಿತರೇ ಆಗಿದ್ದಾರೆ. ಹಾಗಾಗಿ ಆ ಜಿಲ್ಲೆಯನ್ನು ಪರಿಶಿಷ್ಟ ಜಾತಿಗೆ (ಲೋಕಸಭೆ) ಮೀಸಲು ಕ್ಷೇತ್ರವಾಗಿದೆ. ಅದರಲ್ಲಿ ಮೀಸಲು .... ವಿಧಾನ ಸಭಾ ಕ್ಷೇತ್ರಗಳಿವೆ. ಒಟ್ಟಾರೆಯಾಗಿ ಜನಸಂಖ್ಯೆಯು ದೃಷ್ಟಿಯಿಂದ ಬಹುಸಂಖ್ಯಾತರು ಮೀಸಲು ಕ್ಷೇತ್ರ ಅಧಿಕಾರ ಮತ್ತು ಪ್ರಭಾವ ದಲಿತರದ್ದೇ ಇರಬೇಕಾಗಿತ್ತು. ಆದರೆ ವಾಸ್ತವದಲ್ಲಿ ಹಾಗೇ ಇಲ್ಲ. ಅದಕ್ಕೆ ಕಾರಣ ಹಲವಾರು ಇರಬಹುದು. ಆದರೆ ಅದರಲ್ಲಿ ಪ್ರಮುಖವಾದದ್ದು ಅಥವಾ ಒಬ್ಬ ವ್ಯಕ್ತಿಯ ಕುಟುಂಬ ಸ್ಥಾನಮಾನ ನಿರ್ಧರಿಸುವುದು ಆರ್ಥಿಕತೆ ಅಥವಾ ಭೂಮಾಲೀಕತ್ವ, ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ ಹೇಗೆ ನಿರ್ಣಾಯಕ ಪಾತ್ರವಹಿಸುತ್ತದೆಯೋ ಅದೇ ರೀತಿಯಾಗಿ ಆರ್ಥಿಕತೆಯು ಸಮಾಜದಲ್ಲಿ ನಿರ್ಣಾಯಕ ಪಾತ್ರವಹಿಸುತ್ತದೆ. ಈ ಹಿನ್ನೆಲೆಯಲ್ಲಿ ಕೋಲಾರ ಜಿಲ್ಲೆ ದಲಿತರ ಭೂಮಾಲಿಕತ್ವವನ್ನು ಗಮನಿಸಿದರೆ ರಾಜ್ಯಮಟ್ಟಕ್ಕಿಂತ ಉತ್ತಮ ಎಂಬ ಅಭಿಪ್ರಾಯವಿದೆ. ಆದರೆ ಜನಸಂಖ್ಯೆಗೆ ಅನುಗುಣವಾಗಿಲ್ಲ ಎಂಬ ಅಭಿಪ್ರಾಯವಿದೆ. ಅದರೆ ಜನಸಂಖ್ಯೆಗೆ ಅನುಗುಣವಾಗಿಲ್ಲ ಎಂಬುದು ಗಮನಾರ್ಹ ಸಂಗತಿ.

ಕೋಲಾರ ಜಿಲ್ಲಾ ಮಾನವ ಅಭಿವೃದ್ಧಿ ವರದಿ ೨೦೧೪ ಕುಟುಂಬವು ಬಡತನದ ಸ್ಥಿತಿಯಿಂದ ಹೊರಗೆ ಬರಲು ಭೂಮಾಲೀಕತ್ವ ಪ್ರಮಾಣದ ಭೂಮಿಯ ಮಾಲೀಕತ್ವವು ಭೂಮಿಯನ್ನು ಪರಭಾರೆ ಮಾಡುವ ಲಾಭಗಳನ್ನು ಕಡಿಮೆಗೊಳಿಸುವ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಹೆಚ್ಚಿಸಲು ಹೂಡಿಕೆಯ ಸಂಬಂಧವನ್ನು ತಡೆಗಟ್ಟುತ್ತದೆ. ಕೋಲಾರ ಜಿಲ್ಲೆಯ ಭೂ ಹಿಡುವಳಿ ಮಾದರಿಗಳು ಜಿಲ್ಲೆಯಲ್ಲಿ ಅತಿ ಹೆಚ್ಚಿನ ಸಂಖ್ಯೆಯ ರೈತರು ಅತಿಸಣ್ಣ ರೈತರಾಗಿದ್ದು (ಶೇ. ೮೮.೦೧) ಎಂಬುದನ್ನು ಸೂಚಿಸುತ್ತದೆ. ಎಸ್.ಸಿ.(ಪ.ಜಾತಿ) ಹಾಗೂ ಎಸ್.ಟಿ.(ಪ.ಪಂಗಡ) ರೈತರಿಗೂ ಇದೇ ರೀತಿಯ ಮಾದರಿಗಳು ಅನ್ವಯಿಸುತ್ತದೆ.

ಕೋಷ್ಟಕ ೫.೪. ಕೋಲಾರ ಜಿಲ್ಲೆಯ ಭೂ ಹಿಡುವಳಿ ಮಾದರಿಗಳು

ತಾಲೂಕು	ಪರಿಶಿಷ್ಟ ಜಾತಿ		ಪರಿಶಿಷ್ಟ ಪಂಗಡ		ಇತರೆ		ಒಟ್ಟು	
	ರೈತರು	ಭೂ.ಹಿ	ರೈತರು	ಭೂ.ಹಿ	ರೈತರು	ಭೂ.ಹಿ	ರೈತರು	ಭೂ.ಹಿ
ಶ್ರೀನಿವಾಸಪುರ	೬೦೨೧	೬೩೫೧.೬	೨೫೩೨	೨೮೨೪.೨೮	೨೪೦೦೭	೩೧೦೦೬.೫೧	೩೨೫೬೦	೪೦೧೮೨.೩೯
ಕೋಲಾರ	೮೧೫೩	೬೩೧೪.೩೧	೧೩೩೩	೧೩೩೪.೯೨	೪೪೮೮೪	೪೧೮೫೫.೨೭	೫೪೩೭೦	೪೯೫೦೪.೫
ಮಾಲೂರು	೭೬೪೪	೬೦೩೦.೬೬	೩೦೨೪	೨೫೫೦.೧೪	೩೭೭೫೨	೩೭೦೨೬.೯೪	೪೮೪೨೦	೪೫೬೦೭.೭೪
ಬಂಗಾರಪೇಟೆ	೯೯೭೧	೮೨೭೬೫೭	೧೫೯೦	೧೩೬೫.೭೫	೩೮೬೬೦	೩೮೨೯೦.೩೫	೫೦೨೨೧	೪೭೯೩೨.೬೭
ಮುಳಬಾಗಿಲು	೯೭೯೮	೮೧೭೯.೭೬	೧೩೭೩	೧೩೩೯.೨೮	೪೦೧೧೩	೪೧೩೭೬.೫೭	೫೧೨೮೪	೫೦೮೯೫.೬೧
ಜಿಲ್ಲೆ	೪೧೫೮೭	೩೫೧೫೨.೯	೯೮೫೨	೯೨೧೪.೩೭	೧೮೫೪೧೬	೧೮೯೫೫೫.೬೪	೨೩೬೮೫೫	೨೩೩೯೨೨.೯೧

ಆಧಾರ: ಕೋಲಾರ ಜಿಲ್ಲಾ ಮಾನವ ಅಭಿವೃದ್ಧಿ ವರದಿ, ೨೦೧೪

ಈ ಮೇಲಿನ ಕೋಷ್ಟಕದಲ್ಲಿ ನೀಡಲಾದ ಒಟ್ಟು ಅಂಕಿ ಅಂಶಗಳು ಜಂಟಿ ಮಾಲೀಕತ್ವದ ಮತ್ತು ಸಾಂಸ್ಥಿಕ ಹಿಡುವಳಿಗಳನ್ನೊಳಗೊಂಡಿದೆ. ಶೇ. ೯೨ರಷ್ಟು ಪ.ಜಾತಿ ಭೂಹಿಡುವಳಿದಾರರು ಮತ್ತು ಶೇ. ೮೯.೯೦ರಷ್ಟು ಪ.ಪಂಗಡದ ರೈತರು ಸಣ್ಣ ಮತ್ತು ಅತಿಸಣ್ಣ ಭೂಹಿಡುವಳಿದಾರರಾಗಿದ್ದಾರೆ. ಆದಾಗ್ಯೂ ಜಿಲ್ಲೆಯಲ್ಲಿರುವ ಒಟ್ಟು ಭೂಹಿಡುವಳಿದಾರರ ಪೈಕಿ ಕೇವಲ ಶೇ. ೧೭.೫೮ರಷ್ಟು ರೈತರು ಪ.ಜಾತಿಗಳು (ಜಿಲ್ಲೆಯ ಒಟ್ಟು ಜನಸಂಖ್ಯೆಯ ಪೈಕಿ ಪ.ಜಾತಿಗಳ ಪ್ರಮಾಣ ೩೦.೩೨ರಷ್ಟಿದೆ). ಜಿಲ್ಲೆಯಲ್ಲಿರುವ ಒಟ್ಟು ಭೂಹಿಡವಳಿದಾರರ ಪೈಕಿ ಪ.ಪಂಗಡ ಭೂಹಿಡುವಳಿದಾರರ ಪ್ರಮಾಣ ಶೇ. ೪.೯೨ರಷ್ಟಿದೆ. ಇದು ಜಿಲ್ಲೆಯ ಒಟ್ಟು ಜನಸಂಖ್ಯೆ ಪೈಕಿ ಪ.ಪಂಗಡದ ಜನಸಂಖ್ಯೆಯೊಂದಿಗೆ ಶೇ. ೫.೧೩ರಷ್ಟು ಹೋಲಿಸಬಹುದಾಗಿದೆ. ಈ ಪ್ರಕಾರ ವಿಶ್ಲೇಷಣೆಯು ಜಿಲ್ಲೆಯಲ್ಲಿ ಪ.ಜಾತಿ ಮತ್ತು ಜನಸಂಖ್ಯೆಯಲ್ಲಿ ಭೂಮಾಲಿಕತ್ವಕ್ಕೆ ಸಂಬಂಧಿಸಿದ ಆಸ್ತಿ ವಿತರಣೆ ಸ್ಪಷ್ಟವಾಗಿ ತಿರುವಿರುವುದು ಸೂಚಿಸುತ್ತದೆ.

೫.೫. ಆದಾಯ

ಆರ್ಥಿಕ ಅಭಿವೃದ್ಧಿಗಿಂತ, ಮಾನವ ಅಭಿವೃದ್ಧಿಯ ಪರಿಕಲ್ಪನೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಏಕೆಂದರೆ, ಇದು ಜಿಡಿಪಿಯ(ಒಟ್ಟು ಆಂತರಿಕ ಉತ್ಪನ್ನ) ಆಚೆಗೆ, ಯೋಗಕ್ಷೇಮಗಳನ್ನು ಒಳಗೊಂಡಂತಹ ವಿಸತಾರವಾದ ನೋಟವನ್ನು ಹೊಂದಿದೆ. ಮಾನವ ಅಭಿವೃದ್ಧಿ ವರದಿಯು, ಮಾನವ ಅಭಿವೃದ್ಧಿಯ ಮೂರು ಆಯಾಮಗಳ– ಸುಧೀರ್ಘ ಮತ್ತು ಆರೋಗ್ಯಕರ ಜೀವನ(ನಿರೀಕ್ಷಿತ ಜೀವಿತಾವಧಿಯಿಂದ ಮಾಪನ ಮಾಡುವ), ಶಿಕ್ಷಿತರಾಗುವ(ವಯಸ್ಕ ಸಾಕ್ಷರತೆ ಮತ್ತು ಪ್ರಾಥಮಿಕ, ದ್ವಿತೀಯ ಹಾಗೂ ತೃತೀಯ ಮಟ್ಟದಿಂದ ಮಾಪನ ಮಾಡುವ) ಹಾಗೂ ಗೌರವಯುತ ಜೀವನಮಟ್ಟವನ್ನು ಹೊಂದುವ (ಖರೀದಿಸುವ ಸಾಮರ್ಥ್ಯ, ಪಿಪಿಪಿ, ಆದಾಯಗಳಿಂದ ಮಾಪನ ಮಾಡುವಂತಹ) ಸಮಗ್ರ ಅಳತೆಯನ್ನು ಒದಗಿಸುತ್ತದೆ. ಈ ಅಧ್ಯಾಯವು, ಮಾನವ ಅಭಿವೃದ್ಧಿಯ ಮೂರನೇ ಅತೀ ಮುಖ್ಯವಾದ ಅಂಶ, 'ಜೀವನ ಗುಣಮಟ್ಟ'ಕ್ಕೆ ಸಂಬಂಧಿಸಿದೆ. ಈ ಅಂಶವನ್ನು ಜಿಲ್ಲೆಯ ಆದಾಯ, ಉದ್ಯೋಗ, ಆಹಾರ ಭದ್ರತೆ ಮತ್ತು ಬಡತನದ ನಿರ್ದಿಷ್ಟ ಸೂಚ್ಯಂಕಗಳ ಮೂಲಕ ಮಾಪನ ಮಾಡಬಹುದು. ಕಳೆದ ಹಲವು ದಶಕಗಳಲ್ಲಿ, ಜಗತ್ತಿನಲ್ಲಿ ಪ್ರಾಪಂಚಿಕ ಸಂಪತ್ತು ಮತ್ತು ಸಮೃದ್ಧಿಯಲ್ಲಿ ತೀವ್ರ ಹೆಚ್ಚಳವಾಗಿದೆ. ಆದರೆ, ದೊಡ್ಡ ಪ್ರಮಾಮದ ಜನರು ಪ್ರಗತಿಪರ ಚಟುವಟಿಕೆಗಳಲ್ಲಿ ಭಾಗವಹಿಸಿದೆ, ಈ ಹೆಚ್ಚಳಗಳು ಬಹಳ ಅಸಮಾನವಾಗಿವೆ.

ಜನರು ರಾಷ್ಟ್ರದ ನಿಜವಾದ ಸಂಪತ್ತು. ಬಹಳಷ್ಟು ಬಾರಿ ಮಾನವ ಕಲ್ಯಾಣವನ್ನು, ರಾಷ್ಟ್ರೀಯ ಆದಾಯದ (ಜಿಡಿಪಿಯಿಂದ ಮಾಪನ ಮಾಡುವ ಹಾಗೆ) ಏರುಪೇರುಗಳಿಂದ ಆಕರ್ಷಿತವಾದ ಪ್ರಾಪಂಚಿಕ ಸಂಪತ್ತಿನಿಂದ ಅಳೆಯಲಾಗುತ್ತದೆ. ಇದೇ ಸಮಯದಲ್ಲಿ ಜಿಡಿಪಿ ಪ್ರಗತಿ ಮತ್ತು ಆರ್ಥಿಕ ಸ್ಥಿರತೆಯ ಪ್ರಾಮುಖ್ಯತೆಗಳನ್ನು ಕಡಿಮೆ ಅಂದಾಜಿಸಲಾಗುವುದಿಲ್ಲ. ಈ ಅಂಶಗಳ ಅನುಪಸ್ಥಿತಿಯಿರುವ ಅನೇಕ ರಾಷ್ಟ್ರಗಳಲ್ಲಿ ಕಂಡಬಂದಿರುವಂತೆ, ಸುಸ್ಥಿರ ಮಾನವ ಪ್ರಗತಿಗೆ ಎರಡೂ ಮೂಲಭೂತವಾಗಿವೆ.

ಆದರೆ, ಪ್ರಗತಿಯನ್ನು ಮಾಪನ ಮಾಡಲು ಅಚಿತಿಮ ಮಾನದಂಡವೆಂದರೆ ಜೀವನಗುಣಮಟ್ಟ ಅರಿಸ್ಟಾಟಲ್‌ನ ಪ್ರಕಾರ, ನಾವು ಕೇವಲ ಸಂಪತ್ತನ್ನು ಹುಡುಕುತ್ತಿಲ್ಲ. ಏಕೆಂದರೆ ಅದರ ಬಳಕೆ ಮತ್ತು ಉಪಯುಕ್ತತೆ ಇತರೆ ಕಾರಣಗಳಿಗಾಗಿ ಅಷ್ಟೇ. ಇಲ್ಲಿ ಇತರೆ ಕಾರಣ ಎಂಬ ಪದ. ಜನರು, ಮಾನವರಾಗಿ ತಮ್ಮ ಸಾಮರ್ಥ್ಯವನ್ನು ಅರ್ಥ ಮಾಡಿಕೊಳ್ಳುವ ಅವಕಾಶವನ್ನು ಉಲ್ಲೇಖಿಸುತ್ತದೆ. ನಿಜವಾಗಿ ಅವಕಾಶವೆಂದರೆ ನಿಜವಾದ ಆಯ್ಕೆಗಳನ್ನು ಹೊಂದುವುದು- ಸಾಕಷ್ಟು ಆದಾಯ, ಶಿಕ್ಷಣ, ಉತ್ತಮ ಆರೋಗ್ಯ ಮತ್ತು ಶೋಷಣೆಯಿಲ್ಲದಿರುವ ರಾಷ್ಟ್ರದಲ್ಲಿ ಜೀವಿಸುವ ಆಯ್ಕೆಗಳಿಂದ ಬರುವಂತಹ ಆಯ್ಕೆಗಳು.

ಅನೇಕ ಪ್ರದೇಶಗಳ ಹೆಚ್‌ಡಿಐ ವಿಶ್ಲೇಷಣೆಯು ಆದಾಯ, ಆರೋಗ್ಯ ಮತ್ತು ಶಿಕ್ಷಣಗಳ ನಡುವಿನ ಸಕಾರಾತ್ಮಕ ಹೊಂದಾಣಿಕೆಗಳನ್ನು ಪ್ರತಿಬಿಂಬಿಸುತ್ತದೆ. ಸಾಮೂಹಿಕ ಬಡತನ, ಆಳವಾಗಿ ಬೇರುಬಿಟ್ಟಿರುವಂತಹ ಅಸಮತೆ ಮತ್ತು ರಾಜಕೀಯ ಸಶಕ್ತತೆಯ ಕೊರತೆಗಳು, ಜಗತ್ತಿನ ದೊಡ್ಡ ಪ್ರಮಾಣದ ಜನಸಂಖ್ಯೆಗೆ ನಿಜವಾದ ಆಯ್ಕೆಗಳನ್ನು ಮಾಡುವ ಅವಕಾಶವನ್ನು ತಪ್ಪಿಸುತ್ತದೆ ಮತ್ತು ಈ ಮೂಲಕ ಅವರ ಒಟ್ಟಾರೆ ಅಭಿವೃದ್ಧಿಯನ್ನು ತಡೆಯುತ್ತದೆ.

ಆದಾಯ ಮಾಪನ

ಸ್ವಾತಂತ್ರ್ಯ ಬಂದಾಗಿನಿಂದಲೂ ಭಾರತ ಸರ್ಕಾರದ ಕೇಂದ್ರೀಯ ಸಾಂಖ್ಯಿಕ ಸಂಘಟನೆಯು (ಸಿಎಸ್‌ಒ), ಪ್ರತಿ ವರ್ಷ ರಾಷ್ಟ್ರೀಯ ಆದಾಯ ಮತ್ತು ತಲಾ ವ್ಯಕ್ತಿ ಆದಾಯಗಳನ್ನು ಅಂದಾಜಿಸುತ್ತಾ ಬಂದಿದೆ ಮತ್ತು ಪ್ರಕಟಿಸುತ್ತಿದೆ. ಈ ಅಂದಾಜುಗಲು ಕೇವಲ ರಾಷ್ಟ್ರ ಮತ್ತು ರಾಜ್ಯಮಟ್ಟಗಳಲ್ಲಿ ಮಾತ್ರ ಲಭ್ಯವಿದೆ. ಜಿಲ್ಲಾ ಮಟ್ಟದ ಆದಾಯವನ್ನು ಅಂದಾಜಿಸುವಲ್ಲಿ ಕರ್ನಾಟಕ ಮೊದಲ ರಾಜ್ಯವಾಗಿದ್ದು, ಮೊದಲ ಅಂದಾಜು ಪ್ರಕ್ರಿಯೆ ೧೯೬೦-೬೧ರಲ್ಲಿ ಲಭ್ಯಗೊಳಿಸಿತು. ಅಂದಿನಿಂದ, ೧೯೯೦-೯೧ರವರೆಗೂ ಹತ್ತು ವರ್ಷಗಳಿಗೊಮ್ಮೆ ಜಿಲ್ಲಾ ಮಟ್ಟದ ಆದಾಯಗಳನ್ನು ಮಾಪನ ಮಾಡುತ್ತಿದೆ ಮತ್ತು ೧೯೯೧ರ ನಂತರ ಕ್ರಮಬದ್ಧವಾಗಿ ವಾರ್ಷಿಕ ಮಾಪನಗಳನ್ನು ಮಾಡುತ್ತಿದೆ. ಈಡಿಪಿಯ ಜಿಲ್ಲಾ ಅಂದಾಜುಗಳು, ರಾಜ್ಯ ಜಿಡಿಪಿಯ ಅಂದಾಜುಗಳ ಉತ್ಪನ್ನಗಳನ್ನು ಆಧರಿಸಿವೆ. ಈಲ್ಲಾ ಆಂತರಿಕ ಉತ್ಪನ್ನ(ಡಿಡಿಪಿ) ಜಿಲ್ಲಾ ಮಟ್ಟದ ಅಂದಾಜುಗಳಾಗಿವೆ ಮತ್ತು ಇದು ರಾಜ್ಯಮಟ್ಟದ ಜಿಡಿಪಿ ಅಂದಾಜುಗಲಿಂದ ಹೊಂದಲಾಗುತ್ತದೆ. ಈ ದತ್ತಾಂಶವನ್ನು ಸಂಗ್ರಹಿಸಿ, ಪ್ರಕಟಿಸುವ ರಾಜ್ಯದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಈವರೆಗೂ ಬೇರುಮಟ್ಟದಲ್ಲಿ ಜಿಡಿಪಿಯನ್ನು ಅಂದಾಜಿಸುವ ಪ್ರಯತ್ನಗಳನ್ನು ಮಾಡಿಲ್ಲ.

ಈ ಅಧ್ಯಯನವು ಕೋಲಾರ ಜಿಲ್ಲೆಯ, ತಾಲೂಕು ಮಟ್ಟದ ಜಿಡಿಪಿಯನ್ನು ಅಂದಾಜಿಸಲು ಪ್ರಯತ್ನಿಸಿದೆ. ಇದಕ್ಕೆ ಸಂಬಂಧಪಟ್ಟಂತಹ ದತ್ತಾಂಶವನ್ನು, ರಾಜ ಅರ್ಥಶಾಸ್ತ್ರ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕೋಲಾರ ಜಿಲ್ಲಾ ಕಚೇರಿಯ ಅಧಿಕೃತ ವರದಿಗಳಿಂದ ಸಂಗ್ರಹಿಸಲಾಗಿದೆ. ತಾಲೂಕು ಮಟ್ಟದಲ್ಲಿ ಪ್ರವೃತ್ತಿಗಳನನು ಪರಿಶೀಲಿಸಲು ಜಿಡಿಪಿಯ ಸತತ ಸಮಯ ಸರಣಿ ದತ್ತಾಂಶ

ಲಭ್ಯವಿಲ್ಲ. ಆದಾಗ್ಯೂ, ಲಭ್ಯವಿರುವ ದತ್ತಾಂಶವನ್ನು ಬಳಸಿಕೊಂಡು ೨೦೦೪-೦೫ ಮತ್ತು ೨೦೦೮-೦೯ರ ಸಂಯುಕ್ತ ವಾರ್ಷಿಕ ಬೆಳವಣಿಗೆ ಪ್ರಮಾಣಗಳನ್ನು (ಸಿಎಜಿಆರ್) ಮಾಪನ ಮಾಡಲಾಯಿತು. ತಾಲೂಕು ಮಟ್ಟದ ಜಿಡಿಪಿಯ(ಟಿಡಿಪಿ) ಅಂದಾಜಿಸುವಿಕೆಗೆ ಇದೇ ರೀತಿಯ, ಸಿಎಸ್‌ಓ ಹಾಗೂ ರಾಜ್ಯ ಅರ್ಥಶಾಸ್ತ್ರ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಅಳವಡಿಸಿಕೊಂಡಿರುವಂತಹ ಸಾಂಪ್ರದಾಯಿಕ ವರ್ಗೀಕರಣಗಳನ್ನು ಅಳವಡಿಸಿಕೊಳ್ಳಲಾಗಿದೆ.

ತಾಲೂಕು ಆರ್ಥಿಕತೆಯನ್ನು ಮೂರು ವಲಯಗಳಲ್ಲಿ ವರ್ಗೀಕರಿಸಲಾಗಿದೆ. ಅವುಗಳೆಂದರೆ, ೧. ಪ್ರಾಥಮಿಕ, ೨. ದ್ವಿತೀಯ ಹಾಗೂ ೩. ತೃತೀಯ ವಿಭಾಗಗಳು. ಪ್ರಾಥಮಿಕ ವಲಯವು ಕೃಷಿ, ಹೈನುಗಾರಿಕೆ, ಅರಣ್ಯಾಗಾರಿಕೆ, ಮೀನುಗಾರಿಕೆ, ಗಣಿಗಾರಿಕೆ ಮತ್ತು ಕಲ್ಲು ಗಣಿಗಾರಿಕೆಗಳನ್ನು ಹೊಂದಿವೆ. ದ್ವಿತೀಯ ವಲಯವು ಎಲ್ಲಾ ತಯಾರಿಕೆ- ನೋಂದಾಯಿತ ಹಾಗೂ ನೋಂದಾಯಿತವಲ್ಲದಿರುವಂತಹ ನಿರ್ಮಾಣ, ವಿದ್ಯುತ್, ಅನಿಲ ಮತ್ತು ನೀರು ಸರಬರಾಜು ವಲಯಗಳನ್ನು ಒಳಗೊಂಡಿದೆ. ತೃತೀಯ ವಲಯವು ಸಾರಿಗೆ, ಸಂವಹನೆ, ಶೇಖರಣೆ ಒಳಗೊಂಡಂತೆ ಮಾರ್ಕೆಟಿಂಗ್, ಹೋಟೆಲ್‌ಗಳು ಹಾಗೂ ರೆಸ್ಟೋರೆಂಟ್‌ಗಳು, ಬ್ಯಾಂಕಿಂಗ್ ಹಾಗೂ ವಿಮೆ, ರಿಯಲ್ ಎಸ್ಟೇಟ್‌ಗಳು, ವಾಸಸ್ಥಾನಗಳ ಮಾಲೀಕತ್ವ ಮತ್ತು ವ್ಯಾಪಾರ ಸೇವೆಗಳು, ಸರ್ವಾಜನಿಕ ಆಡಳಿತಗಳು ಹಾಗೂ ಇತರೆ ಸೇವೆಗಳನ್ನು ಒಳಗೊಂಡಿದೆ.

ಜಿಲ್ಲಾ ಹಾಗೂ ತಾಲೂಕು ಆದಾಯ

ಭಾರತದ ಆರ್ಥಿಕತೆಯ ಪ್ರಗತಿಯನ್ನು ಈಗಿನ ದರಗಳ ಪ್ರಕಾರ ಜಿಡಿಪಿಯ ಅಂಶಗಳಿಂದ ಮಾಪನ ಮಾಡಲಾಗುತ್ತದೆ. ಇದೇ ರೀತಿ, ಕರ್ನಾಟಕದ ಆರ್ಥಿಕತೆಯನ್ನು ರಾಜ್ಯದ ಆಂತರಿಕ ಉತ್ಪನ್ನ(ಎಸ್‌ಡಿಪಿ)ಯಂತೆ ಮಾಪನ ಮಾಡಲಾಗುತ್ತದೆ.(*ಈಗಿನ ದರಗಳ ಪ್ರಕಾರ ಒಟ್ಟು ಆಂತರಿಕ ಉತ್ಪನ್ನ(ಜಿಡಿಪಿ) ಅಂದರೆ, ಈಗಿನ ವರದಿ ಅವಧಿಯಲ್ಲಿನ ದರಗಳಲಿ ಜಿಡಿಪಿ, ನಾಮಿನಲ್ ಜಿಡಿಪಿ ಎಂದು ಕರೆಯಲಾಗುತ್ತದೆ. ಸ್ಥಿರ ದರಗಳಲಲ್ಲಿ ಒಟ್ಟು ಆಂತರಿಕ ಉತ್ಪನನ(ಜಿಡಿಪಿ). ಜಿಡಿಪಿಯ ಗಾತ್ರದ ಮಟ್ಟವನ್ನು ಉಲ್ಲೇಖಿಸುತ್ತದೆ. ಜಿಡಿಪಿಯ ನಿರಂತರ ದರ ಅಂದಾಜುಗಳ್ನು, ಮೂಲ ಅವಧಿಯ ಮೌಲ್ಯಗಳನ್ನು ವ್ಯಕ್ತಪಡಿಸುವ ಮೂಲಕ ಪಡೆಯಬಹುದು*) ಇದೇ ಮಾದರಿಯಲ್ಲಿ ಕೋಲಾರ ಜಿಲ್ಲೆಯ ಹಾಗೂ ಜಿಲ್ಲೆಯ ತಾಲೂಕುಗಳನ್ನು, ಈಗಿನ ದರಗಳ ಪ್ರಕಾರ, ಜಿಲ್ಲಾ ಆಂತರಿಕ ಉತ್ಪನ್ನ(ಡಿಡಿಪಿ) ಮತ್ತು ತಾಲೂಕು ಆಂತರಿಕ ಉತ್ಪನ್ನದಂತೆ(ಟಿಡಿಪಿ) ಮಾಪನ ಮಾಡಬಹುದಾಗಿದೆ. ೨೦೦೪-೦೫ರಿಂದ ೨೦೦೮-೦೯ರವರೆಗಿನ ಕೋಲಾರ ಜಿಲ್ಲೆಯ ಡಿಡಿಪಿ ಬೆಳವಣಿಗೆಯನ್ನು ಈ ಕೆಳಕಂಡ ಕೋಷ್ಟಕದಲ್ಲಿ ಒದಗಿಸಲಾಗಿದೆ. ಇದು, ಈಗಿನ ದರಗಳಲ್ಲಿ ೨೦೦೪-೦೫ ಮತ್ತು ೨೦೦೮-೦೯ರ. ಒಟ್ಟು ಮತ್ತು ನಿವ್ವಳ ಆಂತರಿಕ ಉತ್ಪನ್ನಗಳ (ಲಕ್ಷ ರೂ.ಗಳಲ್ಲಿ) ವಲಯವಾರು ಸಂಯುಕ್ತ ವಾರ್ಷಿಕ ಪ್ರಗತಿ ಪ್ರಮಾಣಗಳನ್ನು (ಸಿಎಜಿಆರ್) ಸೂಚಿಸುತ್ತದೆ.

ಕೋಷ್ಟಕ ೫.೫. ಕೋಲಾರದ ಆರ್ಥಿಕ ವಲಯವಾರು ಬೆಳವಣಿಗೆ ಪ್ರಮಾಣಗಳು

ಕ್ರಸಂ.	ವಿವರಗಳು	ಜಿಡಿಡಿಪಿ (ಲಕ್ಷ ರೂ.ಗಳಲ್ಲಿ)		ಸಿಎಜಿಆರ್ (%)	ಎನ್‌ಡಿಡಿಪಿ (ಲಕ್ಷ ರೂ.ಗಳಲ್ಲಿ)		ಸಿಎಜಿಆರ್ (%)
		೨೦೦೪-೦೫	೨೦೦೮-೦೯		೨೦೦೪-೦೫	೨೦೦೮-೦೯	
೧	ಪ್ರಾಥಮಿಕ ವಲಯ	೧೪೫೬೬೨	೧೭೯೪೯೧	೪.೨೭	೧೩೪೯೯೨	೧೬೬೫೧೭	೪.೨೯
೨	ದ್ವಿತೀಯ ವಲಯ	೧೦೦೬೧೩	೧೭೬೦೩೮	೧೧.೩೨೮	೭೮೫೩೩	೧೪೧೭೦೬	೧೨.೫೩
೩	ತೃತೀಯ ವಲಯ	೧೬೮೦೧೬	೨೭೧೧೮	೧೦.೦೪	೧೫೩೦೩೮	೨೫೦೪೪೦	೧೦.೩೫
	ಒಟ್ಟು	೪೧೪೨೯೧	೩೮೨೬೪೭	೮.೬೩	೩೬೬೫೬೩	೫೫೮೬೬೩	೮.೭೯

ಮೂಲಕ: ಹೆಚ್‌ಡಿಡಿ, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ.

ಕೋಲಾರ ಜಿಲ್ಲೆಯಲ್ಲಿ, ಒಟ್ಟು ಆದಾಯವು ಅಂದರೆ; ಜಿಲ್ಲಾ ಆಂತರಿಕ ಉತ್ಪನ್ನ(ಡಿಡಿಪಿ) ವಾರ್ಷಿಕ ಶೇ. ೮.೬೩ (ಜಿಡಿಡಿಪಿ) ಸಂಯುಕ್ತ ಪ್ರಗತಿ ಹಾಗೂ ಶೇ. ೮.೭೯ (ಎನ್‌ಡಿಡಿಪಿ) ಪ್ರಮಾಣದಲ್ಲಿ ಬೆಳೆದಿದೆ. ವಲಯವಾರು ಮಾಧ್ಯಮಿಕ ವಲಯದ ಆದಾಯ ಅತೀ ಹೆಚ್ಚಿನ ಸಿಎಜಿಆರ್ (ಶೇ. ೧೧.೨೮) ಪ್ರಮಾಣವನ್ನು ದಾಖಲಿಸಿದೆ ಮತ್ತು ತೃತೀಯ ವಲಯ ಶೇ. ೧೦.೦೪ರಷ್ಟು ಪ್ರಗತಿಯೊಂದಿಗೆ ನಂತರದ ಸ್ಥಾನದಲ್ಲಿದೆ. ಈಲ್ಲೆಯು ಪ್ರಾಥಮಿಕ ವಲಯದ ಪ್ರಗತಿಯಲ್ಲಿ ಶೇ. ೪.೬೯ ಸಿಎಜಿಆರ್‌ನೊಂದಿಗೆ ಹಿಂದಿದೆ.

ಮುಂದಿನ ಕೋಷ್ಟಕವು, ಈಗಿನ ದರಗಳ ಪ್ರಕಾರ (ಲಕ್ಷ ರೂ.ಗಳಲ್ಲಿ ೨೦೦೮-೦೯ರ ತಾಲೂಕುವಾರು ವಲಯ ಸಂಯುಕ್ತ ಒಟ್ಟು ಜಿಲ್ಲಾ ಆಂತರಿಕ ಆದಾಯದ(ಜಿಡಿಡಿಐ) ವಿವರಗಳನ್ನು ಸೂಚಿಸುತ್ತದೆ. ಈ ಕೋಷ್ಟಕವು ಕರ್ನಾಟಕ ರಾಜ್ಯ, ಕೋಲಾರ ಜಿಲ್ಲೆ ಮತ್ತು ಅದರ ತಾಲೂಕುಗಳಲ್ಲಿನ ಆರ್ಥಿಕತೆಗಳ ಪ್ರಗತಿ ಪ್ರಮಾಣಗಳ ತುಲನಾತ್ಮಕ ಚಿತ್ರಣವನನು ಒದಗಿಸುತ್ತದೆ. ಜಿಲ್ಲೆಯ, ಒಟ್ಟು ಜಿಲ್ಲಾ ಆಂತರಿಕ ಉತ್ಪನನಕ್ಕೆ ತಾಲೂಕಿನ ಕೊಡುಗೆಗಳಲ್ಲಿ ಮಹತ್ತರವಾದ ವ್ಯತ್ಯಾಸಗಳಿವೆ. ಬಂಗಾರಪೇಟೆ ತಾಲೂಕು ಅತೀ ಹೆಚ್ಚಿನ, ಅಂದರೆ ಶೇ. ೩೦ ಕೊಡುಗೆ ನೀಡುತ್ತದೆ. ಕೋಲಾರ (ಶೇ. ೨೧.೪), ಮುಳಬಾಗಿಲು ಶೇ. ೨೦.೪, ಶ್ರೀನಿವಾಸಪುರ ಶೇ. ೧೪.೧ ಹಾಗೂ ಅತೀ ಕನಿಷ್ಠ ಮಾಲೂರು (ಶೇ. ೧೩.೭) ಕೊಡುಗೆ ನೀಡಿದೆ. ಆರ್ಥಿಕತೆಯ ಮೂರು ವಲಯಗಳಿಗೆ ಸಂಬಂಧಿಸಿದಂತೆ ಜಿಲ್ಲೆಯ ತಾಲೂಕುಗಳ ಪೈಕಿ ದೊಡ್ಡ ವ್ಯತ್ಯಾಸವಿದೆ. ಜಿಲ್ಲೆಯು ಸಮಾನವಾಗಿ ಎಲ್ಲಾ ಮೂರು ವಲಯಗಳ ಮೇಲೂ ಅವಲಂಬಿತವಾಗಿದೆ ಮತ್ತು ಜಿಲ್ಲೆಯ ಪ್ರಗತಿ ಹಾಗೂ ಅಭಿವೃದ್ಧಿಗೆ ಸಕಾರಾತ್ಮಕ ಸೂಚಕವಾಗಿದೆ.

ಕೋಷ್ಟಕ ೫.೬. ಕೋಲಾರದ ತಾಲೂಕುವಾರು ವಲಯ ಪ್ರಗತಿ ಪ್ರಮಾಣ

ಕ್ರಸಂ.	ತಾಲೂಕುಗಳು	ಪ್ರಾಥಮಿಕ ವಲಯ	ದ್ವಿತೀಯ ವಲಯ	ತೃತೀಯ ವಲಯ	ಒಟ್ಟು (ಜಿಟಿಡಿಪಿ)	ಜಿಟಿಡಿಪಿ ಯಿಂದ ಜಿಡಿಡಿಪಿ	ಒಟ್ಟು ತಲಾ ವ್ಯಕ್ತಿ ಆದಾಯ (ರೂ.ಗಳಲ್ಲಿ)
೧	ಬಂಗಾರಪೇಟೆ	೨೪೩೬೫.೪ (೧೨.೮)	೮೯೭೫೪ (೪೭.೨)	೭೬೦೨೭ (೪೦)	೧೯೦೧೪೬.೪ (೧೦೦)	೩೦.೩	೪೧೧೬೪.೬
೨	ಕೋಲಾರ	೩೩೫೨೫.೯ (೨೫)	೨೨೮೭೯ (೧೭)	೭೭೯೦೮ (೫೮)	೧೩೪೩೧೨.೯ (೧೦೦)	೨೧.೪	೩೫೭೬೯.೩
೩	ಮಾಲೂರು	೨೧೬೫೯ (೨೫.೨)	೨೧೦೧೩ (೨೪.೫)	೪೩೧೩೫ (೫೦.೩)	೮೫೮೦೭ (೧೦೦)	೧೩.೭	೩೭೮೧೮.೩
೪	ಮುಳಬಾಗಿಲು	೫೦೧೫೬.೪ (೩೯.೨)	೩೪೦೪೭ (೨೬.೬)	೪೩೭೬೯ (೩೪.೨)	೧೨೭೯೭೨.೪ (೧೦೦)	೨೦.೪	೫೦೪೭೮.೪
೫	ಶ್ರೀನಿವಾಸಪುರ	೪೯೭೮೪.೩ (೫೬.೩)	೮೩೪೫ (೯.೪)	೩೦೨೮೯ (೩೪.೩)	೮೮೪೧೮.೩ (೧೦೦)	೧೪.೧	೪೩೬೭೧.೨
೬	ಒಟ್ಟು	೧೭೯೪೯೧ (೨೮.೬)	೧೭೬೦೩೮ (೨೮.೧)	೨೭೧೧೨೮ (೪೩.೩)	೬೨೬೬೫೭ (೧೦೦)	೧೦೦	೪೧೨೧೯.೫
೭	ಕರ್ನಾಟಕ ರಾಜ್ಯ	೫೪೭೬೩೭೬ (೧೭)	೮೯೮೩೨೭೪ (೩೦)	೧೬೨೯೯೯೯೯ (೫೩)	೩೦೭೫೯೬೫೨ (೧೦೦)	–	೫೩೧೦೧


ಮೂಲ: ಹೆಚ್‌ಡಿಡಿ, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ

ಗಮನಿಸಿ: ಆವರಣಗಳಲ್ಲಿರುವ ಅಂಕಿಗಳು, ಒಟ್ಟು ಅಂಕಿಗಳ ಶೇಕಡವಾರು ಪ್ರಮಾಣವನ್ನು ಸೂಚಿಸುತ್ತದೆ.

ಬಂಗಾರಪೇಟೆ ತಾಲೂಕು ಅಭಿವೃದ್ಧಿ ಹಂಒದಿರುವ ಕೈಗಾರಿಕೆ ಹಾಗೂ ತಯಾರಿಕಾ ವಲಯವನ್ನು ಹೊಂದಿದದು, ಜಿಟಿಡಿಪಿಗೆ ಶೇ. ೪೭ರಷ್ಟು ಕೊಡುಗೆಯನ್ನು ನೀಡಿದೆ ಮತ್ತು ಶೇ. ೪೦.೦ರಷ್ಟು ಕೊಡುಗೆಯೊಂದಿಗೆ ತೃತೀಯ ವಲಯ ನಂತರದ ಸ್ಥಾನದಲ್ಲಿದೆ. ಪ್ರಾಥಮಿಕ ವಲಯ ಆರ್ಥಿಕತೆಗೆ ಶೇ. ೧೨.೮ರಷ್ಟು ಕೊಡುಗೆಯನ್ನು ನೀಡುತ್ತದೆ. ಬಂಗಾರಪೇಟೆ ತಾಲೂಕಿನ ಹೋಲಿಕೆಯಲ್ಲಿ, ಕೋಲಾರ ತಾಲೂಕು ಸಂಪೂರ್ಣವಾಗಿ ವಿಭಿನ್ನವಾಗಿದೆ. ಈ ತಾಲೂಕಿನಲ್ಲಿ ತೃತೀಯ ವಲಯದ ಕೊಡುಗೆ ಅತೀ ಹೆಚ್ಚಿನ ಪ್ರಮಾಣದಲ್ಲಿದೆ (ಶೇ.೫೮), ಪ್ರಾಥಮಿಕ ವಲಯ ಶೇ. ೨೫ರಷ್ಟು ಕೊಡುಗೆ ಮತ್ತು ದ್ವಿತೀಯ ವಲಯ ಶೇ. ೧೭ರಷ್ಟು ಕೊಡುಗೆಯೊಂದಿಗೆ, ಕ್ರಮವಾಗಿ ಎರಡನೆಯ ಹಾಗೂ ಮೂರನೆಯ ಸ್ಥಾನಗಳಲ್ಲಿವೆ. ಮಾಲೂರು ತಾಲೂಕಿನಲ್ಲಿ ತೃತೀಯ ವಲಯವು ಶೇ. ೫೦.೩ರಷ್ಟು ಕೊಡುಗೆಯನ್ನು ನೀಡಿದೆ. ಪ್ರಾಥಮಿಕ ವಲಯ (ಶೇ.೨೫) ಮತ್ತು ದ್ವಿತೀಯ ವಲಯ (ಶೇ.೨೫) ದೊಂದಿಗೆ ಸಮಾನವಾಗಿ ನಂತರದ ಸ್ಥಾನಗಳಲ್ಲಿವೆ. ಮುಳಬಾಗಿಲು ತಾಲೂಕು ಇತರೆ ತಾಲೂಕುಗಳಿಗಿಂತ ಭಿನ್ನವಾಗಿದೆ. ಮುಳಬಾಗಿಲು ತಾಲೂಕಿನಲ್ಲಿ ತೃತೀಯ ವಲಯ ಶೇ. ೩೯ರಷ್ಟು ಕೊಡುಗೆ ನೀಡುವುದರೊಂದಿಗೆ ಮೊದಲ ಸ್ಥಾನದಲ್ಲಿದೆ. ಮತ್ತು ತೃತೀಯ ವಲಯ (ಶೇ.೩೪) ಮತ್ತು ದ್ವಿತೀಯ ವಲಯ (ಶೇ.೨೬) ನಂತರದ ಸ್ಥಾನಗಳಲ್ಲಿವೆ. ಶ್ರೀನಿವಾಸಪುರ ತಾಲೂಕಿನಲ್ಲಿ ಆರ್ಥಿಕತೆಗೆ ಪ್ರಾಥಮಿಕ ವಲಯ ಹೆಚ್ಚಿನ ಕೊಡುಗೆ ನೀಡುತ್ತಿದ್ದರೂ, ಬಹುತೇಕ ಮುಳಬಾಗಿಲು ತಾಲೂಕಿನ ಪ್ರವೃತ್ತಿಗಳನ್ನು ಹೋಲುತ್ತದೆ.

ನಾವು ರಾಜ್ಯದ ಅಂಕಿ-ಅಂಶಗಳನ್ನು ಗಮನಿಸಿದಾಗ, ರಾಜ್ಯದ ಆರ್ಥಿಕತೆಗೆ ತೃತೀಯ ವಲಯದ ಕೊಡುಗೆ ಶೇ. ೫೩ ನೊಂದಿಗೆ ಮೊದಲ ಸ್ಥಾನದಲ್ಲಿದ್ದರೆ, ದ್ವಿತೀಯ ವಲಯ ಶೇ.೩೦ ಮತ್ತು ಶೇ. ೧೭ರಷ್ಟು ಕನಿಷ್ಟ ಕೊಡುಗೆಯೊಂದಿಗೆ ಪ್ರಾಥಮಿಕ ವಲಯ ನಂತರದ ಸ್ಥಾನಗಳಲ್ಲಿವೆ. ಇದು ರಾಜ್ಯಮಟ್ಟದಲ್ಲಿ ಕಡಿಮೆಯಾಗುತ್ತಿರುವ ಕೃಷಿ ಮತ್ತು ಪೂರಕ ಚಟುವಟಿಕೆಗಳನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಕೋಲಾರ ಜಿಲ್ಲೆಯಲ್ಲಿ ಒಟ್ಟಾರೆಯಾಗಿ, ಆರ್ಥಿಕತೆಯ ಮೂರು ವಲಯಗಳು ಜಿಲ್ಲೆಯ ಆರ್ಥಿಕತೆಗೆ ಮಹತ್ತರವಾದ ಕೊಡುಗೆಯನ್ನು ನೀಡುತ್ತಿದೆ. ಜಿಲ್ಲೆಯ ಕೆಲವು ತಾಲೂಕುಗಳು ಪ್ರಾಥಮಿಕ ವಲಯದ ಪ್ರಾಬಲ್ಯವನ್ನು ಹೊಂದಿದ್ದರೆ, ಉಳಿದ ತಾಲೂಕುಗಳಲ್ಲಿ ದ್ವಿತೀಯ ಹಾಗೂ ತೃತೀಯ ವಲಯಗಳ ಪ್ರಾಬಲ್ಯವನ್ನು ಹೊಂದಿವೆ.

ವೃತ್ತಚಿತ್ರ ೫.೧. ಕೋಲಾರದಲ್ಲಿ ಜಿಡಿಡಿಪಿಯ ವಲಯವಾರು ರಚನೆ



ವಲಯವಾರು ಜಿಡಿಡಿಪಿ ಪ್ರಮಾಣ ೨೦೦೮-೦೯

ಕರ್ನಾಟಕ ರಾಜ್ಯ, ಕೋಲಾರ ಜಿಲ್ಲೆ ಮತ್ತು ಕೋಲಾರ ಜಿಲ್ಲೆಯ ತಾಲೂಕುಗಳ ೨೦೦೪-೦೫ ಮತ್ತು ೨೦೦೮-೦೯ರ ತಲಾ ವ್ಯಕ್ತಿ ಒಟ್ಟು ಹಾಗೂ ನಿವ್ವಳ ತಾಲೂಕುವಾರು ತಲಾ ವ್ಯಕ್ತಿ ಆದಾಯಗಳನ್ನು ಈ ಕೆಳಕಂಡ ಕೋಷ್ಟಕದಲ್ಲಿ ಒದಗಿಸಲಾಗಿದೆ. ಈ ಪ್ರಕಾರ, ಮುಳಬಾಗಿಲು ಅತೀ ಹೆಚ್ಚಿನ ತಲಾ ವ್ಯಕ್ತಿ ಆಯಾವನ್ನು ಹೊಂದಿದ್ದರೆ, ಕೋಲಾರ ಅತೀ ಕಡಿಮೆ ತಲಾ ವ್ಯಕ್ತಿ ಆಯಾವನ್ನು ದಾಖಲಿಸಿದೆ. ಕೋಲಾರ ತಾಲೂಕು ಕಳೆದ ಐದು ವರ್ಷಗಳಲ್ಲಿ ಶೇ. ೧೧.೯೬ನ ಅತೀ ಹೆಚ್ಚಿನ ಸಿಎಜಿಆರ್ ಅನ್ನು ದಾಖಲಿಸಿದ್ದರೆ, ಮಾಲೂರಿರು ಅತೀ ಕಡಿಮೆ, ಅಂದರೆ ಶೇ. ೪.೨೨ರಷ್ಟು ದಾಖಲಸಿದೆ. ರಾಜ್ಯದ ಸರಾಸರಿಯ ಹೋಲಿಕೆಯಲ್ಲಿ ಒಟ್ಟಾರೆ ಜಿಲ್ಲಾ ತಲಾ ವ್ಯಕ್ತಿ ಆದಾಯ ಕಡಿಮೆಯಿದೆ. ಈ ಪ್ರಕಾರ ಕೋಲಾರ ಜಿಲ್ಲೆಯ ತಲಾ ವ್ಯಕ್ತಿ ಆದಾಯ, ರಾಜ್ಯದ ಆರ್ಥಿಕತೆಯ ಹೋಲಿಕೆಯಲ್ಲಿ, ಕೋಲಾರ ಜಿಲ್ಲೆಯ ಆರ್ಥಿಕತೆ ನಿಧಾನಗತಿಯಲ್ಲಿ ಬೆಳವಣಿಗೆಯಾಗಿದೆ ಎಂದು ಸ್ಪಷ್ಟವಾಗುತ್ತದೆ. ಕೋಲಾರ ಜಿಲ್ಲೆಯ ಒಟ್ಟು ತಲಾ ವ್ಯಕ್ತಿ ಆದಾಯ, ೨೦೦೪-೦೫ರಿಂದ ೨೦೦೮-೦೯ರ ನಡುವೆ, ಶೇ. ೭.೬೪ರಷ್ಟು ಸಂಯುಕ್ತ ಪ್ರಗತಿ ಪ್ರಮಾಣದೊಂದಿಗೆ, ರೂ. ೨೮೫೩೧.೩೦ ರಿಂದ ರೂ. ೪೧೨೭೯.೫೦ಕ್ಕೆ ಏರಿಕೆಯಾಗಿದೆ. ೨೦೦೪-೦೫ ಮತ್ತು ೨೦೦೮-೦೯ರಲ್ಲಿ ರಾಜ್ಯದ ತಲಾ ವ್ಯಕ್ತಿ ಆದಾಯ ಕ್ರಮವಾಗಿ ರೂ. ૩೦೦೬೨ ಹಾಗೂ ರೂ. ೫೩೧೦೧ರಷ್ಟಿತ್ತು.

ಕೋಷ್ಟಕ ೫.೭. ಒಟ್ಟು ಹಾಗೂ ನಿವ್ವಳ ತಲಾ ವ್ಯಕ್ತಿ ಆದಾಯಗಳು

ಕ್ರಸಂ.	ವಿವರಗಳು	ಜಿಡಿಡಿಪಿ (ಲಕ್ಷ ರೂ.ಗಳಲ್ಲಿ)		ಸಿಎಜಿಆರ್ (%)	ಎನ್‌ಡಿಡಿಪಿ (ಲಕ್ಷ ರೂ.ಗಳಲ್ಲಿ)		ಸಿಎಜಿಆರ್ (%)
		೨೦೦೪–೨೦೦೫	೨೦೦೮–೨೦೦೯		೨೦೦೪–೨೦೦೫	೨೦೦೮–೨೦೦೯	
೧	ಬಂಗಾರಪೇಟೆ	೨೮೮೦೮	೪೧೧೬೫	೭.೪೧	೨೪೭೭೩	೩೬೩೪೯	೭.೯೭
೨	ಕೋಲಾರ	೧೯೦೪೦	೩೫೭೬೯	೧೩.೪೪	೧೭೯೮೬	೩೧೬೩೩	೧೧.೯೬
೩	ಮಾಲೂರು	೩೦೭೫೩	೩೭೮೧೮	೪.೨೨	೨೬೯೭೦	೩೩೯೪೪	೪.೭೧
೪	ಮುಳಬಾಗಿಲು	೩೬೧೦೫	೫೦೪೭೮	೬.೯೩	೩೨೪೪೨	೪೦೩೯೬	೪.೪೮
೫	ಶ್ರೀನಿವಾಸಪುರ	೩೫೫೩೧	೪೩೬೭೧	೫.೪೩	೨೮೮೩೬	೪೫೭೧೦	೯.೬೫
೬	ಒಟ್ಟು	೨೮೫೩೧	೪೧೨೨೦	೭.೬೪	೫೨೫೪೪	೩೬೭೪೭	೭.೮
೭	ಕರ್ನಾಟಕ ರಾಜ್ಯ	೩೦೦೬೨	೫೩೧೦೨	೧೨.೦೫	೨೬೮೦೬	೪೭೬೧೫	೧೨.೧೮

ಮೂಲ: ಸಿಪಿಒ, ಜಿ.ಪಂ., ಕೋಲಾರ

ಜಿಲ್ಲೆಯ ವಲಯವಾರು ಬೆಳವಣಿಗೆ– ಪ್ರಾಥಮಿಕ, ದ್ವಿತೀಯ ಹಾಗೂ ತೃತೀಯ ವಲಯಗಳು

ಕೋಲಾರ ಜಿಲ್ಲೆ ಮೂಲಭೂತವಾಗಿ ಆರ್ಥಿಕತೆಯ ಮೂರೂ ವಲಯಗಳ ಸಮಾನ ಹಂಚಿಕೆಯನ್ನು ಆಧರಿಸಿರುವ ಪ್ರದೇಶವಾಗಿದೆ. ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಗಣಿಗಾರಿಕೆ, ತಯಾರಿಕೆ ಹಾಗೂ ಸೇವಾವಲಯಗಳಿಂದ ಆರಂಭಗೊಂಡು, ಜಿಲ್ಲೆಯ ಆರ್ಥಿಕತೆಯನ್ನು ಸಮತೋಲಿತ ಆರ್ಥಿಕತೆ ಎಂದು ವ್ಯಾಖಯಾನಿಸಬಹುದು. ಉದ್ಯೋಗದ ಮುಖ್ಯ ಮೂಲಗಳು ಕೃಷಿ, ಡೈರಿ, ರೇಷ್ಮೆ ಕೃಷಇ ಹಾಗೂ ಹೂವುಗಳ ಬೆಳವಣಿಗೆಯಾಗಿದೆ. ಆದ್ದರಿದಂ, ಕೋಲಾರ ಜಿಲ್ಲೆ ರೇಷ್ಮೆ, ಹಾಲು ಮತ್ತು ಚಿನ್ನದ ನಾಡೆಂದು ಹೆಸರುಗಳಿಸಿದೆ. ಕೋಲಾರದ ರೈತರು ನೀರಾವರಿ ಹಾಗೂ ಕುಡಿಯವ ನೀರಿಗಾಗಿ ಸಂಪೂರ್ಣವಾಗಿ ಅಂತರ್ಜಲವನ್ನು ಅವಲಂಬಿಸಿದ್ದಾರೆ. ಕಡಿಮೆಯಾದ ಚಿನ್ನದ ಲಭ್ಯತೆ ಹಾಗೂ ಉತ್ಪಾದನಾ ವೆಚ್ಚಗಳಲ್ಲಿ ತೀವ್ರ ಹೆಚ್ಚಳದ ಕಾರಣಗಳಿಂದಾಗಿ, ಕೋಲಾರ ಚಿನ್ನದ ಗಣಿಗಳನ್ನು ೨೦೦೩ರಲ್ಲಿ ಮುಚ್ಚಲಾಯಿತು.

ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ಉಪ ವಲಯಗಳನ್ನು ಪ್ರತ್ಯೇಕವಾಗಿ ವಿಶ್ಲೇಷಿಸುವ ಮೂಲಕ ಜಿಲ್ಲೆಯ ವಲಯಾವರು ಪ್ರಗತಿಯನ್ನು ಅಧ್ಯಯನ ಮಾಡಬಹುದು. ಈ ಕೆಳಕಂಡ

ಕೋಷ್ಟಕವು, ೨೦೦೪-೦೫ ಹಾಗೂ ೨೦೦೮-೦೯ರಲ್ಲಿ ಕೋಲಾರ ಜಿಲ್ಲೆಯ ವಲಯವಾರು ಸಿಎಜಿಆರ್‌ಗಳನ್ನು ಸೂಚಿಸುತ್ತದೆ. ಈ ಕೋಷ್ಟಕಗಳು, ಅಧ್ಯಯನದ ಅವಧಿಯಲ್ಲಿ ಕೋಲಾರ ಜಿಲ್ಲೆಯ ಆದಾಯ ಉತ್ಪಾದನೆಗೆ ಸಂಬಂಧಿಸಿದ ತಾಲೂಕುವಾರು ಮತ್ತು ಉಪ ವಲಯವಾರು ಪ್ರವೃತ್ತಿಗಳ ಕುತೂಹಲಕಾರಿ ಅಂಶಗಳನ್ನು ಅನಾವರಣಗೊಳಿಸುತ್ತದೆ.

ಪ್ರಾಥಮಿಕ ವಲಯ

ಕೃಷಿ ವಲಯದ ಪ್ರಗತಿಗೆ ಸಂಬಂಧಿಸಿದಂತೆ, ೨೦೦೪-೦೫ಹಾಗೂ ೨೦೦೮-೦೯ರ ಅವಧಿಯಲ್ಲಿ ಬಂಗಾರಪೇಟೆ, ಕೋಲಾರ ಹಾಗೂ ಮಾಲೂರು ತಾಲೂಕುಗಳಲ್ಲಿ ಕೊಡುಗೆ ಕಡಿಮೆಯಾಗಿರದೆ. ಆದಾಗ್ಯೂ, ಜಿಲ್ಲೆಯ ಕಲೆದ ೫ ವರ್ಷಗಳಲ್ಲಿ ಶೇ. ೩.೪೩ರಷ್ಟು ಅಲ್ಪ ಬೆಳವಣಿಗೆಯನ್ನು ದಾಖಲಿಸಿದೆ. ಅರಣ್ಯಗಾರಿಕೆ ಮತ್ತು ಮರ ಕಡಿಯುವಿಕೆಯು ಶೇ. ೧೨ರಷ್ಟು ಬೆಳವಣಿಗೆಯನ್ನು ದಾಖಲಿಸಿದ್ದರೆ, ಮೀನುಗಾರಿಕೆಗೆ ಅತೀ ಕಡಿಮೆ ನೀರಿನ ಸಂಪನ್ಮೂಲಗಳಿರುವಂತಹ ಶ್ರೀನಿವಾಸಪುರ ತಾಲೂಕು ಒಂದನ್ನು ಹೊರತುಪಡಿಸಿ ಉಳಿದ ತಾಲೂಕುಗಳಲ್ಲಿ ಮೀನುಗಾರಿಕೆ ಬೆಳವಣಿಗೆಯನ್ನು ಕಂಡುಕೊಂಡಿದೆ. ಗಣಿಗಾರಿಕೆ ಹಾಗೂ ಕಲ್ಲು ಗಣಿಗಾರಿಕೆಯಿಂದಾಗಿ ಎಲ್ಲಾ ತಾಲೂಕುಗಳಲ್ಲಿಯೂ ಆದಾಯ ಉತ್ಪಾದನೆಯ ಸಕಾರಾತ್ಮಕ ಬೆಳವಣಿಗೆ ಪ್ರಮಾಣಗಳನ್ನು ಗಮನಿಸಲಾಗಿದೆ. ಒಟ್ಟಾರೆಯಾಗಿ ಮುಳಬಾಗಿಲು ಹಾಗೂ ಶ್ರೀನಿವಾಸಪುರ ತಾಲೂಕುಗಳನ್ನು ಹೊರತುಪಡಿಸಿದಂತೆ ಪ್ರಾಥಮಿಕ ವಲಯದಲ್ಲಿ ಉಳಿದ ಮೂರು ತಾಲೂಕುಗಳು ನಕಾರಾತ್ಮಕ ಬೆಳವಣಿಗೆ ಪ್ರಮಾಣಗಳನ್ನು ದಾಖಲಿಸಿದೆ.

ಕೋಷ್ಟಕ ೫.೮. ಕೋಲಾರದಲ್ಲಿ ಪ್ರಾಥಮಿಕ ವಲಯದಲ್ಲಿ ಸಿಎಜಿಆರ್

ತಾಲೂಕು	ಹೈನುಗಾರಿಕೆ ಒಳಗೊಂಡಂತೆ ಕೃಷಿ	ಅರಣ್ಯಗಾರಿಕೆ ಮತ್ತು ಮರ ಕಡಿಯುವಿಕೆ	ಮೀನುಗಾರಿಕೆ	ಗಣಿಗಾರಿಕೆ ಹಾಗೂ ಕಲ್ಲು ಗಣಿಗಾರಿಕೆ	ಒಟ್ಟು
ಶ್ರೀನಿವಾಸಪುರ	೫.೮	೧೧.೦೬	-೧.೬೧	೪೪.೦೪	೬.೧೨
ಕೋಲಾರ	-೩.೫೬	೧೩.೮೧	೧೯.೬೧	೪೩.೯೬	-೨.೦೧
ಮಾಲೂರು	-೭.೨೯	೧೨.೩೨	೮.೯೧	೪೪.೧೯	-೫.೪೨
ಬಂಗಾರಪೇಟೆ	-೫.೮೭	೯.೮೪	೨೨.೪೧	೪೩.೭೫	-೪.೨೧
ಮುಳಬಾಗಿಲು	೧.೬೮	೧೨.೭೮	೨೨.೩೧	೪೩.೭೫	೨.೬೨
ಒಟ್ಟು	೩.೪೩	೧೨.೦೭	೧೭.೧೯	೪೩.೯೬	೪.೨೭

ಮೂಲ: ಸಿಪಿಒ, ಜಿ.ಪಂ., ಕೋಲಾರ

ದ್ವಿತೀಯ ವಲಯ

ಕೋಲಾರ ಜಿಲ್ಲೆಯಲ್ಲಿ ದ್ವಿತೀಯ ವಲಯವು, ೨೦೦೪-೦೫ರ ಅವಧಿಯಲ್ಲಿ ಶೇ. ೧೧.೮೪ರಷ್ಟು ಪ್ರಮಾಣದಲ್ಲಿ ಪ್ರಗತಿ ಸಾಧಿಸಿದೆ(ಕೋಷ್ಟಕ ನೋಡಿ). ದ್ವಿತೀಯ ವಲಯವು ಮುಳಬಾಗಿಲಿನಲ್ಲಿ ಅತೀ ಹೆಚ್ಚಿನ ಪ್ರಮಾಣವನ್ನು (ಶೇ. ೧೬.೦೨) ದಾಖಲಿಸಿದ್ದರೆ, ಕೋಲಾರ ತಾಲೂಕು ಅತೀ ಕಡಿಮೆ (ಶೇ.೪.೬೫) ಪ್ರಮಾಣವನ್ನು ದಾಖಲಿಸಿದೆ. ಜಿಲ್ಲೆಯಲ್ಲಿ ದ್ವಿತೀಯ ವಲಯದ ಪೈಕಿ ಉಪ ವಲಯದಲ್ಲಿ ನಿರ್ಮಾಣ ಕೈಗಾರಿಕೆಯು ಅತೀ ಹೆಚ್ಚಿನ ಪ್ರಮಾಣ, ಅಂದರೆ ಶೇ. ೧೬.೦೩ರಷ್ಟು ಪ್ರಮಾಣದ ಬೆಳವಣಿಗೆಯನ್ನು ಸಾಧಿಸಿದೆ ಹಾಗೂ ನೋಂದಾಯಿತ ತಯಾರಿಕೆ ವಲಯ (ಶೇ. ೧೩.೮೫) ಹಾಗೂ ನೋಂದಾಯಿತವಲ್ಲದ ತಯಾರಿಕಾ ವಲಯವು (ಶೇ. ೯.೬೫) ನಂತರ ಶ್ರೇಯಾಂಕಗಳಲ್ಲಿವೆ. ವಿದ್ಯುತ್, ಅನಿಲ ಮತ್ತು ನೀರು ಸರಬರಾಜು ಶೇ. -೦.೬೯ರೊಂದಿಗೆ ನಕಾರಾತ್ಮಕ ಬೆಳವಣಿಗೆ ಪ್ರಮಾಣವನ್ನು ದಾಖಲಿಸಿದೆ.

ಕೋಷ್ಟಕ ೫.೯. ಕೋಲಾರದಲ್ಲಿ ದ್ವಿತೀಯ ವಲಯದಲ್ಲಿ ಸಿಎಜಿಆರ್

ಕ್ರ.ಸಂ.	ತಾಲೂಕು	ತಯಾರಿಕೆ		ನಿರ್ಮಾಣ	ವಿದ್ಯುತ್, ಅನಿಲ ಮತ್ತು ನೀರು ಸರಬರಾಜು	ಒಟ್ಟು
		ನೋಂದಾಯಿತ	ನೋಂದಾಯಿತ ವಲ್ಲದ			
೧	ಶ್ರೀನಿವಾಸಪುರ	೧೩.೫೫	೧೯.೩೪	೧೪.೫	-೮.೨೮	೧೧.೮೧
೨	ಕೋಲಾರ	-೭.೨೬	೧.೯೪	೧೪.೯	-೧೧.೦೮	೪.೬೫
೩	ಮಾಲೂರು	೧೧೩.೧೭	೧೨.೬೬	೧೬.೩	೩.೦೪	೧೪.೮೩
೪	ಬಂಗಾರಪೇಟೆ	-	೭.೬೫	೧೬.೮	೧೭	೧೬.೦೨
೫	ಮುಳಬಾಗಿಲು	-	೦.೬೫	೧೪.೪	೨೪.೩೨	೧೪.೧೬
೬	ಒಟ್ಟು	೧೩.೮೫	೯.೬೫	೧೬	-೦.೬೯	೧೧.೮೪

ಮೂಲ: ಸಿಪಿಒ, ಜಿ.ಪಂ., ಕೋಲಾರ

ಮುಳಬಾಗಿಲು ಮತ್ತು ಶ್ರೀನಿವಾಸಪುರ ತಾಲೂಕುಗಳಲ್ಲಿ ನೋಂದಾಯಿತ ತಯಾರಿಕೆ ಉಪ ವಲಯಕ್ಕೆ ಸಂಬಂಧಿಸಿದ ದತ್ತಾಂಶ ವರದಿಯಾಗಿಲ್ಲ. ಇಲ್ಲಿ ಗಮನಿಸಬೇಕಿರುವ ಮುಖ್ಯ ಅಂಶವೆಂದರೆ ಮಾಲೂರು ತಾಲೂಕು, ತಯಾರಿಕಾ ವಲಯದಲ್ಲಿ, ಶೇ. ೧೧೩ನಷ್ಟು ಬೃಹತ್ ಬೆಳವಣಿಗೆಯನ್ನು ದಾಖಲಿಸಿದೆ. ಕೈಗಾರಿಕಾ ಪ್ರದೇಶದ ದೊಡ್ಡ ಪ್ರಮಾಣದ ರಚನೆ ಮತ್ತು ತಯಾರಿಕಾ ಘಟಕಗಳು ಈ ವಲಯದ ಬೆಳವಣಿಗೆಗೆ ಅಪಾರ ಕೊಡುಗೆ ನೀಡುತ್ತಿಗೆ, ಬಂಗಾರಪೇಟೆ ತಾಲೂಕಿನಲ್ಲಿ ನೋಂದಯಿತವಾಗಿಲ್ಲದಂತಹ ತಯಾರಿಕಾ ವಲಯವು ಶೇ. ೧೯.೩೪ರಷ್ಟು ಬೆಳವಣಿಗೆ ಪ್ರಮಾಣವನ್ನು ದಾಖಲಿಸಿದೆ ಮತ್ತು ಮಾಲೂರು ಶೇ. ೧೨.೬೬ರಷ್ಟು ಹಾಗೂ ಶ್ರೀನಿವಾಸಪುರ ಅತೀ ಕಡಿಮೆ,

ಶೇ. ೦.೬೫ರಷ್ಟು ಬೆಳವಣಿಗೆ ಪ್ರಮಾಣವನ್ನು ದಾಖಲಿಸಿದೆ. ನಿರ್ಮಾಣ ಕೈಗಾರಿಕೆಯ ಬೆಳವಣಿಗೆ ತಾಲೂಕುಗಳಲ್ಲಿ ಹೆಚ್ಚಿನ ವ್ಯತ್ಯಾಸವನ್ನು ಹೊಂದಿಲ್ಲ, ಇದು ಶ್ರೀನಿವಾಸಪುರದಲ್ಲಿ ಶೇ. ೧೪.೪೩ರಷ್ಟು ಮತ್ತು ಮುಳಬಾಗಿಲು ತಾಲೂಕಿನಲ್ಲಿ ಶೇ. ೧೬.೮೪ರಷ್ಟಿದೆ. ಜಿಲ್ಲಾಮಟ್ಟದಲ್ಲಿ ಬಂಗಾರಪೇಟೆ ಹಾಗೂ ಕೋಲಾರ ತಾಲೂಕುಗಲಲ್ಲಿ, ವಿದ್ಯುತ್ ಉತ್ಪಾದನೆ, ಅನಿಲ ಮತ್ತು ನೀರು ಸರಬರಾಜುಗಳಿಂದ ಉತ್ಪಾದನೆಯಾದ ಆದಾಯ ನಕರಾತ್ಮಕ ಬೆಳವಣಿಗೆ ಪ್ರಮಾಣಗಳನ್ನು ಸೂಚಿಸುತ್ತದೆ.

ತೃತೀಯ ವಲಯ

ಮುಂದಿನ ಕೋಷ್ಟಕವು ೨೦೦೪-೦೫ ಮತ್ತು ೨೦೦೮-೦೯ರಲ್ಲಿ ಕೋಲಾರ ಜಿಲ್ಲೆಯ ತೃತೀಯ ವಲಯದ ಜಿಟಿಡಿಪಿಯ ಸಿಎಜಿಆರ್ ಅನ್ನು ಸೂಚಿಸುತ್ತದೆ. ಕೋಲಾರ ಜಿಲ್ಲೆಯ ತೃತೀಯ ವಲಯದ ವಿವಿಧ ಉಪ ವಲಯಗಳಲ್ಲಿ, ರೈಲ್ವೆ ಸೌಲಭ್ಯವಿಲ್ಲದಿರುವ ಕಾರಣದಿಂದಾಗಿ, ಮುಳಬಾಗಿಲು ಮತ್ತು ಶ್ರೀನಿವಾಸಪುರ ತಾಲೂಕುಗಳಲ್ಲಿ ೨೦೦೪-೦೫ರಿಂದ ೨೦೦೮-೦೯ರ ಅವಧಿಯಲ್ಲಿ ರೈಲ್ವೆಗಳಿಂದ ಆದಾಯವಿಲ್ಲ. ಎಲ್ಲಾ ತಾಲೂಕುಗಳು ಇತರೆ ಸಾರಿಗೆ ವಲಯಗಳಲ್ಲಿ ಪ್ರಗತಿಪರ ಬೆಳವಣಿಗೆ ಪ್ರಮಾಣಗಳನ್ನು ದಾಖಲಿಸಿದೆ. ಈ ಪೈಕಿ ಮುಳಬಾಗಿಲು ಅತೀ ಹೆಚ್ಚಿನ ಅಂದರೆ ಶೇ. ೨೧.೦೧ ಮತ್ತು ಬಂಗಾರಪೇಟೆ ಅತೀ ಕಡಿಮೆ ಶೇ. ೧೫.೯೯ರಷ್ಟು ಪ್ರಮಾಮವನ್ನು ದಾಖಲಿಸಿದೆ. ಎಲ್ಲಾ ತಾಲೂಕುಗಳಲ್ಲಿಯೂ ಸಂವಹನ ವಲಯವು ಶೇ. ೮.೯೬ರಷ್ಟು ಬೆಳವಣಿಗೆಯನ್ನು ದಾಖಲಿಸಿವೆ. ಎಲ್ಲಾ ತಾಲೂಕುಗಳಲ್ಲಿಯೂ ಸಾರ್ವಜನಿಕ ಆಡಳಿತದ ಬೆಳವಣಿಗೆ ಶೇ. -೨.೩೦ ರಷ್ಟು ನಕಾರಾತ್ಮಕ ಬೆಳವಣಿಗೆ ದಾಖಲಿಸಿವೆ. ಈ ಬೆಳವಣಿಗೆಯು ಜಿಲ್ಲೆಯ ಸಾರ್ವಜನಿಕ ವಲಯದಲ್ಲಿ ಉದ್ಯೋಗ ಸೃಷ್ಟಿಯ ಪರ್ಯಾಪ್ತತೆಯನ್ನು ಸೂಚಿಸುತ್ತದೆ. ಇದು ಜಿಲ್ಲೆಯ ಆರ್ಥಿಕ ಪ್ರಗತಿ ಮತ್ತು ಜೀವನಾಧಾರ ಉತ್ಪಾದನೆಗಳಿಗೆ ವ್ಯತಿರಿಕ್ತವಾಗುವಂತಿದೆ.

ತೃತೀಯ ವಲಯದ ತಾಲೂಕುವಾರು ನೋಡಟವು, ಜಿಲ್ಲೆಯ ತಾಲೂಕುಗಳ ಪೈಕಿ ಬೆಳವಣಿಗೆ ಪ್ರಮಾಣಗಳಲ್ಲಿ ದೊಡ್ಡ ವ್ಯತ್ಯಾಸವನ್ನು ಸೂಚಿಸುತ್ತದೆ. ಕೋಲಾರ ತಾಲೂಕು ಅತೀ ಹೆಚ್ಚಿನ ಬೆಳವಣಿಗೆ ಪ್ರಮಾಣ, ಅಂದರೆ ಶೆ ೧೧.೯೫ರಷ್ಟು ಮತ್ತು ಶ್ರೀನಿವಾಸಪುರ ಅತೀ ಕನಿಷ್ಟ (ಶೇ. ೫.೧೭) ಬೆಳವಣಿಗೆ ಪ್ರಮಾಮವನ್ನು ದಾಖಲಿಸಿವೆ. ತೃತೀಯ ವಲಯದ ಉಪ ವಲಯಗಳಲ್ಲಿ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿನ ಸೇವೆಗಳು ಅತೀ ವೇಗವಾಗಿ (ಶೇ. ೧೦.೬೮) ಬೆಳೆದಿವೆ. ಅಧ್ಯಯನ ಅವಧಿಯಲ್ಲಿ ಜಿಲ್ಲೆಯಲ್ಲಿ ಸ್ಥಾಪನೆಯಾದ ವಿವಿಧ ಶೈಕ್ಷಣಿಕ ಸಂಸ್ಥೆಗಳು (೨ ಎಂಜಿನೀಯರಿಂಗ್ ಕಾಲೇಜುಗಳೂ, ೧ ವೈದ್ಯಕೀಯ ಕಾಲೇಜು, ೧ ದಂತ ವೈದ್ಯಕೀಯ ಕಾಲೇಜು ಹಾಗೂ ೮ ಪಾಲಿಟೆಕ್ನಿಕ್ ಕಾಲೇಜುಗಳು) ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳು ಇದಕ್ಕೆ ಕಾರಣವಾಗಿವೆ. ಶೇಖರಣೆ ಉಪ ವಲಯವು ಕೇವಲ ಕೋಲಾರ ತಾಲೂಕಿನಲ್ಲಿ ಮಾತ್ರ ಶೇ. ೧೬.೩೮ರಷ್ಟು ಬೆಳವಣಿಗೆ ಪರಿಮಾಣವನ್ನು ದಾಖಲಿಸಿದೆ. ಮುಳಬಾಗಿಲು (ಶೇ. ೧೪.೮೭) ಮತ್ತು ಬಂಗಾರಪೇಟೆ ತಾಲೂಕುಗಳು (ಶೇ. ೫.೬೪) ನಂತರದ ಸ್ಥಾನಗಳಲ್ಲಿದ್ದರೆ ಉಳಿದ ಎರಡು ತಾಲೂಕುಗಳಾದ ಮಾಲೂರು ಮತ್ತು

ಶ್ರೀನಿವಾಸಪುರದ ಬೆಳವಣಿಗೆ ಪ್ರಮಾಣಗಳು ವರದಿಯಾಗಿಲ್ಲ. ಜಿಲ್ಲೆಯಲ್ಲಿ, ರಿಯಲ್ ಎಸ್ಟೇಟ್‌ಗಳು, ಗೃಹ ಮಾಲೀಕತ್ವ ಮತ್ತು ವ್ಯಾಪಾರ ಸೇವೆಗಳು (ಶೇ.) ಹೆಚ್ಚಿನ ಪ್ರಮಾಣದ ಬೆಳವಣಿಗೆಯನ್ನು ಸಾಧಿಸಿವೆ. ಜಿಲ್ಲೆಯಲ್ಲಿ ಕೈಗಾರಿಕಾ ಉದ್ದೇಶಗಳಿಗಾಗಿ (ತಯಾರಿಕಾ ಘಟಕಗಳ ಸ್ಥಾಪನೆಗಾಗಿ) ಹೆಚ್ಚಾಗುತ್ತಿರುವ ಭೂಮಿಯ ಬೇಡಿಕೆ ಇದಕ್ಕೆ ಕಾರಣ. ಜಿಲ್ಲೆಯಲ್ಲಿ ವ್ಯಾಪಾರ, ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳು ಮತ್ತು ಬ್ಯಾಂಕಿಂಗ್ ಹಾಗೂ ವಿಮಾ ಉಪವಲಯಗಳು ಅತೀ ಹೆಚ್ಚಿನ ವ್ಯತ್ಯಾಸಗಳನ್ನು ದಾಖಲಿಸಿವೆ ಮತ್ತು ಕೋಲಾರ ತಾಲೂಕು ಶೇ. ೨೮.೨೮ರೊಂದಿಗೆ ಅತೀ ಹೆಚ್ಚಿನ ಹಾಗೂ ಶ್ರೀನಿವಾಸಪುರ ತಾಲೂಕು ಅತೀ ಕಡಿಮೆ ಶೇ. –೬.೯೨ರಷ್ಟು ಪ್ರಮಾಣವನ್ನು ದಾಖಲಿಸವೆ. ಸಂಕ್ಷಿಪ್ತವಾಗಿ, ಜಿಲ್ಲೆಯ ತೃತೀಯ ವಲಯವು ಸರಾಸರಿ ಶೇ. ೧೦.೦೪ರಷ್ಟು ಸಿಎಜಿಆರ್‌ನಷ್ಟು ಬೆಳವಣಿಗೆಯನ್ನು ದಾಖಲಿಸಿದೆ.

ಮುಂದಿನ ಕೋಷ್ಟಕವು, ೨೦೦೪–೦೫ ಹಾಗೂ ೨೦೦೮–೦೯ರಲ್ಲಿ ಈಗಿನ ದರಗಳ (ಲಕ್ಷ ರೂ.ಗಳಲ್ಲಿ) ಪ್ರಕಾರ ತಾಲೂಕುವಾರು ಸಿಎಜಿಆರ್ ಮತ್ತು ಒಟ್ಟು ಜಿಲ್ಲಾ ಆಂತರಿಕ ಉತ್ಪನ್ನದ ವಲಯವಾರು ಸಂಯುಕ್ತ ಪ್ರಮಾಣವನ್ನು ಸೂಚಿಸುತ್ತದೆ. ಕೋಲಾರ ತಾಲೂಕು ಆರ್ಥಿಕತೆಯ ಅತೀ ಹೆಚ್ಚಿನ, ಅಂದರೆ ಶೇ. ೧೪ರಷ್ಟು ಬೆಳವಣಿಗೆಯನ್ನು ದಾಖಲಿಸಿದ್ದರೆ, ಬಂಗಾರಪೇಟೆ (ಶೇ.೮.೩೯) ಮತ್ತು ಮುಳಬಾಗಿಲು ತಾಲೂಕು ನಂತರದ ಸ್ಥಾನಗಳಲ್ಲಿವೆ.

ಕೋಷ್ಟಕ ೫.೧೦. ಕೋಲಾರದಲ್ಲಿ ತೃತೀಯ ವಲಯದಲ್ಲಿ ಸಿಎಜಿಆರ್

ಕ್ರ.ಸಂ.	ವಿವರಗಳು	ರೈಲ್ವೆ	ಇತರೆ ಸಾರಿಗೆ	ಶೇಖರಣೆ	ಸಂವಹನೆ	ವ್ಯಾಪಾರ, ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳು	ಬ್ಯಾಂಕಿಂಗ್ ಹಾಗೂ ವಿಮೆ	ರಿಯಲ್ ಎಸ್ಟೇಟ್, ಮನೆಗಳ ಮಾಲೀಕತ್ವ ಮತ್ತು ವ್ಯಾಪಾರ ಸೇವೆಗಳು	ಸಾರ್ವಜನಿಕ ಆಡಳಿತ	ಇತರೆ ಸೇವೆಗಳು	ಒಟ್ಟು
೧	ಬಂಗಾರಪೇಟೆ	೮.೬೭	೧೫.೯೨	೫.೬೪	೮.೯೬	೧೯.೧೬	೫.೧೮	೧೩.೭೯	-೨.೩	೧೩.೧೬	೧೦.೮
೨	ಕೋಲಾರ	೮.೬೬	೧೭.೨೨	೧೬.೩೮	೮.೯೭	೨೪.೨೮	೫.೧೮	೧೪.೪೫	-೨.೩	೯.೧೨	೧೧.೯೫
೩	ಮಾಲೂರು	೮.೬೯	೧೭.೮	–	೮.೯೭	೧೧.೩೫	೫.೧೭	೧೪.೬೮	-೨.೩	೮.೯೬	೯.೪೨
೪	ಮುಳಬಾಗಿಲು	–	೨೧.೧೨	೧೪.೮೭	೮.೯೭	೬.೯೧	೫.೧೭	೧೩.೯೯	-೨.೨೯	೧೧.೩೭	೧೦.೦೧
೫	ಶ್ರೀನಿವಾಸಪುರ	–	೧೭.೦೮	–	೮.೯೬	-೬.೯೨	೫.೨೧	೧೪.೮೭	–	೭.೩೭	೫.೧೭
೬	ಒಟ್ಟು	೮.೬೮	೧೭.೫೨	೧೩.೨೧	೮.೯೬	೯.೭೯	೫.೧೮	೧೪.೩	-೨.೩	೧೦.೬೮	೧೦.೦೪

ಕೋಷ್ಟಕ ೫.೧೧. ಕೋಲಾರದ ಆರ್ಥಿಕ ವಲಯಗಳ ತಾಲೂಕುವಾರು ಸಿಎಜಿಆರ್

ಕ್ರಸಂ.	ವಿವರಗಳು	ಈಗಿನ ದರಗಳಲ್ಲಿ ೨೦೦೪-೦೫ನೇ ವರ್ಷದ ಜಿಡಿಡಿಪಿ				ಈಗಿನ ದರಗಳಲ್ಲಿ ೨೦೦೮-೦೯ನೇ ವರ್ಷದ ಜಿಡಿಡಿಪಿ				ಜಿಟಿಡಿಪಿ ಮೇಲೆ ಸಿಎಜಿಆರ್
		ಪ್ರಾಥಮಿಕ ವಲಯ	ದ್ವಿತೀಯ ವಲಯ	ತೃತೀಯ ವಲಯ	ಒಟ್ಟು (ಜಿಟಿಡಿಪಿ)	ಪ್ರಾಥಮಿಕ ವಲಯ	ದ್ವಿತೀಯ ವಲಯ	ತೃತೀಯ ವಲಯ	ಒಟ್ಟು (ಜಿಟಿಡಿಪಿ)	
೧	ಬಂಗಾರಪೇಟೆ	೩೦೨೦೭.೭	೫೧೩೬೩.೦	೪೫೫೨೬.೦	೧೨೭೦೯೭	೨೪೩೬೫.೪	೮೯೭೫೪.೦	೭೬೦೨೭.೦	೧೯೦೧೪೬	೮.೩೯
೨	ಕೋಲಾರ	೫೭೫೯.೭	೧೮೨೨೮.೦	೪೪೨೯೭.೦	೬೮೨೮೫	೩೩೫೨೫.೯	೨೨೮೭೯.೦	೭೭೯೦೮.೦	೧೩೪೩೧೩	೧೪.೪೯
೩	ಮಾಲೂರು	೨೮೬೨೫.೪	೧೦೫೨೩.೦	೨೭೪೯೬.೦	೬೬೬೪೪	೨೧೬೫೯.೦	೨೧೦೧೩.೦	೪೩೧೩೫.೦	೮೫೮೦೭	೫.೧೮
೪	ಮುಳಬಾಗಿಲು	೪೪೦೬೮.೭	೧೬೧೯೬.೦	೨೭೧೫೯.೦	೮೭೪೨೪	೫೦೧೫೬.೪	೩೪೦೪೭.೦	೪೩೭೬೯.೦	೧೨೭೯೭೨	೭.೯೨
೫	ಶ್ರೀನಿವಾಸಪುರ	೩೭೦೦೦.೫	೪೩೦೩.೦	೨೩೫೩೮.೦	೬೪೮೪೧	೪೯೭೮೪.೩	೮೩೪೫.೦	೩೦೨೮೯.೦	೮೮೪೧೮	೬.೪೦
	ಒಟ್ಟು	೧೪೫೬೬೨.೦	೧೦೦೬೧೩.೦	೧೬೮೦೧೬.೦	೪೧೪೨೯೦	೧೭೯೪೧.೦	೧೭೬೦೩೮.೦	೨೭೧೧೨೮.೦	೬೨೬೬೫೭	೮.೬೩
	ಕರ್ನಾಟಕ ರಾಜ್ಯ	೩೩೦೯೫೯೩	೪೮೧೬೫೪೯	೮೫೦೬೪೦೩	೧೬೬೩೨೫೪೮	೫೪೭೬೩೭೬	೯೮೮೩೨೭೪	೧೬೨೯೯೯೯೯	೩೦೭೫೯೬೫೨	೧೩.೦೮

ಕೃಷಿ: ಬೆಳೆಗಳ ಪದ್ಧತಿ, ನೀರಾವರಿ ಮತ್ತು ಜಾನುವಾರು

ಭೂ ಬಳಕೆ ಪದ್ಧತಿಗಳು

ಈ ಕೆಳಕಂಡ ಕೋಷ್ಟಕವು ಜಿಲ್ಲೆಯ ಭೂ ಬಳಕೆ ಪದ್ಧತಿಗಳ ಸ್ಥಿತಿಗತಿಗಳನ್ನು ಒದಗಿಸುತ್ತದೆ. ಜಿಲ್ಲೆಯ ಒಟ್ಟು ಭೌಗೋಳಿಕ ಪ್ರದೇಶದಲ್ಲಿ (ಟಿಜಿಎ) ಶೇ. ೫.೫ರಷ್ಟು ಭೂ ಪ್ರದೇಶ ಅರಣ್ಯಗಳಿಂದ ಕೂಡಿದೆ(೨೦೨೬೦ ಹೆಕ್ಟೇರ್‌ಗಳು). ಶೇ. ೨೦ರಷ್ಟು ಟಿಜಿಎ ಸಾಗುವಳಿಗೆ ಲಭ್ಯವಿಲ್ಲ ಮತ್ತು ಇಂತಹ ಬಹುತೇಕ ಭೂಮಿ ಬಂಗಾರಪೇಟೆಯಲ್ಲಿದೆ(ಶೇ. ೨೨). ಕೋಲಾರದ ಟಿಜಿಎ ಪೈಕಿ, ಖಾಯಂ ಹುಲ್ಲುಗಾವಲುಗಳು ಹಾಗೂ ಮರಗಳು ಮತ್ತು ತೋಪುಗಳು ಒಳಗೊಂಡಂತೆ, ಸಾಗುವಳಿ ಮಾಡಿರದ ಭೂಮಿ ವ್ಯಾಪ್ತಿ ಶೇ. ೧೪ರಷ್ಟಿದೆ. ಜಿಲ್ಲೆಯಲ್ಲಿನ ಅತಿ ಹೆಚ್ಚಿನ ಖಾಯಂ ಹುಲ್ಲುಗಾವಲುಗಳು ಮತ್ತು ಮರಗಳು ಹಾಗೂ ತೋಪುಗಳು ಮುಳಬಾಗಿಲು ತಾಲೂಕಿನಲ್ಲಿದೆ. (ಶೇ. ೧೬.೩೭) ಮತ್ತು ಕೋಲಾರ ತಾಲೂಕಿನಲ್ಲಿದೆ(ಶೇ.೫.೭).

ಕೋಲಾರದಲ್ಲಿ ಕೃಷಿ ಮುಖ್ಯ ಭೂ ಪ್ರದೇಶವನ್ನು ಬಳಸುವ ವಲಯವಾಗಿದೆ. ಜಿಲ್ಲೆಯಲ್ಲಿ ಲಭ್ಯವಿರುವಂತಹ ಒಟ್ಟು ಭೂಮಿಯ ಪೈಕಿ, ಒಟ್ಟು ಕೃಷಿ ಭೂ ಪ್ರದೇಶ ಶೇ. ೫೧.೮ರಷ್ಟಿದೆ. ಮತ್ತು ಅತೀ ಹೆಚ್ಚಿನ ಕೃಷಿ ಭೂಮಿ ಮುಳಬಾಗಿಲು ತಾಲೂಕಿನಲ್ಲಿದೆ(ಶೇ. ೫೮.೧). ಕೃಷಿ ಭೂ ಪ್ರದೇಶದ ಪೈಕಿ ಶೇ. ೫.೬೭ರಷ್ಟು ವ್ಯಾಪ್ತಿ ಒಂದಕ್ಕಿಂತ ಹೆಚ್ಚಿನ ಬಾರಿ ಬಿತ್ತನೆ ಮಾಡಲಾಗುತ್ತದೆ. ಮತ್ತು ಇದರ ಪ್ರಮಾಣ ಮಾಲೂರು ತಾಲೂಕಿನಲ್ಲಿ ಅತೀ ಹೆಚ್ಚಾಗಿದೆ. ಶ್ರೀನಿವಾಸಪುರ ಕೇವಲ ಶೇ. ೨.೫೨ರಷ್ಟು ಕೃಷಿ ಭೂಮಿಯನ್ನು ಹೊಂದಿದ್ದು, ವರ್ಷದಲ್ಲಿ ೨ ಬಾರಿ ಬಿತ್ತನೆ ಮಾಡಲಾಗುತ್ತದೆ. ಕೋಲಾರದ ಕೃಷಿ ವಲಯವು ಮುಖ್ಯವಾಗಿ ಮಳೆ ಹಾಗೂ ಅಂತರ್ಜಲವನ್ನು ಅವಲಂಬಿಸಿದೆ ಎಂಬ ಅಂಶ ಈ ಅಂಕಿ-ಅಂಶಗಳ ಮೂಲಕ ಸೂಚಿತವಾಗುತ್ತದೆ.೧೧

ಕೋಷ್ಟಕ ೫.೧೨. ಕೋಲಾರದಲ್ಲಿ ಭೂ ಬಳಕೆ ಪದ್ಧತಿಗಳು, ಹೆಕ್ಟೇರ್‌ಗಳಲ್ಲಿ (೨೦೧೦-೧೧)

ಕ್ರ.ಸಂ.	ವಿವರಗಳು		ಶ್ರೀನಿವಾಸಪುರ	ಕೋಲಾರ	ಮಾಲೂರು	ಬಂಗಾರಪೇಟೆ	ಮುಳಬಾಗಿಲು	ಜಿಲ್ಲೆ
೧	ಒಟ್ಟು ಭೌಗೋಳಿಕ ಪ್ರದೇಶ		೮೫೮೨೪	೬೯೨೧೦	೬೩೧೬೬	೭೪೫೨೦	೮೨೨೪೬	೩೭೪೯೬೬
೨	ಅರಣ್ಯ ಪ್ರದೇಶ		೯೫೪೭	೪೬೩೩	೧೫೬೦	೨೭೫೮	೨೧೨೨	೨೦೬೨೦
೩	ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿ	ಕೃಷಿಯೇತರ	೮೩೯೫	೧೦೮೯೭	೮೨೫೮	೭೪೩೫	೧೦೬೯೨	೪೫೬೭೭
		ಬರಡು	೯೪೬೦	೩೮೦೭	೧೯೦೭	೮೯೮೨	೪೭೧೪	೨೮೮೭೦
		ಒಟ್ಟು	೧೭೮೫೫	೧೪೭೦೪	೧೦೧೬೫	೧೬೪೧೭	೧೫೪೦೬	೭೪೫೪೭
೪	ಇತರೆ ಸಾಗುವಳಿ ಮಾಡದಿರುವಂತಹ ಭೂಮಿ	ಸಾಗುವಳಿ ತ್ಯಾಜ್ಯ	೯೬೮	೪೦೫	೨೩೯	೧೪೦೭	೧೨೧೮	೬೩೯೭
		ಖಾಯಂ ಹುಲ್ಲುಗಾವಲುಗಳು	೯೯೯೮	೨೬೭೨	೧೦೭೪೨	೫೪೯೫	೧೦೫೧೧	೩೯೪೧೮
		ಮರಗಳು ಮತ್ತು ತೋಪುಗಳು	೧೬೩೨	೧೨೭೦	೭೪೨	೪೧೧	೨೯೫೪	೭೦೦೯
		ಒಟ್ಟು	೧೨೩೯೮	೪೩೪೭	೧೩೮೮೩	೭೩೧೩	೧೪೬೮೩	೫೨೮೨೪
೫	ಬರಡುಭೂಮಿ	ಈಗಿನ	೧೯೧೫	೧೦೦೦೩	೫೦೦೩	೧೩೪೬೭	೩೦೩೧	೩೩೪೪೯
		ಇತರರು	೧೨೩೦	೧೩೯೭	೪೨೦೩	೧೨೦೦	೨೦೮೨	೧೦೩೧೨
		ಒಟ್ಟು	೩೧೪೫	೧೧೬೦೦	೯೨೩೬	೧೪೬೬೭	೫೧೧೩	೪೩೭೬೧
೬	ಬಿತ್ತನೆ ಪ್ರದೇಶ	ನಿವ್ವಳ ಬಿತ್ತನೆ ಪ್ರದೇಶ	೪೨೬೭೯	೩೩೯೨೬	೨೮೩೨೨	೩೩೩೬೫	೪೪೯೨೨	೧೮೩೨೧೪
		ಒಂದಕ್ಕಿಂತ ಹೆಚ್ಚಿನ ಬಾರಿ	೧೧೦೫	೨೬೮೨	೨೫೧೭	೧೮೫೧	೨೮೬೪	೧೧೦೧೯
		ಒಟ್ಟು	೪೩೭೮೪	೩೬೬೦೮	೩೦೮೩೯	೩೫೨೧೬	೪೭೭೮೬	೧೯೪೨೩೩

ಮೂಲ: ಜಿಲ್ಲೆಯ ಅಂಕಿ ಅಂಶಗಳ ಒಂದು ನೋಟ, ೨೦೧೧-೧೨

ಕೋಷ್ಟಕ ೫.೧೩. ಸಮೀಕ್ಷೆಗೊಳಪಟ್ಟ ಭೂಮಿಯ ವಿಧ ಮತ್ತು ಭೂಹಿಡುವಳಿ (ಎಕರೆಗಳಲ್ಲಿ) ವಿವರ

ಕ್ರಸಂ.	ಸೂಚಕಗಳು	ಮುಳಬಾಗಿಲು ತಾಲೂಕು				ಮುಳಬಾಗಿಲು ತಾಲೂಕು			
		ಗಡ್ದೂರು ಪಂಚಾಯತಿ		ನಂಗಲಿ ಪಂಚಾಯಿತಿ		ಗಡ್ದೂರು ಪಂಚಾಯತಿ		ನಂಗಲಿ ಪಂಚಾಯಿತಿ	
		ಸಂಖ್ಯೆ	ಶೇ.	ಸಂಖ್ಯೆ	ಶೇ.	ನೀರಾವರಿ	ಒಣ	ನೀರಾವರಿ	ಒಣ
೧	ಸ್ವಂತ ಭೂಮಿ	೪೦	೪೦%	೪೨	೪೨%	೩	೨	೪	೫
೨	ಸರ್ಕಾರ ನೀಡಿದ ಭೂಮಿ	೧೦	೧೦%	೯	೯%	೨	೦	೦	೩
೩	ಇನಾಂಭೂಮಿ	೬	೬%	೭	೭%	೦	೨	೦	೧.೫
೪	ಗೇಣಿ ಪಡೆದಿರುವ ಭೂಮಿ	೨೩	೨೩%	೨೧	೨೧%	೪	೦	೩	೨
೫	ಗೇಣಿ ಕೊಟ್ಟಿರುವ ಭೂಮಿ	೮	೮%	೬	೬%	೫	೨	೬	೩
೬	ಒತ್ತುವರಿ ಸರ್ಕಾರಿ ಭೂಮಿ	೧೩	೧೩%	೧೫	೧೫%	೦	೨	೦	೦
	ಒಟ್ಟು	೧೦೦	೧೦೦%	೧೦೦	೧೦೦%	೧೪	೮	೧೩	೧೪.೫

ಮೂಲ: ಕ್ಷೇತ್ರಕಾರ್ಯ ವರದಿ

ಈ ಮೇಲಿನ ಕೋಷ್ಟಕವು ಭೂಮಿಯ ವಿವಿಧ ಪ್ರಮಾಣ ಮತ್ತು ಸ್ವಂತ ಭೂಮಿ, ಇತರೆ ಮೂಲದಿಂದ ಅಂದರೆ, ಸರ್ಕಾರ ಹಾಗೂ ಇನ್ನಿತರ ಮೂಲದಿಂದ ಪಡೆದ ವಿವರಗಳನ್ನು ನೀಡುತ್ತದೆ. ಇಲ್ಲಿ ಮುಖ್ಯವಾಗಿ ಎರಡು ಪಂಚಾಯಿತಿಯಲ್ಲಿ ವಾಸಿಸುವ ಜನರನ್ನು ಈ ಅಂಶಗಳನ್ನಿಟ್ಟುಕೊಂಡು ಸಂದರ್ಶನ ಮಾಡಿದೆ ಅವುಗಳೆಂದರೆ, ಸ್ವಂತ ಭೂಮಿ, ಸರ್ಕಾರ ನೀಡಿದ ಭೂಮಿ, ಇನಾಂಭೂಮಿ, ಗೇಣಿ ಪಡೆದಿರುವ ಭೂಮಿ, ಗೇಣಿಗೆ ಕೊಟ್ಟಿರುವ ಭೂಮಿ, ಒತ್ತುವರಿ ಸರ್ಕಾರಿ ಭೂಮಿ ಇವುಗಳು ಕ್ರಮವಾಗಿ ಶೇ. ೪೦, ೧೦, ೬, ೨೩, ೮, ೧೩ ಹಾಗೂ ಶೇ. ೪೨, ೯, ೭, ೨೧, ೬, ೬, ೧೫ ಈ ಪ್ರಮಾಣದಲ್ಲಿ ಭೂಮಿ ಹೊಂದಿದ್ದಾರೆ. ಅದೇ ರೀತಿಯಾಗಿ ನೀರಾವರಿ ಭೂಮಿ ಮತ್ತು ಒಣಭೂಮಿ ಪ್ರಮಾಣವನ್ನು ನೋಡಬಹುದು. ಕ್ರಮವಾಗಿ ಎಕರೆಗಳಲ್ಲಿ ೩, ೨, ೪, ೫ ಒಟ್ಟು ೧೫ ಎಕರೆಗಳಷ್ಟು ಹಾಗೂ ಶೇ. ೪, ೩, ೬ ಒಟ್ಟು ೧೬ ಎಕರೆ ಭೂಮಿಯು ನೀರಾವರಿಯನ್ನು ಹೊಂದಿರುವುದು ಕಂಡು ಬರುತ್ತದೆ. ಹಾಗೆಯೇ ಒಣ ಬೇಸಾಯ ಕ್ರಮವಾಗಿ ಶೇ. ೨, ೨, ೨, ೨ ಒಟ್ಟು ೮ ಎಕರೆಯಷ್ಟು ಹಾಗೂ ಶೇ. ೫, ೩, ೧.೫, ೨, ೩ ಒಟ್ಟು ೧೫ ೧/೨ ಎಕರೆ ಒಣಬೇಸಾಯ ಪದ್ಧತಿಯನ್ನು ಒಳಗೊಂಡ ಭೂಮಿಯನ್ನು ಕಾಣಬಹುದು.

ಕೋಷ್ಟಕ ೫.೧೪. ಸಮೀಕ್ಷೆಗೊಳಪಟ್ಟ ಭೂಮಿಗೆ ಯೋಜನೆಗಳ ಸೌಲಭ್ಯದ ವಿವರ

ಕ್ರಸಂ.	ಸೂಚಕಗಳು	ಮುಳಬಾಗಿಲು ತಾಲೂಕು							
		ಗಡ್ಡೂರು ಪಂಚಾಯತಿ				ನಂಗಲಿ ಪಂಚಾಯಿತಿ			
		ಹೌದು		ಇಲ್ಲ		ಹೌದು		ಇಲ್ಲ	
		ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
೧	ಗಂಗಾ ಕಲ್ಯಾಣ ಯೋಜನೆ ಸೌಲಭ್ಯ ಸಿಕ್ಕಿದೆಯೇ?	೪೫	೪೫%	೫೫	೫೫%	೩೫	೩೫%	೬೫	೬೫%
೨	ಹನಿ ನೀರಾವರಿ ಯೋಜನೆ ಸೌಲಭ್ಯ ಸಿಕ್ಕಿದೆಯೇ?	೫೫	೫೫%	೪೫	೪೫%	೬೫	೬೫%	೩೫	೩೫%
ಒಟ್ಟು		೧೦೦	೧೦೦%	೧೦೦	೧೦೦%	೧೦೦	೧೦೦%	೧೦೦	೧೦೦%

ಮೂಲ: ಕ್ಷೇತ್ರಕಾರ್ಯ ವರದಿ

ಈ ಮೇಲಿನ ಕೋಷ್ಟಕವು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಗಡ್ಡೂರು ಮತ್ತು ನಂಗಲಿ ಪಂಚಾಯತಿ ವ್ಯಾಪ್ತಿಗೆ ಸಂಬಂಧಿಸಿದ ಭೂಮಿಗೆ ಸಿಕ್ಕ ಯೋಜನೆಗಳ ಸೌಲಭ್ಯದ ವಿವರವನ್ನು ಒಳಗೊಂಡಿದೆ. ಮೊದಲನೆಯದಾಗಿ ಗಂಗಾ ಕಲ್ಯಾಣ ಯೋಜನೆ ಸೌಲಭ್ಯ ಮತ್ತು

ಹನಿ ನೀರಾವರಿ ಯೋಜನೆಯ ಸೌಲಭ್ಯ ಸಿಕ್ಕಿದೆ– ಇಲ್ಲ ಎಂದು ಪ್ರಶ್ನಿಸಿದಾಗ ದೊರೆತ ಮಾಹಿತಿಯು ಈ ರೀತಿಯಾಗಿದೆ. ಕ್ರಮವಾಗಿ ಗಂಗಾ ಕಲ್ಯಾಣ ಯೋಜನೆ ಸಿಕ್ಕಿದೆ ಎಂದವರು ನೂರಕ್ಕೆ ಪ್ರತಿಶತ ಶೇ. ೪೫, ೩೫ರಷ್ಟು ಹೇಳಿದ್ದಾರೆ. ಇಲ್ಲ ಎಂದವರು ಕ್ರಮವಾಗಿ ಶೇ. ೫೫, ೬೫ರಷ್ಟು ಪ್ರಮಾಣದಲ್ಲಿ ದೊರೆತಿಲ್ಲದಿರುವುದು ಕಂಡುಬಂದಿದೆ. ಹಾಗೆ ಹನಿ ನೀರಾವರಿ ಸೌಲಭ್ಯ ಸಿಕ್ಕಿದೆ ಎಂದವರು ಕ್ರಮವಾಗಿ ಶೇ. ೫೫, ೬೫ ಎಂದು ಹೇಳಿದರೆ ಇಲ್ಲ ಎಂದವರು ಶೇ. ೪೫, ೩೫ರಷ್ಟು ಸೌಲಭ್ಯ ಸಿಕ್ಕಿರುವುದಿಲ್ಲ ಎಂಬುದಾಗಿ ಉತ್ತರಿಸಿದ್ದಾರೆ.

ಕೋಷ್ಟಕ ೫.೧೫. ಸಮೀಕ್ಷೆಗೊಳಪಟ್ಟ ಉದ್ಯೋಗದ ವಿವರ

ಕ್ರಸಂ.	ಸೂಚಕಗಳು	ಮುಳಬಾಗಿಲು ತಾಲೂಕು			
		ಗಡ್ಡೂರು ಪಂಚಾಯತಿ		ನಂಗಲಿ ಪಂಚಾಯಿತಿ	
		ಸಂಖ್ಯೆ	ಶೇ.	ಸಂಖ್ಯೆ	ಶೇ.
೧	ಕೂಲಿ	೨೬	೨೬%	೨೭	೨೭%
೨	ಹೈನುಗಾರಿಕೆ	೮	೮%	೯	೯%
೩	ಹೋಟೆಲ್	೨	೨%	೩	೩%
೪	ಅಂಗಡಿ ವ್ಯಾಪಾರ	೭	೭%	೬	೬%
೫	ಖಾಸಗೀ ಉದ್ಯೋಗ	೧೪	೧೪%	೧೫	೧೫%
೬	ಸರ್ಕಾರಿ ಉದ್ಯೋಗ	೧೨	೧೨%	೧೧	೧೧%
೭	ಟೈಲರಿಂಗ್	೮	೮%	೮	೮%
೮	ಆಟೋ ಡ್ರೈವರ್	೮	೮%	೭	೭%
೯	ಮೆಕಾನಿಕ್	೮	೮%	೮	೮%
೧೦	ತರಕಾರಿ ವ್ಯಾಪಾರ	೭	೭%	೬	೬%
ಒಟ್ಟು		೧೦೦	೧೦೦%	೧೦೦	೧೦೦%

ಮೂಲ: ಕ್ಷೇತ್ರಕಾರ್ಯ ವರದಿ

ಈ ಮೇಲಿನ ಕೋಷ್ಟಕವು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಎರಡು ಪಂಚಾಯಿತಿಗಳಾದ ಗಡ್ಡೂರು ಹಾಗೂ ನಂಗಲಿ ದಲಿತ ಜನರ ಉದ್ಯೋಗದ ವಿವರಗಳನ್ನು ನೀಡುತ್ತದೆ. ಇಲ್ಲಿ ಹತ್ತು ಸೂಚಕಗಳನ್ನಿಟ್ಟುಕೊಂಡು ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅವುಗಳೆಂದರೆ, ಕೂಲಿ, ಹೈನುಗಾರಿಕೆ, ಹೋಟೆಲ್, ಅಂಗಡಿ ವ್ಯಾಪಾರ, ಖಾಸಗಿ ಉದ್ಯೋಗ, ಸರ್ಕಾರಿ ಉದ್ಯೋಗ, ಟೈಲರಿಂಗ್, ಆಟೋ ಡ್ರೈವರ್, ಮೆಕಾನಿಕ್, ತರಕಾರಿ ವ್ಯಾಪಾರ ಇವುಗಳಿಗೆ ಕ್ರಮವಾಗಿ ಎರಡು ಪಂಚಾಯಿತಿಯಿಂದ ಉದ್ಯೋಗ ಯಾವ ಮಾದರಿಯಲ್ಲಿ ಉದ್ಯೋಗ ಪಡೆದಿದ್ದಾರೆ ಎಂಬುದು ಕ್ರಮವಾಗಿ ಹೀಗೆ ನೋಡಬಹುದು. ಶೇ. ೨೬, ೮, ೨, ೭, ೧೪, ೧೨, ೮, ೮, ೮, ೭ ಹಾಗೂ

ಶೇ. ೨೭, ೯, ೩, ೬, ೧೫, ೧೧, ೮, ೭, ೮,೬ ಇಲ್ಲಿ ಅತೀ ಹೆಚ್ಚು ಮಂದಿ ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದಾರೆ ಎಂಬುದು ಈ ಕೋಷ್ಟಕದಿಂದ ತಿಳಿದುಬರುತ್ತದೆ.

ಕೋಷ್ಟಕ ೫.೧೬. ಸಮೀಕ್ಷೆಗೊಳಪಟ್ಟ ಕುಟುಂಬಕ್ಕೆ ಆದಾಯದ ಮೂಲ

ಕ್ರಸಂ.	ಸೂಚಕಗಳು	ಮುಳಬಾಗಿಲು ತಾಲೂಕು			
		ಗಡ್ಡೂರು ಪಂಚಾಯತಿ		ನಂಗಲಿ ಪಂಚಾಯಿತಿ	
		ಸಂಖ್ಯೆ	ಶೇ.	ಸಂಖ್ಯೆ	ಶೇ.
೧	ಕೃಷಿ	೩೦	೩೦%	೩೧	೩೧%
೨	ಹೈನುಗಾರಿಕೆ	೧೦	೧೦%	೯	೯%
೩	ಹೋಟೆಲ್	೨	೨%	೨	೨%
೪	ಅಂಗಡಿ ವ್ಯಾಪಾರ	೯	೯%	೭	೭%
೫	ತರಕಾರಿ ವ್ಯಾಪಾರ	೭	೭%	೯	೯%
೬	ಟೈಲರಿಂಗ್	೬	೬%	೮	೮%
೭	ಮೆಕಾನಿಕ್	೮	೮%	೧೦	೧೦%
೮	ಆಟೋ ಡ್ರೈವರ್	೭	೭%	೭	೭%
೯	ಖಾಸಗೀ ಉದ್ಯೋಗ	೧೧	೧೧%	೯	೯%
೧೦	ಸರ್ಕಾರಿ ಉದ್ಯೋಗ	೧೦	೧೦%	೮	೮%
ಒಟ್ಟು		೧೦೦	೧೦೦%	೧೦೦	೧೦೦%

ಮೂಲ: ಕ್ಷೇತ್ರಕಾರ್ಯ ವರದಿ

ಈ ಕೋಷ್ಟಕವು ಮುಳಬಾಗಿಲು ತಾಲೂಕಿನ ಎರಡು ಪಂಚಾಯಿತಿಗಳಾದ ಗಡ್ಡೂರು ಮತ್ತು ನಂಗಲಿ ಗ್ರಾಮದಲ್ಲಿ ವಾಸ ಮಾಡುವ ದಲಿತ ಸಮುದಾಯ ಕುಟುಂದವರ ಆದಾಯದ ಮೂಲದ ವಿವರಗಳನ್ನು ನೀಡುತ್ತದೆ. ಇಲ್ಲಿ ಕೂಡ ಹತ್ತು ಸೂಚಕಗಳನ್ನಿಟ್ಟುಕೊಂಡು ಅಧ್ಯಯನಕ್ಕೆ ಒಳಪಡಿಸಿದೆ. ಅವುಗಳೆಂದರೆ, ಕೃಷಿ, ಹೈನುಗಾರಿಕೆ, ಹೋಟೆಲ್, ಅಂಗಡಿ ವ್ಯಾಪಾರ, ತರಕಾರಿ ವ್ಯಾಪಾರ, ಟೈಲರಿಂಗ್, ಮೆಕಾನಿಕ್, ಆಟೋರೀಕ್ಷಾ, ಖಾಸಗಿ ಉದ್ಯೋಗ, ಸರ್ಕಾರಿ ಉದ್ಯೋಗ ಮುಖ್ಯವಾಗಿ ಇದರ ಮೇಲೆ ಸಂದರ್ಶನ ನಡೆಸಿದಾಗ ಕ್ರಮವಾಗಿ ಶೇ. ೩೦, ೧೦, ೨, ೯, ೭, ೬, ೮, ೭, ೧೧, ೧೦ ಹಾಗೂ ೩೧, ೯, ೨, ೭, ೯, ೮ ಈ ಪ್ರಮಾಣದಲ್ಲಿ ಉದ್ಯೋಗವನ್ನು ಮಾಡುತ್ತಿದ್ದಾರೆ. ಬಹುತೇಕ ಕುಟುಂಬಗಳು ಕೃಷಿಯನ್ನು ಅವಲಂಬಿಸಿರುವುದು ಕಂಡುಬರುತ್ತದೆ.

ಕೋಷ್ಟಕ ೫.೧೭. ಉದ್ಯೋಗ ಖಾತ್ರಿ ಯೋಜನೆಯ ವಿವರ

ಕ್ರ ಸಂ.	ಸೂಚಕಗಳು	ಮುಳಬಾಗಿಲು ತಾಲೂಕು									
		ಗಡ್ಡೂರು ಪಂಚಾಯತಿ					ನಂಗಲಿ ಪಂಚಾಯಿತಿ				
		ಹೌದು		ಇಲ್ಲ		ಒಟ್ಟು	ಹೌದು		ಇಲ್ಲ		ಒಟ್ಟು
		ಸಂಖ್ಯೆ	ಶೇ.	ಸಂಖ್ಯೆ	ಶೇ.		ಸಂಖ್ಯೆ	ಶೇ.	ಸಂಖ್ಯೆ	ಶೇ.	
೧	ಉದ್ಯೋಗ ಖಾತ್ರಿ ಯೋಜನೆಯಿಂದ ನಿಮಗೆ ಕೆಲಸ ಸಿಕ್ಕಿದೆಯಾ?	೬೫	೬೫%	೩೫	೩೫%	೧೦೦%	೬೭	೬೭%	೩೩	೩೩%	೧೦೦%
೨	ಹೌದಾದರೆ ಈ ಯೋಜನೆಯ ಕೂಲಿ ನಿಮ್ಮ ಕೈಗೆ ಸಿಗುತ್ತಿದೆಯೇ?	೮೮	೮೮%	೧೨	೧೨%	೧೦೦%	೮೨	೮೨%	೧೮	೧೮%	೧೦೦%

ಮೂಲ: ಕ್ಷೇತ್ರಕಾರ್ಯ ವರದಿ

ಈ ಮೇಲಿನ ಕೋಷ್ಟಕವು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಗಡ್ಡೂರು ಪಂಚಾಯಿತಿ ಹಾಗೂ ನಂಗಲಿ ಪಂಚಾಯಿತಿ ವ್ಯಾಪ್ತಿಯ ದಲಿತ ಸಮುದಾಯದ ಉದ್ಯೋಗ ಖಾತ್ರಿ ಯೋಜನೆಯ ಸೌಲಭ್ಯದ ಬಗ್ಗೆ ವಿವರಣೆಯನ್ನು ನೀಡುತ್ತದೆ. ಉದ್ಯೋಗ ಖಾತ್ರಿ ಯೋಜನೆಯಿಂದ ಕೆಲಸ ಸಿಕ್ಕಿದೆ ಎಂದವರ ಪ್ರಮಾಣ ಕ್ರಮವಾಗಿ ಶೇ. ೬೫, ೬೭ ಹಾಗೂ ಇಲ್ಲ ಎಂದವರ ಪ್ರಮಾಣ ಶೇ ೩೫, ೩೩ರಷ್ಟು ಉದ್ಯೋಗ ದೊರೆತಿರುವುದಿಲ್ಲ. ಅದೇ ರೀತಿಯಾಗಿ ಕೂಲಿ ನಿಮ್ಮ ಕೈಗೆ ಸಿಗುತ್ತದೆಯೇ ಎಂದು ವಿಚಾರಿಸಿದಾಗ ಕ್ರಮವಾಗಿ ಹೌದು ಎಂದವರು ಶೇ. ೮೮, ೮೨ ಹಾಗೂ ಇಲ್ಲ ಎಂದವರು ಶೇ. ೧೨, ೧೮ರಷ್ಟು ಕೂಲಿ ಮಾಡಿದವರಿಗೆ ಕೂಲಿ ಸಂಬಳ ಅವರ ಕೈಗೆ ಸಿಕ್ಕಿರುವುದಿಲ್ಲ ಎಂದು ಉತ್ತರಿಸಿದ್ದಾರೆ.

ಕೋಷ್ಟಕ ೫.೧೮. ಕುಟುಂಬದ ಸದಸ್ಯರು ರಾಜಕೀಯ ಪಕ್ಷವನ್ನು ಬೆಂಬಲಿಸುವ ಕುರಿತು

ಕ್ರ.ಸಂ.	ಸೂಚಕಗಳು	ಮುಳಬಾಗಿಲು ತಾಲೂಕು							
		ಗಡ್ಡೂರು ಪಂಚಾಯತಿ				ನಂಗಲಿ ಪಂಚಾಯಿತಿ			
		ಗಂಡು		ಹೆಣ್ಣು		ಗಂಡು		ಹೆಣ್ಣು	
		ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
೧	ಕಾಂಗ್ರೆಸ್	೨೧	೨೧%	೧೫	೧೫%	೨೫	೨೫%	೧೩	೧೩%
೨	ಬಿಜೆಪಿ	೧೪	೧೪%	೧೨	೧೨%	೧೩	೧೩%	೧೦	೧೦%
೩	ಜೆಡಿಎಸ್	೧೮	೧೮%	೧೭	೧೭%	೧೯	೧೯%	೧೫	೧೫%
೪	ಪಕ್ಷೇತರ	೨	೨%	೧	೧%	೩	೩%	೨	೨%
ಒಟ್ಟು		೫೫	೫೫%	೪೫	೪೫%	೬೦	೬೦%	೪೦	೪೦%

ಮೂಲ: ಕ್ಷೇತ್ರಕಾರ್ಯ ವರದಿ

ಈ ಮೇಲಿನ ಕೋಷ್ಟಕವು ಸದಸ್ಯರು ರಾಜಕೀಯ ಪಕ್ಷವನ್ನು ಅಂದರೆ ಯಾವ ಪಕ್ಷವನ್ನು ಬೆಂಬಲಿಸುತ್ತಾರೆಂಬ ವಿವರವನ್ನು ಈ ಕೋಷ್ಟಕವು ನೀಡುತ್ತದೆ. ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಗಡ್ಡೂರು ಹಾಗೂ ನಂಗಲಿ ದಲಿತ ಜನರು ಯಾವ ಪಕ್ಷವನ್ನು ಬೆಂಬಲಿಸುತ್ತಾರೆ ಎಂಬುದನ್ನು ಕ್ರಮವಾಗಿ ಕಾಂಗ್ರೆಸ್, ಬಿ.ಜೆ.ಪಿ., ಜೆ.ಡಿ.ಎಸ್. ಹಾಗೂ ಪಕ್ಷೇತರವನ್ನು ಪುರುಷರು ಮತ್ತು ಮಹಿಳೆಯರು ಹೆಚ್ಚು ಯಾವ ಪಕ್ಷವನ್ನು ಬೆಂಬಲಿಸಿದ್ದಾರೆ ಎಂದು ಈ ಕೋಷ್ಟಕದ ಅಂಕಿ ಅಂಶಗಳಿಂದ ತಿಳಿದುಬರುತ್ತದೆ. ಕ್ರಮವಾಗಿ ಕಾಂಗ್ರೆಸ್ ಪಕ್ಷವನ್ನು ಗಡ್ಡೂರು ಮತ್ತು ನಂಗಲಿ ವ್ಯಾಪ್ತಿಯಲ್ಲಿ ಕ್ರಮವಾಗಿ ಶೇ. ೨೧, ೧೫ರಷ್ಟು ಬಿಜೆಪಿ ಶೇ. ೧೪, ೧೨ರಷ್ಟು ಜೆಡಿಎಸ್ ಶೇ. ೧೮, ೧೭ರಷ್ಟು ಹಾಗೂ ಪಕ್ಷೇತರ ಶೇ. ೨ರಷ್ಟು ಮಹಿಳೆಯರು ಇಲ್ಲವೇ ಇಲ್ಲ. ಅದೇ ರೀತಿಯಾಗಿ ನಂಗಲಿ ವ್ಯಾಪತ್ತಿಯಲ್ಲಿ ಕಾಂಗ್ರೆಸ್ ಶೇ. ೨೫, ೧೩ರಷ್ಟು ಹಾಗೂ ಶೇ. ೧೩, ೧೦, ೧೯, ೧೫, ೦೩, ೦೨ರಷ್ಟು ಈ ಪ್ರಮಾಣದಲ್ಲಿ ಬಿಜೆಪಿ, ಜೆಡಿಎಸ್, ಪಕ್ಷೇತರ ಪಕ್ಷವನ್ನು ಬೆಂಬಲಿಸುತ್ತಿರುವುದು ಕಂಡುಬಂದಿದೆ. ಮುಖ್ಯವಾಗಿ ಅತಿ ಹೆಚ್ಚು ಕಾಂಗ್ರೆಸ್ ಪಕ್ಷವನ್ನು ಪುರುಷರು ಮತ್ತು ಮಹಿಳೆಯರು ಬೆಂಬಲಿಸಿದ್ದಾರೆ.

ಕೊನೆ ಟಿಪ್ಪಣಿ

೧. ಚಂದ್ರಶೇಖರ್ ಟಿ.ಆರ್. ೨೦೧೩, ಪು. ೫೪

೨. ಗಂಗಾಧರಮೂರ್ತಿ ಬಿ., ನಾಗಸಂದ್ರದ ಭೂ ಆಕ್ರಮಣ ಚಳವಳಿ, ಸಂಘರ್ಷ ಪ್ರಕಾಶನ, ಬೆಂಗಳೂರು, ೨೦೦೯, ಪು.೧೬

೩. ಸಮಾಜ ಕಲ್ಯಾಣ ಇಲಾಖೆ ಕೈಪಿಡಿ, ಕರ್ನಾಟಕ ಸರ್ಕಾರ, ಬೆಂಗಳೂರು, ಪು.೧–೩೦

೪. ಚೆನ್ನಸ್ವಾಮಿ ಸೋಸಲೆ ಎನ್., ಪ್ರಭುತ್ವ ಮತ್ತು ದಲಿತರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.೫೭–೫೮

೫. ಚಂದ್ರಶೇಖರ ಟಿ.ಆರ್, ೨೦೧೪, ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು. ೨೭–೨೮

೬. ಚಂದ್ರಶೇಖರ ಟಿ.ಆರ್, ೨೦೧೪, ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು.೧೦೬

೭. ಕರ್ನಾಟಕದಲ್ಲಿ ಭೂರಹಿತ ಕೃಷಿದಿನಗೂಲಿ ದುಡಿಮೆಗಾರರ ಬದುಕು–ಬವಣೆ ಚಂದ್ರಶೇಖರ ಟಿ.ಆರ್., ೨೦೧೪, ಪು.೧೦೧

೮. ಚಂದ್ರಶೇಖರ ಟಿ.ಆರ್., ೨೦೧೪ ಪು.೧೦೨

೯. ಚಂದ್ರಶೇಖರ ಟಿ.ಆರ್, ಕರ್ನಾಟಕದಲ್ಲಿ ಸಾಕ್ಷರತೆಯ ಲಿಂಗ ಸಂಬಂಧಿ ಸ್ವರೂಪ, ೨೦೧೦, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. ೪೫

೧೦. ಶ್ರೀರಾಮರೆಡ್ಡಿ ಜಿ.ವಿ. (ಸಂ), ೨೦೧೫ ಜನಶಕ್ತಿ ಕನ್ನಡ ಮಾಸಪತ್ರಿಕೆ, ನಿತ್ಯಾನಂದ ಸ್ವಾಮಿ ಕರ್ನಾಟಕದಲ್ಲಿ ದಲಿತರ ಹಕ್ಕುಗಳಿಗೆ ಹೋರಾಟ ಸಂಪಾದಕೀಯ ಕಛೇರಿ, ಇ.ಎಂ.ಎಸ್. ಭವನ ಮಹಾಲಕ್ಷ್ಮಿ ಲೇಔಟ್, ಬೆಂಗಳೂರು, ಪು.೬೭.

೧೧. ಕೋಲಾರ ಜಿಲ್ಲಾ ಮಾನವ ಅಭಿವೃದ್ಧಿ ವರದಿ, ೨೦೧೪, ಕೋಲಾರ ಜಿಲ್ಲಾ ಪಂಚಾಯತ್ ಮತ್ತು ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರು, ಪು.೧೩೩- ೧೪೩.

ಅಧ್ಯಾಯ ಆರು

ಕೋಲಾರ ಜಿಲ್ಲೆಯಲ್ಲಿ ದಲಿತರ ರಾಜಕೀಯ ಭಾಗವಹಿಸುವಿಕೆ

೬.೧. ಕೋಲಾರ ಜಿಲ್ಲೆಯಲ್ಲಿ ದಲಿತರ ರಾಜಕೀಯ ಭಾಗವಹಿಸುವಿಕೆ

೬.೨. ರಾಜಕೀಯ ಭಾಗವಹಿಸುವಿಕೆಯ ವಿವಿಧ ದೃಷ್ಟಿಕೋನಗಳು

೬.೩. ಸಂವಿಧಾನ ಮತ್ತು ದಲಿತರ ಸ್ಥಾನಮಾನಗಳು

೬.೪. ಸ್ಥಳೀಯ ಸರ್ಕಾರದಲ್ಲಿ ದಲಿತರ ಪ್ರತಿನಿಧಿಕರಣ

೬.೫. ದಲಿತರ ಭಾಗವಹಿಸುವಿಕೆ

೬.೬. ಸ್ಥಳೀಯ ಸರಕಾರದಲ್ಲಿ ದಲಿತರ ರಾಜಕೀಯ ಪ್ರಾತಿನಿಧ್ಯ

ಅಧ್ಯಾಯ ಆರು

ಕೋಲಾರ ಜಿಲ್ಲೆಯಲ್ಲಿ ದಲಿತರ ರಾಜಕೀಯ ಭಾಗವಹಿಸುವಿಕೆ

ಒಂದು ದೇಶದ ವೈವಿಧ್ಯಮಯ ಸಾಮಾಜಿಕ ಮತ್ತು ರಾಜಕೀಯ ಬಲಗಳಿಗನುಸಾರವಾಗಿ ವಿವಿಧ ಬಗೆಯ ಸರ್ಕಾರದ ವ್ಯವಸ್ಥೆಗಳು ರೂಪುಗೊಳ್ಳುತ್ತವೆ. ರಾಜಕೀಯ ಅಧಿಕೃತವಾಗಿ ಆರಂಭ ಗೊಂಡಾಗಿನಿಂದಲೇ ಅತ್ಯುತ್ತಮ ಸರ್ಕಾರ ರಚನೆಯ ಬಗ್ಗೆ ಹುಡುಕಾಟವು ಶುರುವಾಗಿತ್ತು. ಜನರ ಹಿತಾಸಕ್ತಿಯನ್ನು ರಕ್ಷಿಸಬಹುದಾದ ಪ್ರಜಾಪ್ರಭುತ್ವ ಸರಕಾರ ವ್ಯವಸ್ಥೆಯು ಅನೇಕ ದೇಶಗಳಲ್ಲಿ ಸ್ವೀಕರಿಸಲ್ಪಟ್ಟಿದೆ. ಭಾರತವು ಸ್ವತಂತ್ರ ಪಡೆದ ನಂತರ ಸಂಸದೀಯ ಸರ್ಕಾರ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ, ಹಾಗೂ ಜಗತ್ತಿನಲ್ಲಿ ಅತಿ ದೊಡ್ಡ ಪ್ರಜಾತಂತ್ರವೆನಿಸಿಕೊಂಡ ರಾಷ್ಟ್ರವಾಗಿದೆ. ಪ್ರಜಾಪ್ರಭುತ್ವ ಮತ್ತು ಪ್ರಜೆಗಳು ರಾಜಕೀಯ ಪ್ರಾತಿನಿಧ್ಯತೆ ಕುರಿತಂತೆ ಹಲವು ಅಭಿಪ್ರಾಯಗಳಿವೆ. ಆದರೆ ಜನ ಸಾಮಾನ್ಯರ ದೃಷ್ಟಿಯಲ್ಲಿ ಪ್ರಜಾಪ್ರಭುತ್ವವು ಒಂದು ಸಾಂಸ್ಥಿಕ ವ್ಯವಸ್ಥೆಯಾಗಿದ್ದು, ರಾಜಕೀಯ ಅಧಿಕಾರವನ್ನು ಪಡೆಯುವ ಪ್ರಕ್ರಿಯೆಯಲ್ಲಿ ಜಾತಿ, ಮತ, ಲಿಂಗ, ಧರ್ಮ, ವರ್ಗಗಳ ತಾರತಮ್ಯವಿಲ್ಲದೆ ಪ್ರತಿಯೋರ್ವ ಅರ್ಹ ಪೌರನು ಭಾಗವಹಿಸಲು ಅವಕಾಶ ನೀಡುತ್ತದೆ. ಪ್ರಜಾಪ್ರಭುತ್ವ ವೆಂದರೆ ಪ್ರತಿಯೊಬ್ಬರಿಗೂ ಪಾಲು ಇರುವ ಒಂದು ಸರಕಾರ ಎಂಬುದಾಗಿ ಪ್ರೊ. ಸೀಲೆ ಹೇಳಿದ್ದಾರೆ. ಇಲ್ಲಿ ಆಡಳಿತ ಅಧಿಕಾರವು ಒಂದು ನಿರ್ದಿಷ್ಟ ವರ್ಗ ಅಥವಾ ವರ್ಗಗಳ ಕೈಯಲ್ಲಿ ಅಪರಿಮಿತವಾಗಿರದೆ, ಇಡೀ ಸಮುದಾಯದ ಎಲ್ಲ ಸದಸ್ಯರ ಕೈಯಲ್ಲಿರುತ್ತದೆ. ಪ್ರಜಾತಂತ್ರದ ಕೇಂದ್ರ ಬಿಂದುವೇ ಆಯ್ಕೆಯ ಸ್ವಾತಂತ್ರ್ಯ ಮತ್ತು ಈ ಆಯ್ಕೆಯು ಯಾರು ಆಡಳಿತ ನಡೆಸ ಬೇಕೆಂಬುವುದನ್ನು ನಿರ್ಧರಿಸುತ್ತದೆ. ಇಲ್ಲಿ ಸಾರ್ವಜನಿಕ ಅಭಿಪ್ರಾಯಕ್ಕೆ ವಿಶೇಷ ಮನ್ನಣೆ ಇದೆ ಎನ್ನುವುದು ಗಮನಾರ್ಹ.

೬.೧. ಕೋಲಾರ ಜಿಲ್ಲೆಯಲ್ಲಿ ದಲಿತರ ರಾಜಕೀಯ ಭಾಗವಹಿಸುವಿಕೆ

ಪ್ರಜಾಪ್ರಭುತ್ವದಲ್ಲಿ ವೈಶಿಷ್ಟ್ಯತೆಯೆಂದರೆ ರಾಜಕೀಯ ಅಧಿಕಾರವು ಜನರು ಪಾಲುಗೊಳ್ಳುವುದರ ಮೂಲಕ ಸಮುದಾಯದ ಆಶೋತ್ತರಗಳಿಗೆ ಸ್ಪಂದಿಸುವ ವ್ಯವಸ್ಥೆ ಎನ್ನುವುದನ್ನು ಒಪ್ಪಿಕೊಳ್ಳಬೇಕು.

ಅಂತೆಯೇ ಸರಕಾರದ ನಿಯಂತ್ರಣವೂ ಜನಸಮುದಾಯದ ಅಧೀನದಲ್ಲಿರುತ್ತದೆ. ಈ ಹಿನ್ನೆಲೆಯಿಂದ ಒಂದು ಉತ್ತಮ ಸರಕಾರವು ರಚನೆಯಾಗಬೇಕಾದರೆ ಮುಖ್ಯವಾಗಿ ನಾಲ್ಕು ವಿಧಾನಗಳು ಅಗತ್ಯ.

೧. ಅಭಿಪ್ರಾಯಗಳ ಸಹ ಅಸ್ತಿತ್ವ ಮತ್ತು ರಾಜಕೀಯ ಪಕ್ಷಗಳ ಸಹಕಾರಯುತ ಬೆಂಬಲಗಳು,

೨. ಮುಕ್ತವಾಗಿ ಚರ್ಚಿಸುವ ಹಕ್ಕುಗಳು ಅವಕಾಶಗಳು,

೩. ವಯಸ್ಕ ಮತದಾನ ಪದ್ಧತಿ, ಮತ್ತು

೪. ಚುನಾವಣೆಗಳು.

ಇಂತಹ ಒಂದು ರಾಜಕೀಯ ವ್ಯವಸ್ಥೆಯ ಪರಿಪೂರ್ಣತೆಯನ್ನು ಸಾಧಿಸಬೇಕಾದರೆ ಸಾಮಾಜಿಕ ವ್ಯವಸ್ಥೆಯೂ ಸಹ ಪ್ರಜಾಪ್ರಭುತ್ವ ದೃಷ್ಟಿಕೋನವನ್ನು ಹೊಂದಿರಬೇಕಾದ ಅಗತ್ಯವಿದೆ. ಅಂದರೆ, ಸಮಾಜದ ಅವಿಭಾಜ್ಯ ಅಂಗವೆನಿಸಿಕೊಂಡ ಪ್ರತೀ ವ್ಯಕ್ತಿಯೂ ಸಾರ್ವಜನಿಕ ಚರ್ಚೆಗಳಿಗೆ ತನ್ನ ಅಭಿಪ್ರಾಯಗಳ ಕೊಡುಗೆಗಳನ್ನು ನೀಡುವಂತಾಗಬೇಕು. ಜಾತಿ, ಮತ, ಲಿಂಗ, ಧರ್ಮ ಇತ್ಯಾದಿಗಳ ಬಗೆಗಿನ ವಿಭಜನೆಗಳನ್ನು ಮೀರಿ ಸಂವಿಧಾನದ ನೆಲೆಯಿಂದ ಪಡೆದ 'ಸಮಾನ ಪೌರತ್ವಕ್ಕೆ' ಮನ್ನಣೆಯನ್ನು ಪಡೆಯಬೇಕು. ಪ್ರತಿಯೋರ್ವ ಪ್ರಜೆ ತನ್ನ ಚಟುವಟಿಕೆಗಳಿಗೆ ನೈತಿಕ ಹೊಣೆಗಾರಿಕೆಗಳನ್ನು ಇಟ್ಟುಕೊಂಡಿರಬೇಕು. ಪ್ರಜೆಗಳು ಆರಿಸಿದ ಜನಪ್ರತಿನಿಧಿಗಳು ಸರ್ಕಾರದಲ್ಲಿ ಕಾರ್ಯ ನಿರ್ವಹಿಸುವಾಗ ನೈತಿಕ ಹೊಣೆಗಾರಿಕೆಯು ಅನಿವಾರ್ಯವಾಗುವ ಅಂಶವೆನ್ನುವುದನ್ನು ಗಮನಿಸಬೇಕು.

ರಾಜಕೀಯ ಮತ್ತು ಸಾಮಾಜಿಕ ಪ್ರಜಾಪ್ರಭುತ್ವಗಳೆರಡೂ ಒಂದು ದೇಶದೊಳಗೆ ಸಾಧಿಸಬೇಕಾದರೆ ಜನ ಸಮುದಾಯಗಳ ಸಂಬಂಧಗಳೂ ಸಹ ಮುಖ್ಯ. ವ್ಯಕ್ತಿತ್ವದ ಶ್ರೀಮಂತಿಕೆಯನ್ನು ಬೆಳೆಸಬೇಕಾದರೆ ಸಂಘಟಿತ ಜೀವನ ವಿವಿಧ ಗುಂಪು, ವರ್ಗಗಳ ನಡುವೆ ಸಹಜವಾಗಿ ಸೆಳೆಯಲ್ಪಡುವ ಸೌಹಾರ್ದತೆಯ ಅಗತ್ಯ ಭಾರತವು ಒಂದೇ ಸಮುದಾಯದ ರಾಷ್ಟ್ರವಲ್ಲ. ಇಲ್ಲಿ ಸಾಂಸ್ಥಿಕ ಬಹುತ್ವವಿದೆ, ಕಾರ್ಯ ವೈಖರಿಗಳಲ್ಲಿ ವೈವಿಧ್ಯತೆ ಇದೆ. 'ಅಲ್ಪಸಂಖ್ಯಾತ', 'ಬಹುಸಂಖ್ಯಾತ' ಇತ್ಯಾದಿ ನಿರ್ದಿಷ್ಟವಾಗಿ ಗುರುತಿಸಲ್ಪಡುವ ಗುಂಪುಗಳಿವೆ. ಯಾವುದೇ ವ್ಯತ್ಯಾಸಗಳಿದ್ದರೂ ರಾಜಕೀಯ ಪ್ರಕ್ರಿಯೆಗಳಲ್ಲಿ ಸಮಾನವಾಗಿ ಪಾಲ್ಗೊಳ್ಳುವ ಅವಕಾಶವಿರುವುದರಿಂದಲೇ ಪ್ರಜಾಪ್ರಭುತ್ವವು ಜನಪ್ರಿಯತೆಯನ್ನು ಪಡೆದಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಜನರ ಪಾಲುಗೊಳ್ಳುವಿಕೆಗೆ ವಿಶೇಷ ಮಹತ್ವವಿದೆ. ಇಲ್ಲಿ ಪ್ರಜೆಗಳೇ ನಿಜವಾದ ಪ್ರಭುಗಳು. ಇಲ್ಲಿ ಪ್ರಜೆಗಳ ಸಹಮತ ಮತ್ತು ಬೆಂಬಲವಿಲ್ಲದೆ ತೆಗೆದುಕೊಳ್ಳಲಾದ ಯಾವುದೇ ನಿರ್ಧಾರಗಳು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳ್ಳಲಾರವು. ಆದ್ದರಿಂದ ಆಯ್ಕೆಗೊಂಡಂತಹ ಸರಕಾರಗಳು ರೂಪಿಸುವ ಪ್ರತಿಯೊಂದು ನಿರ್ಣಯಗಳು ಜನರ ಆಸೆ, ಆಕಾಂಕ್ಷೆ, ಆಶೋತ್ತರಗಳಿಗೆ ಸ್ಪಂದಿಸಬೇಕು. ಇಲ್ಲಿ ಜನ ಪ್ರತಿನಿಧಿ ಜನರ ಧ್ವನಿಯಾಗಿ ಕೆಲಸ ಮಾಡಬೇಕಾಗುತ್ತದೆ ಎಂಬುದನ್ನು ಗಮನಿಸಬೇಕು. ನಿರ್ಧಾರಗಳನ್ನು ತೆಗೆದುಕೊಳ್ಳುವ

ಪ್ರಕ್ರಿಯೆಯಲ್ಲಿ ಜನಮನ್ನಣೆ ಎಷ್ಟು ಪ್ರಾಮುಖ್ಯವೋ ಅಷ್ಟೇ ಪ್ರಾಮುಖ್ಯತೆ ಈ ರೀತಿ ರೂಪಿಸಲ್ಪಟ್ಟ ನಿರ್ಧಾರಗಳನ್ನು ಪರಿಣಾಮವಾಗಿ ಅನುಷ್ಠಾನಗೊಳಿಸುವಂತಹ ಸಂದರ್ಭಗಳಲ್ಲೂ ಸಹ ಜನರ ಪಾಲುಗೊಳ್ಳುವಿಕೆ ಮತ್ತು ಬೆಂಬಲ ಅಗತ್ಯ. ಈ ಕಾರಣದಿಂದಲೆ ಪ್ರಜಾಪ್ರಭುತ್ವವೆನ್ನುವುದು ಇತರ ಸರ್ಕಾರ ವ್ಯವಸ್ಥೆಗಳಾದ ನಿರಂಕುಶ ಆಳ್ವಿಕೆ, ಮಿಲಿಟರಿ ಆಡಳಿತ ಇತ್ಯಾದಿಗಳಿಂದ ವಿಭಿನ್ನವಾಗಿದ್ದು ಜನಪ್ರಿಯ ಸರ್ಕಾರವಾಗಿ ವಿಶ್ವದ ಅನೇಕ ದೇಶಗಳಲ್ಲಿ ವ್ಯವಸ್ಥಿತಗೊಂಡಿದೆ. ಸ್ವಾತಂತ್ರೋತ್ತರ ಭಾರತಕ್ಕೆ ಸೂಕ್ತ ರಾಜಕೀಯ ವ್ಯವಸ್ತೆಯನ್ನು ನಿರ್ಧರಿಸುವ ಸಂದರ್ಭದಲ್ಲಿ ಸಂವಿಧಾನದ ನಿರ್ಮಾಪಕರು ಪ್ರಜಾಪ್ರಭುತ್ವವನ್ನು ಆರಿಸಿಕೊಂಡು ಜನರ ಭಾಗವಹಿಸುವಿಕೆ ಮತ್ತು ಪ್ರಾತಿನಿಧ್ಯತೆಗೆ ವಿಶೇಷ ಮನ್ನಣೆ ನೀಡಿದ್ದಾರೆ.

೬.೨. ರಾಜಕೀಯ ಭಾಗವಹಿಸುವಿಕೆಯ ವಿವಿಧ ದೃಷ್ಟಿಕೋನಗಳು

ಪ್ರಜಾಪ್ರಭುತ್ವದಲ್ಲಿ ರಾಜಕೀಯ ಭಾಗವಹಿಸುವಿಕೆಯೆಂಬುವುದು ರಾಜ್ಯದ ಪ್ರತಿಯೊಬ್ಬ ಸದಸ್ಯನಾದ ನಾಗರಿಕನ ಹಕ್ಕು ಮತ್ತು ಕರ್ತವ್ಯ ಎರಡೂ ಹೌದು. ಪ್ರತಿಯೊಬ್ಬ ಪೌರನು 'ಆಳುವವ' ಎಂಬ ಅರ್ಥದಲ್ಲಿ ರಾಜ್ಯದ ಪ್ರತಿಯೊಂದು ಆಗುಹೋಗುಗಳಲ್ಲಿ ಭಾಗಿಯಾಗುವ ಹಕ್ಕನ್ನು ಹೊಂದಿರುತ್ತಾನೆ. ಪ್ರಜೆಗಳ ಸಹಮತ ಅಥವಾ ಬೆಂಬಲವಿಲ್ಲದೆ ಪ್ರಾತಿನಿಧಿಕ ಸರಕಾರಗಳು ಯಾವುದೇ ನಿರ್ಧಾರ, ನೀತಿ ಅಥವಾ ಧೋರಣೆಗಳನ್ನು ರೂಪಿಸಲು ಸಾಧ್ಯವಿಲ್ಲ. ಒಂದು ವೇಳೆ ಈ ರೀತಿಯ ದುಸ್ಸಾಹಕ್ಕೆ ಅವುಗಳು ಇಳಿದರೆ ಜನ ಬೆಂಬಲ ಮತ್ತು ಅಧಿಕಾರಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಆದುದರಿಂದ ಜನರ ಸಕ್ರಿಯ ಪಾಲುಗೊಳ್ಳುವಿಕೆಯು ಪ್ರಜಾತಂತ್ರ ವ್ಯವಸ್ಥೆಯ ಯಶಸ್ವೀ ಆಚರಣೆಗೆ ಅನಿವಾರ್ಯವೆಂಬುವುದರಲ್ಲಿ ಯಾವುದೇ ಅನುಮಾನವಿಲ್ಲ. ರಾಜಕೀಯ ಪ್ರಕ್ರಿಯೆಗಳಲ್ಲಿ ಪ್ರಜೆಗಳ ಭಾಗವಹಿಸುವಿಕೆಯಿಂದಾಗಿ ರಾಜ್ಯ ಪ್ರತಿಯೊಂದು ಆಗುಹೊಗುಗಳಲ್ಲಿ ಪ್ರಜೆಗಳ ಧ್ವನಿಗೆ ಪ್ರಾಧಾನ್ಯತೆ ಸಿಗುವುದು ಮಾತ್ರವಲ್ಲದೆ, ಆಡಳಿತ ಯಾವ ದಿಸೆಯಲ್ಲಿ ಪಾಲ್ಗೊಳುವಿಕೆಯಿಂದಾಗಿ ಸರ್ಕಾರಕ್ಕೆ ಅಧಿಕಾರಕ್ಕೆ ಹೆಚ್ಚಿನ ಒಂದು ಬದ್ಧತೆ ಮತ್ತು ಜನಾನುಮತಿ ಲಭ್ಯವಾಗುತ್ತದೆ. ಇದರಿಂದಾಗಿ ಪ್ರಜಾಪ್ರಭುತ್ವದ ಆಚರಣೆ ಮತ್ತಷ್ಟು ಅರ್ಥಪೂರ್ಣವಾಗುತ್ತದೆ.

ಆಧುನಿಕ ಪ್ರಜಾಪ್ರಭುತ್ವಗಳೆಲ್ಲವೂ 'ಪ್ರಾತಿನಿಧಿಕ ಅಥವಾ ಪರೋಕ್ಷ ಪ್ರಜಾಪ್ರಭುತ್ವ ವ್ಯವಸ್ಥೆಗಳು. ಇಲ್ಲಿ ಮತದಾನರೆಂದರೆ ದೇಶದ ಸಮಸ್ತ ಪೌರರು ಆಗಿರುತ್ತಾರೆ. ಪರಮಾಧಿಕಾರದ ಸ್ಥಾನವೇ ಇಲ್ಲಿದೆ. ಒಂದು ಶಾಸನ ಸಭೆಗೆ ಚುನಾಯಿಸಲ್ಪಟ್ಟ ಅಭ್ಯರ್ಥಿಯು ಜನರ ಆಶೋತ್ತರಗಳಿಗೆ ಮತ್ತು ರಾಜ್ಯವು ಸ್ಪಂದಿಸಬಹುದಾದ ರೀತಿನೀತಿಗಳಿಗೆ ಅಧಿಕೃತ ರೂಪ ನೀಡುವ ನಾಯಕನ ಸ್ಥಾನವನ್ನು ಪಡೆಯುತ್ತಾನೆ. ರಾಜಕೀಯ ಪಕ್ಷಗಳು, ಜನರು ಮತ್ತು ಸರ್ಕಾರದ ನಡುವಣ ಸಂಪರ್ಕ ಸೇತುವಾಗಿ ಕೆಲಸ ಮಾಡುತ್ತದೆ.

ಪ್ರಜೆಗಳು ರಾಜಕೀಯ ಪ್ರಕ್ರಿಯೆಗಳಲ್ಲಿ ಭಾಗವಹಿಸುವುದು ಏಕರೂಪವಾಗಿಲ್ಲ ಈ ದೇಶದಲ್ಲಿ ರಾಜಕೀಯ ವ್ಯವಸ್ಥೆಯು ವಿಕೇಂದ್ರೀಕೃತಗೊಂಡಿದೆ. ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಸರ್ಕಾರಗಳು

ಅತೀ ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳಲು ಅವಕಾಶ ಮಾಡಿಕೊಡುವುದಲ್ಲದೆ ಪ್ರಜಾಪ್ರಭುತ್ವದ ಬೇರುಗಳು ವ್ಯಾಪಕವಾಗಿ ಗಟ್ಟಿಗೊಳ್ಳಲು ಸ್ಥಳೀಯ ಸ್ವ-ಸರ್ಕಾರ ವ್ಯವಸ್ಥೆಗಳು ಅನುಕೂಲಕಾರಿ ವಾತಾವರಣವನ್ನು ಸೃಷ್ಟಿಸಿವೆ.

ರಾಜಕೀಯ ಭಾಗವಹಿಸುವಿಕೆ ಎಂಬ ವಿಚಾರವು ರಾಜ್ಯಶಾಸ್ತ್ರದ ವಿದ್ವಾಂಸರುಗಳಿಗೆ ಹೊಸತೇನಲ್ಲ. ರಾಜಕೀಯ ಚಿಂತಕರುಗಳು ಜನರು ಹೇಗೆ ಮತ್ತು ಯಾವ ಕಾರಣಕ್ಕಾಗಿ ರಾಜಕೀಯದಲ್ಲಿ ಪಾಲುಗೊಳ್ಳುತ್ತಾರೆ ಎಂಬ ಪ್ರಶ್ನೆಗಳಿಗೆ ಉತ್ತರವನ್ನು ನಿರಂತರವಾಗಿ ಶೋಧಿಸಿತ್ತಿದ್ದರು. ರಾಜಕೀಯ ಭಾಗವಹಿಸುವಿಕೆಯ ಬಗ್ಗೆ ಹಲವು ಚಿಂತಕರ ಅಭಿಪ್ರಾಯಗಳು ಅಭಿವ್ಯಕ್ತಿಗೊಂಡಿವೆ.

ಆರಂಭದಲ್ಲಿ 'ಪೊಲಿಟಿಕಲ್ ಪಾರ್ಟಿಸಿಪೇಶನ್' ಅಥವಾ ರಾಜಕೀಯ ಭಾಗವಹಿಸುವಿಕೆ ಎಂಬ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳಬೇಕು. ಇಲ್ಲಿ ಎರಡು ಪದಗಳಿವೆ. ಪ್ಯಾರಿ ಎಂಬ ವಿದ್ವಾಂಸನ ಪ್ರಕಾರ 'ಪಾರ್ಟಿಸಿಪೇಶನ್' ಅಥವಾ ಭಾಗವಹಿಸುವಿಕೆ ಎಂಬ ಪದದ ಅರ್ಥವೇನೆಂದರೆ, ಅದೊಂದು ಪಾಲುಗೊಳ್ಳುವ ಪ್ರಕ್ರಿಯೆ ಅಥವಾ ಇತರರ ಜತೆಗೆ ಹಂಚಿಕೊಂಡು ಮಾಡುವ ಕಾರ್ಯ ಎಂಬುದಾಗಿ ತಿಳಿಸಿದ್ದಾನೆ. ಭಾಗವಹಿಸುವೆಕೆಯೆಂಬುದು ಒಂದು ಸಾಮಾನ್ಯ ಪದವಾಗಿದೆ. ಆದರೆ 'ರಾಜಕೀಯ' ಎಂಬ ಪದವನ್ನು 'ಭಾಗವಹಿಸುವಿಕೆ' ಪದದ ಮೊದಲು ಸೇರಿಸಿದಾಗ ತಕ್ಕಮಟ್ಟಿನ ಗೊಂದಲವೇರ್ಪಡುತ್ತದೆ. ಪ್ಯಾರಿಯ ಪ್ರಕಾರ, ರಾಜಕೀಯ ಮತ್ತು ಭಾಗವಹಿಸುವಿಕೆ ಎಂಬ ಎರಡು ಪದಗಳನ್ನು ಜತೆ ಸೇರಿಸಿದಾಗ, ಯಾವುದಾದರೂ ರಾಜಕೀಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು ಎಂಬ ಸ್ಪಷ್ಟ ಅರ್ಥ ಅದಕ್ಕೆ ಬರುತ್ತದೆ. ಪ್ಯಾರಿಯ ಮಾತುಗಳಲ್ಲೆ ಹೇಳುವುದಾದರೆ, "ಯಾವಾತನಿಗೆ ಸರಕಾರದ ನೀತಿ ನಿರೂಪಣೆಯನ್ನು ಪ್ರಭಾವಿಸುವ ತಾರ್ಕಿಕ ನಿರೀಕ್ಷೆ ಅಥವಾ ಕೊನೆಯ ಪಕ್ಷ ತನ್ನ ಧ್ವನಿ ಈ ನೀತಿ ನಿರೂಪಣೆಯ ಪ್ರಕ್ರಿಯೆಯಲ್ಲಿ ಕೇಳಿಸುವಂತೆ ಆಗಿಸುತ್ತಾನೋ ಅವನೇ ರಾಜಕೀಯ ಸಹಭಾಗಿ ಎನಿಸುತ್ತಾನೆ. ಈ ರಾಜಕೀಯ ಸಹಭಾಗಿಗಳು ಮತದಾನದಂತಹ ಸಾಧಾರಣ ರಾಜಕೀಯ ಕಾರ್ಯದಿಂದ ಆರಂಭಿಸಿ ಸರ್ಕಾರದಲ್ಲಿ ಸಂಪುಟ ಸರ್ಜೆಯ ಸಚಿವ ಸ್ಥಾನವನ್ನು ಅಲಂಕರಿಸುವಷ್ಟರ ತನಕದ ಕಾರ್ಯಗಳಲ್ಲಿ ಭಾಗವಹಿಸಬಹುದಾಗಿದೆ".

ರಾಜ್ಯಶಾಸ್ತ್ರದ ಪಿತಾಮಹನಾದ ಅರಿಸ್ಟಾಟಲ್‌ನು ತನ್ನ ಮೇರು ಕೃತಿಯಾದ 'ಪಾಲಿಟಿಕ್ಸ್' ನಲ್ಲಿ ಪಟ್ಟಣ ರಾಜ್ಯಗಳನ್ನು ಸ್ವಾವಲಂಬಿಯನ್ನಾಗಿ ಮಾಡುವ ಚರ್ಚೆಗಳು, ತೀರ್ಮಾನಗಳಲ್ಲಿ ಯಾರು ಭಾಗಿಗಳಾಗುತ್ತಾರೋ ಅವರಿಗೆ ಪೌರನೆಂಬುದಾಗಿ ಪರಿಗಣಿಸಿದ್ದಾನೆ. ಅಧುನಿಕ ರಾಜ್ಯಶಾಸ್ತ್ರದ ಸಾಹಿತ್ಯ ಹಾಗೂ ಬರವಣಿಗೆಯಲ್ಲಿ ಸಿಡ್ನಿ ವರ್ಬಾ, ಶ್ಲೋಜ್‌ಮಾನ್, ಬ್ರಾಡಿ ಮತ್ತು ನೀ ಮೊದಲಾದ ವಿದ್ವಾಂಸರುಗಳು ರಾಜಕೀಯ ಭಾಗವಹಿಸುವಿಕೆಗಳನ್ನು ಪೌರರ ಬೇಡಿಕೆ ಮತ್ತು ಅಗತ್ಯಗಳನ್ನು ನೀತಿ ನಿರೂಪಕರಿಗೆ ಸಂವಹಿಸುವ ಮತು ಅವರ ಅವಶ್ಯತೆಗಳನ್ನು ಪೂರೈಸುವಂತೆ ಒತ್ತಡವನ್ನು ಬೀರುವ ತಂತ್ರ ಅಥವಾ ಸಾಧನವೆಂಬುದಾಗಿ ಪರಿಗಣಿಸಿದ್ದಾರೆ.

ಸಾಹಿತ್ಯ ಹಾಗೂ ಬರವಣಿಗೆಗಳಲ್ಲಿ ಸಿಡ್ನಿ ವರ್ಬಾ, ಶ್ಲೋಜ್‌ಮಾನ್, ಬ್ರಾಡಿ ಮತ್ತು ನೀ ಮೊದಲಾದ ವಿದ್ವಾಂಸರು ರಾಜಕೀಯ ಭಾಗವಹಿಸುವಿಕೆಯನ್ನು ಪೌರರ ಬೇಡಿಕೆ ಮತ್ತು ಅಗತ್ಯಗಳನ್ನು ನೀತಿ ನಿರೂಪಕರಿಗೆ ಸಂವಹಿಸುವ ಮತ್ತು ಅವರ ಅವಶ್ಯಕತೆಗಳನ್ನು ಪೂರೈಸುವಂತೆ ಒತ್ತಡವನ್ನು ಬೀರುವ ತಂತ್ರ ಅಥವಾ ಸಾಧನಾವೆಂಬುದಾಗಿ ಪರಿಗಣಿಸಿದ್ದಾರೆ.

ರಾಜಕೀಯ ಭಾಗವಹಿಸುವಿಕೆಯ ಪರಿಕಲ್ಪನೆಗೆ ಸಂಬಂಧಿಸಿದಂತೆ ಅಮೇರಿಕಾದ ಪಂಡಿತನಾದ ಲೆಸ್ಟರ್ ಮಿಲ್ ಬ್ರಾತ್ ಪ್ರಕಾರ "ಒಬ್ಬ ರಾಜಕೀಯ ವ್ಯಕ್ತಿಯ ರಾಜಕೀಯ ಪಾಲ್ಗೊಳ್ಳುವಿಕೆಯ ಮೇಲೆ ಪ್ರಭಾವ ಬೀರಬಹುದಾದ ಅತ್ಯಂತ ಪ್ರಮುಖ ಅಂಶವೆಂದರೆ ಆತನ ಶಿಕ್ಷಣ ಮಟ್ಟವಾಗಿದೆ". ಹೆಚ್ಚಿಗೆ ಶಿಕ್ಷಿತರಲ್ಲಿ ದೇಶದ ರಾಜಕೀಯ ಸಂಗತಿಗಳ ಕುರಿತು ಆಳವಾದ ಪರಿ ಜ್ಞಾನವಿರುವುದು ಮಾತ್ರವಲ್ಲದೆ, ರಾಜಕೀಯ ಪ್ರಕ್ರಿಯೆಗಳಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಬೇಕಾದ ಆತ್ಮವಿಶ್ವಾಸವು ತನ್ನಲ್ಲಿರುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮಿಲ್ ಬ್ರಾತ್‌ನ ಪ್ರಕಾರ "ರಾಜಕೀಯ ಭಾಗವಹಿಸುವಿಕೆಯಲ್ಲಿ ಅಡಕವಾಗಿರುವ ಚಟುವಟಿಕೆಗಳನ್ನು ಮುಖ್ಯವಾಗಿ ಮೂರು ಗುಂಪುಗಳಾನ್ನಾಗಿ ವಿಂಗಡಿಸಬಹುದಾಗಿದೆ. ಮೊದಲನೆಯದಾಗಿ, ರಾಜಕೀಯ ಪಕ್ಷಗಳ ಮಾಮೂಲಿ ಕಾರ್ಯ ಚಟುವಟಿಕೆಗಳಾದ ರಾಜಕೀಯ ಹುದ್ದೆಗಳಿಗೆ ನಡೆಯುವ ಚುನಾವಣೆಗಳಲ್ಲಿ ಭಾಗವಹಿಸುವುದು, ಶಾಸಕಾಂಗ ಸಭೆಗಳಿಗೆ ನಡೆಯುವ ಚುನಾವಣೆಗಳಲ್ಲಿ ಪಾಲ್ಗೊಳ್ಳುವುದು, ಪಕ್ಷಕ್ಕಾಗಿ ನಿಧಿ ಸಂಗ್ರಹದಲ್ಲಿ ತೊಡಗುವುದು, ಪಕ್ಷದ ಸದಸ್ಯತ್ವ ಹೆಚ್ಚಿಸುವುದಕ್ಕಾಗಿ ಆಂದೋಳನಗಳಲ್ಲಿ ತೊಡಗುವುದು, ಎಲ್ಲೆಲೊ ಪಕ್ಷದ ಸಭೆಗಳನ್ನು ಸಂಘಟಿಸಿ ಸಾರ್ವಜನಿಕ ಅಭಿಪ್ರಾಯ ಪಕ್ಷಕ್ಕೆ ಹಿತಕಾರವಾಗಿ ಮೂಡಿಬರುವಂತೆ ಮಾಡುವುದು, ಇತ್ಯಾದಿಗಳಿಗೆ ಗ್ಲಾಡಿಟೋರಿಯಲ್(ಮಾಮೂಲಿ) ಕಾರ್ಯಾಚಟುವಟಿಕೆಗಳೆಂದು ಕರೆದಿದ್ದಾನೆ. ಅವನ ಪ್ರಕಾರ ಸ್ಥಿತ್ಯಂತರಗೊಳ್ಳುತ್ತಿರುವ ರಾಜಕೀಯ ಭಾಗವಹಿಸುವಿಕೆಯಲ್ಲಿ ಒಳಗೊಂಡಿರುವ ಪಕ್ಷಗಳ ಹಿತೈಷಿಗಳ ಮತ್ತು ಬೆಂಬಲಿಗರ ರಾಜಕೀಯ ಚಟುವಟಿಕೆಗಳಾದ ನೇತಾರುಗಳ ಭಾಷಣ ಕಾರ್ಯಕ್ರಮಗಳಿಗೆ ಹಾಜರಾಗುವುದು, ಉದಾರಾವಾಗಿ ಪಕ್ಷಕ್ಕೆ ದೇಣಿಗೆ ನೀಡುವುದು, ಪಕ್ಷದ ನಾಯಕರೊಂದಿಗೆ ಸಂಪರ್ಕವಿರಿಸಿಕೊಳ್ಳುವುದು, ಇತ್ಯಾದಿಗಳು. ಮೂರನೆಯ ರೂಪದ ಚಟುವಟಿಕೆಗಳಿಗೆ ಆತ ಪ್ರೇಕ್ಷಕ ರೂಪೀ ಚಟುವಟಿಕೆಗಳೆನ್ನುತ್ತಾನೆ. ಅವುಗಳಲ್ಲಿ ಮತದಾನ ಮಾಡುವುದು, ಇನ್ನೊಬ್ಬರ ಮತದಾನದ ಮೇಲೆ ಪ್ರಭಾವ ಬೀರುವುದು, ರಾಜಕೀಯ ಪ್ರಚೋದನೆಗಳಿಂದ ಪ್ರಭಾವಿತಗೊಳ್ಳುವುದು, ರಾಜಕೀಯ ಪಕ್ಷದ ಲಾಂಛನಗಳನ್ನು ಧರಿಸುವುದು, ಪಕ್ಷದ ಪ್ರಕಟಣಾ ಪತ್ರಗಳನ್ನು ಹಂಚುವುದು, ಇತ್ಯಾದಿಗಳು ಮುಖ್ಯವಾದವುಗಳು

ಮಿಲ್ ಬ್ರಾತ್ ಪ್ರಕಾರ ಅಮೇರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಕೇವಲ ಶೇಕಡಾ ೩ರಷ್ಟು ಪಾಲಿನ ಜನ ಮೇಲೆ ಉಲ್ಲೇಖಿಸಿದ ಮೊದಲನೆಯವರ್ಗದ ರಾಜಕೀಯ ಭಾಗವಹಿಸುವಿಕೆಯು ಚಟುವಟಿಕೆಗಳಲ್ಲೂ, ಶೇಕಡಾ ೭ ರಿಂದ ೯ರಷ್ಟು ಜನ ಎರಡನೆಯ ವರ್ಗದ ರಾಜಕೀಯ ಭಾಗವಹಿಸುವಿಕೆಯು ಚಟುವಟಿಕೆಗಳಲ್ಲೂ ತೊಡಗಿರುತ್ತಾರೆ. ಒಬ್ಬ ವ್ಯಕ್ತಿ ಕೇವಲ

ಒಂದೇ ರೀತಿಯ ರಾಜಕೀಯ ಭಾಗವಹಿಸುವಿಕೆಯು ಚಟುವಟಿಕೆಗಳಲ್ಲಿ ಮಾತ್ರ ತೊಡಗಿಸಿಕೊಳ್ಳಬೇಕೆಂಬ ಯಾವ ನಿರ್ಬಂಧವೂ ಇರುವುದಿಲ್ಲ. ಬದಲಾಗಿ ಏಕಕಾಲದಲ್ಲಿ ಎಲ್ಲ ರೀತಿಯ ರಾಜಕೀಯ ಭಾಗವಹಿಸುವಿಕೆಯು ಚಟುವಟಿಕೆಗಲ್ಲಿ ತೊಡಗಿಸಿಕೊಳ್ಳಬಹುದಾಗಿದೆ. ರಾಜಕೀಯ ಭಾಗವಹಿಸುವಿಕೆ ಪ್ರಕ್ರಿಯೆಯು ಬದಲಾಗುತ್ತಿರುತ್ತದೆ. ಅವನ ಪ್ರಕಾರ ಅಮೇರಿಕಾದ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ೧/೩ ಪಾಲಿನಷ್ಟು ಜನರಿಗೆ ರಾಜಕೀಯ ಚಟುವಟಿಕೆಗಳಲ್ಲಿ ಯಾವುದೆ ಆಸಕ್ತಿ ಇಲ್ಲ. ಮಿಲ್ ಬ್ರಾತ್ ಈ ವಿಶ್ಲೇಷಣೆಯು ರಾಜಕೀಯ ಭಾಗವಹಿಸುವಿಕೆಯ ಸ್ವರೂಪದ ಕುರಿತು ಬೆಳಕು ಚೆಲ್ಲುತ್ತದೆ.

ಅಲ್ಪಸಂಖ್ಯಾತರಲ್ಲಿ 'ಎರ್ಥನಿಸಿಟಿ' ಅಥವಾ 'ಜನಾಂಗೀಯ ಭಾವ'ವೆನ್ನುವುದು ರಾಜಕೀಯ ಭಾಗವಹಿಸುವಿಕೆಯಲ್ಲಿ ಪ್ರಭಾವ ಬೀರುತ್ತದೆಎನ್ನುವುದು ಟೆರ್ರಿಕ್ ರೋನಾಲ್ಡ್‌ರವರ ಅಭಿಪ್ರಾಯವಾಗಿರುತ್ತದೆ. ತಮ್ಮ ಸಮುದಾಯದ ವ್ಯಕ್ತಿಯೊಬ್ಬರು ರಾಜಕೀಯ ಪ್ರಾತಿನಿಧ್ಯತೆಗೆ ತೊಡಗಿಸಿಕೊಳ್ಳುತ್ತಾರೆಂದರೆ ಒಟ್ಟು ಆ ಸಮುದಾಯದ ರಾಜಕೀಯ ಮತದಾನದ ಪ್ರಕ್ರಿಯೆಗಳು ಹೆಚ್ಚುತ್ತವೆ. ಉತ್ತಮ ಫಲಿತಾಂಶಗಳು ದಲಿತರಾದವರಲ್ಲಿ ಒಬ್ಬರ ಪ್ರಾತಿನಿಧ್ಯತೆ ತರಬಹುದು ಎಂಬ ಕಲ್ಪನೆಗಳು ಜನರನ್ನು ಪಾಲ್ಗೊಳ್ಳುವಂತೆ ಪ್ರೇರೇಪಿಸುತ್ತದೆ, ಜೊತೆಗೆ ತಮ್ಮ ಸಮುದಾಯದಲ್ಲಿ ಚುನಾವಣಾ ಕಣಕ್ಕೆ ಸಿದ್ಧರಾಗದೆ ಇದ್ದಲ್ಲಿ ಅಥವಾ ನಾಯಕತ್ವವಿಲ್ಲವೆಂದಾದರೆ ರಾಜಕೀಯ ವ್ಯವಸ್ಥೆಗಳ ಲಾಭ ಪಡೆಯಲಾಗುವುದಿಲ್ಲವೆಂಬ ಆಲೋಚನೆಗಳು ಸಹ ಸಂಭಾವ್ಯ ಸಹಭಾಗಿಗಳಲ್ಲಿ ರಾಜಕೀಯ ಭಾಗವಹಿಸುವಿಕೆಯ ಪ್ರಮಾಣ ಹೆಚಿಸಲು ಕಾರಣವಾಗುತ್ತದೆ. ಒಟ್ಟು ರಾಜಕೀಯ ವ್ಯವಸ್ಥೆಯಿಂದ ಕೇವಲ ಮತ ಚಲಾಯಿಸುವುದರಿಂದ ಹೆಚ್ಚಿನ ಬದಲಾವಣೆ ತರಲು ಸಾಧ್ಯವಿಲ್ಲವೆಂಬ ನಂಬಿಕೆಯು ಇತರ ಸಮುದಾಯದ ಜನರಲ್ಲಿ ಇರುವಂತೆಯೆ ದಲಿತರಲ್ಲಿಯೂ ಇದೆ ಎನ್ನುವ ವಿಷಯವನ್ನು ಗಮನಿಸಬೇಕು.

ಹೀಗೆ ಪ್ರಜಾಪ್ರಭುತ್ವದಲ್ಲಿ ಜನರ ಭಾಗವಹಿಸುವಿಕೆ ಎನ್ನುವುದು ಅತ್ಯಂತ ಪ್ರಮುಖವಾದ ವಿಷಯವಾಗಿದೆ. ಇದಕ್ಕೆ ಪುರುಷ–ಮಹಿಳೆ, ಶ್ರೀಮಂತ– ಬಡವ, ಬಹುಸಂಖ್ಯಾತ–ಅಲ್ಪಸಂಖ್ಯಾತ ಇತ್ಯಾದಿ ಬೇಧಗಳಿಲ್ಲ. ದೇಶದ ಸಂವಿಧಾನಿಕ ನಿಯಮಗಳನ್ನು ವಾಸ್ತವಿಕವಾಗಿ ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಎಲ್ಲ ಸಮುದಾಯಗಳ ಪ್ರಾತಿನಿಧ್ಯತೆಯು ಅಗತ್ಯ. ನಾಯಕತ್ವದ ಆಯ್ಕೆ ಮುಂತಾದವುಗಳು ಪ್ರಜಾಪ್ರಭುತ್ವದ ಜೀವನಾಡಿಯಾಗಿ ಕೆಲಸ ಮಾಡುತ್ತದೆ ಸಾರ್ವಜನಿಕವಾಗಿ ತೊಡಗಿಸಿಕೊಳ್ಳುವುದು ಮನುಷ್ಯನ ಮೂಲ ಸ್ವಭಾವವೆಂದು ಅರಿಸ್ಟಾಟಲ್ ಅಭಿವ್ಯಕ್ತಿಸಿದ್ದಾರೆ. ಈ ಹಿನ್ನೆಲೆಗಳಿಂದ ಪುಷ್ಟೀಕರಣವನ್ನು ಪಡೆಯುತ್ತದೆ ಯಾದರೂ ಒಂದು ದೇಶದೊಳಗೆ ಬಹುಸಂಖ್ಯಾತರ ಪ್ರಭಾವ, ಪಾಲ್ಗೋಳ್ಳುವಿಕೆ, ನಿಯಂತ್ರಣ ಮುಂತಾದವು ಗಳ ನಡುವೆ ತಳಸಮುದಾಯದವರು ಎನಿಸಿಕೊಂಡ ಜನರು ಸಕ್ರಿಯವಾಗಿ ಪಾಲ್ಗೊಳ್ಳಲು ಎಡರು ತೊಡರುಗಳಿವೆಯೇ ಎನ್ನುವುದನ್ನು ಪರಿಶೀಲಿಸಬೇಕಾಗುತ್ತದೆ.[೧]

೬.೩. ಸಂವಿಧಾನ ಮತ್ತು ದಲಿತರ ಸ್ಥಾನಮಾನಗಳು

೧೯೫೦ರಿಂದ ಸಂವಿಧಾನ ಜಾರಿಗೆ ಬಂದ ಮೇಲೆ ಸಂವಿಧಾನಿಕ ಅವಕಾಶಗಳು ಲಭ್ಯವಾದವು. ೧೯೫೭ರಲ್ಲಿ ಕೇಂದ್ರ ಸರಕಾರವು ಮಾಡಿರುವ ಪಟ್ಟಿಯಲ್ಲಿ ಮಾಡಿರುವ ಅಧಿಕೃತವಾದ ಜಾತಿಗಳ

ಪಟ್ಟಿಯಲ್ಲಿ ೧೧೦೦ ಕೆಳ ಜಾತಿಗಳನ್ನು ಗುರುತಿಸಿ ಅವರಿಗೆ ಪರಿಶಿಷ್ಟ ಜಾತಿಗಳು ಎಂದು ಪರಿಗಣಿಸಲಾಯಿತು. ಭಾರತ ಸಂವಿಧಾನದಲ್ಲಿ ೩೩೦, ೩೩೨ ಮತ್ತು ೩೩೪ ಪರಿಶಿಷ್ಟರ ರಾಜಕೀಯ ಪ್ರಾತಿನಿಧ್ಯತೆಯನ್ನು ಪ್ರತಿಪಾದಿಸುತ್ತವೆ. ಸಂವಿಧಾನದ ೩೩೦ನೇ ವಿಧಿಯ ಪ್ರಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಲೋಕಸಭೆಯಲ್ಲಿ ಸ್ಥಾನಗಳನ್ನು ಮೀಸಲಿಡುವುದು ನ್ಯಾಯ ಮೂರ್ತಿ ಕುಲದೀಪ್ ಸಿಂಗ್ ಕ್ಷೇತ್ರ ಪುನರ್ ವಿಂಗಡಣಾ ಆಯೋಗದ ವರದಿಯಂತೆ ೩೩೦ ನೇ ವಿಧಿಯ ಪ್ರಕಾರ ಲೋಕಸಭೆಯಲ್ಲಿ ೫೪೩ಸ್ಥಾನಗಳ ಪೈಕಿ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ೧೩೧ಸ್ಥಾನಗಳನ್ನು ಅದರಲ್ಲಿ ಪರಿಶಿಷ್ಟ ಜಾತಿಗೆ ೮೪ ಸ್ಥಾನಗಳು ಹಾಗೂ ಪರಿಶಿಷ್ಟ ಪಂಗಡಕ್ಕೆ ೪೭ ಸ್ಥಾನಗಳನ್ನು ಮೀಸಲಿಡಲಾಗಿದೆ. ೩೩೨ನೇ ವಿಧಿಯು ಪರಿಶಿಷ್ಟ ಜಾತಿ/ ಪಂಗಡಗಳಿಗೆ ರಾಜ್ಯ ವಿಧಾನಸಭೆಯಲ್ಲಿ ಸ್ಥಾನಗಳನ್ನು ಮೀಸಲಿಡುವುದು, ಈ ವಿಧಿಯ ಅನ್ವಯ ಎಲ್ಲಾ ರಾಜ್ಯ ಒಟ್ಟಾರೆ ವಿಧಾನಸಭೆ ಸ್ಥಾನಗಳ ಸಂಖ್ಯೆ ४೦೩೩ ಅದರಲ್ಲಿ ಪರಿಶಿಷ್ಟಜಾತಿಗೆ ೬೦೭ ಪರಿಶಿಷ್ಟ ಪಂಗಡಕ್ಕೆ ೫೫೪ ಸ್ಥಾನಗಳನ್ನು ನೀಡಲಾಗಿ ಒಟ್ಟಾರೆಯಾಗಿ ೧೧೬೧ ಸ್ಥಾನಗಳನ್ನು ಎಸ್.ಸಿ/ಎಸ್.ಟಿಗೆ ಮೀಸಲಿಡಲಾಗಿದೆ.

ಕರ್ನಾಟಕಕ್ಕೆ ಸಂಬಂಧಿಸಿದಂತೆ ಲೋಕಸಭೆಯ ೨೮ ಸ್ಥಾನಗಳ ಪೈಕಿ ೫ ಪರಿಶಿಷ್ಟ ಜಾತಿಗೆ ೨ ಪರಿಶಿಷ್ಟ ಪಂಗಡಕ್ಕೆ ಮೀಸಲಿಡಲಾಗಿದೆ. ವಿಧಾನ ಸಭೆಯ ೨೨೪ ಸ್ಥಾನಗಳ ಪೈಕಿ ೩೬ ಪರಿಶಿಷ್ಟ ಜಾತಿಗೆ ಹಾಗೂ ೧೫ ಪರಿಶಿಷ್ಟ ಪಂಗಡಕ್ಕೆ ನಿಗಧಿ ಮಾಡಲಾಗಿದೆ ಒಟ್ಟು ೫೧ ಸ್ಥಾನಗಳನ್ನು ಎಸ್.ಸಿ/ಎಸ್.ಟಿಯವರಿಗೆ ಮೀಸಲಿಡಲಾಗಿದೆ. ೩೩೪ನೇ ವಿಧಿಯು ಮೀಸಲು ಕ್ಷೇತ್ರಗಳ ಕಾಲಮಿತಿಯನ್ನು ವಿಸ್ತರಿಸುವ ಅವಕಾಶವನ್ನು ನೀಡುತ್ತದೆ. (ಪಾರ್ವತಮ್ಮ ಸಿ. ೨೦೦೧) ೧೯೬೦ರಲ್ಲಿ ಆಗ ಕಾಂಗ್ರೇಸ್ ಪಕ್ಷದ ಸಂಸತ್ ಸದಸ್ಯರಾದ ಎಳಯ ಪೆರುಮಾಳ್ ಅವರ ನೇತೃತ್ವದಲ್ಲಿ ರಾಜಕೀಯವ ಮೀಸಲಾತಿಯ ಸಾಧಕ ಬಾಧಕಗಳ ಬಗ್ಗೆ ಅಧ್ಯಯನ ಮಾಡಲು ಸಮಿತಿಯನ್ನು ನೇಮಿಸಲಾಯಿತು. ಇದು ದೇಶಾದ್ಯಂತ ಸಂಚರಿಸಿ ಮೀಸಲಾತಿ ಪರಿಣಾಮವನ್ನು ದಾಖಲು ಮಾಡಿತು. ಪರಿಸ್ಥಿತಿಯು ಮೀಸಲಾತಿಯನ್ನು ವಿಸ್ತರಿಸಬೇಕಾದ ಅಗತ್ಯತೆಯನ್ನು ಒತ್ತಿ ಹೇಳಿತು. ಪಾರ್ಲಿಮೆಂಟ್ ಸಮಿತಿಯೊಂದು ದೇಶದಲ್ಲಿ ಸಂಚಾರ ಮಾಡಿ ಮೀಸಲಾತಿ ಮುಂದುವರಿಕೆಗೆ ಶಿಫಾರಸ್ಸು ಮಾಡುತ್ತದೆ. ಅದರಂತೆ ಪರಿಶಿಷ್ಟರ ರಾಜಕೀಯ ಸಂರಕ್ಷಣೆಯನ್ನು ಸಂವಿಧಾನದ ೧೬(೪) ೩೩೫ ಹಾಗೂ ೩೩೮ ಅನುಚ್ಛೇದಗಳಲ್ಲಿ ಕಲ್ಪಿಸಿದೆ.

೧೯೫೦ರ ಬಳಿಕ ಸ್ಥಳೀಯ ಸಂಸ್ಥೆಗಳು ಮತ್ತು ಅಭಿವೃದ್ಧಿ ಪ್ರಕ್ರಿಯೆಗಳ ಅಂತರ್ ಕ್ರಿಯೆಯ ಮೂಲಕ ಜನತಾಂತ್ರಿಕ ಪ್ರಕ್ರಿಯೆಗೆ ಹೆಚ್ಚು ಒತ್ತು ನೀಡುವುದರೊಂದಿಗೆ ಸ್ಥಳೀಯ ಪ್ರಾದೇಶಿಕ ರಾಜಕೀಯ ಜಾಲೀಕರಣವು ಹೊಸ ರೂಪವನ್ನು ಪಡೆಯಿತು. ಈ ಪ್ರಕ್ರಿಯೆಗೆ ಕಾರಣವಾದ ಹಲವಾರು ಸಂಗತಿಗಳ ಕುರಿತಂತೆ ಅನೇಕ ವಿದ್ವಾಂಸರು ತಮ್ಮ ಅಧ್ಯಯನ ಪ್ರಬಂಧಗಳನ್ನು ಮಂಡಿಸಿರುತ್ತಾರೆ. ರಾಜ್ಯಗಳ ಚಟುವಟಿಕೆಗಳ ವ್ಯಾಪ್ತಿಯ ವಿಸ್ತಾರದಿಂದಾಗಿ ಗ್ರಾಮಗಳ ಕಾರ್ಯ ಘಟಕಗಳಲ್ಲೂ 'ಏರಿಕೆಯ ಆವರಣ' ನಿರ್ಮಾಣವಾದಂತಾಗಿದೆ. ಎಂದು ಒರಿಸ್ಸಾದಲ್ಲಿ ನಡೆಸಿದ

ಅಧ್ಯಯನಗಳ ಕುರಿತು ಬೆಯಿಲಿಯವರು ತಿಳಿಸುತ್ತಾರೆ.(ಬೆಯಲಿ ೧೯೬೪). ಪೋಷಕ ಪ್ರವೃತ್ತಿಯಾಧಾರಿತ ಸ್ಪರ್ಧೆಗಳಿಂದಾಗಿ ಬಣ ವಿಭಜನೆಯ ಒಂದು ಸಮಗ್ರತೆಯ ಅಂಶವಾಗಲು ಕಾರಣವಾಗಬಹುದೆಂಬುದನ್ನು ಉತ್ತರ ಪ್ರದೇಶದಲ್ಲಿ ನಡೆಸಿದ ಅಧ್ಯಯನ ಕುರಿತು ಬ್ರಾಸ್‌ರವರು ವಿವರಿಸುತ್ತಾರೆ.

ವಿಕೇಂದ್ರೀಕರಣದ ಸಂದರ್ಭದಲ್ಲಿ ಸ್ಥಳೀಯ ಸ್ವಯಂ ಆಡಳಿತ ಜೊತೆಗಿನ ವಿವಿಧ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಸ್ಥಳೀಯ ರಾಜಕಾರಣವೆಂಬ ಪರಿಕಲ್ಪನೆಯು ಬಳಸಲ್ಪಡುತ್ತದೆ. ಇದರ ರಾಜಕೀಯ ಮಾನಸಿಕ ಸಾಮಾಜಿಕ ಮತ್ತು ಆರ್ಥಿಕ ಗುಣಲಕ್ಷಣಗಳು ಮತ್ತವುಗಳ ಮಿತಿ ಇಲ್ಲವೆ ನಿರ್ಧಾರಕಗಳಾವುವು ಎಂಬ ಅಂಶಗಳನ್ನು ಶೋಧೀಸುವ ಅಗತ್ಯದ ಕುರಿತು ಚಿಂತಕರು ಅಭಿಪ್ರಾಯಗಳು ಮುಂದಿಡುತ್ತಾರೆ. ಅಂದರೆ ಇವನ್ನು ಸ್ಥಳೀಯತೆಗೆ ಪರ್ಯಾಯವಾಗಿ ಪ್ರಾದೇಶಿಕ ಮತ್ತು ಕೇಂದ್ರ ಘಟಕಕ್ಕೆ ಪೂರಕವಾದ ಅಥವಾ ವಿರುದ್ಧವಾದ ರಾಜಕಾರಣವೆಂದೆ ಪರಿಗಣಿಸಬೇಕೆ ಎಂಬುದರ ಕುರಿತಂತೆ ವಾದಗಳಿವೆ. (ಮಾಥುರ್ ೧೯೮೧). ಈ ಸಂದರ್ಭದಲ್ಲಿ ಸ್ಥಳೀಯ ರಾಜಕಾರಣವೆಂದರೆ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿ ರಾಜ್ಯ ಇಲ್ಲವೆ ಕೇಂದ್ರ ಘಟಕಗಳೊಳಗಿನ ರಾಜಕೀಯ ಪ್ರಕ್ರಿಯೆಯ ವಿಸ್ತಾರತೆ ಎಂದು ಪರಿಗಣಿಸಲಾಗಿದೆ. ಸ್ಥಳೀಯ ಮಟ್ಟದಲ್ಲಿನ ವಿವಿಧ ಸಾಮಾಜಿಕ ಗುಂಪುಗಳ ನೆಲೆಗಳು ಮತ್ತವುಗಳ ಸಾಮಾಜಿಕ ಆರ್ಥಿಕ ಏರುಪೇರುಗಳಿಗೆ ಸಂಬಂಧಿಸಿದ ಸಂಘರ್ಷಗಳ ಸ್ವರೂಪ ಹಾಗೂ ರೂಪಗೊಳ್ಳುತ್ತಿರುವ ನಾಯಕತ್ವಕ್ಕೆ ಸಂಬಂಧಿಸಿದ ಅಂಶಗಳು ಮತ್ತು ಅಭಿವೃದ್ಧಿ ಕಾರ್ಯಗಳ ಸುತ್ತ ಸ್ಥಳೀಯ ರಾಜಕಾರಣವು ಗುರುತಿಸಲ್ಪಡುತ್ತದೆ.

೧೯೫೦ರ ದಶಕ ಭಾರತ ಆಧುನಿಕತೆಯತ್ತ ದಾಪುಗಾಲು ಇಡಲು ಆರಂಭಿಸಿದ ದಶಕ. ಪಂಚವಾರ್ಷಿಕ ಯೋಜನೆಗಳ ಮೂಲಕ ಸಾಂಪ್ರದಾಯಿಕ, ಆರ್ಥಿಕ ಹಾಗೂ ಸಾಮಾಜಿಕ ವ್ಯವಸ್ಥೆಯನ್ನು ಬದಲಾಯಿಸಲು ಪ್ರಯತ್ನಗಳು ಬರದಿಂದ ಆರಂಭವಾಗಿದ್ದವು. ತಳಮಟ್ಟದ ಬದುಕಿನ ಸುಧಾರಣೆಗಾಗಿ ಸಮುದಾಯ ಅಭಿವೃದ್ಧಿ ಯೋಜನೆಗಳು ಮತ್ತು ರಾಷ್ಟ್ರೀಯ ವಿಸ್ತರಣಾ ಸೇವಾ ಯೋಜನೆಗಳು ಒಟ್ಟು ಅಭಿವೃದ್ಧಿ ಯೋಜನೆಗಳ ಭಾಗವಾಗಿದ್ದವು. ಈ ಯೋಜನೆಗಳ ಮುಖ್ಯ ಉದ್ದೇಶ ಗ್ರಾಮೀಣ ಜನರನ್ನು ಸರ್ಕಾರದ ಅಭಿವೃದ್ಧಿ ಯೋಜನೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವಂತೆ ಮಾಡುವುದ್ದಾಗಿತ್ತು. ಆದರೆ ಗ್ರಾಮೀಣ ಜನರ ಆಸಕ್ತಿಯನ್ನು ಕೆರಳಿಸುವಲ್ಲಿ ಈ ಯೋಜನೆಗಳು ವಿಫಲವಾಗಿದ್ದವು. ವಿಫಲತೆಗೆ ಕಾರಣಗಳು ಏನೆಂಬುದನ್ನು ತಿಳಿಯಲು ೧೯೫೭ರಲ್ಲಿ ಬಲವಂತರಾಯ್ ಮೆಹತಾ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಲಾಯಿತು. ಅಭಿವೃದ್ಧಿ ಯೋಜನೆಗಳಲ್ಲಿ ಗ್ರಾಮೀಣ ಜನರು ಸಕ್ರಿಯವಾಗಿ ಪಾಲ್ಗೊಳ್ಳುವಲ್ಲಿ ತಳಮಟ್ಟದ ರಾಜಕೀಯ ಮತ್ತು ಆಡಳಿತ ಪರಿಸರವೇ ದೊಡ್ಡ ತೊಡಕಾಗಿವೆ ಎಂದು ಈ ಕಮಿಟಿ ತೀರ್ಮಾನಿಸಿತು. ಈ ದೋಷವನ್ನು ನಿವಾರಿಸಲು ಚುನಾವಣೆಯ ಮೂಲಕ ಸ್ಥಳೀಯ ಸಂಸ್ಥೆಗಳನ್ನು ಸಂಘಟಿಸಬೇಕೆಂದು ಕಮಿಟಿ ಸಲಹೆ ನೀಡಿತು. ಜೊತೆಗೆ ಗ್ರಾಮೀಣ ಅಭಿವೃದ್ಧಿಗಾಗಿ ಹಮ್ಮಿಕೊಳ್ಳಲು ಕಾರ್ಯಕ್ರಮಗಳು ಜನರ ಆಶೋತ್ತರಗಳಿಗೆ ಅನುಗುಣವಾಗಿದೆಯೇ ಎಂದು ನಿರ್ಣಯಿಸುವ ಜವಾಬ್ದಾರಿಯನ್ನು ಚುನಾಯಿತ

ಪ್ರತಿನಿಧಿಗಳು ಹೋರಬೇಕೆಂದು ಕೂಡ ಈ ಕಮಿಟಿ ಸೂಚಿಸಿತು. ಈ ರೀತಿಯಾಗಿ ಅಭಿವೃದ್ಧಿ ಯೋಜನೆಗಳ ನಿರ್ಧಾರದಲ್ಲಿ ಜನರ ಪಾಲ್ಗೊಳ್ಳುವಿಕೆ ಮತ್ತು ಸ್ಥಳೀಯ ಸಂಸ್ಥೆಗಳು ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಸ್ವತಂತ್ರವಾಗಬೇಕೆಂಬ ಎರಡು ತೀರ್ಮಾನಗಳನ್ನು ಮೆಹ್ತಾ ಕಮಿಟಿ. ಈ ಉದ್ದೇಶ ಈಡೇರಿಕೆಗಾಗಿ ಕಮಿಟಿ ಮೂರು ಹಂತಗಳ ಪಂಚಾಯತ ರಾಜ್ ವ್ಯವಸ್ಥೆಯನ್ನು ಸೂಚಿಸಿತು. ತಳಮಟ್ಟದಲ್ಲಿ ಪಂಚಾಯತ್‌ಗಳು ತಾಲೂಕು ಮಟ್ಟದಲ್ಲಿ ಪಂಚಾಯತ್ ಸಮಿತಿಗಳು ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪರಿಷತ್ತುಗಳನ್ನು ಜಾರಿಗೆ ತರಲು ಸಮಿತಿ ಸಲಹೆ ನೀಡಿತು. ಕಮಿಟಿಯ ಈ ತೀರ್ಮಾನಗಳನ್ನು ಕೆಲವು ರಾಜ್ಯಗಳು ಯಥಾ ರೀತಿಯಲ್ಲಿ ಮತ್ತು ಕೆಲವು ರಾಜ್ಯಗಳು ಪರಿವರ್ತಿತ ರೀತಿಯಲ್ಲಿ ಜಾರಿಗೆ ತಂದವು.

ಹೀಗೆ ಸ್ವಾತಂತ್ರ್ಯ ನಂತರ ರಾಜಕೀಯದಲ್ಲಿ ಕಾಣುವುದು ದಲಿತರು ಹಾಗೂ ಸ್ವತಂತ್ರ ಪೂರ್ವದ ರಾಜಕಾರಣದ ದಲಿತರ ಪ್ರತಿನಿಧೀಕರಣದ ಪಾತ್ರವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಹಳೆಯ ಕಾಲಕ್ಕೂ ಆಧುನಿಕ ಕಾಲಕ್ಕೂ ನಾಗರೀಕತೆ ಬದಲಾಗಿದೆ. ಆದರೆ ಶ್ರೇಷ್ಠ ಕನಿಷ್ಠಗಳು ಮಾತ್ರ 'ಒಂದೇ ಸಮುದ್ರದಲ್ಲಿ ಹಲವಾರು ಹಡುಗುಗಳು ಪ್ರಯಾಣಿಸಿದಂತೆ' ಎಂದರೆ ತಪ್ಪಾಗಲಾರದು. ಯಾಕೆಂದರೆ ಸ್ವತಂತ್ರ ನಂತರದ ದಲಿತರ ರಾಜಕೀಯ ಪ್ರಜ್ಞೆ ಮತ್ತು ರಾಜಕೀಯ ಸ್ವತಂತ್ರ ಅನಕ್ಷರಸ್ತರಿಗೆ ಕೊಡುತ್ತಿರುವ ಗುಲಾಮಗಿರಿಯ ಪ್ರಾತಿನಿಧ್ಯವಾಗಿದೆ. ರಾಜಕೀಯ ಪ್ರಾತಿನಿಧ್ಯ ಎಂದರೆ ಚುನಾವಣೆಗಳು ಹಣದ ಹೊಳೆ, ಜಾತಿ, ಭೂಮಾಲೀಕತ್ವ, ಬಲಾಢ್ಯರ ನಾಯಕತ್ವ, ಆಳುವರ್ಗ ಇವುಗಳಿಂದ ಕೇಂದ್ರೀಕರಿಸಿಕೊಂಡಿರುವ ಪ್ರಾತಿನಿಧ್ಯವೇ ದಲಿತರ ಪ್ರತಿನಿಧೀಕರಣದ ಸ್ವತಂತ್ರ ಅಂದುಕೊಳ್ಳಬಹುದಾಗಿದೆ.

ಹಾಗೆಯೇ ದಲಿತರು ಗ್ರಾಮೀಣ ಪ್ರದೇಶದಲ್ಲಿ ಮೀಸಲಾತಿಯಿಂದ ಕೂಡಿದ ಪ್ರತಿನಿಧೀಕರಣದ ಆಯ್ಕೆಯಾಗಬೇಕಾದರೆ ಕೆಲವು ಮಾನದಂಡಗಳು ನಿಗದಿಪಡಿಸಿದ್ದಾರೆ. ಅವು ಯಾವುವು ಎಂದರೆ ೧. ಉನ್ನತ ಶಿಕ್ಷಣ ಮಾಡಬಾರದು, ವೈಚಾರಿಕವಾದ ಪ್ರಜ್ಞೆಯಿಂದ ಕೂಡಿರಬಾರದು, ಸ್ವಾಭಿಮಾನವನ್ನು ಬದಿಗಿಟ್ಟು ಗುಲಾಮತನವನ್ನು ಒಪ್ಪಿಕೊಂಡಂತಿರಬೇಕು. ಹಸಿವಿನಿಂದ ಕೂಡಿದ ಬಡವನಾಗಿರಬೇಕು, ಕಾನೂನಾತ್ಮಕವಾಗಿ ಶೋಷಕರ ಪರವಾಗಿ ಧ್ವನಿ ಎತ್ತುವ ಹಾಗು ಪ್ರಶ್ನಿಸುವಂತಿರಬಾರದು. ಸಂವಿಧಾನಾತ್ಮಕ ತಿಳುವಳಿಕೆ ಇರಬಾರದು, ಪ್ರಾತಿನಿಧಿಕರಣದಲ್ಲಿ ರಾಜಕೀಯ ಸ್ವಾತಂತ್ರದ ಸ್ವಾಯುಕ್ತತೆ ಹೊಂದಿರಬಾರದು, ಆಜ್ಞೆಯಂತೆ ಸೇವಕನಾಗಿರುವುದೇ ಪಂಚಾಯಿತಿ ಆಯ್ಕೆಯಾಗಿ ಸದಸ್ಯರ ಕೆಲಸವಹಿಸಿಕೊಂಡಿದ್ದಾರೆ.

ಈ ರೀತಿಯಾಗಿ ಮೀಸಲಾತಿ ಪ್ರತಿನಿಧಿಕರಣದಿಂದ ದಲಿತರು ಯಾವ ರೀತಿಯಲ್ಲಿ ರಾಜಕೀಯ ಸ್ವಾತಂತ್ರ ಪಡೆಯಲು ಸಾಧ್ಯವಾಗುತ್ತದೆ. ಹೆಸರಿಗೆ ಮಾತ್ರ ಸಂವಿಧಾನಾತ್ಮಕ ರಾಜಕೀಯ ಹಕ್ಕನ್ನು ಗ್ರಾಮೀಣ ಅಂಚಿನ ಸಮುದಾಯಗಳಿಗೆ ನೀಡುವುದರ ಸಲುವಾಗಿ ೧೯೯೩ರ ಅಧಿನಿಯಮದ ಅಡಿಯಲ್ಲಿ ೭೩ ತಿದ್ದುಪಡಿಯಲ್ಲಿ ಸಾಮಾಜಿಕ ಸಮಾನತೆ, ಆರ್ಥಿಕ ಸಬಲೀಕರಣ, ಸಮುದಾಯಗಳಿಗೆ

ರಾಜಕೀಯ ಸ್ವಾತಂತ್ರ ನೀಡಿದ್ದೇವೆ ಎಂಬುದು ಶಾಸನೀಯವಾದುದಾಗಿದೆ. ಆದರೆ ನೈಜತೆಯಲ್ಲಿ ನಾಯಕತ್ವದ ಆಜ್ಞೆಗಳಿಂದ ಕೆಳಸಮುದಾಯ ಗಳನ್ನು ಆಳುವ ವರ್ಗಗಳಂತೆ ರಾಜಕೀಯ ಸ್ವಾತಂತ್ರ ಪಡೆಯುತ್ತಿದ್ದಾರೆ ಎಂಬ ಪ್ರಚಾರದಲ್ಲಿರಿಸಿದ್ದಾರೆ. ಹೀಗೆ ಕರ್ನಾಟಕದ ಸಂದರ್ಭದಲ್ಲಿ ಹಾಗೂ ಭಾರತದ ಸಂದರ್ಭದಲ್ಲಿಯೂ ತಳಸಮುದಾಯಗಳು ಆಡಳಿತವನ್ನು ನಡೆಸಲು ಮೀಸಲಾತಿ ನೆಲೆಯಲ್ಲಿ ಅವಕಾಶ ನೀಡಿದ್ದೇವೆ ಎಂದು ಹೇಳುತ್ತಿದ್ದಾರೆ. ಎಲ್ಲಾ ಪಕ್ಷಗಳು ದಲಿತರಿಗೆ, ನಮ್ಮ ಪಕ್ಷ ಪ್ರಾತಿನಿಧ್ಯ ನೀಡಿದೆ. ಮತ್ತೊಂದು ನಮ್ಮ ಪಕ್ಷ ಪ್ರಾತಿನಿಧ್ಯ ನೀಡಿದೆ. ಎಂಬಂತೆ ಸಮಾಜದ ಮುಖ್ಯವಾಹಿನಿಗೆ ಪ್ರಚಾರ ನೀಡುತ್ತಿದ್ದಾರೆ. ಇವೆಲ್ಲಾ ನೋಡಿದರೂ ಕಣ್ಣಿಗೆ ಕಾಣುವಂತಿವೆ. ಆದರೆ ಆಡಳಿತದ ಅಧಿಕರ ಮಾತ್ರ ವಿಕೇಂದ್ರೀಕರಣದಿಂದ ಕೂಡಿಲ್ಲ. ಪಕ್ಷದ ನಾಯಕತ್ವಗಳಲ್ಲಿ ಕೇಂದ್ರೀಕೃತವಾಗಿದೆ.

ಈ ಕೇಂದ್ರೀಕೃತ ವಿಕೇಂದ್ರೀಕರಣದಲ್ಲಿ ದಲಿತರ ಭಾಗವಹಿಸುವಿಕೆಯು ಎಷ್ಟು ಮಾತ್ರ ನೈಜ ಅಧಿಕಾರವೆಂದು ಗುರ್ತಿಸಲಾಗುತ್ತಿದೆ. ಇದಕ್ಕೆಲ್ಲಾ ಅನಕ್ಷರು ಸಾಕ್ಷಿಯಾಗಿದ್ದಾರೆ. ಹಾಗೆಯೇ ಚುನಾವಣಾ ಸ್ಪರ್ಧೆಯಲ್ಲಿ ತಮಗಿಷ್ಟವಾದ ಅಮಾಯಕರನ್ನು ಸ್ಪರ್ಧಿಗಳಾಗಿಸಿ. ಆದೇಶವನ್ನು ಪಾಲಿಸುವಂತ ಬಡವನಿಗೆ ಅಧಿಕಾರದ ಅವಕಾಶನೀಡುತ್ತಾರೆ. ಪ್ರಜ್ಞಾವಂತರನ್ನು ಮೂಲೆಗುಂಪಾಗಿಸುತ್ತಾ ಬಂದಿದ್ದಾರೆ. ಇಂತ ಸ್ಥಳೀಯ ಸರ್ಕಾರಗಳು ಎಷ್ಟು ಬಲವಾಗಿದ್ದರೇನು? ಸಡಿಲವಾಗಿದ್ದರೇನು? ಅಂಚಿನ ಸಮುದಾಯಗಳು, ಅಭಿವೃದ್ಧಿ ಹೊಂದಲು ಹಾಗೂ ರಾಜಕೀಯ ಸ್ವಾಯತ್ತತೆಯನ್ನು ಕಾಪಾಡಲು ಸಾಧ್ಯವೆ? ಇದಕ್ಕೆ ಪರಿಹಾರ ಶಿಕ್ಷಣ ಪಡೆದಂತ ಪ್ರಜ್ಞೆವಂತರಿಗೆ ಪ್ರನಿಧಿಕರಣದ ಪ್ರಾತಿನಿಧ್ಯ

೬.೪. ಸ್ಥಳೀಯ ಸರ್ಕಾರದಲ್ಲಿ ದಲಿತರ ಪ್ರತಿನಿಧಿಕರಣ

ಸ್ವಾತಂತ್ರ ನಂತರ ಸ್ವತಂತ್ರ ಪೂರ್ವದಲ್ಲಿ ರಾಜಕಾರಣದಲ್ಲಿ ಕಾಣಿಸಿಗುವ ದಲಿತರನ್ನು ಪ್ರತಿನಿಧಿಸಿದ ದಲಿತ ಮುಖಂಡರ ಅನೇಕರಲ್ಲಿ ಉನ್ನತ ಶಿಕ್ಷಣ, ವೈಚಾರಿಕ ಪ್ರಜ್ಞೆ, ಸ್ವಾಭಿಮಾನವಿಲ್ಲದ ಬಹುಪಾಲು ದಲಿತರ ರಾಜಕಾರಣಗಳನ್ನು ಕಾಣಬಹುದಾಗಿದೆ. ಕಡಿಮೆ ಶಿಕ್ಷಣ ಹೊಂದಿದೆ ಹಾಗೂ ವಿದೇಯತೆಯುಳ್ಳ ದಲಿತರ ಮುಖಂಡರನ್ನು ಕಾಂಗ್ರೇಸ್ ನಂತಹ ಪುರಾತನ ಪಕ್ಷಗಳು ಸಂವಿಧಾನದ ಆಜ್ಞೆಯಂತೆ ಮೀಸಲಾತಿ ಭರಿಸಲು ಇಂತಹ ದಲಿತ ಮುಖಂಡರಿಗೆ ಮಣೆ ಹಾಕಿ ತಮ್ಮ ಆಡಳಿತವನ್ನು ಸುಲಲಿತವಾಗಿ ಪೂರೈಸುವ ಪರಿಪಾಟ ಮಾಡಿಕೊಂಡಿದ್ದಾರೆ.

ಅರ್ಹತೆ ಹಾಗೂ ಪ್ರತಿಭೆಯುಳ್ಳ ಮತ್ತು ಕ್ರಾಂತಿಕಾರಕ ನಿಲುವುಳ್ಳ ದಲಿತ ಮುಖಂಡರಿಗೆ ರಾಜಕೀಯ ಉನ್ನತ ಸ್ಥಾನ ದೊರದಂತೆ ಎಚ್ಚರವಹಿಸುತ್ತಾ ಬಂದಿರುವ ನಾಡಿನ ಕೋಮುವಾದ ಪಕ್ಷಗಳು ಅಂಬೇಡ್ಕರ್ ಅವರಿಂದ ಶ್ರೀನಿವಾಸ್ ಪ್ರಸಾದ್‌ರ ವರಿಗೂ ಮೂಗು ಮುರಿದು ಮೂಲೆಗುಂಪು ಮಾಡುತ್ತಲೇ ತಮ್ಮ ದಬ್ಬಾಳಿಕೆಯನ್ನು ನಿರಂತರವಾಗಿಸಿಕೊಂಡು ಬಂದಿದ್ದಾರೆ. ಶೋಷಿತ ಜನತೆಯ ಮೇಲೆ ಏರುತ್ತಾ ಅಸಮಾನತೆಯ ವ್ಯವಸ್ಥೆಯನ್ನು ಯಥಾಸ್ಥಿತಿ ಕಾಯ್ದುಕೊಳ್ಳುವುದರಲ್ಲಿ ಆಳುವ ವರ್ಗ ಜಾಗರೂಕರಾಗಿದ್ದು, ತನ್ನ ಜಾಣ್ಮೆಯನ್ನು ಜಾಗತಿಕವಾಗಿ ಪ್ರದರ್ಶಿಸುತ್ತಲೇ ಮುಂದುವರಿದಿದೆ.

ಹೀಗಾಗಿ ಇಂದಿಗೂ ಸ್ಥಳೀಯ ಸರಕಾರಗಳಲ್ಲಿ ಮತ್ತು ವಿಧಾನಸಭೆ, ಲೋಕಸಭೆಯ ಚುನಾವಣೆಗಳಲ್ಲಿ ವಿದ್ಯಾವಂತರ ವಿರುದ್ಧವಾಗಿ ಅವಿದ್ಯಾವಂತನಿಗೆ ಟಿಕೆಟ್ ನೀಡಿ ಅವರನ್ನು ಗೆಲ್ಲಿಸಿ ಅವರ ಪರವಾಗಿ ಎಲ್ಲಾ ತೀರ್ಮಾನಗಳನ್ನು ತಾವೇ ತೆಗೆದುಕೊಳ್ಳುವುದು. ಹೀಗೆ ಆಯಾ ವಲಯಗಳಲ್ಲಿ ಈ ಪ್ರತಿಯಲ್ಲಿ ಅನುಸರಿಸಿಕೊಂಡು ಬರಲಾಗುತ್ತಿದೆ. ಅದಕ್ಕಾಗಿ ಡಾ. ಬಿ.ಆರ್. ಅಂಬೇಡ್ಕರ ಅವರು ಅಸ್ಪೃಶ್ಯರಿಗೆ ದ್ವಿಮತದಾನಕ್ಕೆ ಆಗ್ರಹಿಸಿದ್ದರು.[೨]

ಬೋರಲಿಂಗಯ್ಯ "ಅಭಿವೃದ್ಧಿಯ ಬಹುಮುಖತೆ" ಇಂದು ಅಭಿವೃದ್ಧಿ ಎಂಬ ಪರಿಕಲ್ಪನೆಯನ್ನು ಅತ್ಯಂತ ಸಂಕುಚಿತವಾಗಿ ಅರ್ಥೈಸಲಾಗುತ್ತಿದೆ. ನಮ್ಮ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಅವರ ಪ್ರಕಾರ ಹಣ ಮಾತ್ರ ಅಭಿವೃದ್ಧಿ ಮೂಲ ಎಂಬ ಕಲ್ಪನೆ. ಅದು ಇಂಡಿಯಾದ ಶ್ರೀಮಂತರ ಬಳಿ ಇರಲಿ ಅಥವಾ ಅಮೇರಿಕಾದ ಬಿಲ್‌ಗೇಟ್ಸ್ ಹತ್ತಿರ ಇರಲಿ ಆ ಹಣವನ್ನು ತಂದು ಕಡೆ ಚೆಲ್ಲುವ ಮೂಲಕ ಹಣದ ಉಪಯೋಗ ಎಲ್ಲರಿಗೂ ಆಗುವಂತೆ ಮಾಡುವುದೇ ಅಭಿವೃದ್ಧಿ ಎಂಬಲ್ಲಿಗೆ ನಮ್ಮ ಅರ್ಥಶಾಸ್ತ್ರದ ಕಸರತ್ತು ಬಂದು ನಿಂತುಬಿಟ್ಟಿದೆ. ಹಾಗೆಯೇ ಪಂಚವಾರ್ಷಿಕ ಯೋಜನೆಗಳ ಮೂಲಕ ದೊಡ್ಡ ದೊಡ್ಡ ಅಣೆಕಟ್ಟುಗಳು ಮತ್ತು ವಿದೇಶಿ ಸ್ವರೂಪದ ರಸ್ತೆಗಳ ನಿರ್ಮಾಣ, ಗಗನ ಚುಂಬಿ ಕಟ್ಟಡಗಳು ನಮ್ಮ ಅಭಿವೃದ್ಧಿಯ ಬಹುದೊಡ್ಡ ನೆಲೆಗಳಾಗಿ ಕಾಣುತ್ತಿವೆ. ಆದರೆ ಭಾರತದ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗಮನ ಹರಿಸುತ್ತಿಲ್ಲ. ಹಾಗಾದರೆ ೧೯೯೩ರ ಅಧಿನಿಯಮ ೭೩ನೇ ತಿದ್ದುಪಡಿ ಕಾಯ್ದೆ ಗ್ರಾಮ ಪಂಚಾಯತಿಗಳ ಪಾತ್ರವೇನು? ಗ್ರಾಮ ಪಂಚಾಯತಿ ಪ್ರತಿನಿಧಿಕರಣದ ಕೆಲಸವೇನು? ಇದರಲ್ಲಿ ಗ್ರಾಮೀಣ ಜನರು ಯಾವ ರೂಪದಲ್ಲಿ ತಮ್ಮ ಪಾತ್ರವಹಿಸುತ್ತಾರೆ? ಎಂಬ ಪ್ರಶ್ನೆಗಳು ಪ್ರಶ್ನೆಗಳಾಗೆ ಉಳಿಯುತ್ತವೆ. ಹೇಗೆಂದರೆ ಹಿ.ಚಿ. ಬೋರಲಿಂಗಯ್ಯನವರ ಪ್ರಕಾರ ಭಾರತ ಅಭಿವೃದ್ಧಿಯನ್ನು ನಗರೀಕರಣ ಮತ್ತು ಪಾಶ್ಚಾತ್ಯೀಕರಣದ ಮಾದರಿ ಅಡಿಯಲ್ಲಿ ನಡೆಯುತ್ತಿರುವ ಭಾರತ ಸರ್ಕಾರಗಳ ಆಡಳಿತಗಳು, ಇಲ್ಲಿಯವರೆಗೂ ಮೇಲುಪಂಕ್ತಿ ನೆಲೆಯಲ್ಲೇ ಅಭಿವೃದ್ಧಿಯಾದರೆ ಗ್ರಾಮೀಣ ಪ್ರದೇಶಗಳು ಅಭಿವೃದ್ಧಿಯಾದಂತೆ ಎಂಬ ಮೇಲ್ನೋಟದ ಅಭಿವೃದ್ಧಿಯಾಗಿಸಿಕೊಂಡು ಬಂದಿದೆ.

ಆದರೆ ೭೩ರ ತಿದ್ದುಪಡಿ ಕಾಯ್ದೆಯ ಪಂಚಾಯತ್ ರಾಜ್ಯ ವ್ಯವಸ್ಥೆಯಲ್ಲಿ ಎಷ್ಟರ ಮಟ್ಟಿಗೆ ಅಭಿವೃದ್ಧಿ, ಅಧಿಕಾರ ವಿಕೇಂದ್ರಿಕರಣ ಕಾಣಬಹುದು. ಇದರಲ್ಲಿ ಪಂಚಾಯತ್ ರಾಜ್ಯ ವ್ಯವಸ್ಥೆಗೆ ಹೆಚ್ಚಿನ ಪ್ರಾತಿನಿಧ್ಯತೆ ನೀಡಲು ಮೇಲ್ದರ್ಜೆ ಸರ್ಕಾರದ ಪ್ರತಿನಿಧಿಕರಣ ವಿರೋಧವಿತ್ತು. ಹೆಚ್ಚಿನ ಅಧಿಕಾರ ಗ್ರಾಮ ಪಂಚಾಯತಿ ಗಳಿಗೆ ನೀಡಿದರೆ MLA/MPಗಳ ಪ್ರತಿನಿಧಿರಣದ ಕೆಲಸವೇನು ಎಂಬುದು ದೊಡ್ಡ ವಿರೋಧವಿತ್ತು. ಇವುಗಳ ನಡುವೆ ಸ್ಥಳೀಯವಾಗಿ ಪಂಚಾಯತ್ ರಾಜ್ ಉದ್ದೇಶ ಎಲ್ಲಾ ಸಮುದಾಯಗಳಿಗೂ ಸಮಾನತೆ ಸೋದರತ್ವ ರಾಜಕೀಯ ಸ್ವಾತಂತ್ರ್ಯ ಮೂಲಭೂತ ಸೌಕರ್ಯಗಳು ಒದಗಿಸಿ ಜನಸಾಮಾನ್ಯರನ್ನು ಪ್ರಜ್ಞಾವಂತರನ್ನಾಗಿಸಿ, ಗ್ರಾಮೀಣಪ್ರದೇಶಗಳ ಅಭಿವೃದ್ಧಿ ಪಡಿಸುವ ಗುರಿಯಾಗಿದೆ. ಆದರೆ ಇದು ಫಲಕಾರಿಯಾಗಲು ಸಾಧ್ಯವಿಲ್ಲ. ಈ ಭಾಗದ ಸರ್ಕಾರಗಳು

ಯಜಮಾನಿಕೆ, ಭೂಮಾಲಿಕತ್ವ, ಮೇಲ್ದರ್ಜೆ, ಪ್ರತಿನಿಧಿಕರಣಗಳು ಆಡಳಿತ ಅಧಿಕಾರವನ್ನು ಕೇಂದ್ರೀಕರಿಸಿ ಕೊಂಡಿವೆ. ಆದ್ದರಿಂದ ಹೆಸರಿಗೆ ಮಾತ್ರ ಮೀಸಲಾತಿ ಪ್ರತಿನಿಧಿಕರಣ ಇರುವುದರಿಂದ ಗ್ರಾಮೀಣ ಜನರಿಗೆ ರಾಜಕೀಯ ಸ್ವಾತಂತ್ರ್ಯ ನೀಡಿದೆ ಎನ್ನುತ್ತಾರೆ. ವಾಸ್ತವಿಕತೆಯಿಂದ ಅಧ್ಯಯನ ಮಾಡಿದರೆ ಯಜಮಾನಿಕತೆಯೇ ಗ್ರಾಮೀಣ ಸರ್ಕಾರವಾಗಿದೆಯೇ ಹೊರತು ಸಾರ್ವತ್ರಿಕ ಪ್ರತಿನಿಧಿಕರಣವಲ್ಲ.

ಅಭಿವೃದ್ಧಿ ಎಂದರೆ ಎಲ್ಲಾ ರಾಷ್ಟ್ರಗಳೂ ಎಲ್ಲಾ ಜನ ಸಮುದಾಯಗಳು ಮತ್ತು ಎಲ್ಲಾ ಪ್ರಜೆಗಳಿಗೂ ತಲುಪಲೇಬೇಕಾದ ಒಂದು ಬದಲಾವಣೆಯ ಗುರಿ ಎನ್ನುವ ಕಲ್ಪನೆ ಪ್ರಚಲಿತವಿರುವ ಈ ಸಂದರ್ಭದಲ್ಲಿ ಅಭಿವೃದ್ಧಿ ಎನ್ನುವ ಪರಿಕಲ್ಪನೆಯ ಸಮಾಜಶಾಸ್ತ್ರೀಯ ವಿಶ್ಲೇಷಣೆಯನ್ನು ಮಾಡಲು "ಗಣೇಶ್ ಸೋಮಯಾಜಿ" ಅವರು ಹೀಗೆ ಹೇಳಿದ್ದಾರೆ. ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಮತ್ತು ೨೦ನೇ ಶತಮಾನದಲ್ಲಿ ಬಹುತೇಕ ರಾಷ್ಟ್ರಗಳು ರೂಪಿಸಿಕೊಂಡವು. ಅಭಿವೃದ್ಧಿಯು ಹೊಂದಿದ ರಾಷ್ಟ್ರಗಳ ಮೇಲುಪಂಕ್ತಿಯನ್ನು ಅನುಸರಿಸಿ ತಮ್ಮ ತಮ್ಮ ರಾಷ್ಟ್ರೀಯ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ರೂಪಿಸಿಕೊಂಡವು. ಆದರೆ ಇಂತಹ ಅಭಿವೃದ್ಧಿ ಕಡೆಗಿನ ಸರ್ವವ್ಯಾಪ್ತಿಯಾದ ಓಟದ ದೆಸೆಯಿಂದ ಪ್ರಾಕೃತಿಕ ಮತ್ತು ಸಾಮಾಜಿಕ ವಾತಾವರಣದ ಮೇಲೆ ಪರಿಣಾಮಗಳಾಗುತ್ತಿವೆ.

ಭಾರತದ ಸಂದರ್ಭದಲ್ಲಿ ಅಭಿವೃದ್ಧಿಯು ಸಾಮಾಜಿಕ ಪರಿಕಲ್ಪನೆಯನ್ನು ಬದಿಗಿಟ್ಟು ಆರ್ಥಿಕವಾಗಿ ಮಾತ್ರ ಅಭಿವೃದ್ಧಿ ಮಾನದಂಡವಾಗಿಸಿ, ಭಾರತ ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಹಾಗೂ ಅಂತರರಾಷ್ಟ್ರೀಯ ಕಂಪನಿಗಳೊಂದಿಗೆ ಕೈ ಜೋಡಿಸಿಕೊಂಡಿವೆ. ಇದರಿಂದ ಭಾರತದ ಸಂಪನ್ಮೂಲವನ್ನು ಬಂಡವಾಳಶಾಹಿಗಳಿಗೆ ನೀಡಿ ಮತ್ತೆ ಅವರಿಂದಲೆ ಮಾರುಕಟ್ಟೆಯಾಗಿಸಿ ಪುನಃ ಹೆಚ್ಚಿನ ಬೆಲೆಗೆ ವಸ್ತುಗಳನ್ನು ಮಾರಾಟಮಾಡಲು "ಮಾಲ್‌ಗಳ ಹೆಸರಿನಲ್ಲಿ" ಪುನಃ ಭಾರತೀಯರಾದ ತಾವೇ ಕೊಂಡುಕೊಳ್ಳುವ ಸ್ಥಿತಿಯಾಗಿದೆ. ಈ ರೀತಿಯಾದ ಬಹುರಾಷ್ಟ್ರೀಯ ಕಂಪನಿಗಳು, ಬೃಹತ್ ಪ್ರಮಾಣದ ಕೈಗಾರಿಕೆಗಳನ್ನಾಗಿಸಿ ಕೊಂಡು, ಪ್ರಕೃತಿದತ್ತವಾದ ಸಂಪನ್ಮೂಲಗಳನ್ನು ಹಾಳುಮಾಡಿ, ಪರಿಸರಮಾಲಿನ್ಯ ಮಾಡುವುದನ್ನು ನಾವು ಅಭಿವೃದ್ಧಿ ಎಂದು ಒಪ್ಪಬೇಕು. "Make in India" "Mega City" ಇವು ಅಭಿವೃದ್ಧಿಯ ನೆಲೆಗಳೇ ಹಾಗಾದರೆ "ಭಾರತ ಹಳ್ಳಿಗಳಿಂದ ಕೂಡಿದ ದೇಶ" ಹಳ್ಳಿಗಳನ್ನು ಯಾವ ಸಿಟಿಗಳಾದರೂ ಕರೆಯಲು ಸಾಧ್ಯ. ಪುನಃ ಈ ದೇಶದಲ್ಲಿ ಆಡಳಿತ ನಡೆಸುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯೋಜನೆಗಳನ್ನು ರೂಪಿಸಿ. ಸಂವಿಧಾನದ ತಿದ್ದುಪಡಿಗಳನ್ನು ರೂಪಿಸಿ ಪೋಷಣೆಯಂತೆ 'ಗ್ರಾಮ ಸ್ವರಾಜ್ಯ' ಎಂಬುದನ್ನು ಯಾವ ಅಭಿವೃದ್ಧಿ ಮತ್ತು ಅಧಿಕಾರ ವಿಕೇಂದ್ರಿಕರಣವನ್ನು 'ಪಂಚಾಯತ್ ರಾಜ್ಯ' ವ್ಯವಸ್ಥೆಯಲ್ಲಿ ಕಾಣಲು ಸಾಧ್ಯವಾಗುತ್ತದೆ. ೭೩ನೇ ತಿದ್ದುಪಡಿ ಪಂಚಾಯತ್ ರಾಜ್ಯ ವ್ಯವಸ್ಥೆಯು ಭಾರತದ ಸಂದರ್ಭದಲ್ಲಿ ಸಾಮಾಜಿಕ ಬಗ್ಗೆ ಧ್ವನಿ ಎತ್ತದ, ಮೀಸಲಾತಿಯ ಪ್ರತಿನಿಧಿಕರಣಕ್ಕೆ ರಾಜಕೀಯ ಸ್ವಾತಂತ್ರ್ಯ ನೀಡದ, ಶೈಕ್ಷಣಿಕವಾಗಿ ಸೂಕ್ತ ಯೋಜನೆಗಳನ್ನು ರೂಪಿಸಲಾಗದ, ಆರ್ಥಿಕ ಮತ್ತು ಆರೋಗ್ಯ, ಆಹಾರ, ನೈರ್ಮಲೀಕರಣ

ನೀಡುವುದರಲ್ಲಿ ಫಲಕಾರಿಯಾಗಿಲ್ಲ. ಇಂತಹ ಅಭಿವೃದ್ಧಿ ಅಧಿಕಾರ ವಿಕೇಂದ್ರೀಕರಣ, ಸಮಾಜ ಸಮಾನತೆಯಲ್ಲಿ ವಿಫಲವಾಗಿದೆ ಎಂದರೆ ತಪ್ಪಾಗಲಾರದು.

ಇಂಡಿಯಾದ ಸಮಾಜವು ಜಾತಿ ಶ್ರೇಣೀಕರಣದಿಂದ ಮತ್ತು ವರ್ಗ ಶ್ರೇಣೀಕರಣಗಳಿಂದ ಕೂಡಿದೆ. ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಇದರ ನೆಲೆಯಲ್ಲಿ ಕೆಳಜಾತಿ ಬಡವರು ಜಾತಿ ಶೋಷಣೆಯಿಂದ ಹಾಗೂ ಅಸಮಾನತೆಗಳ ಅಂತರದಿಂದ ನರಳುತ್ತಿದ್ದಾರೆ. ವರ್ಗಶೋಷಣೆಯನ್ನು ಎಲ್ಲಾ ಜಾತಿಯ ಬಡವರು ಅನುಭವಿಸುತ್ತಿದ್ದಾರೆ. ಮೇಲು ಜಾತಿಯ ಬಡವು ವರ್ಗ ಶೋಷಣೆಯನ್ನು ಮಾತ್ರ ಅನುಭವಿಸುತ್ತಿದ್ದಾರೆ. ಈ ಎರಡೂ ಶೋಷಣೆಗಳು ದಿನೇ ದಿನೇ ಹಳೆಯ ರೂಪುಗಳನ್ನು ಬದಲಾಯಿಸಿಕೊಳ್ಳುತ್ತಾ ಹೊಸ-ಹೊಸ ರೂಪ ತಾಳುತ್ತಾ ಸಾಗಿವೆ. ರೂಪುಗಳನ್ನು ಮೇಲು ಜಾತೀಯ ಬಡವರು ಮತ್ತು ಕೆಳ ಜಾತಿಯ ಬಡವರ ಸಮಸ್ಯೆಗಳು ಆರ್ಥಿಕ ಆಯಾಮದಲ್ಲಿ ಒಂದೇ ಸ್ವರೂಪದ್ದಾಗಿದೆ. ಬೇರೆ-ಬೇರೆ ಜಾತಿಯ ಬಡಜನರು ತಮ್ಮ ಜಾತಿಯ ಸಂಕೋಲೆಗಳಿಂದ ಬಿಡುಗಡೆಗೊಳಿಸಿ, ಸಮಾನ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕಾಗಿ ಮತ್ತು ರಾಜಕೀಯ ಅಧಿಕಾರಕ್ಕಾಗಿ ಇಂಡಿಯಾದ ಚರಿತ್ರೆಯುದ್ದಕ್ಕೂ ಅನೇಕ ಹೋರಾಟಗಳನ್ನು ಮಾಡಿದ್ದಾರೆ. ಆದರೆ ಆಳುವ ವರ್ಗದ ಚರಿತ್ರೆ ಇವುಗಳನ್ನು ಮುಚ್ಚಿಟ್ಟದೆ. ಎಂಬ ಲೇಖಕರ ಮಾತು ಸರಿಯಾದ ಪ್ರತಿಪಾಧನೆಯಾದರೂ ಇಲ್ಲಿ ಮೇಲು ಜಾತಿ ಬಡವರು ಮತ್ತು ಕೆಳಜಾತಿ ಬಡವರ ಸಮಸ್ಯೆಗಳು ಒಂದೇ ಆಗಿರುವುದಿಲ್ಲ. ವಿಭಿನ್ನವಾಗಿರುತ್ತವೆ. ಹೇಗೆಂದರೆ ಭೂಮಿ ಹುಳ್ಳುವ ವಡೆಯನು ಕೃಷಿಗೆ ನೀರಿಲ್ಲದೆ ಸಾಲ-ಸೋಲ ಮಾಡಿ ಕೊಳಭಾವಿ ಕೊರಿಸಿ ಕೃಷಿಗೆ ಸಂಬಂಧಪಟ್ಟ ಬೀಜ-ಗೊಬ್ಬರ, ಕೂಲಿಕಾರರು ಮುಂತಾದವು ಗಳಿಂದ ಬೆಳೆಗೆ ತಕ್ಕ ಬೆಲೆ ಸಿಗದೆ ರೂತ ಸಾಲಗಾರ ಹಾಗೂ ಬಡವನಾಗುತ್ತಾನೆ. ಆದರೆ ಭೂಮಿ ಇಲ್ಲದೆ ಕೇವಲ ಕೂಲಿ-ಶ್ರಮದಿಂದ ಉಂಟಾದ ಸಮಸ್ಯೆಗಳು ಒಂದೇ ಆಗಲು ಸಾಧ್ಯವಿಲ್ಲ. ಆಶ್ರಿತರಾದ ಬಡವರು ನಿರಾಶ್ರಿತರಾದ ಬಡವರ ಸಮಸ್ಯೆಗಳು ಬೆರೆ-ಬೆರೆತಯಾಗಿರುತ್ತವೆ.

ಆದ್ದರಿಂದ ಅಸ್ಪೃಶ್ಯರಾದ ಬಡವರ ಸಮಸ್ಯೆಗಳು ಅಂಬೇಡ್ಕರ್ ನೆಲೆಯಲ್ಲಿ ನೋಡಿದರೆ ಸಾಮಾಜಿಕ ಅಸಮಾನತೆಗಳ ಸಂಕೋಲೆಗಳಿಂದ ಬಿಡುಗಡೆಯಾಗದೆ ಅಂತರದ ಅಸಮಾನತೆಗಳ ಬಡತನವಾಗಿರುತ್ತದೆ. ಇಲ್ಲಿ ಸಾಮಾಜಿಕ ಸಮಾನತೆಯ ಪ್ರಜ್ಞೆ ಬರುವುದಿಲ್ಲ. ಕೇವಲ ಅಸ್ಪೃಶ್ಯ, ದಲಿತ, ಎಂಬ ಪರಿಕಲ್ಪನೆ ಗಳಾಗಿಯೇ ಉಳಿದಿವೆ. ಆದ್ದರಿಂದ ಎಡಪಂಥೀಯರ ವರ್ಗ ಹೋರಾಟ, ಬಲಪಂಥೀಯರು ಒಡೆಯುತ್ತಾ ಶ್ರೀಮಂತಿಕೆಯಿಂದ ಬಡವರ ನಿಯಂತ್ರಣ ನಿರಂತರವಾಗಿಯೇ ಹೋರಾಟಗಳು ನಡೆಯುತ್ತಾ ಬಂದಿವೆ. ಆದರೆ ಪರಿಹಾರ ಸಿಗುವುದರಲ್ಲಿ ಎಡಪಂಥೀಯ ಚಿಂತನೆಗಳು ಬಲಪಂಥೀಯರು ಒಡೆಯುತ್ತಾ ಬಂದಿದ್ದಾರೆ. ಬಲಪಂಥೀಯರು ಏಕ ಸಂಸ್ಕೃತಿ ಭಾರತ, ಎಡಪಂಥೀಯರು ಬಹುಸಂಸ್ಕೃತಿ ಭಾರತದ ದ್ವಂದ್ವ ನಿಲುವುಗಳಲ್ಲಿಯೇ ಬಡವರು ನಿಂತಿದ್ದಾರೆ. ಅಸ್ಪೃಶ್ಯರು, ದಲಿತರು, ಸಮಾಜಿಕ ಅಸಮ ಸ್ಥಿತಿಗಳ ಶೋಷಣೆಯಲ್ಲಿ ನೋವನ್ನು ಅನುಭವಿಸುತ್ತಿದ್ದಾರೆ. ಎಂದು ಅಂಬೇಡ್ಕರ್ ಹೇಳುತ್ತಾರೆ. ಅದೇ ರೀತಿಯಾಗಿ ಆಳುವ ಸರ್ಕಾರಗಳ ಅಡಿಯಲ್ಲಿ ಸ್ಥಳೀಯ ಮೀಸಲಾತಿ ಪ್ರತಿನಿಧಿಕರಣ ಮತ್ತು

ಸ್ಥೀಯ ಸರ್ಕಾರಗಳು ಅಭಿವೃದ್ಧಿ ಮತ್ತು ಅಧಿಕಾರ ವಿಕೇಂದ್ರೀಕರಣ ಮೇಲ್‌ಜಾತಿ ಬ್ರಾಹ್ಮಣದಿಂದ ಕಳಚಿಕೊಳ್ಳಲಾಗದೆ ಯಜಮಾನಿಕೆ ಮತ್ತು ಆಳುವ ವರ್ಗದ ಹಂಗಿನಲ್ಲಿ ಪ್ರತಿನಿಧಿಕರಣದ ಸ್ವಾತಂತ್ರವನ್ನು ಪಡಯಲಾಗದೆ ಕೇವಲ ಮೀಸಲಾತಿ ಗೆಲುವಿನ ಪ್ರತಿನಿಧಿಕರಣವಾಗಿಸಿಕೊಂಡು ಬರುತ್ತಿವೆ. ಈ ರೀತಿಯಾದ ಪ್ರತಿನಿಧಿಕರಣವನ್ನು ಅದಿಕಾರ ವಿದೇಂದ್ರೀಕರಣ ಎನ್ನುವುದು ಸರಿಯೇ? ಇದನ್ನು ವಿಫಲವಾದ ಪಂಚಾಯತ್ ರಾಜ್ಯ ವ್ಯವಸ್ಥೆ ಎಂದರೆ ತಪ್ಪಾಗಲಾರದು.[೩]

ಸೋಮಶೇಖರ ಎಚ್ – ೨೦೦೯ ಕೃಷಿ ಸಂಪನ್ಮೂಲ ಮಾರುಕಟ್ಟೆಯಲ್ಲಿ ರಸಗೊಬ್ಬರಗಳು ಕೋಲಾರ ಜಿಲ್ಲೆ ಒಂದು ಅಧ್ಯಯನ ಎಂಬ ಪಿಎಚ್‌ಡಿ ಮಹಾಪ್ರಬಂದದಲ್ಲಿ ಕೋಲಾರ ಜಿಲ್ಲೆಯ ಎರಡು ಗ್ರಾಮಗಳ ಅಧ್ಯಯನದಲ್ಲಿ (ಮರ್ಚೆನಹಳ್ಳಿ ಮತ್ತು ಅರಳಹಳ್ಳಿ) ದಲಿತರ ರಾಜಕೀಯ ಸ್ಥಿತಿ ಮತ್ತು ಭಾಗವಹಿಸುವಿಕೆಯನ್ನು ಕ್ಷೇತ್ರಕಾರ್ಯದ ಮೂಲಕ ಅನಾವರಣಗೊಳಿಸಿದ್ದಾರೆ.

ಮರ್ಚೆನಹಳ್ಳಿಯಲ್ಲಿ ಒಟ್ಟು ೧೨೦ ಮನೆಗಳು ಇದರಲ್ಲಿ ೮೦(೬೬.೬೬) ಪರಿಶಿಷ್ಟ ಜಾತಿಯ ಮನೆಗಳಾಗಿವೆ. ಬಹುತೇಕ ಕುಟುಂಬಗಳು ಸಣ್ಣಹಿಡುವಳಿದಾರರು, ಕೇವಲ ಎರಡು ಮನೆಗಳು ಮಾತ್ರ ಹತ್ತು ಎಕರೆಯಷ್ಟು ಜಮೀನು ಹೊಂದಿರುವುದ ಬಿಟ್ಟರೆ ಸಮೀಕ್ಷೆಯಲ್ಲಿ ದೊರೆತ ಮಾಹಿತಿ ಪ್ರಕಾರ ೩೦ಜನ ರೈತರು ೨ಎಕರೆಗಿಂತ ಕಡಿಮೆ ಭೂಮಿ ಹೊಂದಿದ್ದವರು ಉಳಿದ ೫ ಜನರಲ್ಲಿ ೬.೬೬ ರಷ್ಟು ಜಮೀನು ಹೊಂದಿದ್ದಾರೆ. ಉಳಿದ ಮೂವರು ೫ ಎಕರೆಗಿಂತ ಹೆಚ್ಚು ಮತ್ತು ೧೦ ಎಕರೆಗಿಂತ ಕಡಿಮೆ ಭೂಮಿಹೊಂದಿದ್ದಾರೆ. ಗ್ರಾಮದ ಲಕ್ಷಣವೆಂದರೆ ಇಡೀ ಜನಸಂಖ್ಯೆಯ ಶೇ.೬೬.೬೬ರಷ್ಟು ಪರಿಶಿಷ್ಟ ಜಾತಿಯವರಿದ್ದಾರೆ. ಉಳಿದಂತೆ ಕುರುಬ, ಗೊಲ್ಲ, ಈಡಿಗ, ವಕ್ಕಲಿಗ, ಪರಿಶಿಷ್ಟ ಪಂಗಡದವರಿದ್ದಾರೆ. ಜನಸಂಖ್ಯೆ ದೃಷ್ಟಿಯಿಂದ ಅತಿ ಕಡಿಮೆ ಇರುವ ವಕ್ಕಲಿಗರ ಪ್ರಭಾವ ಇಲ್ಲಿ ನಿಚ್ಚಳವಾಗಿ ಎದ್ದುಕಾಣುತ್ತದೆ. ಬಹುತೇಕವಾಗಿ ಯಾವುದೇ ಕೆಲಸಗಳಿಗೆ ದಲಿತರು, ವಕ್ಕಲಿಗರನ್ನು ಆಶ್ರಯಿಸಬೇಕಾಗಿದೆ. ಈ ಮೇಲ್ವರ್ಗದವರು ಜನಸಂಖ್ಯೆ ಮರ್ಚೆನಹಳ್ಳಿಯಲ್ಲೇ ಶೇ.೧೦ಕ್ಕಿಂತ ಜಾಸ್ತಿ ಇಲ್ಲ. ಆದರೂ ಅಲ್ಪಸಂಖ್ಯಾತರಾದ ವಕ್ಕಲಿಗರೆ ಯಜಮಾನಿಕೆಯ ಕಾರುಭಾರು ಮಾಡುತ್ತಾರೆ.[೪]

ಐಸೆಕ್ ನಡೆಸಿದ ಅಧ್ಯಯನದಲ್ಲಿ ಬಹಿರಂಗ ಗ್ರಾಮ ಪಂಚಾಯ್ತಿಗಳಲ್ಲಿ ಇನ್ನೂ ಅಸ್ಪಶ್ಯತೆ ಜೀವಂತ ಪ್ರಜಾವಾಣಿ ದಿನಪತ್ರಿಕೆ ೧೩.೧೨.೨೦೧೬ ರಾಜ್ಯದ ಸಾಕಷ್ಟು ಗ್ರಾಮಪಂಚಾಯ್ತಿಗಳಲ್ಲಿ ಅಸ್ಪೃಶ್ಯತೆ ಇನ್ನೂ ಆಚರಣೆಯಲ್ಲಿದೆ. ಗ್ರಾಮಪಂಚಾಯ್ತಿ ಸಭೆಗಳು ನಡೆಯುವಾಗ ದಲಿತ ಸಮುದಾಯಕ್ಕೆ ಸೇರಿದ ಸದಸ್ಯರನ್ನು ಉದ್ದೇಶ ಪೂರ್ವಕವಾಗಿ ಹೊರಗೆ ಕೂರಿಸಲಾಗುತ್ತಿದೆ ಎಂದು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ (ಐಸೆಕ್) ನಡೆಸಿರುವ ಅಧ್ಯಯನ ಹೇಳಿದೆ.

ಅಪಾಯದಲ್ಲಿ ಸ್ಥಳೀಯ ಆಡಳಿತ ಗ್ರಾಮೀಣ ಕರ್ನಾಟಕದ ಒಂದು ಅಧ್ಯಯಹನ ಪ್ರಕರಣವೆಂಬ ಹೆಸರಿನ ಅಧ್ಯಯನ ಅಸ್ಪೃಶ್ಯತೆ ಆಚರಣೆ ಇನ್ನೂ ಜೀವಂತವಾಗಿರುವುದನ್ನು ಉಲ್ಲೇಖಿಸಿದೆ. ಈ ಅಧ್ಯಯನಕ್ಕಾಗಿ ಕಲ್ಬುರ್ಗಿ, ಭಾಗಲಕೋಟೆ, ಬಳ್ಳಾರಿ ಜಿಲ್ಲೆಗಳಲ್ಲಿ ಅಸ್ಪೃಶ್ಯತೆ ಇನ್ನೂ ಜೀವಂತವಾಗಿದೆ. ಈ ಬಗ್ಗೆ ಸ್ವಸಹಾಯ ಗುಂಪುಗಳ ಕೆಲವು ಸದಸ್ಯರು ಪ್ರಶ್ನೆ ಮಾಡಿದ್ದು ಇವೆ ಎಂದು ಅಧ್ಯಯನ

ಹೇಳಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಾರ್ವಜನಿಕ ಕುಡಿಯುವ ನೀರಿನ ಕೊಳಾಯಿ ಹೇರ್ ಕಟಿಂಗ್ ಸಲೂನ್, ಹೋಟೆಲ್ ಮತ್ತು ದೇವಸ್ಥಾನಗಳಲ್ಲಿ ಜಾತಿ ತಾರತಮ್ಯ ಈಗಲೂ ಇದೆ ಎಂಬುದನ್ನು ಅಧ್ಯಯನ ತಿಳಿಸಿದೆ.

ಕರ್ನಾಟದ ಹಲವು ಗ್ರಾಮ ಪಂಚಾಯ್ತಿಗಳಲ್ಲಿ ದಲಿತರು ಹೆಸರಿಗಷ್ಟೆ ಪಂಚಾಯ್ತಿ ಸದಸ್ಯರಾಗಿದ್ದಾರೆ. ಇವರು ಹೆಸರಿಗೆ ಮಾತ್ರ ಗ್ರಾಮ ಪಂಚಾಯತಿ ಸದಸ್ಯರಾಗಿದ್ದು, ನಿತ್ಯವು ಬೀಡಿಕಟ್ಟುತ್ತಾರೆ. ಹೊಲಗಳಲ್ಲಿ ಕೆಲಸಮಾಡುತ್ತಾರೆ. ದಿನಗೂಲಿ ಕಾರ್ಮಿಕರಾಗಿ ದುಡಿಯುತ್ತಾರೆ. ಇನ್ನು ಕಲವು ಮಹಿಳೆಯರು ಅಡಿಗೆ ಮನೆಗಷ್ಟೇ ಸೀಮಿತವಾಗಿದ್ದಾರೆ. ಇದು ಒಟ್ಟಾರೆ ಜನ ಪ್ರತಿನಿಧಿಗಳ ಪಾಡು ಎಂದು ಅಧ್ಯಯನವು ತಿಳಿಸುತ್ತದೆ. ಬಹುಸಾಲು ಗ್ರಾಮ ಪಂಚಾಯಿತಿಗಳಲ್ಲಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಪತಿ ಅಥವಾ ಕುಟುಂಬದ ಇತರ ಪುರುಷ ಸದಸ್ಯರನ್ನು ಅವಲಂಬಿಸಿರುತ್ತಾರೆ. ಗ್ರಾಮ ಪಂಚಾಯಿತಿಯ ಒಟ್ಟು ಸದಸ್ಯರಲ್ಲಿ ಶೇ. ೪೨.೪೧ ಮಹಿಳೆಯರೇ ಇದ್ದಾರೆ. ಅಧ್ಯಯನ ನಡೆಸಿದ ಜಿಲ್ಲೆಗಳಲ್ಲಿ ೩/೧ ಭಾಗದಷ್ಟು.೫ ವಿ. ಸೂರ್ಯ ಪ್ರಕಾಶ್, ಅತಿದೊಡ್ಡ ಪ್ರಜಾತಂತ್ರ, ಅತ್ಯುತ್ತಮ ಪ್ರಜಾತಂತ್ರ (ತೀ) ಪ್ರಜಾವಾಣಿ ದಿನಪತ್ರಿಕೆ, ಜನವರಿ ೧೮, ೨೦೧೮. ವಿಶ್ವದ ಅತಿದೊಡ್ಡ ಪ್ರಜಾತಂತ್ರ ನಮ್ಮದು. ದೇಶದ ಮತದಾರರ ಪಟ್ಟಿಯಲ್ಲಿ ೮೧-೫ ಕೋಟಿಗಿಂತ ಹೆಚ್ಚು ಜನರ ಹೆಸರುಗಳು ಇವೆ. ಹೀಗಿದ್ದರೂ. ರಾಜಕೀಯ ಪಕ್ಷಗಳನ್ನು ನಿಯಂತ್ರಣಕ್ಕೆ ಒಳಪಡಿಸುವ ವಿಚಾರದಲ್ಲಿ ಅವುಗಳಿಗೆ ಸಿಗುವ ಹಣಕಾಸಿನ ದೇಣಿಗೆಯಲ್ಲಿ ಪಾರದರ್ಶಕತೆ ತರುವ ವಿಚಾರದಲ್ಲಿ ಮತ್ತು ಚುನಾವಣಾ ವೆಚ್ಚದ ವಿಚಾರದಲ್ಲಿ ಭಾರತವು ಇತರ ಪ್ರಜಾ ಪ್ರಭುತ್ವ ರಾಷ್ಟ್ರಗಳಿಗಿಂತ ಬಹಳ ಹಿಂದುಳಿದಿದೆ. ಹಾಗಾಗಿ ಹಳ್ಳಿಯಿಂದ ದಿಲ್ಲಿಯವರೆಗೆ ಪ್ರಜಾತಂತ್ರ ಜೀವಂತವಾಗಿರುವುದನ್ನು ನಾವು ಕಣ್ಣಾರೆ ಕಾಣಬಹುದುದಾಗಿದೆ. ಕಾಳಿಧನವು ರಾಜಕೀಯ ವರ್ಷಗಳ ಚಟವವಟಿಕೆಗಳ ಮೇಲೆ ಮತ್ತು ಚುನಾವಣೆ ಮೇಲೆ ಹಾಗೂ ಇದರ ವ್ಯವಸ್ಥೆಯ ಮೇಲೆ ಬೀರುತ್ತಿರುವ ಕೊಳಕು ಪರಿಣಾಮ ಕೂಡ ಎದ್ದು ಕಾಣುತ್ತಿದೆ. ರಾಜಕೀಯ ಪಕ್ಷಗಳಿಗೆ ಬಂದ ಹಣಕಾಸಿನ ನೆರವಿನಲ್ಲಿ ಶೇಖಡಾ ೭೦ರಷ್ಟು ನಗದು ದೇವಣಿಗೆ ರೂಪದಲ್ಲಿ ಬಂದಿದೆ. ಆ ಹಣದ ಮೂಲ ಯಾವುದು ಎಂದು ಗೊತ್ತಾಗುವುದಿಲ್ಲ. ಎಂದು (೦.ಆ.ಖ) ಎ.ಡಿ.ಆರ್. "ಅಸೋಸಿಯೇರ್ಪ ಫಾರ್ ಡೆಮಾಕ್ರಟಿಕ್ ರಿಫಾರ್ಮ್" (ಎ.ಡಿ.ಆರ್) ಸಂಸ್ಥೆ ಕೆಲವು ವರ್ಷಗಳ ಹಿಂದೆ ಹೇಳಿತ್ತು.

ಚುನಾವಣಾ ಆಯೋಗವು ಚುನಾವಣಾ ವೆಚ್ಚಗಳ ಮೇಲೆ ಮಿತಿವಿದಿಸಿದ್ದರೂ ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಗಳ ವೇಳೆ ಅಭ್ಯರ್ಥಿಗಳು ಈ ಮಿತಿಯನ್ನು ಮತ್ತೆ ಮತ್ತೆ ಉಲ್ಲಂಘಿಸುತ್ತಿರುವುದು ಗೊತ್ತಿರುವ ವಿಚಾರ, ಲೋಕಸಭಾ ಚುನಾವಣಾ ಪ್ರಚಾರಕ್ಕೆ ಒಬ್ಬ ಅಭ್ಯರ್ಥಿ ದೊಡ್ಡ ರಾಜ್ಯಗಳಲ್ಲಿ ಗರಿಷ್ಟ ರೂ. ೧.೩ ಲಕ್ಷ ವೆಚ್ಚ ಮಾಡಬಹುದು ಎಂದು ಮಿತಿಯನ್ನು ಚುನಾವಣಾ ಆಯೋಗ ೧೯೭೪ರವರಿಗೆ ವಿಧಿಸಿತ್ತು. ಆದರೆ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿದ ಅಭ್ಯರ್ಥಿಗಳು ತಲಾ ರೂ. ೨೦ ಲಕ್ಷದವರಿಗೂ ವೆಚ್ಚಮಾಡುತ್ತಿದ್ದರು ಎಂದು ಹೇಳಲಾಗಿದೆ.

ನಂತರದ ದಿನಗಳಲ್ಲಿ ವೆಚ್ಚದ ಮಿತಿಯನ್ನು ರೂ. ೪ ಲಕ್ಷದಿಂದ ೫ ಲಕ್ಷಕ್ಕೆ ಹೆಚ್ಚಿಸಲಾಯಿತು. ಈಗ ದೊಡ್ಡ ರಾಜ್ಯಗಳಲ್ಲಿ ಲೋಕಸಭಾ ಚುನಾವಣೆಯಲ್ಲಿ ಅಭ್ಯರ್ಥಿಗಳು ಮಾಡಬಹುದಾದ ಖರ್ಚು ಮಿತಿಯನ್ನು ೭೦ಲಕ್ಷಕ್ಕೆ ನಿಗದಿ ಮಾಡಲಾಗಿದೆ.

ಪ್ರಜಾವಾಣಿ ದಿನಪತ್ರಿಕೆ ಇದು ಒಳ್ಳೆಯ ಸ್ಪರ್ಧೆ ನೀಡಲು ಸಾಮಾನ್ಯ ಅಭ್ಯರ್ಥಿಯೊಬ್ಬರು ಒಗ್ಗೂಡಿಸಬಹುದಾದ ಮೊತ್ತಕ್ಕಿಂತಲೂ ಹೆಚ್ಚು ಆದರೆ, ಯಶಸ್ಸು ಕಂಡ ಸಂಸದರು ತಾವು ೫ ಕೋಟಿಯಿಂದ ೧೦ ಕೋಟಿಯವರೆಗೆ ಖರ್ಚುಮಾಡಿರುವುದಾಗಿ ನಮ್ಮ ಬಳಿ ಹೇಳುತ್ತಾರೆ. ಅಂದರೆ ಚುನಾವಣಾ ವೆಚ್ಚಗಳ ಮೇಲೆ ಈಗ ನಿಯಂತ್ರಣವೇ ಇಲ್ಲದಂತಾಗಿದೆ. ಚುನಾವಣೆಯ ಖರ್ಚುಗಳನ್ನು ನಿಭಾಯಿಸುವುದು ಸಾಮಾನ್ಯ ವ್ಯಕ್ತಿಯ ಪಾಲಿಗೆ ಸಾಧ್ಯವಿಲ್ಲದಂತಾಗಿದೆ. ರಾಜಕಾರಣಕ್ಕೆ ಶುದ್ಧ ಹಣ ಬಾರದಿದ್ದರೆ ಆ ಅಭ್ಯರ್ಥಿಗಳಿಗೆ ಹಣಕಾಸಿನ ನೆರವನ್ನು ಪಕ್ಷಗಳು ನೀಡದಿದ್ದರೆ ಇಡೀ ವ್ಯವಸ್ಥೆಯು ಸಮಾದ ಅತ್ಯಂತ ಭ್ರಷ್ಟ ಶಕ್ತಿಗಳ ಕೈವಶವಾಗಿಯೇ ಉಳಿದು ಕೊಳ್ಳುತ್ತದೆ. ಮತ್ತು ಉತ್ತಮ ಆಡಳಿತ ಎಂಬುದು ಕೈಗೆಟುಕದ ಕನಸಾಗಿಯೇ ಮುಂದುವರೆಯುತ್ತದೆ.

ಕರ್ನಾಟಕದ ಸಂದರ್ಭದಲ್ಲಿ ಗ್ರಾಮೀಣ ಅಭಿವೃದ್ಧಿಯಾಗಿಸಲು ಭಾರತದ ಕೇಂದ್ರ ಸರ್ಕಾರವು ಅನುಮೋದನಾ ಅದೇಶದಂತೆ ಭಾರತದ ಉದ್ದಗಲಕ್ಕೂ ಪಂಚಾಯತ್ ರಾಜ್ಯ ವ್ಯವಸ್ಥೆಯನ್ನು ರೂಪಿಸಿದರು. ಇದರ ಅಡಿಯಲ್ಲಿ ಕರ್ನಾಟಕ ಪಂಚಾಯ್ತಿ ರಾಜ್ಯ ವ್ಯವಸ್ಥೆಯ ೧೯೯೩ರ ಅಧಿನಿಯಮ ೭೩ನೇ ತಿದ್ದುಪಡಿ ಅಡಿಯಲ್ಲಿ ಸ್ಥಳೀಯ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಅಧಿಕಾರ ಅಂಚಿಕೆ, ಸಾಮಾಜಿಕ ಸಮಾನತೆ ಆಧಾರವಾಗಿ, ಶ್ರೇಣಿಕೃತ ಜಾತಿ ವ್ಯವಸ್ಥೆಯಲ್ಲಿ ಗ್ರಾಮಪಂಚಾಯ್ತಿಗಳಲ್ಲಿ ಮೀಸಲಾತಿ ಅಡಿಯಲ್ಲಿ ದಲಿತರಿಗೆ ಮತ್ತು ಮಹಿಳೆಯಿಗೆ ಮೀಸಲಾತಿ ಮೂಲಕ ಪ್ರತಿನಿಧಿಕರಣದ ಪ್ರಾತಿನಿಧ್ಯ ಹಾಗೂ ಪ್ರಾತಿನಿಧ್ಯದಲ್ಲಿ ಅಧಿಕಾರದ ಸ್ವಾತಂತ್ರ್ಯ ಇದರ ಜೊತೆಯಲ್ಲಿ ಸಾಮಾಜಿಕ/ ಆರ್ಥಿಕ ನೆಲೆಗಳ ಸಬಲೀಕರಣ/ಬದಲಾವಣೆ ಕಾಣುವುದು ಈ ಪಂಚಾಯತ್ ರಾಜ್ಯ ವ್ಯವಸ್ಥೆಯ ಉದ್ದೇಶವಾಗಿದೆ.

ಆದರೆ ಗ್ರಾಮೀಣ ಪ್ರದೇಶದಲ್ಲಿ ಸಾಂಪ್ರದಾಯಿಕ ಆಚರಣೆಗಳ ಮುಂದೆ ಸಂವಿದಾನಾತ್ಮಕ ಕಾನೂನುಗಳು ಮೂಲೆಗುಂಪಾಗಿವೆ. ಆಚಾರ-ವಿಚಾರ ದೊಡ್ಡ ಪ್ರಮಾಣದಲ್ಲಿ ಬೇರುಬಿಟ್ಟಿವೆ. ಶೋಷಣೆ, ದೌರ್ಜನ್ಯ, ಅಪಮಾನತೆ, ಹಸವಿ, ಬಡತನ ಎಂಬ ಅಂಶಗಳು(ಸಂಕೋಲೆಗಳಿಂದ) ಶೋಷಣೆ ಪ್ರದರ್ಶನದಿಂದ ಹೊರಗೆ ಬರಲು ಸಾಧ್ಯವಾಗುತ್ತಿಲ್ಲ. ಇದಕ್ಕೆಲ್ಲಾ ಯಜಮಾನಿಕೆ, ನಾಯಕತ್ವ, ಜಾತಿ, ಆಳುವ ವರ್ಗಗಳೇ ಕಾಣರವಾಗಿವೆ. ಈವತ್ತಿಗೂ ಯಾವ ಗ್ರಾಮ ಪಂಚಾಯ್ತಿಗಳಲ್ಲಿ ಶೋಷಣೆ, ಗುಲಾಮಗಿರಿ ಬಗ್ಗೆ ಚರ್ಚೆಗಳಾಗಿಲ್ಲ. ಪಂಚಾಯತ್ ಸದಸ್ಯರಿಗೆ ಅಲ್ಪ-ಸ್ವಲ್ಪ ಮಾತ್ರದ ಮೂಲ ಸೌಲಭ್ಯಗಳು ಸಿಕ್ಕಿರುವುದು ಬಿಟ್ಟರೆ ಅಂಬೇಡ್ಕರ್ ಕಂಡ ಪಂಚಾಯತ್ ರಾಜ್ಯ ವ್ಯವಸ್ಥೆಯಾಗಿಲ್ಲ.

ಸಾಮಾಜಿಕ ಉದ್ದೇಶಗಳಿಗಾಗಿ ವ್ಯಕ್ತಿಯು ಏಕೆ ಸಾಧನವಾಗದೆ ಲಕ್ಷ್ಯವಾಗಬೇಕು? ಈ ಪ್ರಶ್ನೆಗಳಿಗೆ ಉತ್ತರ ಪಡೆಯ ಬೇಕಾದರೆ ವ್ಯಕ್ತಿ ಎಂದು ಕರೆದಾಗ ನಮ್ಮ ಅರ್ಥವೇನು ಎಂಬುದನ್ನು ಕರಾರುವಕ್ಕಾಗಿ ತಿಳಿದುಕೊಳ್ಳುವುದು ಅತ್ಯಗತ್ಯ.

ಮಾನವ ಮತ್ತು ಮನುಷ್ಯನ ಹಕ್ಕುಗಳನ್ನು ರಕ್ಷಿಸುವ ಸಲುವಾಗಿ ನಮ್ಮ ಎಲ್ಲಾ ಅಮೂಲ್ಯ ಸಂಪತ್ತನ್ನು ಕೊನೆಗೆ ಜೀವಗಳನ್ನು ಏಕೆ ತ್ಯಾಗಮಾಡಬೇಕು? ಇದಕ್ಕೆ "ಪ್ರೊ ಜ್ಯಾಕ್ವೃಸ್" "ಮಾರಿಟೇನ್" ಕೊಟ್ಟ ಉತ್ತರಕ್ಕಿಂತ ಉತ್ತಮವಾದುದು ಬೇರೆ ಯಾವುದೂ ದೊರಕಲಾರದು. "ದಿ ಕಾಂಕ್ವೆಸ್ಟ್ ಆಫ್ ಫ್ರೀಡಂ(ಮ್)" ಎಂಬ ಪ್ರಬಂಧದಲ್ಲಿ ಹೇಳುತ್ತಾನೆ.

ಮನುಷ್ಯ ವ್ಯಕ್ತಿ ಎಂದು ಮಾತನಾಡಿದಾಗ ಸರಿಯಾಗಿ ನಮ್ಮ ಅರ್ಥ ವೇನು? ಮನುಷ್ಯ ಒಬ್ಬ ವ್ಯಕ್ತೆ ಎಂದರೆ ಅವನು ಒಬ್ಬ ವ್ಯಕ್ತೆ ಮಾತ್ರ ಎಂದು ಅರ್ಥವಲ್ಲ "ಒಂದು ಪರಮಾಣು ಒಂದು ಹುಲ್ಲಿನ ದಳ" ಒಂದು ನೊಣ ಅಥವಾ ಒಂದು ಆನೆ ಇವು ವ್ಯಕ್ತೆ ಎಂಬ ಅರ್ಥದಲ್ಲಿಲ್ಲ ಮಾನವನು ತನ್ನ ಬುದ್ಧಿ ಶಕ್ತಿ ಹಾಗೂ ಇಚ್ಛಾಶಕ್ತಿಯನ್ನು ತನ್ನ ಕೈಯಲ್ಲಿ ಇಟ್ಟು ಕೊಳ್ಳಬಲ್ಲ ವ್ಯಕ್ತಿ. ಅವನು ಕೇವಲ ಜಾತಿಕ ವಸ್ತುವಾಗಿ ಇರುವುದಿಲ್ಲ. ಜ್ಞಾನ ಪ್ರೇಮಗಳ ಮೂಲಕವಾಗಿ ಬಂದು ಆಧ್ಯಾತ್ಮಿಕ ಅತೀವ ವ್ಯಕ್ತಿತ್ವವನ್ನು ಹೊಂದಿದ್ದಾನೆ. ಇದರಿಂದಾಗಿ ಒಂದು ದೃಷ್ಠಿಯಲ್ಲಿ ಅವನು ತಾನೇ ವಿಶ್ವವಾಗಿದ್ದಾನೆ. ಸಿಂಡಾಂಡವಾಗಿದ್ದಾನೆ. ಬುದ್ಧಿಶಕ್ತಿಯಿಂದ ಬ್ರಹ್ಮಾಂಡವನ್ನು ಅವನು ಒಳಗೊಳ್ಳಬಹುದು. ತನ್ನ ಪ್ರೇಮದಿಂದ ಅವನು ತಾನೇ ಆಗಿರುವ ಇತರರಿಗೆ ತನ್ನನ್ನು ನೀಡಬಲ್ಲನು. ಈ ಸಂದರ್ಭದ ಸರಿಸಮನಾದುದು ಈ ಜಾತಿಕ ವಿಶ್ವದಲ್ಲಿ ಬೇರೆ ಯಾವುದೇ ಇಲ್ಲ. ಮಾನವನಲ್ಲಿ ಈ ಲಕ್ಷಣಗಳಿವೆ. ಗರ್ಭದಿಂದ/ಗೋರಿಯವರೆಗೆ ಅವನ ನಾಶಹೊಂದುವ ಮಾಂಸ, ಮೂಳೆ, ರಾಗಿಯನ್ನು ಆತ್ಮವು ಚಾಲನೆಗೆ ಒಳಪಡಿಸುತ್ತದೆ. ಸಜೀವಗೊಳಿಸುತ್ತದೆ. ಎಂದೆಂದಿಗೂ ಪರಮವಾಗಿರುವ ಆತ್ಮವೇ ವ್ಯಕ್ತಿತ್ವ ಬೇರು.

ಆದ್ದರಿಂದ ವ್ಯಕ್ತಿತ್ವದ ಕಲ್ಪನೆ ಸಮಗ್ರತೆ ಹಾಗೂ ಸ್ವಾತಂತ್ರವಾದ ಕಲ್ಪನೆಯನ್ನು ಒಳಗೊಳ್ಳುತ್ತದೆ. ಒಬ್ಬ ವ್ಯಕ್ತಿಯು ಎಷ್ಟೇ ಬಡವನಾಗಿರಲಿ, ಶೋಷಿತನಾಗಿರಲಿ ಅವನ ವ್ಯಕ್ತಿತ್ವ ಸಮಗ್ರವಾದದ್ದು, ಸ್ವಂತತ್ರವಾದ ರೀತಿಯಲ್ಲಿ ಉಳಿದುಕೊಂಡಿರುವಂಥದ್ದು, ಮನುಷ್ಯನು ಒಬ್ಬ ವ್ಯಕ್ತಿ ಎಂದರೆ ಅದರ ಅರ್ಥ ಅಸ್ತಿತ್ವದ ಅಂತರಾಳದಲ್ಲಿ ಅವನು ಭಾಗಕ್ಕಿಂತ ಹೆಚ್ಚು ಮಟ್ಟಿಗೆ ಪೂರ್ಣವಾಗಿದ್ದಾನೆ. "ದಾಸನಾಗಿರುವುದಕ್ಕಿಂತ" ಹೆಚ್ಚು ಮಟ್ಟಿಗೆ ಸ್ವತಂತ್ರವಾಗಿದ್ದಾನೆ. ಎಂದು ಅವನು ಬ್ರಹಾಂತವಾಗಿರುವ ಮಹದ್‌ವಸ್ತುವಿನ ಒಂದು ಸೂಕ್ಷ್ಮವಾದ ತುಣುಕು ಅವನೇ ವಿಶ್ವವಾಗಿದ್ದಾನೆ. ಅಖಂಡ ಪರಿಪೂರ್ಣದಲ್ಲಿಇ ಭಾಗವಹಿಸುವ ಒಬ್ಬ ತಿರುಪೇಯವನ್ನು" ಕೇವಲ ಬಾಹ್ಯ ಮೌಲ್ಯವುಳ್ಳ ಮಾಂಸ ಮುದ್ದೇ ಸ್ವರ್ಗವೇ ಪ್ರವೇಶಿಸುವ ಒಂದು ಗರಿಕೆಯದಳ. ಮಾನವನು ಭಗವಂತನ ಪ್ರತಿರೂಪ ಎಂದು ಧಾರ್ಮಿಕ ಚಿಂತನೆಯೆಂದು ಹೇಳುವುದು. ಈ ತಾತ್ವಿಕ ಅಚ್ಚಿಯನ್ನೇ ವ್ಯಕ್ತಿಯ ಬೆಲೆ. ಅವನ ಗಂಭೀರ್ಯ ಗೌರವಗಳು, ಹಕ್ಕುಗಳು ಇವೆಲ್ಲಾ ಸಹಜವಾಗಿಯೇ ಪವಿತ್ರ ಎಂದು ವರ್ಗಕ್ಕೆ ಸೇರಿದವು. ಸಕಲ ಜೀವಗಳ ತಂದೆಯಾದ ಭಗವಂತನ ಮುದ್ರೆಯನ್ನು ಹೊತ್ತಿರುವಂಥವು.[೬]

ಸಮಾನತೆ ಯಾಕೆ ಮೂಲಾಂಶವಾಗಿದೆ? ಎಂದು ಈ ವಿಷಯವನ್ನು ಅತ್ಯತ್ತಮ ರೀತಿಯಲ್ಲಿ "ಪ್ರೊಫೆಸರ್ ಬಿಯಾರ್ಡ್" ಸೊಗಸಾಗಿ ನಿರೂಪಿಸಿದ್ದಾರೆ "ರಾಜಕೀಯ ಚಿಂತನೆಯಲ್ಲಿ ಸ್ವಾತಂತ್ರ

(Freedom in political thought)" ಎಂಬ ಪ್ರಬಂಧದಲ್ಲಿ ಆತನು ಹೇಳಿರುವ ಮಾತುಗಳಲ್ಲಿ ಸ್ವಲ್ಪ ಭಾಗವನ್ನು ಉದ್ಧರಿಸುತ್ತಾನೆ. ತಾನು ಮಾಡಬೇಕಾದ ಕೆಲಸ ಆತ ಹೇಳುತ್ತಾನೆ. "ಸಮಾಜ ಎಂಬ ಪದವೇ ದುರದೃಷ್ಟಕರವಾದದ್ದು, ಆದರೆ ಅದಕ್ಕೆಬದಲಿಯಾಗಿ ಬೆರೆ ಪದವು ಸಿಕ್ಕುವುದಿಲ್ಲ. ಸಮಾನತೆ ಎಂದರೆ ಅಳತೆ, ಪ್ರಮಾಣ, ಸಂಖ್ಯೆ, ಪರಿಮಾಣ, ಮೌಲ್ಯ ಅಥವಾ ಗುಣ ಇವುಗಳಲ್ಲಿ ಒಂದೇ ಆಗಿರುವುದು ಅಥವಾ ಅದಕ್ಕೆ ಏಣಿಯಾಗಿರುವುದು. ಜಾತವಿಜ್ಞಾನದಲ್ಲೋ, ಗಣಿತ ವಿಜ್ಞಾನದಲ್ಲೋ ಅದು ಕರಾರುವಕ್ಕಾಗುವುದಿಲ್ಲ.

ಭಾರತದ ಸಂದರ್ಭದಲ್ಲಿ ಅಂಬೇಡ್ಕರ್ ಅವರ ಹಿಂದೂ ಸಮಾಜದ ಲಕ್ಷಣಗಳು ಮತ್ತು ಸಾಮಾಜಿಕ ವ್ಯವಸ್ಥೆಯು ವ್ಯಕ್ತಿಗೆ ಪ್ರಾಧಾನತೆ ನೀಡಬೇಕು ಎಂದು ಹೇಳುತ್ತಾರೆ. ಎರಡನೆಯದು ಸಮಾಜದ ಧ್ಯೇಯಗಳು. ಸಮಾಜವು ವ್ಯಕ್ತಿಗಿಂತ ಮೇಲಲ್ಲ. ಮತ್ತೊಂದು ರೀತಿ ಹೇಳಿದ್ದಾರೆ. ಆದರೆ ಸಮಾಜ ಸಮಾಜಕ್ಕೆ ಮೊದಲನೆಯ ಆದ್ಯತೆ ನೀಡಿ. ಧರ್ಮಾಚಾರಣೆಗಳಿಂದ ಶೋಷಣೆಯನ್ನು ಹುಟ್ಟುಹಾಕುತ್ತಿದೆ. ಹಾಗಾದರೆ ವ್ಯಕ್ತಿಯು ಸಾಮಾಜಿಕ ಉದ್ದೇಶಕ್ಕಾಗಿ ಯಾಕೆ ಮನುಷ್ಯ ಸಾಧನವಾಗಿಸಬಾರದು. ಸಾಮಾಜಿಕ ಚಿಂತನೆ ಮತ್ತು ಸಮಾನತೆಯು ಹಿಂದೂ ಧರ್ಮದ ಶ್ರೇಷ್ಠತೆಯಲ್ಲಿ ಸಿಕ್ಕಿಕೊಂಡಿದೆ. ಇದರಿಂದ ಮಾನವ–ಮಾನವ ಸಂಬಂಧ ಸಮಾಜಗಳ ಸಮಾನತೆಯ ನೆಲೆಗಳಿಗೆ ವಿರುದ್ಧವಾಗಿ ಇವು ಮಾನವನ ಹಕ್ಕುಗಳನ್ನು ರಕ್ಷಿಸಲು ಬಿಡುವುದಿಲ್ಲ. ದೇವರ ಹೆಸರಲ್ಲಿ ಮಾನವನನ್ನು ಮಾನವ ಸಂಪನ್ಮೂಲಗಳನ್ನು ಹಿಂದೂ ಧರ್ಮದ ಹಿಡಿತದಲ್ಲಿರಿಸಿಕೊಂಡಿದೆ.

ಈ ವಿಷಯದಲ್ಲಿ ಸಮಾನತೆ ಯಾಕೆ ಮೂಲಂಶವಾಗಿದೆ? ಇದರ ಬಗ್ಗೆ 'ಪ್ರೊಫೆಸರ್ ಬಿಲಿಯಾರ್ಡ್' ಬಹಳ ಸೊಗಸಾಗಿ ಹೇಳಿದ್ದಾರೆ. "ರಾಜಕೀಯ ಚಿಂತನೆಯಲ್ಲಿ ಸ್ವಾತಂತ್ರ್ಯ (Freedom in political thought) ಎಂಬ ಪ್ರಬಂಧದಲ್ಲಿ ಉಲ್ಲೇಖಿಸಿದ್ದಾರೆ ಇದನ್ನೇ ಅಂಬೇಡ್ಕರ್ ಅವರು ಒಪ್ಪಿದ್ದಾರೆ. ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಚಿಂತನಾ ಕೆಲಸ ಪ್ರತಿಯೊಬ್ಬ ಮತದಾರನ ಶೋಷಣೆಯನ್ನು ಪ್ರಶ್ನಿಸುವ ಪರಿಹಾರ ಕೇಳುವ ಹಾಗೂ ಅಧಿಕಾರಕ್ಕೆ ಬರುವ ಸಾಮರ್ಥ್ಯ ಬರುತ್ತದೆ. ಅದಕ್ಕೆ ಆಳುವ ವರ್ಗಗಳು ಇದಕ್ಕೆ ಪ್ರಾಧಾನ್ಯತೆ ನೀಡುವುದಿಲ್ಲ.

ಭಾರತದಲ್ಲಿ ಕೇಂದ್ರ ಸರ್ಕಾರ ರೂಪಿಸಿಕೊಟ್ಟ ಸ್ಥಳೀಯ ಸರ್ಕಾರಗಳು ೧೯೯೨/೯೩ರ ಅಧಿನಿಯಮ ಕಾಯ್ದೆ ಅಡಿ ೭೩/೭೪ರ ತಿದ್ದುಪಡಿ ಗ್ರಾಮೀಣ ಪ್ರದೇಶಗಳ ಸಮುದಾಯಗಳ ಸಬಲೀಕರಿಸುವ ಹಾಗೂ ಸಮಾನತೆಗಾಗಿ ಗ್ರಾಮೀಣ ಸರ್ಕಾರಗಳನ್ನು ಅನುಷ್ಠಾನಗೊಳಿಸಿದರು. ಆದರೆ ಅಧಿಕಾರ ಹಂಚಿಕೆ ಸಾಮಾಜಿಕ ನ್ಯಾಯ, ಆರ್ಥಿಕ ಸಬಲೀಕರಣ ಉಪಕಾರಿಯಾಗಿದೆ. ದಲಿತರ ಪಾಲಿಗೆ ಸಮಾನತೆ ಎಂಬ ಪದವು ದುರಾದೃಷ್ಟಕರವಾಗಿದೆ. ಹಾಗೂ ಕಲ್ಲು ಬಂಡೆಯ ಮೇಲೆ ಬೆಳೆ ಬೆಳದಂತಿದೆ. ಇದಕ್ಕೆಲ್ಲ ಕಾರಣ ಜಾತಿ ಸಂಕೋಲೆಗಳಾಗಿವೆ. ಇದರಿಂದ ಮುಕ್ತಿಗಳಿಸಲು ಮಾನವನನ್ನು ಮಾನವನಾಗಿಸಲು ಕೇಂದ್ರ/ರಾಜ್ಯ ಸರ್ಕಾರಗಳಿಂದ ಹಾಗೂ ಪಂಚಾಯತ್ ರಾಜ್ಯ ವ್ಯವಸ್ಥೆಯಿಂದ ಸಾಧ್ಯವಾಗುತ್ತಿಲ್ಲ. ಇವು ಕೇವಲ ಅಲ್ಪ ಪ್ರಮಾಣದ ಮೂಲಭೂತ ಸೌಲಭ್ಯಗಳನ್ನು

ಒದಗಿಸುವುದಾಗಿದೆ. ಉಳಿದಂತೆ ಅಸಮಾನತೆ ನೆಲೆಗಳಿಂದ ಬಿಡುಗಡೆಗೊಳಿಸಿ, ಸಮಾನತೆಯ ನೆಲೆಯಾಗಿಸುವುದರಲ್ಲಿ ಭಾರತ ಸರ್ಕಾರಗಳು ಸೋತಿವೆ. ವ್ಯಕ್ತಿಯನ್ನು ವ್ಯಕ್ತಿಯಾಗಿ ನೋಡದೆ ದಲಿತರನ್ನು ನಿರ್ಜೀವ ವಸ್ತುಗಳಂತೆ ನೋಡುತ್ತಿದೆ. ಆದರೆ ಗ್ರಾಮ ಪಂಚಾಯ್ತಿಗಳಲ್ಲೇ ಶೋಷಣೆ ಉಗಮವಾಗಿರುವುದರಿಂದ ಗ್ರಾಮಪಂಚಾಯ್ತಿ ಸರ್ಕಾರಗಳಿಂದ ಸಮಾನತೆ ತರಲು ಸಾಧ್ಯವೇ? ಯಜಮಾನಿಕೆಗಳು ಈ ದೇಶದಲ್ಲಿ ಇರುವವರೆಗೂ ಅದು ಸಾಧ್ಯವಿಲ್ಲ.

ದಲಿತರ ಸಮಕಾಲೀನ ಪರಿಸ್ಥಿತಿಯ ವಸ್ತುಸ್ಥಿತಿಗಳು ಹಾಗೂ ನೆಲೆಗಟ್ಟು ಸಾಕಷ್ಟು ವಿರೋಧಭಾಸ ಗಳಿಂದ ಕೂಡಿದೆ. ದೇಶದ ಬಹುತೇಕ ಭಾಗಗಳಲ್ಲಿ ಜಾತಿ ತಾರತಮ್ಯವು ಇಂದಿಗೂ ಜೀವಂತವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಂತೂ ಈ ಪಿಡುಗು ತೀವ್ರ ಸ್ವರೂಪದಲ್ಲಿಯೇ ಇದೆ. ಅಸ್ಪೃಶ್ಯತೆಯನ್ನು ಅಧಿಕೃತವಾಗಿ ನಿಷೇಧಿಸಲಾಗಿದೆಯಾದರೂ ಅದನ್ನೂ ಸಾಮಾಜಿಕವಾಗಿ ಪ್ರತಿಯೊಂದು ದೈನಂದಿನ ವ್ಯವಹಾರದಲ್ಲಿ ಬಹುತೇಕ ಗ್ರಾಮೀಣ ಪರಿಸರದಲ್ಲಿ ಅಸ್ತಿತ್ವದಲ್ಲಿದೆ. ದಲಿತರು ನೆಲೆಸಿರುವ ಪ್ರದೇಶಗಳು ಅದರ ಹೆಸರುಗಳಲ್ಲಿ ಮಾತ್ರ ಬದಲಾವಣೆಯಾಗಿವೆ. ಆದರೆ ದಲಿತರು ವಾಸವಾದ ಮನೆಗಳು ಈಗಲೂ ಹಳ್ಳಿಯ ಹೊರವಲಯದಲ್ಲಿ ಪ್ರತ್ಯೇಕ ಕಾಲೋನಿಗಳಲ್ಲಿಯೇ ಇದ್ದಾರೆ. ಜಾತಿ ತಾರತಮ್ಯವು ಆಗಾಗ್ಗೆ ಹಿಂಸಾತ್ಮಕ ರೂಪದಲ್ಲಿ ಪ್ರಕಟಗೊಳ್ಳುತ್ತಿವೆ. ದಲಿತರ ವಿರುದ್ಧ ಜಾತಿಯಾಧಾರಿತ ಅಪರಾಧಗಳು ವ್ಯಾಪಕವಾಗಿ ನಡೆಯುತ್ತಲೇ ಇವೆ. ಕೊಲೆಗಳು, ಅಂಗಚ್ಛೇದನಗಳು, ದೈಹಿಕ ಹಲ್ಲೆಗಳು, ಸೇಡಿನ ಅತ್ಯಾಚಾರಗಳು, ಸಾಮಾಜಿಕ ಬಹಿಷ್ಕಾರಗಳು, ದಲಿತರ ಮನೆ ಮತ್ತು ಬೆಳೆಗಳಿಗೆ ಬೆಂಕಿಹಾಕುವುದು ನಿಯಮಿತವಾಗಿ ನಡೆಯುತ್ತಲೇ ಇದೆ. ದೇಶದಲ್ಲಿ ಅತ್ಯಂತ ಅಭಿವೃದ್ಧಿ ಹೊಂದಿದ ದಲಿತರು ಅವರ ಆದಾಯ ಅತ್ಯಂತ ಕಡಿಮೆ. ಬಡತನ ಅತ್ಯಧಿಕ ತೀವ್ರ, ಭೂ ರಹಿತರ ಪ್ರಮಾಣ ಅಗಾದ, ಅರೆ ಉದ್ಯೋಗ, ನಿರುದ್ಯೋಗ ತೀರಾ ಸಾಮಾನ್ಯ ಪ್ರಾಥಮಿಕ ಹಂತದ ಬಳಿಕ ಶಾಲೆ ಬಿಡುವ ದಲಿತ ಮಕ್ಕಳ ಸಂಖ್ಯೆ ಗಾಬರಿಯಾಗುವಷ್ಟು ಅಪಾಯ. ಈ ಹಿನ್ನೆಲೆಯಲ್ಲಿ ಭಾರತೀಯರಾದ ನಾವುಗಳು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನ ಬದ್ಧವಾದ ರೀತಿಯಲ್ಲಿ ಹಿಂದುತ್ವ ಮತ್ತು ದಲಿತರು ಯಾವ ರೂಪದಲ್ಲಿ ಕೋಮುವಾದದ ರಾಜಕಾರಣದಲ್ಲಿ ದಲಿತರು ಅನುಭವಿಸಿಕೊಂಡು ಬರುತ್ತಿರುವ ಅಪಮಾನದ ಸಂಕಷ್ಟಗಳಿದ್ದಂತೆ. ಭಾರತದಲ್ಲಿ ೧೯೯೩ರ ೭೩/೭೪ರ ಪಂಚಾಯತ್ ರಾಜ್ಯ ವ್ಯವಸ್ಥೆ ಗ್ರಾಮೀಣ ಅಭಿವೃದ್ಧಿ, ಅಧಿಕಾರ ವಿಕೇಂದ್ರಿಕರಣದ ಬಗ್ಗೆ ಇರುವ ಪಕ್ಷಪಾತ ದಲಿತರ ಬಡವರ ಪ್ರಶ್ನೆ ಈ ಮೇಲ್ಕಂಡಂತಿದೆ. ಉಳಿದಂತೆ ಮೀಸಲಾತಿಯನ್ನು ಕೂಡ ಆಳುವ ವರ್ಗಗಳ ಹಿಡಿತದಲ್ಲಿರುವುದರಿಂದ ಅಧಿಕಾರ, ಅಭಿವೃದ್ಧಿ ಸರಿಯಾಗಿ ಉಪಯೋಗವಾಗುತ್ತಿಲ್ಲ.[೭]

ವೇದಗಳು ಹಿಂದೂಗಳ ಪವಿತ್ರ ಗ್ರಂಥಗಳು. ಈ ಗ್ರಂಥಗಳಿಗೆ ಸಂಬಂಧಪಟ್ಟಂತೆ ಹಲವು ಪ್ರಶ್ನೆಗಳಿವೆ. ಅದರ ಮೊದಲ ಕರ್ತೃ ಯಾರು? ಅವುಗಳ ಪರಮಾಧಿಕಾರದ ಮೂಲವೇನು? ಸನಾತನವನ್ನು ಕಾಪಾಡಿಕೊಂಡು ಬರುವುದು. ಆದಿಯಿಂದ ನಿರಂತರತೆ ಕಾಪಾಡುವುದು. ನಂಬಿಕೆಗೆ ಅರ್ಥಪೂರ್ಣವೇದ ಒಂದು ಹೇಳಿಕೆಯ ಆಧಾರವನ್ನು ಬಿಟ್ಟು ಇನ್ನಾವ ಆಧಾರವೂ ಇಲ್ಲ. ಹೀಗೆ

ಅರ್ಥಪೂರ್ಣ ವೇದ ಹೇಳುತ್ತಿದೆ. ಈ ವಿಷಯವನ್ನು ಕುರಿತು "ಪ್ರೊ ವಿಲ್ಸನ್" ರವರು ಹೀಗೆ ಹೇಳಿದ್ದಾರೆ. ಯಾವುದೇ ತತ್ವವಾಗಲಿ, ಸಿದ್ಧಾಂತವಾಗಲಿ, ಜನ್ಮಾಂತರಗಳ ಸೂಚನೆಯಾಗಲಿ, ಅಥವಾ ಜಗತ್ತಿನ ಶುದ್ಧಿಯ ಪುನರಾವರ್ತನೆಯ ಸೂಚನೆಯಾಗಲಿ, ವೇದಗಳಲ್ಲೆಲ್ಲಾ ಬಹು ಮುಖ್ಯವಾದ ವೇದವಾದ ಋಗ್ವೇದದಲ್ಲಿ ಕೂಡಾ ಕಾಣುವುದಿಲ್ಲ. ಆರ್ಯರ ಸಾಮಾಜಿಕ ಜೀವನವನ್ನು ಅರಿಯಲು ವೇದಗಳು ಸಹಾಯಕವಾಗಬಲ್ಲವೆಂಬುದು ನಿಜ. ಆದರೆ ಮೂಲವಾಸಿಗಳ ಚಿತ್ರ ಕುರಿತಂತೆ ಅಲ್ಲಿ ಕುತೂಹಲವೇ ಹೆಚ್ಚು ತುಂಬಿದೆಯೇ ಹೊರತು ಅವರನ್ನು ಕುರಿತು ಹೆಚ್ಚು ಹೆಚ್ಚು ಬೆಳಕು ಚೆಲ್ಲುವ ಪ್ರಯತ್ನಗಳು ಆಗಿಲ್ಲ. ಅಲ್ಲಿ ಕಾಣುವ ಸದ್ಗುಣಗಳಿಗಿಂತ ಅವಗುಣಗಳೆ ಹೆಚ್ಚು. ವಿಲಿಯಟ್ ಬ್ರಿಟನ್ನಿನಲ್ಲಿ ನೆಲೆಸಿದ ಅಮೇರಿಕನ್ ಸಂಜಾತವಾದರೆ ಜಾನ್ ಕಾಪರ್ ಮೊವೆಸ್(೧೮೭೨-೧೯೬೩) ಅಮೇರಿಕಾದಲ್ಲಿ ನೆಲೆಸಿದ ಬ್ರಿಟನ್ ಸಂಜಾತ(ಸಂಸ್ಕೃತಿಯ ಅರ್ಥ) ಎನ್ನುವ ತನ್ನ ಕೃತಿಯ ವಾಖ್ಯಾನವೊಂದರಲ್ಲೇ ಸಂಸ್ಕೃತಿಯ ಅರ್ಥವನ್ನು ಅವೈಚಾರಿಕವಾಗಿ ಗ್ರಹಿಸುವ ಪ್ರಯತ್ನವು ಯುಕ್ತವಾದುದಲ್ಲ. ಎಂದು ಹೇಳಿ ಹಲವಾರು ವಾಖ್ಯಾನಗಳನ್ನು ನೀಡುತ್ತಾನೆ. ಸಂಸ್ಕೃತಿಯು ಧರ್ಮಕ್ಕೆ ಪರ್ಯಾಯವಾದದ್ದು. ಆಧುನಿಕ ಸನ್ನಿವೇಶ ನಮ್ಮ ಬದುಕಿನಲ್ಲಿ ಧರ್ಮಶ್ರದ್ಧೆಯು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿರುವುದರಿಂದ ಧರ್ಮವು ಕೇವಲ ಒಂದು ಆದರ್ಶ ಎನ್ನುವುದು ಒಂದು ವಾಖ್ಯಾನವಾದರೆ, ಮತ್ತೊಂದರಂತೆ ಸಂಸ್ಕೃತಿಯು ಒಂದು ಬಗೆಯ ಕಾವ್ಯಾತ್ಮಕ ಮಾನವತಾವಾದ, ಇನ್ನೊಂದರಂತೆ ಇದು ಕಲೆ ಮತ್ತು ಸಾಹಿತ್ಯಗಳ ಸಂಸರ್ಗದಿಂದ ಸಮೃದ್ಧಗೊಳ್ಳುವುದರ ಜೊತೆಗೆ ಸ್ವಾಭಾವಿಕತೆಯನ್ನು ಮೀರಿದ ವಾಖ್ಯಾನಗಳು ಮಂಜು-ಮುಸುಕದ ಪ್ರಾತಃಕಾಲದಂತೆ ಸೌಂದರ್ಯವನ್ನೂ ಅಸ್ಪಷ್ಟತೆಯನ್ನೂ ಒಳಗೊಂಡ ಕಥಾನಕಗಳೇ ಆಗಿವೆ.[೮]

"ಭಾರತದಲ್ಲಿ ಪ್ರಜಾಪ್ರಭುತ್ವ" ಪ್ರಜಾ ಪ್ರಭುತ್ವವನ್ನು "ರಿಪಬ್ಲಿಕ್" ಎಂದಾಗಲೀ ಅಥವಾ ಸಂಸಧೀಯ ಸರ್ಕಾರದ ಸಮವೆಂದಾಗಲೀ ಪರಿಗಣಿಸಬಾರದು. ಪ್ರಜಾಪ್ರಭುತ್ವವು ಬರೀ ಸರ್ಕಾರ, ಸಂಸತ್ತು ಅಥವಾ ಅಂಥದೇ ವ್ಯವಸ್ಥೆಯ ರೂಪದಲ್ಲಿರುವುದಿಲ್ಲ. ಪ್ರಜಾಪ್ರಭುತ್ವ ಸರ್ಕಾರದ ಸ್ವರೂಪಕ್ಕಿಂತ ಬಹುದೊಡ್ಡದು. ಅದು ಮೂಲತಹ ಸಾಮರಸ್ಯದಿಂದ ಬದುಕುವ ಜೀವನ ವಿಧಾನ. ಹೊಂದಿಕೊಂಡು ಬದುಕುವ ಜನರ ಸಾಮಾಜಿಕ ಸಂಬಂಧಗಳಲ್ಲಿ ಪ್ರಜಾಪ್ರಭುತ್ವ ಬೇರುಗಳನ್ನು ಹುಡುಕಬೇಕು.

ಭಾರತೀಯ ಸಮಾಜವು ಸಾವಿರಾರು ಜಾತಿಗಳಿಂದ ತುಂಬಿದೆ. ಅವು ಪ್ರತ್ಯೇಕತೆಯಿಂದಲೆ ಉಸಿರಾಡುತ್ತವೆ. ಜಾತಿ ಪದ್ದತಿ ಇದೆ ಎಂಬುದೇ ಸಾಮಾಜಿಕ ಆದರ್ಶಗಳನ್ನು ತನ್ಮೂಲಕ ಪ್ರಜಾ ಪ್ರಭುತ್ವವನ್ನು ತಿರಸ್ಕರಿಸಿದಂತೆ ಭಾರತೀಯ ಸಮಾಜದಲ್ಲಿ ಜಾತಿ ಪದ್ಧತಿ ಎಷ್ಟು ಆಳವಾಗಿ ಬೇರು ಬಿಟ್ಟಿದೆ ಎಂದರೆ ಎಲ್ಲವೂ ಜಾತಿ ಆಧಾರದ ಮೇಲೆಯೇ ನಡೆಯುತ್ತಿದೆ. ಜಾತಿ ಪದ್ಧತಿಯಿಂದ ಭಾರತೀಯನೊಬ್ಬ ತನಗಿಷ್ಟ ಬಂದವರನ್ನು ಮುಟ್ಟುವಂತಿಲ್ಲ, ಮದುವೆಯೂ ಆಗುವಂತಿಲ್ಲ, ಜಾತಿ ಪದ್ಧತಿ ಚುನಾವಣೆ ವಾಣಿಜ್ಯೋದ್ಯಮ, ಕೊನೆಗೆ ದಾನದತ್ತಿನೀಡುವಲ್ಲಿಯೂ ತನ್ನ ಪ್ರಭಾವ ಹೊಂದಿದೆ. ಜಾತಿ ಪದ್ಧತಿ ಎಂದರೆ ಏರಿಕೆಯ ಕ್ರಮದಲ್ಲಿರುವ ದ್ವೇಶ ಮತ್ತು ಇಳಿಕೆ ಕ್ರಮದಲ್ಲಿರುವ ತೃಪ್ತಿ.[೯]

ಹೀಗೆ ಭಾರತದ ಸಂದರ್ಭದಲ್ಲಿ ಶ್ರೇಣೀಕೃತ ಜಾತಿ ವ್ಯವಸ್ಥೆಯು ಸಾಮಾಜಿಕವಾಗಿ ತಳಸಮುದಾಯ ಗಳ ಸಬಲೀಕರಣ, ಅಧಿಕಾರ ಹಂಚಿಕೆ, ಎಂಬ ಪ್ರಜಾಪ್ರಭುತ್ವದ ಪಂಚಾಯತ್ ರಾಜ್ಯ ವ್ಯವಸ್ಥೆಯು ಗ್ರಾಮೀಣ ಅಭಿವೃದ್ಧಿಗಾಗಿ ೧೯೯೩ರ ೭೩/೭೪ ಕಾಯ್ದೆಯು ಭಾರತದ ಉದ್ದಗಲಕ್ಕೂ ಅಧಿಕಾರ ವಿಕೇಂದ್ರೀಕರಣಗೊಳಿಸಲು ಹೊರಟಿದೆ. ಆದರೆ ಅದಕ್ಕೆ ಬದಲಾಗಿ ಸಾಮಾಜಿಕ ವ್ಯವಸ್ಥೆಯ ನೆಲೆಗಳು ಬಹಳ ಬಲವಾಗಿ ಬೆಳೆದು ಸಂವಿಧಾನಿಕ ಹಕ್ಕುಗಳನ್ನು ಪಡೆಯುವುದರ ಬದಲು ಶ್ರೇಷ್ಠ-ಕನಿಷ್ಠಗಳನ್ನು ಪ್ರತಿಷ್ಠೆಯಾಗಿಸಿಕೊಂಡಿದೆ. ಇವುಗಳ ಮಧ್ಯದಲ್ಲಿ ಆಳುವ ವರ್ಗ ಸಂದರ್ಭಕ್ಕೆ ತಕ್ಕಂತೆ ಚುನಾವಣೆಗಳಿಗೆ ಪಕ್ಷದ ಗೆಲಿವಿಗಾಗಿ ಎಸ್‌ಸಿ/ಎಸ್‌ಟಿ ಸಮುದಾಯಗಳನ್ನು ಬಳಸಿಕೊಳ್ಳುತ್ತಿದೆ. ಇದನ್ನೇ ಅಧಿಕಾರ ವಿಕೇಂದ್ರೀಕರಣದ ಸಾಮಾಜಿಕ, ಆರ್ಥಿಕ, ರಾಜಕೀಯ ಸಬಲೀಕರಣವೆಂದು ಭಾವಿಸಬೇಕಾಗಿದೆ.

೬.೫. ದಲಿತರ ಭಾಗವಹಿಸುವಿಕೆ

ಹಿಂದೂ ಸಾಮಾಜಿಕ ವ್ಯವಸ್ಥೆಯು ದಲಿತರ ಮೇಲೆ ನಡೆಸುತ್ತಿರುವ ಅಕ್ರಮಗಳನ್ನು ಸ್ವಲ್ಪ ಮಾತ್ರವಲ್ಲ ಇದರ ಜೊತೆಯಲ್ಲಿ ಸವರ್ಣೀಯ ಹಿಂದೂ ನಾಯಕರೂ ಸಹ ತಳ ಸಮುದಾಯಗಳ ಮೇಲೆ ವಿಭಿನ್ನವಾದ ಭಿನ್ನಾಭಿಪ್ರಾಯಗಳಿವೆ. ದಲಿತ ಸಮುದಾಯದಲ್ಲಿ ಪ್ರಜ್ಞಾವಂತರನ್ನು ಕಂಡರೆ ಕಹಿಯಾದ ರೂಪದಲ್ಲಿ ನಡೆಸಿಕೊಳ್ಳುತ್ತಾರೆ. ಆದರೆ ಸ್ಥಳೀಯವಾಗಿ ಆಳುವ ವರ್ಗಗಳು ವ್ಯಕ್ತಿಗಳನ್ನು ವ್ಯಕ್ತಿಯಾಗಿಸದೆ. ವೃತ್ತಿ ಮತ್ತು ಜಾತಿ ಆಧಾರಿತವಾಗಿ ಗುರುತಿಸುತ್ತಾರೆ. ಧರ್ಮ, ಧಾರ್ಮಿಕ, ಸಾಮಾಜಿಕ, ಸಂಸ್ಕೃತಿ, ಜಾತಿ ಸಂಕೇತಗಳಿಂದ ಗ್ರಾಮ ಸಮಾಜದಿಂದಲೇ ಜನಾಂಗೀಯ ಗುರುತಿನ ಪ್ರಶ್ನೆಗಳು ಪ್ರಾರಂಭವಾಗುತ್ತವೆ. ಈ ರೀತಿಯಾದ ನೆಲೆಗಳಿಂದ ಕೂಡಿದ ತಳಸಮುದಾಯಗಳ ಜನಸಮೂಹವನ್ನು ಹೇಗೆ ಅಭಿವೃದ್ಧಿಪಡಿಸಲಾಗುತ್ತದೆ. ಸಮಾಜದಲ್ಲಿ ಸಮಾನತೆಯ ಸ್ಥಾನಗಳನ್ನು ಹೇಗೆ ನೀಡಲಾಗುತ್ತಿದೆ. ಗಾಂಧೀಜಿಯ ಗ್ರಾಮ ಸ್ವರಾಜ್ಯವಾಗಿಸುವುದು ಹೇಗೆ? ಹೇಗೆ ಹಿಂಸೆ ಮತ್ತು ಶೋಷಣೆಗಳನ್ನು ಒಪ್ಪಿಕೊಂಡು ಅನುಭವಿಸಿಕೊಂಡು ಹೋಗುವುದು. ಅಂಚಿನ ಸಮುದಾಯಗಳಿಗೆ ಸಮಾಜದೊಂದಿಗೆ ಹೊಂದಿಕೊಂಡು ನಡೆಯುವುದು ಮಾನವಹಕ್ಕುಗಳ ಭಾಗವಹಿಸುವಿಕೆಯೇ? ಹೀಗಾಗಿ ಕರ್ನಾಟಕದ ಸಂದರ್ಭದಲ್ಲಿ ರೂಪಿಸಿದ ೧೯೯೩ರ ಅಧಿನಿಯಮ ೭೩ನೇ ತಿದ್ದುಪಡಿಯು ದಲಿತರ ಪಾಲಿಗೆ ನೀಡಿರುವ ರಾಜಕೀಯ ಸ್ವಾತಂತ್ರ್ಯ ಮತ್ತು ಆರ್ಥಿಕ ಸಬಲೀಕರಣದ ಉದ್ದೇಶ ವಾಗಿದ್ದರೂ ಕರ್ನಾಟಕದ ಗ್ರಾಮ ಪಂಚಾಯ್ತಿ ವ್ಯವಸ್ಥೆಯಲ್ಲಿ ದಲಿತರ ಪಾಲ್ಗೊಳ್ಳುವಿಕೆಯ ಆದೇಶವನ್ನು ಪಾಲಿಸುವಂತ ಗುಲಾಮರಂತಿದೆ. ಆದರೆ ಈ ಕಾಯ್ದೆಯಲ್ಲಿ ಹೆಸರಿಗೆ ಮಾತ್ರ ಮೀಸಲಾತಿ ಎಂದು ಒಪ್ಪಿಸಿ ಆಡಳಿತದ ಸ್ವಾತಂತ್ರ್ಯವೆಲ್ಲವೂ ಮೇಲ್ ವರ್ಗಗಳದ್ದಾಗಿದೆ. ಹೀಗೆ ಪಂಚಾಯತ್ ರಾಜ್ಯ ವ್ಯವಸ್ಥೆಯು ಸಾಮಾಜಿಕ ಕಟ್ಟುಪಾಡುಗಳೊಂದಿಗೆ ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ದಲಿತ ವರ್ಗಗಳು ಗ್ರಾಮಪಂಚಾಯಿತಿ ವ್ಯವಸ್ಥೆಯಲ್ಲಿ ವಿಮೋಚನೆಗೊಳ್ಳುವ ಬದಲು ಇನ್ನೊಂದು ಗುಲಾಮಗಿರಿಯ ಪ್ರತಿನಿಧೀಕರಣದ ಭಾಗವಹಿಸುವಿಕೆಯಾಗಿದೆ.

೬.೬. ಸ್ಥಳೀಯ ಸರಕಾರದಲ್ಲಿ ದಲಿತರ ರಾಜಕೀಯ ಪ್ರಾತಿನಿಧ್ಯ

ಸಂವಿಧಾನದ ೭೩ನೇ ತಿದ್ದುಪಡಿಯ ಮೂಲಕ ದೇಶದ ಇತಿಹಾಸದಲ್ಲಿ ಮೊದಲ ಬಾರಿಗೆ ಸ್ಥಳೀಯ ಸರಕಾರದಲ್ಲಿ ಅಧಿಕಾರದಿಂದ ವಂಚಿತರಾದವರಿಗೆ ಅಧಿಕಾರದ ಹತ್ತಿರ ಸುಳಿಯುವಂತೆ ಮಾಡಲಾಯಿತು. ಸಾವಿರಾರು ವರ್ಷಗಳಿಂದ ಕೆಳವರ್ಗದವರು, ಮಹಿಳೆಯರನ್ನು ಸ್ಥಳೀಯ ಅಧಿಕಾರದಿಂದ ದೂರವೇ ಇಡಲಾಗಿತ್ತು. ೧೯೮೯ರಲ್ಲಿ ಆಗಿನ ಪ್ರಧಾನಿ ರಾಜೀವಗಾಂಧಿ ಸ್ಥಳೀಯ ಸರಕಾರ ಬಲಪಡಿಸುವುದರ ಜೊತೆಗೆ ಜನರನ್ನು ಒಳಗೊಳ್ಳುವ ಅಭಿವೃದ್ಧಿಯ ಕನಸ್ಸು ಕಂಡರು. ಅವರ ಕನಸ್ಸನ್ನು ೧೯೯೨ ಪ್ರಧಾನಿ ಪಿ.ವಿ ನರಸಿಂಹರಾವ್ ಸಂವಿಧಾನದ ೭೩ನೇ ತಿದ್ದುಪಡಿಯನ್ನು ಸಂಸತ್ತಿನಲ್ಲಿ ಅಂಗೀಕಾರ ಪಡೆದರು. ಇದು ೨೪.೦೪.೧೯೯೩ರಿಂದ ಜಾರಿಗೆ ಬಂದಿದೆ.. "ದಿ ಪಂಚಾಯಿತ್ಸ್" ಎಂಬ ಶೀರ್ಷಿಕೆಯನ್ನು ಒಳಗೊಂಡ IXನೇ ಭಾಗವನ್ನು ಸೇರಿಸಿ ೨೪೩ ರಿಂದ ೨೪೩–೦ ವರೆಗೆ ೧೬ ಹೊಸ ವಿಧಿಗಳನ್ನು ಸೇರಿಸಲಾಗಿದೆ.

ಇದರಲ್ಲಿ ಸಂವಿಧಾನ ೭೩ನೇ ತಿದ್ದುಪಡಿಯ ಮೂಲಕ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ದೇಶದ ಇತಿಹಾಸದಲ್ಲಿ ಮೊದಲ ಬಾರಿಗೆ ಸ್ಥಳೀಯ ಸರಕಾರದಲ್ಲಿ ಪ್ರಾತಿನಿಧ್ಯವಯಿಸಲಾಯಿತು. ಸಂವಿಧಾನದ ೨೪೩–ಡಿ ಮೀಸಲು ಸ್ಥಾನಗಳ ಬಗ್ಗೆ ವಿವರಿಸುತ್ತದೆ. ಪ್ರತಿ ಹಂತದ ಪಂಚಾಯಿತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಕೆಲವು ಸದಸ್ಯ ಸ್ಥಾನಗಳನ್ನು ಮೀಸಲಿಡಬೇಕು. ಈ ವರ್ಗಗಳಿಗೆ ನಿಗದಿಪಡಿಸುವ ಒಟ್ಟು ಮೀಸಲು ಕ್ಷೇತ್ರಗಳಲ್ಲಿ ೧/೩ಕ್ಕಿಂತ ಇಲ್ಲದಂತೆ ಆ ವರ್ಗಗಳ ಮಹಿಳೆಯರಿಗೆ ಮೀಸಲು ಸ್ಥಾನಗಳ ಅವಕಾಶವಿದೆ. ಅಲ್ಲದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು ಮಹಿಳೆಯರಿಗೆ ಮೀಸಲಿಡುವ ಸ್ಥಾನಮಾನಗಳನ್ನು ಸೇರಿದಂತೆ ಇತರೆ ಮಹಿಳಾ ಮೀಸಲಿಡುವ ಸ್ಥಾನಗಳು ಇತರೆ ಹಂತದ ಪಂಚಾಯತ್‌ಗಳಲ್ಲಿ ಮಹಿಳೆಯರಿಗೂ ಎಲ್ಲಾ ಹಂತದ ಪಂಚಾಯತ್‌ಗಳಲ್ಲಿ ೧೧೩ಕ್ಕಿಂತ ಕಡಿಮೆ ಇಲ್ಲದಂತೆ ಅ ಸ್ಥಾನಗಳನ್ನು ಕಾಯ್ದಿರಿಸಬೇಕು.

ಮೀಸಲು ಕ್ಷೇತ್ರಗಳನ್ನು ಸರದಿ ಆಧಾರದ ಮೇಲೆ ಬದಲಾಯಿಸಲು ಅವಕಾಶ ಇದೆ. ರಾಜ್ಯ ಶಾಸಕಾಂಗ ಮಾಡುವ ಕಾನೂನು ಅನ್ವಯ ಎಲ್ಲಾ ಹಂತದ ಪಂಚಾಯತ್‌ಗಳ ಅಧ್ಯಕ್ಷರ ಸ್ಥಾನಗಳನ್ನು ಮೇಲೆ ತಿಳಿಸಿರುವ ವರ್ಗಗಳಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಹಾಗೂ ೧/೩ ರಷ್ಟು ಮಹಿಳೆಯರಿಗೆ ಮೀಸಲಿಡಬೇಕು. ಮೀಸಲು ನಿಯಮಕ್ಕೆ ಒಳಗಾದ ಅಧ್ಯಕ್ಷ/ ಉಪಾಧ್ಯಕ್ಷ ಸ್ಥಾನಗಳನ್ನು ಬದಲಾಯಿಸುವ ಅವಕಾಶವಿದೆ. ಅಲ್ಲದೆ ಹಿಂದುಳಿದ ವರ್ಗದವರಿಗೆ ಯಾವುದೇ ಹಂತದ ಪಂಚಾಯಿತಿಯಲ್ಲಿ ಅಧ್ಯಕ್ಷ ಸ್ಥಾನದಲ್ಲಿ ಮೀಸಲು ನಿಯಮ ಜಾರಿಗೆ ತರಲು ರಾಜ್ಯ ಶಾಸಕಾಂಗಕ್ಕೆ ಅಧಿಕಾರವಿದೆ ಎಂದು (೬)ಉಪವಿಧಿ ತಿಳಿಸುತ್ತದೆ. ಕೇಂದ್ರ ಸರಕಾರ ೨೦೦೯ರ ಆಗಸ್ಟ್‌ನಲ್ಲೂ ಮಹಿಳೆಯರಿಗೆ ಮೀಸಲು ಪ್ರಮಾಣವನ್ನು ಶೇ೫೦ಕ್ಕೆ ಹೆಚ್ಚಿಸಲು ತಿರ್ಮಾನಿಸಿತು. ಅದರಂತೆ ಬಿಹಾರ ಮತ್ತು ಮಧ್ಯಪ್ರದೇಶದಂತೆ ಕರ್ನಾಟಕವು ಮಹಿಳೆಯರಿಗೆ ಮೀಸಲು ಪ್ರಮಾಣವನ್ನು ಶೇ.೫೦ಕ್ಕೆ ೨೦೧೦ ಆಗಸ್ಟ್‌ನಲ್ಲಿ ಹೆಚ್ಚಿಸಿತು.

ಪಂಚಾಯತ್ ರಾಜ್ ವ್ಯವಸ್ಥೆಯ ಲೋಪದೋಷಗಳು

೧. ಕೇಂದ್ರ-ರಾಜ್ಯ ಸರಕಾರಗಳು ಸ್ಥಳಿಯ ಸರಕಾರದ ಮೇಲೆ ಹಿಡಿತ ಸಾಧಿಸಿರುವುದು.

೨. ಕೇಂದ್ರ-ರಾಜ್ಯ ಸರಕಾರಗಳು ಸಮರ್ಪಕ ಅನುದಾನ ನೀಡುವುದಿಲ್ಲ.

೩. ಕೇಂದ್ರ-ರಾಜ್ಯ ಸರಕಾರಗಳು ಪಂಚಾಯತ್ ರಾಜ್ ಸಂಸ್ಥೆಗಳನ್ನು ಸೇವಾ ವಲಯವಾಗಿ ಕಾಣುತಿಲ್ಲ. ಬದಲಾಗಿ ಲಾಭದ ಉದ್ಯಮವಾಗಿ ನೋಡುತ್ತಿವೆ.

ಉದಾ: ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧವಾದ ನೀರು ಕುಡಿಯುಬೇಕೆಂದರೆ ೨೦ ಲೀಟರ್‌ಗೆ ೨-೫ ರೂ ಕೊಡಬೇಕು.

ನಗರ ಪ್ರದೇಶಗಳಲ್ಲಿ ಶುದ್ಧವಾದ ಕುಡಿಯುವ ನೀರಿಗೆ ೨೦ ಲೀಟರ್‌ಗೆ ೫,೦೦ ರೂ ಕೊಡಬೇಕು. ಸಾರ್ವಜನಿಕ ಶೌಚಾಲಯಗಳಲ್ಲಿ ೫,ರೂ ಕೊಡಬೇಕು. ಇದೇ ಸೇವೆ ಖಾಸಗಿಯವರಿಗೆ ನೀಡಿದರೆ ೧೦, ರೂ ಕೊಡಬೇಕು. ಇನ್ನೂ ಸ್ವಲ್ಪ ದಿನಗಳಲ್ಲೆ ಪ್ರತಿಯೊಂದು ಗ್ರಾಮ ಮತ್ತು ವಾರ್ಡಗಳಲ್ಲಿ ರಸ್ತೆ ಟೋಲ್ ಟ್ಯಾಕ್ಸ್ ತಿರುಗಾಡುವ ದಿನಗಳು ದೂರವಿಲ್ಲ ಎನಿಸುತ್ತದೆ. ಅಂದರೆ ನಮ್ಮದೇ ಸರಕಾರ ನಾವೇ ಆಯ್ಕೆ ಮಾಡಿದ್ದು, ನಾವು ಕಟ್ಟಿದ ತೆರಿಗೆಯಿಂದ ರಸ್ತೆ, ಶೌಚಾಲಯ ಮತ್ತು ನಲ್ಲಿ ವ್ಯವಸ್ಥೆ ಅಥವಾ ವಾಟರ್ ಪ್ಲಾಂಟ್ ಹಾಕಿಸಿರುತ್ತಾರೆ. ಆದರೆ ಅದಕ್ಕೆ ಪುನಃ ಹಣಕೊಟ್ಟು ನಾವು ಖರೀದಿ ಮಾಡಬೇಕು. ಹೀಗಿದೆ ಸರಕಾರದ ತಂತ್ರಗಾರಿಕೆ.

ಪಂಚಾಯತ್ ಅಧಿಕಾರಿಗಳ ವರ್ಗಾವಣೆ ಪಂಚಾಯತ್‌ಗಳ ರಚನೆ ಮತ್ತು ಸಿಬ್ಬಂದಿಗಳ ಕೆಲಸದ ಸ್ವರೂಪದ ಬಗ್ಗೆ ಕೆಲವೊಂದು ಜಿಜ್ಞಾಸೆಗಳಿವೆ. ಪಂಚಾಯತ್‌ಗಳಲ್ಲಿ ಸರಿಯಾದ ಸಿಬ್ಬಂದಿಗಳು ಇರುವುದಿಲ್ಲ. ಇದ್ದರೆ ಸಮರ್ಪಕವಾಗಿ ಕಾರ್ಯ ನಿರ್ವಹಿಸುವುದಿಲ್ಲ. ಇವುಗಳ ಮೇಲೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಸಮರ್ಪಕವಾಗಿ ನೆಡೆಯುವುದಿಲ್ಲ, ಹೀಗಾಗಿ ಕೆಲವು ಪಂಚಾಯತ್‌ಗಳು ರೋಗಗ್ರಸ್ಥ ಶಿಶುವಿನಂತೆ ಕೆಲಸ ನಿರ್ವಹಿಸುತ್ತಿವೆ.

ಶ್ರೀಮಂತರ ಏಕಸ್ವಾಮ್ಯತೆ ಪಂಚಾಯಿತಿಗಳು ಹುಟ್ಟಿದಾಗಿನಿಂದಲೂ ಇರುವ ದೋಷವನ್ನು ಇನ್ನೂ ಕಳಚಲು ಸಾಧ್ಯವಾಗಿಲ್ಲ. ಪಂಚಾಯಿತಿಗಳಲ್ಲಿ ಮೀಸಲಾತಿ ಪ್ರಕಾರ ಆಯ್ಕೆಯಾದ ಅಧ್ಯಕ್ಷ-ಉಪಾಧ್ಯಕ್ಷ, ಕಾರ್ಯದರ್ಶಿ ಮೇಲ್ಜಾತಿಯ ಶ್ರೀಮಂತರು ತೀರ್ಮಾನ ಕೈಗೊಳ್ಳುತ್ತಾರೆ. ಜಾತಿ ಧರ್ಮದ ಪ್ರಾಬಲ್ಯದಿಂದ ಪಂಚಾಯಿತಿಗಳನ್ನು ಹೊರತರಲು ಸಾಧ್ಯವಾಗಿಲ್ಲ. ಹಾಗಾಗಿ ಅಭಿವೃದ್ಧಿಗೂ ಜನರ ಸಹಭಾಗಿತ್ವಕ್ಕೂ ಸಂಬಂಧವಿಲ್ಲ. ಎಲ್ಲವೂ ಶ್ರೀಮಂತರ ಏಕಸ್ವಾಮ್ಯದಲ್ಲಿ ನಡೆಯುತ್ತಿವೆ.

ಇನ್ನು ಮಹಿಳಾ ಮೀಸಲಾತಿ ಮತ್ತು ಮಹಿಳಾ ಸಬಲೀಕರಣ ಎನ್ನುವುದು ಅದರ ಉದ್ದೇಶಕ್ಕೂ ಕಾರ್ಯ ಚಟುವಟಿಕೆಗೆ ಸಂಬಂಧವೆ ಇಲ್ಲ. ಯಾಕೆಂದರೆ ಮಹಿಳಾ ಸದಸ್ಯರ ಪರವಾಗಿ ಅವರ ಗಂಡ, ಅಣ್ಣ, ತಮ್ಮ, ಮಾವ ಮುಂತಾದವರು ಸಭೆಗೆ ಹೋಗುವುದು ಮತ್ತು ತೀರ್ಮಾನ ಕೈಗೊಳ್ಳುವುದು ಸಾಮಾನ್ಯವಾಗಿದೆ. ಆದರೂ ಪಂಚಾಯತ್ ಕಾಯ್ದೆ ಇದರಲ್ಲಿ ಮೌನವಹಿಸಿದೆ.

ದುರ್ಬಲ ವರ್ಗದವರ ಧ್ವನಿಗೆ ಅವಕಾಶವಿಲ್ಲ, ಬಡವರು ಪರಿಶಿಷ್ಟ ಜಾತಿಯವರಿಗೆ ಸೌಲಭ್ಯ ಕೇಳಲು ಸಹ ಅವಕಾಶ ಕೊಡುವುದಿಲ್ಲ. ಅಂದರೆ ಸ್ಥಳೀಯ ಮಟ್ಟದಲ್ಲಿ ಎಲ್ಲವೂ ಜಾತಿ ನಿರ್ಧಾರಿಸುತ್ತದೆ. ಸಂವಿಧಾನಾತ್ಮಕ ಅವಕಾಶಗಳಿವೆ. ಆದರೆ ಸಿದ್ಧಾಂತಕ್ಕೂ ಮತ್ತು ಆಚರಣೆಯಲ್ಲಿ ವ್ಯತ್ಯಾಸವಿದೆ. ಆದ್ದರಿಂದ ಡಾ. ಬಿ.ಆರ್. ಅಂಬೇಡ್ಕರ್ ಅವರು ಇವುಗಳನ್ನು ಜಾತಿಯ ಕೂಪಗಳೆಂದು ಕರೆದಿದ್ದಾರೆ.

ಸಂಪನ್ಮೂಲಗಳ ಕೊರತೆ, ಸ್ಥಳೀಯ ಸರಕಾರಗಳಿಗೆ ಹೆಚ್ಚು ಕೆಲಸ ಕಾರ್ಯಗಳನ್ನು ವಹಿಸಲಾಗಿದೆ. ಆದರೆ ಸಂಪನ್ಮೂಲ ಕೊರತೆ ಎದ್ದುಕಾಣುತ್ತಿದೆ. ಅಂದರೆ ತೆರಿಗೆ ಬರುವ ಹಣದ ಮೇಲೆ ಆವಲಂಬನೆ ಸರಕಾರ ಅನುದಾನದ ಮೇಲೆ ಆವಲಂಬನೆ ಅದು ೩ ತಿಂಗಳಿಗೊಮ್ಮೆ, ೬ ತಿಂಗಳಿಗೊಮ್ಮೆ ಬಿಡುಗಡೆಯಾಗುತ್ತದೆ. ಹೀಗಾಗಿ ಸಿಬಂದ್ದಿ ವೇತನ ಮತ್ತು ಭತ್ಯೆಗಳನ್ನು ನಿರ್ವಹಣೆ ಮಾಡುವುದೇ ಆಗಿದೆ ಹಾಗಾಗಿ ಅಭಿವೃದ್ಧಿ ನೀರಿಕ್ಷಿತ ಪ್ರಮಾಣದಲ್ಲಿ ಸಾಧಿಸಲು ಸಾಧ್ಯವಿಲ್ಲ.

ರಾಜಕೀಯ ಹಸ್ತಕ್ಷೇಪ ಪಂಚಾಯತ್‌ಗಳಲ್ಲಿ ಬಹುತೇಕವಾಗಿ ಜನರ ಸಹಭಾಗಿತ್ವ ಇರಬೇಕಿತ್ತು. ಆದರೆ ರಾಜಕಾರಣಿಗಳ ಅಥವಾ ಚುನಾಯಿತ ಪ್ರತಿನಿಧಿಗಳಿಗೆ ಸಹಭಾಗಿತ್ವವೇ ಹೆಚ್ಚು. ಅಂದರೆ MLA, MP, ZP, TP ಸದಸ್ಯರೆ ಪಂಚಾಯಿತಿಗಳಲ್ಲಿ ಹೆಚ್ಚು ಹಸ್ತಕ್ಷೇಪ ಮಾಡುತ್ತಿರುವರು. ಇವರನ್ನ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಯೆಂದು/ಸ್ಥಳೀಯ ಸಂಸ್ಥೆಗಳ ಕಾರ್ಯ ಕಲಾಪಗಳು ಇವರನ್ನು ಹೊರಗೆ ಇಟ್ಟು ಕೆಲಸ ನಿರ್ವಹಿಸಿದರೆ ಪಂಚಾಯಿತಿಗಳು ಸ್ವಾಯತತ್ತೆಯಿಂದ ಕೆಲಸ ನಿರ್ವಹಿಸಬಹುದು.

ಜನರ ಸಹಭಾಗಿತ್ವಕ್ಕೆ ಸಂಬೋಧಿಸಿದಂತೆ ಜನರಿಗೆ ಮತದಾನದ ಬಗ್ಗೆ ಅರಿವು ಮೂಡಿಸಬೇಕು. ಗ್ರಾಮ ಸಭೆಗಳ ಬಗ್ಗೆ ತಿಳುವಳಿಕೆ ನೀಡಬೇಕು. ಅನುದಾನದ ಬಗ್ಗೆ ಜನರಿಗೆ ಮಾಹಿತಿ ನೀಡಬೇಕು. ಸಾಮಾಜಿಕ ಲೆಕ್ಕ ಪರಿಶೋಧನೆ ಮತ್ತು ಸಾಮಾಜಿಕ ಜಮಾಬಂದಿ ಜನರ ಸಮ್ಮುಖದಲ್ಲೇ ನಡೆಯಬೇಕು. ಅವಶ್ಯಕವೆನಿಸಿದ ಸಂದರ್ಭದಲ್ಲಿ ಮತದಾನದ ನಿರ್ಣಯ ಕೈಗೊಳ್ಳಬೇಕು. ಅಂದರೆ ಆಗ ಜನರ ಸಹಭಾಗಿತ್ವ ಸಾಧ್ಯ.[೧೦]

ಕ್ರಸಂ	ಜಿಲ್ಲೆಗಳ ಹೆಸರು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಬೆಂಗಳೂರು.	೧೦೪	೧೪೧೫	೧೪೬೦	೨೮೭೫	೨೬೯	೩೨೪	೫೯೩
೨	ಬೆಂಗಳೂರು.	೧೦೫	೯೩೫	೯೮೯	೧೯೨೪	೨೧೨	೨೬೧	೪೭೩
೩	ಚಿತ್ರದುರ್ಗ	೧೯೦	೧೬೮೩	೧೭೭೭	೩೪೬೦	೩೭೯	೪೮೨	೮೬೬
೪	ದಾವಣಗೆರೆ	೨೩೫	೧೬೭೧	೧೭೭೩	೩೪೪೪	೩೫೫	೪೭೦	೮೨೫
೫	ಕೋಲಾರ	೧೫೬	೧೩೫೯	೧೪೩೧	೨೭೯೦	೪೦೩	೪೭೨	೮೭೫
೬	ಶಿವಮೊಗ್ಗ	೨೭೧	೧೪೦೩	೧೫೫೫	೨೯೫೮	೨೧೩	೪೦೬	೬೧೯

೭	ತುಮಕೂರು	೩೩೧	೨೬೧೨	೨೭೮೮	೫೪೦೦	೪೬೯	೬೪೯	೧೧೧೮
೮	ರಾಮನಗರ	೧೩೦	೧೦೩೬	೧೦೯೯	೨೧೩೫	೧೮೦	೨೪೩	೪೨೩
೯	ಚಿಕ್ಕಬಳ್ಳಾಪುರ	೧೫೭	೧೨೩೨	೧೩೧೮	೨೫೫೦	೩೧೩	೩೯೦	೭೦೩
೧೦	ಚಾಮರಾಜನಗರ	೧೩೦	೧೦೫೩	೧೧೧೮	೨೧೭೧	೨೫೨	೩೨೦	೫೭೨
೧೧	ಚಿಕ್ಕಮಗಳೂರು	೨೨೭	೧೧೧೭	೧೨೩೯	೨೩೫೬	೨೨೯	೩೪೮	೫೭೭
೧೨	ದಕ್ಷಿಣ ಕನ್ನಡ	೨೩೨	೧೭೧೭	೧೮೩೯	೩೫೫೬	೭೬	೨೪೯	೩೨೫
೧೩	ಹಾಸನ	೨೬೬	೧೮೧	೧೬೦೫	೧೯೪೯	೩೭೬೦	೩೨೫	೪೫೯
೧೪	ಕೊಡಗು	೧೦೪	೧೮೮೭	೬೫೫	೧೨೬೦	೫೪	೧೨೫	೧೭೯
೧೫	ಮಂಡ್ಯ	೨೩೪	೧೮೮೭	೨೦೦೨	೩೮೮೯	೨೩೮	೩೩೯	೫೭೭
೧೬	ಮೈಸೂರು	೨೬೬	೨೩೦೧	೨೪೪೩	೪೭೪೪	೪೩೦	೫೭೨	೧೦೦೨
೧೭	ಉಡುಪಿ	೧೫೮	೧೧೯೬	೧೨೮೧	೨೪೭೭	೨೮	೧೬೨	೧೯೦
೧೮	ಬಳ್ಳಾರಿ	೨೦೫	೧೯೬೨	೨೦೬೭	೪೦೨೯	೪೨೭	೫೨೪	೯೫೧
೧೯	ಬೀದರ್	೧೮೬	೧೬೧೭	೧೬೯೭	೩೩೧೪	೩೮೧	೪೮೭	೮೬೮
೨೦	ಕಲಬುರುಗಿ	೨೬೪	೨೧೯೬	೨೩೩೧	೪೫೨೭	೫೬೬	೭೧೩	೧೨೭೯
೨೧	ಯಾದಗಿರಿ	೧೨೫	೧೨೦೧	೧೨೭೩	೨೪೭೪	೨೭೯	೩೪೩	೬೨೨
೨೨	ಕೊಪ್ಪಳ	೧೫೭	೧೪೬೭	೧೫೪೮	೩೦೧೫	೨೫೭	೩೨೯	೫೮೬
೨೩	ರಾಯಚೂರು	೧೮೫	೧೮೩೮	೧೯೩೧	೩೭೬೯	೩೬೨	೪೬೧	೮೨೩
೨೪	ಬಾಗಲಕೋಟೆ	೨೦೧	೧೬೪೯	೧೭೪೮	೩೩೯೭	೨೬೦	೩೬೧	೬೨೧
೨೫	ಬೆಳಗಾವಿ	೫೧೭	೪೬೪೩	೪೯೧೫	೯೫೫೮	೪೪೮	೭೭೮	೧೨೨೬
೨೬	ವಿಜಯಪುರ	೨೨೦	೨೦೮೯	೨೨೦೪	೪೨೯೩	೪೧೮	೫೧೮	೯೩೬
೨೭	ಧಾರವಾಡ	೧೪೩	೯೯೫	೧೦೬೯	೨೦೬೪	೪೪	೧೫೪	೧೯೮
೨೮	ಗದಗ	೧೨೦	೮೫೩	೯೧೬	೧೭೬೯	೧೩೦	೨೦೧	೩೩೧
೨೯	ಹಾವೇರಿ	೨೨೩	೧೫೭೦	೧೬೭೨	೩೨೪೨	೧೭೯	೩೧೩	೪೯೨
೩೦	ಉತ್ತರ ಕನ್ನಡ	೨೩೧	೧೩೨೭	೧೪೫೪	೨೭೮೧	೫೪	೨೫೭	೩೧೧
	ಒಟ್ಟು	೬೦೭೩	೪೮೪೪೦	೫೧೫೪೧	೯೯೯೮೧	೮೨೩೦	೧೧೭೧೫	೧೯೯೪೫

ಕೋಷ್ಟಕ ೬.೨. ರಾಜ್ಯದಲ್ಲಿ ೨೦೧೫ರಲ್ಲಿ ನಡೆದ ಗ್ರಾಮ ಪಂಚಾಯಿತಿ ಸದಸ್ಯರುಗಳ ವಿವರ

ಪರಿಶಿಷ್ಟ ಪಂಗಡ			ಹಿಂದುಳಿದ "ಅ" ವರ್ಗ			ಹಿಂದುಳಿದ "ಬ" ವರ್ಗ			ಸಾಮಾನ್ಯ		
ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧೯	೧೦೮	೧೨೭	೨೫೧	೨೯೪	೫೪೫	೬೩	೭೦	೧೩೩	೮೧೩	೬೬೪	೧೪೭೭
೩೧	೧೧೫	೧೪೬	೯೨	೧೬೦	೨೫೨	೪೨	೨೧	೬೩	೫೫೮	೪೩೨	೯೯೦
೨೯೦	೪೧೨	೭೦೨	೭೨	೧೭೦	೨೪೨	೪೪	೮	೫೨	೮೯೮	೭೦೦	೧೫೯೮
೧೮೪	೩೪೦	೫೨೪	೧೨೨	೨೨೪	೩೪೬	೪೫	೨೪	೬೯	೯೬೫	೭೧೫	೧೬೮೧
೫೮	೧೭೮	೨೩೬	೬೨	೧೬೦	೨೨೨	೪೧	೫	೪೬	೭೯೫	೬೧೬	೧೪೧೧
೨೦	೨೭೨	೨೯೨	೧೩೧	೩೧೪	೪೪೫	೭೭	೧೨	೮೯	೯೬೨	೫೫೧	೧೫೧೩
೧೫೪	೩೯೯	೫೫೩	೨೭೦	೫೦೧	೭೭೧	೧೩೩	೭೧	೨೦೪	೧೫೮೬	೧೧೬೮	೨೭೫೪
೯	೧೩೧	೧೪೦	೧೩೩	೨೩೬	೩೬೯	೭೦	೩೨	೧೦೨	೬೪೪	೪೫೭	೧೧೦೧
೧೪೧	೨೩೨	೩೭೩	೪೧	೧೨೪	೧೬೫	೨೫	೧	೨೬	೭೧೨	೫೭೧	೧೨೮೩
೯೩	೧೮೭	೨೮೦	೭೨	೧೪೩	೨೧೫	೪೦	೮	೪೮	೫೯೬	೪೬೦	೧೦೫೬
೧೫	೨೩೧	೨೪೬	೭೭	೨೦೩	೨೮೦	೪೨	೭	೪೯	೭೫೪	೪೫೦	೧೨೦೪
೪೪	೨೪೨	೨೮೬	೩೪೭	೪೭೭	೮೨೪	೧೦೭	೧೦೧	೨೦೮	೧೧೪೩	೭೭೦	೧೯೧೩
೬	೨೬೮	೨೭೪	೨೪೦	೩೭೦	೬೧೦	೭೮	೬೮	೧೪೬	೧೧೬೨	೭೮೪	೧೯೪೬
೪೯	೧೩೧	೧೮೦	೬೪	೧೪೧	೨೦೫	೩೭	೧೧	೪೮	೪೦೧	೨೪೭	೬೪೮
೨	೨೩೫	೨೩೭	೩೭೪	೪೬೯	೮೪೩	೯೯	೧೦೪	೨೦೩	೧೧೭೪	೮೪೫	೨೦೧೯
೨೬೭	೪೫೯	೭೨೬	೨೦೬	೩೪೩	೫೪೯	೭೯	೫೭	೧೩೬	೧೩೧೯	೧೦೧೨	೨೩೩೧

ಪರಿಶಿಷ್ಟ ಪಂಗಡ			ಹಿಂದುಳಿದ "ಅ" ವರ್ಗ			ಹಿಂದುಳಿದ "ಬ" ವರ್ಗ			ಸಾಮಾನ್ಯ		
ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೩೨	೧೬೯	೨೦೧	೨೬೯	೩೩೪	೬೦೩	೬೮	೮೨	೧೫೦	೭೯೯	೫೩೪	೧೩೩೩
೩೭೮	೪೯೯	೮೭೭	೮೭	೧೭೩	೨೬೦	೩೭	೧೯	೫೬	೧೦೩೩	೮೫೨	೧೮೮೫
೨೩೧	೩೨೦	೫೫೧	೭೦	೧೫೮	೨೨೮	೨೯	೮	೩೭	೯೦೬	೭೨೪	೧೬೩೦
೨೩	೨೭೦	೨೯೩	೧೭೮	೩೬೧	೫೩೯	೯೭	೩೯	೧೩೬	೧೩೩೨	೯೪೮	೨೨೮೦
೧೩೪	೨೨೧	೩೫೫	೮೧	೧೪೮	೨೨೯	೩೫	೧೯	೫೪	೬೭೨	೫೪೨	೧೨೧೪
೧೬೦	೨೫೧	೪೧೧	೧೪೫	೨೪೫	೩೯೦	೬೫	೩೩	೯೮	೮೪೦	೬೯೦	೧೫೩೦
೩೭೯	೪೮೭	೮೬೬	೯೨	೧೭೨	೨೬೪	೪೧	೨೦	೬೧	೯೬೭	೭೯೧	೧೭೫೮
೬೮	೨೨೮	೨೯೬	೨೪೫	೩೬೦	೬೦೫	೮೦	೭೪	೧೫೪	೯೯೬	೭೨೫	೧೭೨೧
೨೪೭	೬೮೬	೯೩೩	೮೫೫	೧೧೧೧	೧೯೬೬	೨೫೨	೨೫೧	೫೦೩	೨೮೪೧	೨೦೮೯	೪೯೩೦
೯	೨೨೨	೨೩೧	೩೨೦	೪೩೧	೭೫೧	೧೦೦	೯೩	೧೯೩	೧೨೪೨	೯೪೦	೨೧೮೨
೨೭	೧೪೬	೧೭೩	೧೯೨	೨೮೨	೪೭೪	೭೬	೫೦	೧೨೬	೬೫೬	೪೩೭	೧೦೯೩
೨೯	೧೨೫	೧೫೪	೧೧೪	೧೯೧	೩೦೫	೫೨	೭೭	೭೯	೫೨೮	೩೭೨	೯೦೦
೧೦೫	೨೫೫	೩೬೦	೧೯೪	೩೭೫	೫೬೯	೧೦೮	೪೨	೧೫೦	೯೮೪	೬೮೭	೧೬೭೧
೧೫	೨೩೫	೨೫೦	೨೩೨	೩೭೧	೬೦೩	೮೦	೫೨	೧೩೨	೯೪೬	೩೫೯	೧೪೮೫
೩೨೧೬	೮೦೫೪	೧೧೨೭೦	೫೬೨೮	೯೦೪೧	೧೪೬೬೯	೨೧೪೨	೧೪೧೯	೩೫೬೧	೨೯೨೨೪	೨೧೩೧೨	೫೦೫೩೬

ಆಧಾರ : ಕರ್ನಾಟಕ ಕೈಪಿಡಿ, ೨೦೧೭, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

ಕೋಷ್ಟಕ ೬.೩. ರಾಜ್ಯದಲ್ಲಿ ೨೦೧೬ರಲ್ಲಿ ನಡೆದ ತಾಲ್ಲೂಕು ಪಂಚಾಯಿತಿ ಚುನಾವಣೆಯ ಜಿಲ್ಲಾವಾರು, ವರ್ಗವಾರು ಸದಸ್ಯರ ಸ್ಥಾನಗಳ ವಿವರ

			ವರ್ಗವಾರು ಸ್ಥಾನಗಳ ವಿವರ				
ಕ್ರ.ಸಂ.	ಜಿಲ್ಲೆ	ಒಟ್ಟು ಸ್ಥಾನಗಳ ಸಂಖ್ಯೆ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಹಿಂದುಳಿದ ವರ್ಗ(ಅ)	ಹಿಂದುಳಿದ ವರ್ಗ(ಬ)	ಸಾಮಾನ್ಯ
೧	ಬೆಂಗಳೂರು	೯೭(೫೦)	೨೨(೧೨)	೪(೪)	೧೭(೯)	೪(೩)	೫೦(೨೨)
೨	ಬೆಂಗಳೂರು	೭೭(೩೯)	೧೮(೧೦)	೫(೫)	೧೨(೭)	೩(೨)	೩೯(೧೬)
೩	ರಾಮನಗರ	೮೧(೪೧)	೧೭(೯)	೪(೪)	೧೪(೯)	೫(೧)	೪೧(೧೮)
೪	ಚಿತ್ರದುರ್ಗ	೧೩೬(೭೦)	೩೫(೧೯)	೨೭(೧೫)	೫(೫)	೨(೦)	೬೭(೩೧)
೫	ದಾವಣಗೆರೆ	೧೩೩(೬೮)	೩೨(೧೭)	೨೦(೧೦)	೧೧(೭)	೨(೦)	೬೮(೩೪)
೬	ಕೋಲಾರ	೧೧೧(೫೭)	೩೫(೧೯)	೭(೫)	೯(೮)	೩(೦)	೫೭(೨೫)
೭	ಚಿಕ್ಕಬಳ್ಳಾಪುರ	೧೦೮(೫೬)	೩೧(೧೮)	೧೬(೯)	೫(೩)	೦(೦)	೫೬(೨೬)
೮	ಶಿವಮೊಗ್ಗ	೧೧೬(೬೧)	೨೨(೧೪)	೭(೭)	೧೯(೧೪)	೭(೧)	೬೧(೨೫)
೯	ತುಮಕೂರು	೨೧೫(೧೦೯)	೪೪(೨೩)	೨೧(೧೩)	೩೩(೧೯)	೮(೪)	೧೦೯(೫೦)
೧೦	ಚಿಕ್ಕಮಗಳೂರು	೧೦೭(೫೬)	೨೪(೧೪)	೮(೭)	೧೬(೧೦)	೩(೧)	೫೬(೨೪)
೧೧	ದಕ್ಷಿಣ ಕನ್ನಡ	೧೩೬(೬೯)	೧೧(೬)	೮(೫)	೩೪(೨೦)	೯(೪)	೭೪(೩೪)
೧೨	ಉಡುಪಿ	೯೮(೫೦)	೬(೩)	೪(೩)	೨೭(೧೪)	೬(೩)	೫೫(೨೭)
೧೩	ಹಾಸನ	೧೫೩(೮೦)	೩೩(೧೮)	೮(೮)	೨೫(೧೪)	೭(೩)	೮೦(೩೭)
೧೪	ಕೊಡಗು	೫೦(೨೬)	೬(೪)	೬(೪)	೯(೬)	೩(೧)	೨೬(೧೧)
೧೫	ಮಂಡ್ಯ	೧೫೫(೭೯)	೨೩(೧೩)	೭(೭)	೩೬(೧೮)	೧೦(೬)	೭೯(೩೫)

ಕ್ರ.ಸಂ.	ಜಿಲ್ಲೆ	ಒಟ್ಟು ಸ್ಥಾನಗಳ ಸಂಖ್ಯೆ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಹಿಂದುಳಿದ ವರ್ಗ(ಅ)	ಹಿಂದುಳಿದ ವರ್ಗ(ಬ)	ಸಾಮಾನ್ಯ
೧೬	ಮೈಸೂರು	೧೮೭(೧೯೪)	೩೯(೨೧)	೨೭(೧೫)	೨೨(೧೨)	೬(೩)	೯೩(೪೩)
೧೭	ಚಾಮರಾಜನಗರ	೮೯(೪೬)	೨೩(೧೨)	೧೦(೬)	೮(೬)	೩(೦)	೪೫(೨೨)
೧೮	ಬೆಳಗಾವಿ	೩೪೫(೧೭೫)	೪೨(೨೪)	೨೭(೧೮)	೮೦(೪೧)	೨೦(೧೧)	೧೭೬(೮೧)
೧೯	ವಿಜಯಪುರ	೧೫೯(೮೧)	೩೫(೧೯)	೫(೫)	೩೦(೧೫)	೮(೫)	೮೧(೩೭)
೨೦	ಬಾಗಲಕೋಟೆ	೧೩೦(೬೭)	೨೪(೧೩)	೯(೭)	೨೪(೧೨)	೬(೪)	೬೭(೩೧)
೨೧	ಧಾರವಾಡ	೮೨(೪೨)	೭(೫)	೬(೫)	೨೧(೧೧)	೬(೪)	೪೨(೧೭)
೨೨	ಗದಗ	೭೫(೫೯	೧೪(೯)	೫(೫)	೧೪(೮)	೩(೨)	೩೯(೧೫)
೨೩	ಹಾವೇರಿ	೧೨೮(೬೫)	೧೯(೧೧)	೧೨(೭)	೨೫(೧೪)	೭(೪)	೬೫(೨೯)
೨೪	ಉತ್ತರ ಕನ್ನಡ	೧೩೦(೭೦)	೧೨(೧೧)	೧೧(೧೧)	೨೭(೨೧)	೧೦(೧)	೭೦(೨೬)
೨೫	ಬೀದರ್	೧೩೧(೬೬)	೩೪(೧೮)	೨೨(೧೩)	೮(೬)	೧(೦)	೬೬(೨೯)
೨೬	ಬಳ್ಳಾರಿ	೧೫೦(೭೬)	೩೬(೨೦)	೩೩(೧೭)	೬(೪)	೦(೦)	೭೫(೩೫)
೨೭	ರಾಯಚೂರು	೧೪೨(೭೨)	೩೧(೧೬)	೩೩(೧೮)	೭(೪)	೧(೦)	೭೦(೩೪)
೨೮	ಕಲಬುರುಗಿ	೧೭೯(೯೦)	೫೦(೨೭)	೮(೭)	೨೫(೧೩)	೬(೪)	೯೦(೩೯)
೨೯	ಯಾದಗಿರಿ	೯೪(೪೮)	೨೪(೧೩)	೧೨(೭)	೭(೬)	೩(೦)	೪೮(೨೨)
೩೦	ಕೊಪ್ಪಳ	೧೦೯(೫೬)	೨೨(೧೨)	೧೫(೯)	೧೨(೮)	೪(೧)	೫೬(೨೬)
	ಒಟ್ಟು	೩೯೦೩(೧೯೯೮)	೭೧೧(೪೩೦)	೩೮೭(೨೫೫)	೫೮೮(೩೪೪)	೧೫೬(೬೮)	೨೦೦೧(೯೦೧)

ಆಧಾರ: ಕರ್ನಾಟಕ ಕೈಪಿಡಿ, ೨೦೧೭, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

ಕೋಷ್ಟಕ ೬೪. ರಾಜ್ಯದಲ್ಲಿ ೨೦೧೬ರಲ್ಲಿ ನಡೆದ ಜಿಲ್ಲಾ ಪಂಚಾಯಿತಿ ಚುನಾವಣೆಯ ಜಿಲ್ಲಾವಾರು, ವರ್ಗವಾರು ಸದಸ್ಯರ ಸ್ಥಾನಗಳ ವಿವರ

ವರ್ಗವಾರು ಸ್ಥಾನಗಳ ವಿವರ							
ಕ್ರ.ಸಂ.	ಜಿಲ್ಲೆ	ಒಟ್ಟು ಸ್ಥಾನಗಳ ಸಂಖ್ಯೆ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಹಿಂದುಳಿದ ವರ್ಗ(ಅ)	ಹಿಂದುಳಿದ ವರ್ಗ(ಬ)	ಸಾಮಾನ್ಯ
೧	ಬೆಂಗಳೂರು	೫೦(೨೫)	೧೧(೬)	೨(೧)	೧೦(೫)	೨(೧)	೨೫(೧೨)
೨	ಬೆಂಗಳೂರು	೨೧(೧೧)	೫(೩)	೧(೧)	೩(೨)	೧(೦)	೧೧(೫)
೩	ರಾಮನಗರ	೨೨(೧೧)	೪(೨)	೧(೧)	೫(೨)	೧(೧)	೧೧(೫)
೪	ಚಿತ್ರದುರ್ಗ	೩೭(೧೯)	೯(೫)	೭(೪)	೨(೧)	೦(೦)	೧೯(೯)
೫	ದಾವಣಗೆರೆ	೩೬(೧೮)	೯(೫)	೫(೩)	೩(೨)	೧(೦)	೧೮(೮)
೬	ಕೋಲಾರ	೩೦(೧೫)	೯(೫)	೨(೧)	೩(೨)	೧(೦)	೧೫(೭)
೭	ಚಿಕ್ಕಬಳ್ಳಾಪುರ	೨೮(೧೪)	೮(೪)	೪(೨)	೨(೧)	೦(೦)	೧೪(೭)
೮	ಶಿವಮೊಗ್ಗ	೩೧(೧೬)	೬(೩)	೧(೧)	೬(೩)	೨(೧)	೧೬(೮)
೯	ತುಮಕೂರು	೫೭(೨೯)	೧೨(೬)	೫(೩)	೯(೫)	೨(೧)	೨೯(೧೪)
೧೦	ಚಿಕ್ಕಮಗಳೂರು	೩೩(೧೭)	೮(೪)	೧(೧)	೬(೩)	೧(೧)	೧೭(೮)
೧೧	ದಕ್ಷಿಣ ಕನ್ನಡ	೩೬(೧೮)	೩(೨)	೨(೧)	೧೦(೫)	೨(೧)	೧೯(೯)
೧೨	ಉಡುಪಿ	೨೬(೧೩)	೨(೧)	೧(೧)	೭(೪)	೨(೧)	೧೪(೬)
೧೩	ಹಾಸನ	೪೦(೨೦)	೮(೪)	೧(೧)	೯(೫)	೨(೧)	೨೦(೯)
೧೪	ಕೊಡಗು	೨೯(೧೫)	೪(೨)	೩(೨)	೬(೩)	೧(೧)	೧೫(೭)
೧೫	ಮಂಡ್ಯ	೪೧(೨೧)	೬(೨)	೧(೧)	೧೦(೬)	೩(೧)	೨೧(೧೦)

ಕ್ರ.ಸಂ.	ಜಿಲ್ಲೆ	ಒಟ್ಟು ಸ್ಥಾನಗಳ ಸಂಖ್ಯೆ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಹಿಂದುಳಿದ ವರ್ಗ(ಅ)	ಹಿಂದುಳಿದ ವರ್ಗ(ಬ)	ಸಾಮಾನ್ಯ
೧೬	ಮೈಸೂರು	೪೯(೨೫)	೧೦(೫)	೭(೪)	೬(೩)	೧(೧)	೨೫(೧೨)
೧೭	ಚಾಮರಾಜನಗರ	೨೩(೧೨)	೬(೩)	೩(೨)	೨(೧)	೦(೦)	೧೨(೬)
೧೮	ಬೆಳಗಾವಿ	೯೦(೪೫)	೧೧(೬)	೭(೪)	೨೨(೧೧)	೫(೩)	೪೫(೨೧)
೧೯	ವಿಜಯಪುರ	೪೨(೨೧)	೯(೫)	೧(೧)	೯(೫)	೨(೧)	೨೧(೯)
೨೦	ಬಾಗಲಕೋಟೆ	೩೬(೧೮)	೭(೪)	೨(೧)	೭(೪)	೨(೧)	೧೮(೮)
೨೧	ಧಾರವಾಡ	೨೨(೧೧)	೨(೧)	೧(೧)	೬(೩)	೧(೧)	೧೨(೫)
೨೨	ಗದಗ	೧೯(೧೦)	೪(೨)	೧(೧)	೩(೨)	೧(೦)	೧೦(೫)
೨೩	ಹಾವೇರಿ	೩೪(೧೭)	೫(೩)	೩(೨)	೭(೪)	೨(೧)	೧೭(೭)
೨೪	ಉತ್ತರ ಕನ್ನಡ	೩೯(೨೦)	೩(೨)	೧(೧)	೧೦(೬)	೩(೧)	೨೨(೧೦)
೨೫	ಬೀದರ್	೩೪(೧೭)	೯(೫)	೬(೩)	೨(೧)	೦(೦)	೧೭(೮)
೨೬	ಬಳ್ಳಾರಿ	೪೦(೨೦)	೯(೫)	೯(೫)	೨(೧)	೦(೦)	೨೦(೯)
೨೭	ರಾಯಚೂರು	೩೮(೧೯)	೮(೪)	೯(೫)	೨(೧)	೦(೦)	೧೯(೯)
೨೮	ಕಲಬುರುಗಿ	೪೭(೨೪)	೧೩(೭)	೧(೧)	೭(೪)	೨(೧)	೨೪(೧೧)
೨೯	ಯಾದಗಿರಿ	೨೪(೧೨)	೬(೩)	೩(೨)	೨(೨)	೧(೦)	೧೨(೫)
೩೦	ಕೊಪ್ಪಳ	೨೯(೧೫)	೬(೩)	೪(೨)	೩(೨)	೧(೦)	೧೫(೮)
	ಒಟ್ಟು	೧೦೮೩(೫೪೮)	೨೧೨(೧೧೩)	೯೫(೫೯)	೧೮೧(೯೯)	೮೨(೨೦)	೫೫೩(೨೫೭)

ಆಧಾರ: ಕರ್ನಾಟಕ ಕೈಪಿಡಿ, ೨೦೧೭, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

ಕೋಷ್ಟಕ ೬.೫. ರಾಜಕೀಯ ಪಕ್ಷವನ್ನು ಬೆಂಬಲಿಸುವುದಕ್ಕೆ ಕಾರಣ

ಕ್ರ ಸಂ.	ಸೂಚಕಗಳು		ಮುಳಬಾಗಿಲು ತಾಲೂಕು							
			ಗಡ್ಡೂರು ಪಂಚಾಯತಿ				ನಂಗಲಿ ಪಂಚಾಯಿತಿ			
			ಗಂಡು		ಹೆಣ್ಣು		ಗಂಡು		ಹೆಣ್ಣು	
			ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
೧	ಯಾಕೆ ಬೆಂಬಲಿಸುತ್ತೀರಿ?	ಅನುಕಂಪ ಮೂಡುತ್ತದೆ	೧೪	೧೪%	೧೦	೧೦%	೧೩	೧೩%	೧೦	೧೦%
		ಜಾತಿ ಹಿನ್ನೆಲೆ	೧೧	೧೧%	೧೩	೧೩%	೧೬	೧೬%	೧೮	೧೮%
		ಹಣದ ಪ್ರಭಾವ	೨೫	೨೫%	೨೭	೨೭%	೨೧	೨೧%	೨೨	೨೨%
		ಒಟ್ಟು	**೫೦**	**೫೦%**	**೫೦**	**೫೦%**	**೫೦**	**೫೦%**	**೫೦**	**೫೦%**
೨	ಯಾವ ಪಕ್ಷ ಅಧಿಕಾರಕ್ಕೆ ಬಂದರೆ ಒಳಿತಾಗುವುದು	ಕಾಂಗ್ರೆಸ್	೧೩	೧೩%	೧೨	೧೨%	೮	೮%	೧೫	೧೫%
		ಬಿಜೆಪಿ	೫	೫%	೮	೮%	೯	೯%	೬	೬%
		ಜೆಡಿಎಸ್	೧೨	೧೨%	೧೨	೧೨%	೧೨	೧೨%	೭	೭%
		ಪಕ್ಷೇತರ	೨೦	೨೦%	೧೮	೧೮%	೨೧	೨೧%	೨೨	೨೨%
		ಒಟ್ಟು	**೫೦**	**೫೦%**	**೫೦**	**೫೦%**	**೫೦**	**೫೦%**	**೫೦**	**೫೦%**
೩	ಕುಟುಂಬದ ಸದಸ್ಯರು ಚುನಾವಣಾ ಪ್ರಚಾರದಲ್ಲಿ	ಹೌದು	೩೫	೩೫%	೩೮	೩೮%	೩೬	೩೬%	೩೩	೩೩%
		ಇಲ್ಲ	೧೫	೧೫%	೧೨	೧೨%	೧೪	೧೪%	೧೭	೧೭%
		ಒಟ್ಟು	**೫೦**	**೫೦%**	**೫೦**	**೫೦%**	**೫೦**	**೫೦%**	**೫೦**	**೫೦%**
೪	ಹೌದಾದರೆ ಯಾರು ಭಾಗವಹಿಸುತ್ತಾರೆ?	ಅನುಕಂಪ ಮೂಡುತ್ತದೆ	೧೪	೧೪%	೧೦	೧೦%	೧೩	೧೩%	೧೦	೧೦%
		ಜಾತಿ ಹಿನ್ನೆಲೆ	೧೧	೧೧%	೧೩	೧೩%	೧೬	೧೬%	೧೮	೧೮%
		ಹಣದ ಪ್ರಭಾವ	೨೫	೨೫%	೨೭	೨೭%	೨೧	೨೧%	೨೨	೨೨%
		ಒಟ್ಟು	**೫೦**	**೫೦%**	**೫೦**	**೫೦%**	**೫೦**	**೫೦%**	**೫೦**	**೫೦%**

ಮೂಲ: ಕ್ಷೇತ್ರಕಾರ್ಯ ವರದಿ

ಈ ಮೇಲಿನ ಕೋಷ್ಟಕವು ರಾಜಕೀಯ ಪಕ್ಷ ಬೆಂಬಲಿಸುವುದಕ್ಕೆ ಕಾರಣಗಳನ್ನು ನೀಡುತ್ತಾರೆ. ಕೋಲಾರ ಜಿಲ್ಲೆಯ ಮುಲಬಾಗಿಲು ತಾಲೂಕಿನ ಗಡ್ಡೂರು ಮತ್ತು ನಂಗಲಿ ಪಂಚಾಯಿತಿಯಲ್ಲಿ ಪುರುಷರು ಮತ್ತು ಸ್ತ್ರೀಯರು ಸಂದರ್ಶನಕ್ಕೆ ಒಳಪಡಿಸಿದಾಗ ಅವರಿಂದ ಮಾಹಿತಿ ಸಂಗ್ರಹಿಸಲಾಗಿದೆ. ಇಲ್ಲಿ ಕೆಲವೊಂದು ಸೂಚಕಗಳನ್ನಿಟ್ಟುಕೊಂಡು ರಾಜಕೀಯ ಪಕ್ಷಗಳನ್ನು ಏಕೆ ಬೆಂಬಲಿಸುತ್ತೀರಾ, ಯಾವ ಪಕ್ಷ ಅಧಿಕಾರ ಪಡೆದರೆ ಒಳಿತಾಗಬಹುದು, ಕುಟುಂಬದ ಸದಸ್ಯರು ಚುನಾವಣಾ

ಪ್ರಚಾರದಲ್ಲಿ ಭಾಗವಹಿಸುತ್ತೀರಾ, ಹೌದಾದರೆ ಯಾರು ಭಾಗವಹಿಸುತ್ತಾರೆ ಇವುಗಳಿಂದ ಬಂದ ಮಾಹಿತಿಯ ವಿವರವನ್ನು ಈ ಮೇಲಿನ ಕೋಷ್ಟಕದಲ್ಲಿ ತೋರಿಸಲಾಗಿದೆ. ಅದು ಕೆಲಸ ಮಾಡುತ್ತದೆ ಎಂದವರು ಎರಡು ಪಂಚಾಯಿತಿ ಪುರುಷರು ಮತ್ತು ಮಹಿಳೆಯರು ಕ್ರಮವಾಗಿ ಶೇ. ೧೪. ೧೦ ಹಾಗೂ ಶೇ. ೧೩, ೧೦ರಷ್ಟು ಮಾತ್ರ ಉತ್ತರಿಸಿದ್ದಾರೆ. ಜಾತಿಯ ಪ್ರಮಾಣ ಕ್ರಮವಾಗಿ ಶೇ. ೧೧, ೧೩ ಹಾಗೂ ಶೇ. ೧೬, ೧೮ರಷ್ಟು ಮಾತ್ರ ಎಂದಿದ್ದಾರೆ. ಆದರೆ ಹಣದ ಪ್ರಭಾವ ಶೇ. ೨೫, ೨೭ ಹಾಗೂ ಶೇ. ೨೧, ೨೨ರಷ್ಟು ಎಂದು ಉತ್ತರಿಸಿದ್ದಾರೆ. ಹಣದ ಚಲಾವಣೆಯೇ ಗೆಲ್ಲುವುದಕ್ಕೆ ಮತ್ತು ಮತದಾನಕ್ಕೆ ಮುಖ್ಯ ಕಾರಣವಾಗಿದೆ. ಯಾವ ಪಕ್ಷಕ್ಕೆ ಬೆಂಬಲವಿದೆ ಎಂದಾಗ ಯಾರೂ ಕೆಲಸ ಮಾಡುತ್ತಿಲ್ಲ ಎನ್ನುವುದು ಶೇ. ೨೦, ೧೮ ಹಾಗೂ ಶೇ. ೨೧, ೨೨ರಷ್ಟು ಎನ್ನುವುದು ಕಂಡುಬರುತ್ತದೆ. ಚುನಾವಣಾ ಪ್ರಚಾರ ಕಾರ್ಯದಲ್ಲಿ ಮಕ್ಕಳು ಅಂದರೆ ಯುವಕರು ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸಿದ್ದಾರೆ. ಶೇ. ೧೯, ೨೩ ಹಾಗೂ ಶೇ. ೨೫, ೨೬ರಷ್ಟು ಚುನಾವಣಾ ಪ್ರಚಾರದಲ್ಲಿ ದುಮುಕಿದ್ದಾರೆ. ಒಟ್ಟಾರೆ ಮಹಿಳೆಯರ ಭಾಗವಹಿಸುವಿಕೆ ಪ್ರಮಾಣವು ತೀರಾ ಕಡಿಮೆ ಇರುವುದು ಕಂಡುಬಂದಿದೆ.

ಕೋಷ್ಟಕ ೬.೬. ರಾಜಕೀಯ ಅರಿವು ಬಗ್ಗೆ ವಿವರಿಸುತ್ತದೆ

ಕ್ರ ಸಂ.	ಸೂಚಕಗಳು		ಮುಳಬಾಗಿಲು ತಾಲೂಕು							
			ಗಡ್ಡೂರು ಪಂಚಾಯತಿ				ನಂಗಲಿ ಪಂಚಾಯಿತಿ			
			ಗಂಡು		ಹೆಣ್ಣು		ಗಂಡು		ಹೆಣ್ಣು	
			ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
೧	ಗ್ರಾಮಪಂಚಾಯತಿಯ ಅಧ್ಯಕ್ಷರ ಹೆಸರು ಗೊತ್ತಿದೆಯೇ?	ಗೊತ್ತಿದೆ	೩೬	೩೬%	೧೨	೧೨%	೪೧	೪೧%	೧೨	೧೨%
		ಗೊತ್ತಿಲ್ಲ	೧೪	೧೪%	೩೮	೩೮%	೯	೯%	೩೮	೩೮%
		ಒಟ್ಟು	೫೦	೫೦%	೫೦	೫೦%	೫೦	೫೦%	೫೦	೫೦%
೨	ನಿಮಗೆ ರಾಜಕೀಯ ನಾಯಕನ ಸಂಪರ್ಕ ಇದೆಯೇ?	ಹೌದು	೩೫	೩೫%	೯	೯%	೪೩	೪೩%	೧೫	೧೫%
		ಇಲ್ಲ	೧೫	೧೫%	೪೧	೪೧%	೭	೭%	೩೫	೩೫%
		ಒಟ್ಟು	೫೦	೫೦%	೫೦	೫೦%	೫೦	೧೦೦%	೫೦	೫೦%
೩	ನಿಮ್ಮ ರಾಜಕಕೀಯ ಪ್ರತಿನಿಧಿ ವಾರ್ಡ್/ ಕ್ಷೇತ್ರಕ್ಕೆ ಭೇಟಿ ನೀಡುತ್ತಾರೆಯೇ?	ನೀಡುತ್ತಾರೆ	೩೮	೩೮%	೧೪	೧೪%	೪೦	೪೦%	೧೬	೧೬%
		ನೀಡಿಲ್ಲ	೧೨	೧೨%	೩೬	೩೬%	೧೦	೧೦%	೩೪	೩೪%
		ಒಟ್ಟು	೫೦	೫೦%	೫೦	೫೦%	೫೦	೫೦%	೫೦	೫೦%

ಕ್ರ ಸಂ.	ಸೂಚಕಗಳು		ಗಂಡು		ಹೆಣ್ಣು		ಗಂಡು		ಹೆಣ್ಣು	
			ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
೪	ನೀಡುತ್ತಾರೆ ಅಂದರೆ, ಯಾವ ಸಮಯದಲ್ಲಿ ಭೇಟಿ ನೀಡುತ್ತಾರೆ?	ದಿನಾಲು	೦	೦%	೦	೦%	೦	೦%	೦	೦%
		ವಾರ	೧೦	೧೦%	೧೫	೧೫%	೧೮	೧೮%	೧೭	೧೭%
		ತಿಂಗಳು	೧೨	೧೨%	೧೮	೧೮%	೧೬	೧೬%	೧೭	೧೭%
		ವರ್ಷಕ್ಕೆ ೨ ಬಾರಿ	೨೩	೨೩%	೨೨	೨೨%	೨೧	೨೧%	೧೧	೧೧%
		ಒಟ್ಟು	೪೫	೪೫%	೫೫	೫೫%	೫೫	೫೫%	೪೫	೪೫%
೫	ಈಗಿನ ಪ್ರತಿನಿಧಿ ಗೆದ್ದ ನಂತರ ವಾರ್ಡ್‌ನಲ್ಲಿ ಮಾಡಿದ ಮುಖ್ಯ ಕೆಲಸಗಳು ಯಾವುವು?	ವಾರ್ಡಿನ ಅಭಿವೃದ್ಧಿ	೧೨	೧೨%	೧೬	೧೬%	೧೩	೧೩%	೧೫	೧೫%
		ಗ್ರಾಮದ ಅಭಿವೃದ್ಧಿ	೧೬	೧೬%	೧೦	೧೦%	೧೧	೧೧%	೧೦	೧೦%
		ಮಕ್ಕಳ ಶಿಕ್ಷಣ	೧೫	೧೫%	೮	೮%	೧೪	೧೪%	೧೪	೧೪%
		ಉದ್ಯೋಗ ತರಬೇತಿಯ ಹೆಚ್ಚಳ	೧೨	೧೨%	೧೧	೧೧%	೧೨	೧೨%	೧೧	೧೧%
		ಒಟ್ಟು	೫೫	೫೫%	೪೫	೪೫%	೫೦	೫೦%	೫೦	೫೦%

ಮೂಲ: ಕ್ಷೇತ್ರಕಾರ್ಯ ವರದಿ

ಈ ಮೇಲಿನ ಕೋಷ್ಟಕವು ರಾಜಕೀಯದ ಅರಿವು ಕುರಿತು ಮಾಹಿತಿ ನೀಡುತ್ತದೆ. ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಗಡ್ಡೂರು ಪಂಚಾಯಿತಿ ಹಾಗೂ ನಂಗಲಿ ವ್ಯಾಪ್ತಿಗೆ ಸಂಬಂಧಿಸಿದೆ. ಈ ಎರಡು ಪಂಚಾಯತಿಯಲ್ಲಿ ಜನರ ಭಾಗವಹಿಸುವಿಕೆ ಮತ್ತು ರಾಜಕೀಯದ ಬಗ್ಗೆ ಅವರಿಗೆ ಇರುವ ಜ್ಞಾನದ ಕುರಿತು ವಿಶ್ಲೇಷಣೆ ನೀಡುತ್ತದೆ. ಇಲ್ಲಿ ಮುಖ್ಯವಾಗಿ ಕೆಲವು ಸೂಚಕಗಳನ್ನಿಟ್ಟುಕೊಂಡು ಅಧ್ಯಯನ ಮಾಡಿದೆ. ಅವುಗಳೆಂದರೆ, ಗ್ರಾಮ ಪಂಚಾಯಿತಿ ಅಧ್ಯಕ್ಷರ ಹೆಸರು ಗೊತ್ತಿದೆಯೇ? ನಾಯಕನ ಸಂಪರ್ಕ ಇದೆಯೇ, ಪ್ರತಿನಿಧಿ ವಾರ್ಡ್‌ಗೆ ಭೇಟ್ಟಿ ನೀಡುತ್ತಾರೆಯೇ ಅಥವಾ ಇಲ್ಲವೇ, ನೀಡುತ್ತಾರೆ ಎಂದಾದರೆ ಯಾವ ಸಮಯದಲ್ಲಿ ಹಾಗೂ ಗೆದ್ದವರು ಯಾವ ಕೆಲಸ ನಿರ್ವಹಿಸಿದ್ದಾರೆ ಎನ್ನುವ ಆಧಾರದ ಮೇಲೆ ಮಾಹಿತಿ ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಕ್ರಮವಾಗಿ ಎರಡು ಪಂಚಾಯತಿ ಪುರುಷರು ಮತ್ತು ಮಹಿಳೆಯರು ನೀಡಿದ ಮಾಹಿತಿ ಹೀಗಿದೆ. ಶೇ. ೩೬, ೧೨, ೪೧, ೧೨ ಹಾಗೂ ಗೊತ್ತಿಲ್ಲ ಎಂದವರು ಕ್ರಮವಾಗಿ ಶೇ. ೧೪, ೩೮, ೯, ೩೮ರಷ್ಟು ಎಂದು ತೋರಿಸಿದೆ. ಇದೇ ರೀತಿಯ ಈ ಮೇಲಿನ ಎಲ್ಲಾ ಸೂಚಕಗಳಿಗೆ ಮಾಹಿತಿಯನ್ನು ಈ ಕೋಷ್ಟಕವು ಒಳಗೊಂಡಿದೆ.

ಕೋಷ್ಟಕ ೬.೭. ಕುಟುಂಬದ ಸದಸ್ಯರು ಪಂಚಾಯತಿಯಲ್ಲಿ ಹೊಂದಿದ ಹುದ್ದೆಗಳ ವಿವರಗಳು

ಕ್ರ ಸಂ.	ಸೂಚಕಗಳು		ಮುಳಬಾಗಿಲು ತಾಲೂಕು											
			ಗಡ್ಡೂರು ಪಂಚಾಯತಿ											
			ಸದಸ್ಯರು				ಅಧ್ಯಕ್ಷರು				ಉಪಾಧ್ಯಕ್ಷರು			
			ಗಂಡು		ಹೆಣ್ಣು		ಗಂಡು		ಹೆಣ್ಣು		ಗಂಡು		ಹೆಣ್ಣು	
			ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
೧	ಗ್ರಾಮ ಪಂಚಾಯಿತಿ	ಹಿಂದೆ	೫	೫%	೩	೩%	೦	೦%	೦	೦%	೦	೦%	೧	೧%
		ಹಾಲಿ	೪	೪%	೪	೪%	೦	೦%	೦	೦%	೦	೦%	೧	೧%
೨	ತಾಲೂಕು/ಜಿಲ್ಲಾ ಪಂಚಾಯಿತಿ	ಹಿಂದೆ	೬	೬%	೫	೫%	೦	೦%	೦	೦%	೦	೦%	೦	೦%
		ಹಾಲಿ	೭	೭%	೨	೨%	೧	೧%	೧	೧%	೦	೦%	೧	೧%
೩	ಇಲ್ಲ	ಹಿಂದೆ	೨೦	೨೦%	೧೬	೧೬%	೦	೦%	೦	೦%	೦	೦%	೦	೦%
		ಹಾಲಿ	೧೩	೧೩%	೧೫	೧೫%	೧	೧%	೧	೧%	೦	೦%	೦	೦%
		ಒಟ್ಟು	೫೫	೫೫%	೪೫	೪೫%	೨	೨%	೨	೨%	೦	೦%	೩	೩%

ಮೂಲ: ಕ್ಷೇತ್ರಕಾರ್ಯ ವರದಿ

ಈ ಮೇಲಿನ ಕೋಷ್ಟಕವು ಗಡ್ಡೂರು ಪಂಚಾಯಿತಿ ಮತ್ತು ನಂಗಲಿ ದಲಿತ ಸಮುದಾಯದವರು ಪಂಚಾಯತಿಯಲ್ಲಿ ಹೊಂದಿದ ವಿವರವನ್ನು ನೀಡುತ್ತದೆ. ಗ್ರಾಮಪಂಚಾಯತಿ, ತಾಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಸದಸ್ಯರು ಮತ್ತು ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಮಾಹಿತಿಯನ್ನು ಪಡೆದುಕೊಂಡು ವಿವರಣೆ ನೀಡಿದೆ. ಈ ಎರಡು ಪಂಚಾಯತಿ ಸದಸ್ಯರು ಕಡಿಮೆ ಸಂಖ್ಯೆಯಲ್ಲಿ ಅಂದರೆ ಮೀಸಲಾತಿಗನುಗುಣವಾಗಿ ನೇಮಕವಾಗಿದ್ದಾರೆ. ಹಾಗೂ ಅಧ್ಯಕ್ಷರು, ಉಪಾಧ್ಯಕ್ಷರು ಮೀಸಲಾತಿಗನುಗುಣವಾಗಿ ಹುದ್ದೆ ದೊರೆತಿರುವುದು ಕಂಡುಬಂದಿದೆ. ಇಲ್ಲಿ ಇವರ ಭಾಗವಹಿಸುವಿಕೆ ಇದೆ. ಆದರೆ ಇದರ ಹಿಂದೆ ರಾಜಕೀಯವನ್ನು ಮೇಲ್ವರ್ಗದ ಜನರು ನಿಭಾಯಿಸುತ್ತಾರೆ ಎಂದು ಬಹುತೇಕ ಅಧ್ಯಯನದಿಂದ ಗುರುತಿಸಲಾಗಿದೆ.

ಕೋಷ್ಟಕ ೬.೮. ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸದದವರು ನಿಮ್ಮ ಮನೆಯಲ್ಲಿದ್ದಾರೆ ಇಲ್ಲ ಎನ್ನುವುದರ ವಿವರಣೆ

ಕ್ರಸಂ.	ಸೂಚಕಗಳು	ಮುಳಬಾಗಿಲು ತಾಲೂಕು							
		ಗಡ್ಡೂರು ಪಂಚಾಯತಿ				ನಂಗಲಿ ಪಂಚಾಯಿತಿ			
		ಗಂಡು		ಹೆಣ್ಣು		ಗಂಡು		ಹೆಣ್ಣು	
		ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
೧	ಇದ್ದಾರೆ	೧೦	೧೦%	೧೫	೧೫%	೧೨	೧೨%	೧೫	೧೫%
೨	ಇಲ್ಲ	೯೦	೯೦%	೮೫	೮೫%	೮೮	೮೮%	೮೫	೮೫%
ಒಟ್ಟು		೧೦೦	೧೦೦%	೧೦೦	೧೦೦%	೧೦೦	೧೦೦%	೧೦೦	೧೦೦%

ಮೂಲ: ಕ್ಷೇತ್ರಕಾರ್ಯ ವರದಿ

ಈ ಮೇಲಿನ ಕೋಷ್ಟಕವು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಗಡ್ಡೂರು ಮತ್ತು ನಂಗಲಿ ಪಂಚಾಯಿತಿಯ ವ್ಯಾಪ್ತಿಯಲ್ಲಿ ಸೀಮಿತವಾಗಿ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನನು ಹೊಂದಿದವರು ಮತ್ತು ಹೊಂದದೆ ಇರುವವರ ಮಾಹಿತಿಯನ್ನು ಒಳಗೊಂಡಿದೆ. ಮೇಲಿನಂತೆ ಕ್ರಮವಾಗಿ ಪುರುಷರು ಮತ್ತು ಮಹಿಳೆಯರು ಶೇ. ೧೦, ೯೦, ೧೫, ೮೫ ಹಾಗೂ ೧೨, ೮೮, ೧೫, ೮೫ರಷ್ಟು ಒಳಗೊಂಡಿದೆ. ಮತದಾರರ ಪಟ್ಟಿಯಲ್ಲಿ ಪುರುಷರು ನೋಂದಾಯಿಸಿದ ಇರುವವರು ಕ್ರಮವಾಗಿ ೧೦, ೧೨ರಷ್ಟು ಮಾತ್ರ ಅದೇ ರೀತಿಯಾಗಿ ಮಹಿಳೆಯರು ಶೇ. ೧೫, ೧೫ರಷ್ಟು ಮತದಾರರ ಪಟ್ಟಿಯಿಂದ ಹೊರಗುಳಿದಿದ್ದಾರೆ.

ಕೋಷ್ಟಕ ೬.೯. ಗ್ರಾಮದಲ್ಲಿ ಎದುರಿಸುತ್ತಿರುವ ಸಮಸ್ಯೆ ಮತ್ತು ಅವುಗಳಿಗೆ ಪಂಚಾಯಿತಿಯು ಬಗೆಹರಿಸಿದ ಪರಿಹಾರಗಳು ಕುರಿತು ವಿವರಣೆ ನೀಡುತ್ತದೆ.

ಕ್ರ ಸಂ.	ಸೂಚಕಗಳು		ಮುಳಬಾಗಿಲು ತಾಲೂಕು							
			ಗಡ್ಡೂರು ಪಂಚಾಯತಿ				ನಂಗಲಿ ಪಂಚಾಯಿತಿ			
			ಗಂಡು		ಹೆಣ್ಣು		ಗಂಡು		ಹೆಣ್ಣು	
			ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
೧	ಗ್ರಾಮದಲ್ಲಿ ನೀವು ಎದುರಿಸುತ್ತಿರುವ ಸಮಸ್ಯೆಗಳು	ಶಿಕ್ಷಣ	೯	೯%	೫	೫%	೮	೮%	೭	೭%
		ವಸತಿ	೫	೫%	೮	೮%	೫	೫%	೫	೫%
		ರಸ್ತೆ	೯	೯%	೬	೬%	೩	೬%	೫	೫%
		ನೀರು	೭	೭%	೫	೫%	೬	೫%	೨	೨%
		ನೈರ್ಮಲ್ಯ	೩	೩%	೩	೩%	೮	೩%	೫	೫%
		ಆರೋಗ್ಯ	೮	೮%	೨	೨%	೪	೨%	೩	೩%
		ಎಲ್ಲವೂ	೯	೯%	೨೧	೨೧%	೧೬	೨೧%	೨೩	೨೩%
		ಒಟ್ಟು	೫೦	೫೦%	೫೦	೫೦%	೫೦	೫೦%	೫೦	೫೦%
೨	ಈ ಸಮಸ್ಯೆ ಗಳನ್ನು ಪಂಚಾಯತಿ ಯು ಪರಿಹರಿ ಸಿದೆಯೇ?	ಪರಿ ಹರಿಸಿದೆ	೨೨	೨೨%	೧೫	೧೫%	೨೪	೨೪%	೧೮	೧೮%
		ಇಲ್ಲ	೨೮	೨೮%	೩೫	೩೫%	೨೬	೨೬%	೩೨	೩೫%
		ಒಟ್ಟು	೫೦	೫೦%	೫೦	೫೦%	೫೦	೫೦%	೫೦	೫೦%
೩	ಇಲ್ಲವಾದರೆ ಯಾಕೆ ಪರಿಹರಿಸಿಲ್ಲ?	ಅನುದಾನದ ಸಮಸ್ಯೆ	೮	೮%	೩	೩%	೧೪	೧೪%	೨	೨%
		ಪ್ರತಿನಿಧಿಗಳ ಸಮಸ್ಯೆ	೧೫	೧೫%	೧೬	೧೬%	೮	೮%	೧೭	೧೭%
		ನಿರ್ವಹಣಾ ಸಮಸ್ಯೆ	೧೩	೧೩%	೧೩	೧೩%	೧೫	೧೫%	೧೩	೧೩%
		ಭ್ರಷ್ಟಾಚಾರದ ಸಮಸ್ಯೆ	೧೪	೧೪%	೧೮	೧೮%	೧೩	೧೩%	೧೮	೧೮%
		ಒಟ್ಟು	೫೦	೫೦%	೫೦	೫೦%	೫೦	೫೦%	೫೦	೫೦%
೪	ಚುನಾವಣಾ ಸಂದರ್ಭದಲ್ಲಿ ಮತ ಚಲಾಯಿ ಸಿದ್ದೀರಾ?	ಹೌದು	೪೫	೪೫%	೪೩	೪೩%	೪೬	೪೬%	೪೫	೪೫%
		ಇಲ್ಲ	೫	೫%	೭	೭%	೪	೪%	೫	೫%
		ಒಟ್ಟು	೫೦	೫೦%	೫೦	೫೦%	೫೦	೫೦%	೫೦	೫೦%

ಮೂಲ: ಕ್ಷೇತ್ರಕಾರ್ಯ ವರದಿ

ಈ ಮೇಲಿನ ಕೋಷ್ಟಕವು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಗಡ್ಡೂರು ಮತ್ತು ನಂಗಲಿ ಪಂಚಾಯತಿ ವ್ಯಾಪ್ತಿಗೆ ಸಂಬಂಧಿಸಿದೆ. ಇಲ್ಲಿ ಕೆಲವು ಸೂಚಕಗಳಿಂದ ಮಾಹಿತಿ ಸಂಗ್ರಹಿಸಿದೆ ಅವುಗಳೆಂದರೆ, ಗ್ರಾಮದಲ್ಲಿ ಎದುರುಸುತ್ತಿರುವ ಸಮಸ್ಯೆಗಳಾದ ಶಿಕ್ಷಣ, ವಸತಿ, ರಸ್ತೆ, ನೀರು, ನೈರ್ಮಲ್ಯ, ಆರೋಗ್ಯ, ಎಲ್ಲವೂ ಅದೇ ರೀತಿಯಾಗಿ ಈ ಸಮಸ್ಯೆಗಳನ್ನು ಪರಿಹಾರವಾಗಿಯೇ ಎಂದು ಕೂಡ ಪ್ರಶ್ನೆ ಕೇಳಲಾಗಿದೆ. ಹಾಗೂ ಇಲ್ಲವಾದರೆ ಯಾಕೆ ಪರಿಹರಿಸಿಲ್ಲ ಎಂಬುದರ ಕುರಿತು ಮತ್ತು ಚುನಾವಣಾ ಸಂದರ್ಭದಲ್ಲಿ ಮತ ಚಲಾಯಿಸಿದ್ದೀರಾ ಎಂಬ ಸೂಚಕಗಳ ಮೇಲೆ ಮಾಹಿತಿಯನ್ನು ಸಂಗ್ರಹಿಸಿದೆ. ಪುರುಷರು ಮತ್ತು ಮಹಿಳೆಯ ಒಳಗೊಂಡ ಸಂದರ್ಶನ ನಡೆಸಲಾಗಿದೆ. ಈ ಎರಡು ಪಂಚಾಯತಿ ಎಲ್ಲವೂ ಸಮಸ್ಯೆಗಳು ಎದುರಿಸುತ್ತಿವೆ ಎಂದವರು ಕ್ರಮವಾಗಿ ಶೇಕಡವಾರು ೯, ೨೧, ೧೬, ೨೩ರಷ್ಟು ಪ್ರಮಾಣದಲ್ಲಿ ಕಂಡುಬಂದಿದೆ. ಪರಿಹಾರ ಸಿಕ್ಕಿದೆ ಇಲ್ಲ ಎಂದಾಗ ಬಹುತೆಕವಾಗಿ ಶೇ. ೨೮, ೩೫, ೨೬, ೩೨ರಷ್ಟು ಇಲ್ಲ ಎಂದೇ ಉತ್ತರಿಸಿದ್ದಾರೆ. ಈ ಸಮಸ್ಯೆ ಈ ಜಿಲ್ಲೆಯಲ್ಲಿ ಇದು ಜನರ ಸಮಸ್ಯೆಗೆ ಪರಿಹಾರವಾಗಿಲ್ಲ. ಅನುದಾನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕೋಷ್ಟಕದಲ್ಲಿ ನೋಡಬಹುದಾಗಿದೆ. ಇನ್ನೊಂದು ಮುಖ್ಯವಾದ ಸಂಗತಿಯೆಂದರೆ ಮತದಾನ ಚಲಾವಣೆಗೆ ಸಂಬಂಧಿಸಿದ್ದು ಇಲ್ಲಿ ಪುರುಷ ಮತ್ತು ಮಹಿಳೆಯರು ಕ್ರಮವಾಗಿ ಶೇ. ೪೫, ೪೩, ೪೬, ೪೫ರಷ್ಟು ದಲಿತ ಸಮುದಾಯದವರು ಮತ ಚಲಾಯಿಸಿದೆ. ಕೇವಲ ಶೇ. ೫, ೭, ೪, ೫ರಷ್ಟು ಮಾತ್ರ ಮತ ಚಲಾವಣೆ ಮಾಡಿರುವುದಿಲ್ಲ. ಇಲ್ಲಿ ವಿಶೇಷವೆಂದರೆ ದಲಿತರು ಮತದಾನ ಶೇಕಡವಾರು ಪ್ರಮಾಣ ಅಧಿಕವಾಗಿರುವುದನ್ನು ಇಲ್ಲಿ ಗುರುತಿಸಲಾಗಿದೆ.

ಕೋಷ್ಟಕ ೬.೧೦. ಸ್ಥಳೀಯ ಸರ್ಕಾರದಿಂದ ಆಗುವ ಅಭಿವೃದ್ಧಿ ಕುರಿತು ವಿವರ

ಕ್ರ ಸಂ.	ಸೂಚಕಗಳು		ಮುಳಬಾಗಿಲು ತಾಲೂಕು							
			ಗಡ್ಡೂರು ಪಂಚಾಯತಿ				ನಂಗಲಿ ಪಂಚಾಯಿತಿ			
			ಗಂಡು		ಹೆಣ್ಣು		ಗಂಡು		ಹೆಣ್ಣು	
			ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
೧	ಸ್ಥಳೀಯ ಸರ್ಕಾರ ಜನರ ಅಭಿವೃದ್ಧಿಗೆ ಶ್ರಮಿಸಬೇಕೆಂದು ಬಯಸುತ್ತೀರಾ?	ಬಯಸು ತ್ತೇವೆ	೪೦	೪೦%	೩೮	೩೮%	೪೨	೪೨%	೪೦	೪೦%
		ಬಯಸು ವುದಿಲ್ಲ	೧೫	೧೫%	೭	೭%	೧೦	೧೦%	೮	೮%
		ಒಟ್ಟು	೫೫	೫೫%	೪೫	೪೫%	೫೨	೫೨%	೪೮	೪೮%

೨	ಬಯಸಿದರೆ ಯಾವ ಅಭಿವೃದ್ಧಿ ಬಯಸುತ್ತೀರಾ?	ಶಿಕ್ಷಣ	೧೨	೧೨%	೧೦	೧೦%	೮	೮%	೮	೮%
		ಉದ್ಯೋಗ	೧೫	೧೫%	೧೨	೧೨%	೧೦	೧೦%	೧೫	೧೫%
		ಮೂಲಭೂತ ಸೌಲಭ್ಯಗಳು	೧೦	೧೦%	೬	೬%	೯	೯%	೯	೯%
		ಎಲ್ಲವೂ	೨೧	೨೧%	೧೪	೧೪%	೧೮	೧೮%	೨೩	೨೩%
		ಒಟ್ಟು	೫೮	೫೮%	೪೨	೪೨%	೪೫	೪೫%	೫೫	೫೫%

ಮೂಲ: ಕ್ಷೇತ್ರಕಾರ್ಯ ವರದಿ

ಈ ಮೇಲಿನ ಕೋಷ್ಟಕವು ಕೋಲಾರ ಇಜಲ್ಲೆಯ ಮುಳುಬಾಗಿಲ ತಾಲೂಕಿನ ಗಡ್ಡೂರು ಮತ್ತು ನಂಗಲಿ ಪಂಚಾಯಿತಿ ವ್ಯಾಪ್ತಿಗೆ ಸಂಬಂಧಿಸಿದೆ. ಸ್ಥಳೀಯ ಸರ್ಕಾರಗಳು ದಲಿತರ ಅಭಿವೃದ್ಧಿಗೆ ಶ್ರಮಿಸಲು ಮತ್ತು ಶ್ರಮಿಸಲು ಬೇಡ ಎನ್ನುವುದರ ಕುರಿತು ವಿವರಣೆ ಸಂಬಂಧಿಸಿದೆ. ಈ ಮೇಲಿನ ಪಂಚಾಯಿತಿಗಳು ಕ್ರಮವಾಗಿ ಬಯಸುತ್ತೇವೆ ಎಂದವರು ಪುರುಷರು ಮತ್ತು ಮಹಿಳೆಯರು ಶೇಕಡವಾರು ೪೦, ೩೮, ೪೨, ೪೦ ಹಾಗೂ ಬಯಸುವುದಿಲ್ಲ ಎಂದವರು ಕ್ರಮವಾಗಿ ಶೇ. ೧೫, ೭, ೧೦, ೮ರಷ್ಟು ಉತ್ತರ ಬಂದಿದೆ. ಯಾವ ಪ್ರಮಾಣದಲ್ಲಿ ಸೌಲಭ್ಯ ಎನ್ನುವುದನ್ನು ಶಿಕ್ಷಣ ಉದ್ಯೋಗ, ಮೂಲಭೂತ ಸೌಲಭ್ಯಗಳಿಗೆ ಈ ರೀತಿಯಾಗಿ ಕ್ರಮವಾಗಿ ಉತ್ತರಿಸಿದ್ದಾರೆ. ಎಲ್ಲವೂ ಸೌಲಭ್ಯ ಎಂದು ಶೇ. ೨೧, ೧೪, ೧೮, ೨೩ರಷ್ಟು ಪ್ರಮಾಮದಲ್ಲಿ ಎಲ್ಲಾವನ್ನು ಬಗೆಹರಿಸಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಕೋಷ್ಟಕ ೬.೧೧. ಯೋಜನೆಗಳಿಂದ ಸಿಕ್ಕಿದ ಸಹಾಯಧನದ ಮೊತ್ತ

ಕ್ರ ಸಂ.	ಸೂಚಕಗಳು	ಮುಳಬಾಗಿಲು ತಾಲೂಕು									
		ಗಡ್ಡೂರು ಪಂಚಾಯತಿ					ನಂಗಲಿ ಪಂಚಾಯಿತಿ				
		ಸರ್ಕಾರದ ಸಹಾಯ ಧನ	ನಾವೇ ಕೈಯಿಂದ ಹಾಕಿದ್ದು	ಒಟ್ಟು ಮೊತ್ತ ರೂ.	ಸಂಖ್ಯೆ	ಶೇ.	ಸರ್ಕಾರದ ಸಹಾಯ ಧನ	ನಾವೇ ಕೈಯಿಂದ ಹಾಕಿದ್ದು	ಒಟ್ಟು ಮೊತ್ತ ರೂ.	ಸಂಖ್ಯೆ	ಶೇ.
೧	ಆಶ್ರಯ ವಸತಿ ಯೋಜನೆ	೫೦,೦೦೦	೬೦,೦೦೦	೧೧೦,೦೦೦	೨೪	೨೪%	೫೦,೦೦೦	೬೦,೦೦೦	೧೧೦,೦೦೦	೨೨	೨೨%
೨	ಅಂಬೇಡ್ಕರ್ ವಸತಿ ಯೋಜನೆ	೪೦,೦೦೦	೨೦,೦೦೦	೬೦,೦೦೦	೨೨	೨೨%	೪೦,೦೦೦	೪೦,೦೦೦	೮೦,೦೦೦	೨೪	೨೪%
೩	ಇಂದಿರಾ ಆವಾಜ್ ಯೋಜನೆ	೭೫,೦೦೦	೫೦,೦೦೦	೧೨೫,೦೦೦	೨೧	೨೧%	೭೫,೦೦೦	೩೦,೦೦೦	೧೦೫,೦೦೦	೧೮	೧೮%
೪	ಬಸವ ಆವಾಜ್ ಯೋಜನೆ	೫೫,೦೦೦	೫೦,೦೦೦	೧೦೫,೦೦೦	೧೮	೧೮%	೫೫,೦೦೦	೫೦,೦೦೦	೧೦೫,೦೦೦	೨೧	೨೧%
೫	ರಾಜೀವ್ ಗಾಂಧಿ ವಸತಿ ಯೋಜನೆ	--	--	--	೦	೦%	--	--	--	೦	೦%
೬	ವಾಜಪೇಯಿ ನಗರ ವಸತಿ ಯೋಜನೆ	--	--	--	೦	೦%	--	--	--	೦	೦%
೭	ಸರ್ಕಾರದಿಂದ ಮನೆ ಸಿಗದವರು	--	--	--	೧೫	೧೫%	--	--	--	೧೫	೧೫%
	ಒಟ್ಟು				೧೦೦	೧೦೦%				೧೦೦	೧೦೦%

ಮೂಲ: ಕ್ಷೇತ್ರಕಾರ್ಯ ವರದಿ

ಈ ಮೇಲಿನ ಕೋಷ್ಟಕವು ಸರ್ಕಾರದಿಂದ ರೂಪಿಸಲಾದ ಯೋಜನೆಗಳಿಂದ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಗಡ್ಡೂರು ಮತ್ತು ನಂಗಲಿ ದಲಿತ ಸಮುದಾಯಕ್ಕೆ ವಸತಿಯ ಯೋಜನೆಯ ಬಗ್ಗೆ ವಿಚಾರಿಸಿ ಸಂದರ್ಶನ ಮಾಡಿ ಮಾಹಿತಿಯನ್ನು ಪಡೆಯದ ವಿವರವನ್ನು ನೀಡುತ್ತದೆ. ಇಲ್ಲಿ ಆಶ್ರಯ ವಸತಿಯೊಜನೆ, ಅಂಬೇಡ್ಕರ್ ವಸತಿ ಯೋಜನೆ, ಇಂದಿರಾ ಆವಾಸ್ ಯೋಜನೆ, ಬಸವ ಆವಾಸ್ ಯೋಜನೆ, ರಾಜೀವ್ ಗಾಂಧಿ ವಸತಿ ಯೋಜನೆ, ವಾಜಪೇಯಿ ವಸತಿ ಯೋಜನೆಯ ಮನೆಗಳು ಸಿಕ್ಕವರ ಪ್ರಮಾಣ ಹಾಗೂ ಅದರಿಂದ ದೊರೆತ ಹಣಕಾಸಿನ ವಿವರಗಳನ್ನು ಒಳಗೊಂಡಿದೆ. ಈ ಎರಡು ಪಂಚಾಯತಿಯ ವ್ಯಾಪ್ತಿಯಲ್ಲಿ ಕ್ರಮವಾಗಿ ವಸತಿ ಪಡೆದವರು ನೂರಕ್ಕೆ ಶೇಕಡವಾರು ಕ್ಮರದಲ್ಲಿ ವಿವರಗಳು ಹೀಗಿದೆ. ಶೇ. ೨೪, ೨೨, ೨೧, ೧೮ ಹಾಗೂ ಶೇ. ೨೨, ೨೪, ೧೮, ೨೧ ಸರ್ಕಾರದಿಂದ ಮನೆ ಸಿಗದವರು ಕ್ರಮವಾಗಿ ಎರಡು ಪಂಚಾಯಿತಿಯಿಂದ ಶೇ. ೧೫, ೧೫ರಷ್ಟು ಮನೆಗಳನ್ನು ಇನ್ನು ದೊರೆತಿಲ್ಲ. ಹಾಗೂ ಈ ಯೋಜನೆಯಿಂದ ದೊರೆತ ಹಣಕಾಸಿನ ವಿವರ ಕ್ಮವಾಗಿ ರೂ. ೫೦೦೦೦, ೪೦೦೦೦, ೭೫೦೦೦, ೫೫೦೦೦ ಹಾಗೂ ಅದೇ ಹಣವನ್ನು ನಂಗಲಿನ ಗ್ರಾಮದ ದಲಿತ ಜನರಿಗೆ ದೊರೆತಿದೆ ಮತ್ತು ಅವರು ಕೈಯಿಂದ ಉಳಿದ ಹಣ ಹಾಕಿಕೊಂಡು ಮನೆಯನ್ನು ಕಟ್ಟಿಸಿಕೊಂಡಿದ್ದಾರೆ.

ಕೊನೆಟಿಪ್ಪಣಿಗಳು

೧. ಥೋಮಸ್ ೨೦೦೯, ದಕ್ಷಿಣ ಕನ್ನಡದ ಕ್ರೈಸ್ತರು ಮತ್ತು ರಾಜಕೀಯ ಭಾಗವಹಿಸುವಿಕೆ ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್‌ಪ್ರಬಂಧ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ. ಪು.೨-೬.

೨. ಮೂರ್ತಿ ಎನ್. (ಸಂ), ಹೋರಾಟದ ಮಹಾಪ್ರಬಂಧ ಸಂಪುಟ-೨, ದಲಿತ ಸಂಘರ್ಷ ಸಮಿತಿ, ಬೆಂಗಳೂರು, ೨೦೦೬. ಪು. ೪೧೨.

೩. ಪುಟ್ಟಯ್ಯ ಬಿ.ಎಂ. "ದಲಿತರು ಮತ್ತು ಮಾರ್ಕ್ಸ್‌ವಾದ" ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.

೪. ಸೋಮಶೇಖರ ಎಚ್-೨೦೦೯ ಕೃಷಿ ಸಂಪನ್ಮೂಲ ಮಾರುಕಟ್ಟೆಯಲ್ಲಿ ರಸಗೊಬ್ಬರಗಳು ಕೋಲಾರ ಜಿಲ್ಲೆ ಒಂದು ಅಧ್ಯಯನ, ಅಪ್ರಕಟಿತ ಪಿಎಚ್‌ಡಿ ಮಹಾಪ್ರಬಂಧ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ. ಪು.೫೪-೫೬.

೫. ಐಸೆಕ್ ನಡೆಸಿದ ಅಧ್ಯಯನದಲ್ಲಿ ಬಹಿರಂಗ ಗ್ರಾಮ ಪಂಚಾಯ್ತಿಗಳಲ್ಲಿ ಇನ್ನೂ ಅಸ್ಪೃಶ್ಯತೆ ಜೀವಂತ ಪ್ರಜಾವಾಣಿ ದಿನಪತ್ರಿಕೆ ೧೩.೧೨.೨೦೧೬. ಪು ೫.

೬. ಸೂರ್ಯ ಪ್ರಕಾಶ್, ವಿ. ಅತಿದೊಡ್ಡ ಪ್ರಜಾತಂತ್ರ, ಅತ್ಯುತ್ತಮ ಪ್ರಜಾತಂತ್ರ (ತೀ) ಪ್ರಜಾವಾಣಿ ದಿನಪತ್ರಿಕೆ, ಜನವರಿ ೧೮, ೨೦೧೮.

೭. ಆನಂದ್ ತೇಲ್‌ತುಂಬ್ಡೆ (ಸಂ), ಗಂಗಾಧರ್ ಮೂರ್ತಿ ಬಿ. (ಅನು) "ಹಿಂದುತ್ವ ಮತ್ತು ದಲಿತರು" ಕೋಮುವಾದ ರಾಜಕಾರಣ ಒಂದು ತಾತ್ವಿಕ ಪರಾಮರ್ಶೆ ೨೦೧೬, ಪು.

೮. ರಾಜಶೇಖರಯ್ಯ ಎ.ಎಂ., ಸಿದ್ಧಲಿಂಗಯ್ಯ, ದೇವನೂರು ಮಹದೇವ (ಸಂ), ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು ಸಂಪುಟ ೪ ಹಿಂದೂ ಧರ್ಮದ ಒಗಟುಗಳು ಕನ್ನಡ ಮತ್ತು ಸಂಸ್ಕೃತ ನಿರ್ದೇಶನಾಲಯ, ಬೆಂಗಳೂರು. ಪು. ೭೬

೯. ಅನುಪಮಾ ಹೆಚ್.ಎಸ್. ಬಸೂ (ಕನ್ನಡಕ್ಕೆ), ಭೀಮಯಾನ, ಡಾ. ಬಿ.ಆರ್. ಅಂಬೇಡ್ಕರ್ ಅವರ ಚಿಂತನೆಗಳು, ಲಡಾಯಿ ಪ್ರಕಾಶನ, ಗದಗ – ೨೦೧೬. ಪು.೮೧.

೧೦. ಸುರೇಶ್ ಕೆ.ಜೆ., ೨೦೧೫, ಕರ್ನಾಟಕ ಸರಕರ ರಾಜಕೀಯ, ಲಕ್ಷ್ಮಿ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು ಪು. ೩೫–೩೬.

ಸಮಾರೋಪ

ಸಾರಾಂಶ ಮತ್ತು ಫಲಿತಗಳು

ಅಧ್ಯಾಯ ಏಳು

ಸಮಾರೋಪ

ಸ್ಥಳೀಯ ಸರ್ಕಾರಗಳಲ್ಲಿ ದಲಿತರ ಸಹಭಾಗಿತ್ವ, ಅವರಿಗೆ ದೊರೆತಿರುವ ಮೀಸಲಾತಿ ಸೌಲಭ್ಯಗಳ ನೆಲೆಯಲ್ಲಿ ನೋಡಿದಾಗ ಅವರ ಭಾಗವಹಿಸುವಿಕೆಯಲ್ಲಿ ಸಂಖ್ಯಾತ್ಮಕ ಅಂಶಗಳೇ ಮೇಲಾಗುತ್ತವೆ. ದಲಿತರ ಅಭಿವೃದ್ಧಿ ಮತ್ತು ಸ್ಥಳೀಯ ಸರ್ಕಾರಗಳಲ್ಲಿ ದಲಿತ ಭಾಗವಹಿಸುವಿಕೆಗೆ ಸಂಬಂಧಪಟ್ಟಂತೆ ನಡೆದ ಅಧ್ಯಯನಗಳು ಸಹ ಇದನ್ನೇ ಹೇಳುತ್ತವೆ. ಆದರೆ ದಲಿತರ ಭಾಗವಹಿಸುವಿಕೆ ಕೇವಲ ರಾಜಕೀಯ ಸ್ವಾತಂತ್ರ್ಯ ದೊರೆತರೆ ಎನ್ನುವುದು ವಾಸ್ತವಿಕವಲ್ಲ. ಇದನ್ನು ನಾವು ಕೇವಲ ಸಂಖ್ಯಾತ್ಮಕ ವಾಗಿ ಮಾತ್ರ ಹೇಳಬಹುದು. ನಮಗೆ ದೊರೆತಿರುವ ರಾಜಕೀಯ ಸ್ವಾತಂತ್ರ್ಯವು ಸಾಮಾಜಿಕ ಆರ್ಥಿಕ ಅಸಮಾನತೆಯನ್ನು ಸರಿಪಡಿಸಲು ಸಾಧ್ಯವಾಗದಿದ್ದರೆ ನಾವು ವೈರುಧ್ಯತೆಗಳಿಗೆ ಒಳಗಾಗುತ್ತೇವೆ ಎನ್ನುವುದನ್ನು ಜನವರಿ ೨೬. ೧೯೫೦ರಂದು ಬಾಬಾ ಸಾಹೇಬರು ಹೇಳಿದ್ದರು. “We are going to enter into a life of contradictions. In politics, we will have equality and in social and economic life we will have inequality” ಅಂಬೇಡ್ಕರ್ ಗುರುತಿಸಿರುವ ವೈರುಧ್ಯಗಳನ್ನು ಹೋಗಲಾಡಿಸಲು ನಮಗೆ ಇನ್ನು ಸಾಧ್ಯವಾಗಿಲ್ಲ. ಈ ವೈರುಧ್ಯಗಳು ಬೆಳೆಯುತ್ತಿರುವುದನ್ನು ಕುರಿತು ಸಮಾಜ ವಿಜ್ಞಾನಿಗಳು ನಮ್ಮ ಗಮನಸೆಳೆಯುತ್ತಿದ್ದಾರೆ. ಸಾಮಾಜಿಕ ರಚನೆಯಲ್ಲಿನ ತುತ್ತ ತುದಿಯಲ್ಲಿನ ಉನ್ನತ ವರ್ಗಗಳ ವರಮಾನ–ಅಧಿಕಾರ ಎಷ್ಟರಮಟ್ಟಿಗೆ ಏರಿಕೆಯಾಗುತ್ತಿದೆ ಎಂಬುದಕ್ಕಿಂತ ಸಾಮಾಜಿಕ ರಚನೆಯ ತಳದಲ್ಲಿ ವಿಸ್ತೃತವಾಗಿರುವ ಅಸಮಾನತೆಗಳು ತೀವ್ರಗೊಳ್ಳುತ್ತಿರುವುದು ನಮಗೆ ಮುಖ್ಯವಾಗಬೇಕು. ಇತ್ತೀಚೆಗೆ ಜಾತಿ ಮತ್ತು ಧರ್ಮದ ಜೊತೆಗೆ ಆರ್ಥಿಕ ಅಂಶಗಳು ಸೇರಿ ದಲಿತರ ರಾಜಕೀಯ ಭಾಗವಹಿಸುವಿಕೆಯನ್ನು ನಿಯಂತ್ರಿಸುತ್ತವೆ ಎನ್ನುವುದನ್ನು ಅಧ್ಯಯನವು ಗುರುತಿಸಿದೆ.

ಜನರು ಜಾತಿ ಮತ್ತು ಧರ್ಮದ ಕುರಿತು ಇಟ್ಟಿರುವ ನಂಬಿಕೆಯನ್ನು ಬಂಡವಾಳ ಮಾಡಿಕೊಂಡು ರಾಜಕೀಯವನ್ನು ಮಾಡಲಾಗುತ್ತಿದೆ. ಕೇವಲ ರಾಜಕೀಯ ಲಾಭಕ್ಕಾಗಿ ಸಾಮಾಜಿಕ ನ್ಯಾಯವನ್ನು ಪ್ರಜಾಪ್ರಭುತ್ವ ನೆಲೆಯಲ್ಲಿ ಅರ್ಥೈಸಿಕೊಳ್ಳುವುದು ತಿಳಿಯುತ್ತದೆ. ಆದರೆ ಮೀಸಲಾತಿ ನೀಡಿರುವ

ಸಾಮಾಜಿಕ ಅವಕಾಶಗಳನ್ನು ತಾತ್ಕಾಲಿಕವಾಗಿ ಜಾತಿ ಗುಂಪುಗಳಾಗಿ ವಿಂಗಡಿಸಿ ರಾಜಕೀಯ ಲಾಭಗಳನ್ನು ಪಡೆಯಲಾಗುತ್ತಿದೆ. ಅಷ್ಟು ಮಾತ್ರವಲ್ಲದೇ ಮೀಸಲಾತಿಯನ್ನು ರಾಜಕೀಯ ಕಾರಣಗಳಿಗಾಗಿ ಸಿಂಬಾಲಿಕ್ ಆಗಿ ಬಳಸಿಕೊಂಡು, ಮುಂದುವರಿದ ಜಾತಿಗಳು ಜಾತಿ ರಾಜಕಾರಣದ ಮಾಡುತ್ತಿರುವುದು ಕಂಡುಬರುತ್ತದೆ. ಸ್ವಲ್ಪ ಜನರಿಗೆ (ಪ್ರಬಲರು) ಮೀಸಲಾತಿ ಹೆಸರಿನಲ್ಲಿ ಆಡಳಿತ ಸ್ಥಾನ ನೀಡಿ ಅವರು ಪ್ರತಿನಿಧಿಸುವ ಸಾಮಾಜಿಕ ಗುಂಪಿಗೆ ಅಭಿವೃದ್ಧಿ ಮತ್ತು ಪ್ರಜಾಸತ್ತಾತ್ಮಕ ಆಡಳಿತದಲ್ಲಿ ಭಾಗವಹಿಸುವುದರಿಂದ ದೂರವಿಡಲಾಗುತ್ತದೆ. ಹಿಂದುಳಿದ ಮತ್ತು ಜಾತಿಯ ಗುಂಪುಗಳನ್ನು ಮಾಡಿಕೊಂಡು ಅವರ ಬೆಳವಣಿಗೆಯನ್ನು ಬದಿಗೆ ಸರಿಸಲಾಗುತ್ತದೆ. ಈ ಬೆಳವಣಿಗೆಯಿಂದ ಪ್ರಾತಿನಿಧಿತ್ವ ರಾಜಕೀಯಕ್ಕಿಂತ ಪಕ್ಷದ ರಾಜಕೀಯವೇ ಪ್ರಬಲವಾಗಿ ಹೊಸ ತಲೆಮಾರಿನ ದಲಿತ ನಾಯಕರು, ಹಿಂದುಳಿದ ವರ್ಗಗಳ ನಾಯಕರು ಮತ್ತು ಮಹಿಳಾ ನಾಯಕರ ರಾಜಕೀಯ ಭಾಗವಹಿಸುವಿಕೆಯನ್ನು ನಿಷ್ಕ್ರಿಯ ಮಾಡಲಾಗುತ್ತಿದೆ. ಜನ ಮತ್ತು ಜಾತಿಗಳು ಅಧಿಕಾರದಲ್ಲಿ ಇರುವವರಿಗೆ ಮತ್ತು ಅಧಿಕಾರಕ್ಕೆ ಬರುವವರಿಗೆ ವೋಟ್ ಬ್ಯಾಂಕ್‌ಗಳಾಗಿ ಬದಲಾಯಿಸಿ ಅವರನ್ನು ಕೇವಲ ಮತದಾರರಾಗಿ ನೋಡಲಾಗುತ್ತಿದೆ. ಈ ಬೆಳವಣಿಗೆಯು ಪ್ರಜಾಪ್ರಭುತ್ವದ ಆಶಯಗಳನ್ನು ಪ್ರಶ್ನಿಸುತ್ತಿದೆ.

ಪ್ರಾತಿನಿಧಿತ್ವ ಮತ್ತು ಮೀಸಲಾತಿ ರಾಜಕಾರಣವು ಗ್ರಾಮ ಪಂಚಾಯಿತಿ ಹಂತದ ವಾರ್ಡ್‌ಗಳಲ್ಲಿ ವ್ಯಕ್ತಿಗಳಿಗೆ ಮೀಸಲಿರಿಸುವ ಕ್ಷೇತ್ರಗಳಾಗಿ ವಿಂಗಡಿಸಲಾಗುತ್ತಿದೆ. ಪ್ರಬಲರ ಮಾತು ಕೇಳುವ ದಲಿತ ವ್ಯಕ್ತಿಗಳನ್ನು ಚುನಾವಣೆಗೆ ನಿಲ್ಲಿಸಲಾಗುತ್ತಿದೆ. ದಲಿತರ ಆರ್ಥಿಕ ಸಾಮಾಜಿಕ ದುಸ್ಥಿತಿಯನ್ನು ಆಸರೆಯಾಗಿ ಬಳಸಿಕೊಂಡು ಹಣದ ಮೂಲಕ ಚುನಾವಣೆ ನಡೆಸುವುದು ಮಾಮೂಲಿಯಾಗಿದೆ. ಇದಲ್ಲದೆ ವಸ್ತು ಪದಾರ್ಥಗಳ ಸಂಸ್ಕೃತಿಯನ್ನು ಭಿತ್ತಿ ಅವಕಾಶ ವಂಚಿತ ಜನರ ದೌರ್ಬಲ್ಯವನ್ನು ಉಪಯೋಗಿಸಿಕೊಂಡು ದಲಿತರು ಭಾಗವಹಿಸುವಿಕೆಯ ಪಂಚಾಯಿತಿ ರಾಜಕೀಯವನ್ನು ತಡೆಗಟ್ಟಲಾಗುತ್ತಿದೆ. ಇತ್ತೀಚೆಗೆ ಅಭಿವೃದ್ಧಿಯ ಹೆಸರಿನಲ್ಲಿ ನಡೆದಿರುವ ಪ್ರಚಾರ ಮತ್ತು ಪ್ರಚಾರಕ್ಕೆ ಮಾಡುತ್ತಿರುವ ಮಾಧ್ಯಮದ ವಿಧಾನವು ಬಡವರನ್ನು ಮತ್ತು ದಲಿತರನ್ನು ಕಾಲ್ಪನಿಕ ಲೋಕಕ್ಕೆ ಕರೆದುಕೊಂಡು ಹೋಗುವುದು ಸಹಜವಾಗಿಬಿಟ್ಟಿದೆ. ಎಲ್ಲಾ ಸಮಾಜಗಳಲ್ಲಿ (ಹಳ್ಳಿಯಿಂದ ದಿಲ್ಲಿಯವರೆಗೆ) ಜಡುಗಟ್ಟಿದ ಜಾತಿ ಮತ್ತು ಧರ್ಮಗಳ ಮೂಲಕ ದಲಿತರ ಭಾಗವಹಿಸುವಿಕೆಯನ್ನು ಮೋಸದಿಂದ ತಡೆಯಲಾಗುತ್ತಿದೆ.

ಸಂವಿಧಾನದ ಆಶಯ, ಮೂಲಭೂತ ಹಕ್ಕುಗಳ ಮತ್ತು ರಾಜ್ಯ ನಿರ್ದೇಶಕ ತತ್ವಗಳು ಮತ್ತು ೭೩ ತಿದ್ದುಪಡಿಯ ಆಶಯ ಸೇರಿದಂತೆ ಯಾವುದೇ ತಾತ್ವಿಕತೆಯನ್ನು ರಾಜಕೀಯ ವ್ಯವಸ್ಥೆಯು ಒಳಗು ಮಾಡಿಕೊಂಡಿಲ್ಲ. ಎಲ್ಲರನ್ನು ಒಳಗೊಳ್ಳದ ದೂರದೃಷ್ಟಿಯಿಂದಲ್ಲೇ ಎಲ್ಲರನ್ನು ಒಳಗೊಳ್ಳದ ಪಕ್ಷ ರಾಜಕಾರಣ ಬೆಳೆಯುತ್ತಿರುವುದು ಸ್ಪಷ್ಟವಾಗಿ ತಿಳಿಯುತ್ತದೆ. ಆಳುವ ಪಕ್ಷಗಳು ಆಂತರಿಕವಾಗಿ ಸ್ವ-ಜಾತಿ ಪಕ್ಷಗಳು, ಜಾತಿ ಸಂಘಗಳಾಗಿ ಬದಲಾಗಿ ಪ್ರಜಾಪ್ರಭುತ್ವವನ್ನು ಅಣಕಿಸುವಂತೆ ಜಾತಿ

ಪ್ರಾಬಲ್ಯಗಳು ನಡೆಯುತ್ತಿವೆ. ಪ್ರಜಾಭುತ್ವವನ್ನು ಮುಂದೆ ಮಾಡಿಕೊಂಡು ಪ್ರಬಲವಿರುವ ಹಾಗೂ ಸೋಷಿಯಲ್ ಕ್ಯಾಪಿಟಲ್ ಮೇಲೆ ಹಿಡಿತ ಸಾಧಿಸಿರುವ ಮೇಲ್ಜಾತಿಗಳು ಮಾಡುವ ಜಾತಿಕರಣವು ದಲಿತರ ರಾಜಕೀಯ ದಮನಕ್ಕೆ ಅತ್ಯಂತ ಜಾಣ್ಮೆಯಿಂದ ಬಳಸುತ್ತವೆ. ಇತ್ತೀಚೆಗೆ ಪಕ್ಷಗಳು ಜಾತಿ ಸಂಘಟನೆಗಳಾಗಿ ರೂಪುಗೊಳ್ಳುತ್ತಿರುವುದು ಬಹು ಜನರನ್ನು ಜಾತಿ ನೆಲೆಯಿಂದಲೇ ಪ್ರಭಾವಿಸಿದೆ.

ಪಕ್ಷೇತರ ಎಂದು ಹೇಳುವ, ಸೆಕ್ಯುಲರ್ ಎಂದು ಹೇಳುವ ವರ್ಗಗಳು ದುರ್ಬಲ ವರ್ಗಗಳನ್ನು ರಾಜಕೀಯ ದಾಳವಾಗಿ ಬಳಸುತ್ತಿವೆ. ಒಟ್ಟಾರೆ ಜಾತಿ ಪ್ರಜಾಪ್ರಭುತ್ವ ವಿರೋಧಿಯಾಗಿ ಗಟ್ಟಿಗೊಳಿಸುವ ವೇದಿಕೆಯಾಗಿದೆ. ಅಷ್ಟಕ್ಕೆ ಮಾತ್ರ ನಿಲ್ಲದೆ, ಯಾರು ಯಾವ ಸಂಬಂಧಗಳನ್ನು ಹೊಂದಿರಬೇಕು? ಯಾವುದು ಸರಿ? ಯಾವುದು ತಪ್ಪು? ಯಾವುದನ್ನು ಪ್ರಶ್ನಿಸಬೇಕು? ಯಾವುದನ್ನು ಪ್ರಶ್ನಿಸಬಾರದು ಎನ್ನುವುದನ್ನು ಸಾಮಾಜಿಕ ರಚನೆಯ ಪದರದಲ್ಲಿ ಹರಡಲಾಗುತ್ತಿದೆ. ಹೀಗೆ ಮಾಡುವಾಗ ನಮಗೆ ಸೇರದ ವ್ಯಕ್ತಿಗಳನ್ನು ಸಾಮಾಜಿಕ ರಚನೆಯಿಂದ ಹೊರಹಾಕಲಾಗುತ್ತಿದೆ. ಜಾತಿಯು ಪ್ರಜಾಪ್ರಭುತ್ವದ ಹೆಸರಿನಲ್ಲಿ ಆಧುನಿಕ ಅವಕಾಶಗಳನ್ನು ಬಳಸಿಕೊಳ್ಳುತ್ತ ಸಾಂಪ್ರದಾಯಿಕ ಅಧಿಪತ್ಯವನ್ನು ಮುಂದೆ ಪಡೆದುಕೊಂಡು ಹೋಗುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ. ಜಾತಿ ಇಂದು ರಾಜಕೀಯ ಪ್ರಜ್ಞೆಯಾಗಿ, ಒಂದು ರಾಜಕೀಯ ಪ್ರಕ್ರಿಯೆಯಾಗಿ ಕಾಣುತ್ತಿದೆ. ಅದಕ್ಕೆ ಗ್ರಾಮದಿಂದ ರಾಜ್ಯದವರೆಗೆ ರಾಜಕೀಯ ಎನ್ನುವುದು ಜಾತಿಯ ಮೂಲಕವೂ ನಡೆಯುವ ಬೆಳವಣಿಗೆ ಎನ್ನುವುದನ್ನು ನಮ್ಮ ಅಧ್ಯಯನವು ತಿಳಿಸುತ್ತದೆ.

ಇತ್ತೀಚೆಗೆ ಶೈಕ್ಷಣಿಕ ಸಂಸ್ಥೆಗಳು ಸೇರಿದಂತೆ ಬಹುತೇಕ ಆಧುನಿಕ ಸಂಸ್ಥೆಗಳು ಜಾತಿವಾದ ಹುಟ್ಟುಹಾಕುವ ಹೊಸ ತಾಣಗಳಾಗಿ ನಿರ್ಮಾಣವಾಗಿವೆ. ಅವಕಾಶವಂಚಿತ, ಅಮಾಯಕ ಮತ್ತು ದಲಿತ ವಿದ್ಯಾರ್ಥಿಗಳು ತಮಗೆ ಸ್ಪರ್ಧಿಗಳು ಎಂಬ ಅಭಿಪ್ರಾಯದಿಂದ ಬಹುತೇಕ ಮೇಲ್ಜಾತಿಯ ವಿದ್ಯಾರ್ಥಿಗಳು ಅವರ ಬಗ್ಗೆ ಅಸಮಾಧಾನ, ನಿರ್ಲಕ್ಷ್ಯತೆ ಮತ್ತು ಹಗೆತನ ಹೊಂದಿದವರಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ದಲಿತರ ಮಕ್ಕಳು ಶೈಕ್ಷಣಿಕ ಸಂಸ್ಥೆಗಳಲ್ಲಿ ಉಳಿದು ಕೊಳ್ಳುವ ಪ್ರಮಾಣ ಕಡಿಮೆಯಾಗುವುದು ಸೋಜಿಗವಲ್ಲ. ಶೈಕ್ಷಣಿಕ ಪ್ರಗತಿಯಲ್ಲಿ ಕಡಿಮೆ ಪ್ರಮಾಣದ ಸಾಧನೆ ಸೂಚಿಸುವ ಸೂಚಕಗಳು, ಪರಿಶಿಷ್ಟ ಸಮುದಾಯದ ಸದಸ್ಯರಲ್ಲಿ ಅಂತರ್ಗತವಾಗಿಯೇ ಸಾಮರ್ಥ್ಯ ಹೊಂದಿಲ್ಲ ಎಂಬ ವಿಷಯ ಆಶ್ಚರ್ಯ ಹುಟ್ಟಿಸುತ್ತದೆ. ಕಡಿಮೆ ಸಾಧನೆ ಮತ್ತು ಸಂಸ್ಥೆಗಳಲ್ಲಿನ ನಕರಾತ್ಮಕ ಅನುಭವಗಳು, ಇದರಿಂದಾಗುವ ತಿಕ್ಕಾಟಗಳು ಮತ್ತು ಹೊರಹಾಕುವ ಪ್ರಕ್ರಿಯೆಗಳು, ತಳಜಾತಿ ಸದಸ್ಯರು ಅಸಮರ್ಥರು ಮತ್ತು ಮೌಲ್ಯಹೀನರು ಎಂಬ ರೂಢಿ ಸಂಪ್ರದಾಯದ ರೂಢಿ ಭಾವನೆಗಳು ಯಥಾವತ್ತಾಗಿ ಪುನಃ ಚಾಲನೆಯಾಗುತ್ತಿವೆ. ಇಂತಹ ಅನುಭವಗಳು ಮುಖ್ಯವಾಗಿ ಪ್ರಬಲ ಗುಂಪುಗಳಲ್ಲಿ ಸಹಾನುಭೂತಿ ಇಲ್ಲದೆ ಹಗೆತನದಿಂದ ಕೂಡಿದೆ. ನೀತಿಗಳು ಪೂರ್ಣ ಪ್ರಮಾಣದಲ್ಲಿ ಜಾರಿಯಾಗದಿರುವ ಪರಿಣಾಮದಿಂದ ಪರಿಶಿಷ್ಟ ಸಮುದಾಯದ ಯುವಕರಲ್ಲಿ ಸ್ವಾಭಿಮಾನ, ಸ್ವ-ಕಲ್ಪನೆ, ಆತ್ಮವಿಶ್ವಾಸ ಕಡಿಮೆ ಪ್ರಮಾಣದಲ್ಲಿ ಕಂಡುಬರುತ್ತಿದೆ. ಇದಕ್ಕೆ ಇನ್ನೂ ಹಲವು ಪರಿಸ್ಥಿತಿಗಳು ಬೆರೆತು ದೊಡ್ಡ ಪ್ರಮಾಣದ ನಿರುದ್ಯೋಗಿಗಳಾಗಲು ಕಾರಣವಾಗಿದೆ.

ಉನ್ನತ ಶೈಕ್ಷಣಿಕ ವ್ಯವಸ್ಥೆಯಲ್ಲಿ ಇರುವ ಮೀಸಲಾತಿ ನೀತಿಗಳು ವಿಫಲವಾಗಿರುವುದನ್ನು ಕೂಡ ಪ್ರಮುಖವಾಗಿ ಪರಿಗಣಿಸಬೇಕಾಗುತ್ತದೆ. ಮೀಸಲಾತಿ ನೀತಿಯು ಅನೇಕ ವರ್ಷಗಳಿಂದ ಅನುಷ್ಠಾನದಲ್ಲಿದ್ದರೂ ಅದರ ಫಲಿತಾಂಶ ಗಮನಿಸಿದರೆ, ಮೀಸಲಾತಿ ನೀತಿಯು ಮಹತ್ವ ಪಡೆದು ಕೊಂಡಿಲ್ಲ ಎಂಬುದನ್ನು ತಿಳಿಸುತ್ತದೆ. ಉನ್ನತ ಶಿಕ್ಷಣದಲ್ಲಿ ಮೀಸಲಾತಿಯ ಪರಿಣಾಮಗಳನ್ನು ಕುರಿತು ನಡೆದಿರುವ ಕೆಲವು ಅಧ್ಯಯನಗಳು, ಅಪವಾದದ ಅನುಭವ ಮೂಲಕ ಸಾಮಾಜಿಕವಾಗಿ ವಿಭಾಗಿಸುವುದು ಮತ್ತು ಕಡಿಮೆ ಶೈಕ್ಷಣಿಕ ಸಾಧನೆ ಮಾಡಿದ ಹಾಗೂ ಸಾಮಾಜಿಕ-ಆರ್ಥಿಕ ಪ್ರತಿಕೂಲ ಪರಿಸ್ಥಿತಿಯ ಕಾರಣದಿಂದ ಅವಕಾಶ ವಂಚಿತ ಕುಟುಂಬಗಳಿಂದ ಬಂದ ಪರಿಶಿಷ್ಟ ಸಮುದಾಯಗಳ ವಿದ್ಯಾರ್ಥಿಗಳನ್ನು ಪ್ರತ್ಯೇಕಿಸಿರುವುದನ್ನು ತಿಳಿಸುತ್ತದೆ(ಕಿರ್‌ಪಾಲ್ ಮತ್ತು ಗುಪ್ತ, ೧೯೯೯). ಮೀಸಲಾತಿಯ ಸಾಂಸ್ಥಿಕ ಚೌಕಟ್ಟು, ಸ್ಥಳೀಯವಾದ ಸಮಸ್ಯೆಗಳನ್ನು ಎದುರಿಸುವುದರಲ್ಲಿ ವಿಫಲತೆ, ಸಂಘಟನೆಗಳಲ್ಲಿ ಗುಣಮಟ್ಟದ ಇಳಿಕೆ, ಮೀಸಲಾತಿ ನೀತಿಯ ನಿರಂತರ ವಿರೋಧ ಇನ್ನೂ ಮುಂತಾದ ಅಂಶಗಳಿಂದ ಮೀಸಲಾತಿ ನೀತಿ ಅತಿಕಡಿಮೆ ಪರಿಣಾಮ ಬೀರುವಂತೆ ಮಾಡಿದೆ(ಪ್ರಶಾಂತ್ ಎಚ್.ಡಿ. ೨೦೧೫). ಮೀಸಲಾತಿ ನೀತಿಯ ಉದ್ದೇಶಿತ ಪ್ರಯತ್ನಗಳನ್ನು ಮೌಲ್ಯಮಾಪನ ಮಾಡಿದಾಗ ಅದು ತನ್ನ ಮೂಲ ಉದ್ದೇಶದ ರೀತಿಯಲ್ಲಿಯೇ ಪರಿಣಾಮ ಉಂಟುಮಾಡಿಲ್ಲ. ಮೀಸಲಾತಿಯು ಪರಿಶಿಷ್ಟ ಸಮುದಾಯದ ಸದಸ್ಯರಿಗೆ ಹೊಸ ಅವಕಾಶಗಳ ಮೂಲಕ ಹೊಸ ಉದ್ಯೋಗ, ಸಾಮಾಜಿಕ ಹಾಗೂ ಆರ್ಥಿಕ ಸ್ಥಾನಗಳನ್ನು ಒದಗಿಸುವುದು-ಇಂತಹ ಪರಿಸ್ಥಿತಿಯಲ್ಲಿ ಮೀಸಲಾತಿಯ ವಿಫಲತೆಯ ಪರಿಣಾಮಗಳನ್ನು ಬಹಳ ದೊಡ್ಡ ಪ್ರಮಾಣ ದಲ್ಲಿ ಇನ್ನೂ ದಾಖಲಿಸಿಯೇ ಇಲ್ಲ. ಇಲ್ಲಿಯವರೆಗೆ ಕೆಲವೇ ಕೆಲವು ಅಧ್ಯಯನಗಳು ಮಾತ್ರ ಇದನ್ನು ಗುರುತಿಸಿವೆ. ಇಂತಹ ಅಧ್ಯಯನಗಳಲ್ಲಿ ಜೆಫರಿ ಮತ್ತು ಜೆಫರಿ(೨೦೦೪) ಉತ್ತರ ಪ್ರದೇಶದ ಬಿಜನೂರ್‌ನಲ್ಲಿ ಚಮಾರ ವಿದ್ಯಾವಂತ ಯುವ ನಿರುದ್ಯೋಗಿಗಳ ವಿವರವಾದ ಸಂದರ್ಶನ ಮತ್ತು ಅವಲೋಕನಗಳಿಂದ ತಮ್ಮನ್ನು ತಾವೇ "ಉಪಯೋಗವಿಲ್ಲದವರು", "ಶೂನ್ಯ", "ನೆಲೆ ಇಲ್ಲದವರು", "ಅಲೆಮಾರಿ" ಮತ್ತು "ನಿರುದ್ಯೋಗಿ"ಗಳೆಂದು ಕರೆದುಕೊಳ್ಳುವುದನ್ನು ದಾಖಲಿಸಿದ್ದಾರೆ. ಮುಖ್ಯವಾಗಿ ಪರಿಶಿಷ್ಟ ಸಮುದಾಯದ ಯುವಕರು ಬಹಳ ದೊಡ್ಡ ಪ್ರಮಾಣದಲ್ಲಿ ನಿರುದ್ಯೋಗಕ್ಕೆ ಬೀಳುವುದರಿಂದ ಹೊಸ ತಲೆಮಾರಿನ ಪೋಷಕರು ತಮ್ಮ ಮಕ್ಕಳನ್ನು ೮ನೇ ತರಗತಿಯವರೆಗೆ ಮಾತ್ರ ಕಲಿಸಲು ಆಸಕ್ತಿ ಹೊಂದುವಂತೆ ಅಥವಾ ಉನ್ನತ ಶಿಕ್ಷಣದ ಉಪಯೋಗ/ಮೌಲ್ಯವನ್ನು ಅವರು ಪ್ರಶ್ನಿಸುವಂತೆ ಮಾಡಿದೆ ಎಂದು ಜೆಫರಿ ತಿಳಿಸುತ್ತಾರೆ. ಭಾರತದ ಪರಿಶಿಷ್ಟ ಸಮುದಾಯದ ಬಗೆಗಿನ ಕೆಲಸಗಳನ್ನು ಮುಂದುವರಿಸುವ ಮಾರಿಕ ವಿಕ್‌ಜಿಯಾನಿ(೨೦೦೫) ಅವರು ಕಾಲೇಜು ವಿದ್ಯಾವಂತ ದಲಿತರನ್ನು 'ಅನಿರೀಕ್ಷಿತ ಲಾಭ ಪಡೆದ ತಲೆಮಾರು' ಎಂದು ಉಲ್ಲೇಖಿಸುತ್ತಾರೆ. ಇದರ ಜೊತೆಗೆ ಎಷ್ಟೋ ಜನ ವಿದ್ಯಾವಂತ ನಿರುದ್ಯೋಗಿಗಳು ಮೂಲಭೂತವಾದಿಗಳ ಅಜೆಂಡಾಗಳಿಗೆ ಒಳಪಟ್ಟಿರುವುದನ್ನು ತಿಳಿಸುತ್ತಾರೆ. ಐ.ಐ.ಟಿ.ಗಳಲ್ಲಿ ಮೀಸಲಾತಿಯ ಅನುಷ್ಠಾನ ಕುರಿತು ಅಧ್ಯಯನ ಮಾಡಿರುವ ರವೀಂದರ್ ಕೌರ್(೨೦೦೪) ಅವರು ದಲಿತ ವಿದ್ಯಾರ್ಥಿಗಳ ವಿಂಗಡಣೆ ಮತ್ತು

ಪ್ರತ್ಯೇಕತೆಯು, ಅವರಲ್ಲಿ ಕಡಿಮೆ ಆತ್ಮವಿಶ್ವಾಸ ಮತ್ತು ಕಳಪೆ ಶೈಕ್ಷಣಿಕ ಸಾಧನೆಗೆ ಕಾರಣವಾಗಿರುವುದನ್ನು ಸೂಚಿಸುತ್ತದೆ ಎಂದು ತಿಳಿಸುತ್ತಾರೆ. ವಾಸ್ತವವಾಗಿ ಶ್ರೇಣೀಕೃತ ಸಾಮರ್ಥ್ಯಗಳ ಸಂಯೋಜನೆಯ ಅಡಿಯಲ್ಲಿ ಅನೇಕ ಸಂಸ್ಥೆಗಳು ಉತ್ತಮವಾದ ಉಪ-ಐಚ್ಛಿಕ ವಿಷಯಗಳನ್ನು ಮೇಲ್ಜಾತಿ ಅಥವಾ ಸಾಮಾನ್ಯ ಜಾತಿಯ ವಿದ್ಯಾರ್ಥಿಗಳಿಗೆ ನಿಗದಿಪಡಿಸಿವೆ. ಅಲ್ಲದೇ ಪರಿಶಿಷ್ಟ ಸಮುದಾಯದ ವಿದ್ಯಾರ್ಥಿಗಳಿಗೆ ಹೆಚ್ಚು ಜನಪ್ರಿಯವಲ್ಲದ ಕೆಳಮಟ್ಟದ ಉಪ-ಐಚ್ಛಿಕ ವಿಷಯಗಳನ್ನು ನಿಗದಿಪಡಿಸುತ್ತವೆ. ಈ ರೀತಿಯ ತಾರತಮ್ಯಗಳು ಮತ್ತು ಅವರ ಮೇಲಿರುವ ಸಾಂಸ್ಕೃತಿಕ ಹಗೆತನ, ಕೇವಲ ಮೀಸಲಾತಿ ನೀತಿಗಳಿಗೆ ಸಂಬಂಧಿಸಿದ ಲೋಪಗಳು ಮಾತ್ರವಲ್ಲ, ರಾಷ್ಟ್ರೀಯ ಅಸಮಾನತೆ ಮತ್ತು ತಾರತಮ್ಯದಂತಹ ಸಮಸ್ಯೆಗಳನ್ನು ಸಾರ್ವಜನಿಕ ಸಂಸ್ಥೆಗಳು ಸಂಬೋಧಿಸುವಾಗ ಉಪೇಕ್ಷಿಸಿರುವುದು ಕಂಡುಬರುತ್ತದೆ.

ಆದಾಗ್ಯೂ ಬಹುತೇಕ ಅಧ್ಯಯನಗಳು ದಲಿತ ಯುವಕರ ಶೈಕ್ಷಣಿಕ ಅನುಭವಗಳು ಮತ್ತು ರಾಜಕೀಯ ಹಾಗೂ ಸಾಂಸ್ಕೃತಿಕ ದೃಷ್ಟಿಕೋನಗಳ ನಡುವೆ ಇರುವ ನೇರ ಸಂಬಂಧವನ್ನು ಗುರುತಿಸಿಲ್ಲ. ಇವುಗಳ ನಡುವಿನ ಸಂಬಂಧ, ತಿರಸ್ಕಾರ, ನಿರುತ್ಸಾಹ ಮತ್ತು ನಕಾರಾತ್ಮಕ ಅನುಭವಗಳು ಅವರ ಅನನ್ಯತೆ ಮತ್ತು ದೃಷ್ಟಿಕೋನಗಳನ್ನು ಹೇಗೆ ರೂಪಿಸಿವೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಅವಶ್ಯವಾಗಿದೆ. ಇಂತಹ ಪುನರ್‌ಸ್ಥಾಪಿಸುವ ಮತ್ತು ಅಂಚಿಗೆ ಸರಿಸುವ ಪ್ರಕ್ರಿಯೆಯ ಫಲಿತಾಂಶಗಳಲ್ಲಿ ಒಂದಾದ ಮೂಲಭೂತವಾದಿ ಸಂಘಟನೆಗಳ ಅಜೆಂಡಾ ಮತ್ತು ಕಾರ್ಯಕ್ರಮಗಳಲ್ಲಿ ಈ ಜನರನ್ನು ವಿಲೀನ ಮಾಡುವ ಜೊತೆಗೆ ಶತ್ರುವಿನ ಭಾವನೆಯನ್ನು ಮತ್ತು ಮತ್ತೊಂದು 'ಬೇರೊಂದು/ ಇನ್ನೊಂದು' ಎಂಬುದನ್ನು ಬೆಳೆಸುವುದು. ರಾಷ್ಟ್ರೀಯ ಸೇವಾ ಸಂಘ (ಆರ್.ಎಸ್.ಎಸ್) ಮತ್ತು ಬಜರಂಗದಳಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ದಲಿತರನ್ನು ಸೇರಿಸಿಕೊಂಡು ಅವರನ್ನು ಮುಸ್ಲಿಮರ ವಿರುದ್ಧ ಹಿಂಸೆಯಲ್ಲಿ ತೊಡಗುವಂತೆ ಮಾಡುವುದನ್ನು ಇದು ಪ್ರತಿನಿಧಿಸುತ್ತದೆ. ೨೦೦೨ರಲ್ಲಿ ಗುಜರಾತಿನಲ್ಲಿ ಮುಸ್ಲಿಂ ವಿರುದ್ಧ ನಡೆದ ನರಮೇಧದಲ್ಲಿ ಇದರ ವೈಶಿಷ್ಟ್ಯತೆಯನ್ನು ಕಾಣಬಹುದು (ಬ್ರೆಮಾನ್, ೨೦೦೨). ಮೇಲ್ಜಾತಿಯವರ ಮತ್ತು ಮೇಲು ವರ್ಗದವರ ಯಜಮಾನಿಕೆಯನ್ನು ಸ್ವಂತಶಕ್ತಿ, ನಿಯೋಗಗಳು ಮತ್ತು ಹಕ್ಕುಗಳ ಮೂಲಕ ಪ್ರಶ್ನಿಸುವುದಕ್ಕೆ ಬದಲಾಗಿ ಮೂಲಭೂತವಾದಿಗಳ ಕಾರ್ಯಕ್ರಮಗಳ ಮೂಲಕ ಮೇಲುವರ್ಗದ ಯಜಮಾನಿಕೆಗಳನ್ನು ಮತ್ತೆ ಮೇಲಕ್ಕೆತ್ತುವ ಪ್ರಕ್ರಿಯೆಯಲ್ಲಿ ಅಪರಾಧ ಕೃತ್ಯಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸುವಂತಾಗಿದೆ.

ಇಂತಹ ದೃಷ್ಟಾಂತಗಳಲ್ಲಿ ಪರಿಶಿಷ್ಟ ಸಮುದಾಯದ ಸದಸ್ಯರು ಪ್ರಬಲ ಸಮಾಜದಲ್ಲಿ ಮುಖ್ಯವಾಹಿನಿಗೆ ಬರಲು ಪ್ರಯತ್ನಿಸಿದರು. ಅವರು ಕೂಡ ವಿರೋಧ ಮತ್ತು ಹಿಂಸೆಗಳನ್ನು ಎದುರಿಸಬೇಕಾಗಿದೆ. ಇಂತಹ ಬಹುತೇಕ ಹಿಂಸೆಗಳ ಕೀಲಿಯು ಗ್ರಾಮೀಣ ಸಮಾಜದ ಸಂಸ್ಕೃತಿ ಸಾಮಾಜಿಕ-ರಾಜಕೀಯ ಬದಲಾವಣೆ ನಡೆಯುವ ಸಮಯದಲ್ಲಿ ಮೇಲುಜಾತಿಯ ಪ್ರತಿರೋಧ ಮತ್ತು ಅಸಮಾಧಾನಗಳಿಂದ ನಡೆದಿವೆ. ಹೊಸ ಬಗೆಯ ಚಲನೆಗಳು ಮತ್ತು ತಳಜಾತಿ ಗುಂಪುಗಳ

ರಾಜಕೀಯ ಹಕ್ಕುಗಳು ಹಾಗೂ ಸಾಂಪ್ರದಾಯಿಕ ಮತಾಚಾರಗಳಿಗೆ ಅವರ ಪ್ರತಿರೋಧ, ಆರ್ಥಿಕ ಮತ್ತು ಸಾಮಾಜಿಕ ತಾರತಮ್ಯಗಳ ರೂಪಗಳು, ಮೇಲ್ಜಾತಿಯವರಿಂದ ಇನ್ನೂ ಮುಂತಾದ ಪ್ರತೀಕಾರ ರೂಪಗಳು ಹೊಸ ಬಗೆಯ ಹೆಚ್ಚು ಹಿಂಸಾರೂಪದ ಜಾತಿ ತಾರತಮ್ಯಗಳು ಹೊರಹೊಮ್ಮಲು ಕಾರಣಗಳಾಗಿವೆ. ಗುಜರಾತ್ ಮೂಲದ 'ನವಸಾರ್ಜನ್' ಸಂಘಟನೆಯ ದಾಖಲೆಯು ದಲಿತರು ಚುನಾವಣೆಯಲ್ಲಿ ಆಯ್ಕೆಯಾಗಿ ಸ್ಥಳೀಯ ಸರ್ಕಾರಗಳ ಕಛೇರಿಯ ಕುರ್ಚಿಯಲ್ಲಿ ಕುಳಿತುಕೊಳ್ಳಲು ಪ್ರಯತ್ನ ಮಾಡುವಾಗ, ಬಸ್‌ಗಳಲ್ಲಿ ಅವರು ಕುಳಿತಿದ್ದ ಆಸನಗಳನ್ನು ದಲಿತೇತರರಿಗೆ ಕುಳಿತುಕೊಳ್ಳಲು ಬಿಟ್ಟುಕೊಡದಿದ್ದಾಗ, ಅವರು ಉತ್ತಮವಾದ ಉಡುಪು ಧರಿಸಿದಾಗ ಅಥವಾ ಹಳ್ಳಿಯಲ್ಲಿ ಸ್ಕೂಟರ್ ಓಡಿಸಿದಾಗ ಅಥವಾ ಮೇಲ್ಜಾತಿಯ ಹುಡುಗಿಯನ್ನು ಪ್ರೀತಿಸಿದಾಗ, ದಲಿತರ ವಿರುದ್ಧ ಹಿಂಸೆಗಳನ್ನು ಉದ್ರೇಕಿಸುವಂತಹ ನಿಷ್ಠುರವಾದ ಅಂಶಗಳ ಸಾರಾಂಶವನ್ನು ತಿಳಿಸುತ್ತವೆ(ಮ್ಯಾಕ್ ವಾನ್:೨೦೦೨).

ಷಟ್ಟರ್ ಗುರುತಿಸಿದಂತೆ ಇಂತಹ ಎಡೆಬಿಡದೆ ನಡೆಯುವ ವ್ಯಾಪಕ ತೇಜೋವಧೆ, ಅವಮಾನ ಮತ್ತು ಅನ್ಯಾಯಗಳ ಅಂತಿಮ ಫಲಿತಾಂಶವೆಂದರೆ ಬಹುತೇಕ ಪರಿಶಿಷ್ಟ ಸಮುದಾಯದ ಸದಸ್ಯರು 'ಬದುಕುವ ಅವಕಾಶದ ಕೊರತೆ'ಯನ್ನು ಅನುಭವಿಸುತ್ತಿದ್ದಾರೆ (೧೯೮೯:೧೬೨). ಇಂತಹ ಪ್ರಕ್ರಿಯೆಗಳು ಪರಿಶಿಷ್ಟ ಸಮುದಾಯದ ಸದಸ್ಯರು, ಅವರ ಇರುವಿಕೆ, ಅವರ ಸ್ವಭಾವ, ಯಾವ ರೀತಿ ವ್ಯಕ್ತಿಯ, ಅವರ ಭಾವನೆಗಳು, ಅವರ ವಿಷಯಗಳಿಗಾಗಿ ನಿರಂತರವಾಗಿ ಇತರರೊಡನೆ ಸ್ಪರ್ಧಿಸುವ ಸಾಂಸ್ಕೃತಿಕ, ರಾಜಕೀಯ–ಆರ್ಥಿಕತೆಯ ಸಂಯೋಜನೆಗಳಿಂದ ಕೂಡಿದ ಗುಣಲಕ್ಷಣಗಳನ್ನು ತಿಳಿಸುತ್ತವೆ (ಶೋಟರ್, ೧೯೮೯:೧೬೨). ಇಂತಹ ಪ್ರವೃತ್ತಿಗಳು ಮತ್ತು ಪರಿಸ್ಥಿತಿಗಳು ಅದರ ಅಜೆಂಡಾ ಮತ್ತು ನಿಯೋಗಗಳ ಮೂಲಕ ದಲಿತ ಯುವಕರ ವ್ಯಕ್ತಿತ್ವವನ್ನು ಗಲ್ಲುಗಂಬಕ್ಕೆ ತಂದು ನಿಲ್ಲಿಸಿ ಅವರ ಸ್ವಂತಿಕೆಯನ್ನು ಅಳಿಸಿಹಾಕುತ್ತಿದೆ. ಅಲ್ಲದೆ ಇದನ್ನು ಸ್ವ-ಮೌಲ್ಯ ಭಾವನೆ ಎಂದು ಸಮರ್ಥಿಸುತ್ತಿವೆ. ವ್ಯಕ್ತಿತನದ ಮಹತ್ವವೆಂದರೆ, "ಒಬ್ಬರ ಸ್ಥಾನವು ನಿರ್ಧಾರವಾಗುವುದು ಬೇರೆಯವರಿಂದ. ಒಂದು ಪಕ್ಷ ಬೇರೆಯವರು ಒಬ್ಬರ ಸ್ವಯಂ ಅನುಭವಗಳನ್ನು ಗಂಭೀರವಾಗಿ ಪರಿಗಣಿಸದಿದ್ದರೆ ಮತ್ತು ಅವರ ಮಾತುಗಳಲ್ಲಿ ನಿಮ್ಮ ಅನುಭವ ಮತ್ತು ಭಾವನೆಗಳಿಗೆ ಪ್ರತಿಕ್ರಿಯಿಸದಿದ್ದರೆ, ನೀವು ಒಬ್ಬ ವ್ಯಕ್ತಿಯಾಗಿ ನಿಮ್ಮ ಅವಕಾಶಗಳನ್ನು ಅಲ್ಲಗಳೆದಂತಾಗಿ ಬದುಕಿನಲ್ಲಿ ಅವಮಾನ, ತಿರಸ್ಕಾರ ಮತ್ತು ತೇಜೋವಧೆಗಳಿಗೆ ಒಳಗಾಗುತ್ತೀರಿ" (ಷಟ್ಟರ್,೨೦೦೪), ಇದನ್ನು ಅಗತ್ಯವಾಗಿ ಗುರುತಿಸಬೇಕಾಗಿದೆ. ವ್ಯಕ್ತಿತನ ಅಧೀನತೆಗೆ ಒಳಪಟ್ಟ ಸವಾಲುಗಳು ಎಲ್ಲಾ ಪರಿಶಿಷ್ಟ ಸಮುದಾಯದ ಸದಸ್ಯರು ತಮ್ಮ ಅನನ್ಯತೆಯನ್ನು ಅವರ ಸಾಮರ್ಥ್ಯ ಮತ್ತು ಆಸಕ್ತಿಗಳಿಗೆ ತಕ್ಕಂತೆ ರೂಪಿಸಿಕೊಳ್ಳುವ ಸಾಧ್ಯತೆಗಳನ್ನು ಪ್ರೋತ್ಸಾಹಿಸುವ ಮತ್ತು ಅದಕ್ಕೆ ಮಾನ್ಯತೆ ನೀಡುವ ಅಗತ್ಯವಿದೆ. ಇದು ಕೇವಲ ವೈಯಕ್ತಿಕ ನೆಲೆಯಲ್ಲಿ ಪ್ರಯತ್ನ ಮಾಡುವ ಸಾಹಸವಲ್ಲ. ಬದಲಾಗಿ ವ್ಯಕ್ತಿತನದ ರಚನೆಯು ಚಲನಾತ್ಮಕವಾಗಿದ್ದು ಸಂಬಂಧಗಳ ಪ್ರಕ್ರಿಯೆಯಿಂದ ರೂಪುಗೊಳ್ಳುತ್ತದೆ ಎಂಬ ಚೌಕಟ್ಟನ್ನು ವಿಸ್ತಾರವಾದ ಸಮಾಜ ಮತ್ತು ಅದರ ಸಂಸ್ಥೆಗಳು ಹಾಗೂ ಅಲ್ಲಿನ ವೇದಿಕೆಗಳಿಗೆ ಗುರುತಿಸಬೇಕಾಗಿದೆ(ಪ್ರಶಾಂತ್ ಎಚ್.ಡಿ. ೨೦೧೫).

ಈ ವ್ಯವಸ್ಥೆಯನ್ನು ವಿರೋಧಿಸುವ ಕೆಲವು ರೂಪಗಳಾದ ಪರ್ಯಾಯ ಅನನ್ಯತೆಗಳು ಮತ್ತು ದಲಿತರಲ್ಲಿ ರಾಜಕೀಯ ಜಾಗೃತಿ ಈಗ ಹೊಸ ದಿಗಂತ ತಲುಪಿದೆ(ಕ್ಲಾರ್ಕ್, ೧೯೯೮; ರಾಜ್, ೨೦೦೧). ಬಹಳ ಹಿಂದೆಯೇ ಅಂಬೇಡ್ಕರ್ ಅವರನ್ನು ಸಮುದಾಯದ ಒಂದು ಪ್ರತಿಮಾರೂಪಕವಾಗಿ ಗುರುತಿಸಲಾಗಿದೆ. ಅವರ ಸಂದೇಶವಾದ "ಶಿಕ್ಷಣ, ಸಂಘಟನೆ ಮತ್ತು ಹೋರಾಟ" ಇವುಗಳನ್ನು ಶೋಷಣೆಯಿಂದ ವಿಮುಕ್ತಿ ಪಡೆಯುವ ಮಹಾಘೋಷಣೆಯನ್ನಾಗಿ ಗುರುತಿಸಲಾಗಿದೆ. ಇದು ನಿರ್ದಿಷ್ಟವಾಗಿ ಮತ್ತು ಖಚಿತವಾಗಿ ಅವರ ಹಕ್ಕುಗಳನ್ನು ನಿರೂಪಣೆ ಮಾಡುವ ಬಹಳ ಗಟ್ಟಿದನಿಯಾಗ ಬೇಕಾಗಿದೆ. ಆದರೆ ದಲಿತರು ತಮ್ಮ ಅನನ್ಯತೆಯನ್ನು ಮತ್ತು ವ್ಯಕ್ತಿತನವನ್ನು ರೂಪಿಸಿಕೊಳ್ಳುವಾಗ ಅಸಮಾನತೆ ಮತ್ತು ತಾರತಮ್ಯತೆಯ ಗೆರೆಯನ್ನು ತಮಗೆ ತಾವೇ ಹೇಗೆ ರೂಪಿಸಿಕೊಳ್ಳುತ್ತಾರೆ, ಅವರ ಸಂಸ್ಕೃತಿ ಶಕ್ತಿ ಮತ್ತು ಅನುಕೂಲಕರ ಸ್ಥಿತಿಯನ್ನು ಆಧುನಿಕತೆಯ ನೆಲೆಯಲ್ಲಿ ಒಂದು ಆದರ್ಶವಾಗಿ ಮೋಲ್ಡ್ ಮಾಡುವಾಗ ಇದು ಜಾತಿಯ ಸಂಸ್ಕೃತಿಗೆ ಪರ್ಯಾಯವನ್ನು ಹೇಗೆ ಸೃಷ್ಟಿಸುತ್ತದೆ ಎಂಬುದು ಇನ್ನೂ ಸವಾಲಿನ ವಿಷಯವಾಗಿದೆ. ಇಂತಹ ಸಾಧನಗಳ ಸಾಧ್ಯತೆಗಳ ಅರ್ಥಗ್ರಹಿಕೆಗಳು ಮತ್ತು ಅದರ ಬಹುಮುಖ ತಿರಸ್ಕಾರ/ಅವಮಾನ ಮತ್ತು ಅದರ ಪರಿಣಾಮಗಳು ದಲಿತ ಯುವಕರ ವ್ಯಕ್ತಿತನದ ವಿಷಯವಾಗಿ ಹೇಗೆ ಕಾಡುತ್ತಿದೆ ಎಂಬುದನ್ನು ಸಂಸ್ಥೆಗಳು ಅರ್ಥ ಮಾಡಿಕೊಳ್ಳುವ ಜೊತೆಗೆ ಅವುಗಳ ವಿರುದ್ಧ ಹೋರಾಡಬೇಕಾಗಿದೆ. ವ್ಯಕ್ತಿತನದ ವಿಷಯವು ಚಕ್ರಗತಿಯಲ್ಲಿ ಅವಮಾನ ಮತ್ತು ಅಸಮಾನತೆಯನ್ನು ಪುನರ್ ಉತ್ಪಾದಿಸುವ ಪ್ರಕ್ರಿಯೆಯನ್ನು ಮುರಿದು ಸ್ವಾತಂತ್ರ್ಯ ಅನನ್ಯತೆ ಭಾವನೆಯಲ್ಲಿ ಪ್ರತಿ ವಿದ್ಯಾರ್ಥಿಯ ವ್ಯಕ್ತಿತನವು ಸೃಷ್ಟಿಯಾಗುವವರೆಗೆ ಮುಂದುವರಿಯುವುದು ಒಂದು ಸವಾಲಾಗಿದೆ. ಇದು ಜಾತಿ ಮತ್ತು ಸಂಸ್ಥೆಯ ನೆಲೆಯಲ್ಲಿ ಬಹುಜನರನ್ನು ಅನ್ಯಾಯ ಹಾಗೂ ದಬ್ಬಾಳಿಕೆಯಿಂದ ಹಳೆಯ ಸ್ಥಾನದಲ್ಲಿ ಇಡುವುದನ್ನು ಮುರಿದು ಅಥವಾ ತಡೆದು ಅಪ್ಪಟ ಆಧುನಿಕ ನೆಲೆಯಲ್ಲಿ ಉತ್ತಮ ಸಮಾಜ ಸ್ಥಾಪಿಸಲು ಪ್ರಯತ್ನಿಸುತ್ತದೆ. ಆದರೂ ಗ್ರಾಮ ಪಂಚಾಯಿತಿ ವ್ಯವಸ್ಥೆಯಲ್ಲಿ, ವಾರ್ಡ್‌ಗಳಲ್ಲಿ ಜಾತಿ ಅಥವಾ ಸಾಮಾಜಿಕ ಗುಂಪುಗಳ ಪ್ರಬಲತೆಯು ಅಷ್ಟಾಗಿ ಕಾಣುವುದಿಲ್ಲ. ಆದರೆ ಗ್ರಾಮ ಮಟ್ಟದಲ್ಲಿ ಜಾತಿ ಸಂಘಟನೆಗಳು ಕಂಡು ಬರುತ್ತವೆ. ಗ್ರಾಮ ಮಟ್ಟದಲ್ಲಿ ಮೇಲ್ನೋಟಕ್ಕೆ ಎಲ್ಲ ರಾಜಕೀಯ ಪಕ್ಷಗಳು ಜಾತ್ಯಾತೀತವಾಗಿ ತೋರಿಸಿಕೊಂಡರೂ ಪಕ್ಷಗಳ ರಾಜಕಾರಣವು ಜಾತಿ ಸಂಘಟನೆಗಳೇ ಆಗಿರುತ್ತವೆ. ಗ್ರಾಮಮಟ್ಟ ಪ್ರದೇಶ ಹಾಗೂ ರಾಜ್ಯ ಮಟ್ಟದವರೆಗೆ ತನ್ನ ಜಾತಿಗೆ ಸೇರಿದವರು ಅಧಿಕಾರಕ್ಕೆ ಬರಬೇಕೆಂಬ ಮನೋಭಾವವು ಅಧಿಕಾರ ರಾಜಕೀಯವನ್ನು ಬಳಸಬೇಕೆಂದು ಹೇಳಬಹುದಾಗಿದೆ.

ಇತ್ತೀಚಿಗೆ ಕರ್ನಾಟಕದಲ್ಲಿ ನಡೆಯುತ್ತಿರುವ ಅಧಿಕಾರ ರಾಜಕಾರಣವು ಜಾತಿ ಸಂಘಟನೆಗಳಿಂದಾಗಿ ಒಂದು ಸರ್ಕಾರ ಜಾತಿಯಾಗಿ ಅವತರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಧಿಕಾರಕ್ಕಾಗಿ ಪ್ರಬಲ ಜಾತಿಗಳ ನಡುವೆ ಐಕ್ಯತೆ ಮತ್ತು ಹೋರಾಟ ನಿರಂತರವಾಗಿ ನಡೆದರೂ ದಲಿತರು ಮತ್ತು ಮಹಿಳೆಯರು ರಾಜಕೀಯ ಪ್ರಕ್ರಿಯಿಯಿಂದ ದೂರವಿರುವಂತೆ ಇದು (ಗ್ರಾಮ ಪಂಚಾಯತಿಯಿಂದ

ರಾಜ್ಯ ಸಕಾರದವರೆಗೆ) ಎಚ್ಚರವಹಿಸುತ್ತದೆ. ಅದಕ್ಕೆ ಅಧಿಕಾರ ರಾಜಕಾರಣ ಪ್ರತಿಕ್ರಿಯೆಯು ಜಾತಿಕರಣ ಗೊಂಡಿದೆ ಎಂಬುದನ್ನು ನಮ್ಮ ಅಧ್ಯಯನವು ಕಂಡುಕೊಂಡಿದೆ. ಇದನ್ನೇ ಪ್ರೊ. ಸಿಂಹಾದ್ರಿಯವರು ಅಭಿವೃದ್ಧಿ ಜಾತಿಕರಣ, ಆಡಳಿತ ಜಾತಿಕರಣ, ಸೈದ್ಧಾಂತಿಕ ಜಾತಿಕರಣ, ಸಾಂಸ್ಕೃತಿಕ ಜಾತಿಕರಣ ಎಂದು ಕರೆಯುತ್ತಾರೆ. ಜಾತಿ ದಿನನಿತ್ಯದ ಸತ್ಯವಾಗಿ ಪಂಚಾಯಿತಿ ಹಂತದಿಂದ ರಾಜ್ಯ ಮತ್ತು ರಾಷ್ಟ್ರಮಟ್ಟದವರೆಗೆ ದರ್ಶನವಾಗುತ್ತಿದೆ. ಇದು ದಲಿತರನ್ನು, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ದುರ್ಬಲ ಜನರ ರಾಜಕೀಯ ಭಾಗವಹಿಸುವಿಕೆಯನ್ನು ತಡೆಯುತ್ತಿದೆ ಎನ್ನುವುದು ನಮ್ಮ ಅಧ್ಯಯನವು ಸಂಖ್ಯಾತ್ಮಕ ಮಾಹಿತಿಗಳಿಂದ ಆಚೆಗೆ ಕಂಡುಕೊಂಡಿರುವ ಸತ್ಯ.

